ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ. ೩೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಬ್ರಹ್ಮಮಹಾಪುರಾಣಂ

(ಕನ್ನಡ ಅರ್ಥಾನುವಾದ ವಿವರಣೆಗಳೊಡನೆ)

ಭಾಗ—೬

(೨೧೭—೨೪೬ ಅಧ್ಯಾಯಗಳು)

ಅನುವಾದಕ.

ಹಾಸನದ ಪಂಡಿತ ವೆಂಕಟರಾವ್

ಆಸ್ಥಾನ ವಿದ್ವಾಂ

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್

೧೯೪೬

ಮುನ್ನುಡಿ

ಈ ಆರನೆಯ ಭಾಗದೊಂದಿಗೆ ಬ್ರಹ್ಮಪುರಾಣವು ಸಮಾಪ್ತಿಗೊಂಡಿರುವುದು. ಸಾಧಾರಣವಾಗಿ ವ್ಯಾಸಮಹರ್ಷಿಗಳು ಆಯಾ ಪುರಾಣಗಳ ಕಡೆಯ ಭಾಗಗಳಲ್ಲಿ ಪುರಾಣದ ಸಾರವನ್ನೂ, ಮುಖ್ಯವಿಷಯಗಳನ್ನೂ, ತತ್ತ್ವನಿರೂಪಣೆಯನ್ನೂ, ಮೋಕ್ಷಪ್ರಾಪ್ತಿಗೆ ಸಾಧನೋಪಾಯಗಳನ್ನೂ ವಿವರಿಸುತ್ತಾರೆ. ಅದರಂತೆ ಈ ಪುರಾಣದಲ್ಲಿಯೂ ಪ್ರತಿಮಾನವನೂ ಅವಶ್ಯಕವಾಗಿ ಆಚರಿಸಬೇಕಾದ ಸದಾಚಾರನಿರೂಪಣೆ, ಅನ್ನದಾನಾದಿ ಮಹಾದಾನಗಳ ಪ್ರಶಂಸೆ, ಪಾಪಪುಣ್ಯಗಳ ವಿಚಾರ, ಶ್ರಾದ್ಧಕಲ್ಪನಿರೂಪಣೆ, ಸ್ವರ್ಗ, ನರಕಪ್ರಾಪ್ತಿಗೆ ಕಾರಣಭೂತವಾದ ಕರ್ಮಗಳ ವಿಚಾರ, ಪ್ರಪಂಚಸೃಷ್ಟಿ, ಪ್ರಾಕೃತಪ್ರಲಯ, ಆತ್ಯಂತಿಕಪ್ರಲಯ, ಯೋಗಾಭ್ಯಾಸನಿರೂಪಣ, ಸಾಂಖ್ಯವಿಧಿನಿರೂಪಣ ಮೊದಲಾದ ಮಹತ್ತ್ವವಿಷಯಗಳು ಸಂದರ್ಭೋಚಿತವಾದ ಅನೇಕ ಉಪಾಖ್ಯಾನಗಳೊಡನೆ ವಿಸ್ತಾರವಾಗಿ ನಿರೂಪಿಸಲ್ಪಟ್ಟಿವೆ. ಪುರಾಣದ ಸಾರಭೂತವಾದ ಇಂತಹ ವಿಷಯಗಳನ್ನು ಓದಿ ಮನನಮಾಡುವುದರಿಂದ ಜನರ ಮೇಲೆ ಸತ್ಪರಿಣಾಮವುಂಟಾಗುವುದರಲ್ಲಿ ಸಂದೇಹವಿಲ್ಲ.

ಇಂತಹ ಉತ್ತಮಗ್ರಂಥಪ್ರಕಾಶನಕ್ಕೆ ಸರ್ವತೋಮುಖವಾಗಿ ಉತ್ತೇಜನವಿತ್ತಿರುವ ಸನಾತನಧರ್ಮಾಭಿಮಾನಿಗಳೂ, ದೈವಭಕ್ತರೂ ಆದ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ ಬಿ., ಜಿ. ಸಿ. ಎಸ್. ಐ.** ಮಹಾಪ್ರಭುವರ್ಯರಿಗೂ ಅವರ ಕುಟುಂಬಕ್ಕೂ ಅವರಿಂದ ಪರಿಪಾಲಿತವಾದ ಸಮಸ್ತಪ್ರಜಾವರ್ಗಕ್ಕೂ ಸಚ್ಚಿದಾನಂದಸ್ವರೂಪನಾದ ಭಗವಂತನು ಆಯುರಾರೋಗ್ಯೈಶ್ವರ್ಯಾದಿ ಸಕಲಸಂಪತ್ತನ್ನೂ ಅನುಗ್ರಹಿಸಲೆಂದು ನಿರಂತರವೂ ಪ್ರಾರ್ಥಿಸುತ್ತೇನೆ.

ಮೈಸೂರು
ಸರ್ವಜಿನ್ನಾಮ ಸಂ॥ ವೈ॥ ಬ॥ ತ್ರಯೋದಶೀ
18-5-1947

ಆಸ್ಥಾನವಿದ್ವಾನ್
ಹಾಸನ ಪಂಡಿತ ವೆಂಕಟರಾವ್
ಅನುವಾದಕ

ವಿಷಯಾನುಕ್ರಮಣಿಕೆ

ಇಲ್ಲಿಗೆ ಬ್ರಹ್ಮಪುರಾಣವು ಸಮಾಪ್ತವಾದುದು.

ಮಂಗಳಂ.

ಶ್ರೀಃ

ಬ್ರಹ್ಮಪುರಾಣದಲ್ಲಿ ಆರನೆಯ ಭಾಗವು

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತದಶಾಧಿಕದ್ವಿಶತತಮೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಶ್ರುತ್ವೈವಂ ಯಮಮಾರ್ಗಂ ತೇ ನರಕೇಷು ಚ ಯಾತನಾಂ ।
ಪಪ್ರಚ್ಛುಶ್ಚ ಪುನರ್ವ್ಯಾಸಂ ಸಂಶಯಂ ಮುನಿಸತ್ತಮಾಃ ॥ ೧ ॥

॥ ಮುನಯ ಊಚುಃ ॥

ಭಗವನ್ಸರ್ವಧರ್ಮಜ್ಞ ಸರ್ವಶಾಸ್ತ್ರವಿಶಾರದ ।
ಮರ್ತ್ಯಸ್ಯ ಕಃ ಸಹಾಯೋ ವೈ ಪಿತಾ ಮಾತಾ ಸುತೋ ಗುರುಃ ॥ ೨ ॥

ಇನ್ನೂರಹದಿನೇಳನೆಯ ಅಧ್ಯಾಯವು

೧. ಲೋಮಹರ್ಷಣಮುನಿಯು ಹೇಳಿದನು :—ಈರೀತಿಯಾಗಿ ಆ ಮುನಿಶ್ರೇಷ್ಠರು ಯಮಲೋಕಕ್ಕೆ ಹೋಗುವ ಮಾರ್ಗವನ್ನೂ, ನರಕಗಳಲ್ಲಿ ಕೊಡತಕ್ಕ ಹಿಂಸೆಗಳನ್ನೂ ಕೇಳಿ ಮರಳಿ ಆತನನ್ನು ಕುರಿತು ಮುನಿಗಳು ಸಂಶಯದಿಂದ ಪ್ರಶ್ನಿಸಿದರು.

೨. ಸರ್ವಶಾಸ್ತ್ರಪಾರಂಗತನೂ ಸಕಲಧರ್ಮಗಳನ್ನೂ ಬಲ್ಲವನೂ ಆದ ಎಲೈ ಪೂಜ್ಯನೇ, ಮನುಷ್ಯನಿಗೆ ಸ್ನೇಹಿತನು ಯಾರು ? ಮಗನು ಯಾರು ? ಗುರುವು ಯಾರು ?

ಜ್ಞಾತಿಸಂಬಂಧಿವರ್ಗಶ್ಚ ಮಿತ್ರವರ್ಗಸ್ತಥೈವ ಚ ।
ಗೃಹಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಜನಾಃ ।
ಗಚ್ಛಂತ್ಯಮುತ್ರ ಲೋಕೇ ವೈ ಕಶ್ಚ ತಾನನುಗಚ್ಛತಿ ॥ ೩ ॥

॥ ವ್ಯಾಸ ಉವಾಚ ॥

ಏಕಃ ಪ್ರಸೂಯತೇ ವಿಪ್ರಾ ಏಕ ಏವ ಹಿ ನಶ್ಯತಿ ।
ಏಕಸ್ತರತಿ ದುರ್ಗಾಣಿ ಗಚ್ಛತ್ಯೇಕಸ್ತು ದುರ್ಗತಿಂ ॥ ೪ ॥

ಅಸಹಾಯಃ ಪಿತಾ ಮಾತಾ ತಥಾ ಭ್ರಾತಾ ಸುತೋ ಗುರುಃ ।
ಜ್ಞಾತಿಸಂಬಂಧಿವರ್ಗಶ್ಚ ಮಿತ್ರವರ್ಗಸ್ತಥೈವ ಚ ॥ ೫ ॥

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಜನಾಃ ।
ಮುಹೂರ್ತಮಿವ ರೋದಿತ್ವಾ ತತೋ ಯಾಂತಿ ಪರಾಙ್ಮುಖಾಃ ॥ ೬ ॥

---

೩. ಜ್ಞಾತಿಗಳೂ ಸಂಬಂಧಿಕರೂ ಯಾರು? ಗೆಳೆಯರು ಯಾರು? ಮೃತರಾದಮೇಲೆ ಆ ಮಾನವರು ಮರದಂತೆಯೂ, ಮಣ್ಣಿನಹೆಂಟೆಯಂತೆಯೂ, ತಮ್ಮ ಮನೆಯನ್ನೂ, ಶರೀರವನ್ನೂ ಇಲ್ಲಿಯೇ ಬಿಟ್ಟು ಹೊರಟುಹೋಗುವರಲ್ಲಾ! ಅವರನ್ನು ಯಾರು ಹಿಂಬಾಲಿಸುವರು?

೪. ಎಂದು ಪ್ರಶ್ನಿಸಲು ವ್ಯಾಸಮಹರ್ಷಿಯು ಇಂತೆಂದನು:— ಎಲೈ ವಿಪ್ರರಿರಾ! ಜೀವನು ಹುಟ್ಟುವಾಗಲೂ ಒಬ್ಬನೇ. ಸಾಯುವಾಗಲೂ ಒಬ್ಬನೇ. ಕಷ್ಟಗಳನ್ನು ಕಳೆದುಕೊಳ್ಳುವನೂ ಒಬ್ಬನೇ. ದುರ್ಗತಿಯನ್ನು ಹೊಂದುವನೂ ಒಬ್ಬನೇ.

೫. ತಂದೆ, ತಾಯಿ, ಅಣ್ಣ, ತಮ್ಮ, ಮಗ, ಗುರು, ದಾಯಾದಿ, ಬಂಧು, ಸ್ನೇಹಿತ ಇವರಾರೂ ಜೊತೆಗೆ ಬರಲಾರರು.

೬. ಇವರೆಲ್ಲರೂ ಸತ್ತಹೆಣವನ್ನು ಮರದತುಂಡಿನಂತೆಯೂ ಮಣ್ಣಿನ ಹೆಂಟೆಯಂತೆಯೂ ಬಿಸುಟು ಸ್ವಲ್ಪಕಾಲ ಮಾತ್ರ ಅಳುತ್ತಿದ್ದು ಬಳಿಕ ತಂತಮ್ಮ ಪಾಡಿಗೆ ತೆರಳುವರು.

ತೈಸ್ತ್ಯಚ್ಛರೀರಮುತ್ಸೃಷ್ಟಂ ಧರ್ಮ ಏಕೋऽನುಗಚ್ಛತಿ ।
ತಸ್ಮಾದ್ಧರ್ಮಃ ಸಹಾಯಶ್ಚ ಸೇವಿತವ್ಯಃ ಸದಾ ನೃಭಿಃ ॥ ೭ ॥

ಪ್ರಾಣೀ ಧರ್ಮಸಮಾಯುಕ್ತೋ ಗಚ್ಛೇತ್ಸ್ವರ್ಗಗತಿಂ ಪರಾಂ ।
ತಥೈವಾಧರ್ಮಸಂಯುಕ್ತೋ ನರಕಂ ಚೋಪಪದ್ಯತೇ ॥ ೮ ॥

ತಸ್ಮಾತ್ಪಾಪಾಗತೈರರ್ಥೈರ್ನಾನುರಜ್ಯೇತ ಪಂಡಿತಃ ।
ಧರ್ಮ ಏಕೋ ಮನುಷ್ಯಾಣಾಂ ಸಹಾಯಃ ಪರಿಕೀರ್ತಿತಃ ॥ ೯ ॥

ಲೋಭಾನ್ಮೋಹಾದನುಕ್ರೋಶಾದ್ಭಯಾದ್ವಾಥ ಬಹುಶ್ರುತಃ ।
ನರಃ ಕರೋತ್ಯಕಾರ್ಯಾಣಿ ಪರಾರ್ಥೇ ಲೋಭಮೋಹಿತಃ ॥ ೧೦ ॥

---

೭. ಇವರೆಲ್ಲರೂ ಬಿಟ್ಟರೂ ಧರ್ಮವೊಂದು ಮಾತ್ರ ಬಿಡದೆ ಜೊತೆಯಲ್ಲಿ ಹಿಂಬಾಲಿಸುವುದು. ಆದುದರಿಂದ ಕೊನೆಗಾಲದಲ್ಲಿಯೂ ಎಡೆಬಿಡದ ಸ್ನೇಹಿತನಾದ ಧರ್ಮವನ್ನು ಎಂದೆಂದಿಗೂ ಬಿಡಬಾರದು. ಅದನ್ನು ಸೇವಿಸಬೇಕು.

೮. ಯಾವಪ್ರಾಣಿಯೇ ಆಗಲಿ ಧರ್ಮದಿಂದ ಕೂಡಿದ್ದರೆ ಉತ್ತಮವಾದ ಸ್ವರ್ಗಗತಿಯನ್ನು ಹೊಂದುವನು. ಅದೇರೀತಿ ಅಧರ್ಮದಲ್ಲಿ ತೊಡಗಿದ ಪ್ರಾಣಿಯು ನರಕವನ್ನು ಹೊಂದುವನು.

೯. ಆದುದರಿಂದ ವಿವೇಕಿಯಾದವನು ಪಾಪಹೇತುವಾದ ವಸ್ತುಗಳಲ್ಲಿ ಆಸಕ್ತಿಯನ್ನು ವಹಿಸಬಾರದು. ಧರ್ಮವೊಂದೇ ಮನುಷ್ಯರಿಗೆ ಸಹಾಯಕವೆಂಬುದಾಗಿ ನಿಶ್ಚಯಿಸಲ್ಪಟ್ಟಿರುವುದು.

೧೦. ಮನುಷ್ಯನು ತಾನು ಎಷ್ಟೇ ಶಾಸ್ತ್ರಗಳನ್ನೋದಿರಲಿ, ಆದರೂ, ದುರಾಸೆಯಿಂದಲೂ, ಅಜ್ಞಾನದಿಂದಲೂ, ಮರುಕದಿಂದಲೂ, ಭಯದಿಂದಲೂ ಅಕಾರ್ಯಗಳನ್ನು ಮಾಡುವನು. ಮತ್ತೊಬ್ಬನಿಗೋಸ್ಕರವಾಗಿಯೂ ಸಹ ಮಾನವನು ಲೋಭ (ದುರಾಸೆ) ಪೀಡಿತನಾಗಿ ಅಕಾರ್ಯವೆಸಗುವನು.

ಧರ್ಮಶ್ಚಾರ್ಥಶ್ಚ ಕಾಮಶ್ಚ ತ್ರಿತಯಂ ಜೀವತಃ ಫಲಂ ।
ಏತತ್ತ್ರಯಮವಾಪ್ತವ್ಯಮಧರ್ಮಪರಿವರ್ಜಿತಂ ॥ ೧೧ ॥

॥ ಮುನಯ ಊಚುಃ ॥

ಶ್ರುತಂ ಭಗವತೋ ವಾಕ್ಯಂ ಧರ್ಮಯುಕ್ತಂ ಪರಂ ಹಿತಂ ।
ಶರೀರನಿಚಯಂ ಜ್ಞಾತುಂ ಬುದ್ಧಿರ್ನೋऽತ್ರ ಪ್ರಜಾಯತೇ ॥ ೧೨ ॥

ಮೃತಂ ಶರೀರಂ ಹಿ ನೃಣಾಂ ಸೂಕ್ಷ್ಮಮವ್ಯಕ್ತತಾಂ ಗತಂ ।
ಅಚಕ್ಷುರ್ವಿಷಯಂ ಪ್ರಾಪ್ತಂ ಕಥಂ ಧರ್ಮೋऽನುಗಚ್ಛತಿ ॥ ೧೩ ॥

॥ ವ್ಯಾಸ ಉವಾಚ ॥

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿರ್ಮನೋऽಂತರಂ ।
ಬುದ್ಧಿರಾತ್ಮಾ ಚ ಸಹಿತಾ ಧರ್ಮಂ ಪಶ್ಯಂತಿ ನಿತ್ಯದಾ ॥ ೧೪ ॥

---

೧೧. ಧರ್ಮವೂ, ಅರ್ಥವೂ, ಕಾಮವೂ, ಇವು ಮೂರೂ ಬದುಕಿನ ಗುರಿ. ಆದುದರಿಂದ ಬದುಕಿ ಬಾಳಬೇಕೆನ್ನುವವನು ಅಧರ್ಮವು ಒದಗದಂತೆ ಇವು ಮೂರನ್ನೂ ಆರ್ಜಿಸಬೇಕು ಎಂದನು.

೧೨. ಇದನ್ನು ಕೇಳಿ ಆ ಮುನಿಗಳು "ಹೇ ಭಗವನ್, ಧರ್ಮಯುಕ್ತವಾದ ನಿಮ್ಮ ಮಾತನ್ನು ಕೇಳಿದೆವು. ಇದು ಬಹುಹಿತವಾದುದೇ ಸರಿ. ಆದರೆ ಶರೀರದ ವಿಚಾರವನ್ನು ತಿಳಿಯಲು ನಮಗೆ ಕುತೂಹಲವುಂಟಾಗಿರುವುದು.

೧೩. ಮನುಷ್ಯರು ಸತ್ತನಂತರ ಆ ದೇಹವು ಸೂಕ್ಷ್ಮಾವಸ್ಥೆಯನ್ನು ತಾಳಿ ಅವ್ಯಕ್ತತೆಯನ್ನೇ ಹೊಂದುವುದು. ಆಗ ಅದು ಕಣ್ಣಿಗೆ ಕಾಣದು. ಇಂಥಹದನ್ನು ಧರ್ಮವು ಹಿಂಬಾಲಿಸುವುದೆಂದರೆ ಹೇಗೆ ಸಾಧ್ಯ?" ಎಂದು ಪ್ರಶ್ನಿಸಲು

೧೪. ವ್ಯಾಸನಿಂತೆಂದನು :—ಪೃಥಿವೀ, ವಾಯು, ಆಕಾಶ, ಅಪ್ಪು, ತೇಜಸ್ಸು, ಮನಸ್ಸು, ಬುದ್ಧಿ, ಆತ್ಮ ಇವರೆಲ್ಲರೂ ಒಟ್ಟಾಗಿ, ಪ್ರತಿನಿತ್ಯವೂ (ಸರ್ವದಾ) ಧರ್ಮವನ್ನು ಕಾಣುತ್ತಲೇ ಇರುವರು.

ಪ್ರಾಣಿನಾಮಿಹ ಸರ್ವೇಷಾಂ ಸಾಕ್ಷಿಭೂತಾ ದಿವಾನಿಶಂ ।
ಏತೈಶ್ಚ ಸಹ ಧರ್ಮೋ ಹಿ ತಂ ಜೀವಮನುಗಚ್ಛತಿ ॥ ೧೫ ॥

ತ್ವಗಸ್ಥಿ ಮಾಂಸಂ ಶುಕ್ರಂ ಚ ಶೋಣಿತಂ ಚ ದ್ವಿಜೋತ್ತಮಾಃ ।
ಶರೀರಂ ವರ್ಜಯಂತ್ಯೇತೇ ಜೀವಿತೇನ ವಿವರ್ಜಿತಂ ॥ ೧೬ ॥

ತತೋ ಧರ್ಮಸಮಾಯುಕ್ತಃ ಸ ಜೀವಃ ಸುಖಮೇಧತೇ ।
ಇಹಲೋಕೇ ಪರೇ ಚೈವ ಕಿಂ ಭೂಯಃ ಕಥಯಾಮಿ ವಃ ॥ ೧೭ ॥

॥ ಮುನಯ ಊಚುಃ ॥

ತದ್ದರ್ಶಿತಂ ಭಗವತಾ ಯಥಾ ಧರ್ಮೋಽನುಗಚ್ಛತಿ ।
ಏತತ್ತು ಜ್ಞಾತುಮಿಚ್ಛಾಮಃ ಕಥಂ ರೇತಃ ಪ್ರವರ್ತತೇ ॥ ೧೮ ॥

॥ ವ್ಯಾಸ ಉವಾಚ ॥

ಅನ್ನಮಶ್ನಂತಿ ಯೇ ದೇವಾಃ ಶರೀರಸ್ಥಾ ದ್ವಿಜೋತ್ತಮಾಃ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿರ್ಮನಸ್ತಥಾ ॥ ೧೯ ॥

---

೧೫. ಈಗ ಹೇಳಿದ ಪೃಥಿವ್ಯಾದಿಗಳು ಎಲ್ಲ ಪ್ರಾಣಿಗಳಿಗೂ ರಾತ್ರಿ ಹಗಲೂ ಸಾಕ್ಷಿಸ್ವರೂಪರಾಗಿರುವರು. ಇವೆಲ್ಲವುಗಳೊಡನೆ ಧರ್ಮವು ಶರೀರ ತ್ಯಾಗಾನಂತರ ಜೀವನನ್ನು ಹಿಂಬಾಲಿಸುವುದು.

೧೬. ಎಲೈ ಬ್ರಾಹ್ಮಣಶ್ರೇಷ್ಠರೇ! ಚರ್ಮ, ಮೂಳೆ, ಮಾಂಸ, ವೀರ್ಯ, ಶೋಣಿತವೆಂಬವುಗಳು ಜೀವವು ತೊರೆದುಬಿಟ್ಟ ಶರೀರವನ್ನು ಬಿಟ್ಟು ಹೊರಟುಹೋಗುವುವು.

೧೭. ಅನಂತರ ಆ ಜೀವನು ಧರ್ಮದ ಜೊತೆಯಲ್ಲಿ ಸೇರಿ ಇಹಲೋಕದಲ್ಲೂ ಪರಲೋಕದಲ್ಲೂ ಸುಖವನ್ನು ಹೊಂದುವನು. ಮತ್ತಿನ್ನೇನು ನಿಮಗೆ ಹೇಳಲಿ? ಎನ್ನಲು,

೧೮. ಆಗ ಮುನಿಗಳು "ಹೇ ಭಗವನ್, ಧರ್ಮವು ಹೇಗೆ ಜೀವನನ್ನು ಹಿಂಬಾಲಿಸುವುದೆಂಬುದನ್ನು ತಿಳಿಯಪಡಿಸಿದಿರಿ. ಆದರೆ ವೀರ್ಯವು ಯಾವ ಬಗೆಯಲ್ಲಿ ಉತ್ಪತ್ತಿಯಾಗುವುದು ಎಂಬುದನ್ನು ತಿಳಿಸಬೇಕು" ಎನ್ನಲು

೧೯. ವ್ಯಾಸನಿಂತೆಂದನು :—"ಎಲೈ ಬ್ರಾಹ್ಮಣರಿರಾ! ನಮ್ಮ ದೇಹದಲ್ಲಿ ನೆಲಸಿರುವ ಪೃಥಿವೀ, ವಾಯು, ಆಕಾಶ, ಅಪ್, ತೇಜಸ್ಸು, ಮನಸ್ಸು ಎಂಬವುಗಳು ನಮ್ಮ ದೇಹಕ್ಕೆ ದೇವತೆಗಳಂತೆ.

ತತಸ್ತೃಪ್ತೇಷು ಭೋ ವಿಪ್ರಾಸ್ತೇಷು ಭೂತೇಷು ಪಂಚಸು ।
ಮನಃಷಷ್ಠೇಷು ಶುದ್ಧಾತ್ಮಾ ರೇತಃ ಸಂಪದ್ಯತೇ ಮಹತ್ ॥ ೨೦ ॥

ತತೋ ಗರ್ಭಃ ಸಂಭವತಿ ಶ್ಲೇಷ್ಮಾ ಸ್ತ್ರೀಪುಂಸಯೋರ್ದ್ವಿಜಾಃ ।
ಏತದ್ವಃ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಥ ॥ ೨೧ ॥

॥ ಮುನಯ ಊಚುಃ ॥

ಆಖ್ಯಾತಂ ನೋ ಭಗವತಾ ಗರ್ಭಃ ಸಂಜಾಯತೇ ಯಥಾ ।
ಯಥಾ ಜಾತಸ್ತು ಪುರುಷಃ ಪ್ರಪದ್ಯತೇ ತದುಚ್ಯತಾಂ ॥ ೨೨ ॥

॥ ವ್ಯಾಸ ಉವಾಚ

ಆಸನ್ನಮಾತ್ರಪುರುಷಸ್ತೈರ್ಭೂತೈರಭಿಭೂಯತೇ ।
ವಿಪ್ರಯುಕ್ತಸ್ತು ತೈರ್ಭೂತೈಃ ಪುನರ್ಯಾತ್ಯಪರಾಂ ಗತಿಂ ॥ ೨೩ ॥

---

೨೦. ಈ ಪೃಥಿವ್ಯಾದಿ ಪಂಚಭೂತಗಳೂ, ಮನಸ್ಸೂ ತೃಪ್ತಿಯನ್ನು ಪಡೆದನಂತರ ಶುದ್ಧವಾದ ಆತ್ಮನು ರೇತೋರೂಪ (ವೀರ್ಯವಾಗಿ) ದಿಂದ ಪರಿಣಮಿಸುವನು.

೨೧. ಎಲೈ ದ್ವಿಜರೇ ! ಸ್ತ್ರೀಪುರುಷರ ಶ್ಲೇಷ್ಮರೂಪವಾದ ಈ ರೇತಸ್ಸೇ ಗರ್ಭವಾಗಿ ಪರಿಣಮಿಸುವುದು. ಇದೆಲ್ಲವನ್ನೂ ನಿಮಗೆ ತಿಳಿಸಿದೆನು. ಮತ್ತಿನ್ನೇನು ಕೇಳಬೇಕೆಂದು ನಿಮ್ಮಾಸೆ? ಹೇಳಿರಿ ” ಎಂದನು.

೨೨. ಆಗ ಮುನಿಗಳು ವ್ಯಾಸನನ್ನು ಕುರಿತು “ ಹೇ ಭಗವನ್ ! ನೀನು ಗರ್ಭೋತ್ಪತ್ತಿಪ್ರಕಾರವನ್ನೇನೋ ತಿಳಿಸಿದೆ. ಅದರಂತೆ, ಹುಟ್ಟಿದ ಆ ಗರ್ಭವು ಪುರುಷರೂಪವನ್ನು ತಾಳುವ ಬಗೆ ಹೇಗೆ? ಅದನ್ನು ತಿಳಿಸಬೇಕು ” ಎಂದರು.

೨೩. ಆಗ ವ್ಯಾಸನು ಅವರನ್ನು ಕುರಿತು ಹೇಳಿದನು :— “ಆ ಗರ್ಭವು ಪರಿಪೂರ್ಣವಾಗಿ ಬೆಳೆದು ಪುರುಷರೂಪವನ್ನು ಇನ್ನೇನು ತಾಳುವುದು ಎನ್ನುವಾಗ ಪೃಥಿವಾದಿ ಪಂಚಭೂತಗಳು ಗರ್ಭವನ್ನು ಆವರಿಸುವುವು. ಅನಂತರ ಗರ್ಭವು ಪುರುಷಾವಸ್ಥೆಯನ್ನು ಪಡೆಯುವುದು. ಆ ಭೂತಗಳು ದೇಹವನ್ನು ಬಿಟ್ಟೊಡನೆ ಜೀವನು ಬೇರೆಂದು ಗತಿಯನ್ನು ಪಡೆಯುವನು.

ಸ ಚ ಭೂತಸಮಾಯುಕ್ತಃ ಪ್ರಾಪ್ನೋತಿ ಜೀವಮೇವಹಿ ।
ತತೋಽಸ್ಯ ಕರ್ಮ ಪಶ್ಯಂತಿ ಶುಭಂ ವಾ ಯದಿ ವಾಶುಭಂ ।
ದೇವತಾಃ ಪಂಚಭೂತಸ್ಥಾಃ ಕಿಂ ಭೂಯಃ ಶ್ರೋತುಮಿಚ್ಛಥ ॥ ೨೪ ॥

॥ ಮುನಯ ಊಚುಃ ॥

ತ್ವಗಸ್ಥಿ ಮಾಂಸಮುತ್ಸೃಜ್ಯ ತೈಸ್ತು ಭೂತೈರ್ವಿವರ್ಜಿತಃ ।
ಜೀವಃ ಸ ಭಗವನ್ಕ್ವಸ್ಥಃ ಸುಖದುಃಖೇ ಸಮಶ್ನುತೇ ॥ ೨೫ ॥

॥ ವ್ಯಾಸ ಉವಾಚ ॥

ಜೀವಃ ಕರ್ಮಸಮಾಯುಕ್ತಃ ಶೀಘ್ರಂ ರೇತಃಸಮಾಗತಃ ।
ಸ್ತ್ರೀಣಾಂ ಪುಷ್ಪಂ ಸಮಾಸಾದ್ಯ ತತಃ ಕಾಲೇನ ಭೋ ದ್ವಿಜಾಃ ॥ ೨೬ ॥

ಯಮಸ್ಯ ಪುರುಷೈಃ ಕ್ಲೇಶೋ ಯಮಸ್ಯ ಪುರುಷೈರ್ವಧಃ ।
ದುಃಖಂ ಸಂಸಾರಚಕ್ರಂ ಚ ನರಃ ಕ್ಲೇಶಂ ಚ ವಿಂದತಿ ॥ ೨೭ ॥

---

೨೪. ಆ ಗರ್ಭವು ಪಂಚಭೂತಗಳೊಡನೆ ಸೇರಿದರೆ ಜೀವನನ್ನೇ ಪಡೆಯುವುದು (ಜೀವನೆನಿಸುವುದು.) ಆಗ ಜೀವನ ಪಾಪಕರ್ಮಗಳನ್ನೂ ಪುಣ್ಯಕರ್ಮಗಳನ್ನೂ ಪಂಚಭೂತಗಳಲ್ಲಿ ನೆಲೆಸಿರುವ ದೇವತೆಗಳು ನೋಡುತ್ತಿರುವರು. ಇನ್ನೇನು ಕೇಳಬೇಕೆನ್ನುವಿರಿ ?" ಎನ್ನಲು

೨೫. ಆ ಮುನಿಗಳು "ಎಲೈ ಭಗವಂತನೇ, ಈ ಜೀವನು, ತ್ವಕ್, ಅಸ್ಥಿ, ಮಾಂಸಗಳನ್ನು ತೊರೆದು, ಪಂಚಭೂತಗಳಿಂದಲೂ ಬಿಡಲ್ಪಟ್ಟಾಗ, ಎಲ್ಲಿದ್ದು ಸುಖದುಃಖಗಳನ್ನು ಅನುಭವಿಸುವನು ?" ಎಂದು ಪ್ರಶ್ನಿಸಿದರು.

೨೬. ಎಲೈ ಬ್ರಾಹ್ಮಣರಿರಾ! ಜೀವನು ಪ್ರಾರಬ್ಧಕರ್ಮವಶನಾಗಿ ಪುರುಷನ ವೀರ್ಯವನ್ನು ಸೇರಿ ಬಳಿಕ ಸ್ತ್ರೀಯರ ರಜಸ್ಸಿನೊಡನೆ ಬೆರೆತು ಅನಂತರ ಕೆಲವುಕಾಲದಮೇಲೆ (ಜನ್ಮಪ್ರಾಪ್ತ್ಯನಂತರ) ಸುಖದುಃಖಗಳನ್ನು ಅನುಭವಿಸುವನು.

೨೭. ಯಮನಭಟರಿಂದ ಕಷ್ಟ, ಯಮನಭಟರಿಂದ ಸಾವು, ಈರೀತಿಯಾಗಿ ಕ್ಲೇಶಮಯವಾಗಿರುವ ಸಂಸಾರಚಕ್ರದಲ್ಲಿ ಬಿದ್ದು ಜೀವನು ಕ್ಲೇಶವನ್ನು ಅನುಭವಿಸುವನು.

ಇಹ ಲೋಕೇ ಸ ತು ಪ್ರಾಣೀ ಜನ್ಮಪ್ರಭೃತಿ ಭೋ ದ್ವಿಜಾಃ ।
ಸುಕೃತಂ ಕರ್ಮ ವೈ ಭುಂಕ್ತೇ ಧರ್ಮಸ್ಯ ಫಲಮಾಶ್ರಿತಃ ॥ ೨೮ ॥

ಯದಿ ಧರ್ಮಂ ಸಮಾಯುಜ್ಯ ಜನ್ಮಪ್ರಭೃತಿ ಸೇವತೇ ।
ತತಃ ಸ ಪುರುಷೋ ಭೂತ್ವಾ ಸೇವತೇ ನಿತ್ಯದಾ ಸುಖಂ ॥ ೨೯ ॥

ಅಥಾಂತರಾಂತರಂ ಧರ್ಮಮಧರ್ಮಮುಪಸೇವತೇ ।
ಸುಖಸ್ಯಾನಂತರಂ ದುಃಖಂ ಸ ಜೀವೋಽಪ್ಯಧಿಗಚ್ಛತಿ ॥ ೩೦ ॥

ಅಧರ್ಮೇಣ ಸಮಾಯುಕ್ತೋ ಯಮಸ್ಯ ವಿಷಯಂ ಗತಃ ।
ಮಹಾದುಃಖಂ ಸಮಾಸಾದ್ಯ ತಿರ್ಯಗ್ಯೋನೌ ಪ್ರಜಾಯತೇ ॥ ೩೧ ॥

ಕರ್ಮಣಾ ಯೇನ ಯೇನೇಹ ಯಸ್ಯಾಂ ಯೋನೌ ಪ್ರಜಾಯತೇ ।
ಜೀವೋ ಮೋಹಸಮಾಯುಕ್ತಸ್ತನ್ಮೇ ಶೃಣುತ ಸಾಂಪ್ರತಂ ॥ ೩೨ ॥

---

೨೮. ಎಲೈ ಬ್ರಾಹ್ಮಣರಿರಾ! ಯಾವನು ಹಿಂದೆ ಧರ್ಮಕಾರ್ಯಗಳನ್ನು ಮಾಡಿರುವನೋ ಆ ಪ್ರಾಣಿಯು ಹುಟ್ಟಿದ್ದು ಮೊದಲುಗೊಂಡು ಧರ್ಮದ ಫಲವಾದ ಸುಕೃತಫಲಗಳನ್ನೇ ಹೊಂದುವನು.

೨೯. ಯಾವನು ಜನ್ಮಾರಭ್ಯ ಧರ್ಮದಲ್ಲಿಯೇ ಆಸಕ್ತನಾಗಿ ಅದನ್ನು ಸೇವಿಸುವನೋ ಅವನು ಮುಂದೆ ಪುರುಷನಾಗಿ ಹುಟ್ಟಿ ಸರ್ವದಾ ಸುಖವನ್ನೇ ಅನುಭವಿಸುವನು.

೩೦. ಯಾವನು ನಡುನಡುವೆ ಧರ್ಮವನ್ನೂ ಅಧರ್ಮವನ್ನೂ ಮಾಡುವನೋ ಆ ಜೀವನು ಸುಖವಾದಮೇಲೆ ದುಃಖವನ್ನು ಪಡೆಯುತ್ತಿರುವನು.

೩೧. ಯಾವನು ಕೇವಲ ಅಧರ್ಮಕಾರ್ಯಗಳಲ್ಲೇ ತೊಡಗಿರುವನೋ ಅಂಥವನು ಯಮನ ಪಟ್ಟಣದಲ್ಲಿ ಅತಿಯಾಗಿ ಶಿಕ್ಷೆಯನ್ನು (ದುಃಖವನ್ನು) ಅನುಭವಿಸಿ ಬಳಿಕ ಮೂಗುಜೀವಿಯಾಗಿ ಹುಟ್ಟುವನು.

೩೨. ಜೀವನು ಅಜ್ಞಾನವಶನಾಗಿ ತಾನು ಮಾಡುವ ಎಂತೆಂತಹ ಕರ್ಮಗಳಿಂದ ಯಾವ ಯಾವ ಜಾತಿಯಲ್ಲಿ ಹುಟ್ಟುವನೆಂಬುದನ್ನು ನಿಮಗೆ ಈಗ ವಿವರಿಸುವೆನು. ಕೇಳಿರಿ.

ಯದೇತದುಚ್ಯತೇ ಶಾಸ್ತ್ರೈಃ ಸೇತಿಹಾಸೈಶ್ಚ ಛಂದಸಿ ।
ಯಮಸ್ಯ ವಿಷಯಂ ಘೋರಂ ಮರ್ತ್ಯಲೋಕಂ ಪ್ರವರ್ತತೇ　　॥ ೩೩ ॥

ಇಹ ಸ್ಥಾನಾನಿ ಪುಣ್ಯಾನಿ ದೇವತುಲ್ಯಾನಿ ಭೋ ದ್ವಿಜಾಃ ।
ತಿರ್ಯಗ್ಯೋನ್ಯತಿರಿಕ್ತಾನಿ ಗತಿಮಂತಿ ಚ ಸರ್ವಶಃ　　॥ ೩೪ ॥

ಯಮಸ್ಯ ಭವನೇ ದಿವ್ಯೇ ಬ್ರಹ್ಮಲೋಕಸಮೇ ಗುಣೈಃ ।
ಕರ್ಮಭಿರ್ನಿಯತೈರ್ಬದ್ಧೋ ಜಂತುರ್ದುಃಖಾನ್ಯುಪಾಶ್ನುತೇ　　॥ ೩೫ ॥

ಯೇನ ಯೇನ ಹಿ ಭಾವೇನ ಯೇನ ವೈ ಕರ್ಮಣಾ ಗತಿಂ ।
ಪ್ರಯಾತಿ ಪುರುಷೋ ಘೋರಾಂ ತಥಾ ವಕ್ಷ್ಯಾಮ್ಯತಃ ಪರಂ　　॥ ೩೬ ॥

---

೩೩. “ಮನುಷ್ಯರೆಲ್ಲರೂ ತಮ್ಮ ಕಾಲಾನಂತರ ಘೋರವಾದ ಯಮಲೋಕವನ್ನು ಹೊಂದುವರು” ಎಂದು ಶಾಸ್ತ್ರಗಳೂ, ಇತಿಹಾಸಗಳೂ, ವೇದಗಳೂ ಒಕ್ಕೊರಲಿನಿಂದ ಸಾರಿರುವುವು.

೩೪. ಈ ಯಮಪಟ್ಟಣದಲ್ಲಿ, ದೇವತೆಗಳ ನಿವಾಸಗಳಂತೆ ಎಲ್ಲವೂ ಪುಣ್ಯತಮವಾದ ಸ್ಥಳಗಳೇ ಇರುವುವು. ಎಲ್ಲೆಲ್ಲಿ ನೋಡಿದರೂ ತಿರ್ಯಕ್ ಪ್ರಾಣಿಗಳನ್ನು ಒಂದುಬಿಟ್ಟು ಎಲ್ಲರೂ ಸಂಚರಿಸುವರು.

೩೫. ಈರೀತಿಯಾಗಿ ತನ್ನ ಗುಣಗಳಿಂದ ಬ್ರಹ್ಮನ ಸತ್ಯಲೋಕಕ್ಕೆ ಸಮವಾದ ಯಮಪಟ್ಟಣದಲ್ಲಿಯೂ ಸಹ ಜೀವನು ಅನಾದಿಯಾದ ಕರ್ಮಪಾಶದಿಂದ ಬದ್ಧನಾಗಿ ದುಃಖಗಳನ್ನು ಅನುಭವಿಸುವನು.

೩೬. ಇನ್ನುಮುಂದೆ ಜೀವನು ಯಾವಯಾವ ಭಾವದಿಂದ ಮತ್ತು ಯಾವಯಾವ ಕೃತ್ಯದಿಂದ ಯಾವಯಾವ ಗತಿಯನ್ನು ಹೊಂದುವನೆಂಬುದನ್ನು ವಿವರಿಸುವೆನು.

ಅಧೀತ್ಯ ಚತುರೋ ವೇದಾನ್ದ್ವಿಜೋ ಮೋಹಸಮನ್ವಿತಃ ।
ಪತಿತಾತ್ಪ್ರತಿಗೃಹ್ಯಾಥ ಖರಯೋನೌ ಪ್ರಜಾಯತೇ ॥ ೩೭ ॥

ಖರೋ ಜೀವತಿ ವರ್ಷಾಣಿ ದಶ ಪಂಚ ಚ ಭೋ ದ್ವಿಜಾಃ ।
ಖರೋ ಮೃತೋ ಬಲೀವರ್ದಃ ಸಪ್ತ ವರ್ಷಾಣಿ ಜೀವತಿ ॥ ೩೮ ॥

ಬಲೀವರ್ದೋ ಮೃತಶ್ಚಾಪಿ ಜಾಯತೇ ಬ್ರಹ್ಮರಾಕ್ಷಸಃ ।
ಬ್ರಹ್ಮರಕ್ಷಸ್ತು ಮಾಸಾಂಸ್ತ್ರೀಂಸ್ತತೋ ಜಾಯೇತ ಬ್ರಾಹ್ಮಣಃ ॥ ೩೯ ॥

ಪತಿತಂ ಯಾಜಯಿತ್ವಾ ತು ಕೃಮಿಯೋನೌ ಪ್ರಜಾಯತೇ ।
ತತ್ರ ಜೀವತಿ ವರ್ಷಾಣಿ ದಶ ಪಂಚ ಚ ಭೋ ದ್ವಿಜಾಃ ॥ ೪೦ ॥

ಕ್ರಿಮಿಭಾವಾದ್ವಿನಿರ್ಮುಕ್ತಸ್ತತೋ ಜಾಯೇತ ಗರ್ದಭಃ ।
ಗರ್ದಭಃ ಪಂಚ ವರ್ಷಾಣಿ ಪಂಚ ವರ್ಷಾಣಿ ಶೂಕರಃ ॥ ೪೧ ॥

---

೩೭. ನಾಲ್ಕು ವೇದಗಳನ್ನು ಅಧ್ಯಯಮಾಡಿದರೂ ಯಾವ ಬ್ರಾಹ್ಮಣನು ಅಜ್ಞಾನಪರವಶನಾಗಿ ಪತಿತನಾದವನಿಂದ ದಾನವನ್ನು ಸ್ವೀಕರಿಸುವನೋ ಆತನು ಕತ್ತೆಯಾಗಿ ಹುಟ್ಟುವನು.

೩೮. ಎಲೈ ವಿಪ್ರರಿರಾ! ಆ ಕತ್ತೆಯು ಹದಿನೈದು ವರ್ಷಗಳಕಾಲ ಬದುಕುವುದು. ಅನಂತರ ಕತ್ತೆಯು ಸಾಯುವುದು. ಈ ಕತ್ತೆಯ ಜನ್ಮವು ಮುಗಿದಮೇಲೆ ಅವನು ಎತ್ತಾಗಿ ಹುಟ್ಟಿ ಏಳು ವರ್ಷಗಳು ಬದುಕುವನು.

೩೯. ಈ ಎತ್ತಿನ ಜನ್ಮವು ಮುಗಿದನಂತರ ಅವನು ಬ್ರಹ್ಮರಾಕ್ಷಸನಾಗುವನು. ಈರೀತಿಯಾಗಿ ಪತಿತನಿಂದ ಪರಿಗ್ರಹಮಾಡಿದ ಬ್ರಾಹ್ಮಣನು ಮೂರು ತಿಂಗಳಕಾಲ ಬ್ರಹ್ಮರಾಕ್ಷಸ ಜನ್ಮದಲ್ಲಿರಬೇಕಾಗುವುದು.

೪೦. ಪತಿತನಾದವನ ಕೈಲಿ ಯಾಗಮಾಡಿಸಿದವನು ಕೃಮಿಯಾಗಿ ಹುಟ್ಟಿ ಹದಿನೈದು ವರ್ಷಗಳಕಾಲ ಬದುಕುವನು.

೪೧. ಆ ಕೃಮಿ ಜನ್ಮವಾದಮೇಲೆ ಕತ್ತೆಯಾಗಿ ಹುಟ್ಟಿ ಐದು ವರ್ಷಗಳ ಕಾಲ ಬುದುಕಿದ್ದು ಮತ್ತೆ ಐದು ವರ್ಷಗಳಕಾಲ ಹಂದಿಯಾಗಿರುವನು.

ಕುಕ್ಕುಟಃ ಪಂಚ ವರ್ಷಾಣಿ ಪಂಚ ವರ್ಷಾಣಿ ಜಂಬುಕಃ ।
ಶ್ವಾ ವರ್ಷಮೇಕಂ ಭವತಿ ತತೋ ಜಾಯೇತ ಮಾನವಃ ॥ ೪೨ ॥

ಉಪಾಧ್ಯಾಯಸ್ಯ ಯಃ ಪಾಪಂ ಶಿಷ್ಯಃ ಕುರ್ಯಾದಬುದ್ಧಿಮಾನ್ ।
ಸ ಜನ್ಮಾನೀಹ ಸಂಸಾರೇ ತ್ರೀನಾಪ್ನೋತಿ ನ ಸಂಶಯಃ ॥ ೪೩ ॥

ಪ್ರಾಕ್ಶ್ವಾ ಭವತಿ ಭೋ ವಿಪ್ರಾಸ್ತತಃ ಕ್ರವ್ಯಾತ್ತತಃ ಖರಃ ।
ಪ್ರೇತ್ಯ ಚ ಪರಿಕ್ಲಿಷ್ಟೋಷು ಪಶ್ಚಾಜ್ಜಾಯೇತ ಬ್ರಾಹ್ಮಣಃ ॥ ೪೪ ॥

ಮನಸಾಪಿ ಗುರೋರ್ಭಾರ್ಯಾಂ ಯಃ ಶಿಷ್ಯೋ ಯಾತಿ ಪಾಪಕೃತ್ ।
ಉದಗ್ರಾನ್ಪ್ರೈತಿ ಸಂಸಾರಾನಧರ್ಮೇಣೇಹ ಚೇತಸಾ ॥ ೪೫ ॥

ಶ್ವಯೋನೌ ತು ಸ ಸಂಭೂತಸ್ತ್ರೀಣಿ ವರ್ಷಾಣಿ ಜೀವತಿ ।
ತತ್ರಾಪಿ ನಿಧನಂ ಪ್ರಾಪ್ತಃ ಕ್ರಿಮಿಯೋನೌ ಪ್ರಜಾಯತೇ ॥ ೪೬ ॥

---

೪೨. ಅನಂತರ ಐದು ವರ್ಷಗಳು ಕೋಳಿಯಾಗಿಯೂ ಅದಾದಮೇಲೆ ಐದು ವರ್ಷಗಳು ನರಿಯಾಗಿಯೂ ಅನಂತರ ಒಂದು ವರ್ಷ ನಾಯಿಯಾಗಿಯೂ ಇದ್ದು ಬಳಿಕ ಮನುಷ್ಯನಾಗುವನು.

೪೩. ಯಾವನು ಬುದ್ಧಿಯಿಲ್ಲದೆ ತನ್ನ ಗುರುವನ್ನು ನಿಂದಿಸುವನೋ ಅವನು ಖಂಡಿತವಾಗಿಯೂ ಮೂರು ಜನ್ಮಗಳೆತ್ತಬೇಕಾಗುವುದು.

೪೪. ಮೊದಲು ನಾಯಿಯಾಗಿಯೂ, ಬಳಿಕ ರಾಕ್ಷಸನಾಗಿಯೂ, ಅನಂತರ ಕತ್ತೆಯಾಗಿಯೂ ಹುಟ್ಟಿ, ಕ್ಲೇಶಗಳನ್ನನುಭವಿಸಿ ಅನಂತರ ಬ್ರಾಹ್ಮಣನಾಗಿ ಹುಟ್ಟುವನು.

೪೫. ಯಾವ ಶಿಷ್ಯನು ಮನಸ್ಸಿನಿಂದಾಗಲೀ ತನ್ನ ಗುರುಪತ್ನಿಯನ್ನು ಸಂಗಮಿಸುವನೋ ಆ ಪಾಪಿಯು ತನ್ನ ಮನಸ್ಸು ಅಧರ್ಮದಲ್ಲಿ ಆಸಕ್ತವಾದುದರ ಫಲವಾಗಿ ಅನೇಕ ಜನ್ಮಗಳನ್ನು ಎತ್ತಬೇಕಾಗುವುದು.

೪೬. ಮೊದಲು ನಾಯಾಗಿ ಹುಟ್ಟುವನು. ಮೂರು ವರ್ಷವಾದ ಮೇಲೆ ಅಲ್ಲಿಯೂ ಮರಣವನ್ನು ಹೊಂದಿ ಕ್ರಿಮಿಯಾಗಿ ಹುಟ್ಟುವನು.

ಕೃಮಿಭಾವಮುಸುಪ್ರಾಪ್ತೌ ವರ್ಷಮೇಕಂ ತು ಜೀವತಿ ।
ತತಸ್ತು ನಿಧನಂ ಪ್ರಾಪ್ಯ ಬ್ರಹ್ಮಯೋನೌ ಪ್ರಜಾಯತೇ ॥ ೪೭ ॥

ಯದಿ ಪುತ್ರಸಮಂ ಶಿಷ್ಯಂ ಗುರುರ್ಹನ್ಯಾದಕಾರಣಂ ।
ಆತ್ಮನಃ ಕಾಮಕಾರೇಣ ಸೋಽಪಿ ಹಿಂಸ್ರಃ ಪ್ರಜಾಯತೇ ॥ ೪೮ ॥

ಪಿತರಂ ಮಾತರಂ ಚೈವ ಯಸ್ತು ಪುತ್ರೋಽವಮನ್ಯತೇ ।
ಸೋಽಪಿ ವಿಪ್ರಾ ಮೃತೋ ಜಂತುಃ ಪೂರ್ವಂ ಜಾಯೇತ ಗರ್ದಭಃ ॥ ೪೯ ॥

ಗರ್ದಭತ್ವಂ ತು ಸಂಪ್ರಾಪ್ಯ ದಶ ವರ್ಷಾಣಿ ಜೀವತಿ ।
ಸಂವತ್ಸರಂ ತು ಕುಂಭೀರಸ್ತತೋ ಜಾಯೇತ ಮಾನವಃ ॥ ೫೦ ॥

ಪುತ್ರಸ್ಯ ಮಾತಾಪಿತರೌ ಯಸ್ಯ ರುಷ್ಟಾವುಭಾವಪಿ ।
ಗುರ್ವಪಧ್ಯಾನತಃ ಸೋಽಪಿ ಮೃತೋ ಜಯೇತ ಗರ್ದಭಃ ॥ ೫೧ ॥

---

೪೭. ಕೃಮಿಯಾಗಿ ಹುಟ್ಟಿದನಂತರ ಒಂದು ವರ್ಷಕಾಲ ಬದುಕಿದ್ದು ಬಳಿಕ ಸತ್ತು ಬಳಿಕ ಪುನಃ ಬ್ರಾಹ್ಮಣಜನ್ಮವನ್ನು ಹೊಂದುವನು.

೪೮. ಗುರುವೆನಿಸಿದ ಯಾವನು ತನ್ನ ಮಗನಂತೆ ಇರುವ ಶಿಷ್ಯನನ್ನು ನಿಷ್ಕಾರಣವಾಗಿ ಕೊಲ್ಲುವನೋ ಅವನು ದುಷ್ಟಮೃಗವಾಗಿ ಹುಟ್ಟುವನು.

೪೯. ಯಾವ ಮಗನು ತಾಯಿಯನ್ನಾಗಲೀ ತಂದೆಯನ್ನಾಗಲೀ, ಅವಮಾನಪಡಿಸುವನೋ ಅವನು ಸತ್ತು ಕತ್ತೆಯಾಗಿ ಹುಟ್ಟುವನು.

೫೦. ಆರೀತಿ ಕತ್ತೆಯಾಗಿ ಹತ್ತು ವರ್ಷಗಳಕಾಲ ಬದುಕಿದ್ದು ಆಮೇಲೆ ಒಂದು ವರ್ಷ ಕುಂಭೀರ (ಮೊಸಳೆ) ನಾಗಿ ಅನಂತರ ಮತ್ತೆ ಮನುಷ್ಯನಾಗಿ ಹುಟ್ಟುವನು.

೫೧. ಯಾವ ಮಗನ ವಿಷಯವಾಗಿ ತಾಯಿತಂದೆಗಳು ಹಿರಿಯರನ್ನು ಅಗೌರವದಿಂದ ಕಾಣುವನೆಂಬ ಕಾರಣದಿಂದ ಕೋಪಗೊಳ್ಳುವರೋ ಆ ಮಗನು ಸತ್ತನಂತರ ಕತ್ತೆಯಾಗಿ ಹುಟ್ಟುವನು.

ಖರೋ ಜೀವತಿ ಮಾಸಾಂಶ್ಚ ದಶ ಚಾಪಿ ಚತುರ್ದಶ ।
ಬಿಡಾಲಃ ಸಪ್ತ ಮಾಸಾಂಸ್ತು ತತೋ ಜಾಯೇತ ಮಾನವಃ ॥ ೫೨ ॥

ಮಾತಾಪಿತರಾವಾಕ್ರುಶ್ಯ ಸಾರೀಕಃ ಸಂಪ್ರಜಾಯತೇ ।
ತಾಡಯಿತ್ವಾ ತು ತಾವೇವ ಜಾಯತೇ ಕಚ್ಛಪೋ ದ್ವಿಜಾಃ ॥ ೫೩ ॥

ಕಚ್ಛಪೋ ದಶ ವರ್ಷಾಣಿ ತ್ರೀಣಿ ವರ್ಷಾಣಿ ಶಲ್ಯಕಃ ।
ವ್ಯಾಲೋ ಭೂತ್ವಾ ತು ಷಣ್ಮಾಸಾಂಸ್ತತೋ ಜಾಯೇತ ಮಾನುಷಃ ॥ ೫೪ ॥

ಭರ್ತೃಪಿಂಡಮುಪಾಶ್ನೀನೋ ರಾಜದ್ವಿಷ್ಟಾನಿ ಸೇವತೇ ।
ಸೋಽಪಿ ಮೋಹಸಮಾಪನ್ನೋ ಮೃತೋ ಜಾಯೇತ ವಾನರಃ ॥ ೫೫ ॥

ವಾನರೋ ದಶ ವರ್ಷಾಣಿ ಸಪ್ತ ವರ್ಷಾಣಿ ಮೂಷಕಃ ।
ಶ್ವಾ ಚ ಭೂತ್ವಾ ತು ಷಣ್ಮಾಸಾಂಸ್ತತೋ ಜಾಯೇತ ಮಾನವಃ ॥ ೫೬ ॥

---

೫೨. ಆರೀತಿ ೨೪ ತಿಂಗಳು ಎಂದರೆ ಎರಡು ವರ್ಷಕಾಲ ಬದುಕಿದ್ದು ಬಳಿಕ ಏಳು ತಿಂಗಳಕಾಲ ಬೆಕ್ಕಿನಜಾತಿಯಲ್ಲಿದ್ದು ಅನಂತರ ಮತ್ತೆ ಮಾನವನಾಗುವನು.

೫೩. ತಾಯಿತಂದೆಗಳನ್ನು ಕೋಪದಿಂದ ಬೇಸತ್ತು ತುಚ್ಛವಾಗಿ ಕೂಗಿಕೊಂಡರೆ ಅವನು ಗಿಳಿಯಾಗಿ ಹುಟ್ಟುವನು. ಅದೇ ತಾಯಿತಂದೆಗಳನ್ನು ಹೊಡೆದವನು ಆಮೆಯಾಗಿ ಹುಟ್ಟುವನು.

೫೪. ಅನಂತರ ಹಾಗೆ ಹತ್ತು ವರ್ಷ ಕಳೆದು ಬಳಿಕ ಮುಳ್ಳುಹಂದಿಯಾಗಿ ಮೂರು ವರ್ಷವಿದ್ದು ಅನಂತರ ಆರು ತಿಂಗಳು ದುಷ್ಟಸರ್ಪವಾಗಿದ್ದು ಆಮೇಲೆ ಮರಳಿ ಮನುಷ್ಯನಾಗುವನು.

೫೫. ಯಾವನು ಒಡೆಯನ ವಸ್ತುವನ್ನು ಅವನಿಗೆ ತಿಳಿಯದಂತೆ ದಕ್ಕಿಸಿಕೊಳ್ಳುವನೋ ಮತ್ತು ಯಾವನು ರಾಜದ್ವೇಷಿಗಳನ್ನು ಸೇವಿಸುವನೋ ಆ ಅಜ್ಞಾನಿಯು ಸತ್ತನಂತರ ಕೋತಿಯಾಗಿ ಹುಟ್ಟುವನು.

೫೬. ಹಾಗೆ ಹತ್ತು ವರ್ಷಗಳಿದ್ದು, ಏಳು ವರ್ಷ ಇಲಿಯಾಗಿ, ಬಳಿಕ ಆರು ತಿಂಗಳು ನಾಯಿಯಾಗಿ ಅನಂತರ ಮತ್ತೆ ಮನುಷ್ಯನಾಗುವನು.

ನ್ಯಾಸಾಪಹರ್ತಾ ತು ನರೋ ಯಮಸ್ಯ ವಿಷಯಂ ಗತಃ ।
ಸಂಸಾರಾಣಾಂ ಶತಂ ಗತ್ವಾ ಕೃಮಿಯೋನೌ ಪ್ರಜಾಯತೇ ॥ ೫೭ ॥

ತತ್ರ ಜೀವತಿ ವರ್ಷಾಣಿ ದಶ ಪಂಚ ಚ ಭೋ ದ್ವಿಜಾಃ ।
ದುಷ್ಕೃತಸ್ಯ ಕ್ಷಯಂ ಕೃತ್ವಾ ತತೋ ಜಾಯೇತ ಮಾನುಷಃ ॥ ೫೮ ॥

ಅಸೂಯಕೋ ನರಶ್ಚಾಪಿ ಮೃತೋ ಜಾಯೇತ ಶಾರ್ಙ್ಗಕಃ ।
ವಿಶ್ವಾಸಹರ್ತಾ ಚ ನರೋ ಮೀನೋ ಜಾಯೇತ ದುರ್ಮತಿಃ ॥ ೫೯ ॥

ಭೂತ್ವಾ ಮೀನೋಽಷ್ಟವರ್ಷಾಣಿ ಮೃಗೋ ಜಾಯೇತ ಭೋ ದ್ವಿಜಾಃ ।
ಮೃಗಸ್ತು ಚತುರೋ ಮಾಸಾಂಸ್ತತಶ್ಛಾಗಃ ಪ್ರಜಾಯತೇ ॥ ೬೦ ॥

ಛಾಗಸ್ತು ನಿಧನಂ ಪ್ರಾಪ್ಯ ಪೂರ್ಣೇ ಸಂವತ್ಸರೇ ತತಃ ।
ಕೀಟಃ ಸಂಜಾಯತೇ ಜಂತುಸ್ತತೋ ಜಾಯೇತ ಮಾನುಷಃ ॥ ೬೧ ॥

---

೫೭. ತನ್ನ ಬಳಿ ಒತ್ತೆಯಿಟ್ಟಿದ್ದ ವಸ್ತುವನ್ನು ಯಾವನು ದಕ್ಕಿಸಿಕೊಳ್ಳುವನೋ ಆ ಮಾನವನು ಯಮನಪಟ್ಟಣಕ್ಕೆ ಹೋಗಿ ಅಲ್ಲಿ ಶಿಕ್ಷೆಯನ್ನು ಅನುಭವಿಸಿದ ನಂತರ ನೂರುಜನ್ಮಗಳನ್ನೆತ್ತಿ ಕಡೆಗೆ ಕೃಮಿಯಾಗಿ ಹುಟ್ಟುವನು.

೫೮. ಆರೀತಿ ಕೃಮಿಯಾಗಿ ಹದಿನೈದು ವರ್ಷಗಳ ಕಾಲವಿದ್ದು ತನ್ನ ಪಾಪಕರ್ಮದ ಫಲವನ್ನು ಅನುಭವಿಸಿ ಪಾಪವನ್ನು ಕಳೆದುಕೊಂಡನಂತರ ಮನುಷ್ಯನಾಗಿ ಹುಟ್ಟುವನು.

೫೯. ಯಾವ ಮನುಷ್ಯನು ಇನ್ನೊಬ್ಬರನ್ನು ಕಂಡರೆ ಅಸೂಯೆಪಡುವನೋ ಅವನು ಶಾರ್ಙ್ಗಕನಾಗಿ ಹುಟ್ಟುವನು. ನಂಬಿಕೆಯನ್ನು ಕೆಡಿಸಿಕೊಂಡವನು ಮೀನಾಗಿ ಹುಟ್ಟುವನು.

೬೦. ಎಲೈ ಬ್ರಾಹ್ಮಣರೇ, ಹಾಗೆ ಮೀನಾಗಿ ಎಂಟು ವರ್ಷಗಳು ಬದುಕಿದ್ದು ಬಳಿಕ ಜಿಂಕೆಯಾಗಿ ನಾಲ್ಕು ತಿಂಗಳೂ, ಆಮೇಲೆ ಹೋತನಾಗಿ

೬೧. ಒಂದು ವರ್ಷಕಾಲವೂ ಬದುಕಿದ್ದು ಬಳಿಕ ಕೀಟವಾಗಿ ಹುಟ್ಟಿ ಆಮೇಲೆ ಮನುಷ್ಯಜನ್ಮವನ್ನು ಪಡೆಯುವನು.

ಧಾನ್ಯಾನ್ಯವಾಂಸ್ತಿಲಾನ್ಮಾಷಾನ್ಕುಲಿತ್ಥಾನ್ಸರ್ಷಪಾಂಶ್ಚಣಾನ್ ।
ಕಲಾಯಾನಥ ಮುದ್ಗಾಂಶ್ಚ ಗೋಧೂಮಾನತಸೀಸ್ತಥಾ ॥ ೬೨ ॥

ಸಸ್ಯಾನ್ಯನ್ಯಾನಿ ಹರ್ತಾ ಚ ಮರ್ತ್ಯೋ ಮೋಹಾದಚೇತನಃ ।
ಸಂಜಾಯತೇ ಮುನಿಶ್ರೇಷ್ಠಾ ಮೂಷಿಕೋ ನಿರಪತ್ರಪಃ ॥ ೬೩ ॥

ತತಃ ಪ್ರೇತ್ಯ ಮುನಿಶ್ರೇಷ್ಠಾ ಮೃತೋ ಜಾಯೇತ ಶೂಕರಃ ।
ಶೂಕರೋ ಜಾತಮಾತ್ರಸ್ತು ರೋಗೇಣ ಮ್ರಿಯತೇ ಪುನಃ ॥ ೬೪ ॥

ಶ್ವಾ ತತೋ ಜಾಯತೇ ಮೂಕಃ ಕರ್ಮಣಾ ತೇನ ಮಾನವಃ ।
ಭೂತ್ವಾ ಶ್ವಾ ಪಂಚ ವರ್ಷಾಣಿ ತತೋ ಜಾಯೇತ ಮಾನವಃ ॥ ೬೫ ॥

ಪರದಾರಾಭಿಮರ್ಶಂ ತು ಕೃತ್ವಾ ಜಾಯೇತ ವೈ ವೃಕಃ ।
ಶ್ವಾ ಶೃಗಾಲಸ್ತತೋ ಗೃಧ್ರೋ ವ್ಯಾಲಃ ಕಂಕೋ ಬಕಸ್ತಥಾ ॥ ೬೬ ॥

೬೨-೬೩. ಎಲೈ ಮುನಿಶ್ರೇಷ್ಠರಿರಾ! ಯಾವ ಮಾನವನು ಜವೆ, ಎಳ್ಳು, ಉದ್ದು, ಹುರುಳಿ, ಸಾಸಿವೆ, ಕಡಲೆ, ಕಟಾಯ (ಬಟಾಣಿ) ಹೆಸರು, ಗೋಧುವೆ, ಆಗಸೆಬೀಜ ಮೊದಲಾದ ಧಾನ್ಯಗಳನ್ನೂ ಇತರ ವಿಧವಾದ ಸಸ್ಯಗಳನ್ನೂ, ಅಜ್ಞಾನಮೋಹಿತನಾಗಿ ಅಪಹರಿಸುವನೋ ಅವನು ಇಲಿಯಾಗಿ ಹುಟ್ಟುವನು.

೬೪. ಆ ಇಲಿಯ ಜನ್ಮವು ಮುಗಿದನಂತರ ಹಂದಿಯಾಗಿ ಹುಟ್ಟುವನು. ಹಾಗೆ ಹಂದಿಯಾಗಿ ಹುಟ್ಟಿದ ಕೂಡಲೇ ಖಾಯಿಲೆಗೆ ಸಿಕ್ಕಿ ಸಾಯುವನು.

೬೫. ಅನಂತರ ತಾನು ಮಾಡಿದ ಕರ್ಮದ ಮಹಿಮೆಯಿಂದ ಮಾತಾಡಲು ಆಗದ ನಾಯಾಗಿ ಹುಟ್ಟಿ ಐದು ವರ್ಷಗಳಕಾಲ ಅಲೆದಾಡುತ್ತಿದ್ದು ಕೊನೆಗೆ ಮೊದಲಿನಂತೆ ಮನುಷ್ಯಜನ್ಮವೆತ್ತುವನು.

೬೬. ಪರಸ್ತ್ರೀ ಸಮಾಗಮಮಾಡಿದ ಪಾಪಿಯು ತೋಳನಾಗಿ ಹುಟ್ಟುವನು. ಅನಂತರ ನಾಯಾಗಿಯೂ, ನರಿಯಾಗಿಯೂ, ಗೃಧ್ರವಾ (ಹದ್ದಾ)ಗಿಯೂ, ಹಾವಾಗಿಯೂ, ಹದ್ದಾಗಿಯೂ, ಕೊಕ್ಕರೆಯಾಗಿಯೂ ಹುಟ್ಟುವನು.

ಭ್ರಾತುರ್ಭಾರ್ಯಾಂ ತು ಪಾಪಾತ್ಮಾ ಯೋ ಧರ್ಷಯತಿ ಮೋಹಿತಃ ।
ಪುಂಸ್ಕೋಕಿಲತ್ವಮಾಪ್ನೋತಿ ಸೋಽಪಿ ಸಂವತ್ಸರಂ ದ್ವಿಜಾಃ ॥ ೬೭ ॥

ಸಖಿಭಾರ್ಯಾಂ ಗುರೋರ್ಭಾರ್ಯಾಂ ರಾಜಭಾರ್ಯಾಂ ತಥೈವ ಚ ।
ಪ್ರಧರ್ಷಯಿತ್ವಾ ಕಾಮಾತ್ಮಾ ಮೃತೋ ಜಾಯೇತ ಶೂಕರಃ ॥ ೬೮ ॥

ಶೂಕರಃ ಪಂಚ ವರ್ಷಾಣಿ ದಶ ವರ್ಷಾಣಿ ವೈ ಬಕಃ ।
ಪಿಪೀಲಿಕಸ್ತು ಮಾಸಾಂಸ್ತ್ರೀನ್ಕೀಟಃ ಸ್ಯಾನ್ಮಾಸಮೇವ ಚ ॥ ೬೯ ॥

ಏತಾನಾಸಾದ್ಯ ಸಂಸಾರಾನ್ಕೃಮಿಯೋನೌ ಪ್ರಜಾಯತೇ ।
ತತ್ರ ಜೀವತಿ ಮಾಸಾಂಸ್ತು ಕೃಮಿಯೋನೌ ಚತುರ್ದಶ ॥ ೭೦ ॥

ನರೋಽಧರ್ಮಕ್ಷಯಂ ಕೃತ್ವಾ ತತೋ ಜಾಯೇತ ಮಾನುಷಃ ।
ಪೂರ್ವಂ ದತ್ತ್ವಾ ತು ಯಃ ಕನ್ಯಾಂ ದ್ವಿತೀಯೇ ದಾತುಮಿಚ್ಛತಿ ॥ ೭೧ ॥

---

೬೭. ಯಾವ ಪಾಪಿಯು ಸಹೋದರನ ಹೆಂಡತಿಯನ್ನೇ ಕಾಮಿಸಿ ಅವಳನ್ನು ಕೆಡಿಸುವನೋ ಅವನು ಒಂದು ವರ್ಷಕಾಲ ಗಂಡುಕೋಗಿಲೆಯಾಗಿ ಹುಟ್ಟುವನು.

೬೮. ಸ್ನೇಹಿತನ ಹೆಂಡತಿಯನ್ನೂ ಗುರು ಪತ್ನಿಯನ್ನೂ ರಾಜ ಸ್ತ್ರೀಯನ್ನೂ ಯಾವಾತನು ಮೋಹಪರವಶನಾಗಿ ಸಂಗಮಿಸುವನೋ ಅವನು ಸತ್ತಮೇಲೆ ಹಂದಿಯಾಗಿ ಹುಟ್ಟುವನು.

೬೯. ಹಾಗೆ ಐದು ವರ್ಷಗಳಕಾಲವಿದ್ದು ಅನಂತರ ಹತ್ತು ವರ್ಷಗಳ ಕಾಲ ಕೊಕ್ಕರೆಯಾಗಿ ಇದ್ದು ಬಳಿಕ ಮೂರು ತಿಂಗಳಕಾಲ ಇರುವೆಯಾಗಿಯೂ, ಒಂದು ತಿಂಗಳು ಕೀಟವಾಗಿಯೂ ಇದ್ದು ಅನಂತರ

೭೦. ಕೃಮಿಯಾಗಿ ಹುಟ್ಟಿ ಹದಿನಾಲ್ಕು ತಿಂಗಳುಗಳಕಾಲ ಬದುಕು ವನು.

೭೧. ಎಲೈ ವಿಪ್ರರಿರಾ! ಇಷ್ಟು ಜನ್ಮಗಳನೆತ್ತಿದನಂತರ ಅವನ ಸಂತಾಪವು ಕ್ಷೀಣವಾಗಿ ಆಮೇಲೆ ಮನುಷ್ಯನಾಗಿ ಹುಟ್ಟುವನು. ಯಾವನು ತನ್ನ ಮಗಳನ್ನು ಇಬ್ಬರಿಗಿಟ್ಟು ಆಮೇಲೆ ಮತ್ತೊಬ್ಬನಿಗೆ ಕೊಡಲು ಆಶಿಸುವನೋ,

ಸೋಽಪಿ ವಿಪ್ರಾ ಮೃತೋ ಜಂತುಃ ಕ್ರಿಮಿಯೋನೌ ಪ್ರಜಾಯತೇ ।
ತತ್ರ ಜೀವತಿ ವರ್ಷಾಣಿ ತ್ರಯೋದಶ ದ್ವಿಜೋತ್ತಮಾಃ ॥ ೭೨ ॥

ಅಧರ್ಮಸಂಕ್ಷಯೇ ಮುಕ್ತಸ್ತತೋ ಜಾಯೇತ ಮಾನುಷಃ ।
ದೇವಕಾರ್ಯಮಕೃತ್ವಾ ತು ಪಿತೃಕಾರ್ಯಮಥಾಪಿ ವಾ ॥ ೭೩ ॥

ಅನಿರ್ವಾಪ್ಯ ಪಿತೄನ್ದೇವಾನ್ಮೃತೋ ಜಾಯೇತ ವಾಯಸಃ ।
ವಾಯಸಃ ಶತವರ್ಷಾಣಿ ತತೋ ಜಾಯೇತ ಕುಕ್ಕುಟಃ ॥ ೭೪ ॥

ಜಾಯತೇ ವ್ಯಾಲಕಶ್ಚಾಪಿ ಮಾಸಂ ತಸ್ಮಾತ್ತು ಮಾನುಷಃ ।
ಜ್ಯೇಷ್ಠಂ ಪಿತೃಸಮಂ ಚಾಪಿ ಭ್ರಾತರಂ ಯೋಽವಮನ್ಯತೇ ॥ ೭೫ ॥

ಸೋಽಪಿ ಮೃತ್ಯುಮುಪಾಗಮ್ಯ ಕ್ರೌಂಚಯೋನೌ ಪ್ರಜಾಯತೇ ।
ಕ್ರೌಂಚೋ ಜೀವತಿ ವರ್ಷಾಣಿ ದಶ ಜಾಯೇತ ಜೀವಕಃ ॥ ೭೬ ॥

---

೭೨. ಅವನು ಸತ್ತಮೇಲೆ ಕ್ರಿಮಿಯಾಗಿ ಹುಟ್ಟಿ ಹದಿಮೂರು ವರ್ಷಗಳ ಕಾಲ ಬದುಕುವನು.

೭೩. ಅನಂತರ ತನ್ನ ಪಾಪವು ಕ್ಷೀಣವಾಗಲು ಅವನು ಮರಳಿ ಮನುಷ್ಯಜನ್ಮವನ್ನು ಪಡೆಯುವನು. ಯಾವನು ದೇವತೆಗಳಿಗೆ ಸಲ್ಲುವ ಹವಿರ್ಭಾಗಗಳನ್ನೂ, ಪಿತೃಗಳಿಗೆ ಸಲ್ಲಬೇಕಾದ ತರ್ಪಣಾದಿಗಳನ್ನೂ ಕೊಡದೆ ಇರುವನೋ

೭೪. ಅವನು ಕಾಗೆಯಾಗಿ ಹುಟ್ಟುವನು. ಹಾಗೆ ನೂರುವರ್ಷಗಳಷ್ಟು ಕಾಲ ಇದ್ದು ಅನಂತರ ಕೋಳಿಯಾಗಿ ಹುಟ್ಟುವನು.

೭೫. ಆಮೇಲೆ ಒಂದು ತಿಂಗಳಕಾಲ ಸರ್ಪವಾಗಿ ಇದ್ದು ಬಳಿಕ ಹಿಂದಿನಂತೆ ಮನುಷ್ಯನಾಗುವನು. ತನ್ನ ತಂದೆಗೆ ಸಮಾನನಾದ ಜ್ಯೇಷ್ಠಭ್ರಾತೃವನ್ನು ಯಾವನು ತಿರಸ್ಕಾರಮಾಡುವನೋ–

೭೬. ಅವನು ಸತ್ತನಂತರ ಕ್ರೌಂಚಪಕ್ಷಿಯಾಗಿ ಜನಿಸುವನು. ಈ ಕ್ರೌಂಚವು ಹತ್ತು ವರ್ಷಗಳಕಾಲ ಬದುಕಿರುವುದು. ಅನಂತರ ಚಕೋರಪಕ್ಷಿಯಾಗಿ ಹುಟ್ಟುವನು.

ತತೋ ನಿಧನಮಾಪ್ನೋತಿ ಮಾನುಷತ್ವಮವಾಪ್ನುಯಾತ್ ।
ವೃಷಲೋ ಬ್ರಾಹ್ಮಣೀಂ ಗತ್ವಾ ಕೃಮಿಯೋನೌ ಪ್ರಜಾಯತೇ ॥ ೭೭ ॥

ತತಃ ಸಂಪ್ರಾಪ್ಯ ನಿಧನಂ ಜಾಯತೇ ಶೂಕರಃ ಪುನಃ ।
ಶೂಕರೋ ಜಾತಮಾತ್ರಸ್ತು ರೋಗೇಣ ಮ್ರಿಯತೇ ದ್ವಿಜಾಃ ॥ ೭೮ ॥

ಶ್ವಾ ಚ ವೈ ಜಾಯತೇ ಮೂಢಃ ಕರ್ಮಣಾಃ ತೇನ ಭೋ ದ್ವಿಜಾಃ ।
ಶ್ವಾ ಭೂತ್ವಾ ಕೃತಕರ್ಮಾಸೌ ಜಾಯತೇ ಮಾನುಷಸ್ತತಃ ॥ ೭೯ ॥

ತತ್ರಾಪತ್ಯಂ ಸಮುತ್ಪಾದ್ಯ ಮೃತೋ ಜಾಯೇತ ಮೂಷಿಕಃ ।
ಕೃತಘ್ನಸ್ತು ಮೃತೋ ವಿಪ್ರಾ ಯಮಸ್ಯ ವಿಷಯಂ ಗತಃ ॥ ೮೦ ॥

ಯಮಸ್ಯ ವಿಷಯೇ ಕ್ರೂರೈರ್ಬದ್ಧಃ ಪ್ರಾಪ್ನೋತಿ ವೇದನಾಂ ।
ದಂಡಕಂ ಮುದ್ಗರಂ ಶೂಲಮಗ್ನಿದಂಡಂ ಚ ದಾರುಣಂ ॥ ೮೧ ॥

---

೭೭. ಅನಂತರ ಆ ಜನ್ಮದ ಅಂತ್ಯವಾದಮೇಲೆ ಮಾನವನಾಗಿ ಹುಟ್ಟುವನು. ಶೂದ್ರನು ಬ್ರಾಹ್ಮಣಸ್ತ್ರೀಯ ಸಹವಾಸಮಾಡಿದರೆ ಕೃಮಿಯಾಗಿ ಹುಟ್ಟುವನು.

೭೮. ಅದು ಸತ್ತು ಆಮೇಲೆ ಹಂದಿಯಾಗುವುದು. ಆ ಹಂದಿಯು ಹುಟ್ಟಿದೊಡನೆಯೇ ಖಾಯಿಲೆಗೆ ಸಿಕ್ಕಿ ಸಾಯುವುದು.

೭೯. ಎಲೈ ಬ್ರಾಹ್ಮಣರಿರಾ! ಆ ಮೂಢನು ತಾನು ಮಾಡಿದ ಕರ್ಮದಿಂದ, ಇಷ್ಟು ಜನ್ಮಗಳನ್ನೆತ್ತಿದಮೇಲೆ ನಾಯಾಗಿ ಹುಟ್ಟುವನು. ಅನಂತರ ಮನುಷ್ಯಜನ್ಮವನ್ನು ಪಡೆಯುವನು.

೮೦. ಅಲ್ಲಿ ಒಂದು ಮಗುವನ್ನು ಪಡೆದು ಸಾಯುವನು. ಅನಂತರ ಇಲಿಯಾಗಿ ಹುಟ್ಟುವನು. ಆ ಜನ್ಮದ ಅಂತ್ಯವೂ ಆದಮೇಲೆ, ಅವನು ನರಕಕ್ಕೆ ಹೋಗಿ

೮೧. ಅಲ್ಲಿ ಕ್ರೂರರಾದ ಯಮದೂತರಿಂದ ಬಿಗಿಯಲ್ಪಟ್ಟು ದಂಡ, ಮುದ್ಗರ, ಶೂಲ, ಅಗ್ನಿದಂಡ ಮೊದಲಾದವುಗಳಿಂದ ನಾನಾವಿಧವಾದ ಯಾತನೆಯನ್ನು ಅನುಭವಿಸಿ ಬಳಿಕ,

ಅಸಿಪತ್ರವನಂ ಘೋರಂ ವಾಲುಕಾಂ ಕೂಟಶಾಲ್ಮಲೀಂ ।
ಏತಾಶ್ಚಾನ್ಯಾಶ್ಚ ಬಹವೋ ಯಮಸ್ಯ ವಿಷಯಂ ಗತಾಃ ॥ ೮೨ ॥

ಯಾತನಾಃ ಪ್ರಾಪ್ಯ ಘೋರಾಸ್ತು ತತೋ ಯಾತಿ ಚ ಭೋ ದ್ವಿಜಾಃ ।
ಸಂಸಾರಚಕ್ರಮಾಸಾದ್ಯ ಕ್ರಿಮಿಯೋನೌ ಪ್ರಜಾಯತೇ ॥ ೮೩ ॥

ಕ್ರಿಮಿರ್ಭವತಿ ವರ್ಷಾಣಿ ದಶ ಪಂಚ ಚ ಭೋ ದ್ವಿಜಾಃ ।
ತತೋ ಗರ್ಭಂ ಸಮಾಸಾದ್ಯ ತತ್ರೈವ ಮ್ರಿಯತೇ ನರಃ ॥ ೮೪ ॥

ತತೋ ಗರ್ಭಶತೈರ್ಜಂತುರ್ಬಹುಶಃ ಸಂಪ್ರಪದ್ಯತೇ ।
ಸಂಸಾರಾನ್ಸುಬಹೂನ್ಗತ್ವಾ ತತಸ್ತಿರ್ಯಕ್ಪ್ರಜಾಯತೇ ॥ ೮೫ ॥

ತತೋ ದುಃಖಮನುಪ್ರಾಪ್ಯ ಬಹುವರ್ಷಗಣಾನಿ ವೈ ।
ಸ ಪುನರ್ಭವಸಂಯುಕ್ತಸ್ತತಃ ಕೂರ್ಮಃ ಪ್ರಜಾಯತೇ ॥ ೮೬ ॥

---

೮೨. ಘೋರವಾದ ಅಸಿಪತ್ರವನವನ್ನೂ, ವಾಲುಕೆಯನ್ನೂ, ಕೂಟಶಾಲ್ಮಲಿಯನ್ನೂ (ನರಕಗಳು) ಪ್ರವೇಶಿಸಿ ಅಲ್ಲಿ ಯಾತನೆಗಳನ್ನು ಅನುಭವಿಸುವುದಲ್ಲದೆ ಇನ್ನೂ ಇತರ ಹಿಂಸೆಗಳನ್ನೂ ಪಟ್ಟು

೮೩. ಅನಂತರ, ಸಂಸಾರದ ಪರಿಭ್ರಮಣೆಗೆ ಸಿಕ್ಕಿ (ಜನ್ಮಗಳನ್ನೆತ್ತುತ್ತಾ) ಕೃಮಿಯಾಗಿ ಹುಟ್ಟುವನು.

೮೪. ಹಾಗೆ ಹದಿನೈದು ವರ್ಷಗಳು ಇದ್ದು ಆ ಜನ್ಮವನ್ನು ಬಿಟ್ಟು ಅನಂತರ ಬೇರೊಂದು ಜನ್ಮದಲ್ಲಿ ಗರ್ಭದಲ್ಲಿರುವಾಗಲೇ ಸಾಯುವನು.

೮೫. ಹೀಗೆ ನೂರಾರು ಜನ್ಮಗಳನ್ನು ಎತ್ತುತ್ತಾ ಬಹುವಾಗಿ ತೊಳಲುತ್ತಿದ್ದು ಅನಂತರ ಮೂಗುಜೀವಿಯಾಗಿ ಹುಟ್ಟುವನು.

೮೬. ಅಲ್ಲಿ ಅನೇಕ ವರ್ಷಗಳಕಾಲ ದುಃಖವನ್ನು ಅನುಭವಿಸಿ ಅನಂತರ ಮರಳಿ ಜನ್ಮವೆತ್ತಿ ಆಮೆಯಾಗಿ ಹುಟ್ಟುವನು.

ದಧಿ ಹೃತ್ವಾ ಬಕಶ್ಚಾಪಿ ಪ್ಲವೋ ಮತ್ಸ್ಯಾನಸಂಸ್ಕೃತಾನ್ ।
ಚೋರಯಿತ್ವಾ ತು ದುರ್ಬುದ್ಧಿರ್ಮಧುದಂಶಃ ಪ್ರಜಾಯತೇ ॥ ೮೭ ॥

ಫಲಂ ವಾ ಮೂಲಕಂ ಹೃತ್ವಾ ಪೂಪಂ ವಾಪಿ ಪಿಪೀಲಿಕಃ ।
ಚೋರಯಿತ್ವಾತು ನಿಷ್ಪಾವಂ ಜಾಯತೇ ಫಲಮೂಷಕಃ ॥ ೮೮ ॥

ಪಾಯಸಂ ಚೋರಯಿತ್ವಾ ತು ತಿತ್ತಿರತ್ವಮವಾಪ್ನುಯಾತ್ ।
ಹೃತ್ವಾ ಪಿಷ್ಟಮಯಂ ಪೂಪಂ ಕುಂಭೋಲೂಕಃ ಪ್ರಜಾಯತೇ ॥ ೮೯ ॥

ಅಪೋ ಹೃತ್ವಾ ತು ದುರ್ಬುದ್ಧಿರ್ವಾಯಸೋ ಜಾಯತೇ ನರಃ ।
ಕಾಂಸ್ಯಂ ಹೃತ್ವಾ ತು ದುರ್ಬುದ್ಧಿರ್ಹಾರೀತೋ ಜಾಯತೇ ನರಃ ॥ ೯೦ ॥

ರಾಜತಂ ಭಾಜನಂ ಹೃತ್ವಾ ಕಪೋತಃ ಸಂಪ್ರಜಾಯತೇ ।
ಹೃತ್ವಾ ತು ಕಾಂಚನಂ ಭಾಂಡಂ ಕೃಮಿಯೋನೌ ಪ್ರಜಾಯತೇ ॥ ೯೧ ॥

---

೮೭. ಮೊಸರನ್ನು ಕದ್ದರೆ ಬಕಪಕ್ಷಿಯಾಗಿಯೂ, ಸಂಸ್ಕಾರ (ಪಾಕ) ಮಾಡಲ್ಪಡದಿರುವ ಮೀನುಗಳನ್ನು ಕದ್ದರೆ ಕಾರಂಡವೆಂಬ ಹಕ್ಕಿಯಾಗಿಯೂ, ಜೇನುತುಪ್ಪವನ್ನು ಕದಿಯಲು ಕಾಡುನೊಣವಾಗಿಯೂ ಹುಟ್ಟುವನು.

೮೮. ಹಣ್ಣನ್ನಾಗಲಿ, ಗೆಡ್ಡೆಗೆಣಸುಗಳನ್ನಾಗಲಿ, ಅಪೂಪಗಳನ್ನಾಗಲಿ ಕದ್ದವನು ಇರುವೆಯಾಗಿಯೂ, ಅವರೆಯನ್ನು ಕದ್ದವನು ಫಲಮೂಷಕ (ಅಳಿಲು) ವಾಗಿಯೂ ಹುಟ್ಟುವನು.

೮೯. ಪಾಯಸವನ್ನು ಕದ್ದವನು ತಿತ್ತಿರಿಹಕ್ಕಿಯಾಗಿಯೂ ಹಿಟ್ಟಿನಿಂದ ಮಾಡಿದ ಅಪೂಪ (ಭಕ್ಷ್ಯ) ವನ್ನು ಕದ್ದವನು ಗಡಿಗೆಯಂತಿರುವ ಗೂಬೆ ಯಾಗಿಯೂ ಹುಟ್ಟುವನು.

೯೦. ಯಾವ ದುರ್ಬುದ್ಧಿಯು ನೀರನ್ನು ಕದಿಯುವನೋ ಅವನು ಕಾಗೆಯಾಗಿ ಹುಟ್ಟುವನು. ಕಂಚನ್ನು ಕದ್ದವನು ಹಾರೀತವೆಂಬ ಹಕ್ಕಿ ಯಾಗುವನು.

೯೧. ಬೆಳ್ಳಿಯಪಾತ್ರೆಯನ್ನು ಕದ್ದವನು ಪಾರಿವಾಳವಾಗಿಯೂ, ಚಿನ್ನದ ಪಾತ್ರೆಯನ್ನು ಕದ್ದವನು ಕೃಮಿಯಾಗಿಯೂ ಹುಟ್ಟುವನು.

ಪತ್ರೋರ್ಣಂ ಚೋರಯಿತ್ವಾ ತು ಕುರರತ್ವಂ ನಿಯಚ್ಛತಿ ।
ಕೋಶಕಾರಂ ತತೋ ಹೃತ್ವಾ ನರೋ ಜಾಯೇತ ನರ್ತಕಃ ॥ ೯೨ ॥

ಅಂಶುಕಂ ಚೋರಯಿತ್ವಾ ತು ಶುಕೋ ಜಾಯೇತ ಮಾನವಃ ।
ಚೋರಯಿತ್ವಾ ದುಕೂಲಂ ತು ಮೃತೋ ಹಂಸಃ ಪ್ರಜಾಯತೇ ॥ ೯೩ ॥

ಕ್ರೌಂಚಃ ಕಾರ್ಪಾಸಿಕಂ ಹೃತ್ವಾ ಮೃತೋ ಜಾಯೇತ ಮಾನವಃ ।
ಚೋರಯಿತ್ವಾ ನರಃ ಪಟ್ಟಂ ತ್ವಾವಿಕಂ ಚೈವ ಭೋ ದ್ವಿಜಾಃ ॥ ೯೪ ॥

ಕ್ಷೌಮಂ ಚ ವಸ್ತ್ರಮಾಹೃತ್ಯ ಶಶೋ ಜಂತುಃ ಪ್ರಜಾಯತೇ ।
ಚೂರ್ಣಂ ತು ಹೃತ್ವಾ ಪುರುಷೋ ಮೃತೋ ಜಾಯೇತ ಬರ್ಹಿಣಃ ॥ ೯೫ ॥

ಹೃತ್ವಾ ರಕ್ತಾನಿ ವಸ್ತ್ರಾಣಿ ಜಾಯತೇ ಜೀವಜೀವಕಃ ।
ವರ್ಣಕಾದೀಂಸ್ತಥಾ ಗಂಧಾಂಶ್ಚೋರಯಿತ್ವೇಹ ಮಾನವಃ ॥ ೯೬ ॥

---

೯೨. ಪಟ್ಟೆಮಡಿಯನ್ನು ಕದ್ದವನು ಕುರರಪಕ್ಷಿಯಾಗಿಯೂ, ರೇಶಿಮೆ ಮಡಿಯನ್ನು ಕದ್ದವನು ನರ್ತಕನಾಗಿಯೂ ಹುಟ್ಟುವನು.

೯೩. ಬಟ್ಟೆಯನ್ನು ಕದ್ದ ಮನುಷ್ಯನು ಗಿಳಿಯಾಗಿಯೂ, ಬೆಲೆಬಾಳುವ ಬಟ್ಟೆಗಳನ್ನು (ದುಕೂಲ) ಕದ್ದವನು ಹಂಸವಾಗಿಯೂ ಹುಟ್ಟುವನು.

೯೪-೯೫. ಹತ್ತಿಯ ಬಟ್ಟೆಯನ್ನು ಕದ್ದವನು ಕ್ರೌಂಚವಾಗಿಯೂ, ರೇಶಿಮೆ ಅಥವಾ ಉಣ್ಣೆಯ ಬಟ್ಟೆಯನ್ನು ಕದ್ದವನೂ, ಮಹಾರ್ಹವಾದ ಬಟ್ಟೆಯನ್ನು ಕದ್ದವನೂ ಮೊಲವಾಗಿಯೂ ಹುಟ್ಟುವನು. ಚೂರ್ಣ (ಒಂದುತರಹ) ಬಟ್ಟೆ) ವನ್ನು ಕದ್ದವನು ನವಿಲಾಗಿ ಹುಟ್ಟುವನು.

೯೬. ಕೆಂಪುಬಟ್ಟೆಗಳನ್ನು ಕದ್ದವನು ಚಕೋರವಾಗಿ ಹುಟ್ಟುವನು. ಮತ್ತು ದುರಾಸೆಗೊಳಗಾದ ವಿಪ್ರನು ಬಣ್ಣಗಳನ್ನೂ ಸುವಾಸನಾದ್ರವ್ಯಗಳನ್ನೂ ಕದ್ದಲ್ಲಿ–

ಚುಚ್ಛುಂದರಿತ್ವಮಾಪ್ನೋತಿ ವಿಪ್ರೋ ಲೋಭಪರಾಯಣಃ ।
ತತ್ರ ಜೀವತಿ ವರ್ಷಾಣಿ ತತೋ ದಶ ಚ ಪಂಚ ಚ ॥ ೯೭ ॥

ಅಧರ್ಮಸ್ಯ ಕ್ಷಯಂ ಕೃತ್ವಾ ತತೋ ಜಾಯೇತ ಮಾನವಃ ।
ಚೋರಯಿತ್ವಾ ಪಯಶ್ಚಾಪಿ ಬಲಾಕಾ ಸಂಪ್ರಜಾಯತೇ ॥ ೯೮ ॥

ಯಸ್ತು ಚೋರಯತೇ ತೈಲಂ ನರೋ ಮೋಹಸಮನ್ವಿತಃ ।
ಸೋಽಪಿ ವಿಪ್ರಾ ಮೃತೋ ಜಂತುಸ್ತೈಲಪಾಯಿೂ ಪ್ರಜಾಯತೇ ॥ ೯೯ ॥

ಅಶಸ್ತ್ರಂ ಪುರುಷಂ ಹತ್ವಾ ಸಶಸ್ತ್ರಃ ಪುರುಷಾಧಮಃ ।
ಅರ್ಥಾರ್ಥಂ ಯದಿ ವಾ ವೈರೀ ಮೃತೋ ಜಾಯೇತ ವೈ ಖರಃ ॥ ೧೦೦ ॥

ಖರೋ ಜೀವತಿ ವರ್ಷೇ ದ್ವೇ ತತಃ ಶಸ್ತ್ರೇಣ ವಧ್ಯತೇ ।
ಸ ಮೃತೋ ಮೃಗಯೋನೌ ತು ನಿತ್ಯೋದ್ವಿಗ್ನೋಽಭಿಜಾಯತೇ ॥ ೧೦೧ ॥

೯೭-೯೮. ಮೂಗುದ್ದವಾದ ಇಲಿಯಾಗಿ ಹುಟ್ಟಿ ಹದಿನೈದು ವರ್ಷಗಳ ಕಾಲವಿರುವನು. ಬಳಿಕ ತಾನು ಮಾಡಿದ ಪಾಪವು ಕ್ಷೀಣವಾದಮೇಲೆ ಮನುಷ್ಯನಾಗುವನು. ಹಾಲನ್ನು ಕದ್ದವನು ಬೆಳ್ಳಕ್ಕಿಯಾಗಿ ಹುಟ್ಟುವನು.

೯೯. ಎಲೈ ಬ್ರಾಹ್ಮಣರಿರಾ! ಯಾವ ಮನುಷ್ಯನು ಅಜ್ಞಾನಪರವಶನಾಗಿ ಎಣ್ಣೆಯನ್ನು ಕದಿಯುವನೋ ಅವನು ಕಪಟದ ಹಕ್ಕಿಯಾಗಿ ಹುಟ್ಟುವನು.

೧೦೦. ಯಾವ ಅಧಮನು ಶಸ್ತ್ರಧಾರಿಯಾಗಿ, ನಿಶ್ಶಸ್ತ್ರನಾದವನನ್ನು, ದುಡ್ಡಿಗಾಗಿಯಾಗಲಿ, ದ್ವೇಷಕ್ಕಾಗಿಯಾಗಲಿ, ಕೊಲ್ಲುವನೋ ಅವನು ಸತ್ತ ಮೇಲೆ ಕತ್ತೆಯಾಗಿ ಹುಟ್ಟುವನು.

೧೦೧. ಆ ಕತ್ತೆಯು ಎರಡು ವರ್ಷ ಮಾತ್ರ ಬದುಕಿದ್ದು ಅನಂತರ ಕತ್ತರಿಸಲ್ಪಟ್ಟು ಸಾಯುವುದು. ಈ ಜನ್ಮವಾದನಂತರ ಅವನು ಜಿಂಕೆಯಾಗಿ ಹುಟ್ಟಿ ಯಾರು ಯಾವಾಗ ಕೊಲ್ಲುವರೋ ಎಂದು ಹೆದರುತ್ತಾ ತಲ್ಲಣಿಸುತ್ತಿರುವನು.

ಮೃಗೋ ವಿಧ್ಯೇತ ಶಸ್ತ್ರೇಣ ಗತೇ ಸಂವತ್ಸರೇ ತತಃ ।
ಹತೋ ಮೃತಸ್ತತೋ ಮಿಾಸಃ ಸೋಽಪಿ ಜಾಲೇನ ಬಧ್ಯತೇ ॥ ೧೦೨ ॥

ಮ್ಹಾಸೇ ಚತುರ್ಥೇ ಸಂಪ್ರಾಪ್ತೇ ಶ್ವಾಪದಃ ಸಂಪ್ರಜಾಯತೇ ।
ಶ್ವಾಪದೋ ದಶ ವರ್ಷಾಣಿ ದ್ವೀಪೀ ವರ್ಷಾಣಿ ಪಂಚ ಚ ॥ ೧೦೩ ॥

ತತಸ್ತು ನಿಧನಂ ಪ್ರಾಪ್ತಃ ಕಾಲಪರ್ಯಾಯಚೋದಿತಃ ।
ಅಧರ್ಮಸ್ಯ ಕ್ಷಯಂ ಕೃತ್ವಾ ಮಾನುಷತ್ವಮುವಾಪ್ನುಯಾತ್ ॥ ೧೦೪ ॥

ವಾದ್ಯಂ ಹೃತ್ವಾ ತು ಪುರುಷೋ ಲೋಮಶಃ ಸಂಪ್ರಜಾಯತೇ ।
ತಥಾ ಪಿಣ್ಯಾಕಸಂಮಿಶ್ರಮನ್ನಂ ಯಶ್ಚೋರಯೇನ್ನರಃ ॥ ೧೦೫ ॥

ಸ ಜಾಯತೇ ಬಭ್ರುಸಟೋ ದಾರುಣೋ ಮೂಷಿಕೋ ನರಃ ।
ದಶನ್ವೈ ಮಾನುಷಾನ್ನಿತ್ಯಂ ಪಾಪಾತ್ಮಾ ಸ ದ್ವಿಜೋತ್ತಮಾಃ ॥ ೧೦೬ ॥

---

೧೦೨. ಆ ಜಿಂಕೆಯೂ ಒಂದು ಸಂವತ್ಸರವಾದನಂತರ ಆಯುಧದಿಂದ ಕೊಲ್ಲಲ್ಪಡುವುದು. ಅನಂತರ ಅದು ಮೀನಾಗಿ ಹುಟ್ಟಿ ನಾಲ್ಕು ತಿಂಗಳನಂತರ ಕೊನೆಗೆ ಬಲೆಗೆ ಸಿಕ್ಕಿ ಬೀಳುವುದು. (ಸಾಯುವುದು)

೧೦೩-೧೦೪. ಅನಂತರ ದುಷ್ಟಮೃಗವಾಗಿ ಹುಟ್ಟಿ ಹತ್ತು ವರ್ಷಕಾಲ ವಿದ್ದು ಬಳಿಕ ಹುಲಿಯಾಗಿ ಐದು ವರ್ಷಗಳಕಾಲ ಬದುಕಿ, ಅನಂತರ ಕಾಲವಶ ದಿಂದ ಸತ್ತು ತನ್ನ ಪಾಪಕ್ಷಯವಾಗಲು ಮನುಷ್ಯನಾಗುವನು.

೧೦೫. ವಾದ್ಯವನ್ನು ಕದ್ದ ನರನು ರೋಮಶ (ಹೆಚ್ಚುಕೂದಲಿನ) ಪ್ರಾಣಿಯಾಗುವನು. ಹಿಂಡಿಯೊಡನೆ ಬೆರೆತ ಅನ್ನವನ್ನು ಕದ್ದವನು-

೧೦೬. ಬೂದುಬಣ್ಣದ ಭಾರಿಭಾರಿ ಕೂದಲುಗಳುಳ್ಳ ಇಲಿಯಾಗಿ ಹುಟ್ಟಿ, ನಿತ್ಯವೂ ಮನುಷ್ಯರನ್ನು ಕಚ್ಚುತ್ತಿರುವನು.

ಘೃತಂ ಹೃತ್ವಾ ತು ದುರ್ಬುದ್ಧಿಃ ಕಾಕೋ ಮದ್ಗುಃ ಪ್ರಜಾಯತೇ ।
ಮತ್ಸ್ಯಮಾಂಸಮಥೋ ಹೃತ್ವಾ ಕಾಕೋ ಜಾಯೇತ ಮಾನವಃ ॥ ೧೦೭ ॥

ಲವಣಂ ಚೋರಯಿತ್ವಾ ತು ಚಿರಿಕಾಕಃ ಪ್ರಜಾಯತೇ ।
ವಿಶ್ವಾಸೇನ ತು ನಿಕ್ಷಿಪ್ತಂ ಯೋಽಪನಿಹ್ನೋತಿ ಮಾನವಃ ॥ ೧೦೮ ॥

ಸ ಗತಾಯುರ್ನರಸ್ತೇನ ಮತ್ಸ್ಯಯೋನೌ ಪ್ರಜಾಯತೇ ।
ಮತ್ಸ್ಯಯೋನಿಮನುಪ್ರಾಪ್ಯ ಮೃತೋ ಜಾಯೇತ ಮಾನುಷಃ ॥ ೧೦೯ ॥

ಮಾನುಷತ್ವಮನುಪ್ರಾಪ್ಯ ಕ್ಷೀಣಾಯುರುಪಜಾಯತೇ ।
ಪಾಪಾನಿ ತು ನರಃ ಕೃತ್ವಾ ತಿರ್ಯಗ್ಜಾಯೇತ ಭೋ ದ್ವಿಜಾಃ ॥ ೧೧೦ ॥

ನ ಚಾತ್ಮನಃ ಪ್ರಮಾಣಂ ತು ಧರ್ಮಂ ಜಾನಾತಿ ಕಿಂಚನ ।
ಯೇ ಪಾಪಾನಿ ನರಾಃ ಕೃತ್ವಾ ನಿರಸ್ಯಂತಿ ವ್ರತೈಃ ಸದಾ ॥ ೧೧೧ ॥

---

೧೦೭. ತುಪ್ಪವನ್ನು ಕದ್ದ ಪಾಪಿಯು ಕಾಗೆಯಾಗಿಯೋ, ಕಾರಂಡ ವೆಂಬ ಹಕ್ಕಿಯಾಗಿಯೋ ಹುಟ್ಟುವನು. ಮೀನಿನ ಮಾಂಸವನ್ನು ಕದ್ದವನು ಕಾಗೆಯಾಗುವನು.

೧೦೮. ಉಪ್ಪನ್ನು ಕದ್ದವನು ಚಿಂಕಾಕವಾಗಿಯೂ (ಕಾಗೆಯ ಭೇದ) ನಂಬಿಕೆಯಿಂದ ಇಟ್ಟುಹೋಗಿದ್ದ ವಸ್ತುವನ್ನು ಅಪಹರಿಸಿದ ಪಾಪಿಯು

೧೦೯. ಸತ್ತಮೇಲೆ ಮೀನಾಗಿಯೂ ಹುಟ್ಟಿ ಅದು ಕಳೆದನಂತರ ಮತ್ತೆ ಮಾನವನಾಗಿ ಹುಟ್ಟುವನು.

೧೧೦. ಮನುಷ್ಯನಾಗಿ ಹುಟ್ಟಿದರೂ ಅಲ್ಪವಾದ ಆಯುಸ್ಸುಳ್ಳವನಾಗುವನು. ಎಲೈ ದ್ವಿಜರೇ, ಪಾಪಕೃತ್ಯಗಳನ್ನು ಮಾಡಿದ ಮಾನವನು ತಿರ್ಯಕ್ಪ್ರಾಣಿಯಾಗಿ ಹುಟ್ಟುವನು.

೧೧೧. ಹೀಗಾಗಿ ತನ್ನ ಆತ್ಮನ ಸಾಧನೆಗೆ ಪ್ರಮಾಣವಾದ ಧರ್ಮವನ್ನು ಅವನು ಅರಿಯದೆಹೋಗುವನು. ಯಾವ ಮಾನವರು ಪಾಪಗಳನ್ನು ಮಾಡಿ ಅವುಗಳನ್ನು ಒಂದಲ್ಲ ಒಂದು ವ್ರತದಿಂದ ಪರಿಹರಿಸಿಕೊಳ್ಳುವರೋ ಅವರು–

ಸುಖದುಃಖಸಮಾಯುಕ್ತಾ ವ್ಯಾಧಿಮಂತೋ ಭವಂತ್ಯುತ ।
ಅಸಂವೀತಾಃ ಪ್ರಜಾಯಂತೇ ಮ್ಲೇಚ್ಛಾಶ್ಚಾಪಿ ನ ಸಂಶಯಃ ॥ ೧೧೨ ॥

ನರಾಃ ಪಾಪಸಮಾಚಾರಾ ಲೋಭಮೋಹಸಮನ್ವಿತಾಃ ।
ವರ್ಜಯಂತಿ ಹಿ ಪಾಪಾನಿ ಜನ್ಮಪ್ರಭೃತಿ ಯೇ ನರಾಃ ॥ ೧೧೩ ॥

ಅರೋಗಾ ರೂಪವಂತಶ್ಚ ಧನಿನಸ್ತೇ ಭವಂತ್ಯುತ ।
ಸ್ತ್ರಿಯೋಽಪ್ಯೇತೇನ ಕಲ್ಪೇನ ಕೃತ್ವಾ ಪಾಪಮವಾಪ್ನುಯುಃ ॥ ೧೧೪ ॥

ಏತೇಷಾಮೇವ ಪಾಪಾನಾಂ ಭಾರ್ಯಾತ್ವಮುಪಯಾಂತಿ ತಾಃ ।
ಪ್ರಾಯೇಣ ಹರಣೇ ದೋಷಾಃ ಸರ್ವ ಏವ ಪ್ರಕೀರ್ತಿತಾಃ ॥ ೧೧೫ ॥

ಏತದ್ವೋ ಲೇಶಮಾತ್ರೇಣ ಕಥಿತಂ ವೋ ದ್ವಿಜರ್ಷಭಾಃ ।
ಅಪರಸ್ಮಿನ್ಕಥಾಯೋಗೇ ಭೂಯಃ ಶ್ರೋಷ್ಯಥ ಭೋ ದ್ವಿಜಾಃ ॥ ೧೧೬ ॥

೧೧೨-೧೧೩. ಸುಖದುಃಖಗಳನ್ನು ಅನುಭವಿಸುತ್ತಾ ರೋಗಿಗಳಾಗಿ ನರಳುವರು. ಮತ್ತು ಯಾವ ಮಾನವರು ಲೋಭಮೋಹಾದಿಗಳಿಗೆ ಸಿಕ್ಕಿ ಪಾಪಕಾರ್ಯವೆಸಗುವರೋ ಅವರು ಒಗ್ಗಟ್ಟಿಲ್ಲದ ಉಪನಯನಾದಿ ಸಂಸ್ಕಾರ ರಹಿತರಾದ ಮ್ಲೇಚ್ಛರಾಗಿ ಹುಟ್ಟುವರು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

೧೧೪. ಯಾವ ಮಾನವರು ಜನ್ಮಾರಭ್ಯ ಪಾಪಗಳನ್ನು ಮಾಡುವುದಿಲ್ಲವೋ ಅವರು ರೋಗರಹಿತರಾಗಿಯೂ, ರೂಪವಂತರಾಗಿಯೂ, ಧನಿಕರಾಗಿಯೂ ಆಗುವರು. ಈಗ ಹೇಳಿದರೀತಿಯಲ್ಲೇ ಸ್ತ್ರೀಯರೂ ಸಹ ಮೇಲ್ಕಂಡ ಪಾಪಗಳಿಗೆ ಫಲವನ್ನನುಭವಿಸುವರು.

೧೧೫. ಅಂತಹ ಹೆಂಗಸರು ಮೇಲ್ಕಂಡಂತಹ ಪಾಪಗಳನ್ನು ಮಾಡಿದ ಪುರುಷರಿಗೇ ಹೆಂಡಿರಾಗಿ ಹುಟ್ಟುವರು. ಕದ್ದರೆ ಸಾಮಾನ್ಯವಾದ ಎಲ್ಲರೀತಿಯ ದೋಷಗಳೂ ಹೇಳಲ್ಪಟ್ಟಿರುವುವು.

೧೧೬. ಎಲೈ ಬ್ರಾಹ್ಮಣಶ್ರೇಷ್ಠರಿರಾ! ಇದನ್ನು ನಿಮಗೆ ಸ್ವಲ್ಪವಾಗಿ ಮಾತ್ರ ತಿಳಿಸಿರುವೆನು. ಮುಂದೆ ಇನ್ನಾವುದಾದರೂ ಕಥಾಸಂದರ್ಭವೊದಗಿದಾಗ ಮರಳಿ ಕೇಳುವಿರಂತೆ.

ಏತನ್ಮಯಾ ಮಹಾಭಾಗಾ ಬ್ರಹ್ಮಣೋ ವದತಃ ಪುರಾ ।
ಸುರರ್ಷೀಣಾಂ ಶ್ರುತಂ ಮಧ್ಯೇ ಪೃಷ್ಟಂ ಚಾಪಿ ಯಥಾ ತಥಾ ॥ ೧೧೭ ॥

ಮಯಾಪಿ ತುಭ್ಯಂ ಕಾರ್ತ್ಸ್ನ್ಯೇನ ಯಥಾವದನುವರ್ಣಿತಂ ।
ಏತಚ್ಛ್ರುತ್ವಾ ಮುನಿಶ್ರೇಷ್ಠಾ ಧರ್ಮೇ ಕುರುತ ಮಾನಸಂ ॥ ೧೧೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ ಸಂಸಾರಚಕ್ರನಿರೂಪಣಂ ನಾಮ ಸಪ್ತದಶಾಧಿಕ-ದ್ವಿಶತತಮೋಽಧ್ಯಾಯಃ

---

೧೧೭. ಇದನ್ನು ಹಿಂದೆ ದೇವತೆಗಳೂ ಋಷಿಗಳೂ ಬ್ರಹ್ಮನನ್ನು ಪ್ರಶ್ನಿಸಿದಾಗ ಅವರ ಜೊತೆಯಲ್ಲಿ ನಾನೂ ಇದ್ದೆನಾದುದರಿಂದ, ಆ ಬ್ರಹ್ಮನು ಹೇಳಿದುದೆಲ್ಲವನ್ನೂ ಕೇಳಿ ಮಧ್ಯೆಮಧ್ಯೆ ಪ್ರಶ್ನೆಗಳನ್ನೂ ಕೇಳಿದ್ದೆನು.

೧೧೮. ನಾನೂ ಸಹ ಇದನ್ನು ನಿಮಗೆ ಸಮಗ್ರವಾಗಿ ತಿಳಿಸಿರುವೆನು. ಎಲೈ ಮುನಿಶ್ರೇಷ್ಠರಿರಾ! ಆದುದರಿಂದ ಧರ್ಮದಲ್ಲಿ ನಿಮ್ಮ ಮನಸ್ಸನ್ನು ನೆಲೆಗೊಳಿಸಿರಿ ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ವ್ಯಾಸರ್ಷಿಸಂವಾದರೂಪವಾದ ಸಂಸಾರಚಕ್ರ ನಿರೂಪಣವೆಂಬ ಇನ್ನೂರಹದಿನೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮ ಹಾ ಪು ರಾ ಣೇ ಬ್ರಾ ಹ್ಮೇ

ಅಷ್ಟದಶಾಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಅಧರ್ಮಸ್ಯ ಗತಿರ್ಬ್ರಹ್ಮನ್ಕಥಿತಾ ನಸ್ತ್ವಯಾನಘ ।
ಧರ್ಮಸ್ಯ ಚ ಗತಿಂ ಶ್ರೋತುಮಿಚ್ಛಾಮೋ ವದತಾಂ ವರ ॥ ೧ ॥

ಕೃತ್ವಾ ಪಾಪಾನಿ ಕರ್ಮಾಣಿ ಕಥಂ ಯಾಂತ್ಯಶುಭಾಂ ಗತಿಂ ।
ಕರ್ಮಣಾ ಚ ಕೃತೇನೇಹ ಕೇನ ಯಾಂತಿ ಶುಭಾಂ ಗತಿಂ ॥ ೨ ॥

॥ ವ್ಯಾಸ ಉವಾಚ ॥

ಕೃತ್ವಾ ಪಾಪಾನಿ ಕರ್ಮಾಣಿ ತ್ವಧರ್ಮವಶಮಾಗತಃ ।
ಮನಸಾ ವಿಪರೀತೇನ ನಿರಯಂ ಪ್ರತಿಪದ್ಯತೇ ॥ ೩ ॥

ಇನ್ನೂರಹದಿನೆಂಟನೆಯ ಅಧ್ಯಾಯವು

೧. ಆಗ ಮಹರ್ಷಿಗಳು ವ್ಯಾಸನನ್ನು ಕುರಿತು "ಎಲೈ ಪಾಪರಹಿತ ನಾದ ವಾಗ್ಮಿಶ್ರೇಷ್ಠನೇ ! ನೀನು ನಮಗೆ ಅಧರ್ಮಕ್ಕೆ ಒದಗುವ ಗತಿಯನ್ನು ತಿಳಿಸಿದೆ. ಈಗ ಧರ್ಮಕಾರ್ಯಗಳಿಗೇನುಫಲವೆಂಬುದನ್ನು ಕೇಳಲು ಆಶಿಸುತ್ತೇವೆ.

೨. ಪಾಪಕಾರ್ಯಗಳನ್ನು ಮಾಡಿ ಅಶುಭವಾದ ಫಲವನ್ನು ಪಡೆಯು ವುದು ಹೇಗೆ? ಯಾವ ಕೆಲಸಗಳನ್ನು ಮಾಡಿದರೆ ಮಂಗಲಕರವಾದ ಒಳ್ಳೆಯ ಗತಿಯು ದೊರೆಯುವುದು ? ಎಂದು ಪ್ರಶ್ನಿಸಲು ಆಗ ವ್ಯಾಸನಿಂತೆಂದನು.

೩. ಮನುಷ್ಯನು ಅಧರ್ಮವಶದಿಂದ ಮನಸ್ಸುಕೆಟ್ಟು ಪುನಃ ಪಾಪ ಕಾರ್ಯಗಳನ್ನೇ ಮಾಡಿ ನರಕಕ್ಕೆ ಹೋಗುವನು.

ಮೋಹಾದಧರ್ಮಂ ಯಃ ಕೃತ್ವಾ ಪುನಃ ಸಮನುತಪ್ಯತೇ ।
ಮನಃಸಮಾಧಿಸಂಯುಕ್ತೋ ನ ಸ ಸೇವೇತ ದುಷ್ಕೃತಂ ॥ ೪ ॥

ಯಥಾ ಯಥಾ ಮನಸ್ತಸ್ಯ ದುಷ್ಕೃತಂ ಕರ್ಮ ಗರ್ಹತೇ ।
ತಥಾ ತಥಾ ಶರೀರಂ ತು ತೇನಾಧರ್ಮೇಣ ಮುಚ್ಯತೇ ॥ ೫ ॥

ಯದಿ ವಿಪ್ರಾಃ ಕಥಯತೇ ವಿಪ್ರಾಣಾಂ ಧರ್ಮವಾದಿನಾಂ ।
ತತೋಽಧರ್ಮಕೃತಾತ್ಕ್ಷಿಪ್ರಮಪರಾಧಾತ್ಪ್ರಮುಚ್ಯತೇ ॥ ೬ ॥

ಯಥಾ ಯಥಾ ನರಃ ಸಮ್ಯಗಧರ್ಮಮನುಭಾಷತೇ ।
ಸಮಾಹಿತೇನ ಮನಸಾ ವಿಮುಂಚತಿ ತಥಾ ತಥಾ ॥ ೭ ॥

---

೪. ಯಾವ ಮನುಷ್ಯನು ಮೋಹಪರವಶನಾಗಿ ಅಧರ್ಮವಾದ ಕಾರ್ಯವನ್ನು ಮಾಡಿದರೂ, ತನ್ನ ಮನಸ್ಸನ್ನು ಸರಿಯಾಗಿ ಹಿಡಿದು ಕೆಲಸಕ್ಕೆ ಪಶ್ಚಾತ್ತಾಪಪಟ್ಟರೆ ಮರಳಿ ಅವನು ದುಷ್ಕಾರ್ಯಕ್ಕೆ ಕೈಹಾಕುವುದಿಲ್ಲವು.

೫. ಅವನ ಮನಸ್ಸು ದುಷ್ಕಾರ್ಯಕ್ಕೆ ಹೇಸುತ್ತಾ ಬಂದಷ್ಟೂ ಅವನ ಶರೀರವು ಅಷ್ಟೂಅಷ್ಟು ಅಧರ್ಮದಿಂದ ಬಿಡಲ್ಪಡುವುದು.

೬. ಎಲೈ ಬ್ರಾಹ್ಮಣರಿರಾ! ಯಾವನು ತಾನು ಮಾಡಿದ ಅಧರ್ಮಕಾರ್ಯವನ್ನು ಹತ್ತುಜನ ಧರ್ಮಜ್ಞರ ಎದುರು ಹೇಳಿಕೊಳ್ಳುವನೋ ಅವನು ಅಧರ್ಮಕಾರ್ಯದಿಂದ ಉಂಟಾದ ತಪ್ಪಿನಿಂದ ಬೇಗನೆ ಬಿಡುಗಡೆಹೊಂದುವನು.

೭. ಯಾವ ಮನುಜನು ತಾನು ಮಾಡಿದ ಅಧರ್ಮ (ಪಾಪ) ವನ್ನು ಹೀಗೆ ಹೇಳಿಕೊಳ್ಳುತ್ತಾ ಬರುವನೋ ಅವನು, "ಮೊದಲು ತನ್ನ ದೇಹವಾಗಿದ್ದು ಈಗ ಒಣಗಿ ಪೊರೆಯಾಗಿರುವುದನ್ನು ಹಾವು" ಬಿಡುವಂತೆ, ಮನಸ್ಸನ್ನು ಹತೋಟಿಗೆ ತಂದುಕೊಂಡು ಅಧರ್ಮಕಾರ್ಯವನ್ನು ಬಿಡುತ್ತಾ ಬರುವನು.

ಭುಜಂಗ ಇವ ನಿರ್ಮೋಕಾನ್ಪೂರ್ವಮುಕ್ತ್ವಾನ್ ಜಹಾತಿ ತಾನ್ ।
ದತ್ವಾ ವಿಪ್ರಸ್ಯ ದಾನಾನಿ ವಿವಿಧಾನಿ ಸಮಾಹಿತಃ ॥ ೮ ॥

ಮನಃಸಮಾಧಿಸಂಯುಕ್ತಃ ಸ್ವರ್ಗತಿಂ ಪ್ರತಿಪದ್ಯತೇ ।
ದಾನಾನಿ ತು ಪ್ರವಕ್ಷ್ಯಾಮಿ ಯಾನಿ ದತ್ವಾ ದ್ವಿಜೋತ್ತಮಾಃ ॥ ೯ ॥

ನರಃ ಕೃತ್ವಾಪ್ಯಕಾರ್ಯಾಣಿ ತತೋ ಧರ್ಮೇಣ ಯುಜ್ಯತೇ ।
ಸರ್ವೇಷಾಮೇವ ದಾನಾನಾಮನ್ನಂ ಶ್ರೇಷ್ಠಮುದಾಹೃತಂ ॥ ೧೦ ॥

ಸರ್ವಮನ್ನಂ ಪ್ರದಾತವ್ಯಮೃಜುನಾ ಧರ್ಮಮಿಚ್ಛತಾ ।
ಪ್ರಾಣಾ ಹ್ಯನ್ನಂ ಮನುಷ್ಯಾಣಾಂ ತಸ್ಮಾಜ್ಜಂತುಃ ಪ್ರಜಾಯತೇ ॥ ೧೧ ॥

ಅನ್ನೇ ಪ್ರತಿಷ್ಠಿತಾ ಲೋಕಾಸ್ತಸ್ಮಾದನ್ನಂ ಪ್ರಶಸ್ಯತೇ ।
ಅನ್ನಮೇವ ಪ್ರಶಂಸಂತಿ ದೇವರ್ಷಿಪಿತೃಮಾನವಾಃ ॥ ೧೨ ॥

---

೮. ಯಾವನು ತನ್ನ ಮನಸ್ಸನ್ನು ಸ್ವಾಧೀನಪಡಿಸಿಕೊಂಡು, ವಿಧವಿಧವಾದ ದಾನಗಳನ್ನು ಬ್ರಾಹ್ಮಣರಿಗೆ ಕೊಡುವನೋ ಅವನು ಸ್ವರ್ಗಫಲವನ್ನು ಪಡೆಯುವನು.

೯-೧೦. ಎಲೈ ಬ್ರಾಹ್ಮಣೋತ್ತಮರಿರಾ! ಯಾವ ದಾನಗಳನ್ನು ಮಾಡಿದರೆ ಮಾನವನು ಅಕಾರ್ಯಗಳನ್ನೇ ಮಾಡಿದ್ದರೂ, ಅನಂತರ ಧರ್ಮಯುಕ್ತನಾಗುವನೋ ಆ ದಾನಗಳನ್ನೀಗ ನಿಮಗೆ ತಿಳಿಸುವೆನು. ದಾನಗಳಲ್ಲೆಲ್ಲಾ ಅನ್ನದಾನವೇ ಶ್ರೇಷ್ಠವಾದುದು.

೧೧. ಋಜು (ಅಕುಟಿಲವಾದ) ಬುದ್ಧಿಯುಳ್ಳ ಮಾನವನು, ಪುಣ್ಯವನ್ನು ಪಡೆಯಬೇಕೆಂದಿದ್ದರೆ ಅನ್ನವನ್ನು ದಾನಮಾಡಬೇಕು. ಅನ್ನವೇ ಮನುಷ್ಯರಿಗೆ ಪ್ರಾಣವು. (ಪ್ರಾಣಾಧಾರವು) ಅನ್ನದಿಂದಲೇ ಮನುಷ್ಯನು ಹುಟ್ಟುವನು.

೧೨. ಅನ್ನದಿಂದಲೇ ಪ್ರಪಂಚವೆಲ್ಲವೂ ನಿಂತಿರುವುದು. ಆದುದರಿಂದಲೇ ಅನ್ನಕ್ಕೆ ಅಷ್ಟು ಪ್ರಶಂಸೆಯಿರುವುದು. ದೇವತೆಗಳೂ, ಪಿತೃಗಳೂ, ಮಾನವರೂ ಅನ್ನವನ್ನೇ ಹೊಗಳುವರು.

ಅನ್ನಸ್ಯ ಹಿ ಪ್ರದಾನೇನ ಸ್ವರ್ಗಮಾಪ್ನೋತಿ ಮಾನವಃ ।
ನ್ಯಾಯಲಬ್ಧಂ ಪ್ರದಾತವ್ಯಂ ದ್ವಿಜಾತಿಭ್ಯೋಽನ್ನಮುತ್ತಮಂ ॥ ೧೩ ॥

ಸ್ವಾಧ್ಯಾಯಸಮುಪೇತೇಭ್ಯಃ ಪ್ರಹೃಷ್ಟೇನಾಂತರಾತ್ಮನಾ ।
ಯಸ್ಯ ತ್ವನ್ನಮುಪಾಶ್ನಂತಿ ಬ್ರಾಹ್ಮಣಾಶ್ಚ ಸಕೃದ್ದಶ ॥ ೧೪ ॥

ಹೃಷ್ಟೇನ ಮನಸಾ ದತ್ತಂ ನ ಸ ತಿರ್ಯಗ್ಗತಿರ್ಭವೇತ್ ।
ಬ್ರಾಹ್ಮಣಾನಾಂ ಸಹಸ್ರಾಣಿ ದಶಾಭೋಜ್ಯ ದ್ವಿಜೋತ್ತಮಾಃ ॥ ೧೫ ॥

ನರೋಽಧರ್ಮಾತ್ಪ್ರಮುಚ್ಯೇತ ಪಾಪೇಷ್ವಭಿರತಃ ಸದಾ ।
ಭೈಕ್ಷೇಣಾನ್ನಂ ಸಮಾಹೃತ್ಯ ವಿಪ್ರೋ ವೇದಪುರಸ್ಕೃತಃ ॥ ೧೬ ॥

ಸ್ವಾಧ್ಯಾಯನಿರತೇ ವಿಪ್ರೇ ದತ್ತ್ವೇಹ ಸುಖಮೇಧತೇ ।
ಅಹಿಂಸನ್ಬ್ರಾಹ್ಮಣಸ್ವಾನಿ ನ್ಯಾಯೇನ ಪರಿಪಾಲ್ಯ ಚ ॥ ೧೭ ॥

---

೧೩. ಅನ್ನದಾನಮಾಡಿದರೆ ಮನುಷ್ಯನು ಸ್ವರ್ಗಲೋಕವನ್ನು ಹೊಂದುವನು. ನ್ಯಾಯದಿಂದ ತಾನು ಸಂಪಾದಿಸಿದ ಅನ್ನವನ್ನೇ ಬ್ರಾಹ್ಮಣರಿಗೆ ದಾನಮಾಡಬೇಕು.

೧೪. ಅದರಲ್ಲೂ ವೇದಾಧ್ಯಯನನಿರತರಾದವರಿಗೆ ಸಂತೋಷವಾಗಿ ಅನ್ನದಾನಮಾಡಬೇಕು. ಯಾರು ಒಂದುಬಾರಿಯಾದರೂ ಹತ್ತುಮಂದಿ ಬ್ರಾಹ್ಮಣರಿಗೆ ಸಂತೋಷಪೂರಿತವಾದ ಹೃದಯದಿಂದ ಅನ್ನವನ್ನು ಇಕ್ಕುವರೋ

೧೫. ಅಂಥವನು ಎಂದಿಗೂ ತಿರ್ಯಕ್ಪ್ರಾಣಿಯಾಗಿ ಹುಟ್ಟಲಾರನು. ಹತ್ತುಸಾವಿರಮಂದಿ ಬ್ರಾಹ್ಮಣರಿಗೆ ಅನ್ನದಾನಮಾಡಿದವನು

೧೬. ಅವನು ಎಷ್ಟೇ ಪಾಪಕಾರ್ಯಗಳಲ್ಲಿ ಸರ್ವಕಾಲದಲ್ಲಿಯೂ ಆಸಕ್ತನಾಗಿರಲಿ (ಅಂಥವನೂ ಸಹ) ಅಧರ್ಮದಿಂದ ಬಿಡುಗಡೆಹೊಂದುವನು. ಯಾವ ಮಾನವನು ವೇದವನ್ನು ಪಾರಾಯಣಮಾಡುತ್ತಾ ಭಿಕ್ಷೆಯೆತ್ತಿ ಆರೀತಿ ತಂದ ಅನ್ನವನ್ನು

೧೭–೧೯. ವೇದಾಧ್ಯಯನನಿರತನಾದ ಬ್ರಾಹ್ಮಣನಿಗೆ ದಾನಮಾಡುವನೋ ಅವನು ಈ ಲೋಕದಲ್ಲಿ ಸುಖವನ್ನು ಹೊಂದುವನು ಯಾವ ಕ್ಷತ್ರಿ

ಕ್ಷತ್ರಿಯಸ್ತರಸಾ ಪ್ರಾಪ್ತಮನ್ನಂ ಯೋ ವೈ ಪ್ರಯಚ್ಛತಿ ।
ದ್ವಿಜೇಭ್ಯೋ ವೇದಮುಖ್ಯೇಭ್ಯಃ ಪ್ರಯತಃ ಸುಸಮಾಹಿತಃ ॥ ೧೮ ॥

ತೇನಾಪೋಹತಿ ಧರ್ಮಾತ್ಮಾ ದುಷ್ಕೃತಂ ಕರ್ಮ ಭೋ ದ್ವಿಜಾಃ ।
ಷಡ್ಭಾಗಪರಿಶುದ್ಧಂ ಚ ಕೃಷೇರ್ಭಾಗಮುಪಾರ್ಜಿತಂ ॥ ೧೯ ॥

ವೈಶ್ಯೋ ದದದ್ದ್ವಿಜಾತಿಭ್ಯಃ ಪಾಪೇಭ್ಯಃ ಪರಿಮುಚ್ಯತೇ ।
ಅವಾಪ್ಯ ಪ್ರಾಣಸಂದೇಹಂ ಕಾರ್ಕಶ್ಯೇನ ಸಮಾರ್ಜಿತಂ ॥ ೨೦ ॥

ಅನ್ನಂ ದತ್ವಾ ದ್ವಿಜಾತಿಭ್ಯಃ ಶೂದ್ರಃ ಪಾಪಾತ್ಪ್ರಮುಚ್ಯತೇ ।
ಔರಸೇನ ಬಲೇನಾನ್ನಮರ್ಜಯಿತ್ವಾ ವಿಹಿಂಸಕಃ ॥ ೨೧ ॥

ಯಃ ಪ್ರಯಚ್ಛತಿ ವಿಪ್ರೇಭ್ಯೋ ನ ಸ ದುರ್ಗಾಣಿ ಸೇವತೇ ।
ನ್ಯಾಯೇನಾವಾಪ್ತಮನ್ನಂ ತು ನರೋ ಹರ್ಷಸಮನ್ವಿತಃ ॥ ೨೨ ॥

ಯನು ಬ್ರಾಹ್ಮಣರ ಸ್ವತ್ತನ್ನು ದಕ್ಕಿಸಿಕೊಳ್ಳದೆ, ನ್ಯಾಯದಿಂದ ರಾಜ್ಯವಾಳುತ್ತಾ, ವೇದಪಾರಂಗತರಾದ ಬ್ರಾಹ್ಮಣೋತ್ತಮರಿಗೆ ಬೇಗನೆ ಅನ್ನವನ್ನು ದಾನಮಾಡುವನೋ ಅಂಥಹ ಧರ್ಮಾತ್ಮನು ಬೆಳೆದ ಬೆಳಸಿನ ಆರನೆಯ ಒಂದುಪಾಲನ್ನು ತಾನು ಕ್ರಮವಾಗಿ ತೆಗೆದುಕೊಳ್ಳುವುದರಿಂದ ಉಂಟಾಗತಕ್ಕ ಪಾಪವನ್ನೂ ಇತರ ದುಷ್ಫಲಗಳನ್ನೂ ಕಳೆದುಕೊಳ್ಳುವನು.

೨೦. ವೈಶ್ಯನಾದವನು ಅನ್ನದಾನಮಾಡಿ ತನ್ನ ಪಾಪಗಳನ್ನು ಕಳೆದುಕೊಳ್ಳುವನು. ತನ್ನ ಪ್ರಾಣಹೋಗುವುದನ್ನೂ ಲೆಕ್ಕಿಸದೆ ಕಷ್ಟಪಟ್ಟು ದುಡಿದು ತಂದ ಅನ್ನವನ್ನು

೨೧. ಯಾವ ಶೂದ್ರನು ಬ್ರಾಹ್ಮಣರಿಗೆ ದಾನವೀಯುವನೋ ಆತನು ಪಾಪಗಳಿಂದ ಬಿಡಲ್ಪಡುವನು. ಹಿಂಸಾಪರಾಯಣನಾಗಿದ್ದರೂ, ಯಾವನು ತನ್ನ ದೇಹಶ್ರಮದಿಂದ ಸಂಪಾದಿಸಿತಂದ ಅನ್ನವನ್ನು ಬ್ರಾಹ್ಮಣರಿಗೆ ದಾನಮಾಡುವನೋ ಅವನು ಪಾಪಗಳಿಂದ ಪಾರಾಗುವನು.

೨೨. ಯಾವನು ತಾನು ನ್ಯಾಯವಾಗಿ ಸಂಪಾದಿಸಿದ ಅನ್ನವನ್ನು ಹರ್ಷಪೂರ್ವಕವಾಗಿ ವೇದಪಾರಾಯಣನಿರತರಾದ ಬ್ರಾಹ್ಮಣರಿಗೆ ದಾನಮಾಡುವನೋ ಅವನು ಪಾಪಗಳಿಂದ ಪಾರಾಗುವನು.

ದ್ವಿಜೇಭ್ಯೋ ವೇದವೃದ್ಧೇಭ್ಯೋ ದತ್ತ್ವಾ ಪಾಪಾತ್ಪ್ರಮುಚ್ಯತೇ ।
ಅನ್ನಮೂರ್ಜಸ್ಕರಂ ಲೋಕೇ ದತ್ತ್ವೋರ್ಜಸ್ವೀ ಭವೇನ್ನರಃ ॥ ೨೩ ॥

ಸತಾಂ ಪಂಥಾನಮಾವೃತ್ಯ ಸರ್ವಪಾಪೈಃ ಪ್ರಮುಚ್ಯತೇ ।
ದಾನವಿದ್ಭಿಃ ಕೃತಃ ಪಂಥಾ ಯೇನ ಯಾಂತಿ ಮನೀಷಿಣಃ ॥ ೨೪ ॥

ತೇಷ್ವಪ್ಯನ್ನಸ್ಯ ದಾತಾರಸ್ತೇಭ್ಯೋ ಧರ್ಮಃ ಸನಾತನಃ ।
ಸರ್ವಾವಸ್ಥಂ ಮನುಷ್ಯೇಣ ನ್ಯಾಯೇನಾನ್ನಮುಪಾರ್ಜಿತಂ ॥ ೨೫ ॥

ಕಾರ್ಯಾನ್ನ್ಯಾಯಾಗತಂ ನಿತ್ಯಮನ್ನಂ ಹಿ ಪರಮಾ ಗತಿಃ ।
ಅನ್ನಸ್ಯ ಹಿ ಪ್ರದಾನೇನ ನರೋ ಯಾತಿ ಪರಾಂ ಗತಿಂ ॥ ೨೬ ॥

ಸರ್ವಕಾಮಸಮಾಯುಕ್ತಃ ಪ್ರೇತ್ಯ ಚಾಪ್ಯಶ್ನುತೇ ಸುಖಂ ।
ಏವಂ ಪುಣ್ಯಸಮಾಯುಕ್ತೋ ನರಃ ಪಾಪೈಃ ಪ್ರಮುಚ್ಯತೇ ॥ ೨೭ ॥

---

೨೩. ಬಲಕ್ಕೆ ಕಾರಣವಾದ ಅನ್ನವನ್ನು ಯಾವ ಮನುಷ್ಯನು ದಾರಿಯಲ್ಲಿ ಹೋಗುತ್ತಿರುವ ಸತ್ಪುರುಷರನ್ನು ಅಡ್ಡಗಟ್ಟಿ ಅವರಿಗೆ ದಾನಮಾಡುವನೋ ಆತನು ಊರ್ಜಸ್ವಿ (ಬಲಶಾಲಿ) ಯಾಗುವನು.

೨೪-೨೫. ದಾನಶೀಲರು ತೆರಳಿದ ಮಾರ್ಗದಲ್ಲಿಯೇ ಜ್ಞಾನಿಗಳಾದವರೂ ಸಂಚರಿಸುವರು. (ಜ್ಞಾನಿಗಳು ಹೋಗತಕ್ಕ ಮಾರ್ಗವನ್ನು ಮೊದಲು ಮಾಡಿದವರು ದಾನಶೀಲರೇನೇ) (ಆದುದರಿಂದ ಅವರು ಶ್ರೇಷ್ಠರು) ಅವರಲ್ಲಿಯೂ ಅನ್ನದಾನಮಾಡಿದವರು ಶ್ರೇಷ್ಠರು. ಅವರಿಗಿಂತಲೂ ಸನಾತನಧರ್ಮವು ಶ್ರೇಷ್ಠವು. ಮನುಷ್ಯನು ತಾನು ನ್ಯಾಯದಿಂದ ಸಂಪಾದಿಸಿದ ಅನ್ನವನ್ನು ಎಂಥಹ ಅವಸ್ಥೆಯಲ್ಲಿದ್ದರೂ ದಾನಮಾಡಬೇಕು.

೨೬. ನ್ಯಾಯವಾಗಿ ಸಂಪಾದಿಸಿದ ಅನ್ನವೇ ಉತ್ತಮವಾದ ಗತಿಗೆ ಸಾಧನವಾದುದು. ಈ ಅನ್ನದ ದಾನದಿಂದಲೇ ಮನುಷ್ಯನು ಶ್ರೇಷ್ಠವಾದ ಗತಿಯನ್ನು ಹೊಂದುವನು.

೨೭. ಇಲ್ಲಿ ಎಲ್ಲರೀತಿಯ ಭೋಗಭಾಗ್ಯಗಳನ್ನೂ ಅನುಭವಿಸುವನಲ್ಲದೆ ಸತ್ತಮೇಲೆಯೂ ಸಹ ಸುಖವನ್ನು ಅನುಭವಿಸುವನು. ಈರೀತಿಯಾಗಿ ಪುಣ್ಯವನ್ನು ಸಂಪಾದಿಸಿದ ಮಾನವನು ಪಾಪಗಳಿಂದ ಬಿಡುಗಡೆಹೊಂದುವನು.

ತಸ್ಮಾದನ್ನಂ ಪ್ರದಾತವ್ಯಮನ್ಯಾಯಪರಿವರ್ಜಿತಂ ।
ಯಸ್ತು ಪ್ರಾಣಾಹುತೀಃಪೂರ್ವಮನ್ನಂ ಭುಙ್ಕ್ತೇ ಗೃಹೀ ಸದಾ ॥ ೨೮ ॥

ಅವಂಧ್ಯಂ ದಿವಸಂ ಕುರ್ಯಾದನ್ನದಾನೇನ ಮಾನವಃ ।
ಭೋಜಯಿತ್ವಾ ಶತಂ ನಿತ್ಯಂ ನರೋ ವೇದವಿದಾಂ ವರಂ ॥ ೨೯ ॥

ನ್ಯಾಯವಿದ್ಧರ್ಮವಿದುಷಾಮಿತಿಹಾಸವಿದಾಂ ತಥಾ ।
ನ ಯಾತಿ ನರಕಂ ಘೋರಂ ಸಂಸಾರಂ ನ ಚ ಸೇವತೇ ॥ ೩೦ ॥

ಸರ್ವಕಾಮಸಮಾಯುಕ್ತಃ ಪ್ರೇತ್ಯ ಚಾಪ್ಯಶ್ನುತೇ ಸುಖಂ ।
ಏವಂ ಕರ್ಮಸಮಾಯುಕ್ತೋ ರಮತೇ ವಿಗತಜ್ವರಃ ॥ ೩೧ ॥

೨೮-೩೦. ಆದುದರಿಂದ ಅನ್ಯಾಯದಿಂದ ಸಂಪಾದಿಸಿದುದಲ್ಲದ ಅನ್ನವನ್ನು ದಾನಮಾಡಬೇಕು. ಯಾವ ಗೃಹಸ್ಥನು ಸರ್ವದಾ ಪ್ರಾಣಾಹುತಿಗಳನ್ನು ಮೊದಲು ಹಾಕಿಕೊಂಡು ಅನಂತರ ಅನ್ನವನ್ನು ಭುಂಜಿಸುವನೋ, ಮತ್ತು ಯಾವಾತನು, ವೇದಪಾರಂಗತರೂ ನ್ಯಾಯವನ್ನೂ ಧರ್ಮವನ್ನೂ ಬಲ್ಲವರೂ, ಇತಿಹಾಸಜ್ಞರೂ ಆದವರಲ್ಲಿ ಶ್ರೇಷ್ಠರೆನಿಸಿದ ನೂರುಮಂದಿ ಬ್ರಾಹ್ಮಣರನ್ನು ನಿತ್ಯವೂ ಭೋಜನಮಾಡಿಸುವನೋ ಆ ಪುಣ್ಯಾತ್ಮನು ಘೋರವಾದ ನರಕವನ್ನೂ, ಮತ್ತೆ ಜನ್ಮಾದಿಗಳನ್ನೂ ಹೊಂದಲಾರನು.

೩೧. ಅಂಥವನು ಇಹದಲ್ಲಿ ಎಲ್ಲ ಇಷ್ಟಾರ್ಥಗಳನ್ನೂ ಪಡೆದು ಸತ್ತನಂತರ ಶಾಶ್ವತವಾದ ಸುಖವನ್ನೂ ಹೊಂದುವನು. ಈರೀತಿಯಾಗಿ, ಮಾನವನು ಕರ್ಮಗಳನ್ನು ಮಾಡಿದ್ದರೂ ಯಾವೊಂದು ಬಾಧೆಯೂ ಇಲ್ಲದೆ ಸುಖವಾಗಿರುವನು.

ರೂಪವಾನ್ಕೀರ್ತಿಮಾಂಶ್ಚೈವ ಧನವಾಂಶ್ಚೋಪಜಾಯತೇ ।
ಏತದ್ವಃ ಸರ್ವಮಾಖ್ಯಾತಮನ್ನದಾನಫಲಂ ಮಹತ್ ।
ಮೂಲಮೇತತ್ತು ಧರ್ಮಾಣಾಂ ಪ್ರದಾನಾನಾಂ ಚ ಭೋ ದ್ವಿಜಾಃ ॥ ೩೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ ಸಂಸಾರಚಕ್ರೇಽನ್ನದಾನಪ್ರಶಂಸಾವರ್ಣನಂ ನಾಮಾಷ್ಟಾ-ದಶಾಧಿಕದ್ವಿಶತತಮೋಽಧ್ಯಾಯಃ

---

೩೨. ಅವನು ರೂಪವಂತನಾಗಿಯೂ, ಕೀರ್ತಿಶಾಲಿಯಾಗಿಯೂ, ಐಶ್ವರ್ಯವಂತನಾಗಿಯೂ ಆಗುವನು. ಎಲೈ ಬ್ರಾಹ್ಮಣರಿರಾ! ಎಲ್ಲವಿಧವಾದ ಧರ್ಮಕಾರ್ಯಗಳಿಗೂ ದಾನಗಳಿಗೂ ಮೂಲವೆನಿಸಿದ ಈ ಅನ್ನದಾನದ ಮಹತ್ತಾದ ಫಲವೆಲ್ಲವನ್ನೂ ತಿಳಿಸಿರುವೆನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಅನ್ನದಾನಪ್ರಶಂಸಾವರ್ಣನವೆಂಬ ಇನ್ನೂರಹದಿನೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನವಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಪರಲೋಕಗತಾನಾಂ ತು ಸ್ವಕರ್ಮಸ್ಥಾನವಾಸಿನಾಂ ।
ತೇಷಾಂ ಶ್ರಾದ್ಧಂ ಕಥಂ ಜ್ಞೇಯಂ ಪುತ್ರೈಶ್ಚಾನ್ಯೈಶ್ಚ ಬಂಧುಭಿಃ ॥ ೧ ॥

॥ ವ್ಯಾಸ ಉವಾಚ ॥

ನಮಸ್ಕೃತ್ಯ ಜಗನ್ನಾಥಂ ವಾರಾಹಂ ಲೋಕಭಾವನಂ ।
ಶೃಣುಧ್ವಂ ಸಂಪ್ರವಕ್ಷ್ಯಾಮಿ ಶ್ರಾದ್ಧಕಲ್ಪಂ ಯಥೋದಿತಂ ॥ ೨ ॥

ಇನ್ನೂರಹತ್ತೊಂಭತ್ತನೆಯ ಅಧ್ಯಾಯವು

೧. ಆಗ ಮುನಿಗಳು "ತಾವು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಪರಲೋಕವನ್ನು ಹೊಂದಿರತಕ್ಕ ಜೀವರಿಗೆ ಅವರ ಪುತ್ರರಾಗಲಿ ಅಥವಾ ಇತರ ಬಂಧುಗಳಾಗಲಿ ಶ್ರಾದ್ಧವನ್ನು ಹೇಗೆ ಮಾಡಬೇಕು" ಎಂದು ಪ್ರಶ್ನಿಸಲು

೨. ವ್ಯಾಸಮಹರ್ಷಿಯು ಹೇಳತೊಡಗಿದನು :—"ಎಲೈ ಮುನಿಗಳಿರಾ! ಜಗತ್ಪ್ರಭುವೂ ಲೋಕಪಾವನನೂ ಆದ ವರಾಹರೂಪನಾದ ಶ್ರೀಹರಿಯನ್ನು ಧ್ಯಾನಿಸಿ ಶ್ರಾದ್ಧಕಲ್ಪವನ್ನು ಯಥಾವತ್ತಾಗಿ ನಿಮಗೆ ತಿಳಿಸುವೆನು. ಕೇಳಿರಿ.

ಪುರಾ ಕೋಕಾಜಲೇ ಮಗ್ನಾನ್ಪಿತ್ರ್ಯಾನುದ್ಧೃತವಾನ್ವಿಭುಃ ।
ಶ್ರಾದ್ಧಂ ಕೃತ್ವಾ ತದಾ ದೇವೋ ಯಥಾ ತತ್ರ ದ್ವಿಜೋತ್ತಮಾಃ ॥ ೩ ॥

॥ ಮುನಯ ಊಚುಃ ॥

ಕಿಮರ್ಥಂ ತೇ ತು ಕೋಕಾಯಾಂ ನಿಮಗ್ನಾಃ ಪಿತರೋಽಂಭಸಿ ।
ಕಥಂ ತೇನೋದ್ಧೃತಾಸ್ತೇ ವೈ ವಾರಾಹೇಣ ದ್ವಿಜೋತ್ತಮ ॥ ೪ ॥

ತಸ್ಮಿನ್ಕೋಕಾಮುಖೇ ತೀರ್ಥೇ ಭುಕ್ತಿಮುಕ್ತಿಫಲಪ್ರದೇ ।
ಶ್ರೋತುಮಿಚ್ಛಾಮಹೇ ಬ್ರೂಹಿ ಪರಂ ಕೌತೂಹಲಂ ಹಿ ನಃ ॥ ೫ ॥

॥ ವ್ಯಾಸ ಉವಾಚ ॥

ತ್ರೇತಾದ್ವಾಪರಯೋಃ ಸಂಧೌ ಪಿತರೋ ದಿವ್ಯಮಾನುಷಾಃ ।
ಪುರಾ ಮೇರುಗಿರೇಃ ಪೃಷ್ಠೇ ವಿಶ್ವೈರ್ದೇವೈಃ ಸಹ ಸ್ಥಿತಾಃ ॥ ೬ ॥

---

೩. ಹಿಂದೆ ಕೋಕಾ ಜಲದಲ್ಲಿ ಮುಳುಗಿಹೋಗಿದ್ದ ಪಿತೃಗಳನ್ನು ಆ ಸ್ವಾಮಿಯು ಶ್ರಾದ್ಧವನ್ನು ಮಾಡಿ ಅಲ್ಲಿಂದ ಉದ್ಧಾರಮಾಡಿದನು. ಎಲೈ ಬ್ರಾಹ್ಮಣಶ್ರೇಷ್ಠರೇ ಅದನ್ನು ನಿಮಗೆ ತಿಳಿಸುವೆನು'' ಎನ್ನಲು

೪. ಆ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು, ''ಓ ದ್ವಿಜ ಶ್ರೇಷ್ಠ! ಹಿಂದೆ ಪಿತೃಗಳು ಕೋಕಾನದಿಯ ನೀರಿನಲ್ಲಿ ಮುಳುಗಲು ಕಾರಣ ವೇನು? ಆ ವರಾಹನು ಅವರನ್ನು ಅಲ್ಲಿಂದ ಮೇಲಕ್ಕೆತ್ತಿದುದಾದರೂ ಹೇಗೆ?

೫. ಆ ಕೋಕಾಮುಖವೆಂಬ ಋಷಿ ಸೇವಿತವಾದ ತೀರ್ಥವು ಭೋಗ ಮೋಕ್ಷಗಳನ್ನು ಕೊಡುವಂಥದು ಎಂಬುದಾಗಿ ಕೇಳಿರುವೆವು. ಇದೆಲ್ಲವನ್ನೂ ನಾವು ಕೇಳಬೇಕೆಂದು ಕುತೂಹಲವಾಗಿರುವುದು. ಹೇಳಬೇಕು ಎಂದು ಪ್ರಶ್ನಿಸಿದರು.

೬. ಆಗ ವ್ಯಾಸಮಹರ್ಷಿಯು ಅವರನ್ನು ಕುರಿತು ಹೇಳತೊಡಗಿದನು:- ಎಲೈ ಮುನಿಗಳಿರಾ! ಹಿಂದೆ ತ್ರೇತಾ ಮತ್ತು ದ್ವಾಪರಯುಗಗಳ ಸಂಧಿ ಸಮಯದಲ್ಲಿ ದೇವಮಾನುಷರಾದ ಪಿತೃಗಳು ಮೇರುಪರ್ವತದಮೇಲೆ ವಿಶ್ವೇ ದೇವತೆಗಳೊಡನೆ ಕುಳಿತುಕೊಂಡಿದ್ದರು.

ತೇಷಾಂ ಸಮುಪವಿಷ್ಟಾನಾಂ ಪಿತೄಣಾಂ ಸೋಮಸಂಭವಾ ।
ಕನ್ಯಾ ಕಾಂತಿಮತೀ ದಿವ್ಯಾ ಪುರತಃ ಪ್ರಾಂಜಲಿಃ ಸ್ಥಿತಾ
ತಾಮೂಚುಃ ಪಿತರೋ ದಿವ್ಯಾ ಯೇ ತತ್ರಾಸನ್ಸಮಾಗತಾಃ ॥ ೭ ॥

॥ ಪಿತರ ಊಚುಃ ॥

ಕಾಸಿ ಭದ್ರೇ ಪ್ರಭುಃ ಕೋ ವಾ ಭವತ್ಯಾ ವಕ್ತುಮರ್ಹಸಿ ॥ ೮ ॥

॥ ವ್ಯಾಸ ಉವಾಚ ॥

ಸಾ ಪ್ರೋವಾಚ ಪಿತೄನ್ದೇವಾನ್ಕಲಾ ಚಾಂದ್ರಮಸೀತಿ ಹ ।
ಪ್ರಭುಸ್ತ್ವೇ ಭವತಾಮೇವ ವರಯಾಮಿ ಯದೀಚ್ಛಥ ॥ ೯ ॥

ಊರ್ಜಾ ನಾಮಾಸ್ಮಿ ಪ್ರಥಮಂ ಸ್ವಧಾ ಚ ತದನಂತರಂ ।
ಭವದ್ಭಿಶ್ಚಾದ್ಯೈವ ಕೃತಂ ನಾಮ ಕೋಕೇತಿ ಭಾವಿತಂ ॥ ೧೦ ॥

---

೭. ಆರೀತಿ ಅವರು ಕುಳಿತಿರುವಾಗ ಸೋಮನ ಪುತ್ರಿಯಾದ ಕನ್ಯೆಯೊಬ್ಬಳು ಕಾಂತಿಯಿಂದ ಬೆಳಗುತ್ತಾ ಅವರೆದುರಿಗೆ ಕೈಮುಗಿದುಕೊಂಡು ಬಂದು ನಿಂತಳು. ಆಗ ದೇವಮಾನುಷರಾದ ಪಿತೃಗಳು ಅವಳನು ಕುರಿತು :—

೮. "ಎಲೌ ಮಂಗಳಾಂಗಿ! ನೀನಾರು? ನಿನ್ನ ಪತಿ (ಒಡೆಯ) ಯಾರು? ಇವೆಲ್ಲವನ್ನೂ ನಮಗೆ ತಿಳಿಸು" ಎಂದು ಪ್ರಶ್ನಿಸಿದರು.

೯. ಆಗ ಪಿತೃದೇವತೆಗಳನ್ನು ಚಂದ್ರನ ಕಲೆಯಾದ ಆ ಸೋಮಪುತ್ರಿಯು, "ನಿಮಗೆ ಇಷ್ಟವಾದಲ್ಲಿ ನೀವೇ ನನಗೆ ಪತಿಗಳಾಗಬಹುದು.

೧೦. ಮೊದಲು ನನ್ನ ಹೆಸರು ಊರ್ಜೆಯೆಂಬುದಾಗಿ ಇತ್ತು. ಅನಂತರ ಸ್ವಧಾ ಎಂಬುದಾಗಿ ಬೇರೆ ಹೆಸರಾಯಿತು. ನೀವೀಗ ತಾನೇ ನನಗೆ ಕೋಕಾ ಎಂಬುದಾಗಿ (ಕಾಸಿ, ಕೋವಾಪ್ರಭುಃ ಎಂದು ಪ್ರಶ್ನಿಸಿದುದರಿಂದ ಆ ಒಂದೊಂದಕ್ಷರಗಳು ಸೇರಿ ಈ ಹೆಸರಾಯಿತೆಂದು ಭಾವಿಸಬೇಕು) ಹೆಸರಿಟ್ಟಿರಿ. ಆ ಹೆಸರೇ ನನಗಿರಲಿ" ಎಂದಳು.

ತೇ ಹಿ ತಸ್ಯಾ ವಚಃ ಶ್ರುತ್ವಾ ಪಿತರೋ ದಿವ್ಯಮಾನುಷಾಃ ।
ತಸ್ಯಾ ಮುಖಂ ನಿರೀಕ್ಷಂತೋ ನ ತೃಪ್ತಿಮಧಿಜಗ್ಮಿರೇ ॥ ೧೧ ॥

ವಿಶ್ವೇದೇವಾಶ್ಚ ತಾನ್ ಜ್ಞಾತ್ವಾ ಕನ್ಯಾಮುಖನಿರೀಕ್ಷಕಾನ್ ।
ಯೋಗಚ್ಯುತಾನ್ನಿರೀಕ್ಷ್ಯೈವ ವಿಹಾಯ ತ್ರಿದಿವಂ ಗತಾಃ ॥ ೧೨ ॥

ಭಗವಾನಪಿ ಶೀತಾಂಶುರೂರ್ಜಾಂ ನಾಪಶ್ಯದಾತ್ಮಜಾಂ ।
ಸಮಾಕುಲಮನಾ ದಧ್ಯೌ ಕ್ವ ಗತೇತಿ ಮಹಾಯಶಾಃ ॥ ೧೩ ॥

ಸ ವಿವೇದ ತದಾ ಸೋಮಃ ಪ್ರಾಪ್ತಾಂ ಪಿತೄಂಶ್ಚ ಕಾಮತಃ ।
ತೈಶ್ಚಾವಲೋಕಿತಾಂ ಹಾರ್ದಾತ್ಸ್ವೀಕೃತಾಂ ಚ ತಪೋಬಲಾತ್ ॥ ೧೪ ॥

ತತಃ ಕ್ರೋಧಪರೀತಾತ್ಮಾ ಪಿತೄನ್ ಶಶಧರೋ ದ್ವಿಜಾಃ ।
ಶಶಾಪ ನಿಪತಿಷ್ಯಧ್ವಂ ಯೋಗಭ್ರಷ್ಟಾ ವಿಚೇತಸಃ ॥ ೧೫ ॥

---

೧೧. ಆಗ ಅವಳ ಮಾತನ್ನು ಕೇಳಿದ ದೇವಮಾನುಷರಾದ ಆ ಪಿತೃಗಳು ಅವಳ ಮುಖವನ್ನೇ ರೆಪ್ಪೆಹೊಡೆಯದಂತೆ ನೋಡುತ್ತಾ ತೃಪ್ತಿಯನ್ನೇ ಹೊಂದಲಿಲ್ಲ.

೧೨. ಈರೀತಿ ಆ ಕನ್ಯೆಯ ಮುಖದಲ್ಲೇ ನೆಲೆಸಿರುವ ಕಂಗಳುಳ್ಳ ಪಿತೃಗಳನ್ನು ನೋಡಿ ಇವರು ಯೋಗಭ್ರಷ್ಟರಾದರೆಂದು ಭಾವಿಸಿ ಆ ಪಿತೃಗಳನ್ನು ಅಲ್ಲಿಯೇ ಬಿಟ್ಟು ವಿಶ್ವೇದೇವತೆಗಳು ಸ್ವರ್ಗಲೋಕಕ್ಕೆ ಹೊರಟುಹೋದರು.

೧೩. ಇತ್ತಲಾಗಿ ಭಗವಂತನಾದ ಚಂದ್ರನು ತನ್ನ ಮಗಳಾದ ಊರ್ಜೆಯನ್ನು ಕಾಣದೆ ಗಾಬರಿಯಾಗಿ, ಎಲ್ಲಿ ಹೋದಳೆಂಬುದಾಗಿ ಧ್ಯಾನದೃಷ್ಟಿಯಿಂದ ನೋಡಿದನು,

೧೪. ಆಗ ಸೋಮನು ತನ್ನ ಇಚ್ಛೆಯಿಂದಲೇ ತನ್ನ ಮಗಳಾದ ಊರ್ಜೆಯು ಪಿತೃಗಳ ಬಳಿ ಹೋಗಿರುವುದನ್ನೂ ಅವಳನ್ನು ಆ ಪಿತೃಗಳೂ ಸಹ ಮನಃಪೂರ್ವಕವಾಗಿ ತಮ್ಮ ತಪೋಬಲದಿಂದ ಸ್ವೀಕರಿಸಿರುವುದನ್ನು ಅರಿತನು.

೧೫. ಎಲೈ ದ್ವಿಜರಿರಾ! ಆಗ ಸೋಮನಿಗೆ ಮಿತಿಮೀರಿ ಕೋಪವುಂಟಾಗಿ ಪಿತೃಗಳನ್ನು ಕುರಿತು “ಎಲೈ ಬುದ್ಧಿಹೀನರೇ ನೀವೆಲ್ಲರೂ ಯೋಗಭ್ರಷ್ಟರಾಗಿ ಕೆಳಗೆ ಬಿದ್ದುಹೋಗಿರಿ.

ಯಸ್ಮಾದದತ್ತಾಂ ಮತ್ಕನ್ಯಾಂ ಕಾಮಯಧ್ವಂ ಸುಬಾಲಿಶಾಃ ।
ಯಸ್ಮಾದ್ಧೃತವತೀ ಚೇಯಂ ಪತೀನ್ಪಿತೃಮತೀ ಸತೀ ॥ ೧೬ ॥

ಸ್ವತಂತ್ರಾ ಧರ್ಮಮುತ್ಸೃಜ್ಯ ತಸ್ಮಾದ್ಭವತು ನಿಮ್ನಗಾ ।
ಕೋಕೇತಿ ಪ್ರಥಿತಾ ಲೋಕೇ ಶಿಶಿರಾದ್ರಿಸಮಾಶ್ರಿತಾ ॥ ೧೭ ॥

ಇತ್ಥಂ ಶಸ್ತಾಶ್ಚಂದ್ರಮಸಾ ಪಿತರೋ ದಿವ್ಯಮಾನುಷಾಃ ।
ಯೋಗಭ್ರಷ್ಟಾ ನಿಪತಿತಾ ಹಿಮವತ್ಪಾದಭೂತಲೇ ॥ ೧೮ ॥

ಊರ್ಜಾ ತತ್ರೈವ ಪತಿತಾ ಗಿರಿರಾಜಸ್ಯ ವಿಸ್ತೃತೇ ।
ಪ್ರಸ್ಥೇ ತೀರ್ಥಂ ಸಮಾಸಾದ್ಯ ಸಪ್ತಸಾಮುದ್ರಮುತ್ತಮಂ ॥ ೧೯ ॥

ಕೋಕಾ ನಾಮ ತತೋ ವೇಗಾನ್ನದೀ ತೀರ್ಥಶತಾಕುಲಾ ।
ಪ್ಲಾವಯಂತೀ ಗಿರೇಃ ಶೃಂಗಂ ಸರ್ಪಣಾತ್ತು ಸರಿತ್ಸ್ಮೃತಾ ॥ ೨೦ ॥

೧೬-೧೭. ತಂದೆಯಾದವನು ದಾನಮಾಡದಿರುವ ಈ ಕನ್ಯೆಯನ್ನು ನೀವು ಯಾವರೀತಿ ತಾನೆ ಬಯಸಿದಿರಿ? ಅದೂ ಅಲ್ಲದೆ ತಂದೆಯಿದ್ದರೂ ಸಹ ಅವನನ್ನು ಗಣಿಸದೆ ಇವಳು ತಾನಾಗಿಯೇ ಸ್ವಾತಂತ್ರ್ಯ ವಹಿಸಿ ಧರ್ಮಮಾರ್ಗವನ್ನು ತ್ಯಜಿಸಿ ನಿಮ್ಮನ್ನು ವರಿಸಿದುದರಿಂದ ಇವಳು ಕೋಕಾ ಎಂಬುದಾಗಿ ಪ್ರಖ್ಯಾತವಾಗಿರುವ ನದಿಯಾಗೆ ಹಿಮವತ್ಪರ್ವತದಲ್ಲಿ ಹರಿಯಲಿ" ಎಂದು ಶಪಿಸಿದನು.

೧೮. ಈರೀತಿಯಾಗಿ ಚಂದ್ರನಿಂದ ಶಾಪಹೊಂದಿದ ಆ ದೇವಮಾನುಷರಾದ ಪಿತೃಗಳು ತಮ್ಮ ಯೋಗಬಲದಿಂದ ಭ್ರಷ್ಟರಾಗಿ ಹಿಮವತ್ಪರ್ವತದ ತಪ್ಪಲಿನಲ್ಲಿ ಬಿದ್ದುಬಿಟ್ಟರು.

೧೯. ಆ ಊರ್ಜೆಯೂ ಸಹ ಹಿಮವತ್ಪರ್ವತದ ವಿಶಾಲವಾದ ತಪ್ಪಲಿನಲ್ಲಿ ಬಿದ್ದು, ಸಪ್ತಸಮುದ್ರವೆಂಬ ಉತ್ತಮವಾದ ತೀರ್ಥವನ್ನು ಸೇರಿದಳು.

೨೦. ಅಲ್ಲಿಂದ ಆ ಊರ್ಜೆಯು ನೂರಾರು ತೀರ್ಥಗಳನ್ನೊಳಗೊಂಡು ವೇಗದಿಂದ ಹರಿಯುತ್ತಾ ಹಿಮವತ್ಪರ್ವತದ ಬಂಡೆಗಳನ್ನು ತೊಳೆಯುತ್ತಾ ಹರಿದಳು. ಈರೀತಿ ಹರಿದುದರಿಂದಲೇ ಸರಿತ್ ಅಂದರೆ ನದಿಯೆಂಬ ಹೆಸರನ್ನು ಪಡೆಯಿತು. ಈ ನದಿಗೆ ಕೋಕಾ ಎಂಬ ಹೆಸರೇ ಪ್ರಸಿದ್ಧವಾಯಿತು.

ಅಥ ತೇ ಪಿತರೋ ವಿಪ್ರಾ ಯೋಗಹೀನಾ ಮಹಾನದೀಂ ।
ದದೃಶುಃ ಶೀತಸಲಿಲಾಂ ನ ವಿದುಸ್ತಾಂ ಸುಲೋಚನಾಂ ॥ ೨೧ ॥

ತತಸ್ತು ಗಿರಿರಾಡ್ದೃಷ್ಟ್ವಾ ಪಿತೄಂಸ್ತಾಂಸ್ತು ಕ್ಷುಧಾರ್ದಿತಾನ್ ।
ಬದರೀಮಾದಿದೇಶಾಥ ಧೇನುಂ ಚೈಕಾಂ ಮಧುಸ್ರವಾಂ ॥ ೨೨ ॥

ಕ್ಷೀರಂ ಮಧು ಚ ತದ್ದಿವ್ಯಂ ಕೋಕಾಂಭೋ ಬದರೀಫಲಂ ।
ಇದಂ ಗಿರಿವರೇಣೈಷಾಂ ಪೋಷಣಾಯ ನಿರೂಪಿತಂ ॥ ೨೩ ॥

ತಯಾ ವೃತ್ತ್ಯಾ ತು ವಸತಾಂ ಪಿತೄಣಾಂ ಮುನಿಸತ್ತಮಾಃ ।
ದಶ ವರ್ಷಸಹಸ್ರಾಣಿ ಯಯುರೇಕಮಹೋ ಯಥಾ ॥ ೨೪ ॥

ಏವಂ ಲೋಕೇ ವಿಪಿತರಿ ತಥೈವ ವಿಗತಸ್ವಧೇ ।
ದೈತ್ಯಾ ಬಭೂವುರ್ಬಲಿನೋ ಯಾತುಧಾನಾಶ್ಚ ರಾಕ್ಷಸಾಃ ॥ ೨೫ ॥

---

೨೧. ಬಳಿಕ ಯೋಗಭ್ರಷ್ಟರಾಗಿ ಬಿದ್ದಿದ್ದ ಪಿತೃಗಳು ಶೀತಲವಾದ ನೀರಿನಿಂದ ತುಂಬಿ ಹರಿಯುತ್ತಿದ್ದ ಆ ಮಹಾನದಿಯನ್ನು ಕಂಡರು. ಅವಳೇ ಸೋಮಪುತ್ರಿಯಾದ ಕೋಕೆಯೆಂದು ಅವರಿಗೆ ಗೊತ್ತಾಗಲಿಲ್ಲ.

೨೨-೨೩. ಅನಂತರ ಗಿರಿರಾಜನಾದ ಹಿಮವಂತನು ಆ ಪಿತೃಗಳು ಹಸಿವಿನಬಾಧೆಯಿಂದ ಕಂಗೆಟ್ಟಿರುವುದನ್ನು ಕಂಡು, ತನ್ನ ಬಳಿ ಇದ್ದ ಬದರಿಯನ್ನೂ (ಎಲಚಿಗಿಡ) ಜೇನುತುಪ್ಪವನ್ನು (ಅದರಂತೆ ಸಿಹಿಯಾದ ಹಾಲನ್ನು) ಕರೆಯುತ್ತಿದ್ದ ಹಸುವೊಂದನ್ನೂ ಕರೆದು ಪಿತೃಗಳ ಪೋಷಣೆಗಾಗಿ ಕಳುಹಿಸಿದನು. ಈರೀತಿಯಾಗಿ ಆ ಹಿಮವಂತನು ಜೇನಿನಂತಿರುವ ಹಾಲು, ದಿವ್ಯವಾದ ಕೋಕಾನದಿಯ ನೀರು, ಎಲಚಿಯಹಣ್ಣು ಇವನ್ನು ಅವರಿಗೆ ಒದಗಿಸಿದನು.

೨೪. ಎಲೈ ಮುನಿಗಳಿರಾ! ಈರೀತಿಯಾಗಿ ಒದಗಿಸ ಆಹಾರದಿಂದ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದ ಆ ಪಿತೃಗಳಿಗೆ ಹತ್ತುಸಾವಿರ ವರ್ಷಗಳು ಒಂದು ದಿವಸದಂತೆ ಕಳೆದುಹೋದುವು.

೨೫. ಈರೀತಿಯಾಗಿ ಪ್ರಪಂಚದಲ್ಲಿ ಪಿತೃಗಳೇ ಇಲ್ಲದೇಹೋಗಲು, ಮತ್ತು ಸ್ವಧೆಯೇ ಲುಪ್ತವಾಗಲು, ದೈತ್ಯರೂ ರಾಕ್ಷಸರೂ ಬಲಿಷ್ಠರಾಗ ತೊಡಗಿದರು.

ತೇ ತಾನ್ಪಿತೃಗಣಾನ್ದೃಷ್ಟ್ವಾ ಯಾತುಧಾನಾಶ್ಚ ವೇಗಿತಾಃ ।
ವಿಶ್ವೈರ್ದೇವೈರ್ವಿರಹಿತಾನ್ಸರ್ವತಃ ಸಮುಪಾದ್ರವನ್ ॥ ೨೬ ॥

ದೈತೇಯಾನ್ಯಾತುಧಾನಾಂಶ್ಚ ದೃಷ್ಟ್ವೈವಾಪತತೋ ದ್ವಿಜಾಃ ।
ಕೋಕಾತಟಸ್ಥಾಮುತ್ತುಂಗಾಂ ಶಿಲಾಂ ತೇ ಜಗೃಹೂ ರುಷಾ ॥ ೨೭ ॥

ಗೃಹೀತಾಯಾಂ ಶಿಲಾಯಾಂ ತು ಕೋಕಾ ವೇಗವತೀ ಪಿತೄನ್ ।
ಛಾದಯಾಮಾಸ ತೋಯೇನ ಪ್ಲಾವಯಂತೀ ಹಿಮಾಚಲಂ ॥ ೨೮ ॥

ಪಿತೄನಂತರ್ಹಿತಾನ್ದೃಷ್ಟ್ವಾ ದೈತೇಯಾ ರಾಕ್ಷಸಾಸ್ತಥಾ ।
ವಿಭೀತಕಂ ಸಮಾರುಹ್ಯ ನಿರಾಹಾರಾಸ್ತಿರೋಹಿತಾಃ ॥ ೨೯ ॥

---

೨೬. ಅನಂತರ ಆ ದೈತ್ಯರೂ, ರಾಕ್ಷಸರೂ, ಮಹಾವೇಗದಿಂದ ಕೂಡಿದವರಾಗಿ, ವಿಶ್ವೇದೇವತೆಗಳ ಸಹಾಯವು ಬಿಟ್ಟುಹೋಗಿದ್ದ ಆ ಪಿತೃಗಳನ್ನು ಹುಡುಕಿಕೊಂಡು ಸುತ್ತಲೂ ಬರತೊಡಗಿದರು.

೨೭. ಈರೀತಿಯಾಗಿ ದೈತ್ಯರೂ ರಾಕ್ಷಸರೂ ತಮ್ಮಮೇಲೆ ಬೀಳಲು ಬರುತ್ತಿರುವುದನ್ನು ಕಂಡು ಆ ಪಿತೃಗಳು ಕೋಪದಿಂದ ಕೋಕಾನದಿಯ ದಡದಲ್ಲಿದ್ದ ಭಾರಿ ಬಂಡೆಯನ್ನು ತೆಗೆದುಕೊಳ್ಳಹೋದರು.

೨೮. ಆ ಶಿಲೆಗೆ ಕೈಹಾಕುತ್ತಿದ್ದಂತೆಯೇ ವೇಗದಿಂದ ಹರಿಯುತ್ತಿದ್ದ ಕೋಕಾನದಿಯು ತನ್ನ ನೀರಿನಿಂದ ಹಿಮವತ್ಪರ್ವತವನ್ನೂ ಕೊಚ್ಚಿಕೊಂಡು ಹೋಗುವಂತೆ ಉಬ್ಬಿ ಆ ಪಿತೃಗಳನ್ನು ತನ್ನಲ್ಲಿ ಮುಳುಗಿಸಿ ಮರೆಮಾಡಿದಳು.

೨೯. ಈರೀತಿಯಾಗಿ ಪಿತೃಗಳು ಕಣ್ಮರೆಯಾಗಲು ಆ ದೈತ್ಯರೂ ರಾಕ್ಷಸರೂ ಹತ್ತಿರದಲ್ಲಿದ್ದ ತಾರೇಮರವನ್ನು ಹತ್ತಿ ಆಹಾರವಿಲ್ಲದುದರಿಂದ ಅಲ್ಲಿಂದ ಕಣ್ಮರೆಯಾದರು.

ಸಲಿಲೇನ ನಿಷೀದಂತಃ ಪಿತರಃ ಕ್ಷುದ್ಭ್ರಮಾತುರಾಃ ।
ನಿಷೀದನಾನಮಾತ್ಮಾನಂ ಸಮೀಕ್ಷ್ಯ ಸಲಿಲಾಶಯಾಃ ।
ಜಗುರ್ಜನಾರ್ದನಂ ದೇವಂ ಪಿತರಃ ಶರಣಂ ಹರಿಂ ॥ ೩೦ ॥

॥ ಪಿತರ ಊಚುಃ ॥

ಜಯಸ್ವ ಗೋವಿಂದ ಜಗನ್ನಿವಾಸ
ಜಯೋಽಸ್ತು ನಃ ಕೇಶವ ತೇ ಪ್ರಸಾದಾತ್ ।
ಜನಾರ್ದನಾಸ್ಮಾನ್ಸಲಿಲಾಂತರಸ್ಥಾ-
ನುದ್ಧರ್ತುಮರ್ಹಸ್ಯನಘಪ್ರತಾಪ ॥ ೩೧ ॥

ನಿಶಾಚರೈರ್ದಾರುಣದರ್ಶನೈಃ ಪ್ರಭೋ
ವರೇಣ್ಯ ವೈಕುಂಠ ವರಾಹ ವಿಷ್ಣೋ ।
ನಾರಾಯಣಾಶೇಷಮಹೇಶ್ವರೇಶ
ಪ್ರಯಾಹಿ ಭೀತಾನ್ ಜಯ ಪದ್ಮನಾಭ ॥ ೩೨ ॥

---

೩೦. ಆಗ ಹಸಿವಿನಿಂದಲೂ, ತಿರುಗುವಿಕೆಯಿಂದಲೂ ಬಳಲಿಹೋಗಿದ್ದ ಪಿತೃಗಳು ನೀರಿನಲ್ಲಿ ಸಿಕ್ಕಿ ತಾವು ಮುಳುಗಿಹೋಗುತ್ತಿರುವುದನ್ನು ಕಂಡು ಜನಾರ್ದನನಾದ ಶ್ರೀಹರಿಯನ್ನು ಮರೆಹೊಕ್ಕು ಸ್ತುತಿಸತೊಡಗಿದರು.

೩೧. "ಎಲೈ ಗೋವಿಂದನೇ, ಓ ಜಗನ್ನಿವಾಸ! ನಿನಗೆ ಜಯವಾಗಲಿ. ಹೇ ಕೇಶವ, ನಿನ್ನ ಅನುಗ್ರಹದಿಂದ ನಮಗೆ ಜಯವುಂಟಾಗಲಿ. ಓ ಜನಾರ್ದನ, ಓ ಪ್ರತಾಪಶಾಲಿ, ನೀರಲ್ಲಿ ಸಿಕ್ಕಿ ಮುಳುಗಿಹೋಗುತ್ತಿರುವ ನಮ್ಮನ್ನು ಮೇಲಕ್ಕೆತ್ತಿ ಸಂರಕ್ಷಣೆಮಾಡು.

೩೨. ಹೇ ಪ್ರಭು, ಹೇ ವರೇಣ್ಯ (ಶ್ರೇಷ್ಠ) ಓ ವೈಕುಂಠ! ಓ ವರಾಹ, ಎಲೈ ಪ್ರಭುಗಳೆಲ್ಲರಿಗೂ ಪರಮಪ್ರಭುವೆನಿಸಿದ ಪದ್ಮನಾಭನಾದ ನಾರಾಯಣನೇ! ಭಯಂಕರವಾದ ನೋಟವುಳ್ಳ ರಾಕ್ಷಸರಿಂದ ಭೀತರಾಗಿರುವ ನಮ್ಮನ್ನು ಬೇಗ ಬಂದು ಕಾಪಾಡು. ನೀನು ಜಯಶೀಲನಾಗು.

ಉಪೇಂದ್ರ ಯೋಗಿನ್ಮಧುಕೈಟಭಘ್ನ
ವಿಷ್ಣೋ ಅನಂತಾಚ್ಯುತ ವಾಸುದೇವ ।
ಶ್ರೀಶಾರ್ಙ್ಗಚಕ್ರಾಂಬುಜಶಂಖಪಾಣೇ
ರಕ್ಷಸ್ವ ದೇವೇಶ್ವರ ರಾಕ್ಷಸೇಭ್ಯಃ ॥ ೩೩ ॥

ತ್ವಂ ಪಿತಾ ಜಗತಃ ಶಂಭೋ ನಾನ್ಯಃ ಶಕ್ತಃ ಪ್ರಬಾಧಿತುಂ ।
ನಿಶಾಚರಗಣಂ ಭೀಮಮತಸ್ತ್ವಾಂ ಶರಣಂ ಗತಾಃ ॥ ೩೪ ॥

ತ್ವನ್ನಾಮಸಂಕೀರ್ತನತೋ ನಿಶಾಚರಾ
ದ್ರವಂತಿ ಭೂತಾನ್ಯಪಯಾಂತಿ ಚಾರಯಃ ।
ನಾಶಂ ತಥಾ ಸಂಪ್ರತಿ ಯಾಂತಿ ವಿಷ್ಣೋ
ಧರ್ಮಾದಿ ಸತ್ಯಂ ಭವತೀಹ ಮುಖ್ಯಂ ॥ ೩೫ ॥

---

೩೩. ಎಲೈ ಉಪೇಂದ್ರನೇ, ಓ ಯೋಗಿವರೇಣ್ಯ! ಹೇ ಮಧುಕೈಟಭ ಸಂಹಾರಿ, ಓ ಅನಂತ! ಅಚ್ಯುತ! ವಾಸುದೇವ! ಶಂಖಚಕ್ರಗಳನ್ನೂ ಶಾರ್ಙ್ಗವೆಂಬ ಧನುಸ್ಸನ್ನೂ ಕಮಲವನ್ನೂ ಕೈಲಿ ಧರಿಸಿರುವ ಓ ದೇವೇಶ್ವರ, ರಾಕ್ಷಸರಿಂದ ಭೀತರಾದ ನಮ್ಮನ್ನು ಕಾಪಾಡು.

೩೪. ಎಲೈ ಶಂಭುವೇ, ನೀನೇ ಜಗತ್ತಿಗೆ ತಂದೆಯು. ಈ ಭಯಂಕರರಾದ ರಾಕ್ಷಸರ ಗುಂಪನ್ನು ಹೊಡೆದೋಡಿಸಲು ನಿನ್ನನ್ನು ಬಿಟ್ಟರೆ ಮತ್ತಾರಿಗೂ ಸಾಧ್ಯವಿಲ್ಲ. ಆದುದರಿಂದ ನಿನ್ನನ್ನು ಮರೆಹೊಕ್ಕಿರುವೆವು.

೩೫. ನಿನ್ನ ಹೆಸರನ್ನು ಒಂದುಬಾರಿ ಉಚ್ಚರಿಸಿದರೂ ಸಾಕು, ನಿಶಾಚರ (ರಾಕ್ಷಸರು) ರು ಓಡುವರು. ಭೂತಗಳು ಕಾಲು ತೆಗೆಯುವುವು. ಶತ್ರುಗಳೂ ಪಲಾಯನಮಾಡುವರು. ಎಲೈ ವಿಷ್ಣುವೇ, ಅಷ್ಟೇ ಅಲ್ಲದೆ ಅವರು ನಾಶವನ್ನು ಹೊಂದುವರು. ನಿನ್ನಿಂದಲೇ ಧರ್ಮವೇ ಮೊದಲಾದುವೆಲ್ಲವೂ ಸತ್ಯವೆನಿಸಿಯೂ ಮುಖ್ಯವೆನಿಸಿಯೂ ಇರುವುದು."

॥ ವ್ಯಾಸ ಉವಾಚ ॥

ಇತ್ಥಂ ಸ್ತುತಃ ಸ ಪಿತೃಭಿರ್ಧರಣೀಧರಸ್ತು
ತುಷ್ಟಸ್ತದಾವಿಷ್ಕೃತದಿವ್ಯಮೂರ್ತಿಃ ।
ಕೋಕಾಮುಖೇ ಪಿತೃಗಣಂ ಸಲಿಲೇ ನಿಮಗ್ನಂ
ದೇವೋ ದದರ್ಶ ಶಿರಸಾಥ ಶಿಲಾಂ ವಹಂತಂ ॥ ೩೬ ॥

ತಂ ದೃಷ್ಟ್ವಾ ಸಲಿಲೇ ಮಗ್ನಂ ಕ್ರೋಡರೂಪೀ ಜನಾರ್ದನಃ ।
ಭೀತಂ ಪಿತೃಗಣಂ ವಿಷ್ಣುರುದ್ಧರ್ತುಂ ಮತಿರಾದಧೇ ॥ ೩೭ ॥

ದಂಷ್ಟ್ರಾಗ್ರೇಣ ಸಮಾಹತ್ಯ ಶಿಲಾಂ ಚಿಕ್ಷೇಪ ಶೂಕರಃ ।
ಪಿತೄನಾದಾಯ ಚ ವಿಭುರುಜ್ಜಹಾರ ಶಿಲಾತಲಾತ್ ॥ ೩೮ ॥

ವರಾಹದಂಷ್ಟ್ರಾಸಂಲಗ್ನಾಃ ಪಿತರಃ ಕನಕೋಜ್ಜ್ವಲಾಃ ।
ಕೋಕಾಮುಖೇ ಗತಭಯಾಃ ಕೃತಾ ದೇವೇನ ವಿಷ್ಣುನಾ ॥ ೩೯ ॥

---

೩೬. ಎಲೈ ಮುನಿಗಳಿರಾ! ಈರೀತಿಯಾಗಿ ಪಿತೃಗಳಿಂದ ಸ್ತುತಿಸಲ್ಪಟ್ಟ ಧರಣೀಧರನಾದ ಆ ಪರಮಪುರುಷನು, ತನ್ನ ದಿವ್ಯರೂಪದಿಂದ ಅಲ್ಲಿ ಆವಿರ್ಭವಿಸಿ, ಆ ಕೋಕಾನದಿಯಲ್ಲಿ ತಲೆಯಮೇಲೆ ಶಿಲೆಯನ್ನು ಹೊತ್ತು ಮುಳುಗಿಹೋಗಿದ್ದ ಅವರನ್ನು ಕಂಡನು.

೩೭. ಆಗ ವಿಷ್ಣುವು ನೀರಿನಲ್ಲಿ ಮುಳುಗಿ ಹೆದರಿಕೆಯಿಂದ ತಲ್ಲಣಿ ಸುತ್ತಿದ್ದ ಆ ಪಿತೃಗಳನ್ನು ಉದ್ಧರಿಸಬೇಕೆಂದು ಮನಸ್ಸುಮಾಡಿ ದಿವ್ಯವಾದ ವರಾಹರೂಪವನ್ನು ತಾಳಿದನು.

೩೮. ಆ ದಿವ್ಯವರಾಹವು ತನ್ನ ಕೋರೆದಾಡೆಯ ಕೊನೆಯಿಂದ ಪಿತೃಗಳ ತಲೆಯಮೇಲೆ ಅಗಿತುಕೊಂಡಿದ್ದ ಭಾರಿ ಶಿಲೆಯನ್ನು ನೂಕಿ ಒಂದುಕಡೆ ಎಸೆದು ಪಿತೃಗಳನ್ನು ಎತ್ತಿಕೊಂಡು ಆ ಶಿಲಾತಲದಿಂದ ಈಚೆಗೆ ಬಂದನು.

೩೯. ಈರೀತಿಯಾಗಿ ಕೋಕಾನದಿಯ ನೀರಲ್ಲಿ ಮುಳುಗಿಹೋಗಿದ್ದ ಪಿತೃಗಳು ಆ ವರಾಹರೂಪಿಯಾದ ವಿಷ್ಣುವಿನ ಕೋರೆದಾಡೆಯಮೇಲೆ ಇದ್ದು ಕೊಂಡು ಬಂಗಾರದಂತೆ ಹೊಳೆಯುತ್ತಾ ತಮ್ಮ ಭಯವನ್ನು ತೊರೆದರು.

ಉದ್ಧೃತ್ಯ ಚ ಪಿತ್ರ್ನ್ದೇವೋ ವಿಷ್ಣುತೀರ್ಥೇ ತು ಶೂಕರಃ ।
ದದೌ ಸಮಾಹಿತಸ್ತೇಭ್ಯೋ ವಿಷ್ಣುಲೋಹಾರ್ಗಲೇ ಜಲಂ ॥ ೪೦ ॥

ತತಃ ಸ್ವರೋಮಸಂಭೂತಾನ್ಕುಶಾನಾದಾಯ ಕೇಶವಃ ।
ಸ್ವೇದೋದ್ಭವಾಂಸ್ತಿಲಾಂಶ್ಚೈವ ಚಕ್ರೇ ಚೋಲ್ಮುಕಮುತ್ತಮಂ ॥ ೪೧ ॥

ಜ್ಯೋತಿಃ ಸೂರ್ಯಪ್ರಭಂ ಕೃತ್ವಾ ಪಾತ್ರಂ ತೀರ್ಥಂ ಚ ಕಾಮಿಕಂ ।
ಸ್ಥಿತಃ ಕೋಟಿವಟಸ್ಯಾಧೋ ವಾರಿ ಗಂಗಾಧರಂ ಶುಚಿ ॥ ೪೨ ॥

ತುಂಗಕೂಟಾತ್ಸಮಾದಾಯ ಯಜ್ಞೀಯಾನೋಷಧೀರಸಾನ್ ।
ಮಧುಕ್ಷೀರರಸಾನ್ಗನ್ಧಾನ್ಪುಷ್ಪಧೂಪಾನುಲೇಪನಾನ್ ॥ ೪೩ ॥

---

೪೦. ಈರೀತಿಯಾಗಿ ಆ ವರಾಹರೂಪವ ಹರಿಯು ಪಿತೃಗಳನ್ನು ಉದ್ಧರಿಸಿದನಂತರ, ಮುಂದೆ ವಿಷ್ಣುತೀರ್ಥವೆಂದು ಪ್ರಸಿದ್ಧವಾದ ಆ ಸ್ಥಳದಲ್ಲಿ ಶುದ್ಧವಾದ ಮನಸ್ಸಿನಿಂದ, ಪಿತೃಗಳಿಗೆ ಲೋಹಾರ್ಗಲ (ಕಬ್ಬಿಣದ ಕೊಂಡಿ) ದಿಂದ ನೀರನ್ನು ಇತ್ತನು.

೪೧. ಬಳಿಕ ಕೇಶವನು ತನ್ನ ರೋಮಗಳಿಂದ ದರ್ಭೆಗಳನ್ನೂ, ಬೆವರಿನ ಹನಿಗಳಿಂದ ತಿಲಗಳನ್ನು (ಎಳ್ಳು) ಸೃಷ್ಟಿಸಿ, ಅದೇರೀತಿ ಒಂದು ಕೊಳ್ಳಿ ಯನ್ನೂ ಸೃಷ್ಟಿಸಿದನು.

೪೨. ಮತ್ತು ಸೂರ್ಯಪ್ರಭೆಯನ್ನು ದೀಪವಾಗಿಯೂ, ಕಾಮದಾಯಕ ವಾದ ಆ ತೀರ್ಥವನ್ನೇ ಪಾತ್ರವನ್ನಾಗಿಯೂ, ಶುಚಿಯಾದ ನೀರನ್ನೇ ಗಂಗೆ ಯನ್ನಾಗಿಯೂ ಮಾಡಿಕೊಂಡು ಕೋಟಿವಟವೆಂಬ ವೃಕ್ಷದ ಕೆಳಗೆ ಕುಳಿತು–

೪೩. ಆ ಹಿಮವಂತನ ಎತ್ತರವಾದ ಶಿಖರದಿಂದ, ಯಜ್ಞಗಳಿಗೆ ಬೇಕಾಗತಕ್ಕ ವಸ್ತುಗಳಾದ ಜೇನುತುಪ್ಪ, ಹಾಲು, ಮೊದಲಾದ ವಿವಿಧ ರಸ ಗಳನ್ನೂ, ಬಗೆಬಗೆಯ ಪರಿಮಳಗಳನ್ನೂ, ಪುಷ್ಪಗಳನ್ನೂ, ಫಲಗಳನ್ನೂ, ಅನುಲೇಪನ (ತೊಡೆದುಕೊಳ್ಳುವ ಗಂಧ ಮೊದಲಾದುವು) ಗಳನ್ನೂ ತೆಗೆದು ಕೊಂಡನು.

ಆದಾಯ ಧೇನುಂ ಸರಸೋ ರತ್ನಾನ್ಯಾದಾಯ ಚಾರ್ಣವಾತ್ ।
ದಂಷ್ಟ್ರಯೋಲ್ಲಿಖ್ಯ ಧರಣೀಮಭ್ಯುಕ್ಷ್ಯ ಸಲಿಲೇನ ಚ ॥ ೪೪ ॥

ಘರ್ಮೋದ್ಭವೇನೋಪಲಿಪ್ಯ ಕುಶೈರುಲ್ಲಿಖ್ಯ ತಾಂ ಪುನಃ ।
ಪರಿಣೀಯೋಲ್ಮುಕೇನೈನಾಮಭ್ಯುಕ್ಷ್ಯ ಚ ಪುನಃ ಪುಃ ॥ ೪೫ ॥

ಕುಶಾನಾದಾಯ ಪ್ರಾಗಗ್ರಾಂಲ್ಲೋಮಕೂಪಾಂತರಸ್ಥಿತಾನ್ ।
ಋಷೀನಾಹೂಯ ಪಪ್ರಚ್ಛ ಕರಿಷ್ಯೇ ಪಿತೃತರ್ಪಣಂ ॥ ೪೬ ॥

ತೈರಪ್ಯುಕ್ತೇ ಕುರುಷ್ವೇತಿ ವಿಶ್ವಾನ್ದೇವಾಂಸ್ತತೋ ವಿಭುಃ ।
ಆಹೂಯ ಮಂತ್ರತಸ್ತೇಷಾಂ ವಿಷ್ಟರಾಣಿ ದದೌ ಪ್ರಭುಃ ॥ ೪೭ ॥

ಆಹೂಯ ಮಂತ್ರತಸ್ತೇಷಾಂ ವೇದೋಕ್ತವಿಧಿನಾ ಹರಿಃ ।
ಅಕ್ಷತೈರ್ದೈವತಾರಕ್ಷಾಂ ಚಕ್ರೇ ಚಕ್ರಗದಾಧರಃ ॥ ೪೮ ॥

---

೪೪. ಮತ್ತು ಬಳಿಯಲ್ಲಿದ್ದ ಸರಸ್ಸಿನಿಂದ ಧೇನುವೊಂದನ್ನೂ, ಸಮುದ್ರದಿಂದ ರತ್ನಗಳನ್ನೂ ತೆಗೆದುಕೊಂಡನು. ಅನಂತರ ತನ್ನ ದಂಷ್ಟ್ರಯಿಂದ (ಕೋರೆದಾಡೆ) ನೆಲವನ್ನು ಕೆತ್ತಿ, ನೀರನ್ನು ಚುಮುಕಿಸಿ,

೪೫. ತನ್ನ ಬೆವರುನೀರಿನಿಂದ ಸಾರಿಸಿ, ಮತ್ತೆ ಆ ಭೂಮಿಯನ್ನು ದರ್ಭೆಗಳಿಂದ ಗೀಚಿ, ತಾನು ಸೃಷ್ಟಿಸಿದ್ದ ಕೊಳ್ಳಿಯಿಂದ ಆ ಪ್ರದೇಶದಲ್ಲಿ ಸುತ್ತಿಸಿ ಶುದ್ಧಿಪಡಿಸಿದುದಲ್ಲದೆ ಮತ್ತೆ ಮತ್ತೆ ನೀರನ್ನು ಪ್ರೋಕ್ಷಿಸಿದನು.

೪೬. ಅನಂತರ ತನ್ನ ರೋಮಗಳಿಂದ ಸೃಷ್ಟಿಸಲ್ಪಟ್ಟಿದ್ದ ದರ್ಭೆಗಳನ್ನು ಪೂರ್ವಾಗ್ರವಾಗಿ ಹರಡಿ ಋಷಿಗಳನ್ನು ಕರೆದು ನಾನು ಪಿತೃಗಳಿಗೆ ತೃಪ್ತಿಯಾಗುವುದಕ್ಕೋಸ್ಕರ ಶ್ರಾದ್ಧವನ್ನು ಮಾಡುವೆನೆಂಬುದಾಗಿ ಅವರನ್ನು ಕೇಳಿದನು.

೪೭. ಆ ಋಷಿಗಳು ಹಾಗೆಯೇ ಆಗಲಿ ಎಂದು ಅನುಮತಿಯೀಯಲು, ಆ ಪ್ರಭುವು ಮಂತ್ರಪೂರ್ವಕವಾಗಿ ವಿಶ್ವೇದೇವತೆಗಳನ್ನು ಆಹ್ವಾನಿಸಿ ಅವರಿಗೆ ಆಸನವನ್ನಿತ್ತನು.

೪೮. ಈರೀತಿಯಾಗಿ ಚಕ್ರಗದಾಧರನಾದ ಶ್ರೀಹರಿಯು ಮಂತ್ರಪೂರ್ವಕವಾಗಿ ವಿಧ್ಯನುಸಾರ ಅವರನ್ನು ಆಹ್ವಾನಿಸಿದನಂತರ ಅಕ್ಷತೆಗಳನ್ನು ತೆಗೆದುಕೊಂಡು ದೇವತೆಗಳಿಗೆ ರಕ್ಷಾವಿಧಿಯನ್ನು ನೆರವೇರಿಸಿದನು.

ಅಕ್ಷತಾಸ್ತು ಯವೌಷಧ್ಯಃ ಸರ್ವದೇವಾಂಶಸಂಭವಾಃ ।
ರಕ್ಷಂತಿ ಸರ್ವತ್ರ ದಿಶೋ ರಕ್ಷಾರ್ಥಂ ನಿರ್ಮಿತಾ ಹಿ ತೇ ॥ ೪೯ ॥

ದೇವದಾನವದೈತ್ಯೇಷು ಯಕ್ಷರಕ್ಷಃಸು ಚೈವ ಹಿ ।
ನಹಿ ಕಶ್ಚಿತ್ಕ್ಷಯಂ ತೇಷಾಂ ಕರ್ತುಂ ಶಕ್ತಶ್ಚರಾಚರೇ ॥ ೫೦ ॥

ನ ಕೇನಚಿತ್ಕೃತಂ ಯಸ್ಮಾತ್ತಸ್ಮಾತ್ತೇ ಹ್ಯಕ್ಷತಾಃ ಕೃತಾಃ ।
ದೇವಾನಾಂ ತೇ ಹಿ ರಕ್ಷಾರ್ಥಂ ನಿಯುಕ್ತಾ ವಿಷ್ಣುನಾ ಪುರಾ ॥ ೫೧ ॥

ಕುಶಗಂಧಯವೈಃ ಪುಷ್ಪೈರರ್ಘ್ಯಂ ಕೃತ್ವಾ ಚ ಶೂಕರಃ ।
ವಿಶ್ವೇಭ್ಯೋ ದೇವೇಭ್ಯ ಇತಿ ತತಸ್ತಾನ್ಪರ್ಯಪೃಚ್ಛತ ॥ ೫೨ ॥

ಪಿತೄನಾವಾಹಯಿಷ್ಯಾಮಿ ಯೇ ದಿವ್ಯಾ ಯೇ ಚ ಮಾನುಷಾಃ ।
ಆವಾಹಯಸ್ವೇತಿ ಚ ತೈರುಕ್ತಸ್ತ್ವಾವಾಹಯೇಚ್ಛುಚಿಃ ॥ ೫೩ ॥

---

೪೯. ಈ ಅಕ್ಷತೆಗಳು ಜವೆ ಮೊದಲಾದ ಓಷಧಿಗಳಿಂದ ಆದುವು. ಮತ್ತು ಎಲ್ಲ ದೇವತೆಗಳ ಅಂಶಗಳಿಂದಲೂ ಸಂಭವಿಸಿರುವಂತವು. ರಕ್ಷಣೆಗೆಂದೇ ಇವು ನಿರ್ಮಿಸಲ್ಪಟ್ಟುವಾದುದರಿಂದ ಎಲ್ಲಾ ದಿಕ್ಕುಗಳನ್ನೂ ಇವು ಸಂರಕ್ಷಿಸುವುವು.

೫೦. ದೇವತೆಗಳಲ್ಲಾಗಲಿ, ದಾನವರಲ್ಲಾಗಲಿ, ಯಕ್ಷ ರಾಕ್ಷಸರಲ್ಲಿಯಾಗಲಿ, ಯಾವನೊಬ್ಬನೂ ಕೂಡ ಆ ಅಕ್ಷತೆಗಳನ್ನು ನಾಶಪಡಿಸಲು ಈ ಚರಾಚರಾತ್ಮಕವಾದ ಪ್ರಪಂಚದಲ್ಲಿ ಸಾಧ್ಯವಿಲ್ಲ.

೫೧. ಇದುವರೆಗೂ ಯಾವನೂ ಕೂಡ ಅವುಗಳಿಗೆ ಕ್ಷತ (ನಾಶ) ವನ್ನುಂಟುಮಾಡದೇ ಇರುವುದರಿಂದಲೇ ಅವು ಅಕ್ಷತೆಗಳೆನಿಸಿಕೊಳ್ಳಲ್ಪಟ್ಟುವು. ಹಿಂದೆ ದೇವತೆಗಳ ಸಂರಕ್ಷಣೆಗಾಗಿ ವಿಷ್ಣುವು ಈ ಅಕ್ಷತೆಗಳನ್ನು ನಿಯಮಿಸಿದ್ದನು. (ಬಳಸಿದ್ದನು)

೫೨-೫೩. ಅನಂತರ ಆ ದಿವ್ಯವರಾಹವು ವಿಶ್ವೇದೇವತೆಗಳಿಗೆ ಕುಶಗಳಿಂದಲೂ, ಗಂಧದಿಂದಲೂ, ಯವಾಕ್ಷತಗಳಿಂದಲೂ, ಪುಷ್ಪಗಳಿಂದಲೂ ಅರ್ಘ್ಯವನ್ನಿತ್ತು, " ಯಾರು ಅಂತರಿಕ್ಷದಲ್ಲಿ (ಸ್ವರ್ಗದಲ್ಲಿ) ರುವರೋ, ಯಾರು

ಶ್ಲಿಷ್ಟಮೂಲಾಗ್ರದರ್ಭಾಂಸ್ತು ಸತಿಲಾನ್ನೇದ ವೇದವಿತ್ ।
ಜಾನಾವಾರೋಪ್ಯ ಹಸ್ತಂ ತು ದದೌ ಸವ್ಯೇನ ಚಾಸನಂ ॥ ೫೪ ॥

ತಥೈವ ಜಾನುಸಂಸ್ಥೇನ ಕರೇಣೈಕೇನ ತಾನ್ಪಿತೄನ್ ।
ವಾರಾಹಃ ಪಿತೃವಿಪ್ರಾಣಾಮಾಯಾಂತು ನ ಇತೀರಯನ್ ॥ ೫೫ ॥

ಅಪಹತೇತ್ಯುವಾಚೈವ ರಕ್ಷಣಂ ಚಾಪಸವ್ಯತಃ ।
ಕೃತ್ವಾ ಚಾವಾಹನಂ ಚಕ್ರೇ ಪಿತೄಣಾಂ ನಾಮಗೋತ್ರತಃ ॥ ೫೬ ॥

ತನ್ಪಿತರೋ ಮನೋಜರಾನಾಗಚ್ಛತ ಇತೀರಯನ್ ।
ಸಂವತ್ಸರೈರಿತ್ಯುದೀರ್ಯ ತತೋಽರ್ಘ್ಯಂ ತೇಷು ವಿನ್ಯಸೇತ್ ॥ ೫೭ ॥

ಭೂಮಿಯಲ್ಲಿರುವರೋ ಆ ದೇವಮಾನುಷರಾದ ಪಿತೃಗಳನ್ನು ಆವಾಹನೆ ಮಾಡುವೆನು, ಅನುಜ್ಞೆಯನ್ನು ಕೊಡಿ" ಎಂದು ಅವರನ್ನು ಪ್ರಾರ್ಥಿಸಿದನು. ಅವರು ಹಾಗೆಯೇ ಆಗಲೆಂದು ಒಪ್ಪಿಗೆಯೀಯಲು ಶುದ್ಧಮನಸ್ಸಿನಿಂದ ಆ ಪಿತೃಗಳನ್ನು ಆವಾಹನೆಮಾಡಿದನು.

೫೪. ವೇದಾರ್ಥವನ್ನು ಚೆನ್ನಾಗಿ ಅರಿತಿರುವ ಆ ವರಾಹಮೂರ್ತಿಯು, ಕೊನೆಯು ಮತ್ತು ಬುಡವೂ ಅನುವಾಗಿರುವಂತಹ ದರ್ಭೆಗಳನ್ನೂ ಎಳ್ಳನ್ನೂ ಕೈಲಿ ತೆಗೆದುಕೊಂಡು, ಆ ಕೈಯನ್ನು ತನ್ನ ಮಂಡಿಯಮೇಲಿಟ್ಟು ಸವ್ಯದಿಂದ ಅವರಿಗೆ ಆಸನವನ್ನಿತ್ತನು.

೫೫. ಅದೇರೀತಿಯಾಗಿ ಜಾನುಸಂಸ್ಥ (ಮಂಡಿಯಮೇಲಿರುವ) ವಾದ ಕೈಯ್ಯಿಂದಲೇ ಆ ವರಾಹನು "ಆಯಂತು ನಃ ಪಿತರಃ" ಇತ್ಯಾದಿ ಮಂತ್ರವನ್ನು ಉಚ್ಚರಿಸುತ್ತಾ ಪಿತೃದೇವತೆಗಳನ್ನು ಆವಾಹಿಸಿದನು.

೫೬. ಮತ್ತು "ಅಪಹತಾಸುರಾಃ" ಎಂಬ ಮಂತ್ರವನ್ನು ಉಚ್ಚರಿಸುತ್ತಾ ಅಪಸವ್ಯದಿಂದ ರಕ್ಷಾವಿಧಿಯನ್ನು ನೆರವೇರಿಸಿ ಆಯಾ ಪಿತೃಗಳ ನಾಮಗೋತ್ರಗಳನ್ನುಚ್ಚರಿಸುತ್ತಾ ಅವರನ್ನು ಆವಾಹಿಸಿದನು.

೫೭. ಎಲೈ, "ಮನಸ್ಸಿನಂತೆ ವೇಗಶಾಲಿಗಳಾದ ಪಿತೃಗಳಿರಾ! ಬನ್ನಿರಿ" ಎಂಬರ್ಥವನ್ನು ಕೊಡುವ ಮಂತ್ರವನ್ನುಚ್ಚರಿಸುತ್ತಾ ಅವರನ್ನು ಆವಾಹಿಸಿದನಂತರ ಅವರಿಗೆ ಅರ್ಘ್ಯವನ್ನಿತ್ತನು.

ಯಾಸ್ತಿಷ್ಠಂತ್ಯಮೃತಾ ವಾಚೋ ಯನ್ಮೇತಿ ಚ ಪಿತುಃ ಪಿತುಃ ।
ಯನ್ಮೇ ಪಿತಾಮಹೇತ್ಯೇವಂ ದದಾವರ್ಘ್ಯಂ ಪಿತಾಮಹೇ ॥ ೫೮ ॥

ಯನ್ಮೇ ಪ್ರಪಿತಾಮಹೇತಿ ದದೌ ಚ ಪ್ರಪಿತಾಮಹೇ ।
ಕುಶಗಂಧತಿಲೋನ್ಮಿಶ್ರಂ ಸಪುಷ್ಪಮಪಸವ್ಯತಃ ॥ ೫೯ ॥

ತದ್ವನ್ಮಾತಾಮಹೇಭ್ಯಸ್ತು ವಿಧಿಂ ಚಕ್ರೇ ಜನಾರ್ದನಃ ।
ತಾನಭ್ಯರ್ಚ್ಯ ಭೂಯೋ ಗಂಧಾದ್ಯೈರ್ಧೂಪಂ ದತ್ವಾ ತು ಭಕ್ತಿತಃ ॥ ೬೦ ॥

ಆದಿತ್ಯಾ ವಸವೋ ರುದ್ರಾ ಇತ್ಯುಚ್ಚಾರ್ಯ ಜಗತ್ಪ್ರಭುಃ ।
ತತಶ್ಚಾನ್ನಂ ಸಮಾದಾಯ ಸರ್ಪಿಸ್ತಿಲಕುಶಾಕುಲಂ ॥ ೬೧ ॥

ವಿಧಾಯ ಪಾತ್ರೇ ತಚ್ಚೈವ ಪರ್ಯಪೃಚ್ಛತ್ತತೋ ಮುನೀನ್ ।
ಅಗ್ನೌ ಕರಿಷ್ಯ ಇತಿ ತೈಃ ಕುರುಷ್ವೇತಿ ಚ ಚೋದಿತಃ ॥ ೬೨ ॥

೫೮-೫೯. ಆ ವಾರಾಹನು, ದರ್ಭಾಗ್ರಗಳಿಂದಲೂ, ಗಂಧದಿಂದಲೂ, ತಿಲಗಳಿಂದಲೂ, ಪುಷ್ಪಗಳಿಂದಲೂ ಕೂಡಿರುವಂತಹ ಅರ್ಘ್ಯವನ್ನು ತೆಗೆದುಕೊಂಡು ಅಪಸವ್ಯದಿಂದ ಪಿತೃ, ಪಿತಾಮಹ, ಪ್ರಪಿತಾಮಹರನ್ನುದ್ದೇಶಿಸಿ, "ಯಾಸ್ತಿಷ್ಠಂತ್ಯಮೃತಾವಾಚೋ ಯನ್ಮೇಪಿತಃ" ಎಂದು ಪಿತೃವಿಗೂ, "ಯಾಸ್ತಿಷ್ಠಂತ್ಯಮೃತಾವಾಚಃ ಯನ್ಮೇ ಪಿತಾಮಹ" ಎಂದು ಪಿತಾಮಹನಿಗೂ, "ಯಾಸ್ತಿಷ್ಠಂತ್ಯಮೃತಾವಾಚಃ ಯನ್ಮೇ ಪ್ರಪಿತಾಮಹ" ಎಂದು ಪ್ರಪಿತಾಮಹನಿಗೂ ಅರ್ಘ್ಯವನ್ನಿತ್ತನು.

೬೦-೬೨. ಅದೇರೀತಿಯಾಗಿ ಆ ಜನಾರ್ದನನು, ಮಾತಾಮಹವರ್ಗಕ್ಕೂ ಅರ್ಘ್ಯವನ್ನಿತ್ತನು. ಅನಂತರ ಆದಿತ್ಯರಿಗೂ, ವಸುಗಳಿಗೂ, ರುದ್ರರಿಗೂ ಸಲ್ಲಲಿ ಎಂದು ಹೇಳುತ್ತಾ ಅವರೆಲ್ಲರನ್ನೂ ಮತ್ತೆ ಧೂಪದೀಪಾದಿಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿದನು. ಬಳಿಕ ತುಪ್ಪ, ಎಳ್ಳು, ದರ್ಭೆಯಚೂರು ಇವುಗಳು ಬೆರೆದಿರುವ ಅನ್ನವನ್ನು ಪಾತ್ರೆಯಲ್ಲಿ ತೆಗೆದಿಟ್ಟುಕೊಂಡು, ನಿಮಂತ್ರಿತರಾದ ಆ ಮುನಿಗಳನ್ನು ಕುರಿತು, "ಇದನ್ನು ಅಗ್ನಿಗೆ ಆಹುತಿಯಾಗಿ ಈಯುವೆನೆಂದು" ಅನುಮತಿಯನ್ನು ಕೊಡುವಂತೆ ಪ್ರಾರ್ಥಿಸಿದನು. ಆ ಮುನಿಗಳು ಅಗ್ನಿಗೆ ಆಹುತಿಯೀಯಲು ತಮ್ಮ ಒಪ್ಪಿಗೆಯನ್ನಿತ್ತನಂತರ

ಆಹುತಿತ್ರಿತಯಂ ದದ್ಯಾತ್ಸೋಮಾಯಾಗ್ನೇರ್ಯಮಾಯ ಚ ।
ಯೇ ಮಾಮಕೇತಿ ಚ ಜಪೇದ್ಯಜುಃಸಪ್ತಕಮುಚ್ಚ್ಯತಂ ॥ ೬೩ ॥

ಹುತಾವಶಿಷ್ಟಂ ಚ ದದೌ ನಾಮಗೋತ್ರಸಮನ್ವಿತಂ ।
ತ್ರಿರಾಹುತಿಕಮೇಕೈಕಂ ಪಿತರಂ ತು ಪ್ರತಿ ದ್ವಿಜಾಃ ॥ ೬೪ ॥

ಅತೋಽವಶಿಷ್ಟಮನ್ನಾದ್ಯಂ ಪಿಂಡಪಾತ್ರೇ ತು ನಿಕ್ಷಿಪೇತ್ ।
ತತೋಽನ್ನಂ ಸರಸಂ ಸ್ವಾದು ದದೌ ಪಾಯಸಪೂರ್ವಕಂ ॥ ೬೫ ॥

ಪ್ರತ್ಯಗ್ರಮೇಕದಾ ಸ್ವಿನ್ನಮಪರ್ಯುಷಿತಮುತ್ತಮಂ ।
ಅಲ್ಪಶಾಕಂ ಬಹುಫಲಂ ಷಡ್ರಸಮಮೃತೋಪಮಂ ॥ ೬೬ ॥

ಯದ್ಬ್ರಾಹ್ಮಣೇಷು ಪ್ರದದೌ ಪಿಂಡಪಾತ್ರೇ ಪಿತೄಂಸ್ತಥಾ ।
ವೇದಪೂರ್ವಂ ಪಿತೃಸ್ವನ್ನಮಾಜ್ಯಪ್ಲುತಂ ಮಧೂಕ್ಷಿತಂ ॥ ೬೭ ॥

---

೬೩. ಯೇಮಾಮಕ ಎಂಬ ಏಳು ಯಜುಸ್ಸುಗಳನ್ನುಚ್ಚರಿಸುತ್ತಾ ಸೋಮನಿಗೂ, ಅಗ್ನಿಗೂ, ಯಮನಿಗೂ ಮೂರು ಆಹುತಿಗಳನ್ನಿತ್ತನು.

೬೪. ಎಲೈ ಬ್ರಾಹ್ಮಣರಿರಾ! ಅನಂತರ ಆ ಹೋಮಾಂತ್ಯದಲ್ಲಿ ಉಳಿದ ಅನ್ನವನ್ನು ತೆಗೆದುಕೊಂಡು ಒಬ್ಬೊಬ್ಬ ಪಿತೃವಿನ ಹೆಸರನ್ನೂ ಗೋತ್ರವನ್ನು ಉಚ್ಚರಿಸುತ್ತಾ ಮೂರು ಮೂರುಬಾರಿ ಆಹುತಿಯನ್ನು ಒಬ್ಬೊಬ್ಬನಿಗೆ ಇತ್ತನು.

೬೫–೬೮. ಅನಂತರ ಉಳಿದ ಅನ್ನವನ್ನು ಪಿಂಡಗಳ ಜೊತೆಯಲ್ಲಿ ಸೇರಿಸಲು ಪಿಂಡಪಾತ್ರದಲ್ಲಿ ಇಟ್ಟನು. ಬಳಿಕ ರಸವತ್ತಾಗಿಯೂ, ಸಿಹಿಯಾಗಿಯೂ, ಆಗತಾನೇ ಕೆಳಗೆ ಇಳಿಸಿ ಹಬೆಯು ಬರುತ್ತಿರುವಂತಹುದೂ, ಬಹು ಹೊತ್ತು ಕಳೆದಿರುವುದಲ್ಲದುದೂ ಮತ್ತು ಕಾಯಿಪಲ್ಯಗಳು ಸ್ವಲ್ಪವಾಗಿಯೂ, ಹಣ್ಣುಗಳು ಹೆಚ್ಚಾಗಿಯೂ ಇರುವಂತಹದೂ ಆಗಿರುವ ಷಡ್ರಸೋಪೇತವಾದ ಅಮೃತಸದೃಶವಾದ ಭೋಜನವಸ್ತುಗಳನ್ನು ತೆಗೆದುಕೊಂಡು ಅದರೊಡನೆ ಬೇಕಾದಷ್ಟು ತುಪ್ಪವನ್ನೂ, ಮಧುವನ್ನೂ ಆ ವಿಶ್ವೇದೇವತೆಗಳಿಗೂ, ಪಿತೃಗಳಿಗೂ ಬಡಿಸಿ 'ಪೃಥಿವೀ ತೇ ಪಾತ್ರಂ' ಎಂಬ ಮಂತ್ರದಿಂದ ಅಭಿಮಂತ್ರಿಸಿ, ಮೊದಲು ವಿಶ್ವೇದೇವತೆಗಳಿಗೂ ಅನಂತರ ಪಿತೃಗಳಿಗೂ ದಾನಮಾಡಿದನು.

ಮಂತ್ರಿತಂ ಪೃಥಿವೀತ್ಯೇವಂ ಮಧುವಾತಾತ್ಯೃಚಂ ಜಗೌ ।
ಭುಂಜಾನೇಷು ತು ವಿಪ್ರೇಷು ಜಪನ್ನೈ ಮಂತ್ರಪಂಚಕಂ ॥ ೬೮ ॥

ಯತ್ತೇ ಪ್ರಕಾರಮಾರಭ್ಯ ನಾಧಿಕಂ ತೇ ತತೋ ಜಗೌ ।
ತ್ರಿಮಧು ತ್ರಿಸುಪರ್ಣಂ ಚ ಬೃಹದಾರಣ್ಯಕಂ ತಥಾ ॥ ೬೯ ॥

ಜಜಾಪ ವೈಷಾಂ ಜಾಪ್ಯಂ ತು ಸೂಕ್ತಂ ಸೌರಂ ಸಪೌರುಷಂ ।
ಭುಕ್ತವತ್ಸು ಚ ವಿಪ್ರೇಷು ಪೃಷ್ಟ್ವಾ ತೃಪ್ತಾಸ್ಥ ಇತ್ಯುತ ॥ ೭೦ ॥

ತೃಪ್ತಾಃ ಸ್ಮೇತಿ ಸಕೃತ್ತೋಯಂ ದದೌ ಮೌನವಿಮೋಚನಂ ।
ಪಿಂಡಪಾತ್ರಂ ಸಮಾದಾಯ ಚ್ಛಾಯಾಯೈ ಪ್ರದದೌ ತತಃ ॥ ೭೧ ॥

ಸಾ ತದನ್ನಂ ದ್ವಿಧಾ ಕೃತ್ವಾ ತ್ರಿಧೈಕೈಕಮಥಾಕರೋತ್ ।
ವಾರಾಹೋ ಭೂಮುಖೋಲ್ಲಿಖ್ಯ ಸಮಾಚ್ಛಾದ್ಯ ಕುಶೈರಪಿ ॥ ೭೨ ॥

ಬಳಿಕ 'ಮಧುವಾತಾ' ಎಂಬ ಮಂತ್ರವನ್ನು ಪಾರಾಯಣಮಾಡಿದನು. ಅನಂತರ ನಿಮಂತ್ರಿತರಾದವರು ಊಟಮಾಡುತ್ತಿರುವಾಗ 'ಯತ್ತೇ ಪ್ರಕಾರ' ಎಂಬೀಮೊದಲಾದ ಐದು ಮಂತ್ರಗಳನ್ನು ಜಪಿಸುತ್ತಾ–

೬೯–೭೦. 'ನಾಧಿಕಂ ತೇ' ಎಂಬ ಮಂತ್ರವನ್ನೂ, 'ಮಧುವಾತಾ' ಎಂಬ ಮೂರು ಮೂರು ಮಂತ್ರಗಳನ್ನೂ, ತ್ರಿಸುಪರ್ಣವನ್ನೂ, ಬೃಹದಾರಣ್ಯಕವನ್ನು ಸೂರ್ಯಸೂಕ್ತವನ್ನೂ, ಪುರುಷಸೂಕ್ತವನ್ನೂ ಅವರೆದುರಿಗೆ ಅಭಿಶ್ರವಣರೂಪವಾಗಿ ಪಾರಾಯಣಮಾಡಿದನು. ಆ ವಿಪ್ರರು ಊಟಮಾಡಿದನಂತರ 'ತೃಪ್ತಾಃಸ್ಥ' ನಿಮಗೆ ತೃಪ್ತಿಯಾಯಿತೇ ಎಂದು ಪ್ರಶ್ನಿಸಲು,

೭೧. ಅವರು 'ತೃಪ್ತಾಃ ಸ್ಮಃ' ತೃಪ್ತರಾದೆವು ಎಂಬುದಾಗಿ ಮೌನವನ್ನು ವರ್ಜಿಸಿ ಪ್ರತ್ಯುತ್ತರವಿತ್ತನಂತರ ಒಂದುಬಾರಿ ನೆಲದಮೇಲೆ ನೀರು ಬಿಟ್ಟನು. ಅನಂತರ ಪಿಂಡದ ಪಾತ್ರೆಯನ್ನು ತೆಗೆದು ತನ್ನ ಪತ್ನೀಸ್ವರೂಪಳಾದ ಛಾಯೆಯ ಕೈಗಿತ್ತನು.

೭೨–೭೪. ಆ ಛಾಯೆಯು ಆ ಅನ್ನವನ್ನು ಎರಡುಪಾಲುಮಾಡಿ ಒಂದೊಂದನ್ನು ಮತ್ತೆ ಮೂರು ಮೂರು ಪಾಲುಮಾಡಿ ಪಿಂಡ ಕಟ್ಟಿದಳು.

ದಕ್ಷಿಣಾಗ್ರಾನ್ಕುಶಾನ್ಕೃತ್ವಾ ತೇಷಾಮುಪರಿ ಚಾಸನಂ ।
ಸತಿಲೇಷು ಸಮೂಲೇಷು ಕುಶೇಷ್ವೇವ ತು ಸಂಶ್ರಯಃ ॥ ೭೩ ॥

ಗಂಧಪುಷ್ಪಾದಿಕಂ ಕೃತ್ವಾ ತತಃ ಪಿಂಡಂ ತು ಭಕ್ತಿತಃ ।
ಪೃಥಿವೀ ದಧೀರಿತ್ಯುಕ್ತ್ವಾ ತತಃ ಪಿಂಡಂ ಪ್ರದತ್ತವಾನ್ ॥ ೭೪ ॥

ಪಿತಾಮಹಾಃ ಪ್ರಪಿತಾಮಹಾಸ್ತಥೇತಿ ಚಾಂತರಿಕ್ಷತಃ ।
ಮಾತಾಮಹಾನಾಮಪ್ಯೇವಂ ದದೌ ಪಿಂಡಾನ್ಸ ಶೂಕರಃ ॥ ೭೫ ॥

ಪಿಂಡನಿರ್ವಾಪಣೋಚ್ಛಿಷ್ಟಮನ್ನಂ ಲೇಪಭುಜೇಷ್ವದಾತ್ ।
ಏತದ್ವಃ ಪಿತರಿತ್ಯುಕ್ತ್ವಾ ದದೌ ವಾಸಾಂಸಿ ಭಕ್ತಿತಃ ॥ ೭೬ ॥

ದ್ವ್ಯಂಗುಲಜಾನಿ ಶುಕ್ಲಾನಿ ಧೌತಾನ್ಯಭಿನವಾನಿ ಚ ।
ಗಂಧಪುಷ್ಪಾದಿಕಂ ದತ್ತ್ವಾ ಕೃತ್ವಾ ಚೈಷಾಂ ಪ್ರದಕ್ಷಿಣಾಂ ॥ ೭೭ ॥

ಅನಂತರ ಆ ವರಾಹಮೂರ್ತಿಯು ನೆಲವನ್ನು ಉಲ್ಲೇಖನಮಾಡಿ (ಗೀಚಿ) ದರ್ಭೆಗಳನ್ನು ದಕ್ಷಿಣಾಗ್ರವಾಗಿ ಹರಡಿ ಅವುಗಳ ಮೇಲೆ ಪಿಂಡಗಳಿಗೆ ಆಸನವನ್ನು ನಿರ್ದೇಶಿಸಿದನು. ಏಕೆಂದರೆ ಪಿಂಡಗಳನ್ನು ತಿಲಯುಕ್ತವೂ ಮೂಲಸಹಿತವೂ ಆದ ದರ್ಭೆಗಳಮೇಲೆ ಇಡಬೇಕು. ಆದುದರಿಂದ ಆರೀತಿಯಾಗಿ ಆ ಪಿಂಡಗಳ ಮೇಲೆ ಗಂಧಪುಷ್ಪಾದಿಗಳಿಂದ ಅಲಂಕರಿಸಿ ಭಕ್ತಿಪೂರ್ವಕವಾಗಿ ಪೃಥಿವೀ ದಧಿ ಎಂಬುದಾಗಿ ಮಂತ್ರವನ್ನುಚ್ಚರಿಸುತ್ತಾ ಪಿತೃವಿಗೆ ಪಿಂಡವನ್ನಿತ್ತನು.

೭೫. ಅನಂತರ ಆ ವಾರಾಹನು ಪಿತಾಮಹಪ್ರಪಿತಾಮಹರಿಗೂ ಮಾತಾಮಹವರ್ಗದವರಿಗೂ ಪಿಂಡಗಳನ್ನು ದಾನಮಾಡಿದನು.

೭೬-೭೭. ಪಿಂಡವನ್ನು ಕಟ್ಟಿದನಂತರ ಉಳಿದಿರುವ ಅಗುಳುಗಳನ್ನು ಲೇಪಭುಜನಿಗೆ ಕೊಟ್ಟು 'ಏತದ್ವಃ ಪಿತಃ' ಇತ್ಯಾದಿ ಮಂತ್ರಗಳನ್ನುಚ್ಚರಿಸುತ್ತಾ ಶುದ್ಧವಾದ ಒಗೆದ ಹೊಸಬಟ್ಟೆಗಳನ್ನು ಕೊಟ್ಟನು. ಅನಂತರ ಗಂಧಪುಷ್ಪಾದಿಗಳನ್ನು ಇತ್ತು ಅವುಗಳಿಗೆ ಪ್ರದಕ್ಷಿಣಾದಿಗಳನ್ನು ಮಾಡಿದನು.

ಆಚಮ್ಯಾಚಾಮಯೇದ್ವಿಪ್ರಾನ್ಸ್ವೈತ್ರಾನಾದೌ ತತಃ ಸುರಾನ್ ।
ತತಸ್ತ್ವಭ್ಯುಕ್ಷ್ಯ ತಾಂ ಭೂಮಿಂ ದತ್ತ್ವಾಪಃ ಸುಮನೋಽಕ್ಷತಾನ್ ॥ ೭೮ ॥

ಸತಿಲಾಂಬು ಪಿತೃಭ್ಯಾದೌ ದತ್ತ್ವಾ ದೇವೇಷು ಸಾಕ್ಷತಂ ।
ಅಕ್ಷಯ್ಯಂ ನಸ್ತ್ವಿತಿ ಪಿತೄನ್ಪ್ರೀಯತಾಮಿತಿ ದೇವತಾಃ ॥ ೭೯ ॥

ಪ್ರೀಣಯಿತ್ವಾ ಪರಾವೃತ್ಯ ತ್ರಿರ್ಜಪೇಚ್ಚಾಘಮರ್ಷಣಂ ।
ತತೋ ನಿವೃತ್ಯ ತು ಜಪೇದ್ಯನ್ಮೇ ನಾಮ ಇತೀರಯನ್ ॥ ೮೦ ॥

ಗೃಹಾನ್ನಃ ಪಿತರೋ ದತ್ತ ಧನಧಾನ್ಯಪ್ರಪೂರಿತಾನ್ ।
ಅರ್ಘ್ಯಪಾತ್ರಾಣಿ ಪಿಂಡಾನಾಮಂತರೇ ಸ ಪವಿತ್ರಕಾನ್ ॥ ೮೧ ॥

೭೮-೭೯. ಅನಂತರ ತಾನು ಆಚಮನಮಾಡಿ ಪಿತೃಸ್ಥಾನದಲ್ಲಿಯೂ ವಿಶ್ವೇದೇವಸ್ಥಾನದಲ್ಲಿಯೂ ನಿಮಂತ್ರಿತರಾದವರನ್ನು ಆಚಮನಮಾಡಿಸಿ ಅನಂತರ ಆ ಭೂಮಿಯನ್ನು ಚೆನ್ನಾಗಿ ನೀರುಚಿಮುಕಿಸಿ ಶುದ್ಧಿಗೊಳಿಸಿ, ಹೂವು ಅಕ್ಷತೆಗಳೊಡನೆ ನೀರನ್ನಿತ್ತು ಮೊದಲು ಪಿತೃಗಳಿಗೆ ತಿಲಸಹಿತವಾದ ನೀರನ್ನು ಕೈಗೆ ಇತ್ತು ನಾವಿತ್ತ ಈ ಜಲಾದಿದ್ರವ್ಯವು ಅಕ್ಷಯವಾಗಲೆಂದೂ, ಅನಂತರ ವಿಶ್ವೇದೇವತೆಗಳಿಗೆ ಅಕ್ಷತಸಹಿತವಾದ ನೀರನ್ನಿತ್ತು ನೀವು ಸುಪ್ರೀತರಾಗಿರಿ ಎಂತಲೂ ಪ್ರಾರ್ಥಿಸಿದನು.

೮೦. ಈ ರೀತಿಯಾಗಿ ಅವರಿಗೆ ತನ್ನಲ್ಲಿ ಪ್ರೀತಿಯುಂಟಾಗುವಂತೆ ಪ್ರಾರ್ಥಿಸಿದನಂತರ ಹಿಂದಿರುಗಿ ಮೂರುಬಾರಿ ಅಘಮರ್ಷಣಸೂಕ್ತವನ್ನು ಜಪಿಸಿದನು. ಆದಾದಮೇಲೆ 'ಯನ್ಮೇ ನಾಮ' ಎಂದು ಮೊದಲಾದುವುಗಳನ್ನುಚ್ಚರಿಸುತ್ತಾ-

೮೧. ಪಿಂಡಗಳ ನಡುವೆ ಪವಿತ್ರಗಳೊಡನಿರುವ ಅರ್ಘ್ಯಪಾತ್ರಗಳನ್ನಿಟ್ಟು ಎಲೈ ಪಿತೃಗಳಿರಾ! ನಮಗೆ ಧನಧಾನ್ಯಗಳು ತುಂಬಿರುವ ಮನೆಗಳನ್ನು ಕೊಡಿರಿ ಎಂಬರ್ಥಬರುವ 'ಗೃಹಾನ್ನಃ ಪಿತರೋದತ್ತ ಊರ್ಜಂ ವಹಂತೀಃ' ಎಂಬ ಮಂತ್ರಗಳನ್ನು ಜಪಿಸುತ್ತಾ ಕೋಕಾನದಿಯ ನೀರನ್ನು ಆ ಪಿಂಡಗಳ ಸುತ್ತಲೂ ಚೆಲ್ಲಿದನು.

ನಿಕ್ಷಿಪ್ಯೋರ್ಜಂ ವಹಂತೀತಿ ಕೋಕಾತೋಯಮುಖೋಽಜಪತ್ ।
ಹಿಮಕ್ಷೀರಂ ಮಧುತಿಲಾನ್ಪಿತ್ರೂಣಾಂ ತರ್ಪಣಂ ದದೌ ॥ ೮೨ ॥

ಸ್ವಸ್ತೀತ್ಯುಕ್ತೇ ಪೈತೃಕೈಸ್ತು ಸೋಽರಾಹ್ನೇ ಪ್ರಾವತರ್ಪಯನ್ ।
ರಜತಂ ದಕ್ಷಿಣಾಂ ದತ್ತ್ವಾ ವಿಪ್ರಾನ್ದೇವೋ ಗದಾಧರಃ ॥ ೮೩ ॥

ಸಂವಿಭಾಗಂ ಮನುಷ್ಯೇಭ್ಯೋ ದದೌ ಸ್ವದಿತಿ ಚಾಬ್ರುವನ್ ।
ಕಚ್ಚಿತ್ಸಂಪನ್ನಮಿತ್ಯುಕ್ತ್ವಾ ಪ್ರತ್ಯುಕ್ತಸ್ತೈರ್ದ್ವಿಜೋತ್ತಮಾಃ ॥ ೮೪ ॥

ಅಭಿರಮ್ಯತಾಮಿತ್ಯುವಾಚ ಪ್ರೋಚುಸ್ತೇಽಭಿರತಾಃ ಸ್ಮ ವೈ ।
ಶಿಷ್ಟಮನ್ನಂ ಚ ಪಪ್ರಚ್ಛ ತೈರಿಷ್ಟೈಃ ಸಹ ಚೋದಿತಃ ॥ ೮೫ ॥

ಪಾಣಾವಾದಾಯ ತಾನ್ವಿಪ್ರಾನ್ಸ್ಕಂದನುಗತಸ್ತದಾ ।
ವಾಜೇ ವಾಜೇ ಇತಿ ಪಠನ್ಬಹಿರ್ವೇದಿ ವಿನಿರ್ಗತಃ ॥ ೮೬ ॥

೮೨-೮೩. ಅನಂತರ ತಿಲೋದಕವನ್ನೂ ಮಧುವನ್ನೂ ತಿಲಗಳನ್ನೂ ತೆಗೆದುಕೊಂಡು ಪಿತೃಗಳಿಗೆ ತರ್ಪಣವಿತ್ತನು. ಬಳಿಕ ಪಿತೃಗಳು ಸ್ವಸ್ತಿ ಎಂದನಂತರ ಆ ಗದಾಧರನಾದ ಪ್ರಭುವು ರಜತ (ಬೆಳ್ಳಿ) ವನ್ನು ದಕ್ಷಿಣೆಯಾಗಿ ಬ್ರಾಹ್ಮಣರಿಗೆ ಇತ್ತನು.

೮೪. ಅನಂತರ 'ಸ್ವದ್' ಎಂಬುದಾಗಿ ಹೇಳುತ್ತಾ ಮನುಷ್ಯರಿಗೆ ಸಂವಿಭಾಗವನ್ನಿತ್ತನು. ಆಗ ನಿಮಂತ್ರಿತರಾದ ಆ ದ್ವಿಜರು, 'ಕಚ್ಚಿತ್ಸಂಪನ್ನಂ' 'ಎಲ್ಲವೂ ನೆರವೇರಿತೇ' ಎಂದು ಪ್ರಶ್ನಿಸಲು,

೮೫. ಈ ವರಾಹಮೂರ್ತಿಯು, 'ಇನ್ನು ತಾವು ವಿಶ್ರಮಿಸಿಕೊಳ್ಳೋಣವಾಗಲಿ' ಎಂದು ಹೇಳಿದನು. ಅವರೂ ಅದೇರೀತಿ 'ಅಭಿರತಾಃಸ್ಮವೈ' 'ವಿಶ್ರಮಿಸಿಕೊಳ್ಳುವೆವು' ಎಂದು ಉತ್ತರವಿತ್ತರು. ಅನಂತರ ಅನ್ನಶೇಷವನ್ನು ಏನುಮಾಡಬೇಕೆಂದು ಪ್ರಾರ್ಥಿಸಲು, ನಿನ್ನ ಇಷ್ಟ ಬಂಧುರಾದವರೊಡನೆ ಊಟ ಮಾಡು ಎಂದು ಅವರಿಂದ ಅನುಮತಿಪಡೆದನು.

೮೬. ಅನಂತರ ಆ ಬ್ರಾಹ್ಮಣರ ಕೈಯನ್ನು ಹಿಡಿದುಕೊಂಡು 'ವಾಜೇ ವಾಜೇ' ಎಂಬುದಾಗಿ ಮಂತ್ರವನ್ನುಚ್ಚರಿಸುತ್ತಾ ವೇದಿಯಿಂದಾಚೆ ಹೊರಗೆ ಬಂದು ಸ್ವಲ್ಪದೂರ ಅನುಗಮನ ಮಾಡಿದನು.

ಕೋಟಿತೀರ್ಥಜಲೇನಾಸಾವಪಸವ್ಯಂ ಸಮುತ್ಕ್ಷಿಪನ್ ।
ಅಲಗ್ನಾನ್ವಿಪುಲಾನ್ವಾಲಾನ್ಪ್ರಾರ್ಥಯಾಮಾಸ ಚಾಶಿಷಂ　　　　॥ ೮೭ ॥

ದಾತಾರೋ ನೋಽಭಿವರ್ಧಂತಾಂ ತೈಸ್ತಥೇತಿ ಸಮೀರಿತಃ ।
ಪ್ರದಕ್ಷಿಣಮುಪಾವೃತ್ಯ ಕೃತ್ವಾ ಪಾದಾಭಿವಾದನಂ　　　　॥ ೮೮ ॥

ಆಸನಾನಿ ದದೌ ಚೈಷಾಂ ಛಾದಯಾಮಾಸ ಶೂಕರಃ ।
ವಿಶ್ರಾಮ್ಯತಾಂ ಪ್ರವಿಶ್ಯಾಥ ಪಿಂಡಂ ಜಗ್ರಾಹ ಮಧ್ಯಮಂ　　　　॥ ೮೯ ॥

ಛಾಯಾಮಯೀಂ ಮಹೀಂ ಪತ್ನೀಂ ತಸ್ಮೈ ಪಿಂಡಮದಾತ್ಪ್ರಭುಃ ।
ಆಧತ್ತ ಪಿತರೋ ಗರ್ಭಮಿತ್ಯುಕ್ತ್ವಾ ಸಾಪಿ ರೂಪಿಣೀ　　　　॥ ೯೦ ॥

ಪಿಂಡಂ ಗೃಹೀತ್ವಾ ವಿಪ್ರಾಣಾಂ ಚಕ್ರೇ ಪಾದಾಭಿವಂದನಂ ।
ವಿಸರ್ಜನಂ ಪಿತೄಣಾಂ ಸ ಕರ್ತುಕಾಮಶ್ಚ ಶೂಕರಃ　　　　॥ ೯೧ ॥

೮೭-೮೯. ಅನಂತರ ವರಾಹನು, ಒಂದಕ್ಕೊಂದು ಸೇರದೆ ವಿಪುಲವಾಗಿ ಬೆಳೆದಿದ್ದ ತನ್ನ ಕೂದಲುಗಳಮೇಲೆ ಕೋಟಿತೀರ್ಥದ ನೀರಿನಿಂದ ಅಪಸವ್ಯವಾಗಿ ಪ್ರೋಕ್ಷಣೆಮಾಡಿಕೊಂಡು, 'ದಾತಾರೋ ನೋಽಭಿವರ್ಧಂತಾಂ' ನಮ್ಮ ವಂಶದಲ್ಲಿ ದಾತೃಗಳು ಹೆಚ್ಚಲಿ ಎಂದು ಆಶೀರ್ವಾದಮಾಡುವಂತೆ ಪ್ರಾರ್ಥಿಸಿ ಅವರಿಂದ ಅದೇರೀತಿ ಆಶೀರ್ವಾದಪಡೆದು, ವಿಪ್ರರಿಗೆ ಪ್ರದಕ್ಷಿಣೆಮಾಡಿ, ಅನಂತರ ಕಾಲುಗಳಿಗೆ ನಮಸ್ಕರಿಸಿದನು. ಅನಂತರ ವಿಪ್ರರು ವಿಶ್ರಮಿಸಿಕೊಳ್ಳಲು ಅವರಿಗೆ ಆಸನಗಳನ್ನಿತ್ತು ಬಳಿಕ ಒಳಗೆ ಬಂದು ನಡುವಣಪಿಂಡವನ್ನು ಕೈಗೆ ತೆಗೆದುಕೊಂಡನು.

೯೦. ಅನಂತರ ಪ್ರಭುವು 'ಎಲೈ! ಪಿತೃಗಳೇ ಇವಳಿಗೆ| ಗರ್ಭವುಂಟಾಗುವಂತೆ ಆಶೀರ್ವದಿಸಿರಿ' ಎಂಬ ಮಂತ್ರವನ್ನುಚ್ಚರಿಸಿ, ತನ್ನ ಪತ್ನಿಯಂತೆ ಭಾವಿಸಿದ್ದ ತನ್ನ ನೆರಳುಬಿದ್ದಿದ್ದ ಭೂಮಿಗೆ ಆ ಮಧ್ಯಮಪಿಂಡವನ್ನಿತ್ತನು.

೯೧. ಆ ಛಾಯಾಮಯಿಯಾದ ಭೂಮಿಯು ಪಿಂಡವನ್ನು ತೆಗೆದುಕೊಂಡನಂತರ ಪಿತೃಗಳಿಗೆ ನಮಸ್ಕರಿಸಿದಳು. ಅನಂತರ ವರಾಹಮೂರ್ತಿಯು ಪಿತೃಗಳನ್ನು ವಿಸರ್ಜಿಸಬೇಕೆಂದು ಮನಸ್ಸುಮಾಡಿದನು.

ಕೋಕಾ ಚ ಪಿತರಶ್ಚೈವ ಪ್ರೋಚುಃ ಸ್ವಾರ್ಥಕರಂ ವಚಃ ।
ಶಪ್ತಾಶ್ಚ ಭಗವನ್ಪೂರ್ವಂ ದಿವಸ್ಥಾ ಹಿಮಭಾನುನಾ ॥ ೯೨ ॥

ಯೋಗಭ್ರಷ್ಟಾ ಭವಿಷ್ಯಧ್ವಂ ಸರ್ವ ಏವ ದಿವಶ್ಚ್ಯುತಾಃ ।
ತದೇವಂ ಭವತಾ ತ್ರಾತಾಃ ಪ್ರವಿಶಂತೋ ರಸಾತಲಂ ॥ ೯೩ ॥

ಯೋಗಭ್ರಷ್ಟಾಂಶ್ಚ ವಿಶ್ವೇಶಾಸ್ತತ್ಯಜುರ್ಯೋಗರಕ್ಷಿಣಃ ।
ತತ್ತೇ ಭೂಯೋಽಭಿರಕ್ಷಂತು ವಿಶ್ವೇ ದೇವಾ ಹಿ ನಃ ಸದಾ ॥ ೯೪ ॥

ಸ್ವರ್ಗಂ ಯಾಸ್ಯಾಮಶ್ಚ ವಿಭೋ ಪ್ರಸಾದಾತ್ತವ ಶೂಕರ ।
ಸೋಮೋಽಧಿದೇವೋಽಸ್ಮಾಕಂ ಚ ಭವತ್ವಚ್ಯುತ ಯೋಗಧೃಕ್ ॥ ೯೫ ॥

---

೯೨. ಅಷ್ಟರಲ್ಲಿ ಕೋಕಾನದಿಯೂ, ಪಿತೃಗಳೂ, ತಮ್ಮ ಉದ್ದೇಶ ಸಾಧನೆಗಾಗಿ ಆತನನ್ನು ಇಂತೆಂದರು, ಹೇ ಭಗವನ್, ನಾವು ಹಿಂದೆ ಸ್ವರ್ಗದಲ್ಲಿದ್ದಾಗ ಚಂದ್ರನಿಂದ ಶಾಪಕ್ಕೆ ಗುರಿಯಾದೆವು.

೯೩. ' ನೀವೆಲ್ಲರೂ ಯೋಗಭ್ರಷ್ಟರಾಗಿ ಸ್ವರ್ಗದಿಂದ ಕೆಳಕ್ಕೆ ಬೀಳಿರಿ " ಎಂಬುದಾಗಿ ಆತನಿತ್ತ ಶಾಪದಿಂದ ನಾವು ಕೆಳಗಿಳಿದೆವು ಮತ್ತು ರಸಾತಲವನ್ನು ಸೇರಿಬಿಡುತ್ತಿದ್ದ ನಮ್ಮನ್ನು ನೀನು ಉದ್ಧಾರಮಾಡಿದೆ.

೯೪. ನಾವು ಯೋಗಭ್ರಷ್ಟರಾದುದನ್ನು ಕಂಡು ವಿಶ್ವೇದೇವತೆಗಳು ನಮ್ಮನ್ನು ಕೈಬಿಟ್ಟರು. ಆದುದರಿಂದ ಯೋಗಬಲದಿಂದ ನಮ್ಮನ್ನು ಸಂರಕ್ಷಿಸುತ್ತಿದ್ದ ಆ ವಿಶ್ವೇದೇವತೆಗಳು ಮರಳಿ ನಮ್ಮನ್ನು ಎಂದೆಂದಿಗೂ ಕಾಪಾಡುವಂತೆ ಆಗಲಿ.

೯೫. ಎಲೈ ದಿವ್ಯವರಾಹಮೂರ್ತಿಯೇ! ನಿನ್ನ ಅನುಗ್ರಹದಿಂದ ನಾವು ಸ್ವರ್ಗಕ್ಕೆ ಹೋಗುವಂತೆ ಆಗಲಿ. ಮತ್ತು ಯೋಗಧಾರಿಯಾದ ಸೋಮನು (ಚಂದ್ರ) ನಮಗೆ ಅಧಿದೇವತೆಯಾಗಿರಲಿ. (ಒಡೆಯ)

ಯೋಗಾಧಾರಸ್ತಥಾ ಸೋಮಸ್ತ್ರಾಯತೇ ಸ ಕದಾಚನ ।
ದಿವಿ ಭೂಮೌ ಸದಾ ವಾಸೋ ಭವತ್ವಸ್ಮಾಸು ಯೋಗತಃ ॥ ೯೬ ॥

ಅಂತರಿಕ್ಷೇ ಚ ಕೇಷಾಂಚಿನ್ಮಾಸಂ ಪುಷ್ಟಿಸ್ತಥಾಸ್ತು ನಃ ।
ಊರ್ಜಾ ಚೇಯಂ ಹಿ ನಃ ಪತ್ನೀ ಸ್ವಧಾನಾಮ್ನಾ ತು ವಿಶ್ರುತಾ ॥ ೯೭ ॥

ಭವತ್ವೇಷೈವ ಯೋಗಾಢ್ಯಾ ಯೋಗಮಾತಾ ಚ ಖೇಚರೀ ।
ಇತ್ಯೇವಮುಕ್ತಃ ಪಿತೃಭಿರ್ವಾರಾಹೋ ಭೂತಭಾವನಃ ॥ ೯೮ ॥

ಪ್ರೋವಾಚಾಥ ಪಿತೄನ್ವಿಷ್ಣುಸ್ತಾಂ ಚ ಕೋಕಾಂ ಮಹಾನದೀಂ ।
ಯದುಕ್ತಂ ತು ಭವದ್ಭಿರ್ಮೇ ಸರ್ವಮೇತದ್ಭವಿಷ್ಯತಿ ॥ ೯೯ ॥

ಯಮೋಽಧಿದೇವೋ ಭವತಾಂ ಸೋಮಃ ಸ್ವಾಧ್ಯಾಯ ಈರಿತಃ ।
ಅಧಿಯಜ್ಞಸ್ತಥೈವಾಗ್ನಿರ್ಭವತಾಂ ಕಲ್ಪನಾ ತ್ವಿಯಂ ॥ ೧೦೦ ॥

---

೯೬. ಯೋಗಕ್ಕೆ ಆಧಾರವೆನಿಸಿದ ಸೋಮನು ನಮ್ಮನ್ನು ಎಂದೆಂದಿಗೂ ಕಾಪಾಡುವಂತೆ ಆಗಲಿ. ನಮಗೂ ಕೂಡ ಯೋಗಮಹಿಮೆಯಿಂದ ಸ್ವರ್ಗದಲ್ಲಿಯೂ ಭೂಮಿಯಲ್ಲಿಯೂ ವಾಸವು ದೊರೆಯುವಂತೆ ಆಗಲಿ.

೯೭. ಮತ್ತು ಅಂತರಿಕ್ಷದಲ್ಲಿ (ಸ್ವರ್ಗದಲ್ಲಿ) ಇರುವಂತಹ ನಮ್ಮಲ್ಲಿಯ ಕೆಲವರಿಗೆ ಒಂದು ತಿಂಗಳು ತೃಪ್ತಿಯುಂಟಾಗುವಂತೆ ಆಗಲಿ. ಈ ಊರ್ಜೆಯೆಂಬುವಳು ಸ್ವಧಾ ಎಂಬ ಹೆಸರಿನಿಂದ ಪ್ರಖ್ಯಾತಳಾಗಿ ನಮಗೆ ಪತ್ನಿಯಾಗಲಿ.

೯೮. ಈ ಖೇಚರಿಯೂ ಸಹ ಯೋಗವನ್ನು ಬಲ್ಲವಳು. ಯೋಗಮಾತೆಯೂ ಆಗಲಿ ಎಂದು ಪ್ರಾರ್ಥಿಸಿದರು. ಈರೀತಿಯಾಗಿ ಪಿತೃಗಳಿಂದ ಪ್ರಾರ್ಥಿಸಲ್ಪಟ್ಟ ಭೂತಭಾವನನಾದ ವರಾಹನು ಅವರನ್ನೂ ಕೋಕೆಯನ್ನೂ ಕುರಿತು ಈರೀತಿ ಹೇಳಿದನು.

೯೯. ನೀವು ನನ್ನನ್ನು ಕುರಿತು ಈಗ ಏನು ಪ್ರಾರ್ಥಿಸಿದರೋ ಅದೆಲ್ಲವೂ ಅಂತೆಯೇ ಆಗುವುದು.

೧೦೦. ನಿಮಗೆ ಯಮನು ಅಧಿದೇವನಾಗಲಿ. ಸೋಮನು ಸ್ವಾಧ್ಯಾಯ (ಜಪಾದಿ) ವಾಗಲಿ. ಅಗ್ನಿಯು ಅಧಿಯಜ್ಞನಾಗಲಿ.

ಅಗ್ನಿರ್ವಾಯುಶ್ಚ ಸೂರ್ಯಶ್ಚ ಸ್ಥಾನಂ ಹಿ ಭವತಾಮಿತಿ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಭವತಾಮಧಿಪೂರುಷಾಃ ॥ ೧೦೧ ॥

ಆದಿತ್ಯಾ ವಸವೋ ರುದ್ರಾ ಭವತಾಂ ಮೂರ್ತಯಸ್ತ್ವಿಮಾಃ ।
ಯೋಗಿನೋ ಯೋಗದೇಹಾಶ್ಚ ಯೋಗಧಾರಾಶ್ಚ ಸುವ್ರತಾಃ ॥ ೧೦೨ ॥

ಕಾಮತೋ ವಿಚರಿಷ್ಯಧ್ವಂ ಫಲದಾಃ ಸರ್ವಜಂತುಷು ।
ಸ್ವರ್ಗಸ್ಥಾನ್ನರಕಸ್ಥಾಂಶ್ಚ ಭೂಮಿಸ್ಥಾಂಶ್ಚ ಚರಾಚರಾನ್ ॥ ೧೦೩ ॥

ನಿಜಯೋಗಬಲೇನೈವಾಪ್ಯಾಯಯಿಷ್ಯಧ್ವಮುತ್ತಮಾಃ ।
ಇಯಮೂರ್ಜಾ ಶಶಿಸುತಾ ಕೀಲಾಲಮಧುವಿಗ್ರಹಾ ॥ ೧೦೪ ॥

ಭವಿಷ್ಯತಿ ಮಹಾಭಾಗಾ ದಕ್ಷಸ್ಯ ದುಹಿತಾ ಸ್ವಧಾ ।
ತತ್ರೇಯಂ ಭವತಾಂ ಪತ್ನೀ ಭವಿಷ್ಯತಿ ವರಾನನಾ ॥ ೧೦೫ ॥

---

೧೦೧. ಮತ್ತು ಅಗ್ನಿಯೂ ವಾಯುವೂ ಸೂರ್ಯನೂ ನಿಮಗೆ ಸ್ಥಾನಗಳಾಗಿರಲಿ. ಬ್ರಹ್ಮನೂ ವಿಷ್ಣುವೂ ರುದ್ರನೂ ನಿಮಗೆ ಅಧಿಪುರುಷರಾಗಲಿ.

೧೦೨. ಯೋಗಿಗಳೂ, ಯೋಗದೇಹವುಳ್ಳವರೂ, ಯೋಗಕ್ಕೆ ನೆಲೆಯೆನಿಸಿದವರೂ ಆದ ಈ ವಸುರುದ್ರಾದಿತ್ಯರು ನಿಮ್ಮ ಮೂರ್ತಿಗಳಾಗಲಿ (ಸ್ವರೂಪ).

೧೦೩. ನೀವು ಸಕಲಪ್ರಾಣಿಗಳ ಇಷ್ಟಾರ್ಥವನ್ನು ನೆರವೇರಿಸುತ್ತಾ ನಿಮ್ಮಿಷ್ಟಬಂದಂತೆ ಸಂಚರಿಸುತ್ತಿರಿ. ಎಲೈ ಶ್ರೇಷ್ಠರಿರಾ! ನಿಮ್ಮ ಯೋಗಶಕ್ತಿಯಿಂದಲೇ, ಸ್ವರ್ಗ, ನರಕ, ಭೂಮಿಗಳಲ್ಲಿರತಕ್ಕ ಚರಾಚರವಸ್ತುಗಳನ್ನು ಹರ್ಷಗೊಳಿಸಿರಿ.

೧೦೪-೧೦೫. ನೀರಿನಂತೆಯೂ ಜೇನುತುಪ್ಪದಂತೆಯೂ ಶುದ್ಧವಾದ ಮೈಬಣ್ಣವುಳ್ಳ ಈ ಊರ್ಜೆಯೆಂಬ ಸೋಮಪುತ್ರಿಯು ದಕ್ಷಬ್ರಹ್ಮನ ಮಗಳಾದ ಸ್ವಧಾ ಎಂಬವಳಾಗಿ ಅವತರಿಸುವಳು. ಆಗ ಈ ಶುಭಾನನೆಯು ನಿಮಗೆ ಪತ್ನಿಯಾಗುವಳು.

ಕೋಕಾನದೀತಿ ವಿಖ್ಯಾತಾ ಗಿರಿರಾಜಸಮಾಶ್ರಿತಾ ।
ತೀರ್ಥಕೋಟಿಮಹಾಪುಣ್ಯಾ ಮದ್ರೂಪಪರಿಪಾಲಿತಾ ॥ ೧೦೬ ॥

ಅಸ್ಯಾಮದ್ಯ ಪ್ರಭೃತಿ ವೈ ನಿವತ್ಸ್ಯಾಮ್ಯಘನಾಶಕೃತ್ ।
ವರಾಹದರ್ಶನಂ ಪುಣ್ಯಂ ಪೂಜನಂ ಭುಕ್ತಿಮುಕ್ತಿದಂ ॥ ೧೦೭ ॥

ಕೋಕಾಸಲಿಲಪಾನಂ ಚ ಮಹಾಪಾತಕನಾಶನಂ ।
ತೀರ್ಥೇಷ್ವಾಪ್ಲವನಂ ಪುಣ್ಯಮುಪವಾಸಶ್ಚ ಸ್ವರ್ಗದಃ ॥ ೧೦೮ ॥

ದಾನಮಕ್ಷಯ್ಯಮುದಿತಂ ಜನ್ಮಮೃತ್ಯುಜರಾಪಹಂ ।
ಮಾಘೇ ಮಾಸ್ಯಸಿತೇ ಪಕ್ಷೇ ಭವದ್ಭಿರುಡುಪಕ್ಷಯೇ ॥ ೧೦೯ ॥

---

೧೦೬. ಹಿಮವತ್ಪರ್ವತದಲ್ಲಿ ಹುಟ್ಟಿ ಹರಿಯುತ್ತಾ, ನನ್ನಿಂದ ಕಾಪಾಡಲ್ಪಟ್ಟ ಕೋಕಾ ಎಂಬ ಪ್ರಖ್ಯಾತವಾದ ಈ ನದಿಯು, ಕೋಟಿತೀರ್ಥಗಳಿಗೆ ಮಿಗಿಲಾದ ಪುಣ್ಯಾತಿಶಯವುಳ್ಳದ್ದಾಗುವುದು.

೧೦೭. ನಾನು ಇಂದಿನಿಂದ ಈ ಕೋಕಾನದಿಯಲ್ಲಿ ನೆಲೆಸಿ ಪಾಪವನ್ನು ಪರಿಹರಿಸುತ್ತಿರುವೆನು. ಈ ವರಾಹವನ್ನು ಸಂದರ್ಶಿಸಿದರಾಗಲೀ, ಪೂಜೆ ಮಾಡಿದರಾಗಲೀ, ಸಕಲಭೋಗಗಳಿಗೂ, ಮೋಕ್ಷಕ್ಕೂ ಕಾರಣವಾದ ಪುಣ್ಯವುಂಟಾಗುವುದು.

೧೦೮. ಈ ಕೋಕಾನದಿಯ ನೀರನ್ನು ಕುಡಿದರೆ ಮಹಾಪಾತಕಗಳನ್ನೂ ನಿವಾರಿಸುವುದು. ಇದರ ತೀರ್ಥಗಳಲ್ಲಿ ಸ್ನಾನಮಾಡಲು ಪುಣ್ಯವುಂಟಾಗುವುದು. ಉಪವಾಸಮಾಡಿದರೆ ಸ್ವರ್ಗವು ಲಭಿಸುವುದು.

೧೦೯. ಈ ತೀರ್ಥದಲ್ಲಿ ಮಾಡಿದ ದಾನವು ಅಕ್ಷಯ್ಯ (ನಾಶರಹಿತವಾಗಿ ನಿಲ್ಲುವುದು.) ವೆನಿಸುವುದು. ಮತ್ತು 'ಜನ್ಮ, ಜರಾ, ಮೃತ್ಯುಗಳು ಒದಗದಂತೆ ನಿವಾರಿಸುವುದು. ಮಾಘಮಾಸದಲ್ಲಿ, ಕೃಷ್ಣಪಕ್ಷದಲ್ಲಿ ಚಂದ್ರನು ಕ್ಷಯಿಸುತ್ತಾ ಬರುವಾಗ

ಕೋಕಾಮುಖಮುಪಾಗಮ್ಯ ಸ್ಥಾತವ್ಯಂ ದಿನಪಂಚಕಂ ।
ತಸ್ಮಿನ್ಕಾಲೇ ತು ಯಃ ಶ್ರಾದ್ಧಂ ಪಿತೄಣಾಂ ನಿರ್ವಪಿಷ್ಯತಿ ॥ ೧೧೦ ॥

ಪ್ರಾಗುಕ್ತಫಲಭಾಗೀ ಸ ಭವಿಷ್ಯತಿ ನ ಸಂಶಯಃ ।
ಏಕಾದಶೀಂ ದ್ವಾದಶೀಂ ಚ ಸ್ಥೇಯಮತ್ರ ಮಯಾ ಸದಾ ॥ ೧೧೧ ॥

ಯಸ್ತತ್ರೋಪವಸೇದ್ಧೀಮಾನ್ಸ ಪ್ರಾಗುಕ್ತಫಲಂ ಲಭೇತ್ ।
ತದ್ವ್ರಜಧ್ವಂ ಮಹಾಭಾಗಾಃ ಸ್ಥಾನಮಿಷ್ಟಂ ಯಥೇಷ್ಟತಃ ॥ ೧೧೨ ॥

ಅಹಮಪ್ಯತ್ರ ವತ್ಸ್ಯಾಮಿತ್ಯುಕ್ತ್ವಾ ಸೋಽಂತರಧೀಯತ ।
ಗತೇ ವರಾಹೇ ಪಿತರಃ ಕೋಕಾಮಾಮಂತ್ರ್ಯ ತೇ ಯಯುಃ ॥ ೧೧೩ ॥

ಕೋಕಾಪಿ ತೀರ್ಥಸಹಿತಾ ಸಂಸ್ಥಿತಾ ಗಿರಿರಾಜನಿ ।
ಛಾಯಾ ಮಹೀಮಯೀ ಕ್ರೋಡೀ ಪಿಂಡಪ್ರಾಶನಬೃಂಹಿತಾ ॥ ೧೧೪ ॥

---

೧೧೦. ನೀವು ಈ ಕೋಕಾಮುಖಕ್ಕೆ ಬಂದು ಐದು ದಿನಗಳು (ಏಕಾದಶಿಯಿಂದ ಅಮಾವಾಸ್ಯೆ ಪೂರ್ತಿ) ಇಲ್ಲಿರಬೇಕು. ಆ ಸಮಯದಲ್ಲಿ ಯಾವನು ಪಿತೃಗಳಿಗೆ ಶ್ರಾದ್ಧವನ್ನು ಮಾಡುವನೋ-

೧೧೧. ಅವನು ಹಿಂದೆ ಹೇಳಿದ ಫಲಕ್ಕೆ ಭಾಗಿಯಾಗುವನು. ಏಕಾದಶಿ ಮತ್ತು ದ್ವಾದಶೀ ದಿನಗಳಲ್ಲಿ ನನ್ನೊಡನೆ ಇರಬೇಕು.

೧೧೨. ಯಾವನು ಆಗ ಅಲ್ಲಿ ಉಪವಾಸಮಾಡುವನೋ ಅವನು ಹಿಂದೆ ಹೇಳಿದ ಫಲವನ್ನೇ ಹೊಂದುವನು. ಎಲೈ ಭಾಗ್ಯಶಾಲಿಗಳಿರಾ! ಆದ್ದರಿಂದ ನೀವು ನಿಮ್ಮ ಇಷ್ಟಾನುಸಾರವಾಗಿ ಮನವೊಪ್ಪಿದ ಜಾಗಕ್ಕೆ ತೆರಳಿರಿ.

೧೧೩. ನಾನೂ ಕೂಡ ಇಲ್ಲಿಯೇ ನೆಲೆಸುವೆನು ಎಂದು ಹೇಳಿ ಆ ದಿವ್ಯ ವರಾಹನು ಅಂತರ್ಧಾನ ಹೊಂದಿದನು. ಅನಂತರ ಆ ಪಿತೃಗಳು ಕೋಕಾ ನದಿಯನ್ನು ಬೀಳ್ಕೊಂಡು ಅಲ್ಲಿಂದ ತೆರಳಿದರು.

೧೧೪. ಆ ಕೋಕಾನದಿಯೂ ಸಹ ತೀರ್ಥಗಳೊಡನೆ ಹಿಮವತ್ಪರ್ವತದಲ್ಲಿ ನೆಲೆಸಿದಳು. ವರಾಹದ ಛಾಯೆಯು ಬಿದ್ದಿದ್ದ (ವರಾಹಾಕಾರದ) ಭೂಮಿಯು ಮಧ್ಯಮಪಿಂಡದ ಪ್ರಾಶನದಿಂದ ಬೆಳೆದು–

ಗರ್ಭಮಾದಾಯ ಸಶ್ರದ್ಧಾ ವಾರಾಹಸ್ಯೈವ ಸುಂದರೀ ।
ತತೋಽಸ್ಯಾಃ ಪ್ರಾಭವತ್ಪುತ್ರೋ ಭೌಮಸ್ತು ನರಕಾಸುರಃ ।
ಪ್ರಾಗ್ಜ್ಯೋತಿಷಂ ಚ ನಗರಮಸ್ಯ ದತ್ತಂ ಚ ವಿಷ್ಣುನಾ　　　　॥ ೧೧೫ ॥

ಏವಂ ಮಯೋಕ್ತಂ ವರದಸ್ಯ ವಿಷ್ಣೋಃ
ಕೋಕಾಮುಖೇ ದಿವ್ಯವರಾಹರೂಪಂ ।
ಶ್ರುತ್ವಾ ನರಸ್ತ್ಯಕ್ತಮಲೋ ವಿಪಾಪ್ಮಾ
ದಶಾಶ್ವಮೇಧೇಷ್ಟಿಫಲಂ ಲಭೇತ　　　　॥ ೧೧೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸಋಷಿಸಂವಾದೇ ಶ್ರಾದ್ಧವಿಧಿನಿರೂಪಣಂ ನಾಮೈಕೋನವಿಂಶಾಧಿಕ-ದ್ವಿಶತತಮೋಽಧ್ಯಾಯಃ

---

೧೧೫. ಗರ್ಭವನ್ನು ಧರಿಸಿ ಶ್ರದ್ಧೆಯಿಂದ ಇದ್ದಳು. ಕೆಲಕಾಲವಾದ ನಂತರ ವರಾಹಪತ್ನಿಯು ನರಕಾಸುರನೆಂಬ ಮಗನನ್ನು ಹೆತ್ತಳು. ಇವನಿಗೆ ವಿಷ್ಣುವು ಪ್ರಾಗ್ಜ್ಯೋತಿಷವೆಂಬ ಪಟ್ಟಣವನ್ನು ಆಳುವಂತೆ ಇತ್ತನು.

೧೧೬. ಈರೀತಿಯಾಗಿ ನಾನು, ನಿಮಗೆ, ಆ ವರದಾಯಕನಾದ ವಿಷ್ಣುವು ಕೋಕಾಮುಖದಲ್ಲಿ ದಿವ್ಯವಾದ ವರಾಹರೂಪವನ್ನು ತಾಳಿದ ವೃತ್ತಾಂತ ವನ್ನು ತಿಳಿಸಿದೆನು. ಇದನ್ನು ಕೇಳಿದ ಮಾನವನು ಪಾಪವೆಲ್ಲವನ್ನೂ ಪರಿಹರಿಸಿ ಕೊಂಡು ಹತ್ತು ಅಶ್ವಮೇಧಗಳನ್ನು ಮಾಡಿದರೆ ಉಂಟಾಗುವ ಫಲವನ್ನು ಪಡೆಯುವನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಶ್ರಾದ್ಧವಿಧಿನಿರೂಪಣವೆಂಬ ಇನ್ನೂರಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ವಿಂಶಾಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಭೂಯಃ ಪ್ರಬ್ರೂಹಿ ಭಗವನ್ ಶ್ರಾದ್ಧಕಲ್ಪಂ ಸುವಿಸ್ತರಾತ್ ।
ಕಥಂ ಕ್ವ ಚ ಕದಾ ಕೇಷು ಕೈಸ್ತದ್ಬ್ರೂಹಿ ತಪೋಧನ ॥ ೧ ॥

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಶ್ರಾದ್ಧಕಲ್ಪಂ ಸುವಿಸ್ತರಾತ್ ।
ಯಥಾ ಯತ್ರ ಯದಾ ಯೇಷು ಯೈರ್ದ್ರವ್ಯೈಸ್ತದ್ವದಾಮ್ಯಹಂ ॥ ೨ ॥

ಇನ್ನೂರಿಪ್ಪತ್ತನೆಯ ಅಧ್ಯಾಯವು

೧. ಆ ಮುನಿಗಳು ಮರಳಿ ವ್ಯಾಸನನ್ನು ಕುರಿತು ಹೇ ಭಗವನ್, ಶ್ರಾದ್ಧಕಲ್ಪವನ್ನು ವಿಸ್ತಾರವಾಗಿ ನಮಗೆ ಇನ್ನೊಮ್ಮೆ ತಿಳಿಯಪಡಿಸು. ಅದನ್ನು ಮಾಡುವುದು ಹೇಗೆ? ಎಲ್ಲಿ ಮಾಡಬೇಕು? ಯಾವಾಗ ಮಾಡಬೇಕು? ಯಾರು ಮಾಡಬೇಕು? ಯಾವ ದ್ರವ್ಯಗಳಿಂದ ಮಾಡಬೇಕು? ಎಲೈ ತಪೋಧನನೇ, ಇದೆಲ್ಲವನ್ನೂ ನಮಗೆ ತಿಳಿಸಬೇಕು, ಎಂದು ಪ್ರಶ್ನಿಸಲು

೨. ಆ ವ್ಯಾಸನು ಇಂತೆಂದನು :—ಎಲೈ ಮುನಿಶ್ರೇಷ್ಠರಿರಾ! ಶ್ರಾದ್ಧವಿಧಿಯನ್ನು ವಿಸ್ತಾರವಾಗಿ ಕೇಳಿರಿ. ಅದನ್ನು ಹೇಗೆ ಮಾಡಬೇಕು? ಎಲ್ಲಿ ಮಾಡಬೇಕು? ಯಾವಾಗ ಮಾಡಬೇಕು? ಯಾರು ಮಾಡಬೇಕು? ಯಾವ ದ್ರವ್ಯಗಳಿಂದ ಮಾಡಬೇಕು? ಎಂಬುದನ್ನು ತಿಳಿಸುವೆನು.

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶ್ರಾದ್ಧಂ ಸ್ವವರಣೋದಿತಂ ।
ಕುಲಧರ್ಮಮನುತಿಷ್ಠದ್ಭಿರ್ದಾತವ್ಯಂ ಮಂತ್ರಪೂರ್ವಕಂ ॥ ೩ ॥

ಸ್ತ್ರೀಭಿರ್ವರ್ಣಾವರೈಃ ಶೂದ್ರೈರ್ವಿಪ್ರಾಣಾಮನುಶಾಸನಾತ್ ।
ಅಮಂತ್ರಕಂ ವಿಧಿಪೂರ್ವಂ ವಹ್ನಿಯಾಗವಿವರ್ಜಿತಂ ॥ ೪ ॥

ಪುಷ್ಕರಾದಿಷು ತೀರ್ಥೇಷು ಪುಣ್ಯೇಷ್ವಾಯತನೇಷು ಚ ।
ಶಿಖರೇಷು ಗಿರೀಂದ್ರಾಣಾಂ ಪುಣ್ಯದೇಶೇಷು ಭೋ ದ್ವಿಜಾಃ ॥ ೫ ॥

ಸರಿತ್ಸು ಪುಣ್ಯತೋಯಾಸು ನದೀಷು ಚ ಸರಃಸು ಚ ।
ಸಂಗಮೇಷು ನದೀನಾಂ ಚ ಸಮುದ್ರೇಷು ಚ ಸಪ್ತಸು ॥ ೬ ॥

ಸ್ವನುಲಿಪ್ತೇಷು ಗೇಹೇಷು ಸ್ವೇಷ್ವನುಜ್ಞಾಪಿತೇಷು ಚ ।
ದಿವ್ಯಪಾದಪಮೂಲೇಷು ಯಜ್ಞಿಯೇಷು ಪ್ರದೇಶೇಷು ಚ ॥ ೭ ॥

---

೩. ಬ್ರಾಹ್ಮಣನೂ, ಕ್ಷತ್ರಿಯನೂ, ವೈಶ್ಯನೂ ತನ್ನ ವರ್ಣಕ್ಕೆ ಉಚಿತವೆಂದು ಹೇಳಿರುವ ನಿಯಮಗಳನ್ನು ಅನುಸರಿಸುತ್ತಾ ತನ್ನ ವಂಶದ ಸಂಪ್ರದಾಯವನ್ನು ಬಿಡದೆ ಮಂತ್ರಪೂರ್ವಕವಾಗಿ ಪಿತೃಗಳಿಗೆ ಅನ್ನಾದಿಗಳನ್ನು ಈಯಬೇಕು.

೪. ಸ್ತ್ರೀಯರೂ, ಕೀಳುಜಾತಿಯವರೂ, ಶೂದ್ರರೂ ವಿಪ್ರರು ಹೇಳಿದಂತೆ, ಮಂತ್ರವನ್ನು ಉಚ್ಚರಿಸದೆ ಅಗ್ನಿಯಲ್ಲಿ ಹೋಮಾದಿಗಳಿಲ್ಲದೆ ವಿಧ್ಯನುಸಾರವಾಗಿ ಶ್ರಾದ್ಧಮಾಡಬೇಕು.

೫. ಪುಷ್ಕರ ಮೊದಲಾದ ತೀರ್ಥಗಳಲ್ಲಿಯಾಗಲಿ, ಪುಣ್ಯತಮವಾದ ದೇವಾಲಯಗಳಲ್ಲಾಗಲಿ, ಪರ್ವತಗಳ ಶಿಖರಗಳಲ್ಲಾಗಲಿ, ಪುಣ್ಯದೇಶಗಳಲ್ಲಾಗಲಿ–

೬. ಪವಿತ್ರವಾದ ನೀರು ಹರಿಯುವ ನದಿಗಳಲ್ಲಾಗಲಿ, ಪಾವನವಾದ ಜಲದಿಂದ ಕೂಡಿದ ನದಿಗಳಲ್ಲಾಗಲಿ, ಸರಸುಗಳಲ್ಲಾಗಲಿ, ನದಿಗಳೆರಡು ಕೂಡುವ ಸಂಗಮಗಳಲ್ಲಾಗಲಿ, ಸಪ್ತಸಮುದ್ರಗಳಲ್ಲಾಗಲಿ

೭. ಚೆನ್ನಾಗಿ ಸಾರಿಸಿ ಶುದ್ಧಿಗೊಳಿಸಿದ ಮನೆಗಳಲ್ಲಾಗಲಿ, ಅಥವಾ ಇನ್ನೊಬ್ಬರಿಂದ ಒಪ್ಪಿಗೆಯನ್ನು ಪಡೆದಂತಹ ಬೇರೆ ಮನೆಗಳಲ್ಲಾಗಲಿ, ದಿವ್ಯವಾದ ವೃಕ್ಷಗಳ ಬುಡದಲ್ಲಾಗಲಿ, ಯಜ್ಞಗಳಿಗೆ ಉಪಯೋಗವಾಗುವ ಮಡುಗಳ ಬಳಿಯಾಗಲಿ

ಶ್ರಾದ್ಧಮೇತೇಷು ದಾತವ್ಯಂ ವರ್ಜ್ಯಮೇತೇಷು ಚೋಚ್ಯತೇ ।
ಕಿರಾತೇಷು ಕಲಿಂಗೇಷು ಕೊಂಕಣೇಷು ಕೃಮಿಷ್ವಪಿ ॥ ೮ ॥

ದಶಾರ್ಣೇಷು ಕುಮಾರ್ಯೇಷು ತಂಗಣೇಷು ಕ್ರಥೇಷ್ವಪಿ ।
ಸಿಂಧೋರುತ್ತರಕೂಲೇಷು ನರ್ಮದಾಯಾಶ್ಚ ದಕ್ಷಿಣೇ ॥ ೯ ॥

ಪೂರ್ವೇಷು ಕರತೋಯಾಯಾ ನ ದೇಯಂ ಶ್ರಾದ್ಧಮುಚ್ಯತೇ ।
ಶ್ರಾದ್ಧಂ ದೇಯಮುಶಂತೀಹ ಮಾಸಿ ಮಾಸ್ಯುಡುಪಕ್ಷಯೇ ॥ ೧೦ ॥

ಪೌರ್ಣಮಾಸೇಷು ಶ್ರಾದ್ಧಂ ಚ ಕರ್ತವ್ಯಮೃಕ್ಷಗೋಚರೇ ।
ನಿತ್ಯಶ್ರಾದ್ಧಮದೈವಂ ಚ ಮನುಷ್ಯೈಃ ಸಹ ಗೀಯತೇ ॥ ೧೧ ॥

ನೈಮಿತ್ತಿಕಂ ಸುರೈಃ ಸಾರ್ಧಂ ನಿತ್ಯಂ ನೈಮಿತ್ತಿಕಂ ತಥಾ ।
ಕಾಮ್ಯಾನ್ಯನ್ಯಾನಿ ಶ್ರಾದ್ಧಾನಿ ಪ್ರತಿಸಂವತ್ಸರಂ ದ್ವಿಜೈಃ ॥ ೧೨ ॥

---

೮. ಶ್ರಾದ್ಧವನ್ನು ಮಾಡಬೇಕು. ಇನ್ನು ಶ್ರಾದ್ಧವನ್ನು ಮಾಡಬಾರದ ಸ್ಥಳಗಳನ್ನು ತಿಳಿಸುವೆನು. ಕಿರಾತದೇಶ, ಕಲಿಂಗಭೂಮಿ, ಕೊಂಕಣ, ಕೃಮಿಸ್ಥಭೂಮಿಗಳಲ್ಲಿಯೂ,

೯-೧೦. ಮತ್ತು ದಶಾರ್ಣ, ಕುಮಾರ್ಯ, ತಂಗಣ, ಕ್ರಥ ದೇಶಗಳಲ್ಲಿಯೂ, ಸಿಂಧೂನದಿಯ ಉತ್ತರಪ್ರಾಂತದಲ್ಲಿಯೂ, ನರ್ಮದಾನದಿಯ ದಕ್ಷಿಣಭೂಭಾಗದಲ್ಲಿಯೂ, ಕರತೋಯಾನದಿಯ ಪೂರ್ವದಿಕ್ಕಿನಲ್ಲಿಯೂ ಶ್ರಾದ್ಧವನ್ನು ಮಾಡಬಾರದು. ಪ್ರತಿ ತಿಂಗಳೂ ಕೃಷ್ಣಪಕ್ಷದಲ್ಲಿ ಶ್ರಾದ್ಧಮಾಡುವುದಕ್ಕೆ ಉಚಿತವಾದುದೆಂದು ಪ್ರಾಜ್ಞರು ಹೇಳುವರು.

೧೧. ಅದೇರೀತಿಯಲ್ಲಿ ಪೂರ್ಣಿಮೆಯಲ್ಲಿಯೂ ಶ್ರಾದ್ಧಮಾಡಬಹುದು. ನಿತ್ಯಶ್ರಾದ್ಧದಲ್ಲಿ ದೇವತೆಗಳಿಲ್ಲವೆಂದು ಮನುವು ಹೇಳುವನು.

೧೨. ನೈಮಿತ್ತಿಕ ಶ್ರಾದ್ಧದಲ್ಲಿ ದೇವತೆಗಳೂ ಇರುವರು. ದ್ವಿಜರಾದವರು ನಿತ್ಯ, ನೈಮಿತ್ತಿಕ, ಶ್ರಾದ್ಧಗಳನ್ನೂ ಇತರ ಕಾಮ್ಯಶ್ರಾದ್ಧಗಳನ್ನೂ ಪ್ರತಿ ಸಂವತ್ಸರವೂ ಮಾಡಬೇಕು.

ವೃದ್ಧಿಶ್ರಾದ್ಧಂ ಚ ಕರ್ತವ್ಯಂ ಜಾತಕರ್ಮಾದಿಕೇಷು ಚ ।
ತತ್ರ ಯುಗ್ಮಾನ್ ದ್ವಿಜಾನಾಹುರ್ಮಂತ್ರಪೂರ್ವಂ ತು ವೈ ದ್ವಿಜಾಃ ॥ ೧೩ ॥

ಕನ್ಯಾಂ ಗತೇ ಸವಿತರಿ ದಿನಾನಿ ದಶ ಪಂಚ ಚ ।
ಪೂರ್ವೇಣೈವೇಹ ವಿಧಿನಾ ಶ್ರಾದ್ಧಂ ತತ್ರ ವಿಧೀಯತೇ ॥ ೧೪ ॥

ಪ್ರತಿಪದ್ಧನಲಾಭಾಯ ದ್ವಿತೀಯಾ ದ್ವಿಪದಪ್ರದಾ ।
ಪುತ್ರಾರ್ಥಿನೀ ತೃತೀಯಾ ತು ಚತುರ್ಥೀ ಶತ್ರುನಾಶಿನೀ ॥ ೧೫ ॥

ಶ್ರಿಯಂ ಪ್ರಾಪ್ನೋತಿ ಪಂಚಮ್ಯಾಂ ಷಷ್ಠ್ಯಾಂ ಪೂಜ್ಯೋ ಭವೇನ್ನರಃ ।
ಗಣಾಧಿಪತ್ಯಂ ಸಪ್ತಮ್ಯಾಮಷ್ಟಮ್ಯಾಂ ಬುದ್ಧಿಮುತ್ತಮಾಂ ॥ ೧೬ ॥

---

೧೩. ಎಲೈ ಬ್ರಾಹ್ಮಣರಿರಾ! ಜಾತಕರ್ಮಾದಿ ಸಂಸ್ಕಾರಗಳಲ್ಲಿ ವೃದ್ಧಿ (ನಾಂದೀ) ಶ್ರಾದ್ಧವನ್ನು ಮಾಡಬೇಕು. ಆ ವೃದ್ಧಿ ಶ್ರಾದ್ಧದಲ್ಲಿ ಮಂತ್ರ ಪೂರ್ವಕವಾಗಿ ಇಬ್ಬರು ಬ್ರಾಹ್ಮಣರನ್ನು ನಿಮಂತ್ರಿಸಬೇಕು ಎನ್ನುವರು.

೧೪. ಸೂರ್ಯನು ಕನ್ಯಾರಾಶಿಯನ್ನು ಪ್ರವೇಶಿಸಿದಾಗ ಹದಿನೈದು ದಿನಗಳು (ಪಿತೃಪಕ್ಷ) ಶ್ರಾದ್ಧಾರ್ಹವಾದುವು. ಆಗ ಪೂರ್ವೋಕ್ತವಾದ ವಿಧಿಯಂತೆ ಶ್ರಾದ್ಧವನ್ನು ಮಾಡಬೇಕು.

೧೫. ಪ್ರತಿಪತ್ತು (ಪಾಡ್ಯಮಿ) ಶ್ರಾದ್ಧಮಾಡಿದರೆ ಧನಲಾಭವಾಗುವುದು. ದ್ವಿತೀಯಯಲ್ಲಿ ದ್ವಿಪದ (ಮನುಷ್ಯಾದಿ) ವೃದ್ಧಿಯಾಗುವುದು. ತೃತೀಯೆಯಲ್ಲಿ ಗಂಡುಮಕ್ಕಳಾಗುವರು. ಚತುರ್ಥಿಯಲ್ಲಿ ಶತ್ರುಗಳು ನಾಶವಾಗುವರು.

೧೬-೧೭. ಪಂಚಮಿಯಲ್ಲಿ ಐಶ್ವರ್ಯವು ಲಭಿಸುವುದು. ಷಷ್ಠಿಯಲ್ಲಿ ಶ್ರಾದ್ಧಮಾಡಿದ ಮನುಷ್ಯನು ಪೂಜ್ಯತೆಯನ್ನು ಪಡೆಯುವನು. ಸಪ್ತಮಿಯಲ್ಲಿ ಒಂದುಗುಂಪಿಗೆ ಒಡೆಯನಾಗುವನು. ಅಷ್ಟಮಿಯಲ್ಲಿ ಕುಶಾಸ್ತ್ರಬುದ್ಧಿಯಾಗು

ಸ್ತ್ರಿಯೋ ನವಮ್ಯಾಂ ಪ್ರಾಪ್ನೋತಿ ದಶಮ್ಯಾಂ ಪೂರ್ಣಕಾಮತಾಂ ।
ವೇದಾಂಸ್ತಥಾಪ್ನುಯಾತ್ಸರ್ವಾನೇಕಾದಶ್ಯಾಂ ಕ್ರಿಯಾಪರಃ ॥ ೧೭ ॥

ದ್ವಾದಶ್ಯಾಂ ಜಯಲಾಭಂ ಚ ಪ್ರಾಪ್ನೋತಿ ಪಿತೃಪೂಜಕಃ ।
ಪ್ರಜಾವೃದ್ಧಿಂ ಪಶುಂ ಮೇಧಾಂ ಸ್ವಾತಂತ್ರ್ಯಂ ಪುಷ್ಟಿಮುತ್ತಮಾಂ ॥ ೧೮ ॥

ದೀರ್ಘಾಯುರಥವೈಶ್ವರ್ಯಂ ಕುರ್ವಾಣಸ್ತು ತ್ರಯೋದಶೀಂ ।
ಅವಾಪ್ನೋತಿ ನ ಸಂದೇಹಃ ಶ್ರಾದ್ಧಂ ಶ್ರದ್ಧಾಸಮನ್ವಿತಃ ॥ ೧೯ ॥

ಯಥಾಸಂಭವಿನಾನ್ನೇವ ಶ್ರಾದ್ಧಂ ಶ್ರದ್ಧಾಸಮನ್ವಿತಃ ।
ಯುವಾನಃ ಪಿತರೋ ಯಸ್ಯ ಮೃತಾಃ ಶಸ್ತ್ರೇಣ ವಾ ಹತಾಃ ॥ ೨೦ ॥

ತೇನ ಕಾರ್ಯಂ ಚತುರ್ದಶ್ಯಾಂ ತೇಷಾಂ ತೃಪ್ತಿಮಭೀಪ್ಸತಾ ।
ಶ್ರಾದ್ಧಂ ಕುರ್ವನ್ನಮಾವಾಸ್ಯಾಂ ಯತ್ನೇನ ಪುರುಷಃ ಶುಚಿಃ ॥ ೨೧ ॥

ವನು. ನವಮಿಯಲ್ಲಿ ಸ್ತ್ರೀಯರನ್ನು ಪಡೆಯುವನು. ದಶಮಿಯಲ್ಲಿ ಎಲ್ಲ ಇಷ್ಟಾರ್ಥಗಳನ್ನೂ ಹೊಂದುವನು. ಏಕಾದಶಿಯಲ್ಲಿ ಎಲ್ಲ ವೇದಗಳನ್ನೂ ಹೊಂದುವನು.

೧೮–೧೯. ದ್ವಾದಶಿಯಲ್ಲಿ ಪಿತೃಗಳನ್ನು ಪೂಜಿಸಿದವನು ಜಯವನ್ನೂ, ಪ್ರಜಾವೃದ್ಧಿಯನ್ನೂ, ಪಶುಗಳನ್ನೂ, ಮೇಧಸ್ಸನ್ನೂ, ಸ್ವಾತಂತ್ರ್ಯವನ್ನೂ, ಪುಷ್ಟಿಯನ್ನೂ ಹೊಂದುವನು. ತ್ರಯೋದಶಿಯಲ್ಲಿ ಶ್ರದ್ಧೆಯಿಂದ ಶ್ರಾದ್ಧವಾಚರಿಸಿದವನು ದೀರ್ಘಾಯುಸ್ಸನ್ನೂ, ಐಶ್ವರ್ಯವನ್ನೂ ಹೊಂದುವನು.

೨೦–೨೧. ಯಾರ ಪಿತೃಗಳು ಯುವಕರಾಗಿರುವಾಗಲೇ ಮೃತರಾಗಿರುವರೋ ಇಲ್ಲವೇ ಶಸ್ತ್ರಗಳಿಂದ ಹತರಾಗಿ ಕೊಲ್ಲಲ್ಪಟ್ಟಿರುವರೋ ಅವರು, ಆ ಪಿತೃಗಳಿಗೆ ತೃಪ್ತಿಯುಂಟಾಗಲು ಚತುರ್ದಶಿಯ ದಿವಸ ಶ್ರಾದ್ಧಮಾಡಬೇಕು. ಅಮಾವಾಸ್ಯೆಯ ದಿವಸ ಶುಚಿಯಾಗಿ ಪ್ರಯತ್ನಪೂರ್ವಕವಾಗಿ ಶ್ರಾದ್ಧವನ್ನು ಮಾಡಬೇಕು.

ಸರ್ವಾನ್ಕಾಮಾನವಾಪ್ನೋತಿ ಸ್ವರ್ಗಂ ಚಾನಂತಮಶ್ನುತೇ ।
ಅತಃಪರಂ ಮುನಿಶ್ರೇಷ್ಠಾಃ ಶೃಣುಧ್ವಂ ವದತೋ ಮಮ ॥ ೨೨ ॥

ಪಿತೄಣಾಂ ಪ್ರೀತಯೇ ಯತ್ರ ಯದ್ದೇಯಂ ಪ್ರೀತಿಕಾರಿಣಾ ।
ಮಾಸಂ ತೃಪ್ತಿಃ ಪಿತೄಣಾಂ ತು ಹವಿಷ್ಯಾನ್ನೇನ ಜಾಯತೇ ॥ ೨೩ ॥

ಮಾಸದ್ವಯಂ ಮತ್ಸ್ಯಮಾಂಸೈಸ್ತೃಪ್ತಿಂ ಯಾಂತಿ ಪಿತಾಮಹಾಃ ।
ತ್ರೀನ್ಮಾಸಾನ್ಹಾರಿಣಂ ಮಾಂಸಂ ವಿಜ್ಞೇಯಂ ಪಿತೃತೃಪ್ತಯೇ ॥ ೨೪ ॥

ಪುಷ್ಣಾತಿ ಚತುರೋ ಮಾಸಾನ್ ಶಶಸ್ಯ ಪಿಶಿತಂ ಪಿತೄನ್ ।
ಶಾಕುನಂ ಪಂಚ ವೈ ಮಾಸಾನ್ಷಣ್ಮಾಸಾನ್ ಶೂಕರಾಮಿಷಂ ॥ ೨೫ ॥

೨೨–೨೩. ಹಾಗೆ ಮಾಡಿದರೆ ಅವನು ತನ್ನೆಲ್ಲ ಇಷ್ಟಾರ್ಥಗಳನ್ನೂ ಪಡೆಯುವನಲ್ಲದೆ ಅನಂತವಾದ ಸ್ವರ್ಗಫಲವನ್ನೂ ಪಡೆಯುವನು. ಎಲೈ ಮುನಿಶ್ರೇಷ್ಠರಿರಾ ! ಪಿತೃಗಳಿಗೆ ಪ್ರೀತಿಯಾಗಲೆಂದು ಬಯಸುವವನು, ಯಾವ ಸ್ಥಳದಲ್ಲಿ ಯಾವ ವಸ್ತುವನ್ನು ಕೊಡಬೇಕೆಂಬುದನ್ನು ಇನ್ನುಮುಂದೆ ತಿಳಿಸುವೆನು. ಕೇಳಿರಿ. ಹವಿಷ್ಯವೆಂಬ ಅನ್ನವನ್ನು ಕೊಡಲು ಪಿತೃಗಳು ಒಂದು ತಿಂಗಳು ತೃಪ್ತಿಹೊಂದುವರು.

೨೪. ಮತ್ಸ್ಯಮಾಂಸವನ್ನು ಶ್ರಾದ್ಧದಲ್ಲಿ ಈಯಲು ಎರಡು ತಿಂಗಳು ಕಾಲ ಪಿತಾಮಹರು ತೃಪ್ತಿಹೊಂದುವರು. ಹರಿಣ (ಜಿಂಕೆ) ಮಾಂಸವನ್ನೀಯಲು ಮೂರು ತಿಂಗಳು ಪಿತೃಗಳು ತೃಪ್ತರಾಗಿರುವರು.

೨೫. ಮೊಲದ ಮಾಂಸವನ್ನು ದಾನಮಾಡಲು ನಾಲ್ಕು ತಿಂಗಳು ಕಾಲವೂ, ಶಾಕುನ (ಹಕ್ಕಿಯ) ಮಾಂಸವನ್ನೀಯಲು ಐದು ತಿಂಗಳೂ, ಹಂದಿಯ ಮಾಂಸವನ್ನು ಈಯಲು ಆರು ತಿಂಗಳುಕಾಲವೂ ಪಿತೃದೇವತೆಗಳು ತೃಪ್ತರಾಗುವರು.

ಛಾಗಲಂ ಸಪ್ತ ವೈ ಮಾಸಾನೈಣೇಯಂ ಚಾಷ್ಟಮಾಸಕಾನ್ ।
ಕರೋತಿ ತೃಪ್ತಿಂ ನವ ವೈ ರುರುಮಾಂಸಂ ನ ಸಂಶಯಃ ॥ ೨೬ ॥

ಗವ್ಯಂ ಮಾಂಸಂ ಪಿತೃತೃಪ್ತಿಂ ಕರೋತಿ ದಶಮಾಸಿಕೀಂ ।
ತಥೈಕಾದಶ ಮಾಸಾಂಸ್ತು ಔರಭ್ರಂ ಪಿತೃತೃಪ್ತಿದಂ ॥ ೨೭ ॥

ಸಂವತ್ಸರಂ ತಥಾ ಗವ್ಯಂ ಪಯಃ ಪಾಯಸಮೇವ ಚ ।
ವಾರ್ಧ್ರೀಣಸಮಾಮಿಷಂ ಲೋಹಂ ಕಾಲಶಾಕಂ ತಥಾ ಮಧು ॥ ೨೮ ॥

ರೋಹಿತಾಮಿಷಮನ್ನಂ ಚ ದತ್ತಾನ್ಯಾತ್ಮಕುಲೋದ್ಭವೈಃ ।
ಅನಂತಂ ವೈ ಪ್ರಯಚ್ಛಂತಿ ತೃಪ್ತಿಯೋಗಂ ಸುತಾಂಸ್ತಥಾ ॥ ೨೯ ॥

ಪಿತೄಣಾಂ ನಾತ್ರ ಸಂದೇಹೋ ಗಯಾಶ್ರಾದ್ಧಂ ಚ ಭೋ ದ್ವಿಜಾಃ ।
ಯೋ ದದಾತಿ ಗುಡೋನ್ಮಿಶ್ರಾಂಸ್ತಿಲಾನ್ವಾ ಶ್ರಾದ್ಧಕರ್ಮಣಿ ॥ ೩೦ ॥

---

೨೬. ಆಡಿನ ಮಾಂಸದಿಂದ ಏಳು ತಿಂಗಳೂ, ಐಣೇಯ ಮಾಂಸ (ಜಿಂಕೆಯ ಒಂದು ಭೇದ) ದಿಂದ ಎಂಟು ತಿಂಗಳೂ, ರುರು (ದುಪ್ಪಿ) ಮಾಂಸ ದಿಂದ ಒಂಬತ್ತು ತಿಂಗಳೂ ಪಿತೃದೇವತೆಗಳಿಗೆ ತೃಪ್ತಿಯುಂಟಾಗುವುದರಲ್ಲಿ ಸಂಶಯವಿಲ್ಲವು.

೨೭. ಹಸುವಿನ ಮಾಂಸವು ಹತ್ತು ತಿಂಗಳೂ, ಟಗರಿನ ಮಾಂಸವು ಹನ್ನೊಂದು ತಿಂಗಳೂ ಪಿತೃಗಳಿಗೆ ತೃಪ್ತಿಯುಂಟುಮಾಡುವುದು.

೨೮–೨೯. ಹಸುವಿನ ಮಾಂಸವೂ, ಹಾಲೂ, ಆ ಹಾಲಿನಿಂದ ಮಾಡಿದ ವಸ್ತುವೂ ಒಂದು ಸಂವತ್ಸರಕಾಲ ಪಿತೃಗಳಿಗೆ ತೃಪ್ತಿಯನ್ನು ಮಾಡುವುದು. ವಾರ್ಧ್ರೀಣಸವೆಂಬ ಮೃಗಮಾಂಸವನ್ನೂ, ಕಬ್ಬಿಣವನ್ನೂ, ಕಾಲಶಾಕವೆಂಬು ದನ್ನೂ, ಮಧುವನ್ನೂ (ಜೇನುತುಪ್ಪ) ರೋಹಿತವೆಂಬ ಒಂದುಬಗೆಯ ಜಿಂಕೆಯ ಮಾಂಸವನ್ನೂ ಯಾರು ತಮ್ಮ ಪಿತೃಗಳಿಗೆ ನಿವೇದಿಸುವರೋ–ಅಂಥವರು ಕೊಟ್ಟುದೆಲ್ಲವೂ ಅನಂತವಾದ ತೃಪ್ತಿಯನ್ನುಂಟುಮಾಡುವುದಲ್ಲದೆ ಅವರಿಗೆ ಸುತ ಸಂತತಿಯನ್ನೂ ಹೆಚ್ಚಿಸುವುದು.

೩೦-೩೧. ಎಲೈ ಬ್ರಾಹ್ಮಣರಿರಾ! ಗಯಾಶ್ರಾದ್ಧವು ಪಿತೃಗಳಿಗೆ ಬಹು ಇಷ್ಟವಾದುದು. ಇದರಲ್ಲಿ ಸಂದೇಹವಿಲ್ಲ. ಯಾವನು ಆ ಶ್ರಾದ್ಧದಲ್ಲಿ ಬೆಲ್ಲ

ಮಧು ವಾ ಮಧುಮಿಶ್ರಂ ವಾ ಅಕ್ಷಯಂ ಸರ್ವಮೇವ ತತ್ ।
ಅಪಿ ನಃ ಸ ಕುಲೇ ಭೂಯಾದ್ಯೋ ನೋ ದದ್ಯಾಜ್ಜಲಾಂಜಲಿಂ ॥ ೩೦ ॥

ಪಾಯಸಂ ಮಧುಸಂಯುಕ್ತಂ ವರ್ಷಾಸು ಚ ಮಘಾಸು ಚ ।
ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್ ॥ ೩೨ ॥

ಗೌರೀಂ ವಾಪ್ಯುದ್ವಹೇತ್ಕನ್ಯಾಂ ನೀಲಂ ವಾ ವೃಷಮುತ್ಸೃಜೇತ್ ।
ಕೃತ್ತಿಕಾಸು ಪಿತೄನರ್ಚ್ಯ ಸ್ವರ್ಗಮಾಪ್ನೋತಿ ಮಾನವಃ ॥ ೩೩ ॥

ಅಪತ್ಯಕಾಮೋ ರೋಹಿಣ್ಯಾಂ ಸೌಮ್ಯೇ ತೇಜಸ್ವಿತಾಂ ಲಭೇತ್ ।
ಶೌರ್ಯಮಾರ್ದ್ರಾಸು ಚಾಪ್ನೋತಿ ಕ್ಷೇತ್ರಾಣಿ ಚ ಪುನರ್ವಸೌ ॥ ೩೪ ॥

ಡೊಡನೆ ಎಳ್ಳನ್ನೋ, ಅದಿಲ್ಲದಿದ್ದರೆ ಮಧುವನ್ನೋ, ಮಧುವು ಬೆರೆತ ಇನ್ನಾವ ವಸ್ತುವನ್ನೋ ಪಿತೃಗಳಿಗೆ ಈಯುವನೋ ಅದೆಲ್ಲವೂ ಅಕ್ಷಯವಾಗುವುದು. "ಯಾವನು ನಮಗೆ ಜಲಾಂಜಲಿಯನ್ನು ಕೊಡುವನೋ ಅಂಥಹ ಪುತ್ರನು ನಮ್ಮ ಕುಲದಲ್ಲಿ ಹುಟ್ಟುವನೇ?

೩೨-೩೩. ವರ್ಷಾಕಾಲದಲ್ಲಿಯೂ ಮಾಘಮಾಸದಲ್ಲಿಯೂ ಪಾಯಸವನ್ನಾಗಲೀ ಮಧುವನ್ನಾಗಲೀ ನಮಗೆ ಕೊಡುವನೇ? ನಮ್ಮ ವಂಶದಲ್ಲಿ ಅನೇಕಮಂದಿ ಮಕ್ಕಳು ಹುಟ್ಟಲೆಂದು ಆಶಿಸುವೆವು. ಏಕೆಂದರೆ ಅವರಲ್ಲಿ ಯಾವನಾದರೂ ಒಬ್ಬನು ಗಯೆಗೆ ಹೋಗಿಯಾನು; ಮೈನೆರೆಯದ ಹುಡುಗಿಯನ್ನೇ ಮದುವೆಯಾದಾನು; ನೀಲವಾದ (ಕಪ್ಪಾದ) ವೃಷಭವನ್ನಾದರೂ ನಮಗೋಸ್ಕರ ವಿಸರ್ಜಿಸಿಯಾನು;" ಎಂಬುದಾಗಿ ಪಿತೃಗಳು ನಿರೀಕ್ಷಿಸುತ್ತಿರುವರು. ಕೃತ್ತಿಕಾನಕ್ಷತ್ರದಲ್ಲಿ ಪಿತೃಗಳನ್ನು ಪೂಜಿಸಿದ ಮಾನವನು ಸ್ವರ್ಗವನ್ನು ಪಡೆಯುವನು.

೩೪. ಮಕ್ಕಳಾಗಬೇಕೆನ್ನುವನು ರೋಹಿಣೀನಕ್ಷತ್ರದಲ್ಲಿ ಅವರನ್ನು ಪೂಜಿಸಬೇಕು. ಮೃಗಶಿರಾನಕ್ಷತ್ರದಲ್ಲಿ ಪಿತೃಗಳನ್ನು ತೃಪ್ತಿಪಡಿಸಿದವನು ತೇಜಸ್ವಿಯಾಗುವನು. ಆ ಪಿತೃಗಳನ್ನು ಆರ್ದ್ರಾನಕ್ಷತ್ರದಲ್ಲಿ ಪೂಜಿಸಲು ಶೌರ್ಯವನ್ನೂ, ಪುನರ್ವಸುವಿನಲ್ಲಿ ಪೂಜಿಸಲು ಹೊಲಗದ್ದೆಗಳನ್ನೂ ಪಡೆಯುವನು.

ಪುಷ್ಯೇ ತು ಧನಮಕ್ಷಯ್ಯಮಾಶ್ಲೇಷೇ ಚಾಯುರುತ್ತಮಂ ।
ಮಘಾಸು ಚ ಪ್ರಜಾಂ ಪುಷ್ಟಿಂ ಸೌಭಾಗ್ಯಂ ಫಾಲ್ಗುನೀಷು ಚ ॥ ೩೫ ॥

ಪ್ರಧಾನಶೀಲೋ ಭವತಿ ಸಾಪತ್ಯಶ್ಚೋತ್ತರಾಸು ಚ ।
ಪ್ರಯಾತಿ ಶ್ರೇಷ್ಠತಾಂ ಶಾಸ್ತ್ರೇ ಹಸ್ತೇ ಶ್ರಾದ್ಧಪ್ರದೋ ನರಃ ॥ ೩೬ ॥

ರೂಪಂ ತೇಜಶ್ಚ ಚಿತ್ರಾಸು ತಥಾಪತ್ಯಮವಾಪ್ನುಯಾತ್ ।
ವಾಣಿಜ್ಯಲಾಭದಾ ಸ್ವಾತೀ ವಿಶಾಖಾ ಪುತ್ರಕಾಮದಾ ॥ ೩೭ ॥

ಕುರ್ವತಾಂ ಚಾನುರಾಧಾಸು ತಾ ದದ್ಯುಶ್ಚಕ್ರವರ್ತಿತಾಂ ।
ಆಧಿಪತ್ಯಂ ಚ ಜ್ಯೇಷ್ಠಾಸು ಮೂಲೇ ಚಾರೋಗ್ಯಮುತ್ತಮಂ ॥ ೩೮ ॥

---

೩೫. ಪುಷ್ಯನಕ್ಷತ್ರದಲ್ಲಿ ಪೂಜಿಸಿದವನು ಬರಿದಾಗದಷ್ಟು ಹಣವನ್ನೂ, ಆಶ್ಲೇಷಾದಲ್ಲಿ ಅರ್ಚಿಸಿದವನು ದೀರ್ಘಾಯುಸ್ಸನ್ನೂ, ಮಘಾನಕ್ಷತ್ರದಲ್ಲಿ ಸಂತಾನ ವೃದ್ಧಿಯನ್ನೂ, ಪೂರ್ವಫಲ್ಗುನೀ (ಪುಬ್ಬಾ) ನಕ್ಷತ್ರಗಳಲ್ಲಿ ಪುಷ್ಟಿ ಮತ್ತು ಸೌಭಾಗ್ಯಗಳನ್ನೂ ಪಡೆಯುವನು.

೩೬. ಉತ್ತರಾನಕ್ಷತ್ರದಲ್ಲಿ ಪೂಜಿಸಲು ಎಲ್ಲರಿಗೂ ಮುಂದಾಳಾಗಿಯೂ, ಮಕ್ಕಳೊಂದಿಗನಾಗಿಯೂ ಆಗುವನು. ಹಸ್ತನಕ್ಷತ್ರದಲ್ಲಿ ಶ್ರಾದ್ಧಮಾಡಿದವನು ಶಾಸ್ತ್ರದಲ್ಲಿ ಶ್ರೇಷ್ಠತೆಯನ್ನು ಪಡೆಯುವನು.

೩೭. ಚಿತ್ತಾನಕ್ಷತ್ರದಲ್ಲಿ ಶ್ರಾದ್ಧಮಾಡಲು ರೂಪವನ್ನೂ, ತೇಜಸ್ಸನ್ನೂ, ಮಕ್ಕಳನ್ನೂ ಹೊಂದುವನು. ಸ್ವಾತಿಯಲ್ಲಿ ವಾಣಿಜ್ಯವೃತ್ತಿಯಲ್ಲಿ ಲಾಭವಾಗುವುದು. ವಿಶಾಖಾನಕ್ಷತ್ರದಲ್ಲಿ ಪುತ್ರರಾಗಬೇಕೆಂಬ ಬಯಕೆಯು ನೆರವೇರುವುದು.

೩೮. ಅನೂರಾಧಾನಕ್ಷತ್ರದಲ್ಲಿ ಪಿತೃಗಳನ್ನರ್ಚಿಸಲು ಚಕ್ರವರ್ತಿ ಪದವಿಯೂ, ಜ್ಯೇಷ್ಠಾನಕ್ಷತ್ರದಲ್ಲಿ ಆಧಿಪತ್ಯ (ಒಡೆತನ) ವೂ, ಮೂಲಾನಕ್ಷತ್ರದಲ್ಲಿ ಉತ್ತಮವಾದ ಆರೋಗ್ಯವೂ ಉಂಟಾಗುವುದು.

ಆಷಾಢಾಸು ಯಶಃಪ್ರಾಪ್ತಿರುತ್ತರಾಸು ವಿಶೋಕತಾ ।
ಶ್ರವಣೇನ ಶುಭಾಂಲ್ಲೋಕಾನ್ಧನಿಷ್ಠಾಸು ಧನಂ ಮಹತ್ ॥ ೩೯ ॥

ವೇದವಿತ್ತ್ವಮಭಿಜಿತಿ ಭಿಷಕ್ಸಿದ್ಧಿಂ ಚ ವಾರುಣೇ ।
ಅಜಾವಿಕಂ ಪ್ರೌಷ್ಠಪದ್ಯಾಂ ವಿಂದೇದ್ಗಾವಸ್ತಥೋತ್ತರೇ ॥ ೪೦ ॥

ರೇವತೀಷು ತಥಾ ಕುಪ್ಯಮಶ್ವಿನೀಷು ತುರಂಗಮಾನ್ ।
ಶ್ರಾದ್ಧಂ ಕುರ್ವಂಸ್ತಥಾಪ್ನೋತಿ ಭರಣೀಷ್ವಾಯುರುತ್ತಮಂ ॥ ೪೧ ॥

ಏವಂ ಫಲಮವಾಪ್ನೋತಿ ಋಕ್ಷೇಷ್ವೇತೇಷು ತತ್ತ್ವವಿತ್ ।
ತಸ್ಮಾತ್ಕಾಮ್ಯಾನಿ ಶ್ರಾದ್ಧಾನಿ ದೇಯಾನಿ ವಿಧಿವದ್ದ್ವಿಜಾಃ ॥ ೪೨ ॥

ಕನ್ಯಾರಾಶಿಗತೇ ಸೂರ್ಯೇ ಫಲಮತ್ಯಂತಮಿಚ್ಛತಾ ।
ಯಾನ್ಯಾನ್ಕಾಮಾನಭಿಧ್ಯಾಯನ್ಕನ್ಯಾರಾಶಿಗತೇ ರವೌ ॥ ೪೩ ॥

---

೩೯. ಪೂರ್ವಾಷಾಢಾನಕ್ಷತ್ರದಲ್ಲಿ ಯಶಃಪ್ರಾಪ್ತಿಯೂ, ಉತ್ತರಾಷಾಢಾ ನಕ್ಷತ್ರದಲ್ಲಿ ಶೋಕವಿಮೋಚನೆಯೂ, ಶ್ರವಣನಕ್ಷತ್ರದಲ್ಲಿ ಶುಭವಾದ ಲೋಕಗಳೂ, ಧನಿಷ್ಠಾನಕ್ಷತ್ರದಲ್ಲಿ ಅಧಿಕವಾದ ಧನವೂ ದೊರೆಯುವುದು.

೪೦. ಅಭಿಜಿನ್ನಕ್ಷತ್ರದಲ್ಲಿ ವೇದಜ್ಞನಾಗಿಯೂ, ಶತಭಿಷಾನಕ್ಷತ್ರದಲ್ಲಿ ಸಿದ್ಧಹಸ್ತನಾದ ವೈದ್ಯನಾಗಿಯೂ ಆಗುವನು. ಪೂರ್ವಭಾದ್ರಪದನಕ್ಷತ್ರದಲ್ಲಿ ಆಡುಗಳನ್ನೂ, ಉತ್ತರಭಾದ್ರಪದದಲ್ಲಿ ಗೋವುಗಳನ್ನೂ ಹೊಂದುವನು.

೪೧. ರೇವತಿಯಲ್ಲಿ ಚಿನ್ನ ಬೆಳ್ಳಿಗಳನ್ನೂ, ಅಶ್ವಿನಿಯಲ್ಲಿ ಕುದುರೆಗಳನ್ನೂ, ಭರಣೀನಕ್ಷತ್ರದಲ್ಲಿ ದೀರ್ಘಾಯುಸ್ಸನ್ನೂ ಪಿತೃಗಳಿಗೆ ಶ್ರಾದ್ಧಮಾಡಿದವರು ಹೊಂದುವರು.

೪೨. ತತ್ತ್ವವನ್ನು ಬಲ್ಲವನು ಈರೀತಿಯಾಗಿ ಆಯಾನಕ್ಷತ್ರದಲ್ಲಿ ಶ್ರಾದ್ಧಮಾಡಿದರೆ ಫಲವನ್ನು ಹೊಂದುವನು. ಎಲೈ ಋಷಿಗಳಿರಾ! ಆದುದರಿಂದ ಕಾಮ್ಯಶ್ರಾದ್ಧಗಳನ್ನು ಮಾಡತಕ್ಕವರು ವಿಧಿಪೂರ್ವಕವಾಗಿ ಆಯಾಯ ನಕ್ಷತ್ರದಲ್ಲಿ ಮಾಡಬೇಕು.

೪೩-೪೪. ಸೂರ್ಯನು ಕನ್ಯಾರಾಶಿಯನ್ನು ಪ್ರವೇಶಿಸಿದಾಗ ಅಧಿಕವಾದ ಫಲವನ್ನು ಪಡೆಯಬೇಕೆನ್ನುವ ಮನುಜರು ಯಾವಯಾವ ಇಷ್ಟಾರ್ಥ

ಶ್ರಾದ್ಧಂ ಕುರ್ವಂತಿ ಮನುಜಾಸ್ತಾಂಸ್ತಾನ್ಕಾಮಾಂಲ್ಲಭಂತಿ ತೇ ।
ನಾನ್ದೀಮುಖಾನಾಂ ಕರ್ತವ್ಯಂ ಕನ್ಯಾರಾಶಿಗತೇ ರವೌ ॥ ೪೪ ॥

ಪೌರ್ಣಮಾಸ್ಯಾಂ ತು ಕರ್ತವ್ಯಂ ವಾರಾಹವಚನಂ ಯಥಾ ।
ದಿವ್ಯಭೌಮಾಂತರಿಕ್ಷಾಣಿ ಸ್ಥಾವರಾಣಿ ಚರಾಣಿ ಚ ॥ ೪೫ ॥

ಪಿಂಡಮಿಚ್ಛಂತಿ ಪಿತರಃ ಕನ್ಯಾರಾಶಿಗತೇ ರವೌ ।
ಕನ್ಯಾಂ ಗತೇ ಸವಿತರಿ ಯಾನ್ಯಹಾನಿ ತು ಷೋಡಶ ॥ ೪೬ ॥

ಕ್ರತುಭಿಸ್ತಾನಿ ತುಲ್ಯಾನಿ ದೇವೋ ನಾರಾಯಣೋಽಬ್ರವೀತ್ ।
ರಾಜಸೂಯಾಶ್ವಮೇಧಾಭ್ಯಾಂ ಯ ಇಚ್ಛೇದ್ದುರ್ಲಭಂ ಫಲಂ ॥ ೪೭ ॥

ಅಪ್ಯಂಬುಶಾಕಮೂಲಾದ್ಯೈಃ ಪಿತೄನ್ಕನ್ಯಾಗತೇಽರ್ಚಯೇತ್ ।
ಉತ್ತರಾಹಸ್ತನಕ್ಷತ್ರಗತೇ ತೀಕ್ಷ್ಣಾಂಶುಮಾಲಿನಿ ॥ ೪೮ ॥

ಗಳನ್ನು ಕೋರಿ ಶ್ರಾದ್ಧಮಾಡುವರೋ ಅದೇ ಇಷ್ಟಾರ್ಥಗಳನ್ನು ಹೊಂದುವರು. ನಾಂದೀ ಮೊದಲಾದ ಶ್ರಾದ್ಧಗಳನ್ನು ಸೂರ್ಯನು ಕನ್ಯಾರಾಶಿಗೆ ಬಂದಾಗ ಮಾಡಬೇಕು.

೪೫. ವರಾಹನ ಮಾತಿನಂತೆ ದ್ಯುಲೋಕದಲ್ಲಿಯೂ, ಭೂಲೋಕದಲ್ಲಿಯೂ, ಅಂತರಿಕ್ಷದಲ್ಲಿಯೂ, ಸ್ಥಾವರರೂಪವಾಗಿಯೂ ಚರರೂಪವಾಗಿಯೂ ಇರತಕ್ಕ ಪಿತೃಗಳಿಗೆ ಪೂರ್ಣಿಮೆಯಲ್ಲಿ ಶ್ರಾದ್ಧಮಾಡಬೇಕು.

೪೬. ಸೂರ್ಯನು ಕನ್ಯಾರಾಶಿಯನ್ನು ಪ್ರವೇಶಿಸಿದಾಗ ಪಿತೃಗಳು ಪಿಂಡವನ್ನು ಅಪೇಕ್ಷಿಸುವರು. ಆ ಕನ್ಯಾಮಾಸದಲ್ಲಿರುವ ಹದಿನಾರು ದಿನಗಳು-

೪೭. ಕ್ರತುಗಳಿಗೆ ಸಮಾನವಾದುದು ಎಂದು ಸಾಕ್ಷಾತ್ ನಾರಾಯಣನೇ ಹೇಳಿರುವನು. ರಾಜಸೂಯ, ಅಶ್ವಮೇಧ ಯಾಗಗಳಿಗೂ ದುರ್ಲಭವೆನಿಸಿದ ಫಲವನ್ನು ಅಪೇಕ್ಷಿಸತಕ್ಕವನು-

೪೮. ಸೂರ್ಯನು ಕನ್ಯಾರಾಶಿಗೆ ಬಂದಾಗ ಪಿತೃಗಳನ್ನುದ್ದೇಶಿಸಿ 'ನೀರು, ಶಾಕ, ಗೆಡ್ಡೆಗೆಣಸು' ಮೊದಲಾದುವುಗಳನ್ನು ಕೊಟ್ಟರೆ ಪಡೆಯುವನು. ಉತ್ತರಾ, ಹಸ್ತ ನಕ್ಷತ್ರಗಳಲ್ಲಿ ಸೂರ್ಯನು ಪ್ರವೇಶಿಸಿದಾಗ (ಕನ್ಯಾಮಾಸ) ಯಾವನು ಭಕ್ತಿಯಿಂದ ತನ್ನ ಪಿತೃಗಳನ್ನು ಆರಾಧಿಸುವನೋ ಅವನಿಗೆ ಸ್ವರ್ಗದಲ್ಲಿ ವಾಸವುಂಟಾಗುವುದು.

ಯೋಽರ್ಚಯೇತ್ಸ್ವಪಿತ್ರ್ಯಾನ್ಭಕ್ತ್ಯಾ ತಸ್ಯ ವಾಸಸ್ತ್ರಿವಿಷ್ಟಪೇ ।
ಹಸ್ತರ್ಕ್ಷಗೇ ದಿನಕರೇ ಪಿತೃರಾಜಾನುಶಾಸನಾತ್ ॥ ೪೯ ॥

ತಾವತ್ಪಿತೃಪುರೀ ಶೂನ್ಯಾ ಯಾವದ್ವೃಶ್ಚಿಕದರ್ಶನಂ ।
ವೃಶ್ಚಿಕೇ ಸಮತಿಕ್ರಾಂತೇ ಪಿತರೋ ದೈವತೈಃ ಸಹ ॥ ೫೦ ॥

ನಿಃಶ್ವಸ್ಯ ಪ್ರತಿಗಚ್ಛಂತಿ ಶಾಪಂ ದತ್ವಾ ಸುದುಃಸಹಂ ।
ಅಷ್ಟಕಾಸು ಚ ಕರ್ತವ್ಯಂ ಶ್ರಾದ್ಧಂ ಮನ್ವಂತರಾಸು ವೈ ॥ ೫೧ ॥

ಅನ್ವಷ್ಟಕಾಸು ಕ್ರಮಶೋ ಮಾತೃಪೂರ್ವಂ ತದಿಷ್ಯತೇ ।
ಗ್ರಹಣೇ ಚ ವ್ಯತೀಪಾತೇ ರವಿಚಂದ್ರಸಮಾಗಮೇ ॥ ೫೨ ॥

ಜನ್ಮರ್ಕ್ಷೇ ಗ್ರಹಪೀಡಾಯಾಂ ಶ್ರಾದ್ಧಂ ಪಾರ್ವಣಮುಚ್ಯತೇ ।
ಅಯನದ್ವಿತಯೇ ಶ್ರಾದ್ಧಂ ವಿಷುವದ್ವಿತಯೇ ತಥಾ ॥ ೫೩ ॥

---

೪೯. ಸೂರ್ಯನು ಹಸ್ತಾನಕ್ಷತ್ರಕ್ಕೆ ಬರುತ್ತಲೇ ಯಮಧರ್ಮರಾಜನ ಅಪ್ಪಣೆಯಿಂದ ಪಿತೃಗಳ ನಿವಾಸವು, ವೃಶ್ಚಿಕಮಾಸವು ಹುಟ್ಟುವವರೆಗೆ ಬರಿದಾಗಿರುವುದು.

೫೦. ವೃಶ್ಚಿಕಮಾಸವು ಬರುತ್ತಲೇ ಪಿತೃಗಳು ದುಃಖದಿಂದ ನಿಟ್ಟುಸಿರು ಬಿಡುತ್ತಾ ಘೋರವಾದ ಶಾಪವನ್ನು (ಶ್ರಾದ್ಧಮಾಡದವರಿಗೆ) ಕೊಟ್ಟು ವಿಶ್ವೇ ದೇವತೆಗಳೊಡನೆ ತಮ್ಮ ನಿವಾಸಕ್ಕೆ ತೆರಳುವರು.

೫೧. ಅಷ್ಟಕಾದಿ ದಿನಗಳಲ್ಲಿಯೂ, ಮನ್ವಂತರದಿವಸಗಳಲ್ಲಿಯೂ ಅನ್ವಷ್ಟಕಾದಿವಸಗಳಲ್ಲಿಯೂ ಕ್ರಮವಾಗಿ ಶ್ರಾದ್ಧಮಾಡಬೇಕು. ಇದಕ್ಕೆ ಮಾತ್ರಪೂರ್ವಶ್ರಾದ್ಧವೆಂದು ಹೆಸರು.

೫೨. ಗ್ರಹಣ, ವ್ಯತೀಪಾತ, ಅಮಾವಾಸ್ಯೆ, ಜನ್ಮನಕ್ಷತ್ರ, ಗ್ರಹಪೀಡಾ ಮುಂತಾದ ಸಮಯಗಳಲ್ಲಿ ಮಾಡತಕ್ಕ ಶ್ರಾದ್ಧವು ಪಾರ್ವಣವೆನಿಸುವುದು.

೫೩-೫೪. ಎರಡು ಅಯನಗಳಲ್ಲಿಯೂ, ಎರಡು ವಿಷುವಗಳಲ್ಲಿಯೂ, ಸಂಕ್ರಮಣಗಳಲ್ಲಿಯೂ ವಿಧಿಪೂರ್ವಕವಾಗಿ ಶ್ರಾದ್ಧಮಾಡಬೇಕು. ಎಲ್ಲೈ

ಸಂಕ್ರಾಂತಿಷು ಚ ಕರ್ತವ್ಯಂ ಶ್ರಾದ್ಧಂ ವಿಧಿವದುತ್ತಮಂ ।
ಏಷು ಕಾರ್ಯಂ ದ್ವಿಜಾಃ ಶ್ರಾದ್ಧಂ ಪಿಂಡನಿರ್ವಾಪಣಾದೃತೇ ॥ ೫೪ ॥

ವೈಶಾಖಸ್ಯ ತೃತೀಯಾಯಾಂ ನವಮ್ಯಾಂ ಕಾರ್ತಿಕಸ್ಯ ಚ ।
ಶ್ರಾದ್ಧಂ ಕಾರ್ಯಂ ತು ಶುಕ್ಲಾಯಾಂ ಸಂಕ್ರಾಂತಿವಿಧಿನಾ ನರೈಃ ॥ ೫೫ ॥

ತ್ರಯೋದಶ್ಯಾಂ ಭಾದ್ರಪದೇ ಮಾಘೇ ಚಂದ್ರಕ್ಷಯೇಽಹನಿ ।
ಶ್ರಾದ್ಧಂ ಕಾರ್ಯಂ ಪಾಯಸೇನ ದಕ್ಷಿಣಾಯನವಚ್ಚ ತತ್ ॥ ೫೬ ॥

ಯದಾ ಚ ಶ್ರೋತ್ರಿಯೋಽಭ್ಯೇತಿ ಗೇಹಂ ವೇದವಿದಗ್ನಿಮಾನ್ ।
ತೇನೈಕೇನ ಚ ಕರ್ತವ್ಯಂ ಶ್ರಾದ್ಧಂ ವಿಧಿವದುತ್ತಮಂ ॥ ೫೭ ॥

ಶ್ರಾದ್ಧೀಯದ್ರವ್ಯಸಂಪ್ರಾಪ್ತಿರ್ಯದಾ ಸ್ಯಾತ್ಸಾಧುಸಂಮತಾ ।
ಪಾರ್ವಣೇನ ವಿಧಾನೇನ ಶ್ರಾದ್ಧಂ ಕಾರ್ಯಂ ತಥಾ ದ್ವಿಜೈಃ ॥ ೫೮ ॥

ಬ್ರಾಹ್ಮಣರಿರಾ! ಈ ಸಮಯದಲ್ಲಿ ಮಾಡತಕ್ಕ ಶ್ರಾದ್ಧವನ್ನು ಪಿಂಡಪ್ರದಾನ ವಿಲ್ಲದೆ ಮಾಡಬೇಕು.

೫೫. ವೈಶಾಖ ಶುದ್ಧ ತದಿಗೆಯಲ್ಲೂ, ಕಾರ್ತಿಕ ಶುದ್ಧ ನವಮಿಯಲ್ಲೂ ಸಂಕ್ರಮಣಶ್ರಾದ್ಧವಿಧಿಯಂತೆ ಶ್ರಾದ್ಧವಾಚರಿಸಬೇಕು.

೫೬. ಭಾದ್ರಪದ ಕೃಷ್ಣ ತ್ರಯೋದಶಿಯಲ್ಲೂ, ಮಾಘ ಕೃಷ್ಣ ಅಮಾವಾಸ್ಯೆಯಲ್ಲೂ, ದಕ್ಷಿಣಾಯನ ಸಮಯದಲ್ಲಿ ಮಾಡತಕ್ಕ ಶ್ರಾದ್ಧವಿಧಿಯಂತೆ ಪಯಸ್ಸಂಬಂಧವಾದ (ಹಾಲಿನ) ವಸ್ತುಗಳಿಂದ ಶ್ರಾದ್ಧವಾಚರಿಸಬೇಕು.

೫೭. ಯಾವ ಸಮಯದಲ್ಲಿ ವೇದವಿದನೂ, ಅಗ್ನಿಹೋತ್ರಿಯೂ ಆದ ಶ್ರೋತ್ರಿಯ ಬ್ರಾಹ್ಮಣನು ಮನೆಗೆ ಬರುವನೋ ಆ ದಿವಸ ಅವನೊಬ್ಬನನ್ನೇ ನಿಮಂತ್ರಿಸಿ ವಿಧಿಪೂರ್ವಕವಾಗಿ ಶ್ರಾದ್ಧಮಾಡಬೇಕು.

೫೮. ಅದೂ ಅಲ್ಲದೆ, ಶ್ರಾದ್ಧಯೋಗ್ಯವಾದ ವಸ್ತುಗಳು ಯಾವಾಗಲಾದರೂ ದೊರೆತರೆ ಆದಿನ ಪಾರ್ವಣವಿಧಾನದಿಂದ ದ್ವಿಜರಾದವರು ಶ್ರಾದ್ಧ ಮಾಡಬೇಕು.

ಪ್ರತಿಸಂವತ್ಸರಂ ಕಾರ್ಯಂ ಮಾತಾಪಿತ್ರೋರ್ಮೃತೇಽಹನಿ ।
ಪಿತೃವ್ಯಸ್ಯಾಪ್ಯಪುತ್ರಸ್ಯ ಭ್ರಾತುರ್ಜ್ಯೇಷ್ಠಸ್ಯ ಚೈವ ಹಿ ॥ ೫೯ ॥

ಪಾರ್ವಣಂ ದೇವಪೂರ್ವಂ ಸ್ಯಾದೇಕೋದ್ದಿಷ್ಟಂ ಸುರೈರ್ವಿನಾ ।
ದ್ವೌ ದೈವೇ ಪಿತೃಕಾರ್ಯೇ ತ್ರೀನೇಕೈಕಮುಭಯತ್ರ ವಾ ॥ ೬೦ ॥

ಮಾತಾಮಹಾನಾಮಪ್ಯೇವಂ ಸರ್ವಮೂಹೇನ ಕೀರ್ತಿತಂ ।
ಪ್ರೇತೀಭೂತಸ್ಯ ಸತತಂ ಭುವಿ ಪಿಂಡಂ ಜಲಂ ತಥಾ ॥ ೬೧ ॥

ಸತಿಲಂ ಸಕುಶಂ ದದ್ಯಾದ್ಬಹಿರ್ಜಲಸಮೀಪತಃ ।
ತೃತೀಯೇಽಹ್ನಿ ಚ ಕರ್ತವ್ಯಂ ಪ್ರೇತಾಸ್ಥಿಚಯನಂ ದ್ವಿಜೈಃ ॥ ೬೨ ॥

ದಶಾಹೇ ಬ್ರಾಹ್ಮಣಃ ಶುದ್ಧೋ ದ್ವಾದಶಾಹೇನ ಕ್ಷತ್ರಿಯಃ ।
ವೈಶ್ಯಃ ಪಂಚದಶಾಹೇನ ಶೂದ್ರೋ ಮಾಸೇನ ಶುಧ್ಯತಿ ॥ ೬೩ ॥

---

೫೯. ಪ್ರತಿಸಂವತ್ಸರವೂ ತಂದೆ ತಾಯಿಗಳು ಸತ್ತ ದಿವಸದಲ್ಲಿಯೂ. ತಂದೆಯ ಸಹೋದರರು ಪುತ್ರವಂತರಲ್ಲದಿದ್ದಲ್ಲಿ ಅವರಿಗೆ ಅವರ ಮೃತತಿಥಿಯಲ್ಲಿಯೂ, ಜ್ಯೇಷ್ಠಭ್ರಾತೃವಿಗೆ ಪುತ್ರನಿಲ್ಲದಿದ್ದಲ್ಲಿ ಆತನಿಗೆ ಆತನ ಮೃತತಿಥಿಯಲ್ಲಿಯೂ ಶ್ರಾದ್ಧಮಾಡಬೇಕು.

೬೦. ಪಾರ್ವಣಶ್ರಾದ್ಧವನ್ನು ದೇವಪೂರ್ವಕವಾಗಿ ಮಾಡಬೇಕು. ಏಕೋದ್ದಿಷ್ಟಶ್ರಾದ್ಧದಲ್ಲಿ ವಿಶ್ವೇದೇವತೆಗಳು ಬೇಕಾಗಿಲ್ಲವು. ವಿಶ್ವೇದೇವಸ್ಥಾನದಲ್ಲಿ ಇಬ್ಬರನ್ನೂ, ಪಿತೃಸ್ಥಾನದಲ್ಲಿ ಮೂವರನ್ನೂ, ಇಲ್ಲದಿದ್ದರೆ ಎರಡು ಸ್ಥಾನಗಳಲ್ಲಿಯೂ ಒಬ್ಬೊಬ್ಬರನ್ನೂ ನಿಮಂತ್ರಿಸಬೇಕು.

೬೧–೬೨. ಮಾತಾಮಹಶ್ರಾದ್ಧದಲ್ಲಿಯೂ ಸಹ ಇದೇರೀತಿ ಊಹಿಸಿ ಶ್ರಾದ್ಧಮಾಡಬೇಕು. ಮನುಷ್ಯನು ಸತ್ತನಂತರ ಪ್ರೇತಾವಸ್ಥೆಯಲ್ಲಿರುವಾಗ (ಅವನಿಗೆ) ಊರಹೊರಗಿನ ಜಲಾಶಯದ ಬಳಿಗೆ ಹೋಗಿ ನೆಲದಮೇಲೆ ತಿಲದರ್ಭೆಗಳೊಡನೆ ಪಿಂಡವನ್ನೂ ಜಲವನ್ನೂ ಕೊಡಬೇಕು. ಮೂರನೆಯ ದಿವಸದಲ್ಲಿ ಆ ಪ್ರೇತನ ಅಸ್ಥಿಸಂಚಯನವನ್ನು ಮಾಡಬೇಕು.

೬೩. ಹತ್ತನೆಯ ದಿವಸವು ಮುಗಿಯಲು ಬ್ರಾಹ್ಮಣನೂ, ಹನ್ನೆರಡು ದಿನಗಳು ಕಳೆಯಲು ಕ್ಷತ್ರಿಯನೂ, ಹದಿನೈದು ದಿನಗಳನಂತರ ವೈಶ್ಯನೂ, ಒಂದು ತಿಂಗಳಾದಮೇಲೆ ಶೂದ್ರನೂ ಮೃತಾಶೌಚದಿಂದ ಶುದ್ಧರಾಗುವರು.

ಸೂತಕಾಂತೇ ಗೃಹೇ ಶ್ರಾದ್ಧಮೇಕೋದ್ದಿಷ್ಟಂ ಪ್ರಚಕ್ಷತೇ ।
ದ್ವಾದಶೇಽಹನಿ ಮಾಸೇ ಚ ತ್ರಿಪಕ್ಷೇ ಚ ತತಃ ಪರಂ ॥ ೬೪ ॥

ಮಾಸಿ ಮಾಸಿ ಚ ಕರ್ತವ್ಯಂ ಯಾವತ್ಸಂವತ್ಸರಂ ದ್ವಿಜಾಃ ।
ತತಃ ಪರತರಂ ಕಾರ್ಯಂ ಸಪಿಂಡೀಕರಣಂ ಕ್ರಮಾತ್ ॥ ೬೫ ॥

ಕೃತೇ ಸಪಿಂಡೀಕರಣೇ ಪಾರ್ವಣಂ ಪ್ರೋಚ್ಯತೇ ಪುನಃ ।
ತತಃ ಪ್ರಭೃತಿ ನಿರ್ಮುಕ್ತಾಃ ಪ್ರೇತತ್ವಾತ್ಪಿತೃತಾಂ ಗತಾಃ ॥ ೬೬ ॥

ಅಮೂರ್ತಾ ಮೂರ್ತಿಮಂತಶ್ಚ ಪಿತರೋ ದ್ವಿವಿಧಾಃ ಸ್ಮೃತಾಃ ।
ನಾಂದೀಮುಖಾಸ್ತ್ವಮೂರ್ತಾಃ ಸ್ಯುರ್ಮೂರ್ತಿಮಂತೋಽಥ ಪಾರ್ವಣಾಃ ।
ಏಕೋದಿಷ್ಟಾಶಿನಃ ಪ್ರೇತಾಃ ಪಿತೄಣಾಂ ನಿರ್ಣಯಸ್ತ್ರಿಧಾ ॥ ೬೭ ॥

---

೬೪. ಈ ಸೂತಕವು ಮುಗಿದನಂತರ ಏಕೋದ್ದಿಷ್ಟಶ್ರಾದ್ಧವನ್ನು ಮನೆಯಲ್ಲಿ ಮಾಡಬೇಕೆಂದು ಹೇಳುವರು. ಹನ್ನೆರಡನೆಯ ದಿನದಲ್ಲಿಯಾಗಲಿ, ತಿಂಗಳಿಗಾಗಲಿ ಅಥವಾ ಮೂರು ಪಕ್ಷಗಳ ಮೇಲಾಗಲಿ ಈ ಏಕೋದ್ದಿಷ್ಟಶ್ರಾದ್ಧವನ್ನು ಆಚರಿಸಬೇಕು.

೬೫. ಎಲೈ ಬ್ರಾಹ್ಮಣರಿರಾ! ಈರೀತಿಯಾಗಿ ಒಂದು ಸಂವತ್ಸರವು ಪೂರ್ತಿಯಾಗುವವರೆಗೂ ಪ್ರತಿತಿಂಗಳಲ್ಲಿಯೂ ಅದನ್ನು ಮಾಡಬೇಕು. ಅದು ಆದನಂತರ ಕ್ರಮವಾಗಿ ಸಪಿಂಡೀಕರಣಶ್ರಾದ್ಧ ಮಾಡಬೇಕು.

೬೬. ಸಪಿಂಡೀಕರಣಶ್ರಾದ್ಧವಾದನಂತರ ಆಮೇಲೆ ಪಾರ್ವಣಶ್ರಾದ್ಧವೆನಿಸುವುದು. ಆ ಸಪಿಂಡೀಕರಣವಾದಮೇಲೆ ಪ್ರೇತಾವಸ್ಥೆಯನ್ನು ಕಳೆದುಕೊಂಡು ಪಿತೃದೇವತೆಗಳಾಗುವರು.

೬೭. ಪಿತೃಗಳಲ್ಲಿ ಮೂರ್ತರೆಂತಲೂ, ಅಮೂರ್ತರೆಂತಲೂ ಎರಡು ಬಗೆಯಿರುವುದು. ನಾಂದೀ ಮೊದಲಾದ ಶ್ರಾದ್ಧಗಳಲ್ಲಿ ಬರುವವರು ಅಮೂರ್ತರಾದ ಪಿತೃಗಳು. ಪಾರ್ವಣಶ್ರಾದ್ಧಗಳಲ್ಲಿ ಬರುವವರು ಮೂರ್ತಪಿತೃಗಳು. ಏಕೋದ್ದಿಷ್ಟಶ್ರಾದ್ಧದಲ್ಲಿ ಬರುವವರು ಪ್ರೇತಾವಸ್ಥೆಯಲ್ಲಿರುವ ಪಿತೃಗಳು. ಈರೀತಿಯಾಗಿ ಪಿತೃಗಳನ್ನು ಮೂರುರೀತಿಯಾಗಿ ವಿಂಗಡಿಸಿರುವರು.

॥ ಮುನಯ ಊಚುಃ ॥

ಕಥಂ ಸಪಿಂಡೀಕರಣಂ ಕರ್ತವ್ಯಂ ದ್ವಿಜಸತ್ತಮ ।
ಪ್ರೇತೀಭೂತಸ್ಯ ವಿಧಿವದ್ಬ್ರೂಹಿ ನೋ ವದತಾಂ ವರ ॥ ೬೮ ॥

॥ ವ್ಯಾಸ ಉವಾಚ ॥

ಸಪಿಂಡೀಕರಣಂ ವಿಪ್ರಾಃ ಶೃಣುಧ್ವಂ ವದತೋ ಮಮ ।
ತಚ್ಚಾಪಿ ದೇವರಹಿತಮೇಕಾರ್ಘ್ಯೈಕಪವಿತ್ರಕಂ ॥ ೬೯ ॥

ನೈವಾಗ್ನೌಕರಣಂ ತತ್ರ ತಚ್ಚಾವಾಹನವರ್ಜಿತಂ ।
ಅಪಸವ್ಯಂ ಚ ತತ್ರಾಪಿ ಭೋಜಯೇದಯುಜೋ ದ್ವಿಜಾನ್ ॥ ೭೦ ॥

ವಿಶೇಷಸ್ತತ್ರ ಚಾನ್ಯೋಽಸ್ತಿ ಪ್ರತಿಮಾಸಕ್ರಿಯಾದಿಕಃ ।
ತಂ ಕಥ್ಯಮಾನಮೇಕಾಗ್ರಾಃ ಶೃಣುಧ್ವಂ ಮೇ ದ್ವಿಜೋತ್ತಮಾಃ ॥ ೭೧ ॥

---

೬೮. ಇದನ್ನು ಕೇಳುತ್ತಿದ್ದ ಮುನಿಗಳು ವ್ಯಾಸನನ್ನು ಕುರಿತು “ ಎಲೈ ದ್ವಿಜಶ್ರೇಷ್ಠನೇ! ವಾಗ್ಮಿವರೇಣ್ಯನೇ ! ಪ್ರೇತಾವಸ್ಥೆಯಲ್ಲಿರುವವನಿಗೆ ಸಪಿಂಡೀಕರಣಶ್ರಾದ್ಧವನ್ನು ಯಾವ ವಿಧಿಯನ್ನನುಸರಿಸಿ ಮಾಡಬೇಕು ? ಅದನ್ನು ತಿಳಿಸು ” ಎಂದು ಪ್ರಶ್ನಿಸಲು

೬೯. ವ್ಯಾಸನು ಹೇಳತೊಡಗಿದನು ;—ಎಲೈ ವಿಪ್ರರೇ! ಸಪಿಂಡೀಕರಣಶ್ರಾದ್ಧವನ್ನು ವಿವರಿಸುವೆನು, ಕೇಳಿರಿ. ಅದರಲ್ಲಿ ದೇವತೆಗಳಿಗೆ ಒಂದೇ ಅರ್ಘ್ಯಪಾತ್ರೆ, ಒಂದೇ ಪವಿತ್ರವು.

೭೦. ಅಗ್ನೌಕರಣವೂ ಇಲ್ಲ ಮತ್ತು ಅಲ್ಲಿ ಆವಾಹನೆಯೂ ಇಲ್ಲ. ಅದರಲ್ಲೂ ವಿಷಮಸಂಖ್ಯಾಕರಾದ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಕರ್ಮವನ್ನು ಅಪಸವ್ಯವಾಗಿ ಮಾಡಬೇಕು.

೭೧. ಇದೂ ಅಲ್ಲದೆ ಅಲ್ಲಿ ಪ್ರತಿತಿಂಗಳೂ ಮಾಡತಕ್ಕ ಕ್ರಿಯೆಯೇ ಮೊದಲಾದ ವಿಶೇಷಗಳು ಬೇರೆ ಇವೆ. ಅದನ್ನು ನಾನು ಹೇಳುವೆನು. ಏಕಾಗ್ರತೆಯಿಂದ ಆಲಿಸಿರಿ.

ತಿಲಗಂಧೋದಕೈರ್ಯುಕ್ತಂ ತತ್ರ ಪಾತ್ರಚತುಷ್ಟಯಂ ।
ಕುರ್ಯಾತ್ಪಿತೄಣಾಂ ತ್ರಿತಯಮೇಕಂ ಪ್ರೇತಸ್ಯ ಚ ದ್ವಿಜಾಃ ॥ ೭೨ ॥

ಪಾತ್ರತ್ರಯೇ ಪ್ರೇತಪಾತ್ರಾದರ್ಘ್ಯಂ ಚೈವ ಪ್ರಸೇಚಯೇತ್ ।
ಯೇ ಸಮಾನಾ ಇತಿ ಜಪನ್ಪೂರ್ವವಚ್ಛೇಷಮಾಚರೇತ್ ॥ ೭೩ ॥

ಸ್ತ್ರೀಣಾಮಪ್ಯೇವಮೇವ ಸ್ಯಾದೇಕೋದ್ದಿಷ್ಟಮುದಾಹೃತಂ ।
ಸಪಿಂಡೀಕರಣಂ ತಾಸಾಂ ಪುತ್ರಾಭಾವೇ ನ ವಿದ್ಯತೇ ॥ ೭೪ ॥

ಪ್ರತಿಸಂವತ್ಸರಂ ಕಾರ್ಯಮೇಕೋದ್ದಿಷ್ಟಂ ನರೈಃ ಸ್ತ್ರಿಯಾಃ ।
ಮೃತಾಹನಿ ಚ ತತ್ಕಾರ್ಯಂ ಪಿತೄಣಾಂ ವಿಧಿಚೋದಿತಂ ॥ ೭೫ ॥

ಪುತ್ರಾಭಾವೇ ಸಪಿಂಡಾಸ್ತು ತದಭಾವೇ ಸಹೋದರಾಃ ।
ಕುರ್ಯುರೇತಂ ವಿಧಿಂ ಸಮ್ಯಕ್ಪುತ್ರಸ್ಯ ಚ ಸುತಾಃ ಸುತಾಃ ॥ ೭೬ ॥

---

೭೨. ಅಲ್ಲಿ ವರ್ಗತ್ರಯದ ಪಿತೃಗಳಿಗೆ ಮೂರು ಅರ್ಘ್ಯಪಾತ್ರೆಗಳು, ಪ್ರೇತನಿಗೆ ಒಂದು ಅರ್ಘ್ಯಪಾತ್ರೆ. ಈ ನಾಲ್ಕು ಪಾತ್ರೆಗಳಲ್ಲಿಯೂ ತಿಲವನ್ನೂ ಗಂಧೋದಕವನ್ನೂ ಹಾಕಬೇಕು.

೭೩. ಪ್ರೇತಪಾತ್ರೆಯಿಂದ ಅರ್ಘ್ಯವನ್ನು ತೆಗೆದುಕೊಂಡು, 'ಯೇ ಸಮಾನಾಃ' ಎಂಬ ಮಂತ್ರವನ್ನುಚ್ಚರಿಸುತ್ತಾ ಉಳಿದ ಪಿತೃಗಳ ಅರ್ಘ್ಯಪಾತ್ರೆಯ ಅರ್ಘ್ಯದೊಂದಿಗೆ ಸೇರಿಸಬೇಕು. ಉಳಿದುದೆಲ್ಲವನ್ನೂ ಮೊದಲಿನಂತೆಯೇ ನಡೆಸಬೇಕು.

೭೪. ಸ್ತ್ರೀಯರಿಗೂ ಸಹ ಏಕೋದ್ದಿಷ್ಟಶ್ರಾದ್ಧವನ್ನು ಇದೇರೀತಿ ಮಾಡಬೇಕು. ಆದರೆ ಅವರಿಗೆ ಗಂಡುಮಕ್ಕಳಿಲ್ಲದಿದ್ದರೆ ಸಪಿಂಡೀಕರಣಶ್ರಾದ್ಧವು ಇಲ್ಲ.

೭೫. ಎಲೈ ದ್ವಿಜರಿರಾ! ಆ ಸ್ತ್ರೀಯರಿಗೆ ಮೃತತಿಥಿಯಲ್ಲಿ ಪ್ರತಿಸಂವತ್ಸರವೂ ವಿಧಿಗನುಸಾರವಾಗಿ ಏಕೋದ್ದಿಷ್ಟಶ್ರಾದ್ಧವನ್ನೇ ಮಾಡಬೇಕು.

೭೬. ಗಂಡುಮಕ್ಕಳಿಲ್ಲದಿದ್ದರೆ ಆ ಪಿತೃಗಳಿಗೆ ಮೃತತಿಥಿಯಲ್ಲಿ ವಿಧ್ಯನುಸಾರವಾಗಿ ದಾಯಾದಿಗಳಾಗಲಿ, ಇಲ್ಲದಿದ್ದರೆ ಒಡಹುಟ್ಟಿದವರಾಗಲಿ, ಇಲ್ಲದಿದ್ದರೆ ಮಗನ ಮಕ್ಕಳಾಗಲೀ ಈ ಶ್ರಾದ್ಧವನ್ನು ನಡೆಸಬೇಕು.

ಕುರ್ಯಾನ್ಮಾತಾಮಹಾನಾಂ ತು ಪುತ್ರಿಕಾತನಯಸ್ತಥಾ ।
ದ್ವ್ಯಾಮುಷ್ಯಾಯಣಸಂಜ್ಞಾಸ್ತು ಮಾತಾಮಹಪಿತಾಮಹಾನ್ ॥ ೭೭ ॥

ಪೂಜಯೇಯುರ್ಯಥಾನ್ಯಾಯಂ ಶ್ರಾದ್ಧೈರ್ನೈಮಿತ್ತಿಕೈರಪಿ ।
ಸರ್ವಾಭಾವೇ ಸ್ತ್ರಿಯಃ ಕುರ್ಯುಃ ಸ್ವಭರ್ತೄಣಾಮಮಂತ್ರಕಂ ॥ ೭೮ ॥

ತದಭಾವೇ ಚ ನೃಪತಿಃ ಕಾರಯೇತ್ತ್ಸ್ವಕುಟುಂಬಿನಾಂ ।
ತಜ್ಜಾತೀಯೈರ್ನರೈಃ ಸಮ್ಯಗ್ದಾಹಾದ್ಯಾಃ ಸಕಲಾಃ ಕ್ರಿಯಾಃ ॥ ೭೯ ॥

ಸರ್ವೇಷಾಮೇವ ವರ್ಣಾನಾಂ ಬಾಂಧವೋ ನೃಪತಿರ್ಯತಃ ।
ಏತಾ ವಃ ಕಥಿತಾ ವಿಪ್ರಾ ನಿತ್ಯಾ ನೈಮಿತ್ತಿಕಾಸ್ತಥಾ ॥ ೮೦ ॥

ವಕ್ಷ್ಯೇ ಶ್ರಾದ್ಧಾಶ್ರಯಾಮನ್ಯಾಂ ನಿತ್ಯನೈಮಿತ್ತಿಕಾಂ ಕ್ರಿಯಾಂ ।
ದರ್ಶಸ್ತತ್ರ ನಿಮಿತ್ತಂ ತು ವಿದ್ಯಾದಿಂದುಕ್ಷಯಾನ್ವಿತಃ ॥ ೮೧ ॥

---

೭೭. ಮಾತಾಮಹಶ್ರಾದ್ಧವನ್ನು ಮಗಳ ಮಗನು ಮಾಡಬೇಕು. ದ್ವ್ಯಾಮುಷ್ಯಾಯಣರೆನಿಸಿದವರು ಮಾತಾಮಹರಿಗೂ ಪಿತಾಮಹರಿಗೂ ವಿಧಿಗನುಸಾರವಾಗಿ ನಿತ್ಯನೈಮಿತ್ತಿಕ ಶ್ರಾದ್ಧಗಳನ್ನು ಮಾಡಿ ಪೂಜಿಸಬೇಕು.

೭೮. ಯಾರೂ ಇಲ್ಲದಿದ್ದರೆ ಸ್ತ್ರೀಯರೇ ಅಮಂತ್ರಕವಾಗಿ ತಮ್ಮ ಪತಿಗಳಿಗೆ ಶ್ರಾದ್ಧಮಾಡಬೇಕು.

೭೯-೮೦. ಕುಟುಂಬವೇ ಇಲ್ಲದಿರುವಂತಹ ಏಕಾಂಗಿಗಳಿಗೆ ದೊರೆಯಾದವನು ನಿಂತುಕೊಂಡು ಅವನ ಜಾತಿಯ ಜನರಿಂದ ದಾಹನ ಮೊದಲಾದ (ಪ್ರಥಮದಿನದ ಸಂಸ್ಕಾರ ಮೊದಲುಗೊಂಡು) ಸಕಲಸಂಸ್ಕಾರಗಳನ್ನೂ ನೆರವೇರಿಸಬೇಕು. ಏಕೆಂದರೆ ಸಕಲವರ್ಣದವರಿಗೂ ದೊರೆಯೇ ಬಂಧುವು. ಎಲೈ ವಿಪ್ರರಿರಾ! ಈರೀತಿಯಾಗಿ ನಿಮಗೆ ನಿತ್ಯನೈಮಿತ್ತಿಕಶ್ರಾದ್ಧಗಳನ್ನು ವಿವರಿಸಿದೆನು.

೮೧. ಇದೂ ಅಲ್ಲದೆ ನಿಮಗೆ ಬೇರೊಂದು ನಿತ್ಯನೈಮಿತ್ತಿಕಶ್ರಾದ್ಧಗಳ ಕ್ರಿಯೆಯನ್ನೂ ವಿವರಿಸುವೆನು. ದರ್ಶವೆಂಬ ಶ್ರಾದ್ಧವಿರುವುದು. ಇದಕ್ಕೆ ಅಮಾವಾಸ್ಯೆಯೇ ನಿಮಿತ್ತವು. (ಇದು ನೈಮಿತ್ತಿಕಶ್ರಾದ್ಧವು)

ನಿತ್ಯಸ್ತು ನಿಯತಃ ಕಾಲಸ್ತಸ್ಮಿನ್ಕುರ್ಯಾದ್ಯಥೋದಿತಂ ।
ಸಪಿಂಡೀಕರಣಾದೂರ್ಧ್ವಂ ಪಿತುರ್ಯಃ ಪ್ರಪಿತಾಮಹಃ ॥ ೮೨ ॥

ಸ ತು ಲೇಪಭುಜಂ ಯಾತಿ ಪ್ರಲುಪ್ತಃ ಪಿತೃಪಿಂಡತಃ ।
ತೇಷಾಂ ಹಿ ಯಶ್ಚತುರ್ಥೋಽನ್ಯಃ ಸ ತು ಲೇಪಭುಜೋ ಭವೇತ್ ॥ ೮೩ ॥

ಸೋಽಪಿ ಸಂಬಂಧತೋ ಹೀನಮುಪಭೋಗಂ ಪ್ರಪದ್ಯತೇ ।
ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ॥ ೮೪ ॥

ಪಿಂಡಸಂಬಂಧಿನೋ ಹ್ಯೇತೇ ವಿಜ್ಞೇಯಾಃ ಪುರುಷಾಸ್ತ್ರಯಃ ।
ಲೇಪಸಂಬಂಧಿನಶ್ಚಾನ್ಯೇ ಪಿತಾಮಹಪಿತಾಮಹಾತ್ ॥ ೮೫ ॥

ಪ್ರಭೃತ್ಯುಕ್ತಾಸ್ತ್ರಯಸ್ತೇಷಾಂ ಯಜಮಾನಶ್ಚ ಸಪ್ತಮಃ ।
ಇತ್ಯೇಷ ಮುನಿಭಿಃ ಪ್ರೋಕ್ತಃ ಸಂಬಂಧಃ ಸಾಪ್ತಪೌರುಷಃ ॥ ೮೬ ॥

---

೮೨. ನಿತ್ಯಶ್ರಾದ್ಧವೆಂದರೆ ನಿಯತವಾದ ಕಾಲದಲ್ಲಿ ಬರುವಂತಹ ಶ್ರಾದ್ಧವು. (ಕಾಲಶ್ರಾದ್ಧವು) ಇದನ್ನು ಹಿಂದೆ ಹೇಳಿದಂತೆ ವಿಧ್ಯನುಸಾರವಾಗಿ ಆಚರಿಸಬೇಕು. ಸಪಿಂಡೀಕರಣಾನಂತರ ತನ್ನ ತಂದೆಗೆ ಪ್ರಪಿತಾಮಹನಾದವನು ಪಿತೃಗಳವರ್ಗದಿಂದ ಬಿಡಲ್ಪಟ್ಟು, ಪಿಂಡವಿಲ್ಲದವನಾಗುವನಷ್ಟೆ! ಆ ಪಿತೃವಿನ ಪ್ರಪಿತಾಮಹನು ಲೇಪಭುಜನೆನಿಸುವನು.

೮೩. ಮತ್ತು ವರ್ಗಕ್ಕೆ ಸೇರಿದ ಕೊನೆಯ ಪಿತೃವಿಗೆ ಯಾರು ನಾಲ್ಕನೆಯ ತಲೆಯ ಪಿತೃವೋ ಆತನೂ ಲೇಪಭುಜನೆನಿಸುವನು.

೮೪–೮೫. ಅವನೂ ಸಹ ವರ್ಗದಿಂದ ಬಿಡಲ್ಪಟ್ಟುದರಿಂದ, ಪಿಂಡವಿಲ್ಲದಿದ್ದರೂ ಲೇಪಕಾರ್ಯದಿಂದ ಉಪಭೋಗವನ್ನು ಪಡೆಯುವನು. ಪಿತೃಪಿತಾಮಹ ಪ್ರಪಿತಾಮಹರೆಂಬ ಮೂವರು ಪುರುಷರು ಮಾತ್ರ ಪಿಂಡಭಾಗಿಗಳು. ಪಿತಾಮಹನಿಂದ (ತನ್ನ ನಾಲ್ಕನೆಯ ತಲೆಯಾದಮೇಲೆ) ಹಿಡಿದು ಇನ್ನು ಮೂವರು ಪುರುಷರು ಲೇಪಸಂಬಂಧಿಗಳೆನಿಸುವರು.

೮೬. ಶ್ರಾದ್ಧಮಾಡುವ ಯಜಮಾನನೇ ಏಳನೆಯವನು. ಈ ಸಂಬಂಧವನ್ನೇ ಮುನಿಗಳು ಸಾಪ್ತಪೌರುಷಸಂಬಂಧವೆನ್ನುವರು.

ಯಜಮಾನಾತ್ಪ್ರಭೃತ್ಯೂರ್ಧ್ವಮನುಲೇಪಭುಜಸ್ತಥಾ ।
ತತೋಽನ್ಯೇ ಪೂರ್ವಜಾಃ ಸರ್ವೇ ಯೇ ಚಾನ್ಯೇ ನರಕೌಕಸಃ ॥ ೮೭ ॥

ಯೇಽಪಿ ತಿರ್ಯಕ್ತ್ವಮಾಪನ್ನಾ ಯೇ ಚ ಭೂತಾದಿಸಂಸ್ಥಿತಾಃ ।
ತಾನ್ಸರ್ವಾನ್ಯಜಮಾನೋ ವೈ ಶ್ರಾದ್ಧಂ ಕುರ್ವನ್ಯಥಾವಿಧಿ ॥ ೮೮ ॥

ಸ ಸಮಾಪ್ಯಾಯತೇ ವಿಪ್ರಾ ಯೇನ ಯೇನ ವದಾಮಿ ತತ್ ।
ಅನ್ನಪ್ರಕಿರಣಂ ಯತ್ತು ಮನುಷ್ಯೈಃ ಕ್ರಿಯತೇ ಭುವಿ ॥ ೮೯ ॥

ತೇನ ತೃಪ್ತಿಮುಪಾಯಾಂತಿ ಯೇ ಪಿಶಾಚತ್ವಮಾಗತಾಃ ।
ಯದಂಬು ಸ್ನಾನವಸ್ತ್ರೋತ್ಥಂ ಭೂಮೌ ಪತತಿ ಭೋ ದ್ವಿಜಾಃ ॥ ೯೦ ॥

---

೮೭. (1) ಯಜಮಾನ, (2) ಪಿತೃ, (3) ಪಿತಾಮಹ, (4) ಪ್ರಪಿತಾಮಹ, ವರ್ಗತ್ರಯು,, (ಪಿಂಡಭಾಗಿಗಳು) (5) ಅವನ ತಂದೆ, (6) ಅವನ ತಂದೆ, (7) ಅವನ ತಂದೆ ಲೇಪಭಾಗಿಗಳು. ಈರೀತಿಯಾಗಿ ಎಲ್ಲ ಮಾನದಿಂದ ಹಿಡಿದು ಲೇಪಭಾಗಿಗಳು ಸೇರಿ ಸಪ್ತಪುರುಷರೆನಿಸುವರು. ಇದಕ್ಕೂ ಮೊದಲಿನವರಾದ ತನ್ನ ವಂಶೀಯರು ಯಾರುಂಟೋ ಮತ್ತು ಯಾರು ನರಕದಲ್ಲಿ ಹಿಂಸೆಗೆ ಒಳಗಾಗಿರುವರೋ-

೮೮-೮೯. ಯಾರು ತಿರ್ಯಗ್ಯೋನಿಯಲ್ಲಿ ಹುಟ್ಟಿರುವರೋ, ಯಾರು ಭೂತ ಮೊದಲಾದ ರೂಪದಲ್ಲಿರುವರೋ ಅವರೆಲ್ಲರನ್ನೂ ಶ್ರಾದ್ಧಮಾಡುವ ಯಜಮಾನನಾದ ಪುರುಷನು ಯಾವಯಾವರೀತಿಯಲ್ಲಿ ಆಪ್ಯಾಯನ (ತೃಪ್ತಿ) ಗೊಳಿಸುವನೋ ಅದನ್ನು ನಿಮಗೆ ವಿವರಿಸುವೆನು. ಶ್ರಾದ್ಧಮಾಡುವಾಗ ಕರ್ತೃವು ನೆಲದಮೇಲೆ 'ವಿಕಿರವನ್ನು' ಹಾಕುವುದರಿಂದ

೯೦. ಪಿಶಾಚಾವಸ್ಥೆ (ಭೂತಾವಸ್ಥೆ) ಯನ್ನು ಹೊಂದಿರುವ ಪೂರ್ವಜರು ತೃಪ್ತಿಹೊಂದುವರು. ಎಲೈ ದ್ವಿಜರಿರಾ! ಸ್ನಾನಮಾಡಿದಾಗ ಉಟ್ಟಿರುವ ಬಟ್ಟೆಯಿಂದ ಕೆಳಗೆಬೀಳುವ ನೀರಿನಿಂದ-

ತೇನ ಯೇ ತರುತಾಂ ಪ್ರಾಪ್ತಾಸ್ತೇಷಾಂ ತೃಪ್ತಿಃ ಪ್ರಜಾಯತೇ ।
ಯಾಸ್ತು ಗಂಧಾಂಬುಕಣಿಕಾಃ ಪತಂತಿ ಧರಣೀತಲೇ ॥ ೯೧ ॥

ತಾಭಿರಾಪ್ಯಾಯನಂ ತೇಷಾಂ ದೇವತ್ವಂ ಯೇ ಕುಲೇ ಗತಾಃ ।
ಉದ್ಧೃತೇಷ್ವಥ ಪಿಂಡೇಷು ಯಾಶ್ಚಾಂಬುಕಣಿಕಾ ಭುವಿ ॥ ೯೨ ॥

ತಾಭಿರಾಪ್ಯಾಯನಂ ತೇಷಾಂ ಯೇ ತಿರ್ಯಕ್ತ್ವಂ ಕುಲೇ ಗತಾಃ ।
ಯೇ ಚಾದಂತಾಃ ಕುಲೇ ಬಾಲಾಃ ಕ್ರಿಯಾಯೋಗಾದ್ಬಹಿಷ್ಕೃತಾಃ ॥ ೯೩ ॥

ವಿಪನ್ನಾಸ್ತ್ವನಧಿಕಾರಾಃ ಸಂಮಾರ್ಜಿತಜಲಾಶಿನಃ ।
ಭುಕ್ತ್ವಾ ಚಾಚಾಮತಾಂ ಯಚ್ಚ ಯಜ್ಜಲಂ ಚಾಂಘ್ರಿಶೌಚಜಂ ॥ ೯೪ ॥

ಬ್ರಾಹ್ಮಣಾನಾಂ ತಥೈವಾನ್ಯತ್ತೇನ ತೃಪ್ತಿಂ ಪ್ರಯಾಂತಿ ವೈ ।
ಏವಂ ಯೋ ಯಜಮಾನಸ್ಯ ಯಚ್ಚ ತೇಷಾಂ ದ್ವಿಜನ್ಮನಾಂ ॥ ೯೫ ॥

೯೧-೯೨. ತರುಲತಾದಿ ರೂಪದಲ್ಲಿರುವ ಪಿತೃಗಳು ತೃಪ್ತಿಪಡೆಯುವರು. ನೆಲದಮೇಲೆ ಬೀಳುವ ಗಂಧೋದಕದ ತೊಟ್ಟುಗಳಿಂದ ಯಜಮಾನನ ವಂಶದಲ್ಲಿ ಯಾರಾದರೂ ದೇವತ್ವವನ್ನು ಪಡೆದಿದ್ದರೆ ಅಂಥವರಿಗೆ ತೃಪ್ತಿಯುಂಟಾಗುವುದು. ಪಿಂಡಗಳನ್ನು ಎತ್ತುವಾಗ ನೆಲದಮೇಲೆ ನೀರಿನಹನಿಗಳೇನಾದರೂ ಉದುರಿದಲ್ಲಿ ಅವುಗಳಿಂದ-

೯೩. ಶ್ರಾದ್ಧಕರ್ತೃವಿನ ವಂಶದಲ್ಲಿ ಯಾರಾದರೂ ತಿರ್ಯಕ್ಪ್ರಾಣಿಗಳಾಗಿದ್ದಲ್ಲಿ ಅವರಿಗೆ ತೃಪ್ತಿಯಾಗುವುದು. ಯಾರು ಹಲ್ಲು ಹುಟ್ಟುವುದಕ್ಕೆ ಮುಂಚಿತವಾಗಿಯೂ, ಎಳೆಯವಯಸ್ಸಿನಲ್ಲಿಯೂ ಸತ್ತುಹೋಗಿ ಶ್ರಾದ್ಧಾದಿಕ್ರಿಯೆಗಳಿಗೆ ಅನರ್ಹರೆನಿಸುವರೋ

೯೪. ಮತ್ತು ಯಾರು ಅಧಿಕಾರರಹಿತರೋ ಅಂಥವರು ಗತಿಸಿದಾಗ ಹಾರುವ ನೀರನ್ನೂ, ಬ್ರಾಹ್ಮಣರು ಊಟಮಾಡಿದನಂತರ ಆಚಮನಮಾಡುವಾಗಲೂ, ಕಾಲುತೊಳೆದುಕೊಳ್ಳುವಾಗಲೂ ಕೆಳಗೆಬೀಳುವ ನೀರನ್ನೂ ಸ್ವೀಕರಿಸಿ ತೃಪ್ತಿಹೊಂದುವರು.

೯೫-೯೭. ಈರೀತಿಯಾಗಿ ಶ್ರಾದ್ಧಕರ್ತೃವಾಗಲೀ, ನಿಮಂತ್ರಿತರಾದ ಬ್ರಾಹ್ಮಣರಾಗಲೀ ಮಾಡುವ ಜಲವಿಕ್ಷೇಪವಾಗಲೀ, ಅನ್ನವಿಕ್ಷೇಪವಾಗಲಿ,

ಕಶ್ಚಿಜ್ಜಲಾನ್ನವಿಕ್ಷೇಪಃ ಶುಚಿರುಚ್ಛಿಷ್ಟ ಏವ ವಾ ।
ತೇನಾನ್ನೇನ ಕುಲೇ ತತ್ರ ಯೇ ಚ ಯೋನ್ಯಂತರಂ ಗತಾಃ ॥ ೯೬ ॥

ಪ್ರಯಾಂತ್ಯಾಪ್ಯಾಯನಂ ವಿಪ್ರಾಃ ಸಮ್ಯಕ್ಶ್ರಾದ್ಧಕ್ರಿಯಾವತಾಂ ।
ಅನ್ಯಾಯೋಪಾರ್ಜಿತೈರರ್ಥೈರ್ಯಚ್ಛ್ರಾದ್ಧಂ ಕ್ರಿಯತೇ ನರೈಃ ॥ ೯೭ ॥

ತೃಪ್ಯಂತೇ ತೇ ನ ಚಾಂಡಾಲಪುಲ್ಕಸಾದ್ಯಾಸು ಯೋನಿಷು ।
ಏವಮಾಪ್ಯಾಯನಂ ವಿಪ್ರಾ ಬಹೂನಾಮೇವ ಬಾಂಧವೈಃ ॥ ೯೮ ॥

ಶ್ರಾದ್ಧಂ ಕುರ್ವದ್ಭಿರತ್ರಾಂಬುವಿಕ್ಷೇಪೈಃ ಸಂಪ್ರಜಾಯತೇ ।
ತಸ್ಮಾಚ್ಛ್ರಾದ್ಧಂ ನರೋ ಭಕ್ತ್ಯಾ ಶಾಕೇನಾಪಿ ಯಥಾವಿಧಿ ॥ ೯೯ ॥

ಕುರ್ವೀತ ಕುರ್ವತಃ ಶ್ರಾದ್ಧಂ ಕುಲೇ ಕಶ್ಚಿನ್ನ ಸೀದತಿ ।
ಶ್ರಾದ್ಧಂ ದೇಯಂ ತು ವಿಪ್ರೇಷು ಸಂಯತೇಷ್ವಗ್ನಿಹೋತ್ರಿಷು ॥ ೧೦೦ ॥

ಅದು ಶುದ್ಧವಾಗಿದ್ದರೂ ಅಥವಾ ಉಚ್ಛಿಷ್ಟವಾಗಿದ್ದರೂ ಸರಿಯೇ-ಅದರಿಂದ ಯಜಮಾನನ ಕುಲದಲ್ಲಿ ಹುಟ್ಟಿದ್ದು ಈಗ ಬೇರೆಬೇರೆ ಜಾತಿಗಳಲ್ಲಿ (ಪಶು ಪಕ್ಷ್ಯಾದಿ) ಜನ್ಮತಾಳಿರುವ ಪಿತೃಗಳು ಚೆನ್ನಾಗಿ ತೃಪ್ತಿಯನ್ನು ಹೊಂದುವರು.

೯೮. ಅನ್ಯಾಯದಿಂದ ಸಂಪಾದಿಸಿದ ಹಣವನ್ನು ಖರ್ಚುಮಾಡಿ ಮಾಡಿದ ಶ್ರಾದ್ಧದಿಂದ ಚಂಡಾಲ, ಪುಲ್ಕಸ ,ಮೊದಲಾದ ಹೀನಜಾತಿಗಳಲ್ಲಿರುವ ಪಿತೃಗಳು ತೃಪ್ತಿಹೊಂದುವರು. ಎಲೈ ಬ್ರಾಹ್ಮಣರಿರಾ! ಈರೀತಿಯಾಗಿ ಬಂಧುಗಳಾದವರು ಶ್ರಾದ್ಧಮಾಡುವಾಗ ಬೀಳುವ ನೀರಿನಹನಿಗಳಿಂದ ಅನೇಕ ರೀತಿಯ ಪಿತೃಗಳಿಗೆ ತೃಪ್ತಿಯುಂಟಾಗುವುದು.

೯೯. ಆದುದರಿಂದ ಮಾನವನು ಶಾಕಮಾತ್ರದಿಂದಲಾಗಲಿ ಭಕ್ತಿಯಿಂದ ವಿಧಿವತ್ತಾಗಿ ಶ್ರಾದ್ಧವನ್ನು ಮಾಡಲೇಬೇಕು. ಆರೀತಿ ಶ್ರಾದ್ಧಮಾಡಿದರೆ ಅವನ ವಂಶದಲ್ಲಿ ಯಾರೂ ವ್ಯಥೆಯನ್ನು ಹೊಂದುವುದಿಲ್ಲ.

೧೦೦-೧೦೧. ಶ್ರಾದ್ಧವನ್ನು ಮಾಡುವಾಗ ಜಿತೇಂದ್ರಿಯರೂ, ಅಗ್ನಿಹೋತ್ರವಿಟ್ಟಿರುವರೂ, ಶುದ್ಧಚರಿತರೂ, ಜ್ಞಾನಿಗಳೂ, ವೇದಾಧ್ಯಯನ ಮಾಡಿ

ಅವದಾತೇಷು ವಿದ್ವತ್ಸು ಶ್ರೋತ್ರಿಯೇಷು ವಿಶೇಷತಃ ।
ತ್ರಿಣಾಚಿಕೇತಸ್ತ್ರಿಮಧುಸ್ತ್ರಿಸುಪರ್ಣಃ ಷಡಂಗವಿತ್ ॥ ೧೦೧ ॥

ಮಾತಾಪಿತೃಪರಶ್ಚೈವ ಸ್ವಸ್ತ್ರೀಯಃ ಸಾಮವೇದವಿತ್ ।
ಋತ್ವಿಕ್ಪುರೋಹಿತಾಚಾರ್ಯಮುಪಾಧ್ಯಾಯಂ ಚ ಭೋಜಯೇತ್ ॥೧೦೨॥

ಮಾತುಲಃ ಶ್ವಶುರಃ ಶ್ಯಾಲಃ ಸಂಬಂಧೀ ದ್ರೋಣಪಾಠಕಃ ।
ಮಂಡಲಬ್ರಾಹ್ಮಣೋ ಯಸ್ತು ಪುರಾಣಾರ್ಥವಿಶಾರದಃ ॥ ೧೦೩ ॥

ಅಕಲ್ಪಃ ಕಲ್ಪಸಂತುಷ್ಟಃ ಪ್ರತಿಗ್ರಹವಿವರ್ಜಿತಃ ।
ಏತೇ ಶ್ರಾದ್ಧೇ ನಿಯೋಕ್ತವ್ಯಾ ಬ್ರಾಹ್ಮಣಾಃ ಪಂಕ್ತಿಪಾವನಾಃ ॥ ೧೦೪ ॥

ದವರೂ ಆದ ಬ್ರಾಹ್ಮಣರನ್ನೇ ನಿಮಂತ್ರಣಕ್ಕೆ ಹೇಳಬೇಕು. ಅಂಥವರಲ್ಲಿ ಶ್ರಾದ್ಧೀಯವಾದ ಅನ್ನಾದಿಗಳನ್ನು ಅರ್ಪಿಸಬೇಕು ಮತ್ತು ಯಾವನು ಮೂರು ನಾಚಿಕೇತಾನುವಾಕಗಳನ್ನೂ, ತ್ರಿಸುಪರ್ಣವೆಂಬ ಅನುವಾಕತ್ರಯವನ್ನೂ ತಿಳಿದಿರುವನೋ, ಯಾರು ವೇದಾಂಗಗಳಾರನ್ನೂ ತಿಳಿದಿರುವರೋ

೧೦೨. ಯಾರು ಮಾತಾಪಿತೃಗಳಲ್ಲಿ ಭಕ್ತಿಯಿಟ್ಟು ಅವರ ಸೇವೆಯನ್ನೇ ಮಾಡುವರೋ ಮತ್ತು ಯಾರು ಸಹೋದರಿಯ ಪುತ್ರರೋ, ಯಾರು ಸಾಮ ವೇದವನ್ನು ಬಲ್ಲವರೋ, ಯಾರು ಋತ್ವಿಕ್ಕುಗಳೋ, ಯಾರು ಪುರೋಹಿತರೋ, ಯಾರು ಆಚಾರ್ಯರೋ, ಯಾರು ಗುರುಗಳೋ ಅವರೆಲ್ಲರೂ ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಅರ್ಹತೆಯುಳ್ಳವರು.

೧೦೩-೧೦೪. ಸೋದರಮಾವ, ಹೆಣ್ಣುಕೊಟ್ಟಮಾವ, ಭಾವಮೈದ, ಸಂಬಂಧಿಕ, ದ್ರೋಣಪಾಠಕ, ಮಂಡಲಬ್ರಾಹ್ಮಣವನ್ನು ಬಲ್ಲವನು, ಪುರಾಣಾರ್ಥವನ್ನು ಚೆನ್ನಾಗಿ ಅರಿತವನು, ಅಕಲ್ಪನಾದವನು, ಕಲ್ಪದಿಂದ ಸಂತುಷ್ಟನಾದವನು, ದಾನವನ್ನು ತೆಗೆದುಕೊಳ್ಳದವನು ಇಂಥಹ ಪಂಕ್ತಿಪಾವನರಾದ ಬ್ರಾಹ್ಮಣರನ್ನು ಶ್ರಾದ್ಧದಲ್ಲಿ ನಿಮಂತ್ರಿಸಬೇಕು

ನಿಮಂತ್ರಯೇತ ಪೂರ್ವೇದ್ಯುಃ ಪೂರ್ವೋಕ್ತಾನ್ದ್ವಿಜಸತ್ತಮಾನ್ ।
ದೈವೇ ನಿಯೋಗೇ ಪಿತ್ರ್ಯೇ ಚ ತಾಂಸ್ತಥೈವೋಪಕಲ್ಪಯೇತ್ ॥ ೧೦೫ ॥

ತೈಶ್ಚ ಸಂಯಮಿಭಿರ್ಭಾವ್ಯಂ ಯಸ್ತು ಶ್ರಾದ್ಧಂ ಕರಿಷ್ಯತಿ ।
ಶ್ರಾದ್ಧಂ ದತ್ವಾ ಚ ಭುಕ್ತ್ವಾ ಚ ಮೈಥುನಂ ಯೋಽಧಿಗಚ್ಛತಿ ॥ ೧೦೬ ॥

ಪಿತರಸ್ತಸ್ಯ ವೈ ಮಾಸಂ ತಸ್ಮಿನ್ರೇತಸಿ ಶೇರತೇ ।
ಗತ್ವಾ ಚ ಯೋಷಿತಂ ಶ್ರಾದ್ಧೇ ಯೋ ಭುಂಕ್ತೇ ಯಸ್ತು ಗಚ್ಛತಿ ॥ ೧೦೭ ॥

ರೇತೋಮೂತ್ರಕೃತಾಹಾರಾಸ್ತಂ ಮಾಸಂ ಪಿತರಸ್ತಯೋಃ ।
ತಸ್ಮಾತ್ತು ಪ್ರಥಮಂ ಕಾರ್ಯಂ ಪ್ರಾಜ್ಞೇನೋಪನಿಮಂತ್ರಣಂ ॥ ೧೦೮ ॥

ಅಪ್ರಾಪ್ತೌ ತದ್ದಿನೇ ವಾಪಿ ವರ್ಜ್ಯಾ ಯೋಷಿತ್ಪ್ರಸಂಗಿನಃ ।
ಭಿಕ್ಷಾರ್ಥಮಾಗತಾಂಶ್ಚಾಪಿ ಕಾಲೇನ ಸಂಯತಾನ್ಯತೀನ್ ॥ ೧೦೯ ॥

---

೧೦೫. ಮೇಲೆ ಹೇಳಿದ ಬ್ರಾಹ್ಮಣನನ್ನು ಹಿಂದಿನ ದಿನವೇ ನಿಮಂತ್ರಿಸಿ, ಬಳಿಕ ದೇವತೆಗಳ ಸ್ಥಾನದಲ್ಲಿಯೂ, ಪಿತೃಗಳ ಸ್ಥಾನದಲ್ಲಿಯೂ ಇರುವಂತೆ ಅವರನ್ನು ಕೇಳಿಕೊಳ್ಳಬೇಕು.

೧೦೬-೧೦೮. ಆರೀತಿ ನಿಮಂತ್ರಿಸಲ್ಪಟ್ಟ ಬ್ರಾಹ್ಮಣನೂ, ಶ್ರಾದ್ಧ ಮಾಡುವ ಯಜಮಾನನೂ, ಸಂಯಮಶೀಲರಾಗಿರಬೇಕು. ಶ್ರಾದ್ಧಮಾಡಿದವನೂ, ಶ್ರಾದ್ಧದಲ್ಲಿ ಭೋಜನಮಾಡಿದವನೂ, ಮಿಥುನಕರ್ಮವನ್ನು (ಸ್ತ್ರೀಸಂಗ) ಆಚರಿಸಿದಲ್ಲಿ ಆ ಶ್ರಾದ್ಧಕರ್ತೃವಿನ ಪಿತೃಗಳು ಒಂದು ತಿಂಗಳುಕಾಲ ಆ ರೇತಸ್ಸಿನಲ್ಲಿಯೇ ಮುಳುಗಿಹೋಗುವರು. ಶ್ರಾದ್ಧಮಾಡಿದವನೂ ನಿಮಂತ್ರಿತನಾದವನೂ ಸ್ತ್ರೀ ಸಮಾಗಮನವನ್ನು ಮಾಡಿದ್ದೇ ಆದರೆ ಆ ತಿಂಗಳು ಪೂರ್ತಿ ಪಿತೃಗಳು ಅವರ ರೇತಸ್ಸನ್ನೂ ಮೂತ್ರವನ್ನೂ ಆಹಾರಮಾಡಿಕೊಂಡಿರಬೇಕಾಗುವುದು. ಆದುದರಿಂದ ಪ್ರಾಜ್ಞನಾದವನು ಮೊದಲಾಗಿಯೇ ಬ್ರಾಹ್ಮಣರನ್ನು ನಿಮಂತ್ರಿಸಬೇಕು.

೧೦೯. ಶ್ರಾದ್ಧದಿನಕ್ಕೆ ಮುಂಚಿತವಾಗಿಯಾಗಲಿ ಆದಿವಸವಾಗಲಿ ಸ್ತ್ರೀಲಂಪಟರಾದವರನ್ನು ನಿಮಂತ್ರಿಸಬಾರದು. ಶ್ರಾದ್ಧಕಾಲಕ್ಕೆ ಸರಿಯಾಗಿ ಭಿಕ್ಷೆಗೋಸ್ಕರ ಬಂದ ಯತಿಗಳನ್ನೂ-

ಭೋಜಯೇತ್ಪ್ರಣಿಪಾತಾದ್ಯೈಃ ಪ್ರಸಾದ್ಯ ಯತಮಾನಸಃ ।
ಯೋಗಿನಶ್ಚ ತದಾ ಶ್ರಾದ್ಧೇ ಭೋಜನೀಯಾ ವಿಪಶ್ಚಿತಾ ॥ ೧೧೦ ॥

ಯೋಗಾಧಾರಾ ಹಿ ಪಿತರಸ್ತಸ್ಮಾತ್ತಾನ್ಪೂಜಯೇತ್ಸದಾ ।
ಬ್ರಾಹ್ಮಣಾನಾಂ ಸಹಸ್ರಾಣಿ ಏಕೋ ಯೋಗೀ ಭವೇದ್ಯದಿ ॥ ೧೧೧ ॥

ಯಜಮಾನಂ ಚ ಭೋಕ್ತ್ರೂಂಶ್ಚ ನೌರಿವಾಂಭಸಿ ತಾರಯೇತ್ ।
ಪಿತೃಗಾಥಾ ತಥೈವಾತ್ರ ಗೀಯತೇ ಬ್ರಹ್ಮವಾದಿಭಿಃ ॥ ೧೧೨ ॥

ಯಾ ಗೀತಾ ಪಿತೃಭಿಃ ಪೂರ್ವಮೈಲಸ್ಯಾಸೀನ್ಮಹೀಪತೇಃ ।
ಕದಾ ನಃ ಸಂತತಾವಗ್ರ್ಯಃ ಕಸ್ಯಚಿದ್ಭವಿತಾ ಸುತಃ ॥ ೧೧೩ ॥

---

೧೧೦. ಯೋಗಿಗಳನ್ನೂ ನಮಸ್ಕಾರಾದಿ ನಾನಾವಿಧವಾದ ಉಪಾಯಗಳಿಂದ ಮನವೊಲಿಸಿ. ಒಪ್ಪಿಸಿ. ಶುದ್ಧಹೃದಯನಾಗಿ ಅವರನ್ನು ನಿಮಂತ್ರಿಸಿ ಆ ಶ್ರಾದ್ಧದಲ್ಲಿ ಅವರಿಗೆ ಭೋಜನಮಾಡಿಸಬೇಕು.

೧೧೧. ಏಕೆಂದರೆ ಪಿತೃಗಳು ಯೋಗವೇ ಆಧಾರವಾಗಿ ಉಳ್ಳವರು ಆದುದರಿಂದಲೇ ಯೋಗನಿರತರಾದವರನ್ನು ಸರ್ವದಾ ಪೂಜಿಸಬೇಕು. ಯೋಗಿಯೊಬ್ಬನು ದೊರೆತರೆ ಸಹಸ್ರಬ್ರಾಹ್ಮಣರು ದೊರೆತಂತೆ.

೧೧೨. ನೀರಿನಲ್ಲಿ ಮುಳುಗಿಹೋಗುವವರನ್ನು ಹಡಗು ಉದ್ಧಾರಮಾಡುವಂತೆ (ಬದುಕಿಸುವಂತೆ) ಶ್ರಾದ್ಧಕರ್ತೃವನ್ನೂ ಪಿತೃಗಳನ್ನೂ ನಿಮಂತ್ರಿತನಾದ ಯೋಗಿಯು ಉದ್ಧಾರಮಾಡುವನು ಬ್ರಹ್ಮವಾದಿಗಳಾದವರು ಈ ವಿಷಯದಲ್ಲಿ ಪಿತೃಗಳು ಹೇಳಿದ ಗಾಥೆಯನ್ನು ಉದಹರಿಸುವರು.

೧೧೩. ಹಿಂದೆ ಇಲನ ಮಗನಾದ (ಐಲನ) ಪುರೂರವಸ್ಸಿನ ಬಳಿ ಈ ಗಾಥೆಯನ್ನು ಪಿತೃಗಳು ಹಾಡಿದ್ದರು. ಅದೇನೆಂದರೆ "ನಮ್ಮ ವಂಶದಲ್ಲಿ ಯಾವನಿಗಾದರೂ ಶ್ರೇಷ್ಠನಾದ ಪುತ್ರನು ಹುಟ್ಟುವನೇ ?

ಯೋ ಯೋಗಿಭುಕ್ತಶೇಷಾನ್ನೋ ಭುವಿ ಪಿಂಡಾನ್ಪ್ರದಾಸ್ಯತಿ ।
ಗಯಾಯಾಮಥವಾ ಪಿಂಡಂ ಖಡ್ಗಮಾಂಸಂ ತಥಾ ಹವಿಃ ॥ ೧೧೪ ॥

ಕಾಲಶಾಕಂ ತಿಲಾಜ್ಯಂ ಚ ತೃಪ್ತಯೇ ಕೃಸರಂ ಚ ನಃ ।
ವೈಶ್ವದೇವಂ ಚ ಸೌಮ್ಯಂ ಚ ಖಡ್ಗಮಾಂಸಂ ಪರಂ ಹವಿಃ ॥ ೧೧೫ ॥

ವಿಷಾಣವರ್ಜಂ ಶಿರಸ ಆ ಪಾದಾದಾಶಿಷಾಮಹೇ ।
ದದ್ಯಾಚ್ಛ್ರಾದ್ಧಂ ತ್ರಯೋದಶ್ಯಾಂ ಮಘಾಸು ಚ ಯಥಾವಿಧಿ ॥ ೧೧೬ ॥

ಮಧುಸರ್ಪಿಃಸಮಾಯುಕ್ತಂ ಪಾಯಸಂ ದಕ್ಷಿಣಾಯನೇ ।
ತಸ್ಮಾತ್ಸಂಪೂಜಯೇದ್ಭಕ್ತ್ಯಾ ಸ್ವಪಿತೄನ್ವಿಧಿವನ್ನರಃ ॥ ೧೧೭ ॥

---

೧೧೪. ಅಂಥಹ ಪುತ್ರನು ಯೋಗಿಗಳನ್ನು ನಿಮಂತ್ರಿಸಿ ಅವರ ಭುಕ್ತಿ ಶೇಷದ (ಊಟಮಾಡಿ ಮಿಕ್ಕ) ಅನ್ನದಿಂದ ಪಿಂಡಗಳನ್ನು ಕಟ್ಟಿ ನಮಗೆ ದಾನ ಮಾಡುವನೇ? ಇಲ್ಲದಿದ್ದರೆ ಗಯೆಯಲ್ಲಿ ಪಿಂಡವನ್ನಾಗಲಿ, ಖಡ್ಗಮಾಂಸ ಖಡ್ಗ ವೆಂಬ ಮೃಗದ ಮಾಂಸವನ್ನಾಗಲಿ, ಹವಿಸ್ಸನ್ನಾಗಲಿ ನಮಗೆ ಈಯುವನೇ!

೧೧೫. ಅಥವಾ ಕಾಲಶಾಕ ತಿಲ ಆಜ್ಯ ಕೃಸರ ವೈಶ್ವದೇವ ಸೌಮ್ಯ ಖಡ್ಗಮಾಂಸ ಹವಿಸ್ಸುಗಳನ್ನು ನಮಗೆ ತೃಪ್ತಿಯಾಗುವುದಕ್ಕೆ ಸಮರ್ಪಿಸುವನೇ!

೧೧೬. ಅಥವಾ ಕೊಂಬೊಂದನ್ನು ಬಿಟ್ಟು ಉಳಿದ, ಕಾಲಿನಿಂದ ಹಿಡಿದು ತಲೆಯವರೆಗಿರುವ ಮಾಂಸ (ಮೃಗಾದಿಗಳ) ವನ್ನು ನಮ್ಮ ತೃಪ್ತಿಗೋಸ್ಕರ ದಾನಮಾಡುವನೇ! ಇಲ್ಲದಿದ್ದರೆ ತ್ರಯೋದಶಿಯಲ್ಲಾಗಲಿ, ಮಘಾನಕ್ಷತ್ರ ದಲ್ಲಾಗಲಿ ನಿಮಗೆ ವಿಧ್ಯುಕ್ತವಾಗಿ ಶ್ರಾದ್ಧಮಾಡುವನೇ!

೧೧೭. ಇದೂ ಇಲ್ಲದಿದ್ದರೆ ದಕ್ಷಿಣಾಯನದಲ್ಲಿ ಮಧುವಿನಿಂದಲೂ ಆಜ್ಯ ದಿಂದಲೂ ಕೂಡಿದ ಪಾಯಸವನ್ನು ನಮಗೆ ನಿವೇದಿಸುವನೇ'' ಎಂದು ಆ ಪಿತೃ ಗಳು ಐಲನ ಬಳಿ ಹೇಳಿದ್ದರು. ಆದುದರಿಂದ ಮಾನವನು ವಿಧಿವತ್ತಾಗಿ ಭಕ್ತಿ ಯಿಂದ ತನ್ನ ಪಿತೃಗಳನ್ನು ಪೂಜಿಸಬೇಕು.

ಕಾಮಾನಭೀಪ್ಸನ್ಸಕಲಾನ್ಪಾಪಾದಾತ್ಮವಿಮೋಚನಂ ।
ವಸೂನ್ರುದ್ರಾಂಸ್ತಥಾದಿತ್ಯಾನ್ನಕ್ಷತ್ರಗ್ರಹತಾರಕಾಃ ॥ ೧೧೮ ॥

ಪ್ರೀಣಯಂತಿ ಮನುಷ್ಯಾಣಾಂ ಪಿತರಃ ಶ್ರಾದ್ಧತರ್ಪಿತಾಃ ।
ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿ ಚ ॥ ೧೧೯ ॥

ಪ್ರಯಚ್ಛಂತಿ ತಥಾ ರಾಜ್ಯಂ ಪಿತರಃ ಶ್ರಾದ್ಧತರ್ಪಿತಾಃ ।
ತಥಾಪರಾಹ್ಣಃ ಪೂರ್ವಾಹ್ಣಾತ್ಪಿತೄಣಾಮತಿರಿಚ್ಯತೇ ॥ ೧೨೦ ॥

ಸಂಪೂಜ್ಯ ಸ್ವಾಗತೇನೈತಾನ್ಸದನೇಽಭ್ಯಾಗತಾನ್ದ್ವಿಜಾನ್ ।
ಪವಿತ್ರಪಾಣಿರಾಚಾಂತಾನಾಸನೇಷೂಪವೇಶಯೇತ್ ॥ ೧೨೧ ॥

ಶ್ರಾದ್ಧಂ ಕೃತ್ವಾ ವಿಧಾನೇನ ಸಂಭೋಜ್ಯ ಚ ದ್ವಿಜೋತ್ತಮಾನ್ ।
ವಿಸರ್ಜಯೇತ್ಪ್ರಿಯಾಣ್ಯುಕ್ತ್ವಾ ಪ್ರಣಿಪತ್ಯ ಚ ಭಕ್ತಿತಃ ॥ ೧೨೨ ॥

---

೧೧೮. ಸಕಲವಾದ ಭೋಗಗಳನ್ನು ಪಡೆಯಬೇಕೆಂಬಾಸೆಯುಳ್ಳವನೂ, ಪಾಪದಿಂದ ಬಿಡುಗಡೆಹೊಂದಬಯಸುವವನೂ ಪಿತೃಗಳನ್ನು ಪೂಜಿಸಬೇಕು. ಶ್ರಾದ್ಧದಲ್ಲಿ ತೃಪ್ತಿಹೊಂದಿದ ಪಿತೃಗಳು ವಸುಗಳನ್ನೂ, ರುದ್ರರನ್ನೂ, ಆದಿತ್ಯರನ್ನೂ, ನಕ್ಷತ್ರಗಳನ್ನೂ, ಗ್ರಹಗಳನ್ನೂ ಶ್ರಾದ್ಧಮಾಡಿದ ಮನುಷ್ಯರ ವಿಷಯದಲ್ಲಿ ಪ್ರೀತಿಯನ್ನು ತೋರುವಂತೆ ಮಾಡುವರು.

೧೧೯-೧೨೦. ಮತ್ತು ಆರೀತಿ ಶ್ರಾದ್ಧದಲ್ಲಿ ತೃಪ್ತರಾದ ಪಿತೃಗಳು ಆ ಯಜಮಾನನಿಗೆ ಆಯುಸ್ಸನ್ನೂ ಪ್ರಜೆಗಳನ್ನೂ ಧನವನ್ನೂ ವಿದ್ಯೆಯನ್ನೂ ಸ್ವರ್ಗ ಮೋಕ್ಷಗಳನ್ನೂ ಸುಖವನ್ನೂ ರಾಜ್ಯವನ್ನೂ ಕರುಣಿಸುವರು. ಆ ಪಿತೃಗಳಿಗೆ ಪೂರ್ವಾಹ್ಣಕ್ಕಿಂತಲೂ ಅಪರಾಹ್ಣವು ಹೆಚ್ಚು ಪ್ರಿಯವಾದುದು.

೧೨೧. ನಿಮಂತ್ರಿತರಾದ ಬ್ರಾಹ್ಮಣರು ಬರುತ್ತಲೇ ಆ ಅಭ್ಯಾಗತರನ್ನು ಸ್ವಾಗತದಿಂದ ಪೂಜಿಸಬೇಕು. ಆಸನವನ್ನು ತೋರಿಸಬೇಕು. ಅವರು ಆಚಮನಮಾಡಿದ ನಂತರ ಅವರನ್ನು ಆಸನಗಳಲ್ಲಿ ಕುಳ್ಳಿರಿಸಬೇಕು.

೧೨೨. ಮತ್ತು ಆ ಶ್ರಾದ್ಧಕರ್ತೃವು ಪವಿತ್ರವನ್ನು ಧರಿಸಿ ವಿಧಿಗನುಸಾರವಾಗಿ ಶ್ರಾದ್ಧಮಾಡಿ, ಆ ಬ್ರಾಹ್ಮಣೋತ್ತಮರನ್ನು ಊಟಮಾಡಿಸಿ, ಬಳಿಕ ಅವರಿಗೆ ಭಕ್ತಿಯಿಂದ ನಮಸ್ಕರಿಸಿ, ಪ್ರಿಯವಾದ ವಾಕ್ಯಗಳನ್ನಾಡುತ್ತಾ ಅವರನ್ನು ಬೀಳ್ಕೊಡಬೇಕು.

ಆದ್ವಾರಮನುಗಚ್ಛೇಚ್ಚ ಆಗಚ್ಛೇದನುಮೋದಿತಃ ।
ತತೋ ನಿತ್ಯಕ್ರಿಯಾಂ ಕುರ್ಯಾದ್ಭೋಜಯೇಚ್ಚ ತಥಾತಿಥೀನ್ ॥ ೧೨೩ ॥

ನಿತ್ಯಕ್ರಿಯಾಂ ಪಿತೄಣಾಂ ಚ ಕೇಚಿದಿಚ್ಛಂತಿ ಸತ್ತಮಾಃ ।
ನ ಪಿತೄಣಾಂ ತಥೈವಾನ್ಯೇ ಶೇಷಂ ಪೂರ್ವವದಾಚರೇತ್ ॥ ೧೨೪ ॥

ಪೃಥಕ್ತ್ವೇನ ವದಂತ್ಯನ್ಯೇ ಕೇಚಿತ್ಪೂರ್ವಂ ಚ ಪೂರ್ವವತ್ ।
ತತಸ್ತದನ್ನಂ ಭುಂಜೀತ ಸಹ ಭೃತ್ಯಾದಿಭಿರ್ನರಃ ॥ ೧೨೫ ॥

ಏವಂ ಕುರ್ವೀತ ಧರ್ಮಜ್ಞಃ ಶ್ರಾದ್ಧಂ ಪಿತ್ರ್ಯಂ ಸಮಾಹಿತಃ ।
ಯಥಾ ಚ ವಿಪ್ರಮುಖ್ಯಾನಾಂ ಪರಿತೋಷೋಽಭಿಜಾಯತೇ ॥ ೧೨೬ ॥

ಇದಾನೀಂ ಸಂಪ್ರವಕ್ಷ್ಯಾಮಿ ವರ್ಜನೀಯಾನ್ದ್ವಿಜಾಧಮಾನ್ ।
ಮಿತ್ರಧ್ರುಕ್ಕುನಖೀ ಕ್ಲೀಬಃ ಕ್ಷಯೀ ಶುಕ್ಲೀ ವಣಿಕ್ಪಥಃ ॥ ೧೨೭ ॥

೧೨೩. ಮತ್ತು ಬಾಗಿಲಿನವರೆಗೂ ಅವರನ್ನು ಹಿಂಬಾಲಿಸಿ ಅವರ ಅನುಜ್ಞೆಯಿತ್ತಮೇಲೆ ತಾನು ಹಿಂದಿರುಗಬೇಕು. ಆಮೇಲೆ ತನ್ನ ಬ್ರಹ್ಮಯಜ್ಞಾದಿ ನಿತ್ಯಕರ್ಮಗಳನ್ನು ಮಾಡಬೇಕು. ಆಮೇಲೆ ಅತಿಥಿಗಳಿಗೆ ಊಟ ಮಾಡಿಸಬೇಕು.

೧೨೪. ಕೆಲವು ವಿದ್ವಾಂಸರು ನಿತ್ಯಕರ್ಮಗಳನ್ನು ಮಾಡಿದನಂತರ ಶ್ರಾದ್ಧವನ್ನು ಮಾಡಬಹುದು ಎನ್ನುವರು. ಕೆಲವರು ಮಾತ್ರ ಪಿತೃಕ್ರಿಯೆಗೆ ಮೊದಲು ನಿತ್ಯಕರ್ಮವನ್ನು ಒಪ್ಪಲಾರರು. ಉಳಿದುದೆಲ್ಲವನ್ನೂ ಮೊದಲಿನಂತೆ ಆಚರಿಸಬೇಕು.

೧೨೫. ಕೆಲವರಂತೂ ಬೇರೆಬೇರೆಯಾಗಿ ಹೇಳುವರು. (ಇಲ್ಲಿ ಪಾಠವು ಅಸ್ಪಷ್ಟವಾಗಿದೆ.) ಅನಂತರ ಶ್ರಾದ್ಧಕರ್ತೃವು ತನ್ನ ಸೇವಕ ಮೊದಲಾದ ಪರಿವಾರದೊಡನೆ ಊಟಮಾಡಬೇಕು.

೧೨೬. ಈರೀತಿಯಾಗಿ ಧರ್ಮಜ್ಞನೆನಿಸಿದವನು ಬ್ರಾಹ್ಮಣರಿಗೆ ಸಂತೋಷವುಂಟಾಗುವಂತೆ ಪಿತೃಕರ್ಮವನ್ನು ಮನಸ್ಸಮಾಧಾನದಿಂದ ನೆರವೇರಿಸಬೇಕು.

೧೨೭-೧೩೫. ಈಗ ಶ್ರಾದ್ಧದಲ್ಲಿ ನಿಮಂತ್ರಿಸಬಾರದ ದ್ವಿಜಾಧಮರನ್ನು ತಿಳಿಸುವೆನು ಕೇಳಿರಿ. "ಮಿತ್ರದ್ರೋಹಿ, ಉಗುರು ಕೆಟ್ಟುಹೋಗಿರುವವನು,

ಶ್ಯಾವದಂತೋಽಥ ಖಲ್ವಾಟಃ ಕಾಣೋಽನ್ಧೋ ಬಧಿರೋ ಜಡಃ ।
ಮೂಕಃ ಪಂಗುಃ ಕುಣಿಃ ಷಂಡೋ ದುಶ್ಚರ್ಮಾ ವ್ಯಂಗಕೇಕರೌ ॥ ೧೨೮ ॥

ಕುಷ್ಠೀ ರಕ್ತೇಕ್ಷಣಃ ಕುಬ್ಜೋ ವಾಮನೋ ವಿಕಟೋಽಲಸಃ ।
ಮಿತ್ರಶತ್ರುರ್ದುಷ್ಕುಲೀನಃ ಪಶುಪಾಲೋ ನಿರಾಕೃತಿಃ ॥ ೧೨೯ ॥

ಪರಿವಿತ್ತಿಃ ಪರಿವೇತ್ತಾ ಪರಿವೇದನಿಕಾಸುತಃ ।
ವೃಷಲೀಪತಿಸ್ತತ್ಸುತಶ್ಚ ನ ಭವೇಚ್ಛ್ರಾದ್ಧಭುಗ್ದ್ವಿಜಃ ॥ ೧೩೦ ॥

ವೃಷಲೀಪುತ್ರಸಂಸ್ಕರ್ತಾ ಅನೂಢೋ ದಿಧಿಷೂಪತಿಃ ।
ಭೃತಕಾಧ್ಯಾಪಕೋ ಯಸ್ತು ಭೃತಕಾಧ್ಯಾಪಿತಶ್ಚ ಯಃ ॥ ೧೩೧ ॥

ಸೂತಕಾನ್ನೋಪಜೀವೀ ಚ ಮೃಗಯುಃ ಸೋಮವಿಕ್ರಯೀ ।
ಅಭಿಶಸ್ತಸ್ತಥಾ ಸ್ತೇನಃ ಪತಿತೋ ವಾರ್ಧುಷಿಃ ಶಠಃ ॥ ೧೩೨ ॥

ಹೇಡಿ, ಕ್ಷಯರೋಗದವನು, ಶ್ವೇತವುಳ್ಳವನು, ವಾಣಿಜ್ಯವೃತ್ತಿಯಲ್ಲಿರುವವನು, ಹುಳುಕುಹಿಡಿದ ಹಲ್ಲುಳ್ಳವನು, ಬೊಕ್ಕತಲೆಯುವನು, ಕುರುಡ, ಹುಟ್ಟುಗುರುಡ, ಸೋಮಾರಿ; ಮೂಗ; ಕುಂಟ, ಚೊತ್ತ; ನಪುಂಸಕ; ಚರ್ಮರೋಗದವನು; ಅಂಗವಿಕಾರವುಳ್ಳವನು; ಮೆಳ್ಳಗಣ್ಣಿನವನು; ಕುಷ್ಟರೋಗಿ; ಕೆಂಪುಕಣ್ಣಿನವನು; ಗುಜ್ಜಾರಿ; ಕುಳ್ಳ; ಹೆದರಿಕೆಯಾಗುವಂತಹ ಬೃಹದಾಕಾರದವನು; ಅಲಸಿ; ತನ್ನ ಸ್ನೇಹಿತನಿಗೆ ಶತ್ರುವಾದವನು; ದುಷ್ಕುಲದಲ್ಲಿ ಹುಟ್ಟಿದವನು; ಪಶುಗಳನ್ನು ಮೇಯಿಸುವವನು; ಆಕಾರವೇ ಕಾಣಿಸದವನು; ತನಗೆ ಮದುವೆಯಾಗದೆ ತನ್ನ ತಮ್ಮನಿಗೆ ಮದುವೆಯಾಗಿರತಕ್ಕ ಅಣ್ಣ; ಅಣ್ಣನಿಗೆ ಮದುವೆಯಾಗದಿದ್ದರೂ ತಾನು ಮದುವೆ ಮಾಡಿಕೊಂಡ ತಮ್ಮ; ಆರೀತಿ ಮದುವೆ ಮಾಡಿಕೊಂಡವಳ ಹೊಟ್ಟೆಯಲ್ಲಿ ಹುಟ್ಟಿದವನು; ಮೈನೆರೆದ ಹುಡುಗಿಯನ್ನು ಮದುವೆಯಾದವನು; ಅವನ ಮಗನು; ಆ ವೃಷಲೀಪುತ್ರನಿಗೆ, ಸಂಸ್ಕಾರಮಾಡಿಸಿದವನು; ಮದುವೆ ಯಾಗದಿದ್ದವನು; ಒಬ್ಬನನ್ನು ಮದುವೆಯಾಗಿದ್ದು ಅವನನ್ನು ಬಿಟ್ಟಿರುವವಳನ್ನು ಮದುವೆಯಾದವನು; ದುಡ್ಡು ತೆಗೆದುಕೊಂಡು ಪಾಠ ಹೇಳುವವನು, ಆರೀತಿ ದುಡ್ಡು ಕೊಟ್ಟು ಓದಿದವನು; ಜಾತಾಶೌಚಮೃತಾಶೌಚವುಳ್ಳವರ ಮನೆಯಲ್ಲಿ

ಪಿಶುನೋ ವೇದಸಂತ್ಯಾಗೀ ದಾನಾಗ್ನಿ ತ್ಯಾಗನಿಷ್ಠುರಃ ।
ರಾಜ್ಞಃ ಪುರೋಹಿತೋ ಭೃತ್ಯೋ ವಿದ್ಯಾಹೀನೋಽಥ ಮತ್ಸರೀ ॥ ೧೩೩ ॥

ವೃದ್ಧಿದ್ವಿಡ್ದುರ್ಧರಃ ಕ್ರೂರೋ ಮೂಢೋ ದೇವಲಕಸ್ತಥಾ ।
ನಕ್ಷತ್ರಸೂಚಕಶ್ಚೈವ ಪರ್ವಕಾರಶ್ಚ ಗರ್ಹಿತಃ ॥ ೧೩೪ ॥

ಅಯಾಜ್ಯಯಾಜಕಃ ಷಂಡೋ ಗರ್ಹಿತಾ ಯೇ ಚ ಯೇಽಧಮಾಃ ।
ನ ತೇ ಶ್ರಾದ್ಧೇ ನಿಯೋಕ್ತವ್ಯಾ ದೃಷ್ಟ್ವಾಮೀ ಪಂಕ್ತಿದೂಷಕಾಃ ॥ ೧೩೫ ॥

ಅಸತಾಂ ಪ್ರಗ್ರಹೋ ಯತ್ರ ಸತಾಂ ಚೈವಾವಮಾನನಾ ।
ದಂಡೋ ದೇವಕೃತಸ್ತತ್ರ ಸದ್ಯಃ ಪತತಿ ದಾರುಣಃ ॥ ೧೩೬ ॥

ಹಿತ್ವಾಗಮಂ ಸುವಿಹಿತಂ ಬಾಲಿಶಂ ಯಸ್ತು ಭೋಜಯೇತ್ ।
ಆದಿಧರ್ಮಂ ಸಮುತ್ಸೃಜ್ಯ ದಾತಾ ತತ್ರ ವಿನಶ್ಯತಿ ॥ ೧೩೭ ॥

ಕೂಟಮಾಡುವವನು; ಜೇಟಿಗಾರ; ಸೋಮಲತೆಯನ್ನು ವಿಕ್ರಯಿಸುವವನು, ಮಹಾಪಾಪಿಯೆಂಬ ಮಾತಿಗೆ ಸಿಕ್ಕಿದವನು; ಕಳ್ಳನು; ಪತಿತನು; ಬಡ್ಡಿಯಿಂದ ಜೀವಿಸುವವನು; ಹಟಸ್ವಭಾವದವನು (ಒಳಗೇ ದ್ರೋಹಮಾಡುವವನು), ಚಾಡಿಕೋರನು; ವೇದಬಿಟ್ಟವನು; ದಾನವನ್ನೂ ಅಗ್ನಿಹೋತ್ರವನ್ನೂ ತ್ಯಜಿಸಿದವನು; ರಾಜಪುರೋಹಿತನು; ಆಳು; ವಿದ್ಯೆಯಿಲ್ಲದವನು, ಕರುಬುಬುಸ್ವಭಾವದವನು; ಹಿರಿಯರನ್ನು ದ್ವೇಷಿಸುವವನು, ದುಷ್ಟನು, ಕ್ರೂರಾತ್ಮನು, ಮೂಢನು, ದೇವರ ಪೂಜೆಯನ್ನು ಜೀವನಕ್ಕಾಗಿ ಇಟ್ಟುಕೊಂಡವನು, ಜ್ಯೋತಿಷ್ಕನು, ಮೊದಲೇ ಪ್ರಸ್ತಾಪಮಾಡಿದವನು, ಅಯಾಜ್ಯನ ಕೈಲಿ ಯಾಗ ಮಾಡಿಸುವವನು; ಇವರೆಲ್ಲರೂ ಮತ್ತು ಇತರ ನಿಂದಾಪಾತ್ರರಾದ ಅಧಮರೂ, ಪಂಕ್ತಿದೂಷಕರೆನಿಸಲ್ಪಟ್ಟಿರುವರು. ಇಂಥವರನ್ನು ಶ್ರಾದ್ಧಕ್ಕೆ ಹೇಳಬಾರದು.

೧೩೬. ಯಾವನು ದುಷ್ಟರಿಂದ ದಾನ ತೆಗೆದುಕೊಳ್ಳುವನೋ, ಯಾವನು ಸತ್ಪುರುಷರನ್ನು ನಿಂದಿಸುವನೋ, ಅಂಥವನಿಗೆ ದೇವರು ಕ್ರೂರವಾದ ಶಿಕ್ಷೆಯನ್ನು ವಿಧಿಸುವನು.

೧೩೭. ಯುಕ್ತಿಯುಕ್ತವಾದ ವೇದವಿಧಿಯನ್ನು ಬಿಟ್ಟು ಯಾವನು ಮೂರ್ಖನನ್ನು ಶ್ರಾದ್ಧದಲ್ಲಿ ನಿಮಂತ್ರಿಸುವನೋ ಅಂತಹ ಅನಾದಿಯಾದ ಧರ್ಮವನ್ನು ತೊರೆದ ದಾತೃವು ಹಾಳಾಗುವನು.

ಯಸ್ತ್ವಾಶ್ರಿತಂ ದ್ವಿಜಂ ತ್ಯಕ್ತ್ವಾ ಅನ್ಯಮಾನೀಯ ಭೋಜಯೇತ್ ।
ತನ್ನಿಃಶ್ವಾಸಾಗ್ನಿನಿರ್ದಗ್ಧಸ್ತತ್ರ ದಾತಾ ವಿನಶ್ಯತಿ ॥ ೧೩೮ ॥

ವಸ್ತ್ರಾಭಾವೇ ಕ್ರಿಯಾ ನಾಸ್ತಿ ಯಜ್ಞಾ ವೇದಾಸ್ತಪಾಂಸಿ ಚ ।
ತಸ್ಮಾದ್ವಾಸಾಂಸಿ ದೇಯಾನಿ ಶ್ರಾದ್ಧಕಾಲೇ ವಿಶೇಷತಃ ॥ ೧೩೯ ॥

ಕೌಶೇಯಂ ಕ್ಷೌಮಕಾರ್ಪಾಸಂ ದುಕೂಲಮಹತಂ ತಥಾ ।
ಶ್ರಾದ್ಧೇ ತ್ವೇತಾನಿ ಯೋ ದದ್ಯಾತ್ಕಾಮಾನಾಪ್ನೋತಿ ಚೋತ್ತಮಾನ್ ॥

ಯಥಾ ಗೋಷು ಪ್ರಭೂತಾಸು ವತ್ಸೋ ವಿಂದತಿ ಮಾತರಂ ।
ತಥಾನ್ನಂ ತತ್ರ ವಿಪ್ರಾಣಾಂ ಜಂತುರ್ಯತ್ರಾವತಿಷ್ಠತೇ ॥ ೧೪೧ ॥

---

೧೩೮. ಮತ್ತು ಯಾವನು ಬಹುಕಾಲದಿಂದಲೂ ತನ್ನನ್ನೇ ನಂಬಿರುವಂತಹ ಬ್ರಾಹ್ಮಣನನ್ನು ಬಿಟ್ಟು ಬೇರೊಬ್ಬನಿಗೆ ನಿಮಂತ್ರಣವನ್ನು ಕೊಡುವನೋ ಆ ದಾತೃವು, ಆ ಆಶ್ರಿತಬ್ರಾಹ್ಮಣನ ನಿಟ್ಟುಸಿರೆಂಬ ಬೆಂಕಿಯಿಂದ ಸುಟ್ಟುಹೋಗುವನು.

೧೩೯. ವಸ್ತ್ರವಿಲ್ಲದೆ ಯಾವ ಕ್ರಿಯೆಯೂ, ಯಜ್ಞಗಳೂ, ವೇದಗಳೂ, ತಪಸ್ಸುಗಳೂ ಇಲ್ಲವು. ಆದುದರಿಂದ ಶ್ರಾದ್ಧದಲ್ಲಿ ವಿಶೇಷವಾಗಿ ವಸ್ತ್ರವನ್ನು ಕೊಟ್ಟೇಕೊಡಬೇಕು.

೧೪೦. ಯಾವನು ಶ್ರಾದ್ಧಕಾಲದಲ್ಲಿ ರೇಶಿಮೆಯ ವಸ್ತ್ರವನ್ನೂ, ರಾಜಾರ್ಹವಾದ ವಸ್ತ್ರವನ್ನೂ, ಹತ್ತಿಯ ಬಟ್ಟೆಯನ್ನೂ, ದುಕೂಲ (ಬೆಲೆಬಾಳುವ ಬಟ್ಟೆ) ವನ್ನೂ ಈಯುವನೋ ಅವನು ಉತ್ತಮವಾದ ಇಷ್ಟಾರ್ಥಗಳನ್ನು ಪಡೆಯುವನು.

೧೪೧-೧೪೨. ನೂರಾರು ಗೋವುಗಳಿದ್ದರೂ ಕರುವು ತನ್ನ ತಾಯನ್ನೇ ಹುಡುಕಿಕೊಂಡು ಅದರ ಬಳಿ ಸೇರುವಂತೆ, ನಾಮಗೋತ್ರಗಳನ್ನುಚ್ಚರಿಸಿ ಮಂತ್ರಪೂರ್ವಕವಾಗಿ ಬ್ರಾಹ್ಮಣರಿಗೆ ನೀಡಿದ ಅನ್ನವು, ಸತ್ತುಹೋದ ಪ್ರಾಣಿಯು ಎಲ್ಲಿದ್ದರೂ ಅಲ್ಲಿಗೆ ಹೋಗಿ ಅವನಿಗೆ ಸೇರುವುದು. ಒಂದುವೇಳೆ ಆರೀತಿ ಸತ್ತ

ನಾಮಗೋತ್ರಂ ಚ ಮಂತ್ರಾಂಶ್ಚ ದತ್ತಮನ್ನಂ ನ ಯಂತಿ ತೇ ।
ಅಪಿ ಯೇ ನಿಧನಂ ಪ್ರಾಪ್ತಾಸ್ತೃಪ್ತಿಸ್ತಾನುಪತಿಷ್ಠತೇ ॥ ೧೪೨ ॥

ದೇವತಾಭ್ಯಃ ಪಿತೃಭ್ಯಶ್ಚ ಮಹಾಯೋಗಿಭ್ಯ ಏವ ಚ ।
ನಮಃ ಸ್ವಾಹಾಯೈ ಸ್ವಧಾಯೈ ನಿತ್ಯಮೇವ ಭವಂತ್ವಿತಿ ॥ ೧೪೩ ॥

ಆದ್ಯಾವಸಾನೇ ಶ್ರಾದ್ಧಸ್ಯ ತ್ರಿರಾವೃತ್ತ್ಯಾ ಜಪೇತ್ತದಾ ।
ಪಿಂಡನಿರ್ವಪಣೇ ವಾಪಿ ಜಪೇದೇವಂ ಸಮಾಹಿತಃ ॥ ೧೪೪ ॥

ಕ್ಷಿಪ್ರಮಾಯಾಂತಿ ಪಿತರೋ ರಾಕ್ಷಸಾಃ ಪ್ರದ್ರವಂತಿ ಚ ।
ಪ್ರೀಯಂತೇ ತ್ರಿಷು ಲೋಕೇಷು ಮಂತ್ರೋಽಯಂ ತಾರಯತ್ಯುತ ೧೪೫॥

ಕ್ಷೌಮಸೂತ್ರಂ ನವಂ ದದ್ಯಾಚ್ಛಾಣಂ ಕಾರ್ಪಾಸಿಕಂ ತಥಾ ।
ಪತ್ರೋರ್ಣಂ ಪಟ್ಟಸೂತ್ರಂ ಚ ಕೌಶೇಯಂ ಚ ವಿವರ್ಜಯೇತ್ ॥ ೧೪೬ ॥

ಪಿತೃಗಳು ನಾಮಗೋತ್ರಗಳನ್ನೂ, ಮಂತ್ರಗಳನ್ನೂ, ಕೊಟ್ಟ ಅನ್ನವನ್ನೂ ಪಡೆಯದಿದ್ದರೂ ಸಹ ಅವರಿಗೆ ತೃಪ್ತಿಯು ಮಾತ್ರ ಆಗಿಯೇ ಆಗುವುದು.

೧೪೩. " ದೇವತೆಗಳಿಗೂ, ಪಿತೃಗಳಿಗೂ. ಮಹಾಯೋಗಿಗಳಿಗೂ, ಸ್ವಾಹೆಗೂ, ಸ್ವಧೆಗೂ, ವಿಷ್ಣುವಿಗೂ, ಸರ್ವದಾ ನಮ್ಮ ನಮಸ್ಕಾರವು " ಎಂಬೀ ಶ್ಲೋಕವನ್ನು-

೧೪೪-೧೪೫. ಶ್ರಾದ್ಧದ ಆರಂಭದಲ್ಲಿಯೂ ಅಂತ್ಯದಲ್ಲಿಯೂ, ಮೂರಾವೃತ್ತಿ ಪಠಿಸಬೇಕು ಮತ್ತು ಇದೇರೀತಿ ಪಿಂಡಪ್ರದಾನ ಸಮಯದಲ್ಲಿಯೂ ಜಪಿಸಬೇಕು. ಇದರಿಂದ ಪಿತೃಗಳು ಬೇಗನೆ ಬರುವರು. ರಾಕ್ಷಸರು ಓಡಿಹೋಗುವರು ಮತ್ತು ಭೂಮಿ ಅಂತರಿಕ್ಷ ಸ್ವರ್ಗಗಳಲ್ಲಿ ಇರತಕ್ಕ ಆ ಪಿತೃಗಳು ಸುಪ್ರೀತರಾಗುವರು. ಈ ಮಂತ್ರವೇ ಅವರನ್ನು ಉದ್ಧಾರಮಾಡುವುದು.

೧೪೬. ಸೊಗಸಾದ ಎಳೆಗಳುಳ್ಳ ಹೊಸದಾದ ಕೆಂಪುಬಣ್ಣದ ಹತ್ತಿಯ ಬಟ್ಟೆಯನ್ನು ಕೊಡಬೇಕು. ಆದರೆ ಪತ್ರೋರ್ಣ, (ರೇಶ್ಮೆ) ಪಟ್ಟೆಯದಾರದಿಂದ ಮಾಡಿದ ಕೌಶೇಯವಸ್ತ್ರಗಳನ್ನು ಶ್ರಾದ್ಧದಲ್ಲಿ ಬಿಡಬೇಕು.

ವರ್ಜಯೇಚ್ಚಾದಶಂ ಪ್ರಾಜ್ಞೋ ಯದ್ಯಪ್ಯವ್ಯಾಹತಂ ಭವೇತ್ ।
ನ ಪ್ರೀಣಯಂತ್ಯಥೈತಾನಿ ದಾತುಶ್ಚಾಪ್ಯನಯೋ ಭವೇತ್ ॥ ೧೪೭ ॥

ನ ನಿವೇದ್ಯೋ ಭವೇತ್ಪಿಂಡಃ ಪಿತೄಣಾಂ ಯಸ್ತು ಜೀವತಿ ।
ಇಷ್ಟೇನಾನ್ನೇನ ಭಕ್ಷ್ಯೇಣ ಭೋಜಯೇತ್ತಂ ಯಥಾವಿಧಿ ॥ ೧೪೮ ॥

ಪಿಂಡಮಗ್ನೌ ಸದಾ ದದ್ಯಾದ್ಭೋಗಾರ್ಥೀ ಸತತಂ ನರಃ ।
ಪತ್ನ್ಯೈ ದದ್ಯಾತ್ಪ್ರಜಾರ್ಥೀ ಚ ಮಧ್ಯಮಂ ಮಂತ್ರಪೂರ್ವಕಂ ॥ ೧೪೯ ॥

ಉತ್ತಮಾಂ ದ್ಯುತಿಮನ್ವಿಚ್ಛನ್ಪಿಂಡಂ ಗೋಷು ಪ್ರಯಚ್ಛತಿ ।
ಪ್ರಜ್ಞಾಂ ಚೈವ ಯಶಃ ಕೀರ್ತಿಮಪ್ಸು ಚೈವ ನಿವೇದಯೇತ್ ॥ ೧೫೦ ॥

---

೧೪೭. ಬಟ್ಟೆಗಳನ್ನು ಉತ್ತರಿಸದಿದ್ದರೂ ಸಹ ಅಂಚಿಲ್ಲದಿದ್ದರೆ ಪ್ರಾಜ್ಞನಾದವನು ಅದನ್ನು ತ್ಯಜಿಸಬೇಕು. ಏಕೆಂದರೆ ಇವು ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವುದಿಲ್ಲ ಮತ್ತು ದಾತೃವಿಗೂ ಒಳ್ಳೆಯದಲ್ಲ.

೧೪೮. ಪಿತೃಗಳಾಗತಕ್ಕವರಲ್ಲಿ ಯಾರಾದರೂ ಬದುಕಿದ್ದರೆ (ತಂದೆ ಸತ್ತು ತಾತನಿದ್ದರೆ) ಅವರಿಗೆ ಪಿಂಡವನ್ನು ಕೊಡಬೇಕಾಗಿಲ್ಲ. ಅಂಥವರನ್ನು ಅವರಿಗೆ ಇಷ್ಟವಾದ ಭಕ್ಷ್ಯದಿಂದಲೂ ಅನ್ನದಿಂದಲೂ ವಿಧ್ಯುಕ್ತವಾಗಿ ತೃಪ್ತಿಪಡಿಸಬೇಕು.

೧೪೯. ಸರ್ವದಾ ಭೋಗಗಳನ್ನು ಅನುಭವಿಸುತ್ತಿರಬೇಕೆಂದು ಬಯಸುವವನು ಪಿಂಡವನ್ನು ಅಗ್ನಿಯಲ್ಲಿ ಹಾಕಬೇಕು. ಮಕ್ಕಳಾಗಬೇಕೆಂದಿದ್ದರೆ ಮಂತ್ರಪೂರ್ವಕವಾಗಿ ಮಧ್ಯದ ಪಿಂಡವನ್ನು ಪತ್ನಿಗೆ ಕೊಡಬೇಕು.

೧೫೦. ತನಗೆ ಉತ್ತಮವಾದ ಕಾಂತಿಯುಂಟಾಗಬೇಕೆಂದು ಬಯಸುವವನು ಪಿಂಡವನ್ನು ಗೋವುಗಳಿಗೆ ಕೊಡಬೇಕು. ಪ್ರಜ್ಞೆಯನ್ನೂ ಯಶಸ್ಸನ್ನೂ ಕೀರ್ತಿಯನ್ನೂ ಪಡೆಯಬೇಕೆನ್ನುವವನು ಅವುಗಳನ್ನು ನೀರಿನಲ್ಲಿ ಬಿಡಬೇಕು.

ಪ್ರಾರ್ಥಯನ್ ದೀರ್ಘಮಾಯುಶ್ಚ ವಾಯಸೇಭ್ಯಃ ಪ್ರಯಚ್ಛತಿ ।
ಕುಮಾರಶಾಲಾಮನ್ವಿಚ್ಛನ್ಕುಕ್ಕುಟೇಭ್ಯಃ ಪ್ರಯಚ್ಛತಿ ॥ ೧೫೧ ॥

ಏಕೇ ವಿಪ್ರಾಃ ಪುನಃ ಪ್ರಾಹುಃ ಪಿಂಡೋದ್ಧರಣಮಗ್ರತಃ ।
ಅನುಜ್ಞಾತಸ್ತು ವಿಪ್ರೈಸ್ತೈಃ ಕಾಮಮುದ್ಧ್ರಿಯತಾಮಿತಿ ॥ ೧೫೨ ॥

ತಸ್ಮಾಚ್ಛ್ರಾದ್ಧಂ ತಥಾ ಕಾರ್ಯಂ ಯಥೋಕ್ತಮೃಷಿಭಿಃ ಪುರಾ ।
ಅನ್ಯಥಾ ತು ಭವೇದ್ದೋಷಃ ಪಿತೄಣಾಂ ನೋಪತಿಷ್ಠತಿ ॥ ೧೫೩ ॥

ಯವೈರ್ವ್ರೀಹಿತಿಲೈರ್ಮಾಷೈರ್ಗೋಧೂಮೈಶ್ಚಣಕೈಸ್ತಥಾ ।
ಸಂತರ್ಪಯೇತ್ಪಿತೄನ್ಮುದ್ಗೈಃ ಶ್ಯಾಮಾಕೈಃ ಸರ್ಷಪದ್ರವೈಃ ॥ ೧೫೪ ॥

ನೀವಾರೈರ್ಹಸ್ತಿಶ್ಯಾಮಾಕೈಃ ಪ್ರಿಯಂಗುಭಿಸ್ತಥಾರ್ಚಯೇತ್ ।
ಪ್ರಸಾತಿಕಾಂ ಸತೂಲಿಕಾಂ ದದ್ಯಾಚ್ಛ್ರಾದ್ಧೇ ವಿಚಕ್ಷಣಃ ॥ ೧೫೫ ॥

---

೧೫೧. ದೀರ್ಘಾಯುಸ್ಸನ್ನು ಪಡೆಯಬೇಕೆನ್ನುವವನು ಅವನ್ನು ಕಾಗೆಗಳಿಗೆ ಕೊಡಬೇಕು. ಕುಮಾರನ ಹಾಗೆ ಇರಬೇಕೆನ್ನುವವನು ಕೋಳಿಗಳಿಗೆ ಕೊಡಬೇಕು.

೧೫೨. ಕೆಲಮಂದಿ ವಿಪ್ರರು ಪಿಂಡೋದ್ವಾಸನ ಕ್ರಮವನ್ನು ಈರೀತಿ ಹೇಳುವರು :—" ಬ್ರಾಹ್ಮಣರ ಒಪ್ಪಿಗೆ ಪಡೆದ ನಂತರ ತನ್ನಿಷ್ಟಬಂದಂತೆ ಪಿಂಡಗಳನ್ನು ತೆಗೆಯಬಹುದು " ಎಂದು.

೧೫೩. ಆದುದರಿಂದ ಪ್ರಾಚೀನರಾದ ಮಹರ್ಷಿಗಳು ಹೇಳಿರುವಂತೆ ಶ್ರಾದ್ಧವನ್ನು ಮಾಡಬೇಕು. ಇಲ್ಲದಿದ್ದರೆ ದೋಷವುಂಟಾಗುವುದಲ್ಲದೆ ಮಾಡಿದ ಶ್ರಾದ್ಧವು ಪಿತೃಗಳಿಗೆ ಸೇರುವುದಿಲ್ಲ.

೧೫೪–೧೫೫. ಆ ಪಿತೃಗಳನ್ನು ಯವ, ವ್ರೀಹಿ, ತಿಲ, ಮಾಷ (ಉದ್ದು), ಗೋಧೂಮ, ಚಣಕ, ಮುದ್ಗ (ಹೆಸರು), ಶ್ಯಾಮಾಕ (ಸಾವೆ), ಸರ್ಷಪ (ಸಾಸಿವೆ), ನೀವಾರ (ನವಣೆ), ಹಸ್ತಿಶ್ಯಾಮಾಕ (ದಪ್ಪಸಾವೆ) ಇವುಗಳಿಂದ ತೃಪ್ತಿಗೊಳಿಸಬೇಕು. ಪ್ರಾಜ್ಞನಾದವನು ಹತ್ತಿಯೊಡನೆ ಪ್ರಸಾತಿಕೆ (?) ಯನ್ನು ಪಿತೃಗಳಿಗೆ ನಿವೇದಿಸಬೇಕು.

ಆಮ್ರಮಾಮ್ರಾತಕಂ ಬಿಲ್ವಂ ದಾಡಿಮಂ ಬೀಜಪೂರಕಂ ।
ಪ್ರಾಚೀನಾಮಲಕಂ ಕ್ಷೀರಂ ನಾರಿಕೇಲಂ ಪರೂಷಕಂ ॥ ೧೫೬ ॥

ನಾರಂಗಂ ಚ ಸಖರ್ಜೂರಂ ದ್ರಾಕ್ಷಾನೀಲಕಪಿತ್ಥಕಂ ।
ಪಟೋಲಂ ಚ ಪ್ರಿಯಾಲಂ ಚ ಕರ್ಕಂಧೂಬದರಾಣಿ ಚ ॥ ೧೫೭ ॥

ವಿಕಂಕತಂ ವತ್ಸಕಂ ಚ ಕಸ್ತ್ವಾರುರ್ವಾರಕಾನಪಿ ।
ಏತಾನಿ ಫಲಜಾತಾನಿ ಶ್ರಾದ್ಧೇ ದೇಯಾನಿ ಯತ್ನತಃ ॥ ೧೫೮ ॥

ಗುಡಶರ್ಕರಮತ್ಸ್ಯಂಡೀ ದೇಯಂ ಫಾಣಿತಮೂರ್ಮುರಂ ।
ಗವ್ಯಂ ಪಯೋ ದಧಿ ಘೃತಂ ತೈಲಂ ಚ ತಿಲಸಂಭವಂ ॥ ೧೫೯ ॥

ಸೈಂಧವಂ ಸಾಗರೋತ್ಥಂ ಚ ಲವಣಂ ಸಾರಸಂ ತಥಾ ।
ನಿವೇದಯೇಚ್ಛುಚೀನ್ಗಂಧಾಂಶ್ಚಂದನಾಗುರುಕುಂಕುಮಾನ್ ॥ ೧೬೦ ॥

ಕಾಲಶಾಕಂ ತಂದುಲೀಯಂ ವಾಸ್ತುಕಂ ಮೂಲಕಂ ತಥಾ ।
ಶಾಕಮಾರಣ್ಯಕಂ ಚಾಪಿ ದದ್ಯಾತ್ಪುಷ್ಪಾಣ್ಯಮೂನಿ ಚ ॥ ೧೬೧ ॥

೧೫೬-೧೫೮. ಶ್ರಾದ್ಧದಲ್ಲಿ ಪಿತೃಗಳಿಗೆ ಮಾವು, ಆಮ್ರಾತಕ, ಮಾವನ್ನು ಹೋಲುವ ಹಣ್ಣು, ಬಿಲ್ವ. ದಾಡಿಂಬೆ, ಮಾದಳ, ಹಳೆನೆಲ್ಲಿ, ಕ್ಷೀರ (ಹಾಲು ಗಿಡದ ಹಣ್ಣು), ತೆಂಗು, ಪರೂಷಕ (?) ಕಿತ್ತಲೆ, ಖರ್ಜೂರ, ದ್ರಾಕ್ಷೆ, ಕರಿ ಬಣ್ಣದ ಬೇಲ, ಪಡವಲ, ಪ್ರಿಯಾಲ (?) ಕರ್ಕಂಧೂ (ಬಾದಾಮಿ), ವಿಕಂಕತ (ಹುಳಿಬೇಲ), ವತ್ಸಕ (?) ಕರ್ಕಾರು, ಉರ್ವಾರುಕ (ಸೌತೆ) ಮೊದಲಾದ ಹಣ್ಣುಗಳನ್ನು ಕೊಡಬೇಕು.

೧೫೯-೧೬೧. ಮತ್ತು ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ, ಬೆಲ್ಲಪಪಾಕ. ಊರ್ಮುರ (?) ಹಸುವಿನ ಹಾಲು, ಮೊಸರು, ತುಪ್ಪ, ಎಳ್ಳೆಣ್ಣೆ, ಸೈಂಧವಲವಣ, ಕೊಳ ಮೊದಲಾದ ಜಲಾಶಯಗಳಲ್ಲಿ ಸಿಕ್ಕಿದ ಉಪ್ಪು ಮೊದಲಾದುವನ್ನು ಪಿತೃಗಳಿಗೆ ಅರ್ಪಿಸಬೇಕು ಮತ್ತು ಶುದ್ಧವೂ ಸುವಾಸನಾಯುತವೂ ಆದ ಗಂಧ. ಅಗುರು, ಕೇಸರಿ, ಕಾಲಶಾಕ (?) ತಂದುಲೀಯ (ವಾಯಾವಳಂಗ) ವಾಸ್ತುಕ (?, ಮೂಲಕ ಮತ್ತು ಅರಣ್ಯದಲ್ಲಿ ಬೆಳೆಯುವ ಸೊಪ್ಪುಸೆದೆ ಇವುಗಳನ್ನು ನಿವೇದಿಸಬೇಕು. ಅಲ್ಲದೆ,

ಜಾತಿಚಂಪಕಲೋಧ್ರಾಶ್ಚ ಮಲ್ಲಿಕಾಬಾಣಬರ್ಬರೀ ।
ವೃಂತಾಶೋಕಾಟರೂಷಂ ಚ ತುಲಸೀ ತಿಲಕಂ ತಥಾ ॥ ೧೬೨ ॥

ಪಾವಂತೀಂ ಶತಪತ್ರಾಂ ಚ ಗಂಧಶೇಫಾಲಿಕಾಮಪಿ ।
ಕುಬ್ಜಕಂ ತಗರಂ ಚೈವ ಮೃಗಮಾರಣ್ಯಕೇತಕೀಂ ॥ ೧೬೩ ॥

ಯೂಥಿಕಾಮತಿಮುಕ್ತಂ ಚ ಶ್ರಾದ್ಧಯೋಗ್ಯಾನಿ ಭೋ ದ್ವಿಜಾಃ ।
ಕಮಲಂ ಕುಮುದಂ ಪದ್ಮಂ ಪುಂಡರೀಕಂ ಚ ಯತ್ನತಃ ॥ ೧೬೪ ॥

ಇಂದೀವರಂ ಕೋಕನದಂ ಕಹ್ಲಾರಂ ಚ ನಿಯೋಜಯೇತ್ ।
ಕುಷ್ಠಂ ಮಾಂಸೀ ವಾಲಕಂ ಚ ಕುಕ್ಕುಟೀ ಜಾತಿಪತ್ರಕಂ ॥ ೧೬೫ ॥

ನಲಿಕೋಶೀರಮುಸ್ತಂ ಚ ಗ್ರಂಥಿಪರ್ಣೀ ಚ ಸುಂದರೀ ।
ಪುನರಪ್ಯೇವಮಾದೀನಿ ಗಂಧಯೋಗ್ಯಾನಿ ಚಕ್ಷತೇ ॥ ೧೬೬ ॥

೧೬೨-೧೬೩. ಜಾಜಿ, ಸಂಪಗೆ, ಬಾಗೆ, ಮಲ್ಲಿಗೆ, ಬಾಣಪುಷ್ಪ, ಬರ್ಬರೀ (?) ತೊಟ್ಟಿರುವ ಅಸುಗೆ, ಆಡುಸೋಗೆ, ತುಲಸೀ, ತಿಲಕಪುಷ್ಪ, ಸಾವಂತೀ (?) ಶತಪತ್ರಾ (?) ಗಂಧಶೇಫಾಲಿಕಾ (?) ಕುಬ್ಜಕ (?) ತಗರ (?) ಮೃಗ, ಕಾಡುಕೇದಗೆ,

೧೬೪-೧೬೫. ಯೂಥಿಕಾ (ಸೇವಂತಿಗೆ) ಅತಿಮುಕ್ತ (ವಸಂತಋತುವಿನಲ್ಲಿ ಬಿಡುವ ಮಲ್ಲಿಗೆ) ಮೊದಲಾದ ಶ್ರಾದ್ಧಯೋಗ್ಯವಾದ ಹೂಗಳನ್ನು ಕೊಡಬೇಕು. ಅಲ್ಲದೆ ತಾವರೆ, ಕನ್ನೈದಿಲೆ; ಪದ್ಮ, ಬಿಳಿಯತಾವರೆ, ಇಂದೀವರ, ಕೆಂಪುನೈದಿಲೆ, ನೈದಿಲೆಗಳನ್ನೂ ಅರ್ಪಿಸಬೇಕು. ಕುಷ್ಠ, ಮಾಂಸಿ, ವಾಲಕ, ಕುಕ್ಕುಟೆ, ಜಾಜಿಪತ್ರೆ–

೧೬೬. ನಲಿಕಾ, ಉಶೀದ (ಲಾಮಂಚ) ಮುಸ್ತ (ಕೊನ್ನಾರಿಗೆಡ್ಡೆ) ಗ್ರಂಥಪರ್ಣೀ, ಸುಂದರೀ, ಇವು ಮೊದಲಾದುವು ಗಂಧಕ್ಕೆ ಅರ್ಹವಾದುವು.

ಗುಗ್ಗುಲುಂ ಚಂದನಂ ಚೈವ ಶ್ರೀವಾಸಮಗುರುಂ ತಥಾ ।
ಧೂಪಾನಿ ಪಿತೃಯೋಗ್ಯಾನಿ ಋಷಿಗುಗ್ಗುಲಮೇವ ಚ ॥ ೧೬೭ ॥

ರಾಜಮಾಷಾಂಶ್ಚ ಚಣಕಾನ್ಮಸೂರಾನ್ಕೋರದೂಷಕಾನ್ ।
ವಿಪ್ರುಷಾನ್ಮರ್ಕಟಾಂಶ್ಚೈವ ಕೋದ್ರವಾಂಶ್ಚೈವ ವರ್ಜಯೇತ್ ॥ ೧೬೮ ॥

ಮಾಹಿಷಂ ಚಾಮರಂ ಮಾರ್ಗಮಾವಿಕ್ಯೈಕಶಫೋದ್ಭವಂ ।
ಸ್ತ್ರೈಣಮೌಷ್ಟ್ರಮಾವಿಕಂ ಚ ದಧಿ ಕ್ಷೀರಂ ಘೃತಂ ತ್ಯಜೇತ್ ॥ ೧೬೯ ॥

ತಾಲಂ ವರುಣಕಾಕೋಲೌ ಬಹುಪತ್ರಾರ್ಜುನೀಫಲಂ ।
ಜಂಬೀರಂ ರಕ್ತಬಿಲ್ವಂ ಚ ಶಾಲಸ್ಯಾಪಿ ಫಲಂ ತ್ಯಜೇತ್ ॥ ೧೭೦ ॥

ಮತ್ಸ್ಯಸೂಕರಕೂರ್ಮಾಶ್ಚ ಗಾವೋ ವರ್ಜ್ಯಾ ವಿಶೇಷತಃ ।
ಪೂತಿಕಂ ಮೃಗನಾಭಿಂ ಚ ರೋಚನಾಂ ಪದ್ಮಚಂದನಂ ॥ ೧೭೧ ॥

---

೧೬೭. ಗುಗ್ಗುಳ, ಗಂಧ, ಶ್ರೀವಾಸ, ಅಗುರು, ಋಷಿಗುಗ್ಗುಲ ಇವು ಪಿತೃಗಳಿಗ ಒಪ್ಪುವಂತಹ ಧೂಪಕ್ಕೆ ಬೇಕಾದ ದ್ರವ್ಯಗಳು.

೧೬೮. ರಾಜಮಾಷ (ಅಲಸಂದೆ) ಚಣಕ (ಕಡಲೆ) ಮಸೂರ (ಬಟಾಣಿ) ಕೋರದೂಷಕ, ವಿಪ್ರುಷ, ಮರ್ಕಟ, ಕೋದ್ರವ ಈ ಧಾನ್ಯಗಳನ್ನು ಶ್ರಾದ್ಧದಲ್ಲಿ ವರ್ಜಿಸಬೇಕು.

೧೬೯. ಎಮ್ಮೆ, ಚಮರೀಮೃಗ, ಜಿಂಕೆ, ಕುರಿ, ಒಂದುಗೊರಸಿನ ಕತ್ತೆ ಕುದುರೆ ಮೊದಲಾದ ಪ್ರಾಣಿ, ಒಂಟೆ ಆಡು ಇವುಗಳ ಹಾಲನ್ನೂ ಮೊಸರನ್ನೂ ತುಪ್ಪವನ್ನೂ ತ್ಯಜಿಸಬೇಕು.

೧೭೦. ಮತ್ತು ತಾಳೆ, ವರುಣ, ಕಾಕೋಲ, ಬಹುಪತ್ರ, ಅರ್ಜುನ, ಜಂಬೀರ (ನಿಂಬೆ) ರಕ್ತಬಿಲ್ವ, (ಕೆಂಪುಬಿಲ್ವ) ಶಾಲವೃಕ್ಷಗಳ ಫಲಗಳನ್ನು ತ್ಯಜಿಸಬೇಕು.

೧೭೧-೧೭೨. ಮತ್ಸ್ಯ, ಸೂಕರ, ಕೂರ್ಮ, ಗೋವು ಇವುಗಳನ್ನು (ಮಾಂಸಗಳನ್ನೂ) ವಿಶೇಷವಾಗಿ ವರ್ಜಿಸಬೇಕು. ಪುನಗು, ಕಸ್ತೂರಿ,

ಕಾಲೇಯಕಂ ತಥೋಗ್ರಗಂಧಂ ತುರುಷ್ಕಂ ಚಾಪಿ ವರ್ಜಯೇತ್ ।
ಪಾಲಂಕಂ ಚ ಕುಮಾರೀಂ ಚ ಕಿರಾತಂ ಪಿಂಡಮೂಲಕಂ ॥ ೧೭೨ ॥

ಗೃಂಜನಂ ಚುಕ್ರಿಕಾಂ ಚುಕ್ರಂ ವರುವಾಂ ಚನಪತ್ರಿಕಾಂ ।
ಜೀವಂ ಚ ಶತಪುಷ್ಪಾಂ ಚ ನಾಲಿಕಾಂ ಗಂಧಶೂಕರಂ ॥ ೧೭೩ ॥

ಹಲಭೃತ್ಯಂ ಸರ್ಷಪಂ ಚ ಪಲಾಂಡುಂ ಲಶುನಂ ತ್ಯಜೇತ್ ।
ಮಾನಕಂದಂ ವಿಷಕಂದಂ ವಜ್ರಕಂದಂ ಗದಾಸ್ಥಿಕಂ ॥ ೧೭೪ ॥

ಪುರುಷಾಲ್ವಂ ಸಪಿಂಡಾಲುಂ ಶ್ರಾದ್ಧಕರ್ಮಣಿ ವರ್ಜಯೇತ್ ।
ಅಲಾಬುಂ ತಿಕ್ತಪರ್ಣಾಂ ಚ ಕೂಷ್ಮಾಂಡಂ ಕಟುಕತ್ರಯಂ ॥ ೧೭೫ ॥

ವಾರ್ತಾಕಂ ಶಿವಜಾತಂ ಚ ಲೋಮಶಾನಿ ವಟಾನಿ ಚ ।
ಕಾಲೀಯಂ ರಕ್ತವಾಣಾಂ ಚ ಬಲಾಕಾ ಲಕುಚಂ ತಥಾ ॥ ೧೭೬ ॥

ಗೋರೋಚನ, ಪದ್ಮಚಂದನ, ಕಟುಗಂಧವುಳ್ಳ ಕಾಲೇಯಕ, ತುರುಷ್ಕ ಇವುಗಳನ್ನೂ ಪಾಲಂಕ, ಕುಮಾರಿ, ಕಿರಾತ, ಪಿಂಡಮೂಲಕ ಇವುಗಳನ್ನೂ ಬಿಡಬೇಕು.

೧೭೩–೧೭೪. ಗೃಂಜನ, ಚುಕ್ರಿಕಾ, ಚುಕ್ರ, ವರುವಾ, ಚನಪತ್ರಿಕಾ, ಜೀವ, ಶತಪುಷ್ಪಾ, ವಾಲಕಾ, ಗಂಧಸೂಕರ, ಹಲಭೃತ್ಯ, ಸರ್ಷಸ (ಸಾಸಿವೆ) ಪಲಾಂಡು (ಈರುಳ್ಳಿ) ಲಶುನ (ಬೆಳ್ಳುಳ್ಳಿ) ಇವುಗಳನ್ನೂ ಬಿಡಬೇಕು ಮತ್ತು ಮಾನಕಂದ, ವಿಷಕಂದ, ವಜ್ರಕಂದ, ಗವಾಸ್ಥಿ–

೧೭೫-೧೭೬. ಪುರುಷಾಲ್ವ. ಪಿಂಡಾಲು, ಇವುಗಳನ್ನೂ ಪರಿತ್ಯಜಿಸಬೇಕು. ಅಲಾಬು (ಸೋರೆ) ತಿಕ್ತಪರ್ಣಾ, ಕೂಶ್ಮಾಂಡ (ಕುಂಬಳ) ಕಟುತ್ರಯ (ಹಿಪ್ಪಲ ಮೊದಲಾದುದು) ವಾರ್ತಾಕ (ಬದನೆ) ಶಿವಜಾತ; ಲೋಮಶ; ವಟ; ಕಾಲೀಯ; ರಕ್ತಬಾಣ; ಬಲಾಕಾ; ಲಕುಚ; ವಿಭೀತಿಕಾಫಲ (ತಾರೇಕಾಯಿ) ಇವುಗಳು ಶ್ರಾದ್ಧದಲ್ಲಿ ವರ್ಜಸೀಯುವಾದುವುಗಳು.

ಶ್ರಾದ್ಧಕರ್ಮಣಿ ವರ್ಜ್ಯಾನಿ ವಿಭೀತಕಫಲಂ ತಥಾ ।
ಆರನಾಲಂ ಚ ಶುಕ್ತಂ ಚ ಶೀರ್ಣಂ ಪರ್ಯುಷಿತಂ ತಥಾ ॥ ೧೭೭ ॥

ನೋಗ್ರಗಂಧಂ ಚ ದಾತವ್ಯಂ ಕೋವಿದಾರಕಶಿಗ್ರುಕೌ ।
ಅತ್ಯಮ್ಲಂ ಪಿಚ್ಛಿಲಂ ಸೂಕ್ಷ್ಮಂ ಯಾತಯಾಮಂ ಚ ಸತ್ತಮಾಃ ॥ ೧೭೮ ॥

ನ ಚ ದೇಯಂ ಗತರಸಂ ಮದ್ಯಗಂಧಂ ಚ ಯದ್ಭವೇತ್ ।
ಹಿಂಗೂಗ್ರಗಂಧಂ ಫಣಿಶಂ ಭೂನಿಂಬಂ ನಿಂಬರಾಜಿಕೇ ॥ ೧೭೯ ॥

ಕುಸ್ತುಂಬುರುಂ ಕಲಿಂಗೋತ್ಥಂ ವರ್ಜಯೇದಮ್ಲವೇತಸಂ ।
ದಾಡಿಮಂ ಮಾಗಧೀಂ ಚೈವ ನಾಗರಾದ್ರ್ಯಕತಿಕ್ತಿಡೀಃ ॥ ೧೮೦ ॥

ಆಮ್ರಾತಕಂ ಜೀವಕಂ ಚ ತುಂಬುರುಂ ಚ ನಿಯೋಜಯೇತ್ ।
ಪಾಯಸಂ ಶಾಲ್ಮಲೀಮುದ್ಗಾನ್ಮೋದಕಾದೀಂಶ್ಚ ಭಕ್ತಿತಃ ॥ ೧೮೧ ॥

೧೭೭-೧೭೯. ಆರನಾಳ; ಶುಕ್ತಗಳನ್ನೂ; ಬಿರುಕುಬಿಟ್ಟುದನ್ನೂ; ಹಳಸಿದ್ದುದನ್ನೂ; ಹೆಚ್ಚು ವಾಸನೆಯುಳ್ಳುದದನ್ನೂ ಕೊಡಬಾರದು ಮತ್ತು ಕೋವಿದಾರ; ಶಿಗ್ರುಗಳನ್ನೂ; ಅತಿಹುಳಿಯಾದುದನ್ನೂ; ಕೈಗೆ ಅಂಟಿಕೊಳ್ಳುವಂತಹುದನ್ನೂ; ಅತಿಸೂಕ್ಷ್ಮವಾದುದನ್ನೂ; ಒಂದುಜಾವ ಕಳೆದಿರುವುದನ್ನೂ; ವಿರಸವಾದುದನ್ನೂ; ಹೆಂಡದ ವಾಸನೆ ಬರುವುದನ್ನೂ; ಇಂಗು; ಉಗ್ರಗಂಧ; ಭೂನಿಂಬ; ನಿಂಬ; ರಾಜಿಕಗಳನ್ನೂ; ಕಳಿಂಗದೇಶದ ಕೊತ್ತುಂಬರಿಯನ್ನೂ; ಅಮ್ಲವೇತಸವನ್ನೂ ಉಪಯೋಗಿಸಬಾರದು.

೧೮೦-೧೮೧. ದಾಡಿಮ, (ದಾಳಿಂಬೆ) ಮಾಗಧಿ, ನಾಗರ; ಆರ್ದ್ರಕ (ಶುಂಠಿ) ಆಮ್ರಾತಕ ಜೀವಕ ತುಂಬುರು ಇವುಗಳನ್ನು ಉಪಯೋಗಿಸಬೇಕು ಮತ್ತು ಪಾಯಸ, ಶಾಲ್ಮಲಿಯ ಮುದ್ಗ ಮೋದಕಗಳು ಇವೇ ಮೊದಲಾದುವನ್ನು ನೀಡಬೇಕು.

ಪಾನಕಂ ಚ ರಸಾಲಂ ಚ ಗೋಕ್ಷೀರಂ ಚ ನಿವೇದಯೇತ್ ।
ಯಾನಿ ಚಾಭ್ಯವಹಾರ್ಯಾಣಿ ಸ್ವಾದುಸ್ನಿಗ್ಧಾನಿ ಭೋ ದ್ವಿಜಾಃ ॥ ೧೮೨ ॥

ಈಷದಮ್ಲಕಟೂನ್ಯೇವ ದೇಯಾನಿ ಶ್ರಾದ್ಧಕರ್ಮಣಿ ।
ಅತ್ಯಮ್ಲಂ ಚಾತಿಲವಣಮತಿರಿಕ್ತಕಟೂನಿ ಚ ॥ ೧೮೩ ॥

ಆಸುರಾಣೀಹ ಭೋಜ್ಯಾನಿ ತಾನ್ಯತೋ ದೂರತಸ್ತ್ಯಜೇತ್ ।
ಮೃಷ್ಟಸ್ನಿಗ್ಧಾನಿ ಯಾನಿ ಸ್ಯುರೀಷತ್ಕಟ್ವಮ್ಲಕಾನಿ ಚ ॥ ೧೮೪ ॥

ಸ್ವಾದೂನಿ ದೇವಭೋಜ್ಯಾನಿ ತಾನಿ ಶ್ರಾದ್ಧೇ ನಿಯೋಜಯೇತ್ ।
ಛಾಗಮಾಂಸಂ ವಾರ್ತಿಕಂ ಚ ತೈತ್ತಿರಂ ಶಶಕಾಮಿಷಂ ॥ ೧೮೫ ॥

ಶಿವಾಲಾವಕರಾಜೀವಮಾಂಸಂ ಶ್ರಾದ್ಧೇ ನಿಯೋಜಯೇತ್ ।
ವಾಧ್ರೀಣಸಂ ರಕ್ತಶಿವಂ ಲೋಹಂ ಶಲ್ಕಸಮನ್ವಿತಂ ॥ ೧೮೬ ॥

---

೧೮೨. ಪಾನಕವನ್ನೂ ಮಾವಿನಹಣ್ಣನ್ನೂ ಹಸುವಿನ ಹಾಲನ್ನೂ ಬ್ರಾಹ್ಮಣರಿಗೆ ಅರ್ಪಿಸಬೇಕು. ಎಲೈ ದ್ವಿಜರೇ! ಯಾವುದು ಮಧುರವಾಗಿಯೂ ಮೃದುವಾಗಿಯೂ ಇದ್ದು ತಿನ್ನಲು ಉಚಿತವಾಗಿದೆಯೋ ಅದೆಲ್ಲವನ್ನೂ ಶ್ರಾದ್ಧದಲ್ಲಿ ಬಳಸಬಹುದು.

೧೮೩. ಸ್ವಲ್ಪ ಹುಳಿ ಕಾರವುಳ್ಳ ವಸ್ತುಗಳನ್ನೇ ಬಳಸಬೇಕಲ್ಲದೆ ಅತಿ ಹುಳಿಯಾದುದು ಹೆಚ್ಚು ಕಾರವುಳ್ಳದ್ದು ಮೊದಲಾದ-

೧೮೪. ಆಸುರವಾದ (ಅಸುರರಿಗೆ ಮಾತ್ರ ಹಿತವೆನಿಸುವ) ಭೋಜನ ದ್ರವ್ಯಗಳನ್ನು ಬಳಸಬಾರದು. ಯಾವುದು ಮಧುರವಾಗಿಯೂ ಮೃದುವಾಗಿಯೂ ಇರುವುದೋ ಮತ್ತು ಯಾವುದು ಸ್ವಲ್ಪ ಹುಳಿ ಸ್ವಲ್ಪ ಕಾರಗಳನ್ನು ಹೊಂದಿರುವುದೋ-

೧೮೫. ಅಂತಹ ದೇವಯೋಗ್ಯವಾದ ರುಚಿಕರವಾದ ಪದಾರ್ಥಗಳನ್ನು ಶ್ರಾದ್ಧದಲ್ಲಿ ಉಪಯೋಗಿಸಬೇಕು ಮತ್ತು ಆಡಿನ ಮಾಂಸವನ್ನೂ ವಾರ್ತಿಕವನ್ನೂ ತಿತ್ತಿರಿಪಕ್ಷಿಯಮಾಂಸವನ್ನೂ ಮೊಲದಮಾಂಸವನ್ನೂ-

೧೮೬-೧೮೭. ನರಿ ಲೋತಿಹಕ್ಕಿ ರಾಜೀವ (ಒಂದುಬಗೆಯ ಜಿಂಕೆ) ಇವುಗಳ ಮಾಂಸವನ್ನೂ ಶ್ರಾದ್ಧದಲ್ಲಿ ಉಪಯೋಗಿಸಬೇಕು. ಮತ್ತು ವಾಧ್ರೀ

ಸಿಂಹತುಂಡಂ ಚ ಖಡ್ಗಂ ಚ ಶ್ರಾದ್ಧೇ ಯೋಜ್ಯಂ ತಥೋಚ್ಯತೇ ।
ಯದಪ್ಯುಕ್ತಂ ಹಿ ಮನುನಾ ರೋಹಿತಂ ಪ್ರತಿಯೋಜಯೇತ್ ॥ ೧೮೭ ॥

ಯೋಕ್ತವ್ಯಂ ಹವ್ಯಕವ್ಯೇಷು ತಥಾ ನ ವಿಪ್ರಯೋಜಯೇತ್ ।
ಏವಮುಕ್ತಂ°ಮಯಾ ವಿಪ್ರಾ ವಾರಾಹೇಣಾವಲೋಕಿತಂ ॥ ೧೮೮ ॥

ಮಯಾ ನಿಷಿದ್ಧಂ ಭುಂಜಾನೋ ರೌರವಂ ನರಕಂ ವ್ರಜೇತ್ ।
ಏತಾನಿ ಚ ನಿಷಿದ್ಧಾನಿ ವಾರಾಹೇಣ ತಪೋಧನಾಃ ॥ ೧೮೯ ॥

ಅಭಕ್ಷ್ಯಾಣಿ ದ್ವಿಜಾತೀನಾಂ ನ ದೇಯಾನಿ ಪಿತೃಷ್ವಪಿ ।
ರೋಹಿತಂ ಶೂಕರಂ ಕೂರ್ಮಂ ಗೋಧಾಹಂಸಂ ಚ ವರ್ಜಯೇತ್ ॥೧೯೦॥

ಚಕ್ರವಾಕಂ ಚ ಮದ್ಗುಂ ಚ ಶಲ್ಕಹೀನಾಂಶ್ಚ ಮತ್ಸ್ಯಕಾನ್ ।
ಕುರರಂ ಚ ನಿರಸ್ಥಿಂ ಚ ವಾಸಹಾತಂ ಚ ಕುಕ್ಕುಟಾನ್ ॥ ೧೯೧ ॥

ಣಸ ಕೆಂಪುನರಿಯ ಮಾಂಸ ಚರ್ಮಸಹಿತವಾದ ಲೋಹಮಾಂಸ ಸಿಂಹತುಂಡ ಮತ್ತು ಖಡ್ಗಮೃಗಗಳ ಮಾಂಸ ಇವುಗಳು ಶ್ರಾದ್ಧಯೋಗ್ಯವಾದುದೆಂದು ಹೇಳುವರು. ಮನುವು ಹೇಳಿದ ರೋಹಿತ (ಒಂದುಜಾತಿಯ ಜಿಂಕೆ) ದ ಮಾಂಸವನ್ನು ದೇವಕರ್ಮದಲ್ಲಿಯೂ ಪಿತೃಕರ್ಮದಲ್ಲಿಯೂ ಉಪಯೋಗಿಸಬೇಕು. ಬಿಡಬಾರದು. ಎಲೈ ದ್ವಿಜರಿರಾ! ಈರೀತಿಯಾಗಿ ನಿಮಗೆ ವಾರಾಹನು ಉಪಯೋಗಿಸಿದರೀತಿಯನ್ನು ಅರಿತು ನಾನು ತಿಳಿಸಿರುವೆನು.

೧೮೯. ನಾನು ಬೇಡವೆಂದುದನ್ನು ತಿಂದವನು ರೌರವನರಕಕ್ಕೆ ಹೋಗುವನು. ಎಲೈ ತಪೋಧನರಿರಾ! ಇವೆಲ್ಲವೂ ಆ ವರಾಹಮೂರ್ತಿಯಿಂದ ನಿಷೇಧಿಸಲ್ಪಟ್ಟಿರುವುವು.

೧೯೦. ಆದುದರಿಂದಲೇ ಇವನ್ನು ದ್ವಿಜರಾದವರು ತಿನ್ನಬಾರದು. ಶ್ರಾದ್ಧದಲ್ಲಿಯೂ ಪಿತೃಗಳಿಗೆ ನಿವೇದಿಸಬಾರದು. ಅವು ಯಾವುವೆಂದರೆ-ರೋಹಿತ ಸೂಕರು ಕೂರ್ಮ (ಆಮೆ) ಗೋಧಾ (ಉಡು) ಹಂಸ ಇವುಗಳನ್ನು ಬಿಡಬೇಕು.

೧೯೧. ಚಕ್ರವಾಕ ಮದ್ಗು (ಒಂದುಬಗೆಯ ಜಲಚರಪಕ್ಷಿ) ಶಲ್ಕಹೀನವಾದ ಮತ್ಸ್ಯ (ಮೇಲಿನ ತೊಗಲು ತೆಗೆದ ಮೀನು) ಅಸ್ಥಿರಹಿತವಾದ

ಕಲವಿಂಕಮಯೂರಾಂಶ್ಚ ಭಾರದ್ವಾಜಾಂಶ್ಚ ಶಾರ್ಙ್ಗಕಾನ್ ।
ನಕುಲೋಲುಕಮಾರ್ಜಾರಾಂಲ್ಲೋಪಾನನ್ಯಾನ್ಸುದುರ್ಗ್ರಹಾನ್ ॥ ೧೯೨ ॥

ಟಿಟ್ಟಿಭಾನ್ಸಾರ್ಘಜಂಬೂಕಾನ್ವ್ಯಾಘ್ರಋಕ್ಷತರಕ್ಷುಕಾನ್ ।
ಏತಾನನ್ಯಾಂಶ್ಚ ಸಂದುಷ್ಟಾನ್ಯೋ ಭಕ್ಷಯತಿ ದುರ್ಮತಿಃ ॥ ೧೯೩ ॥

ಸ ಮಹಾಪಾಪಕಾರೀ ತು ರೌರವಂ ನರಕಂ ವ್ರಜೇತ್ ।
ಪಿತ್ರ್ಯೇಷ್ವೇತಾಂಸ್ತು ಯೋ ದದ್ಯಾತ್ಪಾಪಾತ್ಮಾ ಗರ್ಹಿತಾಮಿಷಾನ್ ॥ ೧೯೪ ॥

ಸ ಸ್ವರ್ಗಸ್ಥಾನಪಿ ಪಿತೄನ್ನರಕೇ ಪಾತಯಿಷ್ಯತಿ ।
ಕುಸುಂಭಶಾಕಂ ಜಂಬೀರಂ ಸಿಗ್ರುಕಂ ಕೋವಿದಾರಕಂ ॥ ೧೯೫ ॥

ಪಿಣ್ಯಾಕಂ ವಿಪ್ರುಷಂ ಚೈವ ಮಸೂರಂ ಗೃಂಜನಂ ಶಣಂ ।
ಕೋದ್ರವಂ ಕೋಕಿಲಾಕ್ಷಂ ಚ ಚುಕ್ರಂ ಕಂಬುಕಪದ್ಮಕಂ ॥ ೧೯೬ ॥

---

೧೯೨. (ಮೂಳಿತಿಗೆದ) ಕುರರ ವಾಸಹಾತ (?) ಕುಕ್ಕುಟ (ಕೋಳಿ) ಇವುಗಳನ್ನೂ—ಕಲವಿಂಕ (ಗುಬ್ಬಚ್ಚಿ) ಮಯೂರ (ನವಿಲು) ಭಾರದ್ವಾಜ (ಬಾಣಾಡಿ) ಶಾರ್ಙ್ಗಕ ನಕುಲ (ಮುಂಗುಸಿ) ಉಲೂಕ (ಗೂಬೆ) ಮಾರ್ಜಾರ (ಬೆಕ್ಕು) ಹಿಡಿಯಲಾಗದಂತಹ

೧೯೩. ಇತರ ದುಷ್ಟಮೃಗ (?)— ಟಿಟ್ಟಿಭ ಜಂಬೂಕ ವ್ಯಾಘ್ರ ಋಕ್ಷ (ಕರಡಿ) ತರಕ್ಷು (ಹುಲಿ) ಮೊದಲಾದ ಇತರ ದುಷ್ಟಮೃಗಗಳನ್ನೂ ಯಾವ ದುರ್ಬುದ್ಧಿಯು ತಿನ್ನುವನೋ-

೧೯೪-೧೯೬. ಆ ಮಹಾಪಾತಕಿಯು ರೌರವನರಕಕ್ಕೆ ಹೋಗುವನು. ಯಾವ ಪಾಪಾತ್ಮನು ನಿಂದಿತವಾದ ಈ ಮೃಗಗಳ ಮಾಂಸವನ್ನು ಪಿತೃಗಳಿಗೆ ನಿವೇದಿಸುವನೋ-ಅವನು ಸ್ವರ್ಗದಲ್ಲಿರುವ ಪಿತೃಗಳನ್ನೂ ನರಕಕ್ಕೆ ತಳ್ಳಿಬಿಡುವನು. ಮತ್ತು ಕುಸುಂಭ ಶಾಕವನ್ನೂ ಜಂಬೀರವನ್ನೂ ಶಿಗ್ರು (ನುಗ್ಗೆ) ವನ್ನೂ ಕೋವಿದಾರವನ್ನೂ-ಹಿಂಡಿಯನ್ನೂ ವಿಪ್ರುಷವನ್ನೂ (?) ಮಸೂರ (ಬಟಾಣಿ) ವನ್ನೂ ಗೃಂಜನ (ಬೆಳ್ಳುಳ್ಳಿ) ವನ್ನೂ ಶಣ (ಸೆಣಬು) ವನ್ನೂ ಕೋದ್ರವ ಕೋಕಿಲಾಕ್ಷ (?) ಚುಕ್ರ (ಹುಣಿಸೆಹಣ್ಣು) ಕಂಬು ಪದ್ಮಕ (?) ಗಳನ್ನೂ-

ಚಕೋರಶ್ಯೇನಮಾಂಸಂ ಚ ವರ್ತುಲಾಲಾಬುಶಾಲಿನೀಂ ।
ಫಲಂ ತಾಲತರೂಣಾಂ ಚ ಭುಕ್ತ್ವಾ ನರಕಮೃಚ್ಛತಿ ॥ ೧೯೭ ॥

ದತ್ವಾ ಪಿತೃಷು ತೈಃ ಸಾರ್ಧಂ ವ್ರಜೇತ್ಪೂಯವಹಂ ನರಃ ।
ತಸ್ಮಾತ್ಸರ್ವಪ್ರಯತ್ನೇನ ನಾಹರೇತ್ತು ವಿಚಕ್ಷಣಃ ॥ ೧೯೮ ॥

ನಿಷಿದ್ಧಾನಿ ವರಾಹೇಣ ಸ್ವಯಂ ಪಿತ್ರರ್ಥಮಾದರಾತ್ ।
ವರಮೇವಾತ್ಮಮಾಂಸಸ್ಯ ಭಕ್ಷಣಂ ಮುನಯಃ ಕೃತಂ ॥ ೧೯೯ ॥

ನ ತ್ವೇವ ಹಿ ನಿಷಿದ್ಧಾನಾಮಾದಾನಂ ಪುಂಭಿರಾದರಾತ್ ।
ಅಜ್ಞಾನಾದ್ವಾ ಪ್ರಮಾದಾದ್ವಾ ಸಕೃದೇತಾನಿ ಚ ದ್ವಿಜಾಃ ॥ ೨೦೦ ॥

ಭಕ್ಷಿತಾನಿ ನಿಷಿದ್ಧಾನಿ ಪ್ರಾಯಶ್ಚಿತ್ತಂ ತತಶ್ಚರೇತ್ ।
ಫಲಮೂಲದಧಿಕ್ಷೀರತಕ್ರಗೋಮೂತ್ರಯಾವಕೈಃ ॥ ೨೦೧ ॥

---

೧೯೭. ಚಕೋರ ಶ್ಯೇನ (ಗಿಡುಗ) ಮಾಂಸಗಳನ್ನೂ ಗುಂಡು ಸೋರೆ ಕಾಯಿಯನ್ನೂ ತಾಳೆಹಣ್ಣನ್ನೂ ತಿಂದವನು ನರಕಕ್ಕೆ ಹೋಗುವನು.

೧೯೮. ಪಿತೃಗಳಿಗೆ ಶ್ರಾದ್ಧದಲ್ಲಿ ಅರ್ಪಿಸಲು ಆ ಪಾಪದಿಂದ ಪಿತೃಗಳೂ ಶ್ರಾದ್ಧಮಾಡಿದವನೂ ಪೂಯವಹವೆಂಬ ನರಕವನ್ನು ಹೊಂದುವರು. ಆದುದ ರಿಂದ ಪ್ರಾಜ್ಞನಾದವನು ಪ್ರಯತ್ನಪೂರ್ವಕವಾಗಿ ಮೇಲೆ ಹೇಳಿದುದೆಲ್ಲವನ್ನೂ ಶ್ರಾದ್ಧದಲ್ಲಿ ವಿಸರ್ಜಿಸಬೇಕು.

೧೯೯. ಆ ವರಾಹಮೂರ್ತಿಯು ಪಿತೃಗಳಿಗೋಸ್ಕರವಾಗಿ ಆದರದಿಂದ ತಾನಾಗಿಯೇ ಈರೀತಿ ನಿಷೇಧಿಸಿರುವನು. ಎಲೈ ಮುನಿಗಳಿರಾ! ತನ್ನ ಮಾಂಸವನ್ನಾದರೂ ತಾನು ತಿನ್ನುವುದು ಒಳ್ಳೆಯದು.

೨೦೦. ಆದರೆ ಈರೀತಿ ನಿಷೇಧಿಸಲ್ಪಟ್ಟ ವಸ್ತುಗಳನ್ನು ಮಾತ್ರ ಪುರು ಷರು ಆದರಿಸಿ ಉಪಯೋಗಿಸಬಾರದು. ಎಲೈ ಬ್ರಾಹ್ಮಣರಿರಾ! ಅಜ್ಞಾನದಿಂದ ಲಾಗಲೀ ಪ್ರಮಾದದಿಂದಲಾಗಲೀ ಒಂದುಬಾರಿ-

೨೦೧. ನಿಷಿದ್ಧವಾದ ಈ ವಸ್ತುಗಳನ್ನು ಭಕ್ಷಣೆಮಾಡಿದ್ದೇ ಆದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಫಲಗಳು ಗೆಡ್ಡೆಗೆಣಸುಗಳು ಮೊಸರು ಹಾಲು ಮಜ್ಜಿಗೆ ಗಂಜಳ ಅರುಗು ಈ ವಸ್ತುಗಳನ್ನು-

ಭೋಜ್ಯಾನ್ನಭೋಜ್ಯಸಂಭುಕ್ತೇ ಪ್ರತ್ಯೇಕಂ ದಿನಸಪ್ತಕಂ ।
ಏವಂ ನಿಷಿದ್ಧಾಚರಣೇ ಕೃತೇ ಸಕೃದಪಿ ದ್ವಿಜೈಃ ॥ ೨೦೨ ॥

ಶುದ್ಧಿಂ ನೇಯಂ ಶರೀರಂ ತು ವಿಷ್ಣುಭಕ್ತೈರ್ವಿಶೇಷತಃ ।
ನಿಷಿದ್ಧಂ ವರ್ಜಯೇದ್ದ್ರವ್ಯಂ ಯಥೋಕ್ತಂ ಚ ದ್ವಿಜೋತ್ತಮಾಃ ॥ ೨೦೩ ॥

ಸಮಾಹೃತ್ಯ ತತಃ ಶ್ರಾದ್ಧಂ ಕರ್ತವ್ಯಂ ನಿಜಶಕ್ತಿತಃ ।
ಏವಂ ವಿಧಾನತಃ ಶ್ರಾದ್ಧಂ ಕೃತ್ವಾ ಸ್ವವಿಭವೋಚಿತಂ ।
ಆಬ್ರಹ್ಮಸ್ತಂಬಪರ್ಯಂತಂ ಜಗತ್ಪ್ರೀಣಾತಿ ಮಾನವಃ ॥ ೨೦೪ ॥

॥ ಮುನಯ ಊಚುಃ ॥

ಪಿತಾ ಜೀವತಿ ಯಸ್ಯಾಥ ಮೃತೌ ದ್ವೌ ಪಿತರೌ ಪಿತುಃ ।
ಕಥಂ ಶ್ರಾದ್ಧಂ ಹಿ ಕರ್ತವ್ಯಮೇತದ್ವಿಸ್ತರಶೋ ವದ ॥ ೨೦೫ ॥

---

೨೦೨. ಏಳುದಿವಸಗಳು ಪ್ರತ್ಯೇಕ ಪ್ರತ್ಯೇಕವಾಗಿ ಎಂದರೆ ಒಂದೊಂದು ದಿನ ಒಂದೊಂದು ವಸ್ತುವನ್ನು ಉಪಯೋಗಿಸುತ್ತಾ ಪ್ರಾಯಶ್ಚಿತ್ತವನ್ನು ಆಚರಿಸಬೇಕು. ಈರೀತಿಯಾಗಿ ನಿಷಿದ್ಧವಾದ ಆಚರಣೆಯನ್ನು ಒಂದುಬಾರಿಯಾದರೂ ಮಾಡಿದಲ್ಲಿ ದ್ವಿಜರೆನಿಸಿದವರು-

೨೦೩. ತಮ್ಮ ದೇಹವನ್ನು ಕೂಡಲೇ ಶುದ್ಧಿಪಡಿಸಿಕೊಳ್ಳಬೇಕು. ವಿಷ್ಣುಭಕ್ತರಾದವರಂತೂ ಮತ್ತಷ್ಟು ಗಮನವಿತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಎಲೈ ದ್ವಿಜಶ್ರೇಷ್ಠರಿರಾ! ಹಿಂದೆ ಹೇಳಿದ ನಿಷಿದ್ಧ ವಸ್ತುಗಳನ್ನು ಬಿಟ್ಟು ಉಕ್ತವಾದ ವಸ್ತುಗಳನ್ನು-

೨೦೪. ತೆಗೆದುಕೊಂಡುಬಂದು ತನ್ನ ಶಕ್ತ್ಯನುಸಾರವಾಗಿ ಶ್ರಾದ್ಧವನ್ನು ಮಾಡಬೇಕು. ಈರೀತಿಯಾಗಿ ತನ್ನ ಶಕ್ತಿಯಿದ್ದಷ್ಟು ಲೋಪವಿಲ್ಲದಂತೆ ವಿಧ್ಯನುಸಾರವಾಗಿ ಮಾನವನು ಶ್ರಾದ್ಧವನ್ನು ಮಾಡಿದಲ್ಲಿ ಹುಲ್ಲುಕಡ್ಡಿಯಿಂದ ಹಿಡಿದು ಬ್ರಹ್ಮನವರೆಗೆ ಸಕಲ ಜಗತ್ತನ್ನೂ ಪ್ರೀತಿಗೊಳಿಸುವನು.

೨೦೫. ಆಗ ಮುನಿಗಳು ವ್ಯಾಸನನ್ನು ಕುರಿತು 'ಎಲೈ ಬ್ರಹ್ಮರ್ಷಿಯೇ! ಯಾವನ ತಂದೆಯು ಜೀವಿಸಿದ್ದು ಆ ತಂದೆಯಾದವನ ತಾಯಿತಂದೆಗಳು ಸತ್ತಿರುವರೋ ಆ ಸಂದರ್ಭದಲ್ಲಿ ಶ್ರಾದ್ಧವನ್ನು ಹೇಗೆ ಮಾಡಬೇಕೆಂಬುದನ್ನು ವಿವರವಾಗಿ ತಿಳಿಸು' ಎಂದು ಪ್ರಶ್ನಿಸಲು

॥ ವ್ಯಾಸ ಉವಾಚ ॥
ಯಸ್ಮೈ ದದ್ಯಾತ್ಪಿತಾ ಶ್ರಾದ್ಧಂ ತಸ್ಮೈ ದದ್ಯಾತ್ಸುತಃ ಸ್ವಯಂ ।
ಏವಂ ನ ಹೀಯತೇ ಧರ್ಮೋ ಲೌಕಿಕೋ ವೈದಿಕಸ್ತಥಾ ॥ ೨೦೬ ॥

॥ ಮುನಯ ಊಚುಃ ॥
ಮೃತಃ ಪಿತಾ ಜೀವತಿ ಚ ಯಸ್ಯ ಬ್ರಹ್ಮನ್ಪಿತಾಮಹಃ ।
ಸ ಹಿ ಶ್ರಾದ್ಧಂ ಕಥಂ ಕುರ್ಯಾದೇತತ್ತ್ವಂ ವಕ್ತುಮರ್ಹಸಿ ॥ ೨೦೭ ॥

॥ ವ್ಯಾಸ ಉವಾಚ ॥
ಪಿತುಃ ಪಿಂಡಂ ಪ್ರದದ್ಯಾಚ್ಚ ಭೋಜಯೇಚ್ಚ ಪಿತಾಮಹಂ ।
ಪ್ರಪಿತಾಮಹಸ್ಯ ಪಿಂಡಂ ವೈ ಹ್ಯಯಂ ಶಾಸ್ತ್ರೇಷು ನಿರ್ಣಯಃ ॥ ೨೦೮ ॥

ಮೃತೇಷು ಪಿಂಡಂ ದಾತವ್ಯಂ ಜೀವಂತಂ ಚಾಪಿ ಭೋಜಯೇತ್ ।
ಸಪಿಂಡೀಕರಣಂ ನಾಸ್ತಿ ನ ಚ ಪಾರ್ವಣಮಿಷ್ಯತೇ ॥ ೨೦೯ ॥

---

೨೦೬. ವ್ಯಾಸನು ಹೇಳುವನು :—' ತಂದೆಯಾದವನು ಯಾರಿಗೆ ಶ್ರಾದ್ಧವನ್ನು ಮಾಡುವನೋ ಅವರಿಗೇನೇ ಮಗನಾದವನು ಶ್ರಾದ್ಧವನ್ನು ಮಾಡಬೇಕು. ಹೀಗಾದಲ್ಲಿ ಲೌಕಿಕವಾಗಿಯೂ ವೈದಿಕವಾಗಿಯೂ ಧರ್ಮವು ಲೋಪವಾಗುವುದಿಲ್ಲ ' ಎನ್ನಲು-(ಈ ಪ್ರಶ್ನೋತ್ತರವು ನಾಂದೀಶ್ರಾದ್ಧ ವಿಷಯವಾಗಿರಬಹುದು)

೨೦೭. ಆಗ ಮುನಿಗಳು ಮತ್ತೊಮ್ಮೆ ವ್ಯಾಸನನ್ನು ಕುರಿತು " ಎಲೈ ಬ್ರಹ್ಮರ್ಷಿಯೇ! ಯಾವನಿಗೆ ತಂದೆಯು ಸತ್ತುಹೋಗಿರುವನೋ ಮತ್ತು ಪಿತಾಮಹನು ಬದುಕಿರುವನೋ-ಅವನು ಶ್ರಾದ್ಧವನ್ನು ಹೇಗೆ ಮಾಡಬೇಕೆಂಬುದನ್ನು ನೀನು ನಮಗೆ ತಿಳಿಸಬೇಕು " ಎಂದು ಪ್ರಶ್ನಿಸಿದರು.

೨೦೮. ಆಗ ವ್ಯಾಸನು ಅದಕ್ಕೆ ಉತ್ತರವಿತ್ತನು. " ತಂದೆಗೆ ಪಿಂಡವನ್ನು ಕೊಡಬೇಕು. ಪಿತಾಮಹನಿಗೆ ಭೋಜನ ಮಾಡಿಸಬೇಕು. ಪ್ರಪಿತಾಮಹನಿಗೆ ಪಿಂಡವನ್ನು ನೀಡಬೇಕು. ಇದೀಗ ಶಾಸ್ತ್ರದಲ್ಲಿ ನಿರ್ಣಯವು. "

೨೦೯. ಮೃತನಿಗೆ ಪಿಂಡವನ್ನು ಕೊಡಬೇಕು. ಜೀವಿಸಿರುವವನನ್ನು ಊಟಮಾಡಿಸಬೇಕು. ಆಗ ಸಪಿಂಡೀಕರಣ ಶ್ರಾದ್ಧವಿಲ್ಲ. ಪಾರ್ವಣವೂ ಇಲ್ಲ.

ಆಚಾರಮಾಚರೇದ್ಯಸ್ತು ಪಿತೃಮೇಧಾಶ್ರಿತಂ ನರಃ ।
ಆಯುಷಾ ಧನಪುತ್ರೈಶ್ಚ ವರ್ಧತ್ಯಾಶು ನ ಸಂಶಯಃ ॥ ೨೧೦ ॥

ಪಿತೃಮೇಧಾಧ್ಯಾಯಮಿಮಂ ಶ್ರಾದ್ಧಕಾಲೇಷು ಯಃ ಪಠೇತ್ ।
ತದನ್ನಮಸ್ಯ ಪಿತರೋಽಶ್ನಂತಿ ಚ ತ್ರಿಯುಗಂ ದ್ವಿಜಾಃ ॥ ೨೧೧ ॥

ಏವಂ ಮಯೋಕ್ತಃ ಪಿತೃಮೇಧಕಲ್ಪಃ
ಪಾಪಾಪಹಃ ಪುಣ್ಯವಿವರ್ಧನಶ್ಚ ।
ಶ್ರೋತವ್ಯ ಏಷ ಪ್ರಯತೈರ್ನರೈಶ್ಚ
ಶ್ರಾದ್ಧೇಷು ಚೈವಾಪ್ಯನುಕೀರ್ತಯೇತ ॥ ೨೧೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಶ್ರಾದ್ಧಕಲ್ಪನಿರೂಪಣಂ ನಾಮ ವಿಂಶತ್ಯಧಿಕ-
ದ್ವಿಶತತಮೋಽಧ್ಯಾಯಃ

---

೨೧೦. ಈರೀತಿ ಪಿತೃಮೇಧಕ್ಕೆ ಸಂಬಂಧಪಟ್ಟ ಸಂಪ್ರದಾಯವನ್ನು ಯಾವನು ಆಚರಿಸುವನೋ ಅವನು ಆಯುಸ್ಸಿನಿಂದಲೂ ಧನದಿಂದಲೂ ಪುತ್ರರಿಂದಲೂ ಅಭಿವೃದ್ಧಿಹೊಂದುವನು.

೨೧೧. ಎಲೈ ಬ್ರಾಹ್ಮಣರಿರಾ! ಯಾವನು ಈ ಪಿತೃಮೇಧಾಧ್ಯಾಯವನ್ನು ಶ್ರಾದ್ಧಮಾಡುವಾಗ ಪಠಿಸುವನೋ-ಅವನು ಪಿತೃಗಳಿಗೆ ನೀಡಿದಂತಹ ಆ ಅನ್ನವು ಮೂರು ಯುಗಗಳ ಪರ್ಯಂತ ಅಕ್ಷಯವಾಗುವುದು.

೨೧೨. ಎಲೈ ಮುನಿಗಳಿರಾ! ಈರೀತಿಯಾಗಿ ನಾನು ನಿಮಗೆ ಪಿತೃಮೇಧಪ್ರಕಾರವನ್ನು ತಿಳಿಸಿದೆನು. ಇದು ಪಾಪಪರಿಹಾರಕವಾದುದು. ಪುಣ್ಯವನ್ನು ಹೆಚ್ಚಿಸುವಂಥಹದು. ಇದನ್ನು ಶುದ್ಧಹೃದಯರಾದ ಮಾನವರು ಶ್ರವಣಮಾಡಲೇಬೇಕು ಮತ್ತು ಶ್ರಾದ್ಧಕಾಲದಲ್ಲಿ ಪಠಿಸಬೇಕು ಎಂದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಶ್ರಾದ್ಧಕಲ್ಪನಿರೂಪಣವೆಂಬ ಇನ್ನೂರ
ಇಪ್ಪತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕವಿಂಶತ್ಯಧಿಕಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಏವಂ ಸಮ್ಯಗ್ಗೃಹಸ್ಥೇನ ದೇವತಾಃ ಪಿತರಸ್ತಥಾ ।
ಸಂಪೂಜ್ಯಾ ಹವ್ಯಕವ್ಯಾಭ್ಯಾಮನ್ನೇನಾತಿಥಿಬಾಂಧವಾಃ ॥ ೧ ॥

ಭೂತಾನಿ ಭೃತ್ಯಾಃ ಸಕಲಾಃ ಪಶುಪಕ್ಷಿಪಿಪೀಲಿಕಾಃ ।
ಭಿಕ್ಷವೋ ಯಾಚಮಾನಾಶ್ಚ ಯೇ ಚಾನ್ಯೇ ಪಾಂಥಕಾ ಗೃಹೇ ॥ ೨ ॥

ಸದಾಚಾರರತಾ ವಿಪ್ರಾಃ ಸಾಧುನಾ ಗೃಹಮೇಧಿನಾ ।
ಪಾಪಂ ಭುಂಕ್ತೇ ಸಮುಲ್ಲಂಘ್ಯ ನಿತ್ಯನೈಮಿತ್ತಿಕೀಃ ಕ್ರಿಯಾಃ ॥ ೩ ॥

ಇನ್ನೂರಇಪ್ಪತ್ತೊಂದನೆಯ ಅಧ್ಯಾಯವು

೧. ವ್ಯಾಸನು ಹೇಳತೊಡಗಿದನು :—“ ಈರೀತಿಯಾಗಿ ಗೃಹಸ್ಥನಾದವನು ಹವ್ಯಗಳಿಂದ ದೇವತೆಗಳನ್ನೂ ಕವ್ಯಗಳಿಂದ ಪಿತೃಗಳನ್ನೂ ಅನ್ನದಿಂದ ಅತಿಥಿಗಳನ್ನೂ ಬಂಧುಗಳನ್ನೂ ಚೆನ್ನಾಗಿ ಸತ್ಕರಿಸಬೇಕು.

೨-೩. ಮತ್ತು ಪಂಚಭೂತಗಳು ಆಳುಕಾಳುಗಳು ಪಶು ಪಕ್ಷಿಗಳು ಪಿಪೀಲಕಾದಿ ಕೃಮಿಕೀಟಗಳು ಭಿಕ್ಷುಗಳು (ಸನ್ಯಾಸಿಗಳು) ಯಾಚಕರು ಮತ್ತು ದಾರಿಹೋಕರಾಗಿ ಮನೆಗೆ ಬಂದವರು ಸದಾಚಾರನಿರತರಾದ ಬ್ರಾಹ್ಮಣರು ಇವರೆಲ್ಲರನ್ನೂ ಸಾಧುವಾದ ಗೃಹಸ್ಥನು ಸತ್ಕರಿಸಬೇಕು. ಮತ್ತು ನಿತ್ಯನೈಮಿತ್ತಿಕವಾದ ಕರ್ಮಗಳನ್ನು ಅವನು ಮಾಡದೆಹೋದರೆ ಪಾಪಿಯಾಗುವನು ” ಎಂದನು.

॥ ಮುನಯ ಊಚುಃ ॥

ಕಥಿತಂ ಭವತಾ ವಿಪ್ರ ನಿತ್ಯನೈಮಿತ್ತಿಕಂ ಚ ಯತ್ ।
ನಿತ್ಯಂ ನೈಮಿತ್ತಿಕಂ ಕಾಮ್ಯಂ ತ್ರಿವಿಧಂ ಕರ್ಮ ಪೌರುಷಂ ॥ ೪ ॥

ಸದಾಚಾರಂ ಮುನೇ ಶ್ರೋತುಮಿಚ್ಛಾಮೋ ವದತಸ್ತವ ।
ಯಂ ಕುರ್ವನ್ಸುಖಮಾಪ್ನೋತಿ ಪರತ್ರೇಹ ಚ ಮಾನವಃ ॥ ೫ ॥

॥ ವ್ಯಾಸ ಉವಾಚ ॥

ಗೃಹಸ್ಥೇನ ಸದಾ ಕಾರ್ಯಮಾಚಾರಪರಿರಕ್ಷಣಂ ।
ನ ಹ್ಯಾಚಾರವಿಹೀನಸ್ಯ ಭದ್ರಮತ್ರ ಪರತ್ರ ವಾ ॥ ೬ ॥

ಯಜ್ಞದಾನತಪಾಂಸೀಹ ಪುರುಷಸ್ಯ ನ ಭೂತಯೇ ।
ಭವಂತಿ ಯಃ ಸದಾಚಾರಂ ಸಮುಲ್ಲಂಘ್ಯ ಪ್ರವರ್ತತೇ ॥ ೭ ॥

---

೪. ಇದನ್ನು ಕೇಳಿ ಆ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು "ಓ ವಿಪ್ರಶ್ರೇಷ್ಠಾ! ನೀನೀಗ ನಿತ್ಯನೈಮಿತ್ತಿಕ ಕ್ರಿಯೆಗಳೆಂದು ಹೇಳಿದೆಯಲ್ಲವೆ? ಪುರುಷನಾದವನು ಮಾಡತಕ್ಕ ನಿತ್ಯ ನೈಮಿತ್ತಿಕ ಕಾಮ್ಯಗಳೆಂಬ ಮೂರು ವಿಧವಾದ ಕರ್ಮಗಳನ್ನೂ–

೫. ಸದಾಚಾರವೇನೆಂಬುದನ್ನೂ ನಾವು ಕೇಳಬೇಕೆಂದಿದೇವೆ. ಅದನ್ನು ನೀನು ಹೇಳಬೇಕು. ಆ ಕರ್ಮಗಳನ್ನು ಮಾಡಲು ಮಾನವನು ಇಹದಲ್ಲಿಯೂ ಪರದಲ್ಲಿಯೂ ಸುಖವನ್ನು ಪಡೆಯುವನಲ್ಲವೆ? ಎಂದು ಪ್ರಶ್ನಿಸಲು.

೬. ಆಗ ವ್ಯಾಸನು ಇಂತೆಂದನು :—ಗೃಹಸ್ಥನಾದವನು ಸರ್ವದಾ ಆಚಾರವನ್ನು ಕಾಪಾಡಿಕೊಂಡು ಬರಬೇಕು. ಆಚಾರವನ್ನು ಬಿಟ್ಟವನಿಗೆ ಇಹದಲ್ಲಿಯೂ ಪರದಲ್ಲಿಯೂ ಒಳ್ಳೆಯದಾಗುವುದಿಲ್ಲ.

೭. ಯಾವನು ಸದಾಚಾರವನ್ನುಲ್ಲಂಘಿಸಿ ನಡೆಯುವನೋ ಅವನು ಎಷ್ಟೇ ಯಜ್ಞವನ್ನೂ ದಾನವನ್ನೂ ತಪಸ್ಸನ್ನೂ ಮಾಡಿದ್ದರೂ ಅವೊಂದೂ ಅವನಿಗೆ ಶ್ರೇಯಸ್ಸನ್ನುಂಟುಮಾಡುವುದಿಲ್ಲ.

ದುರಾಚಾರೋ ಹಿ ಪುರುಷೋ ನೇಹಾಯುರ್ವಿಂದತೇ ಮಹತ್ ।
ಕಾರ್ಯೋ ಧರ್ಮಃ ಸದಾಚಾರ ಆಚಾರಸ್ಯೈವ ಲಕ್ಷಣಂ ॥ ೮ ॥

ತಸ್ಯ ಸ್ವರೂಪಂ ವಕ್ಷ್ಯಾಮಿ ಸದಾಚಾರಸ್ಯ ಭೋ ದ್ವಿಜಾಃ ।
ಆತ್ಮನೈಕಮನಾ ಭೂತ್ವಾ ತಥೈವ ಪರಿಪಾಲಯೇತ್ ॥ ೯ ॥

ತ್ರಿವರ್ಗಸಾಧನೇ ಯತ್ನಃ ಕರ್ತವ್ಯೋ ಗೃಹಮೇಧಿನಾ ।
ತತ್ಸಂಸಿದ್ಧೌ ಗೃಹಸ್ಥಸ್ಯ ಸಿದ್ಧಿರತ್ರ ಪರತ್ರ ಚ ॥ ೧೦ ॥

ಪಾದೇನಾಪ್ಯಸ್ಯ ಪಾರತ್ರ್ಯಂ ಕುರ್ಯಾಚ್ಛ್ರೇಯಃ ಸ್ವಮಾತ್ಮವಾನ್ ।
ಅರ್ಧೇನ ಚಾತ್ಮಭರಣಂ ನಿತ್ಯನೈಮಿತ್ತಿಕಾನಿ ಚ ॥ ೧೧ ॥

ಪಾದೇನೈವ ತಥಾಪ್ಯಸ್ಯ ಮೂಲಭೂತಂ ವಿವರ್ಧಯೇತ್ ।
ಏವಮಾಚರತೋ ವಿಪ್ರಾ ಅರ್ಥಃ ಸಾಫಲ್ಯಮೃಚ್ಛತಿ ॥ ೧೨ ॥

---

೮. ದುರಾಚಾರನಿರತನಾದ ಮಾನವನು ಈ ಲೋಕದಲ್ಲಿ ಹೆಚ್ಚುಕಾಲ ಬದುಕಲಾರನು. ಆದುದರಿಂದ ಸದಾಚಾರವೆಂಬ ಧರ್ಮವನ್ನು ಆಚರಿಸಬೇಕು.

೯. ಎಲೈ ಬ್ರಾಹ್ಮಣರಿರಾ! ಆ ಸದಾಚಾರದ ಲಕ್ಷಣವನ್ನು ನಿಮಗೆ ತಿಳಿಸುವೆನು ಕೇಳಿರಿ. ಪುರುಷನಾದವನು ಒಂದೇ ಮನಸ್ಸಿನಿಂದ ಅದನ್ನು ಪಾಲಿಸಿಕೊಂಡು ಬರಬೇಕು.

೧೦. ಗೃಹಸ್ಥನೆನಿಸಿದವನು ಧರ್ಮ ಅರ್ಥ ಕಾಮವೆಂಬ ಮೂರು ಪುರುಷಾರ್ಥಗಳನ್ನು ಸಾಧಿಸಲು ಪ್ರಯತ್ನವನ್ನು ಮಾಡಬೇಕು. ಆ ಪುರುಷಾರ್ಥಗಳು ಸಿದ್ಧಿಸಿದಲ್ಲಿ ಇಹದಲ್ಲಿಯೂ ಪರದಲ್ಲಿಯೂ ಸಿದ್ಧಿಯುಂಟಾಗುವುದು.

೧೧. ಆತ್ಮಜ್ಞಾನಿಯಾದವನು ।ತನ್ನ ಬಳಿಯಿರುವ ಅರ್ಥದಲ್ಲಿ (ಹಣ) ಕಾಲುಪಾಲಿನಷ್ಟು ವ್ಯಯಮಾಡಿ ಪಾರತ್ರಿಕವಾದ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳಬೇಕು. ಇನ್ನು ಅರ್ಧಭಾಗದಷ್ಟು ವ್ಯಯಮಾಡಿ ಆತ್ಮಭರಣೋಪಾಯವನ್ನೂ ನಿತ್ಯ ನೈಮಿತ್ತಿಕ ಕರ್ಮಗಳನ್ನೂ ಮಾಡಬೇಕು.

೧೨. ಇನ್ನುಳಿದ ಕಾಲುಪಾಲಿನಷ್ಟು ಹಣವನ್ನು ಮೂಲಧನವನ್ನು ಬೆಳೆಸಿಕೊಳ್ಳಲು ಉಪಯೋಗಿಸಬೇಕು. ಈರೀತಿ ಆಚರಿಸಲು ಮನುಷ್ಯನ ಅರ್ಥವು ಸಫಲತೆಯನ್ನು ಪಡೆದಂತಾಗುವುದು.

ತದ್ವತ್ಪಾಪನಿಷೇಧಾರ್ಥಂ ಧರ್ಮಃ ಕಾರ್ಯೋ ವಿಪಶ್ಚಿತಾ ।
ಪರತ್ರಾರ್ಥಸ್ತಥೈವಾನ್ಯಃ ಕಾರ್ಯೋಽತ್ರೈವ ಫಲಪ್ರದಃ ॥ ೧೩ ॥

ಪ್ರತ್ಯವಾಯಭಯಾತ್ಕಾಮಸ್ತಥಾನ್ಯಶ್ಚಾವಿರೋಧವಾನ್ ।
ದ್ವಿಧಾ ಕಾಮೋಽಪಿ ರಚಿತಸ್ತ್ರಿವರ್ಗಾಯಾವಿರೋಧಕೃತ್ ॥ ೧೪ ॥

ಪರಸ್ಪರಾನುಬಂಧಾಂಶ್ಚ ಸರ್ವಾನೇತಾನ್ವಿಚಿಂತಯೇತ್ ।
ವಿಪರೀತಾನುಬಂಧಾಂಶ್ಚ ಬುಧ್ಯಧ್ವಂ ತಾನ್ದ್ವಿಜೋತ್ತಮಾಃ ॥ ೧೫ ॥

---

೧೩. ಅದೇರೀತಿ ತಾನು ಮಾಡಿರುವ ಪಾಪಗಳನ್ನು ಪರಿಹರಿಸಿಕೊಳ್ಳಲೂ ಹೊಸದಾಗಿ ಪಾಪಗಳನ್ನು ಮಾಡದಿರಲೂ ಸಹ ಧರ್ಮವನ್ನಾಚರಿಸಬೇಕು. ಆ ಧರ್ಮವು ಪಾರತ್ರಿಕಫಲಪ್ರದವೆಂತಲೂ ಐಹಿಕಫಲಪ್ರದವೆಂತಲೂ ಎರಡುಬಗೆಯಾಗಿರುವುದು. ಈ ಎರಡುಬಗೆಯ ಧರ್ಮವನ್ನೂ ಪುರುಷನು ಆಚರಿಸಬೇಕು.

೧೪. ಕಾಮವೆಂಬುದೂ ಎರಡುಬಗೆಯಾಗಿರುವುದು. ಪ್ರತ್ಯವಾಯಭಯದಿಂದ ಮಾಡತಕ್ಕುದೊಂದು ಮತ್ತು ಧರ್ಮಾರ್ಥಗಳಿಗೆ ಅವಿರುದ್ಧವಾದುದು ಮತ್ತೊಂದು. ಪ್ರತ್ಯವಾಯವೆಂದರೆ ವಿಹಿತಕರ್ಮಗಳನ್ನು ಮಾಡದಿರುವುದರಿಂದ ಉಂಟಾಗತಕ್ಕ ದೋಷವು. ಇದನ್ನು ಪರಿಹರಿಸಿಕೊಳ್ಳುವ ಇಚ್ಛೆಯೇ ಕಾಮದ ಮೊದಲನೆಯ ಬಗೆ. ಮನುಷ್ಯನಿಗೆ ಸಹಜವಾಗಿ ಆಗತಕ್ಕ ಭೋಗವಸ್ತುಗಳಲ್ಲಿಯ ಅಭಿಲಾಷೆ ಎರಡನೆಯ ಬಗೆಯದು. ಇದನ್ನೇ ಧರ್ಮಾರ್ಥಗಳಿಗೆ ಅವಿರುದ್ಧವಾಗಿರಬೇಕು ಎಂದುದು.

೧೫. ಮೇಲೆ ಹೇಳಿದ ಮೂರು ಪುರುಷಾರ್ಥಗಳೂ ಒಂದಕ್ಕೊಂದು ಸಂಬಂಧವನ್ನು ಪಡೆದಿರುವುವು. ಇದೇರೀತಿ ಈ ಮೂರು ಪುರುಷಾರ್ಥಗಳಿಗೆ ಯಾವ ಯಾವ ರೀತಿಯ ಸಂಬಂಧಗಳು ವಿಪರೀತವಾದುವುಗಳೆಂಬುದನ್ನೂ ಅರಿತಿರಬೇಕು.

ಧರ್ಮೋ ಧರ್ಮಾನುಬಂಧಾರ್ಥೋ ಧರ್ಮೋ ನಾತ್ಮಾರ್ಥಪೀಡಕಃ ।
ಉಭಾಭ್ಯಾಂ ಚ ದ್ವಿಧಾ ಕಾಮಂ ತೇನ ತೌ ಚ ದ್ವಿಧಾ ಪುನಃ ॥ ೧೬ ॥

ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥಾವನುಚಿಂತಯೇತ್ ।
ಸಮುತ್ಥಾಯ ತಥಾಚಮ್ಯ ಪ್ರಸ್ನಾತೋ ನಿಯತಃ ಶುಚಿಃ ॥ ೧೭ ॥

ಪೂರ್ವಾಂ ಸಂಧ್ಯಾಂ ಸನಕ್ಷತ್ರಾಂ ಪಶ್ಚಿಮಾಂ ಸದಿವಾಕರಾಂ ।
ಉಪಾಸೀತ ಯಥಾನ್ಯಾಯಂ ನೈನಾಂ ಜಹ್ಯಾದನಾಪದಿ ॥ ೧೮ ॥

ಅಸತ್ಪ್ರಲಾಪಮನೃತಂ ವಾಕ್ಪಾರುಷ್ಯಂ ಚ ವರ್ಜಯೇತ್ ।
ಅಸಚ್ಛಾಸ್ತ್ರಮಸದ್ವಾದಮಸತ್ಸೇವಾಂ ಚ ವೈ ದ್ವಿಜಾಃ ॥ ೧೯ ॥

---

೧೬. ಧರ್ಮವು ಅರ್ಥಕ್ಕೆ ಸಂಬಂಧಪಟ್ಟಿರುವುದು. ಆ ಅರ್ಥವನ್ನು ಧರ್ಮವು ಪೀಡಿಸುವುದಿಲ್ಲ. ಈ ಧರ್ಮಾರ್ಥಗಳಿಂದ ಎರಡುಬಗೆಯ ಕಾಮವನ್ನೂ ಆ ದ್ವಿವಿಧವಾದ ಕಾಮದಿಂದ ಧರ್ಮಾರ್ಥಗಳನ್ನೂ ಬೆಳೆಸಿಕೊಳ್ಳಬೇಕು.

೧೭-೧೮. ಪುರುಷನು ಬ್ರಾಹ್ಮಮುಹೂರ್ತದಲ್ಲಿ ಎಂದರೆ ಸೂರ್ಯೋದಯಕ್ಕೆ ಐದುಗಳಿಗೆ ಮುಂಚಿತವಾಗಿ ಎದ್ದು ಆಯಾದಿನ ಮಾಡಬೇಕಾದ ಧರ್ಮಾರ್ಥಗಳನ್ನು ಸಮಾಲೋಚಿಸಬೇಕು. ಬಳಿಕ ಮೇಲೆದ್ದು ಚೆನ್ನಾಗಿ ಸ್ನಾನಮಾಡಿ ಆಚಮನಾನಂತರ ಮನಸ್ಸು ಮೊದಲಾದುವನ್ನು ಬಿಗಿಹಿಡಿದು ಶುದ್ಧ ಹೃದಯದಿಂದ ನಕ್ಷತ್ರಗಳಿರುವಹಾಗಿಯೇ ಪ್ರಾತಸ್ಸಂಧ್ಯೆಯನ್ನು ಮಾಡಬೇಕು. ಅದೇರೀತಿ ಸಾಯಂಕಾಲ ಸೂರ್ಯನಿರುವಂತೆಯೇ ಸಂಧ್ಯಾವಂದನೆ ಮಾಡಬೇಕು. ಈ ಸಂಧ್ಯಾವಂದನಕ್ರಮವನ್ನು ಆಪತ್ಸಮಯಗಳನ್ನು ಬಿಟ್ಟು ಉಳಿದ ಕಾಲದಲ್ಲಿ ಬಿಡಬಾರದು.

೧೯. ಎಲೈ ದ್ವಿಜರೇ! ಕೆಟ್ಟಮಾತು, ಸುಳ್ಳು, ಕ್ರೂರವಾದ ಅಥವಾ ಕರ್ಕಶವಾದ ಮಾತು, ಸಾಧುಸಂಮತವಲ್ಲದ ಶಾಸ್ತ್ರ, ಅಸದ್ವಿಷಯಕವಾದ ವಾದ ವಿವಾದಗಳು, ಅಸತ್ಪುರುಷರ ಸೇವೆ, ಇವುಗಳನ್ನು ಬಿಟ್ಟುಬಿಡಬೇಕು.

ಸಾಯಂಪ್ರಾತಸ್ತಥಾ ಹೋಮಂ ಕುರ್ವೀತ ನಿಯತಾತ್ಮವಾನ್ ।
ನೋದಯಾಸ್ತಮನೇ ಚೈವಮುದೀಕ್ಷೇತ ವಿವಸ್ವತಃ ॥ ೨೦ ॥

ಕೇಶಪ್ರಸಾಧನಾದರ್ಶದಂತಧಾವನಮಂಜನಂ ।
ಪೂರ್ವಾಹ್ಣ ಏವ ಕಾರ್ಯಾಣಿ ದೇವತಾನಾಂ ಚ ತರ್ಪಣಂ ॥ ೨೧ ॥

ಗ್ರಾಮಾವಸಥತೀರ್ಥಾನಾಂ ಕ್ಷೇತ್ರಾಣಾಂ ಚೈವ ವರ್ತ್ಮನಿ ।
ನ ವಿಣ್ಮೂತ್ರಮನುಷ್ಠೇಯಂ ನ ಚ ಕೃಷ್ಟೇ ನ ಗೋವ್ರಜೇ ॥ ೨೨ ॥

ನಗ್ನಾಂ ಪರಸ್ತ್ರಿಯಂ ನೇಕ್ಷೇನ್ನ ಪಶ್ಯೇದಾತ್ಮನಃ ಶಕೃತ್ ।
ಉದಕ್ಯಾದರ್ಶನಸ್ಪರ್ಶನೇವಂ ಸಂಭಾಷಣಂ ತಥಾ ॥ ೨೩ ॥

ನಾಪ್ಸು ಮೂತ್ರಂ ಪುರೀಷಂ ವಾ ಮೈಥುನಂ ವಾ ಸಮಾಚರೇತ್ ।
ನಾಧಿತಿಷ್ಠೇಚ್ಛಕೃನ್ಮೂತ್ರೇ ಕೇಶಭಸ್ಮಕಪಾಲಿಕಾಃ ॥ ೨೪ ॥

---

೨೦. ಮನಸ್ಸನ್ನು ನಿಗ್ರಹಿಸಿ ಶುದ್ಧತೆಯಿಂದ ಬೆಳಿಗ್ಗೆ ಮತ್ತು ಸಾಯಂ ಕಾಲಗಳಲ್ಲಿ ಯಜ್ಞೇಶ್ವರನಲ್ಲಿ ಹೋಮವನ್ನು ಮಾಡಬೇಕು. ಸೂರ್ಯನು ಹುಟ್ಟುತ್ತಿರುವುದನ್ನೂ ಮುಳುಗುತ್ತಿರುವುದನ್ನೂ ನೋಡಬಾರದು.

೨೧. ತಲೆಯನ್ನು ಬಾಚಿಕೊಳ್ಳುವುದು, ಕನ್ನಡಿ ನೋಡಿಕೊಳ್ಳುವುದು, ಹಲ್ಲುಜ್ಜುವುದು, ಕಾಡಿಗೆ ಹಚ್ಚಿಕೊಳ್ಳುವುದು ಮತ್ತು ದೇವತೆಗಳಿಗೆ ತರ್ಪಣ ವೀಯುವುದು-ಇವುಗಳನ್ನು ಪೂರ್ವಾಹ್ಣದಲ್ಲಿಯೇ ಮಾಡಬೇಕು.

೨೨. ಊರು, ಮನೆ, ತೀರ್ಥ, ಹೊಲಗದ್ದೆಗಳು–ಇವುಗಳಿಗೆ ಹೋಗ ತಕ್ಕ ದಾರಿಗಳಲ್ಲೂ, ಉತ್ತಿರುವ ಪ್ರದೇಶಗಳಲ್ಲೂ, ಹಸುಗಳ ಕೊಟ್ಟಿಗೆಯಲ್ಲೂ ಮಲಮೂತ್ರಗಳನ್ನು ವಿಸರ್ಜಿಸಬಾರದು.

೨೩. ನಗ್ನಳಾಗಿರುವ ಪರಸ್ತ್ರೀಯನ್ನೂ, ತಾನು ವಿಸರ್ಜಿಸಿದ ಮಲ ವನ್ನೂ ನೋಡಬಾರದು ಮತ್ತು ರಜಸ್ವಲೆಯಾದ ಸ್ತ್ರೀಯೊಡನೆ ದರ್ಶನಸ್ಪರ್ಶನ, ಸಂಭಾಷಣಗಳನ್ನೂ ಮಾಡಬಾರದು.

೨೪ ನೀರಿನಲ್ಲಿ ಮೂತ್ರ ಪುರೀಷಗಳನ್ನೂ (ಮಲಮೂತ್ರ) ವಿಸರ್ಜಿಸ ಬಾರದು. ಮೈಥುನವನ್ನಾಚರಿಸಬಾರದು. ಮಲಮೂತ್ರಗಳನ್ನು ವಿಸರ್ಜಿ ಸಿರುವ ಪ್ರದೇಶದಲ್ಲಾಗಲಿ, ಕೂದಲು, ಬೂದಿ, ತಲೆಯಚಿಪ್ಪು ಮೊದಲಾದುವು ಗಳು ಬಿದ್ದಿರುವಕಡೆಯಾಗಲಿ ಕುಳಿತುಕೊಳ್ಳಬಾರದು.

ತುಷಾಂಗಾರವಿಶೀರ್ಣಾನಿ ರಜ್ಜುವಸ್ತ್ರಾದಿಕಾನಿ ಚ ।
ನಾಧಿತಿಷ್ಠೇತ್ತಥಾ ಪ್ರಾಜ್ಞಃ ಪಥಿ ವಸ್ತ್ರಾಣಿ ವಾ ಭುವಿ ॥ ೨೫ ॥

ಪಿತೃದೇವಮನುಷ್ಯಾಣಾಂ ಭೂತಾನಾಂ ಚ ತಥಾರ್ಚನಂ ।
ಕೃತ್ವಾ ವಿಭವತಃ ಪಶ್ಚಾದ್ಗೃಹಸ್ಥೋ ಭೋಕ್ತುಮರ್ಹತಿ ॥ ೨೬ ॥

ಪ್ರಾಙ್ಮುಖೋದಙ್ಮುಖೋ ವಾಪಿ ಸ್ವಾಚಾಂತೋ ವಾಗ್ಯತಃ ಶುಚಿಃ ।
ಭುಂಜೀತ ಚಾನ್ನಂ ತಚ್ಚಿತ್ತೋ ಹ್ಯಂತರ್ಜಾನುಃ ಸದಾ ನರಃ ॥ ೨೭ ॥

ಉಪಘಾತಮೃತೇ ದೋಷಾನ್ನಾನ್ನಸ್ಯೋದೀರಯೇದ್ಬುಧಃ ।
ಪ್ರತ್ಯಕ್ಷಲವಣಂ ವರ್ಜ್ಯಮನ್ನಮುಚ್ಛಿಷ್ಟಮೇವ ಚ ॥ ೨೮ ॥

---

೨೫. ಅದೇರೀತಿ ಪ್ರಾಜ್ಞನಾದವನು ಹೊಟ್ಟು, ಬೆಂಕಿಯಚೂರುಗಳು ಅಥವಾ ಇದ್ದಿಲಿನ ತುಂಡುಗಳು, ಹಗ್ಗ, ಬಟ್ಟೆಯಚೂರುಗಳು ಬಿದ್ದಿರುವ ಕಡೆಯಾಗಲಿ, ದಾರಿಯಲ್ಲಾಗಲಿ, ನೆಲದಮೇಲಾಗಲಿ, ಬಟ್ಟೆಗಳಮೇಲಾಗಲಿ ಕುಳಿತುಕೊಳ್ಳಬಾರದು.

೨೬. ಗೃಹಸ್ಥನಾದವನು ಪಿತೃಗಳಿಗೂ, ದೇವತೆಗಳಿಗೂ, ಮನುಷ್ಯರಿಗೂ, ಭೂತಗಳಿಗೂ (ಪಶುಪಕ್ಷ್ಯಾದಿಗಳು) ಸತ್ಕಾರಮಾಡಿದ ನಂತರ ತಾನು ಭೋಜನಮಾಡಬೇಕು.

೨೭. ಮನುಷ್ಯನು ಊಟಮಾಡುವಾಗ ಪೂರ್ವ ಅಥವಾ ಉತ್ತರ ದಿಕ್ಕಿಗೆ ಮುಖಮಾಡಿಕೊಂಡು ಕುಳಿತುಕೊಳ್ಳಬೇಕು ಮತ್ತು ಆಚಮನ ಮಾಡಿದ ನಂತರ ಮೌನದಿಂದ, ಶುಚಿಯಾಗಿ, ಮತ್ತಾವಕಡೆಯೂ ಮನಸ್ಸನ್ನು ಹೊರಳಿಸದೆ, ಮಂಡಿಗಳೊಳಗೆ ಕೈಗಳು ಬರುವಂತೆ ಕುಳಿತು ಊಟಮಾಡಬೇಕು

೨೮. ಯಾವುದಾದರೂ ತೊಂದರೆಯು ಇಲ್ಲದಿದ್ದಾಗ ನಿಷ್ಕಾರಣವಾಗಿ ಅನ್ನವನ್ನು ದೂಷಿಸಬಾರದು ಮತ್ತು ಭೋಜನ ಸಮಯದಲ್ಲಿ ಪ್ರತ್ಯಕ್ಷವಾಗಿ ಉಪ್ಪನ್ನು ಹಾಕಿಸಿಕೊಳ್ಳಬಾರದು. ಉಚ್ಛಿಷ್ಟವಾದ (ತಿಂದುಮಿಕ್ಕ) ಅನ್ನವನ್ನು ಊಟಮಾಡಬಾರದು.

ನ ಗಚ್ಛನ್ನ ಚ ತಿಷ್ಠನ್ವೈ ವಿಣ್ಮೂತ್ರೋತ್ಸರ್ಗಮಾತ್ಮವಾನ್ ।
ಕುರ್ವೀತ ಚೈವಮುಚ್ಛಿಷ್ಟಂ ನ ಕಿಂಚಿದಪಿ ಭಕ್ಷಯೇತ್ ॥ ೨೯ ॥

ಉಚ್ಛಿಷ್ಟೋ ನಾಲಪೇತ್ಕಿಂಚಿತ್ಸ್ವಾಧ್ಯಾಯಂ ಚ ವಿವರ್ಜಯೇತ್ ।
ನ ಪಶ್ಯೇಚ್ಚ ರವಿಂ ಚೇಂದುಂ ನಕ್ಷತ್ರಾಣಿ ಚ ಕಾಮತಃ ॥ ೩೦ ॥

ಭಿನ್ನಾಸನಂ ಚ ಶಯ್ಯಾಂ ಚ ಭಾಜನಂ ಚ ವಿವರ್ಜಯೇತ್ ।
ಗುರೂಣಾಮಾಸನಂ ದೇಯಮುಭ್ಯುತ್ಥಾನಾದಿಸತ್ಕೃತಂ ॥ ೩೧ ॥

ಅನುಕೂಲಂ ತಥಾಲಾಪಮಭಿಕುರ್ವೀತ ಬುದ್ಧಿಮಾನ್ ।
ತತ್ರಾನುಗಮನಂ ಕುರ್ಯಾತ್ಪ್ರತಿಕೂಲಂ ನ ಸಂಚರೇತ್ ॥ ೩೨ ॥

---

೨೯. ಆತ್ಮಜ್ಞಾನಿಯಾದವನು ಓಡಾಡುತ್ತಿರುವಾಗಲೂ ನಿಂತಿರುವಾಗಲೂ ಮಲಮೂತ್ರಗಳನ್ನು ವಿಸರ್ಜಿಸಬಾರದು. ಯಾವ ವಸ್ತುವೇ ಆಗಲಿ ಅದು ಉಚ್ಛಿಷ್ಟವಾಗಿದ್ದರೆ ಅದನ್ನು ತಿನ್ನಬಾರದು.

೩೦. ಎಂಜಲುಕೈಯಲ್ಲಿರುವಾಗ ಯಾವ ಮಾತೂ ಆಡಬಾರದು. ವೇದಾಧ್ಯಯನ ಜಪ ಮೊದಲಾದುವುಗಳನ್ನೂ ಮಾಡಬಾರದು ಮತ್ತು ತನ್ನ ಇಷ್ಟಬಂದಂತೆ ಸೂರ್ಯನನ್ನೂ ಚಂದ್ರನನ್ನೂ ನಕ್ಷತ್ರಗಳನ್ನೂ ನೋಡಬಾರದು.

೩೧. ಒಡೆದುಹೋದ ಮಣೆ ಮೊದಲಾದ ಆಸನಗಳನ್ನೂ, ಹರಕಲು ಹಾಸಿಗೆಯನ್ನೂ, ಮುರುಕು ಪಾತ್ರೆಗಳನ್ನೂ ಉಪಯೋಗಿಸಬಾರದು. ಹಿರಿಯರಾರಾದರೂ ಬಂದಾಗ ಎದ್ದುನಿಂತು ಗೌರವಿಸಿ ತನ್ನ ಪೀಠವನ್ನು ಬಿಟ್ಟುಕೊಡಬೇಕು.

೩೨. ಮತ್ತು ಅವರೊಡನೆ ಅನುಕೂಲವಾದರೀತಿಯಲ್ಲಿ ಮಾತುಕತೆಗಳನ್ನಾಡಬೇಕು. ಅವರ ಮನೋಭಾವವನ್ನೇ ಅನುಸರಿಸಬೇಕು. ವಿರುದ್ಧವಾಗಿ ನಡೆಯಬಾರದು.

ನೈಕವಸ್ತ್ರಶ್ಚ ಭುಂಜೀತ ನ ಕುರ್ಯಾದ್ದೇವತಾರ್ಚನಂ ।
ನಾವಾಹಯೇದ್ದ್ವಿಜಾನಗ್ನೌ ಹೋಮಂ ಕುರ್ವೀತ ಬುದ್ಧಿಮಾನ್ ॥ ೩೩ ॥

ನ ಸ್ನಾಯೀತ ನರೋ ನಗ್ನೋ ನ ಶಯೀತ ಕದಾಚನ ।
ನ ಪಾಣಿಭ್ಯಾಮುಭಾಭ್ಯಾಂ ತು ಕಂಡೂಯೇತ ಶಿರಸ್ತಥಾ ॥ ೩೪ ॥

ನ ಚಾಭೀಕ್ಷ್ಣಂ ಶಿರಃಸ್ನಾನಂ ಕಾರ್ಯಂ ನಿಷ್ಕಾರಣಂ ಬುಧೈಃ ।
ಶಿರಃಸ್ನಾತಶ್ಚ ತೈಲೇನ ನಾಂಗಂ ಕಿಂಚಿದುಪಸ್ಪೃಶೇತ್ ॥ ೩೫ ॥

ಅನಧ್ಯಾಯೇಷು ಸರ್ವೇಷು ಸ್ವಾಧ್ಯಾಯಂ ಚ ವಿವರ್ಜಯೇತ್ ।
ಬ್ರಾಹ್ಮಣಾನಲಗೋಸೂರ್ಯಾನ್ನಾವಮನ್ಯೇತ್ಕದಾಚನ ॥ ೩೬ ॥

ಉದಙ್ಮುಖೋ ದಿವಾ ರಾತ್ರಾವುತ್ಸರ್ಗಂ ದಕ್ಷಿಣಾಮುಖಃ ।
ಆಬಾಧಾಸು ಯಥಾಕಾಮಂ ಕುರ್ಯಾನ್ಮೂತ್ರಪುರೀಷಯೋಃ ॥ ೩೭ ॥

---

೩೩. ಒಂಟಿ ಬಟ್ಟೆಯನ್ನುಟ್ಟಿರುವಾಗ-ಊಟಮಾಡಬಾರದು, ದೇವರನ್ನು ಪೂಜೆಮಾಡಬಾರದು. ಬ್ರಾಹ್ಮಣರನ್ನು ಆವಾಹನೆ ಮಾಬಾರದು ಮತ್ತು ಯಜ್ಞೇಶ್ವರನಲ್ಲಿ ಆಹುತಿಗಳನ್ನು ಕೊಡಬಾರದು.

೩೪. ಎಂದಿಗೂ ಬೆತ್ತಲೆಯಾಗಿ ಸ್ನಾನಮಾಡಬಾರದು. ಹಾಗೆಯೇ ಮಲಗಲೂ ಬಾರದು. ಎರಡು ಕೈಗಳಿಂದಲೂ ತಲೆಯನ್ನು ಕೆರೆದುಕೊಳ್ಳಲೂ ಬಾರದು.

೩೫. ತಿಳಿದವರು ನಿಷ್ಕಾರಣವಾಗಿ ಪದೇಪದೇ ತಲೆಗೆ ಸ್ನಾನವನ್ನೂ ಮಾಡಬಾರದು. ತಲೆಗೆ ಎಣ್ಣೆಯನ್ನು ಇಟ್ಟುಕೊಂಡಿರುವಾಗ ಯಾವ ಅಂಗವನ್ನೂ ಮುಟ್ಟುಕೊಳ್ಳಬಾರದು.

೩೬. ಅನಧ್ಯಯನ ದಿವಸಗಳಲ್ಲಿ ವೇದಾಧ್ಯಯನವನ್ನು ಮಾಡಬಾರದು. ಬ್ರಾಹ್ಮಣರನ್ನೂ, ಯಜ್ಞೇಶ್ವರನನ್ನೂ, ಗೋವನ್ನೂ, ಸೂರ್ಯನನ್ನೂ ಎಂದೆಂದಿಗೂ ಅಪಮಾನಗೊಳಿಸಬಾರದು.

೩೭. ಮೂತ್ರ ಪುರೀಷಗಳನ್ನು ವಿಸರ್ಜಿಸಬೇಕಾಗಿದ್ದರೆ ಹಿಂದೆ ಹೇಳಿದ ತೊಂದರೆಗಳು ಯಾವುವೂ ಇಲ್ಲದಕಡೆ ಹೋಗಿ ಹಗಲು ಉತ್ತರದಿಕ್ಕಿಗೂ, ರಾತ್ರಿ ದಕ್ಷಿಣದಿಕ್ಕಿಗೂ ತಿರುಗಿಕೊಂಡು ಅವನ್ನು ವಿಸರ್ಜಿಸಬೇಕು.

ದುಷ್ಕೃತಂ ನ ಗುರೋರ್ಬ್ರೂಯಾತ್ಕ್ರುದ್ಧಂ ಚೈನಂ ಪ್ರಸಾದಯೇತ್ ।
ಪರಿವಾದಂ ನ ಶೃಣುಯಾದನ್ಯೇಷಾಮಪಿ ಕುರ್ವತಾಂ ॥ ೩೮ ॥

ಪಂಥಾ ದೇಯೋ ಬ್ರಾಹ್ಮಣಾನಾಂ ರಾಜ್ಞೋ ದುಃಖಾತುರಸ್ಯ ಚ ।
ವಿದ್ಯಾಧಿಕಸ್ಯ ಗರ್ಭಿಣ್ಯಾ ರೋಗಾರ್ತಸ್ಯ ಮಹೀಯತಃ ॥ ೩೯ ॥

ಮೂಕಾಂಧಬಧಿರಾಣಾಂ ಚ ಮತ್ತಸ್ಯೋನ್ಮತ್ತಕಸ್ಯ ಚ ।
ದೇವಾಲಯಂ ಚೈದ್ಯತರುಂ ತಥೈವ ಚ ಚತುಷ್ಪಥಂ ॥ ೪೦ ॥

ವಿದ್ಯಾಧಿಕಂ ಗುರುಂ ಚೈವ ಬುಧಃ ಕುರ್ಯಾತ್ಪ್ರದಕ್ಷಿಣಂ ।
ಉಪಾನದ್ವಸ್ತ್ರಮಾಲ್ಯಾದಿ ಧೃತಮನ್ಯೈರ್ನ ಧಾರಯೇತ್ ॥ ೪೧ ॥

---

೩೮. ಗುರುವು ಮಾಡಿದ ತಪ್ಪನ್ನು ಮತ್ತೊಬ್ಬರಿಗೆ ತಿಳಿಸಬಾರದು. ಆತನು ನಿಷ್ಕಾರಣವಾಗಿ ಕೋಪಗೊಂಡಿದ್ದರೂ ತಾನು ರೇಗದೆ ಆತನನ್ನು ಮೆಲ್ಲನೆ ಸಮಾಧಾನಗೊಳಿಸಬೇಕು. ಮತ್ತೊಬ್ಬರಾರಾದರೂ ತನ್ನ ಗುರುವನ್ನು ನಿಂದಿಸುತ್ತಿದ್ದರೂ ತಾನು ಅದನ್ನು ಕೇಳಲೂಬಾರದು.

೩೯. ದಾರಿಯಲ್ಲಿ ನಡೆಯುತ್ತಿರುವಾಗ ಎದುರಿಗೆ ಬರುವಂತಹ ಬ್ರಾಹ್ಮಣರಿಗೂ ದೊರೆಗೂ ದುಃಖಪಡುತ್ತಿರುವವನಿಗೂ ವಿದ್ಯೆಯಲ್ಲಿ ತನಗಿಂತಲು ಮಿಗಿಲಾದವನಿಗೂ ಗರ್ಭಿಣಿಸ್ತ್ರೀಯರಿಗೂ ರೋಗಿಗೂ ಮಹಾತ್ಮನಿಗೂ (ದೊಡ್ಡ ಮನುಷ್ಯನಿಗೂ) ಮೊದಲು ದಾರಿಬಿಡಬೇಕು.

೪೦-೪೧. ಮತ್ತು ಅದೇರೀತಿ ಮೂಗನಿಗೂ ಕುರುಡನಿಗೂ ಕಿವುಡನಿಗೂ ಮದವೇರಿದವನಿಗೂ (ಪ್ರಜ್ಞೆತಪ್ಪಿದವನಿಗೂ) ಹುಚ್ಚನಿಗೂ ತಾನು ದಾರಿ ಬಿಟ್ಟುಕೊಡಬೇಕು. ದೇವಾಲಯ, ಚೈದ್ಯವೃಕ್ಷ (ಅರಳಿ?) ನಾಲ್ಕುದಾರಿ ಕೂಡುವ ಚೌಕ, ವಿದ್ಯಾಧಿಕನಾದವನು, ಗುರು, ಇವರುಗಳನ್ನು ಪ್ರಾಜ್ಞನಾದವನು ಪ್ರದಕ್ಷಿಣೆಮಾಡಿಕೊಂಡು ಬರಬೇಕು. ಮತ್ತೊಬ್ಬರು ಹಾಕಿಕೊಂಡ ಜೋಡು ಬಟ್ಟೆಬರೆಗಳು ಹೂವು ಮೊದಲಾದುವನ್ನು ತಾನು ಉಪಯೋಗಿಸಬಾರದು.

ಚತುರ್ದಶ್ಯಾಂ ತಥಾಷ್ಟಮ್ಯಾಂ ಪಂಚದಶ್ಯಾಂ ಚ ಪರ್ವಸು ।
ತೈಲಾಭ್ಯಂಗಂ ತಥಾ ಭೋಗಂ ಯೋಷಿತಶ್ಚ ವಿವರ್ಜಯೇತ್ ॥ ೪೨ ॥

ನೋತ್ಕ್ಷಿಪ್ತಬಾಹುಜಂಘಾಶ್ಚ ಪ್ರಾಜ್ಞಸ್ತಿಷ್ಠೇತ್ಕದಾಚನ ।
ನ ಚಾಪಿ ವಿಕ್ಷಿಪೇತ್ಪಾದೌ ಪಾದಂ ಪಾದೇನ ನಾಕ್ರಮೇತ್ ॥ ೪೩ ॥

ಪುಂಶ್ಚಲ್ಯಾಃ ಕೃತಕಾರ್ಯಸ್ಯ ಬಾಲಸ್ಯ ಪತಿತಸ್ಯ ಚ ।
ಮರ್ಮಾಭಿಘಾತಮಾಕ್ರೋಶಂ ಪೈಶುನ್ಯಂ ಚ ವಿವರ್ಜಯೇತ್ ॥ ೪೪ ॥

ದಂಭಾಭಿಮಾನಂ ತೈಕ್ಷ್ಣ್ಯಂ ಚ ನ ಕುರ್ವೀತ ವಿಚಕ್ಷಣಃ ।
ಮೂರ್ಖೋನ್ಮತ್ತವ್ಯಸನಿನೋ ವಿರೂಪಾನಪಿ ವಾ ತಥಾ ॥ ೪೫ ॥

ನ್ಯೂನಾಂಗಾಂಶ್ಚಾಧನಾಂಶ್ಚೈವ ನೋಪಹಾಸೇನ ದೂಷಯೇತ್ ।
ಪರಸ್ಯ ದಂಡಂ ನೋದ್ಯಚ್ಛೇಚ್ಛಿಕ್ಷಾರ್ಥಂ ಶಿಷ್ಯಪುತ್ರಯೋಃ ॥ ೪೬ ॥

---

೪೨. ಚತುರ್ದಶಿ ಅಷ್ಟಮಿ ಪೂರ್ಣಿಮಾ ಪರ್ವಕಾಲಗಳು (ಸಂಕ್ರಮಣ ಅಮಾವಾಸ್ಯೆ ಮೊದಲಾದುವು) ಇವುಗಳಲ್ಲಿ ತೈಲಾಭ್ಯಂಜನವನ್ನೂ ಸ್ತ್ರೀಸಮಾಗಮವನ್ನೂ ಮಾಡಬಾರದು.

೪೩. ಪ್ರಾಜ್ಞನೆನಿಸಿದವನು ಕೈಯ್ಯನ್ನೂ ಕಾಲನ್ನೂ ನೀಡಿಕೊಂಡು ಕುಳಿತುಕೊಳ್ಳಬಾರದು. ಕಾಲನ್ನು ಇತ್ತಲಿಂದತ್ತ ಹೊರಳಿಸಬಾರದು- ಮತ್ತು ಒಂದುಕಾಲಿನಿಂದ ಮತ್ತೊಂದುಕಾಲನ್ನು ತುಳಿಯಲೂಬಾರದು.

೪೪. ಪುಂಶ್ಚಲಿ (ಹಾದರಗಿತ್ತಿ) ಕೆಲಸವನ್ನು ಸಾಧಿಸಿದವನು, ಹುಡುಗ, ಪತಿತನಾದವನು ಇವರನ್ನು ಮನಸ್ಸಿಗೆ ಚುಚ್ಚುವಂತೆ ಮಾತನಾಡಬಾರದು. ಇವರ ಮೇಲೆ ಆಕ್ರೋಶಪಡಬಾರದು. ಚಾಡಿ ಹೇಳಬಾರದು.

೪೫-೪೬. ಬುದ್ಧಿವಂತನಾದವನು ಒಣಜಂಭವನ್ನೂ ಅತಿಕ್ರೂರತನವನ್ನೂ, ಮಾಡಬಾರದು. ಮೂರ್ಖರನ್ನೂ ಹುಚ್ಚರನ್ನೂ ಯಾವುದಾದರೂ ಜಾಳಿಗೆ ಬಿದ್ದಿರುವವನ್ನೂ ಕುರೂಪಿಗಳನ್ನೂ ಅಂಗವಿಕಲರನ್ನೂ ದರಿದ್ರರನ್ನೂ ಎಂದಿಗೂ ಅಪಹಾಸ್ಯಮಾಡಬಾರದು. ಶಿಷ್ಯನಿಗೂ ಮಗನಿಗೂ ಬುದ್ಧಿ ಕಲಿಸುವ ಸಲುವಾಗಿ ಮತ್ತೊಬ್ಬನಿಗೆ ದಂಡನೆಮಾಡಬಾರದು.

ತದ್ವನ್ನೋಪವಿಶೇತ್ಪ್ರಾಜ್ಞಃ ಪಾದೇನಾಕೃಷ್ಯ ಚಾಸನಂ ।
ಸಂಯಾವಂ ಕೃಶರಂ ಮಾಂಸಂ ನಾತ್ಮಾರ್ಥಮುಪಸಾಧಯೇತ್ ॥ ೪೭ ॥

ಸಾಯಂ ಪ್ರಾತಶ್ಚ ಭೋಕ್ತವ್ಯಂ ಕೃತ್ವಾ ಚಾತಿಥಿಪೂಜನಂ ।
ಪ್ರಾಙ್ಮುಖೋದಙ್ಮುಖೋ ವಾಪಿ ವಾಗ್ಯತೋ ದಂತಧಾವನಂ ॥ ೪೮ ॥

ಕುರ್ವೀತ ಸತತಂ ವಿಪ್ರಾ ವರ್ಜಯೇದ್ವರ್ಜ್ಯವೀರುಧಂ ।
ನೋದಕ್ಶಿರಾಃ ಸ್ವಪೇಜ್ಜಾತು ನ ಚ ಪ್ರತ್ಯಕ್ಶಿರಾ ನರಃ ॥ ೪೯ ॥

ಶಿರಸ್ತ್ವಾಗಸ್ತ್ಯಮಾಧಾಯ ಶಯೀತಾಥ ಪುರಂದರೀಂ ।
ನ ತು ಗಂಧವತೀಷ್ವಪ್ಸು ಶಯೀತ ನ ತಥೋಷಸಿ ॥ ೫೦ ॥

ಉಪರಾಗೇ ಪರಂ ಸ್ನಾನಮೃತೇ ದಿನಮುದಾಹೃತಂ ।
ಅಪಮೃಜ್ಯಾನ್ನ ವಸ್ತ್ರಾಂತೈರ್ಗಾತ್ರಾಣ್ಯಂಬರಪಾಣಿಭಿಃ ॥ ೫೧ ॥

---

೪೭. ಅದೇರೀತಿಯಾಗಿ ಕುಳಿತುಕೊಳ್ಳುವುದಕ್ಕೊಂದು ಕಾಲಿನಿಂದ ಪೀಠವನ್ನು ಎಳೆದುಕೊಳ್ಳಬಾರದು. ತನಗೋಸ್ಕರವಾಗಿ ಸಂಯಾವ (?) ವನ್ನೂ ಕೃಸರವನ್ನೂ ಮಾಂಸವನ್ನು ಸಿದ್ಧಪಡಿಸಿಕೊಳ್ಳಬಾರದು.

೪೮. ಹಗಲು ಮತ್ತು ರಾತ್ರಿಯಲ್ಲಿ ಅತಿಥಿಗಳನ್ನು ಸತ್ಕರಿಸಿದನಂತರವೇ ಭೋಜನಮಾಡಬೇಕು. ದಂತಧಾವನವನ್ನು ಮಾಡುವಾಗ ಪೂರ್ವದಿಕ್ಕಿಗಾಗಲಿ ಉತ್ತರದಿಕ್ಕಿಗಾಗಲಿ ಮುಖಮಾಡಿಕೊಂಡು ಕುಳಿತು ಮೌನವಾಗಿ ಇರಬೇಕು.

೪೯. ಎಲೈ ವಿಪ್ರರಿರಾ! ಯಾವಾಗಲೂ ನಿಷಿದ್ಧಗಳಾದ ಲತಾದಿಗಳನ್ನು ಉಪಯೋಗಿಸಬಾರದು. ಎಂದೆಂದಿಗೂ ಉತ್ತರದಿಕ್ಕಿಗೂ ಪಶ್ಚಿಮದಿಕ್ಕಿಗೂ ತಲೆಯಿಟ್ಟುಕೊಂಡು ಮಲಗಬಾರದು.

೫೦. ದಕ್ಷಿಣದಿಕ್ಕಿಗಾಗಲೀ ಪೂರ್ವದಿಕ್ಕಿಗಾಗಲೀ ತಲೆಯಿಟ್ಟುಕೊಂಡು ಮಲಗಬೇಕು. ಗಂಧವತಿಗಳಲ್ಲಿಯೂ (ಅಡುಗೆಮನೆ, ದುರ್ವಾಸನೆಪ್ರದೇಶ) ನೀರಬಳಿಯಲ್ಲಿಯೂ ಉಷಃಕಾಲದಲ್ಲಿಯೂ ಮಲಗಬಾರದು.

೫೧. ಗ್ರಹಣವೊಂದನ್ನು ಬಿಟ್ಟು ಇನ್ನಾವಸಮಯದಲ್ಲೂ ಹಗಲಲ್ಲದ ವೇಳೆ ಸ್ನಾನಮಾಡಬಾರದು. ಕೈಯಲ್ಲಿ ಬಟ್ಟೆಹಿಡಿದುಕೊಂಡು ಅದರ ಕೊನೆಗಳಿಂದ ಮೈಯನ್ನು ಒರೆಸಿಕೊಳ್ಳಬಾರದು.

ನ ಚಾವಧೂನಯೇತ್ಕೇಶಾನ್ಸ್ನಾಸಸೀ ನ ಚ ನಿರ್ಧುನೇತ್ ।
ಅನುಲೇಪನಮಾದದ್ಯಾನ್ನಾಸ್ನಾತಃ ಕರ್ಹಿಚಿದ್ಬುಧಃ ॥ ೫೨ ॥

ನ ಚಾಪಿ ರಕ್ತವಾಸಾಃ ಸ್ಯಾಚ್ಚಿತ್ರಾಸಿತಧರೋಽಪಿ ವಾ ।
ನ ಚ ಕುರ್ಯಾದ್ವಿಪರ್ಯಾಸಂ ವಾಸಸೋರ್ನಾಪಿ ಭೂಷಯೋಃ ॥ ೫೩ ॥

ವರ್ಜ್ಯಂ ಚ ವಿದಶಂ ವಸ್ತ್ರಮತ್ಯಂತೋಪಹತಂ ಚ ಯತ್ ।
ಕೀಟಕೇಶಾವಪನ್ನಂ ಚ ತಥಾ ಶ್ವಭಿರವೇಕ್ಷಿತಂ ॥ ೫೪ ॥

ಅವಲೀಢಂ ಶುನಾ ಚೈವ ಸಾರೋದ್ಧರಣದೂಷಿತಂ ।
ಪೃಷ್ಠಮಾಂಸಂ ವೃಥಾಮಾಂಸಂ ವರ್ಜ್ಯಮಾಂಸಂ ಚ ವರ್ಜಯೇತ್ ॥ ೫೫ ॥

ನ ಭಕ್ಷಯೇಚ್ಚ ಸತತಂ ಪ್ರತ್ಯಕ್ಷಂ ಲವಣಂ ನರಃ ।
ವರ್ಜ್ಯಂ ಚಿರೋಷಿತಂ ವಿಪ್ರಾಃ ಶುಷ್ಕಂ ಪರ್ಯುಷಿತಂ ಚ ಯತ್ ॥ ೫೬ ॥

---

೫೨. ಕೂದಲನ್ನು ಕೊಡವಬಾರದು. ಬಟ್ಟೆಗಳನ್ನೂ ಜೋರಾಗಿ ಝಾಡಿಸಬಾರದು. ಸ್ನಾನಮಾಡದೆ ಮೈಗೆ ಗಂಧಮೊದಲಾ ಅನುಲೇಪನದ್ರವ್ಯಗಳನ್ನು ತೊಡೆದುಕೊಳ್ಳಬಾರದು.

೫೩. ಕೆಂಪುಬಣ್ಣದ ಬಟ್ಟೆಗಳನ್ನೂ ನಾನಾಬಣ್ಣದ ಬಟ್ಟೆಗಳನೂ ಕಪ್ಪು ಬಟ್ಟೆಗಳದ್ನೂ ಧರಿಸಬಾರದು. ಬಟ್ಟೆಗಳನ್ನಾಗಲೀ ಒಡವೆಗಳನ್ನಾಗಲಿ ಒಬ್ಬರಿಗೊಬ್ಬರು ಬದಲಾಯಿಸಿಕೊಳ್ಳಬಾರದು.

೫೪. ಅಂಚಿಲ್ಲದ ಬಟ್ಟೆಯನ್ನೂ ಬಹುವಾಗಿ ಮುದುಳಿಹೋದ ಬಟ್ಟೆಯನ್ನೂ ಉಪಯೋಗಿಸಬಾರದು. ಹುಳುಬಿದ್ದ ಅನ್ನವನ್ನೂ ಕೂದಲು ಸೇರಿದುದನ್ನೂ ನಾಯಿನೋಡಿದುದನ್ನೂ (ಅನ್ನವನ್ನು) ತಿನ್ನಬಾರದು.

೫೫. ಅದೇರೀತಿ ನಾಯಿನೆಕ್ಕಿದುದನ್ನೂ ತಿನ್ನಬಾರದು ಮತ್ತು ಬೆನ್ನಿನ ಬಳಿಯ ಮಾಂಸವನ್ನೂ ಹೆಸರಿಗೆ ಮಾತ್ರ ಮಾಂಸವೆನಿಸಿದುದನ್ನೂ ನಿಷಿದ್ಧವಾದ ಮಾಂಸವನ್ನೂ ತಿನ್ನಬಾರದು.

೫೬. ಯಾವಾಗಲೂ ಉಪ್ಪನ್ನು ಪ್ರತ್ಯಕ್ಷವಾಗಿ ಉಪಯೋಗಿಸಬಾರದು. ಅಲ್ಲದೆ ಬಹುಕಾಲದಿಂದ ಇಟ್ಟಿರುವದನ್ನೂ ಒಣಗಿಹೋಗಿರುವನ್ನೂ ಹಳಸಿದುದನ್ನೂ ಭೋಜನಮಾಡಬಾರದು.

ಪಿಷ್ಟಶಾಕೇಕ್ಷುಪಯಸಾಂ ವಿಕಾರಾ ದ್ವಿಜಸತ್ತಮಾಃ ।
ತಥಾ ಮಾಂಸವಿಕಾರಾಶ್ಚ ನೈವ ವರ್ಜ್ಯಾಶ್ಚಿರೋಷಿತಾಃ ॥ ೫೭ ॥

ಉದಯಾಸ್ತಮನೇ ಭಾನೋಃ ಶಯನಂ ಚ ವಿವರ್ಜಯೇತ್ ।
ನಾಸ್ನಾತೋ ನೈವ ಸಂವಿಷ್ಟೋ ನ ಚೈವಾನ್ಯಮನಾ ನರಃ ॥ ೫೮ ॥

ನ ಚೈವ ಶಯನೇ ನೋರ್ವ್ಯಾಮುಪವಿಷ್ಟೋ ನ ಶಬ್ದಕೃತ್ ।
ಪ್ರೇಷ್ಯಾಣಾಮಪ್ರದಾಯಾಥ ನ ಭುಂಜೀತ ಕದಾಚನ ॥ ೫೯ ॥

ಭುಂಜೀತ ಪುರುಷಃ ಸ್ನಾತಃ ಸಾಯಂಪ್ರಾತರ್ಯಥಾವಿಧಿ ।
ಪರದಾರಾ ನ ಗಂತವ್ಯಾಃ ಪುರುಷೇಣ ವಿಪಶ್ಚಿತಾ ॥ ೬೦ ॥

ಇಷ್ಟಾಪೂರ್ತಾಯುಷಾಂ ಹಂತ್ರೀ ಪರದಾರಗತಿರ್ನೃಣಾಂ ।
ನ ಹೀದೃಶಮನಾಯುಷ್ಯಂ ಲೋಕೇ ಕಿಂಚನ ವಿದ್ಯತೇ ॥ ೬೧ ॥

---

೫೭. ಹಿಟ್ಟು ಸೊಪ್ಪುಸೆದೆ (ಕಾಯಿಪಲ್ಯ) ಕಬ್ಬು ಹಾಲು ಇವುಗಳಿಂಗ ಸಿದ್ಧವಾದ ವಸ್ತುಗಳು (ಸಂಡಿಗೆ ಬೆಲ್ಲ ಮೊಸರು ತುಪ್ಪ) ಬಹುದಿವಸಗಳಿಂದ ಇದ್ದರೂ ಅದನ್ನು ಪರಿತ್ಯಜಿಸಬಾರದು. ಅದೇರೀತಿ ಮಾಂಸವಿಕಾರವಸ್ತುಗಳನ್ನೂ ಬಿಡಬಾರದು.

೫೮. ಸೂರ್ಯನು ಉದಯಿಸುವಾಗಲೂ ಅಸ್ತಮನವಾದಾಗಲೂ ಮಲಗಬಾರದು. ಆ ಸಮಯದಲ್ಲಿ ಸ್ನಾನಮಾಡದೆ ಇರಬಾರದು (ಮಡಿಯಾಗಿರಬೇಕು) ಸ್ತ್ರೀ ಸಹವಾಸಮಾಡಬಾರದು. ಅನ್ಯಮನಸ್ಕನಾಗಿಯೂ ಇರಬಾರದು.

೫೯. ಆ ಸಮಯದಲ್ಲಿ ಹಾಸಿಗೆಯಮೇಲಾಗಲಿ ನೆಲದಮೇಲಾಗಲಿ ಕುಳಿತಿರಬಾರದು, ಶಬ್ದಮಾಡಬಾರದು, ಎಂದೆಂದಿಗೂ ಯಾವವಸ್ತುವನ್ನೂ ತನ್ನ ಸೇವಕರಿಗೆ ಕೊಡದೆ ತಿನ್ನಬಾರದು.

೬೦. ರಾತ್ರಿಯೂ ಹಗಲೂ ವಿಧಿವತ್ತಾಗಿ ಸ್ನಾನಮಾಡಿದಮೇಲೆಯೇ ಊಟಮಾಡಬೇಕು. ಪುರುಷನು ಪ್ರಾಜ್ಞನೆನಿಸಿದ್ದರೆ ಅವನು ಎಂದಿಗೂ ಪರಸ್ತ್ರೀ ಸಹವಾಸ ಮಾಡಬಾರದು.

೬೧. ಆ ಪರಸ್ತ್ರೀ ಗಮನವು ಪುರುಷನ ಇಷ್ಟಾಪೂರ್ತಗಳನ್ನೂ (ಹವನ ಹೋಮಮಾಡಿದ ಫಲಗಳನ್ನೂ ವಾಪೀಕೂಪ ನಿರ್ಮಾಣಾದಿ ಫಲಗಳನ್ನೂ)

ಯಾದೃಶಂ ಪುರುಷಸ್ಯೇಹ ಪರದಾರಾಭಿಮರ್ಶನಂ ।
ದೇವಾಗ್ನಿ ಪಿತೃಕಾರ್ಯಾಣಿ ತಥಾ ಗುರ್ವಭಿವಾದನಂ ॥ ೬೨ ॥

ಕುರ್ವೀತ ಸಮ್ಯಗಾಚಮ್ಯ ತದ್ವದನ್ನ ಭುಜಿಕ್ರಿಯಾಂ ।
ಅಫೇನಶಬ್ದ ಗಂಧಾಭಿರದ್ಭಿರಚ್ಛಾಭಿರಾದರಾತ್ ॥ ೬೩ ॥

ಆಚಾಮೇಚ್ಚೈವ ತದ್ವಚ್ಚ ಪ್ರಾಙ್ಮುಖೋದಙ್ಮುಖೋಽಪಿ ವಾ ।
ಅಂತರ್ಜಲಾದಾವಸಥಾದ್ವಲ್ಮೀಕಾನ್ಮೂಷಿಕಾಸ್ಥಲಾತ್ ॥ ೬೪ ॥

ಕೃತಶೌಚಾವಶಿಷ್ಟಾಚ್ಚ ವರ್ಜಯೇತ್ಪಂಚ ವೈ ಮೃದಃ ।
ಪ್ರಕ್ಷಾಲ್ಯ ಹಸ್ತೌ ಪಾದೌ ಚ ಸಮುಭ್ಯುಕ್ಷ್ಯ ಸಮಾಹಿತಃ ॥ ೬೫ ॥

ಆಯುಸ್ಸನ್ನೂ ನಾಶಪಡಿಸುವುದು. ಇದರಂತಹ ಆಯುಸ್ಸನ್ನು ಕಳೆಯುವ ವಸ್ತುವು ಪ್ರಪಂಚದಲ್ಲಿ ಇನ್ನೊಂದಿಲ್ಲ.

೬೨. ಪರದಾರಗಮನದಂತಹ ಪಾಪವು ಪುರುಷನಿಗೆ ಮತ್ತೊಂದಿಲ್ಲ. ದೇವಕಾರ್ಯ ಅಗ್ನಿಹೋತ್ರ ಪಿತೃತರ್ಪಣಗಳನ್ನೂ ಗುರುನಮಸ್ಕಾರವನ್ನೂ ಮಾಡಬೇಕು.

೬೩. ಊಟಮಾಡುವದನ್ನೂ ಮೊದಲು ಚೆನ್ನಾಗಿ ಆಚಮನಮಾಡಿದ ನಂತರವೇ ಮಾಡಬೇಕು. ಆ ಆಚಮನವನ್ನು ನೊರೆಗಟ್ಟಿಸುವ ಮತ್ತು ಮೊರೆ ತದಿಲ್ಲದೆ ಇರುವ ಶುದ್ಧವಾದ ನೀರಿನಿಂದ ಮಾಡಬೇಕು.

೬೪. ಮತ್ತು ಪೂರ್ವಮುಖವಾಗಿಯೂ, ಉತ್ತರಮುಖವಾಗಿಯೂ ಕುಳಿತು ಆಚಮನಮಾಡಬೇಕು. ಮತ್ತು ನೀರಿನ ಕೆಳಗಿನಿಂದಲೂ, ಮಧ್ಯದಿಂದಲೂ, ಮನೆಯ ಅಂಗಳದಿಂದಲೂ, ಹುತ್ತದಿಂದಲೂ, ಇಲಿಯು ವಾಸ ಮಾಡುವ ಬಿಲದಿಂದಲೂ–

೬೫. ಶೌಚಾದಿ ಕ್ರಿಯೆಗಳನ್ನು ಮಾಡತಕ್ಕ ಸ್ಥಳದಿಂದಲೂ ಮಣ್ಣನ್ನು (ಶುದ್ಧಿಗೋಸ್ಕರ) ತರಬಾರದು. ಕೈಗಳನ್ನೂ, ಕಾಲುಗಳನ್ನೂ ಚೆನ್ನಾಗಿ ತೊಳೆದುಕೊಂಡನಂತರ ತಲೆಯಮೇಲೆ ನೀರು ಚುಮುಕಿಸಿಕೊಂಡು, ಸಮಾಧಾನದ ಮನಸ್ಸಿನಿಂದ–

ಅಂತರ್ಜಾನುಸ್ತಥಾಚಾಮೇತ್ತ್ರಿಶ್ಚತುರ್ವಾಪಿ ವೈ ನರಃ ।
ಪರಿಮೃಜ್ಯ ದ್ವಿರಾವರ್ತ್ಯ ಖಾನಿ ಮೂರ್ಧಾನಮೇವ ಚ ॥ ೬೬ ॥

ಸಮ್ಯಗಾಚಮ್ಯ ತೋಯೇನ ಕ್ರಿಯಾಂ ಕುರ್ವೀತ ವೈ ಶುಚಿಃ ।
ಕ್ಷುತೇಽವಲೀಢೇ ವಾತೇ ಚ ತಥಾ ನಿಷ್ಠೀವನಾದಿಷು ॥ ೬೭ ॥

ಕುರ್ಯಾದಾಚಮನಂ ಸ್ಪರ್ಶೇ ವಾಸ್ಪೃಷ್ಟಸ್ಯಾರ್ಕದರ್ಶನಂ ।
ಕುರ್ವೀತಾಲಂಭನಂ ಚಾಪಿ ದಕ್ಷಿಣಶ್ರವಣಸ್ಯ ಚ ॥ ೬೮ ॥

ಯಥಾನಿಭವತೋ ಹ್ಯೇತತ್ಪೂರ್ವಾಭಾವೇ ತತಃ ಪರಂ ।
ನ ವಿದ್ಯಮಾನೇ ಪೂರ್ವೋಕ್ತ ಉತ್ತರಪ್ರಾಪ್ತಿರಿಷ್ಯತೇ ॥ ೬೯ ॥

ನ ಕುರ್ಯಾದ್ದಂತಸಂಘರ್ಷಂ ನಾತ್ಮನೋ ದೇಹತಾಡನಂ ।
ಸ್ವಾಪೇಽಧ್ವನಿ ತಥಾ ಭುಂಜನ್ಸ್ವಾಧ್ಯಾಯಂ ಚ ವಿವರ್ಜಯೇತ್ ॥ ೭೦ ॥

---

೬೬. ಮಂಡಿಯೊಳಗೆ ಕೈಗಳು ಬರುವಂತೆ ಕುಳಿತು ಮೂರುಬಾರಿಯಾಗಲಿ, ನಾಲ್ಕುಸಲವಾಗಲಿ ಆಚಮನಮಾಡಬೇಕು. ಅನಂತರ ಎರಡುಸಲ (ತುಟಿಗಳನ್ನು ಒರೆಸಿಕೊಂಡು ಕೈತೊಳೆದುಕೊಂಡು) ಇಂದ್ರಿಯಗಳನ್ನೂ ತಲೆಯನ್ನೂ ಮುಟ್ಟಿಕೊಳ್ಳಬೇಕು. ಈರೀತಿ–

೬೭-೬೮. ಶುದ್ಧವಾದ ನೀರನ್ನು ತೆಗೆದುಕೊಂಡು ಆಚಮನಮಾಡಿ ಶುದ್ಧನಾದನಂತರ ತನ್ನ ನಿತ್ಯಕ್ರಿಯೆ ಮೊದಲಾದವುಗಳನ್ನು ಮಾಡಬೇಕು. ಸೀತರೆ, ನೆಕ್ಕಿದರೆ, ಅಧೋವಾತವು ಸಡಲಿದರೆ, ಉಗುಳಿದರೆ, ಮತ್ತೊಬ್ಬರನ್ನು ತಗುಲಿದರೆ, ಆಚಮನಮಾಡಬೇಕು. ಬಳಿಕ ಸೂರ್ಯನನ್ನು ನೋಡಿ ಬಲಗೈಯಿಂದ ಬಲಗಿವಿಯನ್ನೂ ಮುಚ್ಚಿಕೊಳ್ಳಬೇಕು.

೬೯. ಇದೆಲ್ಲವನ್ನೂ ಸಾಧ್ಯವಾದಷ್ಟುಮಟ್ಟಿಗೆ ಪುರುಷನು ನೆರವೇರಿಸಬೇಕು. ಪೂರ್ವೋಕ್ತವಾದುದು ಇಲ್ಲದಿದ್ದರೆ ಬಳಿಕ ಮುಂದಿನದು ಪ್ರಾಪ್ತವಾಗುವುದು.

೭೦. ಹಲ್ಲುಗಳನ್ನು ಕಟಕಟ ಎಂದು ಕಡಿಯಬಾರದು. ತನ್ನ ಮೈ ಮೇಲೆ ಹೊಡೆದುಕೊಳ್ಳಬಾರದು. ಮಲಗಿರುವಾಗಲೂ, ಪ್ರಯಾಣಮಾಡು

ಸಂಧ್ಯಾಯಾಂ ಮೈಥುನಂ ಚಾಪಿ ತಥಾ ಪ್ರಸ್ಥಾನಮೇವ ಚ ।
ತಥಾಪರಾಹ್ಣೇ ಕುರ್ವೀತ ಶ್ರದ್ಧಯಾ ಪಿತೃತರ್ಪಣಂ ॥ ೭೧ ॥

ಶಿರಃಸ್ನಾನಂ ಚ ಕುರ್ವೀತ ದೈವಂ ಪಿತ್ರ್ಯಮಥಾಪಿ ಚ ।
ಪ್ರಾಙ್ಮುಖೋದಙ್ಮುಖೋ ವಾಪಿ ಶ್ಮಶ್ರುಕರ್ಮ ಚ ಕಾರಯೇತ್ ॥ ೭೨ ॥

ವ್ಯಂಗಿನೀಂ ವರ್ಜಯೇತ್ಕನ್ಯಾಂ ಕುಲಜಾಂ ವಾಪ್ಯರೋಗಿಣೀಂ ।
ಉದ್ವಹೇತ್ಪಿತೃಮಾತೃಭ್ಯಃ ಸಪ್ತಮೀಂ ಪಂಚಮೀಂ ತಥಾ ॥ ೭೩ ॥

ರಕ್ಷೇದ್ದಾರಾಂಸ್ತ್ಯಜೇದೀರ್ಷ್ಯಾಂ ತಥಾಹ್ನಿ ಸ್ವಪ್ನಮೈಥುನೇ ।
ಪರೋಪತಾಪಕಂ ಕರ್ಮ ಜಂತುಪೀಡಾಂ ಚ ಸರ್ವದಾ ॥ ೭೪ ॥

ವಾಗಲೂ (ಊರಿಂದೂರಿಗೆ) ಊಟಮಾಡುವಾಗಲೂ ವೇದಾಧ್ಯಯನಾದಿಗಳನ್ನು ಬಿಟ್ಟುಬಿಡಬೇಕು.

೭೧. ಎರಡು ಸಂಜೆಗಳಲ್ಲಿಯೂ ಸ್ತ್ರೀಸಂಗವನ್ನು ಮಾಡಬಾರದು. ಎಲ್ಲಿಯೂ ಭಾರಿ ಪ್ರಯಾಣ ಹೊರಡಬಾರದು. ನಡುಹಗಲಿನಲ್ಲಿ ಶ್ರದ್ಧೆಯಿಂದ ಪಿತೃಗಳಿಗೆ ತರ್ಪಣಾದಿಗಳನ್ನು ಮಾಡಬೇಕು.

೭೨. ದೇವಕರ್ಮಗಳಲ್ಲಿಯೂ ಪಿತೃಕರ್ಮಗಳಲ್ಲಿಯೂ ಪೂರ್ವಭಾವಿಯಾಗಿ ಶಿರಸ್ಸ್ನಾನಮಾಡಬೇಕು. ಪೂರ್ವಾಭಿಮುಖನಾಗಿಯೂ ಇಲ್ಲವೇ ಉತ್ತರಾಭಿಮುಖನಾಗಿಯೂ ಕ್ಷೌರಕರ್ಮಗಳನ್ನು ಮಾಡಿಸಿಕೊಳ್ಳಬೇಕು.

೭೩. ಅಂಗವಿಕಲಳಾದ ಸ್ತ್ರೀಯನ್ನು ಮದುವೆಯಾಗಬಾರದು. ಸದ್ವಂಶಜಾತಳೂ ತನ್ನ ತಂದೆತಾಯಿಗಳ ಕಡೆಯ ಏಳನೆ ಅಥವಾ ಐದನೆಯ ತಲೆಯವಳೂ ಆದ ಕನ್ಯೆಯನ್ನು ಮದುವೆಯಾಗಬೇಕು.

೭೪. ಹೆಂಡತಿಯನ್ನು ಸಂರಕ್ಷಿಸಬೇಕು. ಈರ್ಷ್ಯೆ (ಅಸೂಯೆ) ಯನ್ನು ಬಿಡಬೇಕು. ಮತ್ತು ಹಗಲುಹೊತ್ತು ನಿದ್ದೆಯನ್ನೂ ಮೈಥುನವನ್ನೂ ಮಾಡಬಾರದು. ಎಂದೆಂದಿಗೂ, ಮತ್ತೊಬ್ಬರಿಗೆ ಹಿಂಸೆಯಾಗುವ ಕೆಲಸವನ್ನೂ, ಪ್ರಾಣಹಿಂಸೆಯನ್ನೂ ಮಾಡಬಾರದು.

ಉದಕ್ಯಾ ಸರ್ವವರ್ಣಾನಾಂ ವರ್ಜ್ಯಾ ರಾತ್ರಿಚತುಷ್ಟಯಂ ।
ಸ್ತ್ರೀಜನ್ಮಪರಿಹಾರಾರ್ಥಂ ಪಂಚಮೀಂ ಚಾಪಿ ವರ್ಜಯೇತ್ ॥ ೭೫ ॥

ತತಃ ಷಷ್ಠ್ಯಾಂ ವ್ರಜೇದ್ರಾತ್ರ್ಯಾಂ ಜ್ಯೇಷ್ಠಯುಗ್ಮಾಸು ರಾತ್ರಿಷು ।
ಯುಗ್ಮಾಸು ಪುತ್ರಾ ಜಾಯಂತೇ ಸ್ತ್ರಿಯೋಽಯುಗ್ಮಾಸು ರಾತ್ರಿಷು ॥ ೭೬ ॥

ವಿಧರ್ಮಿಣೋ ವೈ ಪರ್ವಾದೌ ಸಂಧ್ಯಾಕಾಲೇಷು ಷಂಢಕಾಃ ।
ಕ್ಷುರಕರ್ಮಣಿ ರಿಕ್ತಾಂ ವೈ ವರ್ಜಯೀತ ವಿಚಕ್ಷಣಃ ॥ ೭೭ ॥

ಬ್ರುವತಾಮವಿನೀತಾನಾಂ ನ ಶ್ರೋತವ್ಯಂ ಕದಾಚನ ।
ನ ಚೋತ್ಕೃಷ್ಟಾಸನಂ ದೇಯಮನುತ್ಕೃಷ್ಟಸ್ಯ ಚಾದರಾತ್ ॥ ೭೮ ॥

ಕ್ಷುರಕರ್ಮಣಿ ಚಾಂತೇ ಚ ಸ್ತ್ರೀಸಂಭೋಗೇ ಚ ಭೋ ದ್ವಿಜಾಃ ।
ಸ್ನಾಯೀತ ಚೈಲವಾನ್ಪ್ರಾಜ್ಞಃ ಕಟಭೂಮಿಮುಪೇತ್ಯ ಚ ॥ ೭೯ ॥

---

೭೫. ಎಲ್ಲ ವರ್ಣದವರೂ ನಾಲ್ಕುರಾತ್ರಿಗಳು ರಜಸ್ವಲೆಯಾದ ಸ್ತ್ರೀಯರನ್ನು ದೂರವಿಟ್ಟರಬೇಕು. ಐದನೆಯ ದಿವಸದಲ್ಲಿಯೂ ಸಹ ಸ್ತ್ರೀಶಿಶುವು ಜನಿಸದಿರುವುದಕ್ಕೋಸ್ಕರ ಅವರ ಸಮಾಗಮ ಮಾಡಬಾರದು.

೭೬. ಸ್ತ್ರೀಯು ರಜಸ್ವಲೆಯಾದ ಆರನೆಯ ರಾತ್ರಿಯೂ ಮತ್ತು ಸಮಸಂಖ್ಯೆಯ ರಾತ್ರಿಗಳಲ್ಲೂ ಅವರೊಡನೆ ಸಮಾಗಮ ಮಾಡಬೇಕು. ಏಕೆಂದರೆ ಸಮದಿವಸಗಳಲ್ಲಿ ಪುತ್ರರೂ ವಿಷಮದಿನಗಳಲ್ಲಿ ಪುತ್ರಿಯರೂ ಹುಟ್ಟುವರು.

೭೭. ಪರ್ವದಿವಸಗಳಲ್ಲಿ ಸ್ತ್ರೀಸಹವಾಸಮಾಡಲು ಧರ್ಮದ್ರೋಹಿಗಳೂ, ಸಂಧ್ಯಾಸಮಯಗಳಲ್ಲಿ ಸಂಗಮಿಸಲು ನಪುಂಸಕರೂ ಹುಟ್ಟುವರು. ಬುದ್ಧಿವಂತನಾದವನು ಕ್ಷುರಕರ್ಮಕ್ಕೆ ರಿಕ್ತತಿಥಿಯನ್ನು ಬಿಟ್ಟುಬಿಡಬೇಕು.

೭೮. ಎಂದಿಗೂ ಸಹ ಅಶಿಕ್ಷಿತರು ಮಾತಾಡುತ್ತಿದ್ದರೆ ತಾನು ನಿಂತುಕೊಂಡು ಅದನ್ನು ಕೇಳಲು ಹೋಗಬಾರದು. ಉತ್ತಮನಾದವನಿಗೆ ಕೊಡಬೇಕಾದ ಪೀಠವನ್ನು ಅಧಮನಾದವನಿಗೆ ಕೊಡಬಾರದು.

೭೯. ಎಲೈ ಬ್ರಾಹ್ಮಣರಿರಾ! ಕ್ಷೌರಮಾಡಿಸಿಕೊಂಡಾಗಲೂ, ವಮನಮಾಡಿದಾಗಲೂ, ಸ್ತ್ರೀಸಹವಾಸಮಾಡಿದಾಗಲೂ, ಶವವಿದ್ದ ಬಳಿ ಹೋಗಿ ಬಂದಾಗಲೂ ಪ್ರಾಜ್ಞನಾದವನು ಸಚೇಲಸ್ನಾನಮಾಡಬೇಕು.

ದೇವವೇದದ್ವಿಜಾತೀನಾಂ ಸಾಧುಸತ್ಯಮಹಾತ್ಮನಾಂ ।
ಗುರೋಃ ಪತಿವ್ರತಾನಾಂ ಚ ಬ್ರಹ್ಮಯಜ್ಞತಪಸ್ವಿನಾಂ ॥ ೮೦ ॥

ಪರಿವಾದಂ ನ ಕುರ್ವೀತ ಪರಿಹಾಸಂ ಚ ಭೋ ದ್ವಿಜಾಃ ।
ಧವಲಾಂಬರಸಂವೀತಃ ಸಿತಪುಷ್ಪವಿಭೂಷಿತಃ ॥ ೮೧ ॥

ಸದಾ ಮಾಂಗಲ್ಯವೇಷಃ ಸ್ಯಾನ್ನ ವಾಮಾಂಗಲ್ಯವಾನ್ಭವೇತ್ ।
ನೋದ್ಧತೋನ್ಮತ್ತಮೂಢೈಶ್ಚ ನಾವಿನೀತೈಶ್ಚ ಪಂಡಿತಃ ॥ ೮೨ ॥

ಗಚ್ಛೇನ್ಮೈತ್ರೀಮಶೀಲೇನ ನ ವಯೋಜಾತಿದೂಷಿತೈಃ ।
ನ ಚಾತಿವ್ಯಯಶೀಲೈಶ್ಚ ಪುರುಷೈರ್ನೈವ ವೈರಿಭಿಃ ॥ ೮೩ ॥

ಕಾರ್ಯಾಕ್ಷಮೈರ್ನಿಂದಿತೈರ್ನ ನ ಚೈವ ವಿಟಸಂಗಿಭಿಃ ।
ನಿಸ್ವೈರ್ನ ವಾದೈಕಪರೈರ್ನರೈಶ್ಚಾನ್ಯೈಸ್ತಥಾಧಮೈಃ ॥ ೮೪ ॥

೮೦-೮೧. ದೇವರು, ವೇದಗಳು, ಬ್ರಾಹ್ಮಣರು, ಸಾಧುಗಳು, ಸತ್ಯವಂತರು, ಮಹಾತ್ಮರು, ಗುರುಗಳು, ಪತಿವ್ರತೆಯರು, ಬ್ರಹ್ಮಯಜ್ಞಾದಿ ತಪೋನಿರತರು–ಇಂಥವರ ನಿಂದೆಯನ್ನೂ ಅಪಹಾಸ್ಯವನ್ನೂ ಮಾಡಬಾರದು. ಎಲೈ ಬ್ರಾಹ್ಮಣರಿರಾ! ಯಾವಾಗಲೂ ಬೆಳ್ಳಗಿರುವ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಬಿಳಿಯಹೂಗಳನ್ನು (ಅರಳಿರುವ) ಮುಡಿದಿರಬೇಕು.

೮೨. ಈರೀತಿಯಾಗಿ ಸರ್ವದಾ ಮಂಗಲಸೂಚಕವಾದ ವೇಷದಲ್ಲಿರಬೇಕು. ಎಂದಿಗೂ ಅಮಂಗಲವಾದ ವೇಷದಲ್ಲಿರಬಾರದು. ಪಂಡಿತನಾದವನು ಅಹಂಕಾರಿಗಳೊಡನೆಯೂ, ಮದಾಂಧರೊಡನೆಯೂ, ಮೂರ್ಖರೊಡನೆಯೂ, ಅಶಿಕ್ಷಿತರೊಡನೆಯೂ–

೮೩. ಶೀಲವಿಲ್ಲದವನೊಡನೆಯೂ, ವಯಸ್ಸಿನಲ್ಲಿಯೂ ಜಾತಿಯಲ್ಲಿಯೂ, ಕನಿಷ್ಠರಾದವನೊಡನೆಯೂ, ಅತಿಮುಂದುವೆಚ್ಚಮಾಡುವವನೊಡನೆಯೂ, ವೈರಿಗಳೊಡನೆಯೂ–

೮೪. ಕೆಲಸಕ್ಕೆಬಾರದವರೊಡನೆಯೂ, ನಿಂದೆಗೊಳಗಾದವರೊಡನೆಯೂ ವಿಟವೃತ್ತಿಯುಳ್ಳವರೊಡನೆಯೂ, ದರಿದ್ರರೊಡನೆಯೂ, ಜಗಳಗಂಟರೊಡನೆಯೂ, ಇನ್ನೂ ಅನೇಕಬಗೆಯ ಅಧಮರೊಡನೆಯೂ ಸ್ನೇಹ ಬೆಳೆಸಬಾರದು.

ಸುಹೃದ್ದೀಕ್ಷಿತಭೂಪಾಲಸ್ನಾತಕಶ್ವಶುರೈಃ ಸಹ ।
ಉತ್ತಿಷ್ಠೇದ್ವಿಭವಾಚ್ಚೈನಾನರ್ಚಯೇದ್ಗೃಹಮಾಗತಾನ್ ॥ ೮೫ ॥

ಯಥಾವಿಭವತೋ ವಿಪ್ರಾಃ ಪ್ರತಿಸಂವತ್ಸರೋಷಿತಾನ್ ।
ಸಮ್ಯಗ್ಗೃಹೇಽರ್ಚನಂ ಕೃತ್ವಾ ಯಥಾಸ್ಥಾನಮನುಕ್ರಮಾತ್ ॥ ೮೬ ॥

ಸಂಪೂಜಯೇತ್ತಥಾ ವಹ್ನೌ ಪ್ರದದ್ಯಾಚ್ಚಾಹುತೀಃ ಕ್ರಮಾತ್ ।
ಪ್ರಥಮಾಂ ಬ್ರಹ್ಮಣೇ ದದ್ಯಾತ್ಪ್ರಜಾನಾಂ ಪತಯೇ ತತಃ ॥ ೮೭ ॥

ತೃತೀಯಾಂ ಚೈವ ಗೃಹ್ಯೇಭ್ಯಃ ಕಶ್ಯಪಾಯ ತಥಾಪರಾಂ ।
ತತೋಽನುಮತಯೇ ದದ್ಯಾದ್ದದ್ಯಾದ್ಬಹುಬಲಿಂ ತತಃ ॥ ೮೮ ॥

ಪೂರ್ವಂ ಖ್ಯಾತಾ ಮಯಾ ಯಾ ತು ನಿತ್ಯಕ್ರಮವಿಧೌ ಕ್ರಿಯಾ ।
ವೈಶ್ವದೇವಂ ತತಃ ಕುರ್ಯಾದ್ವದತ ಶೃಣುತ ದ್ವಿಜಾಃ ॥ ೮೯ ॥

---

೮೫. ಸ್ನೇಹಿತ, ಯಜ್ಞದೀಕ್ಷೆವಹಿಸಿದವನು, ದೊರೆ, ಸ್ನಾತಕ, ಮಾವ, ಇವರು ಬಂದಾಗ ಎದ್ದು ನಿಲ್ಲಬೇಕು. ಇವರು ಮನೆಗೆ ಬಂದಾಗ ತನಗೆ ಶಕ್ತಿಯಿದ್ದಷ್ಟು ಇವರನ್ನು ಸತ್ಕರಿಸಬೇಕು.

೮೬. ಎಲೈ "ವಿಪ್ರರಿರಾ! ಪ್ರತಿಸಂವತ್ಸರದಲ್ಲಿಯೂ ತನ್ನ ಮನೆಯಲ್ಲಿಯೇ ಇರತಕ್ಕಂತಹ ವಾಸ್ತುಪುರುಷಾದಿದೇವತೆಗಳನ್ನು ಅವರವರ ಸ್ಥಾನಗಳಲ್ಲಿ ಕ್ರಮವಾಗಿ ಅರ್ಚಿಸಬೇಕು.

೮೭. ಮತ್ತು ಯಜ್ಞೇಶ್ವರನಲ್ಲಿ ಕ್ರಮವಾಗಿ ಅವರಿಗೆ ಆಹುತಿಗಳನ್ನೂ ಈಯಬೇಕು. ಮೊದಲು ಬ್ರಹ್ಮನಿಗೂ, ಅನಂತರ ಪ್ರಜಾಪತಿಗೂ ಆಹುತಿಯೀಯಬೇಕು.

೮೮. ಅನಂತರ ಗೃಹನಿವಾಸಿಗಳಾದ ದೇವತೆಗಳಿಗೂ ಆಮೇಲೆ, ಕಶ್ಯಪನಿಗೂ, ಬಳಿಕ ಅನುಮತಿಗೂ, ಆಹುತಿಗಳನ್ನಿತ್ತು ಆಮೇಲೆ ಮನೆಯ ಹೊರಗೆ ಬಲಿಯನ್ನು ಹಾಕಬೇಕು.

೮೯. ಅನಂತರ, ಹಿಂದೆ ನಾನು ನಿಮಗೆ ನಿತ್ಯಕರ್ಮ ವಿವರಣ ಸಂದರ್ಭದಲ್ಲಿ ಹೇಳಿದ್ದಂತಹ ವೈಶ್ವದೇವವನ್ನು ಮಾಡಬೇಕು. ಎಲೈ ಬ್ರಾಹ್ಮಣರಿರಾ! ನಾನದನ್ನು ನಿಮಗೆ ತಿಳಿಸುವೆನು. ಕೇಳಿರಿ.

ಯಥಾಸ್ಥಾನವಿಭಾಗಂ ತು ದೇವಾನುದಿಶ್ಯ ವೈ ಪೃಥಕ್ ।
ಪರ್ಜನ್ಯಾಪೋಧರಿತ್ರೀಣಾಂ ದದ್ಯಾತ್ತು ಮಣಿಕೇ ತ್ರಯಂ ॥ ೯೦ ॥

ವಾಯವೇ ಚ ಪ್ರತಿದಿಶಂ ದಿಗ್ಭ್ಯಃ ಪ್ರಾಚ್ಯಾದಿಷು ಕ್ರಮಾತ್ ।
ಬ್ರಾಹ್ಮಣೇ ಚಾಂತರಿಕ್ಷಾಯ ಸೂರ್ಯಾಯ ಚ ಯಥಾಕ್ರಮಾತ್ ॥ ೯೧ ॥

ವಿಶ್ವೇಭ್ಯಶ್ಚೈವ ದೇವೇಭ್ಯೋ ವಿಶ್ವಭೂತೇಭ್ಯ ಏವ ಚ ।
ಉಷಸೇ ಭೂತಪತಯೇ ದದ್ಯಾದ್ವೋತ್ತರತಃ ಶುಚಿಃ ॥ ೯೨ ॥

ಸ್ವಧಾ ಚ ನಮ ಇತ್ಯುಕ್ತ್ವಾ ಪಿತೃಭ್ಯಶ್ಚೈವ ದಕ್ಷಿಣೇ ।
ಕೃತ್ವಾಪಸವ್ಯಂ ವಾಯವ್ಯಾಂ ಯಕ್ಷ್ಮೈತತ್ತೇತಿ ಸಂವದೇನ್ ॥ ೯೩ ॥

ಅನ್ನಾವಶೇಷಮಿಶ್ರಂ ವೈ ತೋಯಂ ದದ್ಯಾದ್ಯಥಾವಿಧಿ ।
ದೇವಾನಾಂ ಚ ತತಃ ಕುರ್ಯಾದ್ಬ್ರಾಹ್ಮಣಾನಾಂ ನಮಸ್ಕ್ರಿಯಾಂ ॥ ೯೪ ॥

---

೯೦. ದೇವತೆಗಳಿಗೆಂದು ಉದ್ದೇಶಿಸಿ ಬೇರೆಬೇರೆಯಾಗಿ ಸ್ಥಾನಗಳನ್ನು ವಿಂಗಡಿಸಿಕೊಳ್ಳಬೇಕು. ಅನಂತರ ಪರ್ಜನ್ಯ, ಅಪ್ಪು, ಧರಿತ್ರೀ ಇವರುಗಳಿಗೆ ಮಣಿಸ್ಥಾನದಲ್ಲಿ ಮೂರುಬಲಿಗಳನ್ನೂ ವಾಯುವಿಗೂ ಅಲ್ಲಿಯೇ ಒಂದು ಬಲಿಯನ್ನೂ ನೀಡಬೇಕು.

೯೧-೯೨. ಪೂರ್ವಾದಿ ದಿಕ್ಕುಗಳಲ್ಲಿ ಕ್ರಮವಾಗಿ ಆಯಾಯ ದಿಕ್ಕುಗಳಿಗೂ ಅನಂತರ ಕ್ರಮವಾಗಿ ಬ್ರಹ್ಮನಿಗೂ, ಅಂತರಿಕ್ಷಕ್ಕೂ, ಸೂರ್ಯನಿಗೂ, ವಿಶ್ವೇದೇವತೆಗಳಿಗೂ, ಸಕಲಭೂತಗಳಿಗೂ, ಉಷಸ್ಸಿಗೂ, ಭೂತಪತಿಗೂ, ಉತ್ತರಭಾಗದಲ್ಲಿ ಶುಚಿಯಾಗಿ (ಬಲಿಯನ್ನು) ಅರ್ಪಿಸಬೇಕು.

೯೩. ಅನಂತರ ದಕ್ಷಿಣಪಾರ್ಶ್ವದಲ್ಲಿ ಅಪಸವ್ಯದಿಂದ - ಸ್ವಧಾನಮಃ' ಎಂಬುದಾಗಿ ಪಿತೃಗಳಿಗೆ ಸ್ಥಲನಿರ್ದೇಶಮಾಡಿ ಬಲಿಯಿಡಬೇಕು. ಮತ್ತು ವಾಯುವ್ಯದಿಕ್ಕಿನಲ್ಲಿ : ಯಕ್ಷ್ಮೈತತ್ತೇ' ಎಂಬದಾಗಿ ಉಚ್ಚರಿಸುತ್ತಾ-

೯೪. ವಿಧ್ಯನುಸಾರವಾಗಿ ಅನ್ನದ ಅವಶಿಷ್ಟಭಾಗ ಬೆರೆತ ನೀರನ್ನು ಬಿಡಬೇಕು. ಅನಂತರ ದೇವತೆಗಳಿಗೂ ಬ್ರಾಹ್ಮಣರಿಗೂ ನಮಸ್ಕಾರ ಮಾಡಬೇಕು.

ಅಂಗುಷ್ಠೋತ್ತರತೋ ರೇಖಾ ಪಾಣೇರ್ಯಾ ದಕ್ಷಿಣಸ್ಯ ಚ ।
ಏತದ್ಬ್ರಾಹ್ಮಮಿತಿ ಖ್ಯಾತಂ ತೀರ್ಥಮಾಚಮನಾಯ ವೈ ॥ ೯೫ ॥

ತರ್ಜನ್ಯಂಗುಷ್ಠಯೋರಂತಃ ಪಿತ್ರ್ಯಂ ತೀರ್ಥಮುದಾಹೃತಂ ।
ಪಿತೄಣಾಂ ತೇನ ತೋಯಾನಿ ದದ್ಯಾನ್ನಾಂದೀಮುಖಾದೃತೇ ॥ ೯೬ ॥

ಅಂಗುಲ್ಯಗ್ರೇ ತಥಾ ದೈವಂ ತೇನ ದಿವ್ಯಕ್ರಿಯಾವಿಧಿಃ ।
ತೀರ್ಥಂ ಕನಿಷ್ಠಿಕಾಮೂಲೇ ಕಾಯಂ ತತ್ರ ಪ್ರಜಾಪತೇಃ ॥ ೯೭ ॥

ಏವಮೇಭಿಃ ಸದಾ ತೀರ್ಥೈರ್ನಿಧಾನಂ ಪಿತೃಭಿಃ ಸಹ ।
ಸದಾ ಕಾರ್ಯಾಣಿ ಕುರ್ವೀತ ನಾನ್ಯತೀರ್ಥೈಃ ಕದಾಚನ ॥ ೯೮ ॥

---

೯೫. ಬಲಗೈಯ್ಯಿನ ಅಂಗುಷ್ಠಾಂಗುಲಿಯ ಮೇಲುಭಾಗದಲ್ಲಿ (ಗೆರೆಗಳಿರುವ ಜಾಗದಲ್ಲಿ) ನಿಲ್ಲುವ ನೀರನ್ನು ಬ್ರಾಹ್ಮತೀರ್ಥವೆನ್ನುವರು. ಇದು ಆಚಮನಕ್ಕೆ ಉಚಿತವಾದುದು.

೯೬. ತರ್ಜನೀ ಮತ್ತು ಅಂಗುಷ್ಠಾಂಗುಲಿಗಳ ನಡುವಣ ಪ್ರದೇಶದಲ್ಲಿ ಬರುವ ನೀರು ಪಿತೃತೀರ್ಥವೆನಿಸುವುದು. ನಾಂದೀ ಶ್ರಾದ್ಧಾದಿಗಳನ್ನುಳಿದು ಇತರ ಪಿತೃಕರ್ಮಗಳಲ್ಲಿ ಈ ತೀರ್ಥದಿಂದಲೇ ಪಿತೃಗಳಿಗೆ ಜಲಕ್ರಿಯೆಯನ್ನು ಮಾಡಬೇಕು.

೯೭. ತರ್ಜನಿಯಿಂದ ಹಿಡಿದು ಕನಿಷ್ಠಿಕೆಯವರೆಗಿನ ನಾಲ್ಕು ಬೆರಳುಗಳ ಕೊನೆಯಲ್ಲಿ ಬೀಳುವ ನೀರು ದೈವತೀರ್ಥವೆನಿಸುವುದು. ಇದು ದೇವತೆಗಳಿಗೆ ಜಲಕ್ರಿಯೆಯಲ್ಲಿ ಉಪಯೋಗವಾಗುವುದು. ಕಿರುಬೆರಳಿನ ಕೆಳಭಾಗದಿಂದ ಬೀಳುವ ನೀರು ಕಾಯವೆನಿಸುವುದು. ಈ ಕಾಯತೀರ್ಥವು ಪ್ರಜಾಪತಿಗೆ ಸಲ್ಲುವಂಥಹುದು.

೯೮. ಈರೀತಿಯಾಗಿರುವ ದೈವ, ಬ್ರಾಹ್ಮ, ಕಾಯತೀರ್ಥಗಳಿಂದಲೂ ಪಿತೃತೀರ್ಥಗಳಿಂದಲೂ ಯುಕ್ತವಾದ ಕ್ರಿಯೆಗಳನ್ನು ಮಾಡಬೇಕು. ಬೇರೆ ತೀರ್ಥಗಳಿಂದ ಕೂಡದು.

ಬ್ರಾಹ್ಮೇಣಾಚಮನಂ ಶಸ್ತಂ ಪೈತ್ರ್ಯಂ ಪಿತ್ರ್ಯೇಣ ಸರ್ವದಾ ।
ದೇವತೀರ್ಥೇನ ದೇವಾನಾಂ ಪ್ರಾಜಾಪತ್ಯಂ ಜಿತೇನ ಚ ॥ ೯೯ ॥

ನಾಂದೀಮುಖಾನಾಂ ಕುರ್ವೀತ ಪ್ರಾಜ್ಞಃ ಪಿಂಡೋದಕಕ್ರಿಯಾಂ ।
ಪ್ರಾಜಾಪತ್ಯೇನ ತೀರ್ಥೇನ ಯಚ್ಚ ಕಿಂಚಿತ್ಪ್ರಜಾಪತೇಃ ॥ ೧೦೦ ॥

ಯುಗಪಜ್ಜಲಮಗ್ನಿಂ ಚ ಬಿಭೃಯಾನ್ನ ವಿಚಕ್ಷಣಃ ।
ಗುರುದೇವಪಿತೄನ್ವಿಪ್ರಾನ್ನ ಚ ಪಾದೌ ಪ್ರಸಾರಯೇತ್ ॥ ೧೦೧ ॥

ನಾಚಕ್ಷೀತ ಧಯಂತೀಂ ಗಾಂ ಜಲಂ ನಾಂಜಲಿನಾ ಪಿಬೇತ್
ಶೌಚಕಾಲೇಷು ಸರ್ವೇಷು ಗುರುಷ್ವಲ್ಪೇಷು ವಾ ಪುನಃ ।
ನ ವಿಲಂಬೇತ ಮೇಧಾವೀ ನ ಮುಖೇನಾನಲಂ ಧಮೇತ್ ॥ ೧೦೨ ॥

---

೯೯. ಬ್ರಾಹ್ಮತೀರ್ಥದಿಂದ ಆಚಮನವನ್ನು ಮಾಡಿದರೆ ಅದು ಪ್ರಶಸ್ತವೆನಿಸುವುದು. ಪಿತೃತೀರ್ಥದಿಂದ ಮಾಡಿದ ಪಿತೃಕ್ರಿಯೆಯು ಪ್ರಶಸ್ತವೆನಿಸುವುದು. ದೇವತೀರ್ಥದಿಂದ ಮಾಡುವ ದೇವಾರ್ಚನಾದಿ ಕ್ರಿಯೆಯು ಉತ್ತಮವೆನಿಸುವುದು.

೧೦೦. ಮತ್ತು ಪ್ರಾಜಪತ್ಯ (ಕಾಯ) ತೀರ್ಥದಿಂದ ನಾಂದೀಮುಖಾದಿ ಶ್ರಾದ್ಧಗಳಲ್ಲಿ ಪಿಂಡೋದಕ ಕ್ರಿಯೆಗಳನ್ನೂ ಮತ್ತು ಪ್ರಜಾಪತಿಗೆ ಸಲ್ಲುವಂತಹ ಕ್ರಿಯೆಗಳನ್ನೂ ಪ್ರಾಜ್ಞನಾದವನು ನಡೆಸಬೇಕು.

೧೦೧. ಬುದ್ಧಿವಂತನಾದವನು ಒಟ್ಟಿಗೆ ನೀರನ್ನೂ ಅಗ್ನಿಯನ್ನೂ ಧರಿಸಬಾರದು ಹಿರಿಯರು, ದೇವರು, ಪಿತೃಗಳು, ಬ್ರಾಹ್ಮಣರು ಎದುರಿಗೆ ಇರುವಾಗ ಕಾಲುನೀಡಬಾರದು.

೧೦೨. ಹಾಗೆಯೇ ಕರೆಯುತ್ತಿರುವ ಹಸುವನ್ನು ಕರೆಯಲೂ (ಕೂಗಲೂ) ಬಾರದು. ಬೊಗಸೆಯಿಂದ ನೀರು ಕುಡಿಯಬಾರದು. ಶೌಚಸಮಯಗಳಲ್ಲೂ, ಗುರುಗಳ ವಿಷಯದಲ್ಲೂ, ಅಲ್ಪಕಾರ್ಯಗಳಲ್ಲೂ ಹೆಚ್ಚು ತಡಮಾಡಬಾರದು. ಮುಖದಿಂದ ಬೆಂಕಿಯನ್ನು ಊದಬಾರದು.

ತತ್ರ ವಿಪ್ರಾ ನ ವಸ್ತವ್ಯಂ ಯತ್ರ ನಾಸ್ತಿ ಚತುಷ್ಟಯಂ ।
ಋಣಪ್ರದಾತಾ ವೈದ್ಯಶ್ಚ ಶ್ರೋತ್ರಿಯಃ ಸಜಲಾ ನದೀ ॥ ೧೦೩ ॥

ಜಿತಭೃತ್ಯೋ ನೃಪೋ ಯತ್ರ ಬಲವಾನ್ಧರ್ಮತತ್ಪರಃ ।
ತತ್ರ ನಿತ್ಯಂ ವಸೇತ್ಪ್ರಾಜ್ಞಃ ಕುತಃ ಕುನೃಪತೌ ಸುಖಂ ॥ ೧೦೪ ॥

ಪೌರಾಃ ಸುಸಂಹತಾ ಯತ್ರ ಸತತಂ ನ್ಯಾಯವರ್ತಿನಃ ।
ಶಾಂತಾಮತ್ಸರಿಣೋ ಲೋಕಾಸ್ತತ್ರ ವಾಸಃ ಸುಖೋದಯಃ ॥ ೧೦೫ ॥

ಯಸ್ಮಿನ್ಕೃಷೀವಲಾ ರಾಷ್ಟ್ರೇ ಪ್ರಾಯಶೋ ನಾತಿಮಾನಿನಃ ।
ಯತ್ರೌಷಧಾನ್ಯಶೇಷಾಣಿ ವಸೇತ್ತತ್ರ ವಿಚಕ್ಷಣಃ ॥ ೧೦೬ ॥

---

೧೦೩. ಎಲೈ ಬ್ರಾಹ್ಮಣರಿರಾ! ಸಾಲಕೊಡುವವನು, ವೈದ್ಯನು, ವೇದಾಧ್ಯಯನನಿರತನಾದ ಬ್ರಾಹ್ಮಣನು, ಸರ್ವದಾ ನೀರು ಹರಿಯುವ ನದಿ ಇವು ನಾಲ್ಕು ಇಲ್ಲದ ಸ್ಥಳಗಳಲ್ಲಿ ವಾಸಮಾಡಬಾರದು.

೧೦೪. ಯಾವ ಸ್ಥಳದಲ್ಲಿ ಆಳುಕಾಳುಗಳನ್ನು ಹತೋಟಿಯಲ್ಲಿಟ್ಟುಕೊಂಡು ಬಲಿಷ್ಠನಾಗಿರುವಂತಹ ಧರ್ಮಕಾರ್ಯಾಸಕ್ತನಾದ ದೊರೆಯು ಆಳುತ್ತಿರುವನೋ ಅಲ್ಲಿಯೇ ಪ್ರಾಜ್ಞನಾದವನು ಸರ್ವದಾ ವಾಸಮಾಡಬೇಕು. ದುಷ್ಟನಾದ ದೊರೆಯಿರುವ ಕಡೆ ಸುಖವೆಲ್ಲಿಯದು?

೧೦೫. ಮತ್ತು ಯಾವ ಊರಿನಲ್ಲಿರುವ ಜನರು ಒಗ್ಗಟ್ಟಾಗಿಯೂ, ಸರ್ವದಾ ನ್ಯಾಯತತ್ಪರರಾಗಿಯೂ, ಶಾಂತರಾಗಿಯೂ, ಮಾತ್ಸರ್ಯವಿಲ್ಲದೆಯೂ ಇರುತ್ತಾರೆಯೋ ಅಂಥಹ ಊರಿನಲ್ಲಿ ವಾಸಮಾಡಿದರೆ ಸುಖವುಂಟಾಗುವುದು.

೧೦೬. ಯಾವ ದೇಶದಲ್ಲಿ ಇರತಕ್ಕ ರೈತರೆಲ್ಲರೂ ಸಾಮಾನ್ಯವಾಗಿ ಅಹಂಕಾರದಿಂದ ಮೆರೆಯುವುದಿಲ್ಲವೋ ಮತ್ತು ಎಲ್ಲಿ ಸಕಲವಿಧವಾದ ಶಾಕಪಾಕಾದಿ ಓಷಧಿಗಳು ದೊರೆಯುವವೋ ಅಂಥಹ ದೇಶವಲ್ಲಿ ಪ್ರಾಜ್ಞನು ವಾಸಮಾಡಬೇಕು.

ತತ್ರ ವಿಪ್ರಾ ನ ವಸ್ತವ್ಯಂ ಯತ್ರೈತತ್ರಿತಯಂ ಸದಾ ।
ಜಿಗೀಷುಃ ಪೂರ್ವವೈರಶ್ಚ ಜನಶ್ಚ ಸತತೋತ್ಸವಃ ॥ ೧೦೭ ॥

ವಸೇನ್ನಿತ್ಯಂ ಸುಶೀಲೇಷು ಸಹಚಾರಿಷು ಪಂಡಿತಃ ।
ಯತ್ರಾಪ್ರಧೃಷ್ಯೋ ನೃಪತಿರ್ಯತ್ರ ಸಸ್ಯಪ್ರದಾ ಮಹೀ ॥ ೧೦೮ ॥

ಇತ್ಯೇತತ್ಕಥಿತಂ ವಿಪ್ರಾ ಮಯಾ ವೋ ಹಿತಕಾಮ್ಯಯಾ ।
ಅತಃಪರಂ ಪ್ರವಕ್ಷ್ಯಾಮಿ ಭಕ್ಷ್ಯಭೋಜ್ಯವಿಧಿಕ್ರಿಯಾಂ ॥ ೧೦೯ ॥

ಭೋಜ್ಯಮನ್ನಂ ಪರ್ಯುಷಿತಂ ಸ್ನೇಹಾಕ್ತಂ ಚಿರಸಂಭೃತಂ ।
ಅಸ್ನೇಹಾ ಅಪಿ ಗೋಧೂಮಯವಗೋರಸವಿಕ್ರಿಯಾಃ ॥ ೧೧೦ ॥

---

೧೦೭. ಎಲೈ ಬ್ರಾಹ್ಮಣರಿರಾ! ಮತ್ತೊಬ್ಬನನ್ನು ಜಯಿಸಬೇಕೆನ್ನುವವನೂ, ಹಿಂದಿನ ದ್ವೇಷವನ್ನು ಸಾಧಿಸಬೇಕೆನ್ನುವವನೂ, ಸರ್ವದಾ ಉತ್ಸವಗಳಲ್ಲೇ ಆಸಕ್ತರಾಗಿರತಕ್ಕ ಜನಗಳೂ ಎಲ್ಲಿ ಇರುವರೋ ಅಂಥಹ ಸ್ಥಲದಲ್ಲಿ ವಾಸಮಾಡಬಾರದು.

೧೦೮. ಎಲ್ಲಿ ಶತ್ರುಗಳಿಗೆ ಸಗ್ಗದ ಬಲಾಢ್ಯನಾದ ದೊರೆಯು ಇರುವನೋ ಯಾವ ದೇಶದಲ್ಲಿ ಭೂಮಿಯು ಪೈರು ಪಚ್ಚೆಗಳಿಂದ ತುಂಬಿರುವುದೋ ಮತ್ತು ಎಲ್ಲಿ ಜೊತೆಗಾರರೂ ಅಕ್ಕಪಕ್ಕದವರೂ ಒಳ್ಳೆಯ ಶೀಲವಂತರಾಗಿರುವರೋ ಆ ಪ್ರದೇಶದಲ್ಲಿ ಪಂಡಿತನಾದವನು ಪ್ರತಿನಿತ್ಯವೂ ವಾಸಮಾಡಬೇಕು.

೧೦೯. ಎಲೈ ಬ್ರಾಹ್ಮಣರಿರಾ! ನಿಮಗೆಲ್ಲರಿಗೂ ಒಳ್ಳೆಯದಾಗಲೆಂದು ಬಯಸಿ ಇವೆಲ್ಲವನ್ನೂ ತಿಳಿಸಿದೆನು. ಇನ್ನುಮುಂದೆ ಭಕ್ಷ್ಯಭೋಜ್ಯಗಳ ವಿಚಾರವಾಗಿ ತಿಳಿಸುವೆನು.

೧೧೦. ಒಹುಹೊತ್ತು ಇಟ್ಟಿದ್ದ ಅನ್ನವು ಪರ್ಯುಷಿತವೆನಿಸಿದ್ದರೂ ಅದು ಸ್ನೇಹ (ಜಿಡ್ಡು-ತುಪ್ಪ ಮೊದಲಾದವುಗಳು) ದಿಂದ ಯುಕ್ತವಾಗಿದ್ದರೆ ತಿನ್ನಬಹುದು. ಗೋಧೂಮ, ಜವೆ, ಹಾಲು ಇವುಗಳಿಂದ ಸಿದ್ಧಪಡಿಸಿದ ವಸ್ತುಗಳಿಗೆ ತುಪ್ಪ ಮೊದಲಾದುವನ್ನು ಹಾಕದಿದ್ದರೂ ಅವನ್ನು ತಿನ್ನಬಹುದು.

ಶಶಕಃ ಕಚ್ಛಪೋ ಗೋಧಾ ಶ್ವಾವಿನ್ಮತ್ಸ್ಯೋಽಥ ಶಲ್ಯಕಃ ।
ಭಕ್ಷ್ಯಾಶ್ಚೈತೇ ತಥಾ ವರ್ಜ್ಯೌ ಗ್ರಾಮಶೂಕರಕುಕ್ಕುಟೌ ॥ ೧೧೧ ॥

ಪಿತೃದೇವಾದಿಶೇಷಂ ಚ ಶ್ರಾದ್ಧೇ ಬ್ರಾಹ್ಮಣಕಾಮ್ಯಯಾ ।
ಪ್ರೋಕ್ಷಿತಂ ಚೌಷಧಾರ್ಥಂ ಚ ಖಾದನ್ಮಾಂಸಂ ನ ದುಷ್ಯತಿ ॥ ೧೧೨ ॥

ಶಂಖಾಶ್ಮಸ್ವರ್ಣರೂಪ್ಯಾಣಾಂ ರಜ್ಜೂನಾಮಥ ವಾಸಸಾಂ ।
ಶಾಕಮೂಲಫಲಾನಾಂ ಚ ತಥಾ ವಿದಲಚರ್ಮಣಾಂ ॥ ೧೧೩ ॥

ಮಣಿವಸ್ತ್ರಪ್ರವಾಲಾನಾಂ ತಥಾ ಮುಕ್ತಾಫಲಸ್ಯ ಚ ।
ಪಾತ್ರಾಣಾಂ ಚಮಸಾನಾಂ ಚ ಅಂಬುನಾ ಶೌಚಮಿಷ್ಯತೇ ॥ ೧೧೪ ॥

ತಥಾಶ್ಮಕಾನಾಂ ತೋಯೇನ ಅಶ್ಮಸಂಘರ್ಷಣೇನ ಚ ।
ಸಸ್ನೇಹಾನಾಂ ಚ ಪಾತ್ರಾಣಾಂ ಶುದ್ಧಿರುಷ್ಣೇನ ವಾರಿಣಾ ॥ ೧೧೫ ॥

---

೧೧೧. ಮೊಲ, ಆಮೆ, ಉಡ, ಮುಳ್ಳುಹಂದಿ, ಶಲ್ಯಮೃಗ, ಮೀನು ಇವುಗಳು ತಿನ್ನಲು ಅರ್ಹವಾದುವು. ಊರಹಂದಿಯನ್ನೂ ಕೋಳಿಯನ್ನೂ ತಿನ್ನಬಾರದು.

೧೧೨. ಪಿತೃಗಳಿಗೂ, ದೇವತೆಗಳಿಗೂ ನಿವೇದಿಸಿದ ನಂತರ ಉಳಿದಿರುವುದೂ, ಶ್ರಾದ್ಧದಲ್ಲಿ ಬ್ರಾಹ್ಮಣರ ಸಲುವಾಗಿ ಪ್ರೋಕ್ಷಿಸಿದುದೂ, ಔಷಧರೂಪವೂ ಆದ ಮಾಂಸವನ್ನು ತಿಂದರೆ ಆ ನರನು ದೋಷಭಾಗಿಯಾಗುವುದಿಲ್ಲ.

೧೧೩-೧೧೪. ಶಂಖ, ಕಲ್ಲು, ಚಿನ್ನ, ಬೆಳ್ಳಿ, ಹಗ್ಗ, ಬಟ್ಟೆ, ಕಾಯಿ ಪಲ್ಯ, ಗೆಡ್ಡೆಗೆಣಸು, ಹಣ್ಣುಹಂಪಲು, ವಿದಲವೃಕ್ಷದ ತೊಗಟೆ, ರತ್ನಗಳು, ಹವಳ, ಮುತ್ತು, ಪಾತ್ರೆಗಳು (ಯಜ್ಞೀಯವಾದುವು) ಚಮಸಗಳು ಇವನ್ನು ನೀರಿನಿಂದ ತೊಳೆದ ಮಾತ್ರಕ್ಕೇ ಶುದ್ಧಿಯಾಗುವುವು.

೧೧೫. ಅದೇರೀತಿ ಕಲ್ಲುಗಡಿಗೆಗಳೂ, ಜಿಡ್ಡಾದ ಪಾತ್ರೆಗಳೂ, ಕಲ್ಲಿಗೆ ಉಜ್ಜುವುದರಿಂದಲೂ, ಬಿಸಿನೀರಿನಲ್ಲಿ ತೊಳೆಯುವುದರಿಂದಲೂ ಶುದ್ಧಿ ಹೊಂದುವುವು.

ಶೂರ್ಪಾಣಾಮಜಿನಾನಾಂ ಚ ಮುಶಲೋಲೂಖಲಸ್ಯ ಚ ।
ಸಂಹತಾನಾಂ ಚ ವಸ್ತ್ರಾಣಾಂ ಪ್ರೋಕ್ಷಣಾತ್ಸಂಚಯಸ್ಯ ಚ ॥ ೧೧೬ ॥

ವಲ್ಕಲಾನಾಮಶೇಷಾಣಾಮಂಬುವ್ಯಚ್ಛೌಚಮಿಷ್ಯತೇ ।
ಆವಿಕಾನಾಂ ಸಮಸ್ತಾನಾಂ ಕೇಶಾನಾಂ ಚೈವಮಿಷ್ಯತೇ ॥ ೧೧೭ ॥

ಸಿದ್ಧಾರ್ಥಕಾನಾಂ ಕಲ್ಕೇನ ತಿಲಕಲ್ಕೇನ ವಾ ಪುನಃ ।
ಶೋಧನಂ ಚೈವ ಭವತಿ ಉಪಘಾತವತಾಂ ಸದಾ ॥ ೧೧೮ ॥

ತಥಾ ಕಾರ್ಪಾಸಿಕಾನಾಂ ಚ ಶುದ್ಧಿಃ ಸ್ಯಾಜ್ಜಲಭಸ್ಮನಾ ।
ದಾರುದಂತಾಸ್ಥಿಶೃಂಗಾಣಾಂ ತಕ್ಷಣಾಚ್ಛುದ್ಧಿರಿಷ್ಯತೇ ॥ ೧೧೯ ॥

ಪುನಃ ಪಾಕೇನ ಭಾಂಡಾನಾಂ ಪಾರ್ಥಿವಾನಾಮಮೇಧ್ಯತಾ ।
ಶುದ್ಧಂ ಭೈಕ್ಷ್ಯಂ ಕಾರುಹಸ್ತಃ ಪಣ್ಯಂ ಯೋಷಿನ್ಮುಖಂ ತಥಾ ॥ ೧೨೦ ॥

೧೧೬-೧೧೭. ಮೊರಗಳಿಗೂ, ಚರ್ಮಗಳಿಗೂ, ಒನಕೆ, ಒರಳುಗಳಿಗೂ ಕಟ್ಟಿಹಾಕಿರುವ ಬಟ್ಟೆಗಳಿಗೂ, ಹೇರಿಗೂ, ಎಲ್ಲಬಗೆಯ ನಾರುಮಡಿಗಳಿಗೂ, ಸಕಲವಿಧವಾದ ಕಂಬಳಿ ಧಾವಳಿ ಮೊದಲಾದ ಉಣ್ಣೆಯವಸ್ತ್ರಗಳಿಗೂ, ಮಣ್ಣು ಬೆರೆತ ನೀರು ಶುದ್ಧಿಯೆನಿಸುವುದು.

೧೧೮. ಸಾಸಿವೆಯ ಅಥವಾ ಎಳ್ಳಿನ ಕಲ್ಕದಿಂದ ಉಪಘಾತಪಡೆದಿರುವ ವಸ್ತುಗಳಿಗೆ ಶುದ್ಧಿಯುಂಟಾಗುವುದು.

೧೧೯. ಅದೇರೀತಿ ಹತ್ತಿಯವಸ್ತುಗಳಿಗೆ (ಹಾಸಿಗೆ-ದಿಂಬು ಮೊದಲಾದುವು) ಜಲ-ಅಥವಾ ಭಸ್ಮದ ಸೇಚನದಿಂದ ಶುದ್ಧಿಯಾಗುವುದು. ಮರ, ಆನೆಯಕೊಂಬು, ಮೂಳೆ, ಕೋಡು (ಕೊಂಬು) ಇವುಗಳನ್ನು ಕೊರೆಸಿದರೆ ಶುದ್ಧಿಯಾಗುವುದು.

೧೨೦. ಮಣ್ಣಿನಮಡಕೆಗಳು ಒಂದುಬಾರಿ ಅಡಿಗೆ ಮಾಡಿದನಂತರ ಅಶುದ್ಧವೆನಿಸುವುವು. ಭಿಕ್ಷೆಯೆತ್ತಿತಂದ ವಸ್ತುವೂ, ಶಿಲ್ಪಿಯ ಹಸ್ತವೂ, ಮಾರುವುದಕ್ಕಿಟ್ಟಿರುವ ಪದಾರ್ಥವೂ, ಸ್ತ್ರೀಯ ಮುಖವೂ, ಸರ್ವದಾ ಪರಿಶುದ್ಧವಾದುದು.

ರಥ್ಯಾಗಮನವಿಜ್ಞಾನಂ ದಾಸವರ್ಗೇಣ ಸಂಸ್ಕೃತಂ ।
ಪ್ರಾಕ್ಪ್ರಶಸ್ತಂ ಚಿರಾತೀತಮನೇಕಾಂತರಿತಂ ಲಘು ॥ ೧೨೧ ॥

ಅಂತಃ ಪ್ರಭೂತಂ ಬಾಲಂ ಚ ವೃದ್ಧಾಂತರವಿಚೇಷ್ಟಿತಂ ।
ಕರ್ಮಾಂತಾಗಾರಶಾಲಾಶ್ಚ ಸ್ತನದ್ವಯಂ ಶುಚಿ ಸ್ತ್ರಿಯಾಃ ॥ ೧೨೨ ॥

ಶುಚಯಶ್ಚ ತಥೈವಾಪಃ ಸ್ರವಂತ್ಯೋ ಗಂಧವರ್ಜಿತಾಃ ।
ಭೂಮಿರ್ವಿಶುಧ್ಯತೇ ಕಾಲಾದ್ದಾಹಮಾರ್ಜನಗೋಕುಲೈಃ ॥ ೧೨೩ ॥

ಲೇಪಾದುಲ್ಲೇಖನಾತ್ಸೇಕಾದ್ವೇಶ್ಮ ಸಂಮಾರ್ಜನಾದಿನಾ ।
ಕೇಶಕೀಟಾವಪನ್ನೇ ಚ ಗೋಘ್ರಾತೇ ಮಕ್ಷಿಕಾನ್ವಿತೇ ॥ ೧೨೪ ॥

---

೧೨೧. ರಸ್ತೆಯಲ್ಲಿ ಬಿದ್ದುದೂ, ತಿಳಿಯದಿದ್ದುದೂ, ಸೇವಕರಿಂದ ಸಂಸ್ಕರಿಸಲ್ಪಟ್ಟುದೂ, ಮೊದಲು ಒಳ್ಳೆಯದೆನಿಸಿದುದೂ, ಬಹುಕಾಲ ಕಳೆದಿದ್ದುದೂ, ಅನೇಕವಸ್ತುಗಳು ಮರೆಯಾಗಿದ್ದುದೂ, ಅತಿಲಘುವಾದುದೂ,

೧೨೨. ಒಳಗಿರುವುದೂ, ಹೆಚ್ಚಾಗಿರುವುದೂ, ಎಳೆಯದಾದುದೂ, ವೃದ್ಧರ ಮತ್ತು ರೋಗಿಗಳ ಚಲನವಲನವೂ, ಒಳಕೋಣೆಯೂ, ಸ್ತ್ರೀಯರ ಸ್ತನಗಳೂ, ಇವು ಸಹಜವಾಗಿಯೇ ಶುಚಿಗಳಾಗಿರುವುವು.

೧೨೩. ಅದೇರೀತಿ ಹರಿಯುತ್ತಿರುವಂತಹ ವಾಸನೆಯಿಲ್ಲದ ನೀರು ಶುದ್ಧವಾದುದು. ಭೂಮಿಯು ಬಹುಕಾಲ ಬಿಟ್ಟಿರುವುದರಿಂದಲೂ, ಸುಡುವುದರಿಂದಲೂ, ಗುಡಿಸುವುದರಿಂದಲೂ, ಹಸುಗಳನ್ನು ಓಡಾಡಿಸುವುದರಿಂದಲೂ ಶುದ್ಧವಾಗುವುದು.

೧೨೪. ಮನೆಯು ಸಾರಿಸುವಿಕೆಯಿಂದಲೂ, ಉಲ್ಲೇಖನದಿಂದಲೂ, ಅಗೆಯುವಿಕೆಯಿಂದಲೂ, ನೀರು ಚುಮುಕಿಸುವುದರಿಂದಲೂ, ಗುಡಿಸುವುದು ಮೊದಲಾದುವುಗಳಿಂದಲೂ ಶುದ್ಧಿಹೊಂದುವುದು. ಮತ್ತು ಅನ್ನದಲ್ಲಿ ಕೂದಲು, ಹುಳು ಸೇರಿದ್ದರಾಗಲಿ, ಹಸಿವು ಮೂಸಿನೋಡಿದ್ದರಾಗಲಿ-

ಮೃದಂಬು ಭಸ್ಮ ಚಾಪ್ಯನ್ನೇ ಪ್ರಕ್ಷೇಪ್ತವ್ಯಂ ವಿಶುದ್ಧಯೇ ।
ಔದುಂಬರಾಣಾಮಮ್ಲೇನ ವಾರಿಣಾ ತ್ರಪುಸೀಸಯೋಃ ॥ ೧೨೫ ॥

ಭಸ್ಮಾಂಬುಭಿಶ್ಚ ಕಾಂಸ್ಯಾನಾಂ ಶುದ್ಧಿಃ ಪ್ಲಾವೋ ದ್ರವಸ್ಯ ಚ ।
ಅಮೇಧ್ಯಾಕ್ತಸ್ಯ ಮೃತ್ತೋಯೈರ್ಗಂಧಾಪಹರಣೇನ ಚ ॥ ೧೨೬ ॥

ಅನ್ಯೇಷಾಂ ಚೈವ ದ್ರವ್ಯಾಣಾಂ ವರ್ಣಗಂಧಾಂಶ್ಚ ಹಾರಯೇತ್ ।
ಶುಚಿ ಮಾಂಸಂ ತು ಚಾಂಡಾಲಕ್ರವ್ಯಾದ್ಯೈರ್ವಿನಿಪಾತಿತಂ ॥ ೧೨೭ ॥

ರಥ್ಯಾಗತಂ ಚ ತೈಲಾದಿ ಶುಚಿ ಗೋತೃಪ್ತಿದಂ ಪಯಃ ।
ರಜೋಽಗ್ನಿರಶ್ವಗೋಛಾಯಾರಶ್ಮಯಃ ಪವನೋ ಮಹೀ ॥ ೧೨೮ ॥

---

೧೨೫. ನೊಣ ಸೇರಿದ್ದರಾಗಲಿ, ಅವನ್ನು ಶುದ್ಧಿಗೊಳಿಸಲು ಮಣ್ಣಿನ ನೀರನ್ನೂ ಬೂದಿಯನ್ನೂ ಅದರಮೇಲೆ ಹಾಕಬೇಕು. ಅತ್ತಿಕಾಯಿಗಳ ಹುಳಿಯಿಂದಲೂ, ನೀರಿನಿಂದಲೂ ತವರ ಮತ್ತು ಸೀಸಗಳಿಗೆ ಶುದ್ಧಿಯಾಗುವುದು.

೧೨೬. ಭಸ್ಮ ಮತ್ತು ನೀರುಗಳಿಂದ ಕಂಚಿಗೂ, ದ್ರವಪದಾರ್ಥಗಳಿಗೆ ಇತ್ತಲಿಂದತ್ತ ಹರಿಯುವಂತೆ ಮಾಡಿಸಿದರೂ ಶುದ್ಧಿಯಾಗ.ವುದು. ಮತ್ತು ಅಮೇಧ್ಯವು ಮೆತ್ತಿಕೊಂಡ ವಸ್ತುವಿಗೆ ಮಣ್ಣಿನನೀರಿನಿಂದಲೂ, ಆ ವಾಸನೆಯನ್ನು ಹೋಗಲಾಡಿಸುವಿಕೆಯಿಂದಲೂ ಶುದ್ಧಿಯಾಗುವುದು.

೧೨೭. ಮತ್ತು ಇತರ ವಸ್ತುಗಳಿಗೆ ಅಮೇಧ್ಯವು ತಗುಲಿದ್ದರೆ, ಅದರ ಬಣ್ಣವನ್ನೂ ವಾಸನೆಯನ್ನೂ ಹೋಗಲಾಡಿಸಲು ಶುದ್ಧಿಯುಂಟಾಗುವುದು. ಚಂಡಾಲರಿಂದಲೂ, ದುಷ್ಟಮೃಗಗಳಿಂದಲೂ ಕತ್ತರಿಸಲ್ಪಟ್ಟ ಮಾಂಸವು ಶುಚಿಯೆನಿಸುವುದು.

೧೨೮. ಬೀದಿಯಲ್ಲಿ ಬಂದ ಎಣ್ಣೆ ಮೊದಲಾದ ವಸ್ತುಗಳು, ಹಸುವು ತೃಪ್ತಿಯಾದಮೇಲೆ ಕೊಟ್ಟ ಹಾಲು, ಧೂಳು, ಬೆಂಕಿ, ಕುದುರೆ, ಹಸು, ನೆರಳು, ಬೆಳಕು, ಗಾಳಿ, ಭೂಮಿ–

ವಿಪ್ರುಷೋ ಮಕ್ಷಿಕಾದ್ಯಾಶ್ಚ ದುಷ್ಟಸಂಗಾಪದೋಷಿಣಃ ।
ಅಜಾಶ್ವಂ ಮುಖತೋ ಮೇಧ್ಯಂ ನ ಗೋರ್ವತ್ಸಸ್ಯ ಚಾನನಂ ॥ ೧೨೯ ॥

ಮಾತುಃ ಪ್ರಸ್ರವಣೇ ಮೇಧ್ಯಂ ಶಕುನಿಃ ಫಲಪಾತನೇ ।
ಆಸನಂ ಶಯನಂ ಯಾನಂ ತಟೌ ನದ್ಯಾಸ್ತೃಣಾನಿ ಚ ॥ ೧೩೦ ॥

ಸೋಮಸೂರ್ಯಾಂಶುಪವನೈಃ ಶುಧ್ಯಂತೇ ತಾನಿ ಪಣ್ಯವತ್ ।
ರಥ್ಯಾಪಸರ್ಪಣೇ ಸ್ನಾನೇ ಕ್ಷುತ್ವಾಪಾನಾನಾಂ ಚ ಕರ್ಮಸು ॥ ೧೩೧ ॥

ಆಚಾಮೇತ ಯಥಾನ್ಯಾಯಂ ವಾಸಸಃ ಪರಿಧಾಪನೇ ।
ಸ್ಪೃಷ್ಟಾನಾಮಥ ಸಂಸ್ಪರ್ಶೈರ್ದ್ವಿರಥ್ಯಾಕರ್ದಮಾಂಭಸಿ ॥ ೧೩೨ ॥

---

೧೨೯. ಹನಿಗಳು, ನೊಣ ಮೊದಲಾದುವು ಇವೆಲ್ಲವುಗಳಿಗೆ ದುಷ್ಟವಸ್ತು ಸಂಪರ್ಕವಾಗಿದ್ದರೂ ಅದಕ್ಕೆ ದೋಷವಾಗುವುದಿಲ್ಲ. ಆಡು, ಕುದುರೆಗಳು ಮುಖಭಾಗದಲ್ಲಿ ಶುದ್ಧವಾದುವು. ಹಸು ಮತ್ತು ಅದರ ಕರುಗಳು ಮಾತ್ರ ಮುಖಭಾಗದಲ್ಲಿ ಶುದ್ಧವಲ್ಲ.

೧೩೦. ತಾಯಹಾಲು ಶುದ್ಧವಾದುದು. ಹಣ್ಣನ್ನು ಕೆಡಹುವಾಗ ಹಕ್ಕಿಯು ಶುದ್ಧವು. ಮತ್ತು ಮಣೆ, ಹಾಸಿಗೆ, 'ಪಲ್ಲಕ್ಕಿಗಾಡಿ' ಮೊದಲಾದ ಪ್ರಯಾಣೋಪಯೋಗಿ ವಸ್ತುಗಳು, ನದಿಯ ದಡಗಳು, ಹುಲ್ಲು-

೧೩೧. ಇವು ಸೂರ್ಯ ಚಂದ್ರರ ಕಿರಣಗಳಿಂದಲೂ, ಗಾಳಿಯಿಂದಲೂ, ಬೀದಿಯಲ್ಲಿ ಮಾರುವುದಕ್ಕೆ ಇಟ್ಟಿರುವ ವಸ್ತುವಿನಂತೆಯೇ ಶುದ್ಧವೆನಿಸುವುವು. ಬೀದಿಯಿಂದ ಬಂದಾಗ, ಸ್ನಾನಮಾಡಿದಾಗ, ಊಟಮಾಡಿದಾಗ, ನೀರು ಕುಡಿದಾಗ,-

೧೩೨. ಮತ್ತು ಬಟ್ಟೆಗಳನ್ನುಟ್ಟುಕೊಂಡಾಗ ವಿಧ್ಯನುಸಾರವಾಗಿ ಆಚಮನವನ್ನು ಮಾಡಬೇಕು. ಅಸ್ಪೃಶ್ಯರಾದ ಯಾರಾದರೂ ತಗುಲಿಕೊಂಡು ಹೋದರೂ ರಸ್ತೆಯಲ್ಲಿಯ ಕೊಚ್ಚೆಯನೀರಲ್ಲಿ ಹಾಕಿದ್ದರೂ-

ಪಕ್ವೇಷ್ಟಕಚಿತಾನಾಂ ಚ ಮೇಧ್ಯತಾ ವಾಯುಸಂಶ್ರಯಾತ್ ।
ಪ್ರಭೂತೋಪಹತಾದನ್ನಾದಗ್ರಮುದ್ಧೃತ್ಯ ಸಂತ್ಯಜೇತ್ ॥ ೧೩೩ ॥

ಶೇಷಸ್ಯ ಪ್ರೋಕ್ಷಣಂ ಕುರ್ಯಾದಾಚಮ್ಯಾದ್ಭಿಸ್ತಥಾ ಮೃದಾ ।
ಉಪವಾಸಸ್ತ್ರಿರಾತ್ರಂ ತು ದುಷ್ಟಭಕ್ತಾಶಿನೋ ಭವೇತ್ ॥ ೧೩೪ ॥

ಅಜ್ಞಾನೇ ಜ್ಞಾನಪೂರ್ವೇ ತು ತದ್ದೋಷೋಪಶಮೋ ನ ತು ।
ಉದಕ್ಯಾಂ ವಾವಲಗ್ನಾಂ ಚ ಸೂತಿಕಾಂತ್ಯಾವಸಾಯಿನಃ ॥ ೧೩೫ ॥

ಸ್ಪೃಷ್ಟ್ವಾ ಸ್ನಾಯೀತ ಶೌಚಾರ್ಥಂ ತಥೈವ ಮೃತಹಾರಿಣಃ ।
ನಾರಂ ಸ್ಪೃಷ್ಟ್ವಾಸ್ಥಿ ಸಸ್ನೇಹಂ ಸ್ನಾತ್ವಾ ವಿಪ್ರೋ ವಿಶುಧ್ಯತಿ ॥ ೧೩೬ ॥

ಆಚಮ್ಯೈವ ತು ನಿಃಸ್ನೇಹಂ ಗಾಮಾಲಭ್ಯಾರ್ಕಮೀಕ್ಷ್ಯ ವಾ ।
ನ ಲಂಘಯೇತ್ತಥೈವಾಥ ಷ್ಠೀವನೋದ್ವರ್ತನಾನಿ ಚ ॥ ೧೩೭ ॥

---

೧೩೩. ಸುಟ್ಟ ಇಟ್ಟಿಗೆಗಳಿಗೆ ಗಾಳಿಯು ತಗುಲುತ್ತಿರುವುದರಿಂದ ದೋಷವಿಲ್ಲವು. ಅನ್ನವು ಹೆಚ್ಚಾಗಿದ್ದು ಅದಕ್ಕೇನಾದರೂ ಅಶುಚಿಪದಾರ್ಥವು ಸೇರಿದಲ್ಲಿ ಆಭಾಗದ ಮೇಲನ್ನವನ್ನು ತೆಗೆದುಹಾಕಬೇಕು.

೧೩೪. ಬಳಿಕ ಆಚಮನಮಾಡಿ ಉಳಿದ ಅನ್ನದಮೇಲೆ ಮಣ್ಣಿನಿಂದಲೂ ನೀರಿನಿಂದಲೂ ಪ್ರೋಕ್ಷಿಸಲು ಅದು ಶುದ್ಧಿಯಾಗುವುದು. ದುಷ್ಟನಾದವನ ಅನ್ನವನ್ನು ಊಟಮಾಡಿದರೆ ಮೂರುದಿನಗಳು ಉಪವಾಸಮಾಡಬೇಕು.

೧೩೫. ಈ ಪರಿಹಾರವು ತಿಳಿಯದೇ ಮಾಡಿದರೆ ಮಾತ್ರ. ತಿಳಿದು ತಿಳಿದೂ ಮಾಡಿದರೆ ಈ ದೋಷಕ್ಕೆ ಪರಿಹಾರವಿಲ್ಲವು. ಮುಟ್ಟಾದವಳನ್ನೂ ಅವಲಗ್ನೇ (?) ಯನ್ನೂ, ಬಾಣಂತಿಯನ್ನೂ, ಕ್ಷೌರಕನನ್ನೂ–

೧೩೬. ಹೆಣಹೊತ್ತವರನ್ನೂ ಮುಟ್ಟಿದರೆ ಶುದ್ಧಿಯಾಗಲು ಸ್ನಾನಮಾಡಬೇಕು. ಮನುಷ್ಯನ ಮೂಳೆಯನ್ನು ಮುಟ್ಟಿದರೆ ಎಣ್ಣೆಯೊತ್ತಿಕೊಂಡು ನೀರಿನಲ್ಲಿ ಮಿಂದರೆ ಶುದ್ಧಿಹೊಂದುವನು.

೧೩೭. ಎಣ್ಣೆಯಿಲ್ಲದಂತೆ ಸ್ನಾನಮಾಡಿದ ನಂತರ ಆಚಮನಮಾಡಿ ಗೋವನ್ನು ಸ್ಪರ್ಶಿಸಿ, ಸೂರ್ಯನನ್ನು ನೋಡಬೇಕು. ಮತ್ತು ಉಗುಳನ್ನೂ, ಮೈಗೆ ತೊಡೆದುಕೊಂಡು ಬಿಸಾಡಿರುವ ಅನುಲೇಪನಗಳನ್ನೂ ದಾಟಬಾರದು.

ಗೃಹಾದುಚ್ಛಿಷ್ಟವಿಣ್ಮೂತ್ರಂ ಪಾದಾಂಭಸ್ತ್ವತ್ಕ್ಷಿಪೇದ್ಬಹಿಃ ।
ಪಂಚಪಿಂಡಾನನುದ್ಧೃತ್ಯ ನ ಸ್ನಾಯಾತ್ಪರವಾರಿಣಿ ॥ ೧೩೮ ॥

ಸ್ನಾಯೀತ ದೇವಖಾತೇಷು ಗಂಗಾಹ್ರದಸರಿತ್ಸು ಚ ।
ನೋದ್ಯಾನಾದೌ ವಿಕಾಲೇಷು ಪ್ರಾಜ್ಞಸ್ತಿಷ್ಠೇತ್ಕದಾಚನ ॥ ೧೩೯ ॥

ನಾಲಪೇಜ್ಜನವಿದ್ವಿಷ್ಟಾನ್ವೀರಹೀನಾಸ್ತಥಾ ಸ್ತ್ರಿಯಃ ।
ದೇವತಾಪಿತೃಸಚ್ಛಾಸ್ತ್ರಯಜ್ವಿಸಂನ್ಯಾಸಿನಿಂದಕೈಃ ॥ ೧೪೦ ॥

ಕೃತ್ವಾ ತು ಸ್ಪರ್ಶನಾಲಾಪಂ ಶುಧ್ಯತ್ಯರ್ಕಾವಲೋಕನಾತ್ ।
ಅವಲೋಕ್ಯ ತಥೋದಕ್ಯಾಂ ಸಂನ್ಯಸ್ತಂ ಪತಿತಂ ಶವಂ ॥ ೧೪೧ ॥

ವಿಧರ್ಮಿಸೂತಿಕಾಷಂಡವಿವಸ್ತ್ರಾಂತ್ಯಾವಸಾಯಿನಃ ।
ಮೃತನಿರ್ಯಾತಕಾಂಶ್ಚೈವ ಪರದಾರರತಾಶ್ಚ ಯೇ ॥ ೧೪೨ ॥

---

೧೩೮. ಎಂಜಲನ್ನೂ, ಮಲಮೂತ್ರಗಳನ್ನೂ, ಕಾಲುತೊಳೆದ ನೀರನ್ನೂ ಮನೆಯಹೊರಗೆ ಚೆಲ್ಲಬೇಕು. ಪಂಚಪಿಂಡ (?) ಗಳನ್ನು ತೆಗೆದು ಹಾಕದೆ ಮತ್ತೊಬ್ಬರಮನೆಯ ನೀರಲ್ಲಿ ಸ್ನಾನಮಾಡಬಾರದು.

೧೩೯. ದೇವನಿರ್ಮಿತವಾದ ನದೀತಟಾಕಗಳಲ್ಲಿಯೂ ಇಲ್ಲವೇ ಗಂಗಾ ಮೊದಲಾದ ಇತರ ನದಿಗಳಲ್ಲಿಯೂ ಸ್ನಾನಮಾಡಬೇಕು. ಹೊತ್ತಲ್ಲದ ಹೊತ್ತಿನಲ್ಲಿ ಪ್ರಾಜ್ಞನಾದವನು ಎಂದಿಗೂ ಉದ್ಯಾನಾದಿಗಳಲ್ಲಿ ಇರಬಾರದು.

೧೪೦. ಜನರಿಗೆ ದ್ವೇಷಿಗಳಾದವರೊಡನೆಯೂ, ವೀರಪುರುಷರಿಲ್ಲದ ಸ್ತ್ರೀಯರೊಡನೆಯೂ, "ದೇವರು, ಪಿತೃಗಳು, ಸಚ್ಛಾಸ್ತ್ರಗಳು, ಯಾಗ ದೀಕ್ಷಿತರು, ಸಂನ್ಯಾಸಿಗಳು" ಇವರನ್ನು ನಿಂದಿಸುವವರೊಡನೆಯೂ ಮಾತುಕತೆ ಯಾಡಬಾರದು.

೧೪೧. ಮತ್ತು ರಜಸ್ವಲೆಯನ್ನೂ, ಸನ್ನ್ಯಾಸಿಯನ್ನೂ, ಪತಿತನನ್ನೂ, ಹೆಣವನ್ನೂ ಸ್ಪರ್ಶಿಸಿದರಾಗಲಿ, ಮಾತಾಡಿಸಿದರಾಗಲಿ ಉಂಟಾಗುವ ದೋಷ ವನ್ನು ಸೂರ್ಯನ ಸಂದರ್ಶನದಿಂದ ಕಳೆದುಕೊಳ್ಳಬೇಕು.

೧೪೨. "ವಿಧರ್ಮೀಯರು, ಹೊಲೆಮನೆಯವಳು, ನಪುಂಸಕನು, ನಗ್ನನು, ನಾಪಿತನು, ಹೆಣಹೊತ್ತವರು, ಪರದಾರರತರು" ಇವರನ್ನು ಕಂಡರೆ ಸೂರ್ಯನನ್ನು ಸಂದರ್ಶಿಸಿ ಶುದ್ಧಿಪಡೆಯಬೇಕು.

ಏತದೇವ ಹಿ ಕರ್ತವ್ಯಂ ಪ್ರಾಜ್ಞೈಃ ಶೋಧನಮಾತ್ಮನಃ ।
ಅಭೋಜ್ಯಭಿಕ್ಷುಪಾಖಂಡಮಾರ್ಜಾರಖರಕುಕ್ಕುಟಾನ್ ॥ ೧೪೩ ॥

ಪತಿತಾಪವಿದ್ಧಚಾಂಡಾಲಮೃತಾಹಾರಾಂಶ್ಚ ಧರ್ಮವಿತ್ ।
ಸಂಸ್ಪೃಶ್ಯ ಶುಧ್ಯತೇ ಸ್ನಾನಾದುದಕ್ಯಾಗ್ರಾಮಶೂಕರೌ ॥ ೧೪೪ ॥

ತದ್ವಚ್ಚ ಸೂತಿಕಾಶೌಚದೂಷಿತೌ ಪುರುಷಾವಪಿ ।
ಯಸ್ಯ ಚಾನುದಿನಂ ಹಾನಿರ್ಗೃಹೇ ನಿತ್ಯಸ್ಯ ಕರ್ಮಣಃ ॥ ೧೪೫ ॥

ಯಶ್ಚ ಬ್ರಾಹ್ಮಣಸಂತ್ಯಕ್ತಃ ಕಿಲ್ಬಿಷಾಶೀ ನರಾಧಮಃ ।
ನಿತ್ಯಸ್ಯ ಕರ್ಮಣೋ ಹಾನಿಂ ನ ಕುರ್ವೀತ ಕದಾಚನ ॥ ೧೪೬ ॥

---

೧೪೩. ಪ್ರಾಜ್ಞರಾದವರು ಇದೇರೀತಿಯಾಗಿ ತನ್ನನ್ನು ಶುದ್ಧಿಗೊಳಿಸಿ ಕೊಳ್ಳಬೇಕು. ಅಭೋಜ್ಯರಾದವರು, ಭಿಕ್ಷುಗಳು, ಪಾಷಂಡರು ಇವರನ್ನೂ, ಬೆಕ್ಕು, ಕತ್ತೆ, ಕೋಳಿ ಇವುಗಳನ್ನೂ-

೧೪೪ ಪತಿತರು, ಏಟುಬಿದ್ದವರು, ಚಂಡಾಲರು, ಮೃತರಾದವರನ್ನು ಒಯ್ಯುವವರು, ಮುಟ್ಟಾದವಳು, ಊರುಹಂದಿ-ಇವರೆಲ್ಲರನ್ನೂ ಮುಟ್ಟಿದಾಗ ಧರ್ಮಜ್ಞನಾದವನು ಸ್ನಾನಮಾಡಿ ಶುದ್ಧಿಹೊಂದುವನು.

೧೪೫. ಅದೇರೀತಿ ಜಾತಾಶೌಚ ಮೃತಾಶೌಚವಿರುವವರನ್ನು ಮುಟ್ಟಿದಾಗಲೂ ಸ್ನಾನಮಾಡಿ ಶುದ್ಧಿಯಾಗಬೇಕು. ಯಾವನ ಮನೆಯಲ್ಲಿ ನಿತ್ಯಕರ್ಮಗಳು ಪ್ರತಿನಿತ್ಯವೂ ನಡೆಯುವುದಿಲ್ಲವೋ-ಅವನನ್ನೂ-

೧೪೬. ಯಾವ ನರಾಧಮನು ಪಾಪಕಾರ್ಯಗಳಲ್ಲೇ ಆಸಕ್ತನಾಗಿ ಬ್ರಾಹ್ಮಣರಿಂದ ಪರಿತ್ಯಜಿಸಲ್ಪಟ್ಟಿರುವನೋ ಅಂಥವನು ನಿತ್ಯವೂ ನಿತ್ಯಕರ್ಮಗಳನ್ನು ಬಿಡದೇ ಇದ್ದರೂ–ಆ ಪಾಪಿಯನ್ನೂ ಮುಟ್ಟಿಸಿಕೊಂಡರೆ ಸ್ನಾನ ಮಾಡಬೇಕು.

ತಸ್ಯ ತ್ವಕರಣಂ ವಕ್ಷ್ಯೇ ಕೇವಲಂ ಮೃತಜನ್ಮಸು ।
ದಶಾಹಂ ಬ್ರಾಹ್ಮಣಸ್ತಿಷ್ಠೇದ್ದಾನಹೋಮವಿವರ್ಜಿತಃ ॥ ೧೪೭ ॥

ಕ್ಷತ್ರಿಯೋ ದ್ವಾದಶಾಹಂ ಚ ವೈಶ್ಯೋ ಮಾಸಾರ್ಧಮೇವ ಚ ।
ಶೂದ್ರಶ್ಚ ಮಾಸಮಾಸೀತ ನಿಜಕರ್ಮವಿವರ್ಜಿತಃ ॥ ೧೪೮ ॥

ತತಃ ಪರಂ ನಿಜಂ ಕರ್ಮ ಕುರ್ಯುಃ ಸರ್ವೇ ಯಥೋಚಿತಂ ।
ಪ್ರೇತಾಯ ಸಲಿಲಂ ದೇಯಂ ಬಹಿರ್ಗತ್ವಾ ತು ಗೋತ್ರಕೈಃ ॥ ೧೪೯ ॥

ಪ್ರಥಮೇಽಹ್ನಿ ಚತುರ್ಥೇ ಚ ಸಪ್ತಮೇ ನವಮೇ ತಥಾ ।
ತಸ್ಯಾಸ್ಥಿಸಂಚಯಃ ಕಾರ್ಯಶ್ಚತುರ್ಥೇಽಹನಿ ಗೋತ್ರಕೈಃ ॥ ೧೫೦ ॥

ಊರ್ಧ್ವಂ ಸಂಚಯನಾತ್ತೇಷಾಮಂಗಸ್ಪರ್ಶೋ ವಿಧೀಯತೇ ।
ಗೋತ್ರಕೈಸ್ತು ಕ್ರಿಯಾಃ ಸರ್ವಾಃ ಕಾರ್ಯಾಃ ಸಂಚಯನಾತ್ಪರಂ ॥ ೧೫೧ ॥

---

೧೪೭. ಆ ನಿತ್ಯಕರ್ಮವನ್ನು ಯಾವಾಗ ಮಾಡದಿರಬೇಕೆಂದರೆ, ಜಾತಾಶೌಚ ಮೃತಾಶೌಚ ಸಮಯಗಳಲ್ಲಿ ಮಾತ್ರ. ಬ್ರಾಹ್ಮಣನು ಆ ಸಮಯದಲ್ಲಿ ದಾನವನ್ನೂ ಹೋಮವನ್ನೂ ಹತ್ತುದಿನಗಳು ಮಾತ್ರ ಮಾಡದಿರಬೇಕು. (ಸಂಧ್ಯಾವಂದನೆಯುಂಟು)

೧೪೮. ಕ್ಷತ್ರಿಯನು ಹನ್ನೆರಡು ದಿನಗಳೂ, ವೈಶ್ಯನು ಹದಿನೈದು ದಿನಗಳೂ, ಶೂದ್ರನು ಒಂದು ತಿಂಗಳೂ ಕರ್ಮವನ್ನು ಬಿಟ್ಟಿರಬೇಕು.

೧೪೯. ಈ ದಿನಗಳಾದಮೇಲೆ ಅವರೆಲ್ಲರೂ ತಮ್ಮ ನಿತ್ಯಕರ್ಮಗಳನ್ನು ಅವರಿಗೆ ವಿಹಿತವಾಗಿರುವಂತೆ ನೆರವೇರಿಸಬೇಕು. ಸತ್ತವನಿಗೆ ಅವನ ವಂಶೀಯರು ಊರಹೊರಗೆ ಹೋಗಿ ಜಲಕ್ರಿಯೆಯನ್ನು ಮಾಡಬೇಕು.

೧೫೦. ಮೊದಲನೆಯದಿನವಾಗಲೀ, ನಾಲ್ಕು, ಏಳು, ಒಂಭತ್ತನೆಯ ದಿನವಾಗಲಿ ಆ ಜಲಕ್ರಿಯೆಯನ್ನು ಮಾಡಬೇಕು. ಸತ್ತದಿವಸದಿಂದ ನಾಲ್ಕನೆಯ ದಿವಸದಲ್ಲಿ ಅವನ ಅಸ್ಥಿಗಳ ಸಂಚಯನವನ್ನು ಮಾಡಬೇಕು.

೧೫೧. ಸಂಚಯನಾನಂತರ ಅವರ ಅಂಗಸ್ಪರ್ಶವನ್ನು ಮಾಡಬಹುದು. ಮೃತನ ವಂಶೀಯರು ಆ ಸಂಚಯನಾನಂತರದಲ್ಲಿ ಇತರ ಔರ್ಧ್ವದೈಹಿಕ ಕ್ರಿಯೆಗಳನ್ನು ನಡೆಸಬೇಕು.

ಸ್ಪರ್ಶ ಏವ ಸಪಿಂಡಾನಾಂ ಮೃತಾಹನಿ ತಥೋಭಯೋಃ ।
ಅನ್ವರ್ಥಮಿಚ್ಛಯಾ ಶಸ್ತ್ರರಜ್ಜುಬಂಧನವಹ್ನಿಷು ॥ ೧೫೨ ॥

ವಿಷಪ್ರತಾಪಾದಿಮೃತೇ ಪ್ರಾಯಾನಾಶಕಯೋರಪಿ ।
ಬಾಲೇ ದೇಶಾಂತರಸ್ಥೇ ಚ ತಥಾ ಪ್ರವ್ರಜಿತೇ ಮೃತೇ ॥ ೧೫೩ ॥

ಸದ್ಯಃ ಶೌಚಂ ಮನುಷ್ಯಾಣಾಂ ತ್ರ್ಯಹಮುಕ್ತಮಶೌಚಕಂ ।
ಸಪಿಂಡಾನಾಂ ಸಪಿಂಡಸ್ತು ಮೃತೇಽನ್ಯಸ್ಮಿನ್ಮೃತೋ ಯದಿ ॥ ೧೫೪ ॥

ಪೂರ್ವಶೌಚಂ ಸಮಾಖ್ಯಾತಂ ಕಾರ್ಯಾಸ್ತತ್ರ ದಿನಕ್ರಿಯಾಃ ।
ಏಷ ಏವ ವಿಧಿರ್ದೃಷ್ಟೋ ಜನ್ಮನ್ಯಪಿ ಹಿ ಸೂತಕೇ ॥ ೧೫೫ ॥

---

೧೫೨. ಆ ಜ್ಞಾತಿಗಳಲ್ಲಿ ಪರಸ್ಪರ ಸ್ಪರ್ಶವು ಆ ಮೃತದಿವಸಗಳಲ್ಲಿ ನಿಷಿದ್ಧವಲ್ಲವು. ಮತ್ತು ಯಾರಾದರೂ ತಮ್ಮ ಇಚ್ಛೆಯಿಂದ ಶಸ್ತ್ರಗಳಿಂದಾಗಲಿ ನೇಣುಹಾಕಿಕೊಂಡಾಗಲಿ, ಬೆಂಕಿಯಲ್ಲಿ ಬಿದ್ದಾಗಲಿ–

೧೫೩. ವಿಷ ಕುಡಿದಾಗಲಿ, ಇತರ ಸಾಹಸಕೃತ್ಯದಿಂದಾಗಲಿ ಸತ್ತುವೇ ಆದರೆ ಮತ್ತು ಪ್ರಾಯೋಪವೇಶದಿಂದಾಗಲಿ, ಅನಶನದಿಂದಾಗಲಿ ಯಾರಾದರೂ ಸತ್ತುದೇ ಆದರೆ ಮತ್ತು ಎಳೆಹುಡುಗನೂ, ದೇಶಾಂತರದಲ್ಲಿರುವವನೂ, ಸನ್ನ್ಯಾಸ ಸ್ವೀಕರಿಸಿದವನೂ ಸತ್ತುದೇ ಆದರೆ

೧೫೪. ಅವರಿಗೆ ಸದ್ಯಃ ಶುದ್ಧಿಯೆಂದೂ ಇಲ್ಲವೇ ಮೂರುದಿನಗಳು ಅಶೌಚವೆಂದೂ ಹೇಳಲ್ಪಟ್ಟಿರುವುದು. ದಾಯಾದಿಗಳಲ್ಲಿ ಯಾರಾದರೂ ಒಬ್ಬರು ಸತ್ತ ಸೂತಕದಲ್ಲಿ ಮತ್ತೊಬ್ಬನು ಸತ್ತರೆ–ಆಗ

೧೫೫. ಮೊದಲಿನ ಆಶೌಚವನ್ನು ಪರಿಗಣಿಸಿಯೇ ಶೌಚಾದಿಗಳನ್ನು ನಿರ್ಣಯಿಸಿ ಆಯಾದಿನಗಳ ಕರ್ತವ್ಯಗಳನ್ನು ನೆರವೇರಿಸಬೇಕು. ಇದೇ ಕ್ರಮವೇ ಜಾತಾಶೌಚಸಂದರ್ಭದಲ್ಲಿಯೂ ಅನುಸರಿಸಲ್ಪಡಬೇಕು.

ಸಪಿಂಡಾನಾಂ ಸಪಿಂಡೇಷು ಯಥಾವತ್ಸೋದಕೇಷು ಚ |
ಪುತ್ರೇ ಜಾತೇ ಪಿತುಃ ಸ್ನಾನಂ ಸಚೈಲಸ್ಯ ವಿಧೀಯತೇ ॥ ೧೫೬ ॥

ತತ್ರಾಪಿ ಯದಿ ವಾನ್ಯಸ್ಮಿನ್ನನುಯಾತಸ್ತತಃ ಪರಂ |
ತತ್ರಾಪಿ ಶುದ್ಧಿರುದಿತಾ ಪೂರ್ವಜನ್ಮವತೋ ದಿನೈಃ ॥ ೧೫೭ ॥

ದಶದ್ವಾದಶಮಾಸಾರ್ಧಮಾಸಸಂಖ್ಯೈರ್ದಿನೈರ್ಗತೈಃ |
ಸ್ವಾಃ ಸ್ವಾಃ ಕರ್ಮಕ್ರಿಯಾಃ ಕುರ್ಯುಃ ಸರ್ವೇ ವರ್ಣಾ ಯಥಾವಿಧಿ ॥೧೫೮॥

ಪ್ರೇತಮುದ್ದಿಶ್ಯ ಕರ್ತವ್ಯಮೇಕೋದ್ದಿಷ್ಟಮತಃ ಪರಂ |
ದಾನಾನಿ ಚೈವ ದೇಯಾನಿ ಬ್ರಾಹ್ಮಣೇಭ್ಯೋ ಮನೀಷಿಭಿಃ ॥ ೧೫೯ ॥

---

೧೫೬. (ದಾಯಾದಿಗಳಲ್ಲಿ ಒಬ್ಬರ ಹೆಂಡತಿ ಹೆತ್ತಿರುವ ಸಮಯದಲ್ಲಿಯೇ ಮತ್ತೊಬ್ಬರ ಹೆಂಡತಿಯೂ ಹೆತ್ತರೆ ಮೊದಲಿನ ಜಾತಾಶೌಚದೊಂದಿಗೇ ಎರಡನೆಯದೂ ಕಳೆದುಹೋಗುವುದು. ಅನಂತರ ಎಂದಿನಂತೆ ನಿತ್ಯಕರ್ಮಗಳನ್ನಾಚರಿಸಬೇಕು.) ಪುತ್ರಜನನವಾದನಂತರ ತಂದೆಯಾದವನು ಸಚೇಲವಾಗಿ (ಉಟ್ಟಬಟ್ಟೆ ಸಹಿತ) ಸ್ನಾನಮಾಡಬೇಕು.

೧೫೭. ಈ ಜಾತಾಶೌಚಸಂದರ್ಭದಲ್ಲಿಯೂ (ಒಬ್ಬರಿಗೆ ಜಾತಾಶೌಚ ಪ್ರಾಪ್ತವಾಗಿದ್ದು ಕೆಲದಿನಗಳಮೇಲೆ ಬೇರೊಂದು ಜಾತಾಶೌಚವು ಪ್ರಾಪ್ತವಾದರೆ ಮೊದಲು ಪ್ರಾಪ್ತವಾದ ಜಾತಾಶೌಚದ ದಿನಗಳನ್ನು ಅನುಸರಿಸಿಯೇ) ಹಿಂದಿನಂತೆಯೇ ಆಶೌಚದ ಗಣನೆಯು.

೧೫೮. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು, ಕ್ರಮವಾಗಿ ಹತ್ತು, ಹನ್ನೆರಡು, ಹದಿನೈದು ದಿನಗಳು ಮತ್ತು ತಿಂಗಳು (ಕಾಲ) ಕಳೆದನಂತರ ತಮ್ಮ ತಮ್ಮ ವರ್ಣೋಚಿತವಾದ ನಿತ್ಯಕರ್ಮಗಳನ್ನು ವಿಧ್ಯನುಸಾರ ಆಚರಿಸಬೇಕು.

೧೫೯. ಈ ದಿನಗಳು ಕಳೆದನಂತರ ಸತ್ತವನಿಗೆ ಏಕೋದ್ದಿಷ್ಟ ಶ್ರಾದ್ಧ ಮಾಡಬೇಕು. ಮತ್ತು ವಿವೇಕಿಗಳಾದವರು ಬ್ರಾಹ್ಮಣರಿಗೆ ದಾನಗಳನ್ನು ಕೊಡಬೇಕು.

ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ ।
ತತ್ತದ್ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ ॥ ೧೬೦ ॥

ಪೂರ್ಣೈಸ್ತು ದಿವಸೈಃ ಸ್ಪೃಷ್ಟ್ವಾ ಸಲಿಲಂ ವಾಹನಾಯುಧೈಃ ।
ದತ್ತಪ್ರೇತೋದಪಿಂಡಾಶ್ಚ ಸರ್ವೇ ವರ್ಣಾಃ ಕೃತಕ್ರಿಯಾಃ ॥ ೧೬೧ ॥

ಕುರ್ಯುಃ ಸಮಗ್ರಾಃ ಶುಚಿನಃ ಪರತ್ರೇಹ ಚ ಭೂತಯೇ ।
ಅಧ್ಯೇತವ್ಯಾ ತ್ರಯೀ ನಿತ್ಯಂ ಭವಿತವ್ಯಂ ವಿಪಶ್ಚಿತಾ ॥ ೧೬೨ ॥

ಧರ್ಮತೋ ಧನಮಾಹಾರ್ಯಂ ಯಷ್ಟವ್ಯಂ ಚಾಪಿ ಯತ್ನತಃ ।
ಯೇನ ಪ್ರಕುಪಿತೋ ನಾತ್ಮಾ ಜುಗುಪ್ಸಾಮೇತಿ ಭೋ ದ್ವಿಜಾಃ ॥ ೧೬೩ ॥

---

೧೬೦. ಸತ್ತವನಿಗೆ ಪ್ರಪಂಚದಲ್ಲಿ ಯಾವುದು ಇಷ್ಟವಾಗಿತ್ತೋ ಮತ್ತು ಮನೆಯಲ್ಲಿ ಯಾವುದು ಪ್ರಿಯವಾಗಿತ್ತೋ ಆಯಾವಸ್ತುಗಳನ್ನು ಗುಣವಂತನಾದವನಿಗೆ ದಾನ ಕೊಡಬೇಕು. ಹಾಗಾದರೆ ಅವನು ಬಯಸಿದಂತೆ ಅವನು ಕೊಟ್ಟ ವಸ್ತುಗಳು ಅಕ್ಷಯವಾಗುವುವು.

೧೬೧. ಅಶೌಚದಿವಸಗಳು ಮುಗಿದನಂತರ ವಾಹನ ಮತ್ತು ಆಯುಧಗಳಿಂದ ನೀರನ್ನು ಸ್ಪರ್ಶಿಸಿ (?) ಸತ್ತವನಿಗೆ ತಿಲೋದಕವನ್ನೂ ಪಿಂಡಗಳನ್ನೂ ದಾನಮಾಡಿದನಂತರ ಎಲ್ಲ ವರ್ಣಗಳವರೂ ಕೃತಕೃತ್ಯರಾಗುವರು.

೧೬೨. ಆದುದರಿಂದ ಚತುರ್ವರ್ಣದವರೂ ಶುಚಿಗಳಾಗಿ ತಮ್ಮ ಕರ್ಮಗಳನ್ನು ಸಮಗ್ರವಾಗಿ ನೆರವೇರಿಸಬೇಕು. ಹಾಗಾದಲ್ಲಿ ಅವರಿಗೆ ಇಹದಲ್ಲಿಯೂ ಪರದಲ್ಲಿಯೂ ಸುಖವುಂಟಾಗುವುದು. ಪ್ರತಿನಿತ್ಯವೂ ವೇದವನ್ನು ಅಧ್ಯಯನ ಮಾಡಬೇಕು ಮತ್ತು ಪ್ರತಿಯೊಬ್ಬನೂ ವಿದ್ವಾಂಸನಾಗಬೇಕು.

೧೬೩. ಧರ್ಮದಿಂದ ಧನವನ್ನು ಸಂಪಾದಿಸಬೇಕು- ಆ ಧನದಿಂದ ಪ್ರಯತ್ನಪೂರ್ವಕವಾಗಿ ಯಾಗವನ್ನು ಮಾಡಲೂಬೇಕು. ಎಲೈ ದ್ವಿಜರಿರಾ! ಹೀಗಾದರೆ ಮಾತ್ರ ಆತ್ಮವು ಕೋಪದಿಂದ ಜುಗುಪ್ಸೆಹೊಂದುವುದಿಲ್ಲ.

ತತ್ಕರ್ತವ್ಯಮಶಂಕೇನ ಯನ್ನ ಗೋಪ್ಯಂ ಮಹಾಜನೈಃ ।
ಏವಮಾಚರತೋ ವಿಪ್ರಾಃ ಪುರುಷಸ್ಯ ಗೃಹೇ ಸತಃ ॥ ೧೬೪ ॥

ಧರ್ಮಾರ್ಥಕಾಮಂ ಸಂಪ್ರಾಪ್ಯ ಪರತ್ರೇಹ ಚ ಶೋಭನಂ ।
ಇದಂ ರಹಸ್ಯಮಾಯುಷ್ಯಂ ಧನ್ಯಂ ಬುದ್ಧಿವಿವರ್ಧನಂ ॥ ೧೬೫ ॥

ಸರ್ವಪಾಪಹರಂ ಪುಣ್ಯಂ ಶ್ರೀಪುಷ್ಟ್ಯಾರೋಗ್ಯದಂ ಶಿವಂ ।
ಯಶಃಕೀರ್ತಿಪ್ರದಂ ನೃಣಾಂ ತೇಜೋಬಲವಿವರ್ಧನಂ ॥ ೧೬೬ ॥

ಅನುಷ್ಠೇಯಂ ಸದಾ ಪುಂಭಿಃ ಸ್ವರ್ಗಸಾಧನಮುತ್ತಮಂ ।
ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚ ಮುನಿಸತ್ತಮಾಃ ॥ ೧೬೭ ॥

---

೧೬೪. ಮಾಡುವ ಕೆಲಸವನ್ನು ನಿರ್ಭಯವಾಗಿ ಮಾಡಬೇಕು. ಹತ್ತು ಜನರಿಗೆ ತಾನು ಮಾಡುವ ಕೆಲಸವು ಗೊತ್ತಾಗಬೇಕೇ ಹೊರತು ಗುಟ್ಟಾಗಿರಬಾರದು. ಎಲೈ ವಿಪ್ರರಿರಾ! ಈರೀತಿಯಾಗಿ ಗೃಹಸ್ಥಾಶ್ರಮದಲ್ಲಿರುವ ಪುರುಷನು–

೧೬೫. ಧರ್ಮವನ್ನೂ ಅರ್ಥವನ್ನೂ ಕಾಮವನ್ನೂ ಆಚರಿಸುತ್ತಿದ್ದರೆ ಇಹದಲ್ಲಿಯೂ ಪರದಲ್ಲಿಯೂ ಅವನಿಗೆ ಒಳ್ಳೆಯದಾಗುವುದು. ನಾನು ಹೇಳಿದ ಈ ವಿಷಯವೆಲ್ಲವೂ ರಹಸ್ಯವಾದುದು. ಆಯುಸ್ಸನ್ನು ಹೆಚ್ಚಿಸುವಂಥಹುದು. ಧನ್ಯವಾದುದು. ಬುದ್ಧಿಯನ್ನು ಬೆಳೆಸುವಂಥಹುದು.

೧೬೬. ಮತ್ತು ಮಾನವರ ಸಕಲ ಪಾಪಗಳನ್ನೂ ಪರಿಹರಿಸುವುದು. ಅವರಿಗೆ ಐಶ್ವರ್ಯವನ್ನೂ ಪುಷ್ಟಿಯನ್ನೂ ಆರೋಗ್ಯವನ್ನೂ ಉಂಟುಮಾಡುವುದು. ಮತ್ತು ಯಶಸ್ಸನ್ನೂ ಕೀರ್ತಿಯನ್ನೂ ಕೊಡುವುದಲ್ಲದೆ ತೇಜಸ್ಸನ್ನೂ ಬಲವನ್ನೂ ಹೆಚ್ಚಿಸುವುದು. ಮತ್ತು ಪಾವನವಾದುದು. ಮಂಗಲಕರವಾದುದು.

೧೬೭. ಎಲೈ ಮುನಿಶ್ರೇಷ್ಠರಿರಾ! ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ, ಸ್ವರ್ಗಕ್ಕೆ ಸಾಧನವಾದ ಈ ಉತ್ತಮೋತ್ತಮವೆನಿಸಿದ ಸದಾಚಾರವನ್ನು ಸರ್ವದಾ ಅನುಷ್ಠಾನದಲ್ಲಿ ತರಬೇಕು.

ಜ್ಞಾತವ್ಯಂ ಸುಪ್ರಯತ್ನೇನ ಸಮ್ಯಕ್ಶ್ರೇಯೋಽಭಿಕಾಂಕ್ಷಿಭಿಃ ।
ಜ್ಞಾತ್ವೈವ ಯಃ ಸದಾ ಕಾಲಮನುಷ್ಠಾನಂ ಕರೋತಿ ವೈ ॥ ೧೬೮ ॥

ಸರ್ವಪಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ।
ಸಾರಾತ್ಸಾರತರಂ ಚೇದಮಾಖ್ಯಾತಂ ದ್ವಿಜಸತ್ತಮಾಃ ॥ ೧೬೯ ॥

ಶ್ರುತಿಸ್ಮೃತ್ಯುದಿತಂ ಧರ್ಮಂ ನ ದೇಯಂ ಯಸ್ಯ ಕಸ್ಯಚಿತ್ ।
ನ ನಾಸ್ತಿಕಾಯ ದಾತವ್ಯಂ ನ ದುಷ್ಟಮತಯೇ ದ್ವಿಜಾಃ ।
ನ ದಾಂಭಿಕಾಯ ಮೂರ್ಖಾಯ ನ ಕುತರ್ಕಪ್ರಲಾಪಿನೇ ॥ ೧೭೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಸದಾಚಾರನಿರೂಪಣಂ ನಾಮೈಕವಿಂಶಾಧಿಕ-
ದ್ವಿಶತತಮೋಽಧ್ಯಾಯಃ

---

೧೬೮. ತಾನು ಶ್ರೇಯಸ್ಸನ್ನು ಪಡೆಯಬೇಕೆಂಬಾಸೆಯುಳ್ಳವನು ಪ್ರಯತ್ನಪೂರ್ವಕವಾಗಿ ಇದೆಲ್ಲವನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕು. ಆರೀತಿ ತಿಳಿದುಕೊಂಡೇ ಯಾವನು ಸರ್ವಕಾಲದಲ್ಲಿಯೂ ತನ್ನ ಆಚರಣೆಯಲ್ಲಿ ತರುವನೋ–

೧೬೯. ಅವನು ತನ್ನ ಸಕಲ ಪಾಪಗಳಿಂದಲೂ ಬಿಡಲ್ಪಟ್ಟು ಸ್ವರ್ಗಲೋಕದಲ್ಲಿ ವಿರಾಜಿಸುವನು. ಎಲೈ ಬ್ರಾಹ್ಮಣೋತ್ತಮರಿರಾ! ಈ ಆಖ್ಯಾನವು ಬಹುಸಾರವತ್ತಾದುದು. ಇದನ್ನು ನಿಮಗೆ ತಿಳಿಸಿದೆನು.

೧೭೦. ಶ್ರುತಿ ಸ್ಮೃತಿಗಳಿಂದ ವಿಹಿತವಾದ ಈ ಧರ್ಮವನ್ನು ಯಾವೆಂದವರಿಗೆ (ಸಾಮಾನ್ಯ ಮನುಷ್ಯನಿಗೆ) ಕೊಟ್ಟುಬಿಡಬಾರದು. ನಾಸ್ತಿಕನಿಗೂ, ಕೆಟ್ಟಬುದ್ಧಿಯುಳ್ಳವನಿಗೂ, ಡಂಭಾಚಾರದವನಿಗೂ, ಮೂರ್ಖನಿಗೂ, ಕುಯುಕ್ತಿಗಳಿಂದ ಪ್ರಲಪಿಸುವವನಿಗೂ ಈ ಧರ್ಮವನ್ನು ಉಪದೇಶಿಸಬಾರದು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಸದಾಚಾರನಿರೂಪಣವೆಂಬ
ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ದ್ವಾವಿಂಶಾಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಶ್ರೋತುಮಿಚ್ಛಾಮಹೇ ಬ್ರಹ್ಮನ್ವರ್ಣಧರ್ಮಾನ್ವಿಶೇಷತಃ ।
ಚತುರಾಶ್ರಮಧರ್ಮಾಂಶ್ಚ ದ್ವಿಜವರ್ಯ ಬ್ರವೀಹಿ ತಾನ್ ॥ ೧ ॥

॥ ವ್ಯಾಸ ಉವಾಚ ॥

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಯಥಾಕ್ರಮಂ ।
ಶೃಣುಧ್ವಂ ಸಂಯತಾ ಭೂತ್ವಾ ವರ್ಣಧರ್ಮಾನ್ಮಯೋದಿತಾನ್ ॥ ೨ ॥

ಇನ್ನೂರಿಪ್ಪತ್ತೆರಡನೆಯ ಅಧ್ಯಾಯವು

೧. ಮತ್ತೆ ಆ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು "ಓ ದ್ವಿಜ ವರ್ಯಾ! ನಾವು ವರ್ಣಧರ್ಮಗಳನ್ನೂ, ಆಶ್ರಮಧರ್ಮಗಳನ್ನೂ ಚೆನ್ನಾಗಿ ಕೇಳಬೇಕೆಂದಿದ್ದೇವೆ ಅದನ್ನು ನಮಗೆ ತಿಳಿಸು" ಎಂದು ಪ್ರಶ್ನಿಸಿದರು. ಆಗ ವ್ಯಾಸನಿಂತೆಂದು ನುಡಿಯತೊಡಗಿದನು.

೨. ಎಲೈ ಮುನಿಗಳಿರಾ! ಮನಸ್ಸಿಟ್ಟು ಕೇಳಿರಿ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ. ಶೂದ್ರರೆಂಬ ಚತುರ್ವರ್ಣಗಳವರ ಆಯಾ ವರ್ಣಕ್ಕುಚಿತವಾದ ಧರ್ಮಗಳನ್ನು ಕ್ರಮವಾಗಿ ನಾನು ತಿಳಿಸುವೆನು. ಕೇಳಿರಿ—

ದಾನದಯಾತಪೋದೇವಯಜ್ಞಸ್ವಾಧ್ಯಾಯತತ್ಪರಃ ।
ನಿತ್ಯೋದಕೀ ಭವೇದ್ವಿಪ್ರಃ ಕುರ್ಯಾಚ್ಚಾಗ್ನಿಪರಿಗ್ರಹಂ ॥ ೩ ॥

ವೃತ್ತ್ಯರ್ಥಂ ಯಾಜಯೇತ್ತ್ವನ್ಯಾನ್ದ್ವಿಜಾನಧ್ಯಾಪಯೇತ್ತಥಾ ।
ಕುರ್ಯಾತ್ಪ್ರತಿಗ್ರಹದಾನಂ ಯಜ್ಞಾರ್ಥಂ ಜ್ಞಾನತೋ ದ್ವಿಜಾಃ ॥ ೪ ॥

ಸರ್ವಲೋಕಹಿತಂ ಕುರ್ಯಾನ್ನಾಹಿತಂ ಕಸ್ಯಚಿದ್ದ್ವಿಜಾಃ ।
ಮೈತ್ರೀ ಸಮಸ್ತಸತ್ತ್ವೇಷು ಬ್ರಾಹ್ಮಣಸ್ಯೋತ್ತಮಂ ಧನಂ ॥ ೫ ॥

ಗವಿ ರತ್ನೇ ಚ ಪಾರಕ್ಯೇ ಸಮಬುದ್ಧಿರ್ಭವೇದ್ವಿಜಾಃ ।
ಋತಾವಭಿಗಮಃ ಪತ್ನ್ಯಾಂ ಶಸ್ಯತೇ ವಾಽಸ್ಯ ಭೋ ದ್ವಿಜಾಃ ॥ ೬ ॥

---

೩. ಬ್ರಾಹ್ಮಣನು ದಾನ, ದಯೆ, ತಪಸ್ಸು, ದೇವಪೂಜೆ, ಯಜ್ಞಯಾಗಗಳು, ವೇದಾಧ್ಯಯನ ಇವುಗಳಲ್ಲಿಯೇ ಆಸಕ್ತಿವಹಿಸಿರಬೇಕು. ಮತ್ತು ಪ್ರತಿನಿತ್ಯವೂ ಸ್ನಾನಮಾಡುತ್ತಿರಬೇಕು. ಅಗ್ನಿಸಾಕ್ಷಿಕವಾಗಿ ಮದುವೆಯಾಗಬೇಕು.

೪. ಆತನು ಜೀವನನಿರ್ವಾಹಕ್ಕಾಗಿ ಇತರ ದ್ವಿಜರಕೈಲಿ ಯಾಗಾದಿಗಳನ್ನು ಮಾಡಿಸಬೇಕು. ಮತ್ತು ಮತ್ತೊಬ್ಬರಿಗೆ ಅಧ್ಯಯನ ಮಾಡಿಸಬೇಕು. ಯಾರಾದರೂ ದಾನವಿತ್ತರೆ ಅದನ್ನು ಸ್ವೀಕರಿಸಬೇಕು. ಆದರೆ ತನಗೋಸ್ಕರವಾಗಿ ಅಲ್ಲ, ಯಜ್ಞಕ್ಕೋಸ್ಕರವಾಗಿ.

೫. ಎಲೈ ದ್ವಿಜೋತ್ತಮರಿರಾ! ಆ ಬ್ರಾಹ್ಮಣನು ತನ್ನ ಜ್ಞಾನದಿಂದ ಸಕಲರಿಗೂ ಹಿತವಾಗುವಂತಹ ಕೆಲಸವನ್ನು ಮಾಡಬೇಕು. ಯಾರಿಗೂ ಕೆಡುಕನ್ನುಂಟುಮಾಡಬಾರದು. ಬ್ರಾಹ್ಮಣನಾದವನಿಗೆ ಸಕಲ ಪ್ರಾಣಿಗಳಲ್ಲಿಯೂ ಇರತಕ್ಕ ಸ್ನೇಹವೇ ಧನವಲ್ಲದೆ ಮತ್ತೆ ಯಾವುದೂ ಅಲ್ಲವು.

೬. ಹಸುವಿನಲ್ಲಿಯೂ, ರತ್ನದಲ್ಲಿಯೂ, ಪಾರಕ್ಯದಲ್ಲಿಯೂ (?) ಅವನು ಸಮಬುದ್ಧಿಯುಳ್ಳವನಾಗಿರಬೇಕು. ಅವನು ತನ್ನ ಪತ್ನಿಯಲ್ಲಿಯೇ ನಿರತನಾಗಿರಬೇಕು. ಅದೂ ಋತುಕಾಲದಲ್ಲಿಯೇ ಹೊರತು ಬೇರೆ ಸಮಯದಲ್ಲ.

ದಾನಾನಿ ದದ್ಯಾದಿಚ್ಛಾತೋ ದ್ವಿಜೇಭ್ಯಃ ಕ್ಷತ್ರಿಯೋಽಪಿ ಹಿ ।
ಯಜೇಚ್ಚ ವಿವಿಧೈರ್ಯಜ್ಞೈರಧೀಯೀತ ಚ ಭೋ ದ್ವಿಜಾಃ ॥ ೭ ॥

ಶಸ್ತ್ರಾಜೀವೋ ಮಹೀರಕ್ಷಾ ಪ್ರವರಾ ತಸ್ಯ ಜೀವಿಕಾ ।
ತಸ್ಯಾಪಿ ಪ್ರಥಮೋ ಕಲ್ಪೋ ಪೃಥಿವೀಪರಿಪಾಲನಂ ॥ ೮ ॥

ಧರಿತ್ರೀಪಾಲನೇನೈವ ಕೃತಕೃತ್ಯಾ ನರಾಧಿಪಾಃ ।
ಭವಂತಿ ನೃಪತೇಃ ರಕ್ಷಾ ಯತೋ ಯಜ್ಞಾದಿಕರ್ಮಣಾಂ ॥ ೯ ॥

ದುಷ್ಟಾನಾಂ ಶಾಸನಾದ್ರಾಜಾ ಶಿಷ್ಟಾನಾಂ ಪರಿಪಾಲನಾತ್ ।
ಪ್ರಾಪ್ನೋತ್ಯಭಿಮತಾಂಲ್ಲೋಕಾನ್ವರ್ಣಸಂಸ್ಥಾಪಕೋ ನೃಪಃ ॥ ೧೦ ॥

ಪಾಶುಪಾಲ್ಯಂ ವಣಿಜ್ಯಾಂ ಚ ಕೃಷಿಂ ಚ ಮುನಿಸತ್ತಮಾಃ ।
ವೈಶ್ಯಾಯ ಜೀವಿಕಾಂ ಬ್ರಹ್ಮಾ ದದೌ ಲೋಕಪಿತಾಮಹಃ ॥ ೧೧ ॥

---

೭. ಕ್ಷತ್ರಿಯನಾದವನು ಇಚ್ಛಾಪೂರ್ವಕವಾಗಿ ಬ್ರಾಹ್ಮಣರಿಗೆ ದಾನ ಮಾಡಬೇಕು. ಮತ್ತು ನಾನಾವಿಧವಾದ ಯಾಗಗಳನ್ನು ಮಾಡಬೇಕು. ಅಧ್ಯಯನವನ್ನೂ ಮಾಡಬೇಕು.

೮. ಅವನು ಆಯುಧಬಲದಿಂದಲೇ ಜೀವಿಸಬೇಕು. ಭೂಮಿಯ ಪರಿಪಾಲನೆಯೇ ಅವನ ಬದುಕಿನ ಹಿರಿಯಗುರಿ. ಪೃಥಿವಿಯ ಪರಿಪಾಲನ ವೆಂಬುದೇ ಅವನ ಮೊತ್ತಮೊದಲನೆಯ ಕೆಲಸವು.

೯. ಈ ಭೂಮಂಡಲ ಸಂರಕ್ಷಣದಿಂದಲೇ ದೊರೆಗಳಾದವರು ಕೃತಕೃತ್ಯ ರೆನಿಸುವರು. ಏಕೆಂದರೆ ನೃಪತಿಯಾದವನು ಯಜ್ಞಯಾಗಾದಿ ಪುಣ್ಯಕಾರ್ಯ ಗಳನ್ನು ಸಂರಕ್ಷಿಸಬೇಕು.

೧೦. ದುಷ್ಟರನ್ನು ದಂಡಿಸುತ್ತಾ, ಶಿಷ್ಟರನ್ನು ಪಾಲಿಸುತ್ತಾ ವರ್ಣ ವ್ಯವಸ್ಥೆಯನ್ನು ಸರಿಯಾಗಿ ನಿಲ್ಲಿಸಿದ ನರಪತಿಯು ತಾನು ಇಷ್ಟಪಟ್ಟ ಲೋಕ ಗಳನ್ನು ಹೊಂದುವನು.

೧೧. ಲೋಕಕ್ಕೇ ಪಿತಾಮಹನಾದ ಬ್ರಹ್ಮನು ವೈಶ್ಯನಿಗೆ ಪಶುಪಾಲನೆ ಯನ್ನೂ, ವ್ಯಾಪಾರವನ್ನೂ, ಕೃಷಿಯನ್ನೂ ಜೀವಿಕೆಯನ್ನಾಗಿ ನಿಯಮಿಸಿರುವನು.

ತಸ್ಯಾಪ್ಯಧ್ಯಯನಂ ಯಜ್ಞೋ ದಾನಂ ಧರ್ಮಶ್ಚ ಶಸ್ಯತೇ ।
ನಿತ್ಯನೈಮಿತ್ತಿಕಾದೀನಾಮನುಷ್ಠಾನಂ ಚ ಕರ್ಮಣಾಂ ॥ ೧೨ ॥

ದ್ವಿಜಾತಿಸಂಶ್ರಯಂ ಕರ್ಮ ತದರ್ಥಂ ತೇನ ಪೋಷಣಂ ।
ಕ್ರಯವಿಕ್ರಯಜೈರ್ವಾಽಪಿ ಧನೈಃ ಕಾರುಭವೈಸ್ತು ವಾ ॥ ೧೩ ॥

ದಾನಂ ದದ್ಯಾಚ್ಚ ಶೂದ್ರೋಽಪಿ ಪಾಕಯಜ್ಞೈರ್ಯಜೇತ ಚ ।
ಪಿತ್ರ್ಯಾದಿಕಂ ಚ ವೈ ಸರ್ವಂ ಶೂದ್ರಃ ಕುರ್ವೀತ ತೇನ ವೈ ॥ ೧೪ ॥

ಭೃತ್ಯಾದಿಭರಣಾರ್ಥಾಯ ಸರ್ವೇಷಾಂ ಚ ಪರಿಗ್ರಹಾಃ ।
ಋತುಕಾಲಾಭಿಗಮನಂ ಸ್ವದಾರೇಷು ದ್ವಿಜೋತ್ತಮಾಃ ॥ ೧೫ ॥

ದಯಾ ಸಮಸ್ತಭೂತೇಷು ತಿತಿಕ್ಷಾ ನಾಭಿಮಾನಿತಾ ।
ಸತ್ಯಂ ಶೌಚಮನಾಯಾಸೋ ಮಂಗಲಂ ಪ್ರಿಯವಾದಿತಾ ॥ ೧೬ ॥

---

೧೨. ಆ ವೈಶ್ಯನೂ ಸಹ ಅಧ್ಯಯನ, ಯಾಗ, ದಾನ, ಧರ್ಮಗಳನ್ನೂ ನಿತ್ಯ ನೈಮಿತ್ತಿಕ ಕಾಮ್ಯ ಕರ್ಮಾನುಷ್ಠಾನವನ್ನೂ ಮಾಡಬೇಕು.

೧೩. ಕರ್ಮವು ದ್ವಿಜರಮೇಲೆ ಅವಲಂಬಿಸಿ ನಿಂತಿರುವುದು. ಆದುದರಿಂದ ಆ ವೈಶ್ಯನು ತಾನು ಮಾಡುವ ಕ್ರಯ ವಿಕ್ರಯಗಳಿಂದಲೂ, ಕೈಕೆಲಸಗಳಿಂದಲೂ ಸಂಪಾದಿಸಿದ ಹಣದಿಂದ ದ್ವಿಜೋಚಿತವಾದ ಕರ್ಮವನ್ನು ಪೋಷಿಸಿಕೊಂಡು ಬರಬೇಕು.

೧೪. ಶೂದ್ರನೂ ಸಹ ದಾನವನ್ನು ಕೊಡಬೇಕು. ಪಾಕಯಜ್ಞಾದಿಗಳನ್ನೂ ಮಾಡಬೇಕು. ಅಲ್ಲದೆ ಪಿತೃಕರ್ಮ ಮೊದಲಾದುವುಗಳೆಲ್ಲವನ್ನೂ ಅವನು ಮಾಡಬೇಕು.

೧೫. ಭೃತ್ಯಾದಿಗಳನ್ನು (ಆಳುಕಾಳುಗಳನ್ನು) ಕಾಪಾಡುವುದಕ್ಕೋಸ್ಕರ ಎಲ್ಲರೂ ವಿಹಿತವಾಗಿ ಮದುವೆ ಮಾಡಿಕೊಳ್ಳಬಹುದು. ಎಲೈ ದ್ವಿಜೋತ್ತಮರೇ, ಪ್ರತಿಯೊಬ್ಬರೂ ಋತುಸಮಯದಲ್ಲಿಯೇ ತಂತಮ್ಮ ಪತ್ನಿಯರಲ್ಲಿಯೇ ಸಂತೋಷವಾಗಿರಬೇಕು.

೧೬-೧೭. "ಸಕಲ ಭೂತಗಳಲ್ಲಿಯೂ ಮರುಕ, ಸಹನೆ, ಅಹಂಕಾರವಿಲ್ಲದಿರುವಿಕೆ, ಸತ್ಯ, ಶುಚಿತ್ವ, ಮಂಗಲ, ಪ್ರಿಯವಾಕ್ಯ, ಮೈತ್ರಿ (ಸ್ನೇಹ)

ಮೈತ್ರೀ ಚೈವಾಸ್ಪೃಹಾ ತದ್ವದಕಾರ್ಪಣ್ಯಂ ದ್ವಿಜೋತ್ತಮಾಃ ।
ಅನಸೂಯಾ ಚ ಸಾಮಾನ್ಯಾ ವರ್ಣಾನಾಂ ಕಥಿತಾ ಗುಣಾಃ ॥ ೧೭ ॥

ಆಶ್ರಮಾಣಾಂ ಚ ಸರ್ವೇಷಾಮೇತೇ ಸಾಮಾನ್ಯಲಕ್ಷಣಾಃ ।
ಗುಣಾಸ್ತಥೋಪಧರ್ಮಾಶ್ಚ ವಿಪ್ರಾದೀನಾಮಿಮೇ ದ್ವಿಜಾಃ ॥ ೧೮ ॥

ಕ್ಷಾತ್ರಂ ಕರ್ಮ ದ್ವಿಜಸ್ಯೋಕ್ತಂ ವೈಶ್ಯಕರ್ಮ ತಥಾಪದಿ ।
ರಾಜನ್ಯಸ್ಯ ಚ ವೈಶ್ಯೋಕ್ತಂ ಶೂದ್ರಕರ್ಮಾಣಿ ಚೈತಯೋಃ ॥ ೧೯ ॥

ಅಸಾಮರ್ಥ್ಯೇ ಸತಿ ತ್ಯಾಜ್ಯಮುಭಾಭ್ಯಾಮಪಿ ಚ ದ್ವಿಜಾಃ ।
ತದೇವಾಪದಿ ಕರ್ತವ್ಯಂ ನ ಕುರ್ಯಾತ್ಕರ್ಮಸಂಕರಂ ॥ ೨೦ ॥

ಇತ್ಯೇತೇ ಕಥಿತಾ ವಿಪ್ರಾ ವರ್ಣಧರ್ಮಾ ಮಯಾದ್ಯ ವೈ ।
ಧರ್ಮಮಾಶ್ರಮಿಣಾಂ ಸಮ್ಯಗ್ಬ್ರುವತೋಽಪಿ ನಿಬೋಧತ ॥ ೨೧ ॥

ಆಸೆಯಿಲ್ಲದಿರುವಿಕೆ, ಔದಾರ್ಯ, ಅಸೂಯೆಯಿಲ್ಲದಿರುವಿಕೆ” ಇವು ಸರ್ವವರ್ಣದವರಿಗೂ ಆಚರಿಸಬೇಕಾದ ಗುಣಗಳು ಎಂದು ಹೇಳಲ್ಪಟ್ಟಿರುವುವು.

೧೮. ಎಲ್ಲ ಆಶ್ರಮಗಳಿಗೂ ಇವು ಸಾಧಾರಣ ಲಕ್ಷಣಗಳೇ, ಎಲೈ ದ್ವಿಜರಿರಾ! ಬ್ರಾಹ್ಮಣರಿಗೆ ಈ ಮೇಲ್ಕಂಡುವು ಗುಣಗಳಾಗಿಯೂ ಉಪಧರ್ಮಗಳಾಗಿಯೂ ಇರುವುವು.

೧೯. ಬ್ರಾಹ್ಮಣನಾದವನು ಆಪತ್ಸಮಯದಲ್ಲಿ ಕ್ಷತ್ರಿಯಕರ್ಮವನ್ನೂ ವೈಶ್ಯಕರ್ಮವನ್ನೂ ಅವಲಂಬಿಸಬಹುದು. ಕ್ಷತ್ರಿಯನೂ ಆ ಸಮಯದಲ್ಲಿ ವೈಶ್ಯ ಮತ್ತು ಶೂದ್ರರ ಕರ್ಮವನ್ನು ಅವಲಂಬಿಸಬಹುದು. ವೈಶ್ಯನು ಆಪತ್ಸಮಯದಲ್ಲಿ ಶೂದ್ರಕರ್ಮವನ್ನವಲಂಬಿಸಬಹುದು.

೨೦. ಎಲೈ ದ್ವಿಜರಿರಾ! ಯಾವುದನ್ನು ಅಸಾಮರ್ಥ್ಯದಿಂದ ಬಿಟ್ಟಿರುವರೋ ಅದನ್ನೇ ಆಪತ್ತಿನಲ್ಲಿ ಮಾಡಬೇಕಾಗುವುದು. ಆದರೆ ಒಬ್ಬೊಬ್ಬರ ಕರ್ಮಗಳನ್ನು ಬೆರೆಸಬಾರದು.

೨೧. ಎಲೈ ವಿಪ್ರರಿರಾ! ಈರೀತಿಯಾಗಿ ನಿಮಗೆ ಈಗ ವರ್ಣಗಳ ಧರ್ಮಗಳನ್ನು ವಿವರಿಸಿದೆನು. ಈಗ ಆಯಾ ಆಶ್ರಮಗಳಲ್ಲಿರುವವರ ಧರ್ಮಗಳನ್ನು ವಿವರಿಸುವೆನು. ತಿಳಿದುಕೊಳ್ಳಿರಿ.

ಬಾಲಃ ಕೃತೋಪನಯನೋ ವೇದಾಹರಣತತ್ಪರಃ ।
ಗುರೋರ್ಗೇಹೇ ವಸನ್ವಿಪ್ರಾ ಬ್ರಹ್ಮಚಾರೀ ಸಮಾಹಿತಃ ॥ ೨೨ ॥

ಶೌಚಾಚಾರರತಸ್ತತ್ರ ಕಾರ್ಯಂ ಶುಶ್ರೂಷಣಂ ಗುರೋಃ ।
ವ್ರತಾನಿ ಚರತಾ ಗ್ರಾಹ್ಯೋ ವೇದಶ್ಚ ಕೃತಬುದ್ಧಿನಾ ॥ ೨೩ ॥

ಉಭೇ ಸಂಧ್ಯೇ ರವಿಂ ವಿಪ್ರಾಸ್ತಥೈವಾಗ್ನಿಂ ಸಮಾಹಿತಃ ।
ಉಪತಿಷ್ಠೇತ್ತಥಾ ಕುರ್ಯಾದ್ಗುರೋರಪ್ಯಭಿವಾದನಂ ॥ ೨೪ ॥

ಸ್ಥಿತೇ ತಿಷ್ಠೇದ್ವ್ರಜೇದ್ಯಾತಿ ನೀಚೈರಾಸೀತ ಚಾಸಿತೇ ।
ಶಿಷ್ಯೋ ಗುರೌ ದ್ವಿಜಶ್ರೇಷ್ಠಾಃ ಪ್ರತಿಕೂಲಂ ಚ ಸಂತ್ಯಜೇತ್ ॥ ೨೫ ॥

---

೨೨. ಉಪನಯನವಾದನಂತರ ಬಾಲಕನು ವೇದಾಧ್ಯಯನದಲ್ಲಿ ಆಸಕ್ತನಾಗಿ ಗುರುಕುಲದಲ್ಲಿಯೇ ವಾಸಮಾಡಬೇಕು. ಆಗವನು ಬ್ರಹ್ಮಚರ್ಯದಿಂದಲೂ ಸಮಾಧಾನ ಮನಸ್ಸಿನಿಂದಲೂ ಇರಬೇಕು.

೨೩. ಮತ್ತು ಶುಚಿಯಾಗಿಯೂ, ಸದಾಚಾರ ನಿರತನಾಗಿಯೂ ಇರಬೇಕಲ್ಲದೆ ಗುರುವಿನ ಶುಶ್ರೂಷೆಯನ್ನು ಮಾಡಬೇಕು. ಪ್ರಾಜಾಪತ್ಯಾದಿವ್ರತಗಳನ್ನು ಆಚರಿಸುತ್ತಾ ಮನಸ್ಸಿಟ್ಟು ವೇದವನ್ನು ಕಲಿತುಕೊಳ್ಳಬೇಕು.

೨೪. ಪ್ರಾತಸ್ಸಂಧ್ಯೆಯಲ್ಲಿಯೂ, ಸಾಯಂಸಂಧ್ಯೆಯಲ್ಲಿಯೂ, ಶಿಷ್ಠಮನಸ್ಸಿನಿಂದ ಸೂರ್ಯನನ್ನೂ ಯಜ್ಞೇಶ್ವರನನ್ನೂ ಉಪಸ್ಥಾನಮಾಡಬೇಕು. ಹಾಗೆಯೇ ಗುರುವಿಗೂ ಅಭಿವಾದನಮಾಡಬೇಕು.

೨೫. ಎಲೈ ದ್ವಿಜರಿರಾ! ಶಿಷ್ಯನಾದವನು ಗುರುವು ನಿಂತಾಗ ನಿಲ್ಲುತ್ತಾ, ಹೊರಟಾಗ ಹೊರಡುತ್ತಾ, ಕುಳಿತಾಗ ತಾನೂ ಕೆಳಗಡೆ ಕುಳಿತುಕೊಳ್ಳುತ್ತಾ ಆತನನ್ನು ಅನುಸರಿಸಬೇಕು. ಅವನಿಗೆ ವಿರುದ್ಧವಾದುದನ್ನು ಮಾಡಬಾರದು.

ತೇನೈವೋಕ್ತಂ ಪಠೇದ್ವೇದಂ ನಾನ್ಯಚಿತ್ತಃ ಪುರಸ್ಥಿತಃ ।
ಅನುಜ್ಞಾತಂ ಚ ಭಿಕ್ಷಾನ್ನಮಶ್ನೀಯಾದ್ಗುರುಣಾ ತತಃ ॥ ೨೬ ॥

ಅವಗಾಹೇದಪಃ ಪೂರ್ವಮಾಚಾರ್ಯೇಣಾವಗಾಹಿತಾಃ ।
ಸಮಿಜ್ಜಲಾದಿಕಂ ಚಾಸ್ಯ ಕಲ್ಯಕಲ್ಯಮುಪಾನಯೇತ್ ॥ ೨೭ ॥

ಗೃಹೀತಗ್ರಾಹ್ಯವೇದಶ್ಚ ತತೋಽನುಜ್ಞಾಮವಾಪ್ಯ ವೈ ।
ಗಾರ್ಹಸ್ಥ್ಯಮಾವಸೇತ್ಪ್ರಾಜ್ಞೋ ನಿಷ್ಪನ್ನಗುರುನಿಷ್ಕೃತಿಃ ॥ ೨೮ ॥

ವಿಧಿನಾವಾಪ್ತದಾರಸ್ತು ಧನಂ ಪ್ರಾಪ್ಯ ಸ್ವಕರ್ಮಣಾ ।
ಗೃಹಸ್ಥಕಾರ್ಯಮಖಿಲಂ ಕುರ್ಯಾದ್ವಿಪ್ರಾಃ ಸ್ವಶಕ್ತಿತಃ ॥ ೨೯ ॥

ನಿರ್ವಾಪೇಣ ಪಿತ್ೠನರ್ಚ್ಯ ಯಜ್ಞೈರ್ದೇವಾಂಸ್ತಥಾತಿಥೀನ್ ।
ಅನ್ನೈರ್ಮುನೀಂಶ್ಚ ಸ್ವಾಧ್ಯಾಯೈರಪತ್ಯೇನ ಪ್ರಜಾಪತಿಂ ॥ ೩೦ ॥

---

೨೬. ಆ ಗುರುವಿನ ಮುಂದೆ ಕುಳಿತು, ಬೇರೊಂದುಕಡೆ ಮನಸ್ಸು ಕೊಡದೆ, ಅವನು ಹೇಳಿಕೊಟ್ಟ ವೇದವನ್ನು ಪಾಠಮಾಡಬೇಕು. ಬಳಿಕ ಗುರುವು ಅನುಜ್ಞೆಯಿತ್ತಮೇಲೆ ಭಿಕ್ಷೆಯಿಂದ ಅನ್ನವನ್ನು ತಂದು ಊಟ ಮಾಡಬೇಕು.

೨೭. ತಮ್ಮ ಗುರುವು ಸ್ನಾನಮಾಡುವ ಜಲಾಶಯಾದಿಗಳ ನೀರಿನಲ್ಲಿ ಮೊದಲು ಸ್ನಾನಮಾಡಬೇಕು. ಮತ್ತು ಬೆಳಗ್ಗೆ ಅಷ್ಟುಹೊತ್ತಿಗೇ ಎದ್ದು ಸಮಿತ್ತುಗಳನ್ನೂ ನೀರನ್ನೂ ತಂದುಕೊಡಬೇಕು.

೨೮. ತಾನು ಓದಬೇಕಾಗಿರುವ ವೇದವೇದಾಂಗಗಳೆಲ್ಲವನ್ನೂ ಓದಿ ನಂತರ ಗುರುದಕ್ಷಿಣೆಯನ್ನಿತ್ತು, ಗುರುವಿನ ಅಪ್ಪಣೆತೆಗೆದುಕೊಂಡು ಗೃಹಸ್ಥಾಶ್ರಮವನ್ನು ಅವಲಂಬಿಸಬೇಕು.

೨೯. ಎಲೈ ವಿಪ್ರರಿರಾ! ವಿಧಿಪೂರ್ವಕವಾಗಿ ಕನ್ಯೆಯೊಬ್ಬಳನ್ನು ಪಾಣಿಗ್ರಹಣಮಾಡಿಕೊಂಡು, ತನ್ನ ಕೆಲಸದಿಂದ ಧನವನ್ನು ಸಂಪಾದಿಸಿ ತನ್ನ ಶಕ್ತಿಯಿಂದಲೇ ಗ್ರಹಸ್ಥನ ಕರ್ತವ್ಯಗಳನ್ನೆಲ್ಲಾ ನಿರ್ವಹಿಸಬೇಕು.

೩೦-೩೧. ಪಿತೃಗಳನ್ನು ತರ್ಪಣಾದಿಗಳಿಂದಲೂ, ದೇವತೆಗಳನ್ನು ಯಜ್ಞಗಳಿಂದಲೂ, ಅತಿಥಿಗಳನ್ನು ಅನ್ನದಾನದಿಂದಲೂ, ಮುನಿಗಳನ್ನು ವೇದಾ

ಬಲಿಕರ್ಮಣಾ ಭೂತಾನಿ ವಾಕ್ಸತ್ಯೇನಾಖಿಲಂ ಜಗತ್ ।
ಪ್ರಾಪ್ನೋತಿ ಲೋಕಾನ್ಪುರುಷೋ ನಿಜಕರ್ಮಸಮಾರ್ಜಿತಾನ್ ॥ ೩೦ ॥

ಭಿಕ್ಷಾಭುಜಶ್ಚ ಯೇ ಕೇಚಿತ್ಪರಿವ್ರಾಡ್ಬ್ರಹ್ಮಚಾರಿಣಃ ।
ತೇಽಪ್ಯತ್ರ ಪ್ರತಿತಿಷ್ಠಂತಿ ಗಾರ್ಹಸ್ಥ್ಯಂ ತೇನ ವೈ ಪರಂ ॥ ೩೨ ॥

ವೇದಾಹರಣಕಾರ್ಯೇಣ ತೀರ್ಥಸ್ನಾನಾಯ ಚ ದ್ವಿಜಾಃ ।
ಅಟಂತಿ ವಸುಧಾಂ ವಿಪ್ರಾಃ ಪೃಥಿವೀದರ್ಶನಾಯ ಚ ॥ ೩೩ ॥

ಅನಿಕೇತಾ ಹ್ಯನಾಹಾರಾ ಯೇ ತು ಸಾಯಂ ಗೃಹಾಸ್ತು ತೇ ।
ತೇಷಾಂ ಗೃಹಸ್ಥಃ ಸತತಂ ಪ್ರತಿಷ್ಠಾ ಯೋನಿರುಚ್ಯತೇ ॥ ೩೪ ॥

ಧ್ಯಯನದಿಂದಲೂ, ಸಂತಾನೋತ್ಪತ್ತಿಯಿಂದ ಪ್ರಜಾಪತಿಯನ್ನೂ, ಬಲಿಕರ್ಮಗಳಿಂದ ಸಕಲಭೂತಗಳನ್ನೂ, ಸತ್ಯವಾಕ್ಯದಿಂದ ಸಮಸ್ತಪ್ರಪಂಚವನ್ನೂ ಪೂಜಿಸಿದಂತೆಹ ಪುರುಷನು ತನ್ನ ಕರ್ಮದಿಂದ ಸಂಪಾದಿಸಿದ ಒಳ್ಳೆಯ ಲೋಕಗಳನ್ನು ಪಡೆಯುವನು.

೩೨. ಭಿಕ್ಷೆಯಿಂದಲೇ ಜೀವನವನ್ನು ನಡೆಸುವಂತಹ ಸನ್ನ್ಯಾಸಿಗಳೂ ಬ್ರಹ್ಮಚಾರಿಗಳೂ ಈ ಗೃಹಸ್ಥನನ್ನೇ ಆಶ್ರಯಿಸಿರುವುದರಿಂದ ಆಶ್ರಮಗಳಲ್ಲೆಲ್ಲಾ ಗೃಹಸ್ಥಾಶ್ರಮವೇ ಮಿಗಿಲಾದುದು.

೩೩. ಎಲೈ ಬ್ರಾಹ್ಮಣರಿರಾ! ವೇದವನ್ನು ಕಲಿಯುವ ಸಲುವಾಗಿಯೂ, ತೀರ್ಥಯಾತ್ರೆಗಾಗಿಯೂ, ದೇಶವಿದೇಶಗಳನ್ನು ಸಂದರ್ಶಿಸುವುದಕ್ಕಾಗಿಯೂ ವಿಪ್ರರಾದವರು ಭೂಮಿಯಲ್ಲಿ ಸಂಚರಿಸುವರು.

೩೪. ಆರೀತಿ ಮನೆಯಿಲ್ಲದೆ, ಆಹಾರವಿಲ್ಲದೆ, ಸಂಜೆಯಾಗುತ್ತಲೇ ಎಲ್ಲಾದರೊಂದುಕಡೆ ತಂಗುವ ಆ ಪ್ರಯಾಣಿಕರಿಗೆ ಗೃಹಸ್ಥನೊಬ್ಬನೇ ಆಶ್ರಯದಾತನು' ನಿಲ್ಲುವುದಕ್ಕೆ ನೆಲೆಯು.

ತೇಷಾಂ ಸ್ವಾಗತದಾನಾನಿ ವಕ್ತವ್ಯಂ ಮಧುರಂ ಸದಾ ।
ಗೃಹಾಗತಾನಾಂ ದದ್ಯಾಚ್ಚ ಶಯನಾಸನಭೋಜನಂ ॥ ೩೫ ॥

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ ।
ಸ ದತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ ॥ ೩೬ ॥

ಅವಜ್ಞಾನಮಹಂಕಾರೋ ದಂಭಶ್ಚಾಪಿ ಗೃಹೇ ಸತಃ ।
ಪರಿವಾದೋಪಘಾತೌ ಚ ಪಾರುಷ್ಯಂ ಚ ನ ಶಸ್ಯತೇ ॥ ೩೭ ॥

ಯಶ್ಚ ಸಮ್ಯಕ್ಕರೋತ್ಯೇವಂ ಗೃಹಸ್ಥಃ ಪರಮಂ ವಿಧಿಂ ।
ಸರ್ವಬಂಧವಿನಿರ್ಮುಕ್ತೋ ಲೋಕಾನಾಪ್ನೋತಿ ಚೋತ್ತಮಾನ್ ॥ ೩೮ ॥

ವಯಃಪರಿಣತೌ ವಿಪ್ರಾಃ ಕೃತಕೃತ್ಯೋ ಗೃಹಾಶ್ರಮೀ ।
ಪುತ್ರೇಷು ಭಾರ್ಯಾಂ ನಿಕ್ಷಿಪ್ಯ ವನಂ ಗಚ್ಛೇತ್ಸಹೈವ ವಾ ॥ ೩೯ ॥

---

೩೫. ಆರೀತಿ ಮನೆಗೆ ಬಂದವರಿಗೆ ಸ್ವಾಗತವಿತ್ತು ಮಧುರವಾಕ್ಯಗಳ ನ್ನಾಡಬೇಕು. ಮತ್ತು ಕುಳಿತುಕೊಳ್ಳಲು ಪೀಠವನ್ನೂ, ಭೋಜನವನ್ನೂ, ಮಲಗಲು ಹಾಸಿಗೆಯನ್ನೂ ಈಯಬೇಕು.

೩೬. ಯಾವನ ಮನೆಯಿಂದ ಅತಿಥಿಯು ನಿರಾಶನಾಗಿ ಹಿಂದಿರುಗುವನೋ ಆ ಮನೆಯಾತನ ಪುಣ್ಯವನ್ನು ತಾನು ತೆಗೆದುಕೊಂಡು ತನ್ನ ಪಾಪವನ್ನು ಅವನಿಗೆ ಇತ್ತು ಆ ಅತಿಥಿಯು ಹಿಂದಿರುಗುವನು-

೩೭. ಮತ್ತೊಬ್ಬರ ವಿಷಯದಲ್ಲಿ ತಿರಸ್ಕಾರ, ಅಹಂಕಾರ, ಆಡಂಬರ, ಸರ್ವದಾ ಪರನಿಂದೆ, ಕೇಡೆಸಗುವಿಕೆ ಈ ದುರ್ಗುಣಗಳು ಗೃಹಸ್ಥನಿಗೆ ತರವಲ್ಲವು.

೩೮. ಯಾವ ಗೃಹಸ್ಥನು ಈರೀತಿ ಶ್ರೇಷ್ಠವಾದ ವಿಧಾನವನ್ನು ಸರಿಯಾಗಿ ನಡೆಸಿಕೊಂಡುಬರುವನೋ ಅವನು ಎಲ್ಲ ಬಂಧನಗಳನ್ನೂ ಕಳಚಿಕೊಂಡು ಉತ್ತಮವಾದ ಲೋಕಗಳನ್ನು ಹೊಂದುವನು.

೩೯. ಎಲೈ ವಿಪ್ರರಿರಾ! ಈರೀತಿ ಕೃತಕೃತ್ಯನಾದ ಗೃಹಸ್ಥನು ತನಗೆ ವಯಸ್ಸಾದಮೇಲೆ ತನ್ನ ಮಕ್ಕಳ ಪೋಷಣೆಯಲ್ಲಿ ಹೆಂಡತಿಯನ್ನು ಬಿಟ್ಟು ಕಾಡಿಗೆ ಹೋಗಬೇಕು. ಅಥವಾ ತನ್ನ ಹೆಂಡತಿಯನ್ನೂ ಜೊತೆಯಲ್ಲಿಯೇ ಕರೆದೊಯ್ಯಬೇಕು

ಪರ್ಣಮೂಲಫಲಾಹಾರಃ ಕೇಶಶ್ಮಶ್ರುಜಟಾಧರಃ ।
ಭೂಮಿಶಾಯೀ ಭವೇತ್ತತ್ರ ಮುನಿಃ ಸರ್ವಾತಿಥಿರ್ದ್ವಿಜಾಃ ॥ ೪೦ ॥

ಚರ್ಮಕಾಶಕುಶೈಃ ಕುರ್ಯಾತ್ಪರಿಧಾನೋತ್ತರೀಯಕೇ ।
ತದ್ವತ್ತ್ರಿಷವಣಂ ಸ್ನಾನಂ ಶಸ್ತಮಸ್ಯ ದ್ವಿಜೋತ್ತಮಾಃ ॥ ೪೧ ॥

ದೇವತಾಭ್ಯರ್ಚನಂ ಹೋಮಃ ಸರ್ವಾಭ್ಯಾಗತಪೂಜನಂ ।
ಭಿಕ್ಷಾ ಬಲಿಪ್ರದಾನಂ ತು ಶಸ್ತಮಸ್ಯ ಪ್ರಶಸ್ಯತೇ ॥ ೪೨ ॥

ವನ್ಯಸ್ನೇಹೇನ ಗಾತ್ರಾಣಾಮಭ್ಯಂಗಶ್ಚಾಪಿ ಶಸ್ಯತೇ ।
ತಪಸ್ಯಾ ತಸ್ಯ ವಿಪ್ರೇಂದ್ರಾಃ ಶೀತೋಷ್ಣಾದಿಸಹಿಷ್ಣುತಾ ॥ ೪೩ ॥

---

೪೦. ಅಲ್ಲಿ ಆ ಗೃಹಸ್ಥನು ಪರ್ಣಗಳನ್ನೂ ಗೆಡ್ಡೆಗೆಣಸುಗಳನ್ನೂ ಹಣ್ಣು ಹಂಪಲುಗಳನ್ನೂ ಆಹಾರಮಾಡುತ್ತಾ ತಲೆಗೂದಲನ್ನೂ ಜಟೆಯಂತೆ ಬಿಟ್ಟು, ಗಡ್ಡಮೀಸೆಗಳನ್ನು ಧರಿಸಿ, ನೆಲದಮೇಲೆ ಮಲಗುತ್ತಾ, ಬರುವ ಅತಿಥಿಗಳೆಲ್ಲರನ್ನೂ ಸತ್ಕರಿಸುತ್ತಾ ಮುನಿಯಂತೆ ಜೀವಿಸಬೇಕು.

೪೧. ಎಲೈ ದ್ವಿಜೋತ್ತಮರೇ, ಈರೀತಿ ಮುನಿವೃತ್ತಿಯಲ್ಲಿರುವ ಗೃಹಸ್ಥನು ಚರ್ಮಗಳನ್ನೂ, ಕಾಶ, ಕುಶಗಳಿಂದ ಮಾಡಿದ ವಸ್ತ್ರಗಳನ್ನು ಉಡುವುದಕ್ಕೂ ಹೊದೆಯುವುದಕ್ಕೂ ಉಪಯೋಗಿಸಬೇಕು. ಮತ್ತು ಮೂರು ಸಂಧ್ಯೆಗಳಲ್ಲಿಯೂ ಸ್ನಾನವನ್ನು (ತ್ರಿವರ್ಣಪ್ರಾತಸ್ಸವನಾದಿಗಳು) ಮಾಡಬೇಕು.

೪೨. ದೇವತಾಪೂಜೆ, ಹೋಮ, ಅಭ್ಯಾಗತರೆಲ್ಲರ ಸತ್ಕಾರ, ಭಿಕ್ಷೆ, ಬಲಿಯನ್ನು ಇಡುವುದು. ಇವೆಲ್ಲವೂ ಈತನಿಗೆ ವಿಹಿತವಾದುದು.

೪೩. ಮತ್ತು ಈತನು ಕಾಡಿನ ಮರಗಳಲ್ಲಿ ಬಿಡುವ ಜಿಡ್ಡಾದ ದ್ರವವುಳ್ಳ ಫಲಗಳಿಂದ ಶರೀರಕ್ಕೆ ಅಭ್ಯಂಜನವನ್ನು ಮಾಡಿಕೊಳ್ಳಬೇಕು. ಮತ್ತು ಯಾವಾಗಲೂ ತಪಸ್ಸಿನಲ್ಲಿಯೇ ನಿರತನೂ, ಶೀತೋಷ್ಣಾದಿ ಸಹಿಷ್ಣುವೂ ಆಗಬೇಕು.

ಯಸ್ತ್ವೇತಾ ನಿಯತಶ್ಚರ್ಯಾ ವಾನಪ್ರಸ್ಥಶ್ಚರೇನ್ಮುನಿಃ ।
ಸ ದಹತ್ಯಗ್ನಿವದ್ದೋಷಾಞ್ಜಯೇಲ್ಲೋಕಾಂಶ್ಚ ಶಾಶ್ವತಾನ್ ॥ ೪೪ ॥

ಚತುರ್ಥಶ್ಚಾಶ್ರಮೋ ಭಿಕ್ಷೋಃ ಪ್ರೋಚ್ಯತೇ ಯೋ ಮನೀಷಿಭಿಃ ।
ತಸ್ಯ ಸ್ವರೂಪಂ ಗದತೋ ಬುಧ್ಯಧ್ವಂ ಮಮ ಸತ್ತಮಾಃ ॥ ೪೫ ॥

ಪುತ್ರದ್ರವ್ಯಕಲತ್ರೇಷು ತ್ಯಜೇತ್ಸ್ನೇಹಂ ದ್ವಿಜೋತ್ತಮಾಃ ।
ಚತುರ್ಥಮಾಶ್ರಮಸ್ಥಾನಂ ಗಚ್ಛೇನ್ನಿರ್ಧೂತಮತ್ಸರಃ ॥ ೪೬ ॥

ತ್ರೈವರ್ಣಿಕಾಂಸ್ತ್ಯಜೇತ್ಸರ್ವಾನಾರಂಭಾನ್ದ್ವಿಜಸತ್ತಮಾಃ ।
ಮಿತ್ರಾದಿಷು ಸಮೋ ಮೈತ್ರಃ ಸಮಸ್ತೇಷ್ವೇವ ಜಂತುಷು ॥ ೪೭ ॥

---

೪೪. ಯಾವ ವಾನಪ್ರಸ್ಥನು ಈರೀತಿ ನಿಯಮದಲ್ಲಿ ಇರುತ್ತಾ ಮೇಲೆ ಹೇಳಿದುದೆಲ್ಲವನ್ನೂ ನಡೆಸುವನೋ ಆತನು ಎಲ್ಲ ದೋಷಗಳನ್ನೂ ಬೆಂಕಿಯಂತೆ ದಹಿಸುವನಲ್ಲದೆ ಶಾಶ್ವತವಾದ ಉತ್ತಮಲೋಕಗಳನ್ನೂ ಪಡೆಯುವನು.

೪೫. ಎಲೈ ಮುನಿಸತ್ತಮರಿರಾ! ಪ್ರಾಜ್ಞರಾದವರು ಹೇಳುವಂತಹ ನಾಲ್ಕನೆಯದಾದ ಸನ್ನ್ಯಾಸಾಶ್ರಮದ ಸ್ವರೂಪವನ್ನು ನಾನು ನಿಮಗೆ ವಿವರಿಸುವೆನು. ಕೇಳಿರಿ.

೪೬. ಆ ಸನ್ನ್ಯಾಸಿಯಾಗುವವನು ಪುತ್ರರಲ್ಲಿಯೂ, ದ್ರವ್ಯದಲ್ಲಿಯೂ, ಸ್ತ್ರೀಯಲ್ಲಿಯೂ ಮಮತೆಯನ್ನು ತೊರೆಯಬೇಕು. ಅದರಂತೆ ಮಾತ್ಸರ್ಯವನ್ನೂ ದೂರಮಾಡಬೇಕು. ಹೀಗಾದರೆ ಅವನು ನಾಲ್ಕನೆಯದಾದ ಆಶ್ರಮಕ್ಕೆ ಹೋಗಬಹುದು.

೪೭. ಆಗ ಆತನು ಬ್ರಾಹ್ಮಣಾದಿವರ್ಣತ್ರಯಗಳ ಸಕಲ ವ್ಯವಹಾರಗಳನ್ನೂ ಬಿಟ್ಟುಬಿಡಬೇಕು. ಶತ್ರು ಮಿತ್ರರಲ್ಲಿ ಸಮಭಾವನೆಯುಳ್ಳವನಾಗಬೇಕು. ಮತ್ತು ಸಕಲ ಭೂತಗಳಲ್ಲಿಯೂ ಮೈತ್ರೀ ವೃತ್ತಿಯನ್ನು ಅವಲಂಬಿಸಬೇಕು.

ಜರಾಯುಜಾಂಡಜಾದೀನಾಂ ವಾಙ್ಮನಃಕರ್ಮಭಿಃ ಕ್ವಚಿತ್ ।
ಯುಕ್ತಃ ಕುರ್ವೀತ ನ ದ್ರೋಹಂ ಸರ್ವಸಂಗಾಂಶ್ಚ ವರ್ಜಯೇತ್ ॥ ೪೮ ॥

ಏಕರಾತ್ರಸ್ಥಿತಿರ್ಗ್ರಾಮೇ ಪಂಚರಾತ್ರಸ್ಥಿತಿಃ ಪುರೇ ।
ತಥಾ ಪ್ರೀತಿರ್ನ ತಿರ್ಯಕ್ಷು ದ್ವೇಷೋ ವಾ ನಾಸ್ಯ ಜಾಯತೇ ॥ ೪೯ ॥

ಪ್ರಾಣಯಾತ್ರಾನಿಮಿತ್ತಂ ಚ ವ್ಯಂಗಾರೇಽಭುಕ್ತವಜ್ಜನೇ ।
ಕಾಲೇ ಪ್ರಶಸ್ತವರ್ಣಾನಾಂ ಭಿಕ್ಷಾರ್ಥೀ ಪರ್ಯಟೇದ್ಗೃಹಾನ್ ॥ ೫೦ ॥

ಅಲಾಭೇ ನ ವಿಷಾದೀ ಸ್ಯಾಲ್ಲಾಭೇ ನೈವ ಚ ಹರ್ಷಯೇತ್ ।
ಪ್ರಾಣಯಾತ್ರಿಕಮಾತ್ರಃ ಸ್ಯಾನ್ಮಾತ್ರಾಸಂಗಾದ್ವಿನಿರ್ಗತಃ ॥ ೫೧ ॥

---

೪೮. ಮತ್ತು ಆತನು ಮಾತಿನಿಂದಲೂ, ಮನಸ್ಸಿನಿಂದಲೂ, ನಡೆವಳಿಕೆಯಿಂದಲೂ, ಮನುಷ್ಯರಿಗಾಗಲೀ ಪಶುಪಕ್ಷಿಕ್ರಿಮಿಕೀಟಾದಿಗಳಿಗಾಗಲಿ ದ್ರೋಹ ಮಾಡದಿರಬೇಕು. ಸಕಲ ಸಂಗಗಳನ್ನೂ ಬಿಟ್ಟವನಾಗಿರಬೇಕು.

೪೯. ಆತನು ಹಳ್ಳಿಯಲ್ಲಿ ಒಂದುರಾತ್ರಿಯೂ, ಪಟ್ಟಣದಲ್ಲಿ ಐದುರಾತ್ರಿಗಳೂ ಮಾತ್ರ ನಿಲ್ಲಬೇಕು. ಆಮೇಲೆ ಇರಬಾರದು. ಅದೇರೀತಿ ತಿರ್ಯಕ್ಪ್ರಾಣಿಗಳಲ್ಲಿಯೂ ಸಹ ಈತನಿಗೆ ಸ್ನೇಹವಾಗಲೀ, ದ್ವೇಷವಾಗಲಿ ಇರಬಾರದು.

೫೦. ಮತ್ತು ಆತನು ಪ್ರಾಣಧಾರಣದ ಸಲುವಾಗಿ ಭಿಕ್ಷೆಯನ್ನೆತ್ತಬೇಕು. ಆ ಭಿಕ್ಷೆಯನ್ನೂ ಸಹ ಅಡುಗೆಯಾಗಿ ಒಲೆಯಾರಿಸಿದನಂತರ ಇನ್ನೂಯಾರೂ ಊಟಮಾಡದಿರುವಾಗ ಅಂತಹ ಸಮಯವರಿತು ಉತ್ತಮವರ್ಣದವರ ಮನೆಯಲ್ಲಿಯೇ ಯಾಚಿಸಬೇಕು.

೫೧. ಭಿಕ್ಷೆಯೊಂದುವೇಳೆ ಸಿಗದಿದ್ದರೆ ವ್ಯಥೆಪಡಬಾರದು. ಸಿಕ್ಕಿದರೆ ಸಂತೋಷವನ್ನು ಹೊಂದಬಾರದು. ಏಕೆಂದರೆ ಸನ್ಯಾಸಿಯಾದವನು ಆಹಾರದಲ್ಲಿಯೇ ಆಸಕ್ತಿ ವಹಿಸದೆ, ಪ್ರಾಣಧಾರಣೆಯೊಂದನ್ನೇ ಗುರಿಯಾಗಿ ಇಟ್ಟುಕೊಂಡಿರಬೇಕು.

ಅತಿಪೂಜಿತಲಾಭಾಂಸ್ತು ಜುಗುಪ್ಸಂ ಚೈವ ಸರ್ವತಃ ।
ಅತಿಪೂಜಿತಲಾಭೈಸ್ತು ಯತಿರ್ಮುಕ್ತೋಽಪಿ ಬಧ್ಯತೇ ॥ ೫೨ ॥

ಕಾಮಃ ಕ್ರೋಧಸ್ತಥಾ ದರ್ಪೋ ಲೋಭಮೋಹಾದಯಶ್ಚ ಯೇ ।
ತಾಂಸ್ತು ದೋಷಾನ್ಪರಿತ್ಯಜ್ಯ ಪರಿವ್ರಾಣ್ನಿರ್ಮಮೋ ಭವೇತ್ ॥ ೫೩ ॥

ಅಭಯಂ ಸರ್ವಸತ್ತ್ವೇಭ್ಯೋ ದತ್ತ್ವಾ ಯಶ್ಚರತೇ ಮಹೀಂ ।
ತಸ್ಯ ದೇಹಾದ್ವಿಮುಕ್ತಸ್ಯ ಭಯಂ ನೋತ್ಪದ್ಯತೇ ಕ್ವಚಿತ್ ॥ ೫೪ ॥

ಕೃತ್ವಾಗ್ನಿಹೋತ್ರಂ ಸ್ವಶರೀರಸಂಸ್ಥಂ
ಶರೀರಮಗ್ನಿಂ ಸ್ವಮುಖೇ ಜುಹೋತಿ ।
ವಿಪ್ರಸ್ತು ಭಿಕ್ಷೋಪಗತೈರ್ಹವಿರ್ಭಿ-
ಶ್ಚಿತಾಗ್ನಿನಾ ಸ ವ್ರಜತಿ ಸ್ಮ ಲೋಕಾನ್ ॥ ೫೫ ॥

---

೫೨. ಯಾರಾದರೂ ಆತನನ್ನು ಹೆಚ್ಚು ಸತ್ಕಾರ ಮಾಡುವಂತಹ ಮತ್ತು ಆತನಿಗೆ ಲಾಭವುಂಟಾಗುವಂತಹ ಸಂದರ್ಭಗಳು ಬಂದರೆ ಅವುಗಳನ್ನು ಸರ್ವಾತ್ಮನಾ ಹೇಸಿ ನಿರಾಕರಿಸಬೇಕು. ಏಕೆಂದರೆ ಇಂತಹ ಸತ್ಕಾರಗಳಿಂದಲೂ, ಲಾಭಗಳಿಂದಲೂ ಯತಿಯಾದವನು ಮುಕ್ತನಾಗಿದ್ದರೂ ಮರಳಿ ಸಂಸಾರ ಪಾಶಕ್ಕೆ ಸಿಕ್ಕಿ ಬೀಳುವನು.

೫೩. ಕಾಮ, ಕ್ರೋಧ, ದರ್ಪ, ಮೋಹ, ಲೋಭ ಮೊದಲಾದ ದೋಷಗಳು ಯಾವಾವುವುಂಟೋ ಅವೆಲ್ಲವನ್ನೂ ಸನ್ಯಾಸಿಯು ಬಿಟ್ಟು ಮಮತಾ ಶೂನ್ಯನಾಗಿರಬೇಕು.

೫೪. ಯಾವನು ಸಕಲ ಪ್ರಾಣಿಗಳಿಗೂ ಅಭಯವಿತ್ತು ಭೂಮಿಯನ್ನು ಸುತ್ತುತ್ತಿರುವನೋ ಅಂತಹ ದೇಹಾತ್ಮ ಭ್ರಮೆಯನ್ನು ಬಿಟ್ಟಿರುವ ಸನ್ಯಾಸಿಗೆ ಎತ್ತಲೂ ಭಯವಿಲ್ಲವು.

೫೫. ಯಾವಾತನು ತನ್ನ ಶರೀರದಲ್ಲಿರುವ ಜಠರಾಗ್ನಿಯನ್ನೇ ಅಗ್ನಿಯೆಂದು ಭಾವಿಸಿ, ಭಿಕ್ಷೆಯನ್ನೇ ಹವಿಸ್ಸೆಂದು ತಿಳಿದು, ಅದನ್ನು ತನ್ನ ಮುಖದಲ್ಲಿ ಅರ್ಪಿಸುತ್ತಾ ಶಾರೀರವಾದ ಅಗ್ನಿಹೋತ್ರವನ್ನು ನಡೆಸುತ್ತಿರುವನೋ ಆತನು ಚಿತಾಗ್ನಿಯಿಂದ ಸಂಸ್ಕೃತನಾಗಿ ಉತ್ತಮಲೋಕಗಳನ್ನು ಹೊಂದುವನು.

ಮೋಕ್ಷಾಶ್ರಮಂ ಯಶ್ಚರತೇ ಯಥೋಕ್ತಂ
ಶುಚಿಶ್ಚ ಸಂಕಲ್ಪಿತಬುದ್ಧಿಯುಕ್ತಃ ।
ಅನಿಂಧನಂ ಜ್ಯೋತಿರಿವ ಪ್ರಶಾಂತಂ
ಸ ಬ್ರಹ್ಮಲೋಕಂ ವ್ರಜತಿ ದ್ವಿಜಾತಿಃ ॥ ೫೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ವರ್ಣಾಶ್ರಮಧರ್ಮವರ್ಣನಂ ನಾಮ ದ್ವಾವಿಂಶಾಧಿಕ-
ದ್ವಿಶತತಮೋಽಧ್ಯಾಯಃ

---

೫೬. ಯಾವ ದ್ವಿಜನು ಈರೀತಿಯಾಗಿ ಹೇಳಲ್ಪಟ್ಟ ಮೋಕ್ಷಸಾಧಕವಾದ ಚತುರ್ಥಾಶ್ರಮವನ್ನು ಮನಃಪೂರ್ವಕವಾಗಿ ಶುದ್ಧತೆಯಿಂದ ನಡೆಸಿಕೊಂಡು ಬರುವನೋ ಆತನು ಸೌದೆ ಮುಂತಾದುವಿಲ್ಲದೆ ಬೆಳಗುತ್ತಿರುವ ಬೆಂಕಿಯಂತೆ ಇರುವ ಪ್ರಶಾಂತವಾದ ಬ್ರಹ್ಮಲೋಕವನ್ನು ಸೇರುವನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ವರ್ಣಾಶ್ರಮಧರ್ಮವರ್ಣನವೆಂಬ
ಇನ್ನೂರಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅ ಥ ಮ ಹಾ ಪು ರಾ ಣೇ ಬ್ರಾ ಹ್ಮೇ

ತ್ರಯೋವಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಸರ್ವಜ್ಞಸ್ತ್ವಂ ಮಹಾಭಾಗ ಸರ್ವಭೂತಹಿತೇ ರತಃ ।
ಭೂತಂ ಭವ್ಯಂ ಭವಿಷ್ಯಂ ಚ ನ ತೇಽಸ್ತ್ಯವಿದಿತಂ ಮುನೇ ॥ ೧ ॥

ಕರ್ಮಣಾ ಕೇನ ವರ್ಣಾನಾಮಧಮಾ ಜಾಯತೇ ಗತಿಃ ।
ಉತ್ತಮಾ ಚ ಭವೇತ್ಕೇನ ಬ್ರೂಹಿ ತೇಷಾಂ ಮಹಾಮತೇ ॥ ೨ ॥

ಇನ್ನೂರಇಪ್ಪತ್ತಮೂರನೆಯ ಅಧ್ಯಾಯವು

೧. ಆಗ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು “ ಓ ಮಹಾಭಾಗ! ಮುನೀಂದ್ರ! ನೀನು ಎಲ್ಲವನ್ನೂ ತಿಳಿದವನು. ಸಕಲ ಭೂತಗಳಿಗೂ ಹಿತವನ್ನು ಕೋರುವವನು. ಹಿಂದಾದುದೂ, ಇಂದಾಗುತ್ತಿರುವುದೂ, ಮುಂದಾಗುವುದೂ ಇವೆಲ್ಲವೂ ನಿನಗೆ ತಿಳಿಯದೆ ಇಲ್ಲ.

೨. ಎಲೈ ಪ್ರಾಜ್ಞನೇ! ಯಾವ ಕರ್ಮದಿಂದ ಉತ್ತಮವರ್ಣದವರಿಗೆ ಅಧಮವಾದ ಗತಿಯೂ, ಯಾವ ಕರ್ಮದಿಂದ ಮತ್ತೂ ಉತ್ಕೃಷ್ಟವಾದ ಗತಿಯೂ ಉಂಟಾಗುವುದು ಎಂಬುದನ್ನು ನಮಗೆ ತಿಳಿಸು.

ಶೂದ್ರಸ್ತು ಕರ್ಮಣಾ ಕೇನ ಬ್ರಾಹ್ಮಣತ್ವಂ ಚ ಗಚ್ಛತಿ ।
ಶ್ರೋತುಮಿಚ್ಛಾಮಹೇ ಕೇನ ಬ್ರಾಹ್ಮಣಃ ಶೂದ್ರತಾಮಿಯಾತ್ ॥ ೩ ॥

॥ ವ್ಯಾಸ ಉವಾಚ ॥

ಹಿಮವಚ್ಛಿಖರೇ ರಮ್ಯೇ ನಾನಾಧಾತುವಿಭೂಷಿತೇ ।
ನಾನಾದ್ರುಮಲತಾಕೀರ್ಣೇ ನಾನಾಶ್ಚರ್ಯಸಮನ್ವಿತೇ ॥ ೪ ॥

ತತ್ರ ಸ್ಥಿತಂ ಮಹಾದೇವಂ ತ್ರಿಪುರಘ್ನಂ ತ್ರಿಲೋಚನಂ ।
ಶೈಲರಾಜಸುತಾ ದೇವೀ ಪ್ರಣಿಪತ್ಯ ಸುರೇಶ್ವರಂ ॥ ೫ ॥

ಇಮಂ ಪ್ರಶ್ನಂ ಪುರಾ ವಿಪ್ರಾ ಅಪೃಚ್ಛಚ್ಚಾರುಲೋಚನಾ ।
ತದಹಂ ಸಂಪ್ರವಕ್ಷ್ಯಾಮಿ ಶೃಣುಧ್ವಂ ಮುನಿ ಸತ್ತಮಾಃ ॥ ೬ ॥

॥ ಉಮೋವಾಚ ॥

ಭಗವನ್ಭಗನೇತ್ರಘ್ನ ಪೂಷ್ಣೋ ದಂತವಿನಾಶನ ।
ದಕ್ಷಕ್ರತುಹರ ತ್ರ್ಯಕ್ಷ ಸಂಶಯೋ ಮೇ ಮಹಾನಯಂ ॥ ೭ ॥

---

೩. ಶೂದ್ರನಾದವನು ಯಾವ ಕರ್ಮದಿಂದ ಬ್ರಾಹ್ಮಣ್ಯವನ್ನು ಪಡೆಯು ವನು? ಬ್ರಾಹ್ಮಣನು ಯಾವ ಕರ್ಮವಿಪಾಕದಿಂದ ಶೂದ್ರತನವನ್ನು ಹೊಂದು ವನು? ಇವನ್ನು ನಾವು ಕೇಳಬೇಕೆಂದು ಆಶಿಸುವೆವು" ಎಂದರು.

೪-೬. ಆಗ ವ್ಯಾಸಮುನಿಯು ಹೇಳತೊಡಗಿದನು: ಎಲೈ ವಿಪ್ರರಿರಾ! ಹಿಂದೆ ರಮಣೀಯವಾದುದೂ ನಾನಾವಿಧವಾದ ಧಾತುಗಳಿಂದ ಅಲಂಕೃತವಾ ದುದೂ ಒಗೆಬಗೆಯಾದ ವೃಕ್ಷಗಳಿಂದಲೂ, ಲತೆಗಳಿಂದಲೂ, ನಿಬಿಡೀಕೃತವಾಗಿರು ವುದೂ ಮತ್ತು ನಾನಾರೀತಿಯ ಆಶ್ಚರ್ಯಗಳಿಗೆ ನೆಲೆಯಾಗಿರುವುದೂ ಆದ ಹಿಮವತ್ಪರ್ವತದ ಶಿಖರದಮೇಲೆ ಕುಳಿತಿರುವ ತ್ರಿಪುರಸಂಹಾರಿಯೂ, ತ್ರಿಲೋ ಚನನೂ ಆದ ದೇವೇಶ್ವರನಾದ ಶಂಕರನನ್ನು ಗಿರಿರಾಜ ಸುತೆಯಾದ ಪಾರ್ವ ತಿಯು ನಮಸ್ಕರಿಸಿ ನೀವೀಗ ಕೇಳಿದ ಪ್ರಶ್ನೆಯನ್ನೇ ಕೇಳಿದಳು. ಅದನ್ನೇ ಈಗ ನಾನು ನಿಮಗೆ ತಿಳಿಸುವೆನು. ಕೇಳಿರಿ—

೭. ಉಮೆಯು ಶಂಕರನನ್ನು ಕುರಿತು "ಹೇ ಭಗವನ್, ನೀನು ಭಗನ ನೇತ್ರಗಳನ್ನೂ, ಪೂಷನ ಹಲ್ಲುಗಳನ್ನೂ, ದಕ್ಷನ ಯಜ್ಞವನ್ನೂ ನಾಶ ಪಡಿಸಿದವನು. ಹೇ ತ್ರಿಲೋಚನ! ನನಗೀಗ ಭಾರಿ ಸಂಶಯವೊಂದುಂ ಟಾಗಿರುವುದು.

ಚಾತುರ್ವರ್ಣ್ಯಂ ಭಗವತಾ ಪೂರ್ವಂ ಸೃಷ್ಟಂ ಸ್ವಯಂಭುವಾ ।
ಕೇನ ಕರ್ಮವಿಪಾಕೇನ ವೈಶ್ಯೋ ಗಚ್ಛತಿ ಶೂದ್ರತಾಂ ॥ ೮ ॥

ವೈಶ್ಯೋ ವಾ ಕ್ಷತ್ರಿಯಃ ಕೇನ ದ್ವಿಜೋ ವಾ ಕ್ಷತ್ರಿಯೋ ಭವೇತ್ ।
ಪ್ರತಿಲೋಮೋ ಕಥಂ ದೇವ ಶಕ್ಯೋ ಧರ್ಮೋ ನಿವರ್ತಿತುಂ ॥ ೯ ॥

ಕೇನ ವಾ ಕರ್ಮಣಾ ವಿಪ್ರಃ ಶೂದ್ರಯೋನೌ ಪ್ರಜಾಯತೇ ।
ಕ್ಷತ್ರಿಯಃ ಶೂದ್ರತಾಮೇತಿ ಕೇನ ವಾ ಕರ್ಮಣಾ ವಿಭೋ ॥ ೧೦ ॥

ಏತಂ ಮೇ ಸಂಶಯಂ ದೇವ ವದ ಭೂತಪತೇಽನಘ ।
ತ್ರಯೋ ವರ್ಣಾಃ ಪ್ರಕೃತ್ಯೇಹ ಕಥಂ ಬ್ರಾಹ್ಮಣ್ಯಮಾಪ್ನುಯುಃ ॥ ೧೧ ॥

॥ ಶಿವ ಉವಾಚ ॥

ಬ್ರಾಹ್ಮಣ್ಯಂ ದೇವಿ ದುಷ್ಪ್ರಾಪಂ ನಿಸರ್ಗಾದ್ಬ್ರಾಹ್ಮಣಃ ಶುಭೇ ।
ಕ್ಷತ್ರಿಯೋ ವೈಶ್ಯಶೂದ್ರೌ ವಾ ನಿಸರ್ಗಾದಿತಿ ಮೇ ಮತಿಃ ॥ ೧೨ ॥

---

೮. ಹಿಂದೆಯೇ ಭಗವಂತನಾದ ಬ್ರಹ್ಮನು ಬ್ರಾಹ್ಮಣಾದಿ ಚತುರ್ವರ್ಣಗಳನ್ನು ಸೃಷ್ಟಿಸಿದನಲ್ಲವೇ? ಯಾವ ಕರ್ಮದ ಫಲದಿಂದ ವೈಶ್ಯನು ಶೂದ್ರನಾಗುವನು?

೯. ವೈಶ್ಯನು ಕ್ಷತ್ರಿಯನಾಗುವುದಾದರೂ ಹೇಗೆ? ಬ್ರಾಹ್ಮಣನು ತಾನೇ ಹೇಗೆ ಕ್ಷತ್ರಿಯನಾಗುವನು? ಈರೀತಿ ಪ್ರತಿಲೋಮಸ್ಥಿತಿಯುಂಟಾದಾಗ ಧರ್ಮವು ಬದಲಾವಣೆಹೊಂದುವುದು ಹೇಗೆ?

೧೦. ಯಾವ ಕರ್ಮವಿಪಾಕದಿಂದ ಬ್ರಾಹ್ಮಣನು ಶೂದ್ರನಾಗಿ ಹುಟ್ಟುವನು? ಕ್ಷತ್ರಿಯನು ಶೂದ್ರನಾಗಿ ಹುಟ್ಟುವುದು ಯಾವ ಕರ್ಮದ ಫಲದಿಂದ?

೧೧. ಎಲೈ ಭೂತಪತಿಯೇ! ನನ್ನೀ ಸಂಶಯವನ್ನು ನಿವಾರಿಸುವಂತೆ ಉತ್ತರವನ್ನು ಹೇಳು. ಸ್ವಭಾವತಃ ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಆದವರು ಹೇಗೆ ಬ್ರಾಹ್ಮಣ್ಯವನ್ನು ಹೊಂದುವರು?" ಎಂದು ಪ್ರಶ್ನಿಸಿದಳು.

೧೨. ಆಗ ಶಿವನು ಉಮೆಯನ್ನು ಕುರಿತು ಇಂತೆಂದನು. "ಎಲೌ ಮಂಗಳಾಂಗಿ! ಬ್ರಾಹ್ಮಣ್ಯವು ದುರ್ಲಭವಾದುದು. ನನ್ನ ಅಭಿಪ್ರಾಯದಲ್ಲಿ, ಬ್ರಾಹ್ಮಣನಾಗಲಿ. ಕ್ಷತ್ರಿಯನಾಗಲಿ, ವೈಶ್ಯ ಶೂದ್ರರಾಗಲಿ ಅವರವರ ಸ್ವಭಾವಕ್ಕನುಗುಣವಾಗಿಯೇ ಆಗಿರುವರೇ ಹೊರತು ಮತ್ತೆ ಬೇರೆಯಲ್ಲ.

ಕರ್ಮಣಾ ದುಷ್ಕೃತೇನೇಹ ಸ್ಥಾನಾದ್ಭ್ರಶ್ಯತಿ ಸ ದ್ವಿಜಃ ।
ಶ್ರೇಷ್ಠಂ ವರ್ಣಮನುಪ್ರಾಪ್ಯ ತಸ್ಮಾದಾಕ್ಷಿಪ್ಯತೇ ಪುನಃ ॥ ೧೩ ॥

ಸ್ಥಿತೋ ಬ್ರಾಹ್ಮಣಧರ್ಮೇಣ ಬ್ರಾಹ್ಮಣ್ಯಮುಪಜೀವತಿ ।
ಕ್ಷತ್ರಿಯೋ ವಾಥ ವೈಶ್ಯೋ ವಾ ಬ್ರಹ್ಮಭೂಯಂ ಸ ಗಚ್ಛತಿ ॥ ೧೪ ॥

ಯಶ್ಚ ವಿಪ್ರತ್ವಮುತ್ಸೃಜ್ಯ ಕ್ಷತ್ರಧರ್ಮಾನ್ನಿಷೇವತೇ ।
ಬ್ರಾಹ್ಮಣ್ಯಾತ್ಸ ಪರಿಭ್ರಷ್ಟಃ ಕ್ಷತ್ರಿಯೋನೌ ಪ್ರಜಾಯತೇ ॥ ೧೫ ॥

ವೈಶ್ಯಕರ್ಮ ಚ ಯೋ ವಿಪ್ರೋ ಲೋಭಮೋಹವ್ಯಪಾಶ್ರಯಃ ।
ಬ್ರಾಹ್ಮಣ್ಯಂ ದುರ್ಲಭಂ ಪ್ರಾಪ್ಯ ಕರೋತ್ಯಲ್ಪಮತಿಃ ಸದಾ । ॥ ೧೬ ॥

ಸ ದ್ವಿಜೋ ವೈಶ್ಯತಾಮೇತಿ ವೈಶ್ಯೋ ವಾ ಶೂದ್ರತಾಮಿಯಾತ್ ।
ಸ್ವಧರ್ಮಾತ್ಪ್ರಚ್ಯುತೋ ವಿಪ್ರಸ್ತತಃ ಶೂದ್ರತ್ವಮಾಪ್ನುಯಾತ್ ॥ ೧೭ ॥

---

೧೩. ಬ್ರಾಹ್ಮಣನಾದವನು ತನ್ನ ದುಷ್ಕೃತ್ಯದಿಂದಲೇ ತನ್ನ ಉನ್ನತ ಸ್ಥಾನದಿಂದ ಭ್ರಷ್ಟನಾಗುವನು. ಆ ಕರ್ಮಪ್ರಭಾವದಿಂದ ತಾನು ಶ್ರೇಷ್ಠವಾದ ವರ್ಣವನ್ನೇ ಹೊಂದಿದ್ದರೂ ಅದರಿಂದ ಕೆಳಕ್ಕೆ ಸೆಳೆಯಲ್ಪಡುವನು.

೧೪. ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಬ್ರಾಹ್ಮಣೋಚಿತವಾದ ಧರ್ಮವನ್ನೇ ನಡೆಸಿಕೊಂಡುಬರುತ್ತಾ ಬ್ರಾಹ್ಮಣ್ಯವನ್ನೇ ಅವಲಂಬಿಸುವುದರಿಂದ ಅವನು ಮುಂದೆ ಬ್ರಾಹ್ಮಣನಾಗಿ ಹುಟ್ಟುವನು.

೧೫. ಯಾವ ಬ್ರಾಹ್ಮಣನು ತನ್ನ ಧರ್ಮವನ್ನು ಬಿಟ್ಟು, ಕ್ಷತ್ರಿಯನ ಧರ್ಮಗಳನ್ನು ಅವಲಂಬಿಸುವನೋ ಅವನು ಬ್ರಾಹ್ಮಣ್ಯದಿಂದ ಭ್ರಷ್ಟನಾಗಿ ಕ್ಷತ್ರಿಯ ಜಾತಿಯಲ್ಲಿ ಹುಟ್ಟುವನು.

೧೬-೧೭. ಯಾವ ದ್ವಿಜನು ಲೋಭ ಮೋಹಗಳ ಸೆಳವಿಗೆ ಸಿಕ್ಕಿ ವೈಶ್ಯನ ಧರ್ಮವನ್ನು ಅನುಸರಿಸುವನೋ-ಆ ಅಲ್ಪಬುದ್ಧಿಯು ದುರ್ಲಭವಾದ ಬ್ರಾಹ್ಮಣ ಜನ್ಮವನ್ನು ಪಡೆದಿದ್ದರೂ ಸಹ, ಸತ್ತನಂತರ ವೈಶ್ಯನಾಗಿ ಹುಟ್ಟುವನು. ವೈಶ್ಯನೂ ಸಹ ಶೂದ್ರ ಧರ್ಮವನ್ನಾಚರಿಸುತ್ತಿದ್ದರೆ ಶೂದ್ರನಾಗುವನು. ಯಾವ ಬ್ರಾಹ್ಮಣನು ತನ್ನ ಧರ್ಮದಿಂದ ಪರಿಚ್ಯುತನಾಗುವನೋ-

ತತ್ರಾಸೌ ನಿರಯಂ ಪ್ರಾಪ್ತೋ ವರ್ಣಭ್ರಷ್ಟೋ ಬಹಿಷ್ಕೃತಃ ।
ಬ್ರಹ್ಮಲೋಕಾತ್ಪರಿಭ್ರಷ್ಟಃ ಶೂದ್ರಯೋನೌ ಪ್ರಜಾಯತೇ ॥ ೧೮ ॥

ಕ್ಷತ್ರಿಯೋ ವಾ ಮಹಾಭಾಗೋ ವೈಶ್ಯೋ ವಾ ಧರ್ಮಚಾರಿಣಿ ।
ಸ್ವಾನಿ ಕರ್ಮಾಣ್ಯಪಾಕೃತ್ಯ ಶೂದ್ರಕರ್ಮ ನಿಷೇವತೇ ॥ ೧೯ ॥

ಸ್ವಸ್ಥಾನಾತ್ಸ ಪರಿಭ್ರಷ್ಟೋ ವರ್ಣಸಂಕರತಾಂ ಗತಃ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರತ್ವಂ ಯಾತಿ ತಾದೃಶಃ ॥ ೨೦ ॥

ಯಸ್ತು ಶೂದ್ರಃ ಸ್ವಧರ್ಮೇಣ ಜ್ಞಾನವಿಜ್ಞಾನವಾನ್ ಶುಚಿಃ ।
ಧರ್ಮಜ್ಞೋ ಧರ್ಮನಿರತಃ ಸ ಧರ್ಮಫಲಮಶ್ನುತೇ ॥ ೨೧ ॥

ಇದಂ ಚೈವಾಪರಂ ದೇವಿ ಬ್ರಹ್ಮಣಾ ಸಮುದಾಹೃತಂ ।
ಅಧ್ಯಾತ್ಮಂ ನೈಷ್ಠಿಕೀ ಸಿದ್ಧಿರ್ಧರ್ಮಕಾಮೈರ್ನಿಷೇವ್ಯತೇ ॥ ೨೨ ॥

---

೧೮. ಆತನು ಸತ್ತನಂತರ ತನ್ನ ಜಾತಿಯಿಂದ ಭ್ರಷ್ಟನಾಗಿ, ಬ್ರಾಹ್ಮಣ ಸಮುದಾಯದಲ್ಲಿ ಅವಕಾಶ ದೊರೆಯದೆ ಶೂದ್ರ ಜಾತಿಯಲ್ಲಿ ಹುಟ್ಟುವನು.

೧೯-೨೦. ಎಲೈ ಭಾಗ್ಯಶಾಲಿನಿಯೇ, ಧರ್ಮನಿರತಳೇ ! ಕೇಳು ಕ್ಷತ್ರಿಯನಾಗಲಿ, ವೈಶ್ಯನಾಗಲಿ, ತಮ್ಮತಮ್ಮ ಕರ್ಮಗಳನ್ನು ಬಿಟ್ಟು ಶೂದ್ರ ಕರ್ಮವನ್ನು ಆಚರಿಸಿದರೆ ತನ್ನ ಸ್ಥಾನದಿಂದ ಭ್ರಷ್ಟನಾಗುವನು. ಮತ್ತು ಅಂತಹ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಶೂದ್ರತ್ವವನ್ನು ಪಡೆಯುವರು.

೨೧. ಯಾವ ಶೂದ್ರನು ಧರ್ಮಸ್ವರೂಪವನ್ನು ಅರಿತು, ತನಗೆ ಉಚಿತ ವಾದ ಧರ್ಮದಲ್ಲೇ ನಿರತನಾಗಿ, ಜ್ಞಾನದಿಂದಲೂ, ವಿಜ್ಞಾನದಿಂದಲೂ ಸಂಪನ್ನ ನಾಗಿ ಶುಚಿಯಾಗಿರುವನೋ ಅವನು ಆ ಧರ್ಮದ ಫಲವನ್ನು ಹೊಂದುವನು.

೨೨. ಎಲಾ ದೇವಿ ! ಬ್ರಹ್ಮನು ಇದೊಂದು ಅಂಶವನ್ನು ತಿಳಿಸಿರು ವನು. " ಧರ್ಮ ಕಾಮಗಳಲ್ಲಿ ನಿಷ್ಠೆಯಿಂದ ಇದ್ದರೆ ಆಧ್ಯಾತ್ಮಿಕವಾದ ಸಿದ್ಧಿಯು ಉಂಟಾಗುವುದು " ಎಂದು.

ಉಗ್ರಾನ್ನಂ ಗರ್ಹಿತಂ ದೇವಿ ಗಣಾನ್ನಂ ಶ್ರಾದ್ಧಸೂತಕಂ ।
ಘುಷ್ಟಾನ್ನಂ ನೈವ ಭೋಕ್ತವ್ಯಂ ಶೂದ್ರಾನ್ನಂ ನೈವ ವಾ ಕ್ವಚಿತ್ ॥ ೨೩ ॥

ಶೂದ್ರಾನ್ನಂ ಗರ್ಹಿತಂ ದೇವಿ ಸದಾ ದೇವೈರ್ಮಹಾತ್ಮಭಿಃ ।
ಪಿತಾಮಹಮುಖೋತ್ಸೃಷ್ಟಂ ಪ್ರಮಾಣಮಿತಿ ಮೇ ಮತಿಃ ॥ ೨೪ ॥

ಶೂದ್ರಾನ್ನೇನಾವಶೇಷೇಣ ಜಠರೇ ಮ್ರಿಯತೇ ದ್ವಿಜಃ ।
ಆಹಿತಾಗ್ನಿಸ್ತಥಾ ಯಜ್ವಾ ಸ ಶೂದ್ರಗತಿಭಾಗ್ಭವೇತ್ ॥ ೨೫ ॥

ತೇನ ಶೂದ್ರಾನ್ನಶೇಷೇಣ ಬ್ರಹ್ಮಸ್ಥಾನಾದಪಾಕೃತಃ ।
ಬ್ರಾಹ್ಮಣಃ ಶೂದ್ರತಾಮೇತಿ ನಾಸ್ತಿ ತತ್ರ ವಿಚಾರಣಾ ॥ ೨೬ ॥

---

೨೩. ಎಲೌ ದೇವಿ! ಕ್ರೂರನಾದವನ ಅನ್ನವು ನಿಂದಿತವಾದುದು. ಅದೇರೀತಿ ಹತ್ತು ಜನರು ಸೇರಿ ನಡೆಸುವ ಸಮಾರಾಧನೆಯ ಅನ್ನವೂ, ಶ್ರಾದ್ಧದ ಶೇಷವೂ, ಸೂತಕದ ಮನೆಯ ಅನ್ನವೂ, ಡಂಗುರ ಹೊಡೆಸಿ ಕರೆಸಿ ನೀಡುವ ಅನ್ನವೂ, ಶೂದ್ರಾನ್ನವೂ ಬಹುನಿಂಧ್ಯವಾದುದು. ಇವನ್ನು ಎಂದಿಗೂ ಊಟ ಮಾಡಬಾರದು.

೨೪. ಎಲೌ ದೇವಿ! ಶೂದ್ರಾನ್ನವನ್ನು ದೇವತೆಗಳೂ, ಮಹಾತ್ಮರೂ ಎಂದಿನಿಂದಲೂ ನಿಂದಿಸಿಕೊಂಡೇ ಬರುತ್ತಿರುವರು. ಈ ಮಾತು ಪಿತಾಮಹನ ಮುಖದಿಂದಲೇ ಬಂದಿರುವುದರಿಂದ ಇದನ್ನು ನಾನು ಪ್ರಮಾಣವೆಂದೆಣಿಸುವೆನು.

೨೫. ಆಹಿತಾಗ್ನಿಯೇ ಆಗಲಿ, ಯಾಗಶೀಲನೇ ಆಗಲಿ, ಸಾಯುವಾಗ ಅವನ ಹೊಟ್ಟೆಯಲ್ಲಿ ಶೂದ್ರಾನ್ನವಿದ್ದರೆ, ಅವನು ಮುಂದೆ ಶೂದ್ರನಾಗಿಯೇ ಹುಟ್ಟುವನು.

೨೬. ಏಕೆಂದರೆ ತನ್ನ ಜಠರದಲ್ಲಿದ್ದ ಶೂದ್ರನ ಅನ್ನದ ಶೇಷದಿಂದ ಅವನು ಬ್ರಾಹ್ಮಣ್ಯದಿಂದ ಸೆಳೆಯಲ್ಪಟ್ಟು ಶೂದ್ರತ್ವವನ್ನೇ ಹೊಂದುವನು. ಇದರಲ್ಲಿ ವಿಚಾರಕ್ಕೆ ಅವಕಾಶವೇ ಇಲ್ಲ.

ಯಸ್ಯಾನ್ನೇನಾವಶೇಷೇಣ ಜಠರೇ ಮ್ರಿಯತೇ ದ್ವಿಜಃ ।
ತಾಂ ತಾಂ ಯೋನಿಂ ವ್ರಜೇದ್ವಿಪ್ರೋ ಯಸ್ಯಾನ್ನಮುಪಜೀವತಿ ॥ ೨೭ ॥

ಬ್ರಾಹ್ಮಣತ್ವಂ ಸುಖಂ ಪ್ರಾಪ್ಯ ದುರ್ಲಭಂ ಯೋಽವಮನ್ಯತೇ ।
ಅಭೋಜ್ಯಾನ್ನಾನಿ ವಾಶ್ನಾತಿ ಸ ದ್ವಿಜತ್ವಾತ್ಪತೇತ ವೈ ॥ ೨೮ ॥

ಸುರಾಪೋ ಬ್ರಹ್ಮಹಾ ಸ್ತೇಯೀ ಚೌರೋ ಭಗ್ನವ್ರತೋಽಶುಚಿಃ ।
ಸ್ವಾಧ್ಯಾಯವರ್ಜಿತಃ ಪಾಪೋ ಲುಬ್ಧೋ ನೈಕೃತಿಕಃ ಶಠಃ ॥ ೨೯ ॥

ಅವ್ರತೀ ವೃಷಲೀಭರ್ತಾ ಕುಂಡಾಶೀ ಸೋಮವಿಕ್ರಯೀ ।
ವಿಹೀನಸೇವೀ ವಿಪ್ರೋ ಹಿ ಪತತೇ ಬ್ರಹ್ಮಯೋನಿತಃ ॥ ೩೦ ॥

---

೨೭. ದ್ವಿಜನಾದವನು ಸಾಯುವಾಗ ತನ್ನ ಹೊಟ್ಟೆಯಲ್ಲಿ ಯಾರಾರ ಅನ್ನಶೇಷವನ್ನು ಹೊಂದಿ ಇರುವನೋ ಆ ದ್ವಿಜನು ಸತ್ತನಂತರ ಆಯಾ ಜಾತಿಯಲ್ಲಿಯೇ ಜನ್ಮವನ್ನು ಪಡೆಯುವನು.

೨೮. ಯಾವನು ದುರ್ಲಭವಾದಂತಹ ಬ್ರಾಹ್ಮಣ್ಯವನ್ನು ಸುಖವಾಗಿ ಪಡೆದಿದ್ದರೂ ಅದನ್ನು ತಿರಸ್ಕರಿಸುವನೋ, ಇಲ್ಲವೇ ಭೋಜನಕ್ಕೆ ಅನರ್ಹವೆಂದು ನಿಷಿದ್ಧವಾಗಿರುವ ಅನ್ನವನ್ನು ತಿನ್ನುವನೋ ಅವನು ಬ್ರಾಹ್ಮಣ್ಯದಿಂದ ಪತಿತನಾಗುವನು.

೨೯-೩೧. "ಹೆಂಡವನ್ನು ಕುಡಿಯುವವನು, ಬ್ರಹ್ಮಹತ್ಯಮಾಡಿದವನು, ಕದ್ದವನು, ಕಳ್ಳನು, ವ್ರತಭ್ರಷ್ಟನು, ಶೌಚವಿಲ್ಲದವನು, ವೇದಾಧ್ಯಯನ ಬಿಟ್ಟವನು, ಪಾಪಕಾರ್ಯಾಸಕ್ತನು, ಲೋಭಿ, ನಿಕಾರಕ್ಕೆ (ನಿಂದೆಗೆ) ಪಾತ್ರನಾದವನು, ಒಳಗೊಳಗೇ ಕೆಡುಕುಮಾಡುವವನು, ವ್ರತಹೀನನು, ಮೈನೆರೆದ ಹುಡುಗಿಯನ್ನು ಮದುವೆಯಾದವನು, ಕುಂಡನ (ತಂದೆಯು ಬದುಕಿರುವಾಗಲೇ ತಾಯಾದವಳು ಮತ್ತೊಬ್ಬನ ಸಹವಾಸ ಮಾಡಿದುದರಿಂದ ಜನ್ಮತಾಳಿದವನ) ಅನ್ನವನ್ನು ತಿಂದವನು, ಸೋಮವನ್ನು ಮಾರಿದವನು, ನೀಚರನ್ನು ಸೇವಿಸುವವನು, ಇಂಥವರಲ್ಲಿ ಒಬ್ಬನಾದ ವಿಪ್ರನು ಬ್ರಾಹ್ಮಣ ಜನ್ಮದಿಂದ ವಂಚಿತನಾಗುವನು. ಮತ್ತು ಯಾವನು ಗುರುಪತ್ನೀಗಮನವನ್ನು ಮಾಡುವನೋ, ಯಾವನು ಗುರು

ಗುರುತಲ್ಪೀ ಗುರುದ್ವೇಷೀ ಗುರುಕುತ್ಸಾರತಿಶ್ಚ ಯಃ ।
ಬ್ರಹ್ಮದ್ವಿಡ್ವಾಪಿ ಪತತಿ ಬ್ರಾಹ್ಮಣೋ ಬ್ರಹ್ಮಯೋನಿತಃ ॥ ೩೦ ॥

ಏಭಿಸ್ತು ಕರ್ಮಭಿರ್ದೇವಿ ಶುಭೈರಾಚರಿತೈಸ್ತಥಾ ।
ಶೂದ್ರೋ ಬ್ರಾಹ್ಮಣತಾಂ ಗಚ್ಛೇದ್ವೈಶ್ಯಃ ಕ್ಷತ್ರಿಯತಾಂ ವ್ರಜೇತ್ ॥ ೩೧ ॥

ಶೂದ್ರಃ ಕರ್ಮಾಣಿ ಸರ್ವಾಣಿ ಯಥಾನ್ಯಾಯಂ ಯಥಾವಿಧಿ ।
ಸರ್ವಾತಿಥ್ಯಮುಪಾತಿಷ್ಠನ್ ಶೇಷಾನ್ನಕೃತಭೋಜನಃ ॥ ೩೨ ॥

ಶುಶ್ರೂಷಾಂ ಪರಿಚರ್ಯಾಂ ಯೋ ಜ್ಯೇಷ್ಠವರ್ಣೇ ಪ್ರಯತ್ನತಃ ।
ಕುರ್ಯಾದವಿಪನಃ ಶ್ರೇಷ್ಠಃ ಸತತಂ ಸತ್ಪಥೇ ಸ್ಥಿತಃ ॥ ೩೪ ॥

ದೇವದ್ವಿಜಾತಿಸತ್ಕರ್ತಾ ಸರ್ವಾತಿಥ್ಯಕೃತವ್ರತಃ ।
ಋತುಕಾಲಾಭಿಗಾಮೀ ಚ ನಿಯತೋ ನಿಯತಾಶನಃ ॥ ೩೫ ॥

ವನ್ನು ದ್ವೇಷಿಸುವನೋ, ಯಾವನು ಗುರುನಿಂದೆಯಲ್ಲೇ ಆಸಕ್ತನೋ, ಯಾವನು ಬ್ರಾಹ್ಮಣರನ್ನೇ ,ದ್ವೇಷಿಸುವನೋ–ಆ ಬ್ರಾಹ್ಮಣನು ಬ್ರಾಹ್ಮಣ್ಯದಿಂದ ಪತಿತನಾಗುವನು.

೩೧. ಎಲೌ ದೇವಿ! ಹಾಗೆಯೇ ಶುಭವಾದ ಕರ್ಮಗಳನ್ನು ಆಚರಿಸಿದಲ್ಲಿ ಶೂದ್ರನು ಬ್ರಾಹ್ಮಣನಾಗುವನು. ವೈಶ್ಯನು ಕ್ಷತ್ರಿಯನಾಗುವನು.

೩೨. ಯಾವ ಶೂದ್ರನು ನ್ಯಾಯವನ್ನೂ, ವಿಧಿಯನ್ನೂ ಮೀರದೆ ತನಗೆ ನಿಯಮಿತವಾದ ಕರ್ಮಗಳನ್ನೇ ಆಚರಿಸುತ್ತಾ, ಅತಿಥಿಗಳಾಗಿ ಬಂದವರೆಲ್ಲರನ್ನೂ ಉಪಚರಿಸಿದ ನಂತರವೇ, ಶೇಷಾನ್ನವನ್ನು ಭುಜಿಸುತ್ತಿರುವನೋ-

೩೪. ಮತ್ತು ತನಗಿಂತಲೂ ಮೇಲುಜಾತಿಯವರೆನಿಸಿದವರ ಸೇವೆಯನ್ನೂ, ಸಹಾಯವನ್ನೂ ತನ್ನಿಷ್ಟದಿಂದಲೇ ಮಾಡುತ್ತಾ ಎಂದಿಗೂ ಎದುರು ಬೀಳದೆ ಸನ್ಮಾರ್ಗವಲ್ಲಿಯೇ ನಡೆಯುತ್ತಿರುವನೋ-

೩೫. ಮತ್ತು ದೇವರನ್ನೂ ಬ್ರಾಹ್ಮಣರನ್ನೂ ಸತ್ಕರಿಸುತ್ತಾ, ಎಲ್ಲರ ಆತಿಥ್ಯವೇ ತನ್ನ ವ್ರತವೆಂದು ಬಗೆದು, ನಿಯಮಶೀಲನಾಗಿಯೂ, ಸ್ವಲ್ಪಾಹಾರಿಯಾಗಿಯೂ, ಋತುಕಾಲದಲ್ಲಿ ಮಾತ್ರ ತನ್ನ ಪತ್ನಿಯ ಸಮಾಗಮ ಮಾಡುವವನಾಗಿಯೂ ಇರುವನೋ–

ದಕ್ಷಃ ಶಿಷ್ಟಜನಾನ್ವೇಷೀ ಶೇಷಾನ್ನ ಕೃತಭೋಜನಃ ।
ವೃಥಾ ಮಾಂಸಂ ನ ಭುಂಜೀತ ಶೂದ್ರೋ ವೈಶ್ಯತ್ವಮೃಚ್ಛತಿ ॥ ೩೬ ॥

ಋತವಾಗನಹಂವಾದೀ ನಿರ್ದ್ವಂದ್ವಃ ಸಾಮಕೋವಿದಃ ।
ಯಜತೇ ನಿತ್ಯಯಜ್ಞೈಶ್ಚ ಸ್ವಾಧ್ಯಾಯಪರಮಃ ಶುಚಿಃ ॥ ೩೭ ॥

ದಾಂತೋ ಬ್ರಾಹ್ಮಣಸತ್ಕರ್ತಾ ಸರ್ವವರ್ಣಾನಸೂಯಕಃ ।
ಗೃಹಸ್ಥವ್ರತಮಾತಿಷ್ಠನ್ದ್ವಿಕಾಲಕೃತಭೋಜನಃ ॥ ೩೮ ॥

ಶೇಷಾಶೀ ವಿಜಿತಾಹಾರೋ ನಿಷ್ಕಾಮೋ ನಿರಹಂವದಃ ।
ಅಗ್ನಿಹೋತ್ರಮುಪಾಸೀನೋ ಜುಹ್ವಾನಶ್ಚ ಯಥಾವಿಧಿ ॥ ೩೯ ॥

---

೩೬. ಮತ್ತು ಸಮರ್ಥನಾಗಿಯೂ, ಶಿಷ್ಟವಾದ ಜನರನ್ನೇ ಹುಡುಕುತ್ತಿರುವವನಾಗಿಯೂ, ಸರ್ವದಾ ಮತ್ತೊಬ್ಬರಿಗೆ ಊಟಮಾಡಿಸಿದ ನಂತರವೇ ಉಳಿದ ಅನ್ನವನ್ನು ಭುಜಿಸುವವನಾಗಿಯೂ, ನಿಷ್ಕಾರಣವಾಗಿ ಮಾಂಸವನ್ನು ತಿನ್ನದಿರುವವನಾಗಿಯೂ ಇರುವನೋ-ಆ ಶೂದ್ರನು ಮುಂದೆ ವೈಶ್ಯನಾಗಿ ಹುಟ್ಟುವನು.

೩೭. ಯಾವನು ಸತ್ಯವನ್ನೇ ನುಡಿಯುತ್ತಾ ಅಹಂಕಾರಿಯಲ್ಲದೆಯೂ, ದ್ವಂದ್ವಾತೀತನಾಗಿಯೂ, ಸಾಮಗಾನದಲ್ಲಿ ನುರಿತವನಾಗಿಯೂ ಇರುವನೋ-

೩೮. ಮತ್ತು ದಮನಶೀಲನಾಗಿಯೂ, ಬ್ರಾಹ್ಮಣ ಸತ್ಕಾರಪ್ರಿಯನಾಗಿಯೂ, ಯಾವ ವರ್ಣದಲ್ಲಿಯೂ ಅಸೂಯೆಯಿಲ್ಲದವನಾಗಿಯೂ ಇರುತ್ತಾ ಗೃಹಸ್ಥಧರ್ಮವನ್ನು ಪರಿಪಾಲಿಸುತ್ತಾ ಎರಡುಹೊತ್ತು ಮಾತ್ರವೇ ಊಟ ಮಾಡುತ್ತಲೂ-

೩೯. ಅತಿಥಿಗಳಿಗೆ ಊಟವಾದ ನಂತರ ಉಳಿದನ್ನವನ್ನೇ ಭುಜಿಸುತ್ತಲೂ ಇರುವನೋ-ಮತ್ತು ಆಹಾರದ ಅಗತ್ಯವಿಲ್ಲದೆ ಯಾವೊಂದಾಸೆಯೂ ಇಲ್ಲದೆ, ಅಹಂಕಾರವೂ ಇಲ್ಲದೆ ಇರುತ್ತಾ ಅಗ್ನಿಹೋತ್ರವನ್ನು ಉಪಾಸನೆ ಮಾಡುತ್ತಾ ವಿಧಿವತ್ತಾಗಿ ಹೋಮಮಾಡುತ್ತಿರುವನೋ-

ಸರ್ವಾತಿಥ್ಯಮುಪಾತಿಷ್ಠನ್ ಶೇಷಾನ್ನಕೃತಭೋಜನಃ ।
ತ್ರೇತಾಗ್ನಿಮಾತ್ರವಿಹಿತಂ ವೈಶ್ಯೋ ಭವತಿ ಚ ದ್ವಿಜಃ ॥ ೪೦ ॥

ಸ ವೈಶ್ಯಃ ಕ್ಷತ್ರಿಯಕುಲೇ ಶುಚಿರ್ಮಹತಿ ಜಾಯತೇ ।
ಸ ವೈಶ್ಯಃ ಕ್ಷತ್ರಿಯೋ ಜಾತೋ ಜನ್ಮಪ್ರಭೃತಿ ಸಂಸ್ಕೃತಃ ॥ ೪೧ ॥

ಉಪನೀತೋ ವ್ರತಪರೋ ದ್ವಿಜೋ ಭವತಿ ಸಂಸ್ಕೃತಃ ।
ದದಾತಿ ಯಜತೇ ಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ ॥ ೪೨ ॥

ಅಧೀತ್ಯ ಸ್ವರ್ಗಮನ್ವಿಚ್ಛಂಸ್ತ್ರೇತಾಗ್ನಿಶರಣಃ ಸದಾ ।
ಆರ್ದ್ರಹಸ್ತಪ್ರದೋ ನಿತ್ಯಂ ಪ್ರಜಾ ಧರ್ಮೇಣ ಪಾಲಯನ್ ॥ ೪೩ ॥

ಸತ್ಯಃ ಸತ್ಯಾನಿ ಕುರುತೇ ನಿತ್ಯಂ ಯಃ ಶುದ್ಧದರ್ಶನಃ ।
ಧರ್ಮದಂಡೇನ ನಿರ್ದಗ್ಧೋ ಧರ್ಮಕಾಮಾರ್ಥಸಾಧಕಃ ॥ ೪೪ ॥

---

೪೦. ಮತ್ತು ಸಕಲರೀತಿಯ ಅತಿಥಿಗಳನ್ನೂ ಸತ್ಕರಿಸುತ್ತಾ, ಶೇಷಾನ್ನ ಭೋಜಿಯಾಗಿಯೂ, ತ್ರೇತಾಗ್ನಿಪರಿಚರ್ಯಾನಿರತನಾಗಿಯೂ ಇರುವನೋ ಆ ವೈಶ್ಯನು ದ್ವಿಜನಾಗಿ ಹುಟ್ಟುವನು.

೪೧. ಆ ಶುಚಿಯಾದ ವೈಶ್ಯನು ಉತ್ತಮವಾದ ಕ್ಷತ್ರಿಯವಂಶದಲ್ಲಿ ಹುಟ್ಟುವನು. ಅನಂತರ ಜಾತಕರ್ಮಾದಿ ಸಂಸ್ಕಾರವನ್ನು ಪಡೆದು-

೪೨. ಉಪನಯನವಾದ ನಂತರ ವ್ರತಗಳನ್ನು ಆಚರಿಸುತ್ತಾ ಸುಸಂಸ್ಕೃತನಾದ ದ್ವಿಜನೆನಿಸುವನು. ಮತ್ತು ದಾನಶೀಲನಾಗಿ ಸಮೃದ್ಧವಾದಂತಹ ದಕ್ಷಿಣೆಗಳಿಂದ ಕೂಡಿದ ಯಾಗಗಳನ್ನು ಮಾಡುತ್ತಾ-

೪೩. ಅಧ್ಯಯನಪರನಾಗಿ ಸ್ವರ್ಗವನ್ನು ಬಯಸುತ್ತಾ ತ್ರೇತಾಗ್ನಿಗಳನ್ನು ಸರ್ವದಾ ಆರಾಧಿಸುತ್ತಿರುವವನಾಗಿಯೂ, ಮತ್ತು ದಾನಜಲದಿಂದ ಸರ್ವದಾ ಆರ್ದ್ರವಾಗಿ (ಒದ್ದೆಯಾಗಿ) ರುವ ಹಸ್ತವುಳ್ಳವನಾಗಿ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಿರುವವನಾಗಿಯೂ-

೪೪. ಮತ್ತು-ನಿತ್ಯವೂ ಸತ್ಯನಿಷ್ಠನಾಗಿ ಸತ್ಯಕರ್ಮಗಳನ್ನೇ ಮಾಡುತ್ತಾ ಧರ್ಮದಿಂದ ದಂಡನೆಯನ್ನು ಮಾಡುತ್ತಾ ಪಾವನವಾದ ದರ್ಶನವುಳ್ಳವನಾಗಿ ಧರ್ಮ, ಅರ್ಥ, ಕಾಮಗಳನ್ನು ಸಾಧಿಸುತ್ತಿರುವವನಾಗಿಯೂ-

ಯಂತ್ರಿತಃ ಕಾರ್ಯಕರಣೈಃ ಷಡ್ಭಾಗಕೃತಲಕ್ಷಣಃ ।
ಗ್ರಾಮ್ಯಧರ್ಮಾನ್ನ ಸೇವೇತ ಸ್ವಚ್ಛಂದೇನಾರ್ಥಕೋವಿದಃ ॥ ೪೫ ॥

ಋತುಕಾಲೇ ತು ಧರ್ಮಾತ್ಮಾ ಪತ್ನೀಮುಪಾಶ್ರಯೇತ್ಸದಾ ।
ಸದೋಪವಾಸೀ ನಿಯತಃ ಸ್ವಾಧ್ಯಾಯನಿರತಃ ಶುಚಿಃ ॥ ೪೬ ॥

ವಹಿಸ್ಕಾಂತರಿತೇ ನಿತ್ಯಂ ಶಯಾನೋಽಸ್ತಿ ಸದಾ ಗೃಹೇ ।
ಸರ್ವಾತಿಥ್ಯಂ ತ್ರಿವರ್ಗಸ್ಯ ಕುರ್ವಾಣಃ ಸುಮನಾಃ ಸದಾ ॥ ೪೭ ॥

ಶೂದ್ರಾಣಾಂ ಚಾನ್ನಕಾಮಾನಾಂ ನಿತ್ಯಂ ಸಿದ್ಧಮಿತಿ ಬ್ರುವನ್ ।
ಸ್ವಾರ್ಥಾದ್ವಾ ಯದಿ ವಾ ಕಾಮಾನ್ನ ಕಿಂಚಿದುಪಲಕ್ಷಯೇತ್ ॥ ೪೮ ॥

ಪಿತೃದೇವಾತಿಥಿಕೃತೇ ಸಾಧನಂ ಕುರುತೇ ಚ ಯತ್ ।
ಸ್ವವೇಶ್ಮನಿ ಯಥಾನ್ಯಾಯಮುಪಾಸ್ತೇ ಭೈಕ್ಷ್ಯಮೇವ ಚ ॥ ೪೯ ॥

೪೫-೪೬. ಮತ್ತೂ ರಾಜಕಾರ್ಯಗಳಿಂದ ಬಿಡುವಿಲ್ಲದವನಾಗಿಯೂ, ಪ್ರಜೆಗಳಿಂದ ಆರನೆಯೊಂದುಪಾಲು ಮಾತ್ರ ಕಂದಾಯವಾಗಿ ತೆಗೆದುಕೊಳ್ಳುತ್ತಾ, ಅರ್ಥಶಾಸ್ತ್ರದಲ್ಲಿ ನಿಪುಣನಾಗಿಯೂ, ಸ್ವೇಚ್ಛೆಯಿಂದ ಗ್ರಾಮ್ಯಧರ್ಮ (ಮೈಥುನಾದಿಗಳು) ಗಳಲ್ಲಿ ಆಸಕ್ತನಾಗದೆಯೂ ಇರುತ್ತಲೂ, ಧರ್ಮೈಕತತ್ಪರನಾಗಿ ಋತುಕಾಲದಲ್ಲಿ ಮಾತ್ರ ಪತ್ನಿಯೊಡನೆ ಕೂಡುತ್ತಲೂ, ಸರ್ವದಾ ಉಪವಾಸಾದಿಗಳಿಂದಲೂ, ಅಧ್ಯಯನಾದಿಗಳಿಂದಲೂ, ಶುಚಿಯಾಗಿ-

೪೭. ಮನೆಯಲ್ಲಿಯೇ ಮಲಗುತ್ತಾ, ಎಲ್ಲಿಯೂ ಆತಿಥ್ಯವನ್ನು ನಡೆಸುತ್ತಾ, ಸರ್ವದಾ ಸಂತೋಷಚಿತ್ತನಾಗಿ-

೪೮-೪೯. ಅನ್ನವನ್ನಪೇಕ್ಷಿಸುವ ಶೂದ್ರರಿಗೂ ಸಹ ಇಲ್ಲವೆಂದು ಹೇಳದೆ ಸಿದ್ಧವಾಗಿದೆಯೆನ್ನುತ್ತಾ, ಸ್ವಾರ್ಥದಿಂದಲೂ, ಕಾಮದಿಂದಲೂ ಯಾವೊಂದನ್ನೂ ಬಯಸದೆ ತಾನು ಸಂಪಾದಿಸಿದುದೆಲ್ಲವನ್ನೂ ಪಿತೃಗಳಿಗೂ, ಅತಿಥಿಗಳಿಗೂ, ದೇವರಿಗೂ ಮೀಸಲಾಗಿರಿಸಿ ತಾನು ಮಾತ್ರ ತನ್ನ ಮನೆಯಲ್ಲಿಯೂ ಭಿಕ್ಷಾವೃತ್ತಿಯನ್ನೇ ಅವಲಂಬಿಸುತ್ತಲೂ-

ದ್ವಿಕಾಲಮಗ್ನಿಹೋತ್ರಂ ಚ ಜುಹ್ವಾನೋ ವೈ ಯಥಾವಿಧಿ ।
ಗೋಬ್ರಾಹ್ಮಣಹಿತಾರ್ಥಾಯ ರಣೇ ಚಾಭಿಮುಖೋ ಹತಃ ॥ ೫೦ ॥

ತ್ರೇತಾಗ್ನಿಮಂತ್ರಪೂತೇನ ಸಮಾವಿಶ್ಯ ದ್ವಿಜೋ ಭವೇತ್ ।
ಜ್ಞಾನವಿಜ್ಞಾನಸಂಪನ್ನಃ ಸಂಸ್ಕೃತೋ ವೇದಪಾರಗಃ ॥ ೫೧ ॥

ವೈಶ್ಯೋ ಭವತಿ ಧರ್ಮಾತ್ಮಾ ಕ್ಷತ್ರಿಯಃ ಸ್ವೇನಕರ್ಮಣಾ ।
ಏತೈಃ ಕರ್ಮಫಲೈರ್ದೇವಿ ನ್ಯೂನಜಾತಿಕುಲೋದ್ಭವಃ ॥ ೫೨ ॥

ಶೂದ್ರೋಽಪ್ಯಾಗಮಸಂಪನ್ನೋ ದ್ವಿಜೋ ಭವತಿ ಸಂಸ್ಕೃತಃ ।
ಬ್ರಾಹ್ಮಣೋ ವಾಪ್ಯಸದ್ವೃತ್ತಃ ಸರ್ವಸಂಕರಭೋಜನಃ ॥ ೫೩ ॥

ಸ ಬ್ರಾಹ್ಮಣ್ಯಂ ಸಮುತ್ಸೃಜ್ಯ ಶೂದ್ರೋ ಭವತಿ ತಾದೃಶಃ ।
ಕರ್ಮಭಿಃ ಶುಚಿಭಿರ್ದೇವಿ ಶುದ್ಧಾತ್ಮಾ ವಿಜಿತೇಂದ್ರಿಯಃ ॥ ೫೪ ॥

---

೫೦. ಮತ್ತು ಎರಡುಹೊತ್ತೂ ವಿಧ್ಯುಕ್ತವಾಗಿ ಅಗ್ನಿಹೋತ್ರವನ್ನು ಮಾಡುತ್ತಾ, ಗೋಬ್ರಾಹ್ಮಣರ ಪರಿಪಾಲನೆಗಾಗಿ ಯುದ್ಧದಲ್ಲಿ ಹೋರಾಡಿ ವೀರನಂತೆ ಯಾವ ಕ್ಷತ್ರಿಯನು ಮಡಿಯುವನೋ-ಆ ಕ್ಷತ್ರಿಯನು-

೫೧. ತ್ರೇತಾಗ್ನಿಪರ್ಯುಪಾಸನಾ ಬಲದಿಂದ ಜ್ಞಾನವಿಜ್ಞಾನಸಂಪನ್ನನೂ ಸುಸಂಸ್ಕೃತನೂ ವೇದಾಧ್ಯಯನನಿರತನೂ ಆದ ಬ್ರಾಹ್ಮಣನಾಗಿ ಹುಟ್ಟುವನು.

೫೨. ವೈಶ್ಯನು ಧರ್ಮಾತ್ಮನಾಗಿದ್ದರೆ ತನ್ನ ಕರ್ಮದಿಂದ ಕ್ಷತ್ರಿಯನಾಗುವನು. ಎಲೌ ದೇವಿ! ಈರೀತಿಯಾಗಿ ತನ್ನತನ್ನ ಕರ್ಮಬಲದಿಂದ ಕೀಳಾದ ಜಾತಿಯಲ್ಲಿ ಹುಟ್ಟಿದ್ದರೂ-

೫೩. ಶೂದ್ರನು, ವೇದಾಧ್ಯಯನಸಂಪನ್ನನಾದ ಬ್ರಾಹ್ಮಣನಾಗಿ ಹುಟ್ಟುವನು. ಬ್ರಾಹ್ಮಣನಾಗಿದ್ದರೂ, ಅಸದ್ವ್ಯವಹಾರನಿರತನಾಗಿ ಎಲ್ಲರೀತಿಯ ಸಾಂಕರ್ಯಪಡೆದಿರುವವರ ಮನೆಯಲ್ಲಿ ಭುಜಿಸುತ್ತಿದ್ದರೆ-

೫೪. ಬ್ರಾಹ್ಮಣ್ಯವನ್ನು ಕಳೆದುಕೊಂಡು ಅಂತಹ ಕರ್ಮಕ್ಕೇ ಉಚಿತವಾದ ಶೂದ್ರಜಾತಿಯಲ್ಲೇ ಹುಟ್ಟುವನು. ಎಲೌ ದೇವಿ! “ಶುದ್ಧಾತ್ಮನಾಗಿ ಇಂದ್ರಿಯಗಳನ್ನು ನಿಗ್ರಹಿಸಿರುತ್ತಾ ಶುದ್ಧವಾದ ಕರ್ಮಗಳನ್ನಾಚರಿಸುತ್ತಿದ್ದರೆ-

ಶೂದ್ರೋಽಪಿ ದ್ವಿಜವತ್ಸೇವ್ಯ ಇತಿ ಬ್ರಹ್ಮಾಬ್ರವೀತ್ಸ್ವಯಂ ।
ಸ್ವಭಾವಕರ್ಮಣಾ ಚೈವ ಯತ್ರ ಶೂದ್ರೋಽಧಿತಿಷ್ಠತಿ ॥ ೫೫ ॥

ವಿಶುದ್ಧಃ ಸ ದ್ವಿಜಾತಿಭ್ಯೋ ವಿಜ್ಞೇಯ ಇತಿ ಮೇ ಮತಿಃ ।
ನ ಯೋನಿರ್ನಾಪಿ ಸಂಸ್ಕಾರೋ ನ ಶ್ರುತಿರ್ನ ಚ ಸಂತತಿಃ ॥ ೫೬ ॥

ಕಾರಣಾನಿ ದ್ವಿಜತ್ವಸ್ಯ ವೃತ್ತಮೇವ ತು ಕಾರಣಂ ।
ಸರ್ವೋಽಯಂ ಬ್ರಾಹ್ಮಣೋ ಲೋಕೇ ವೃತ್ತೇನ ತು ವಿಧೀಯತೇ ॥ ೫೭ ॥

ವೃತ್ತೇ ಸ್ಥಿತಶ್ಚ ಶೂದ್ರೋಽಪಿ ಬ್ರಾಹ್ಮಣತ್ವಂ ಚ ಗಚ್ಛತಿ ।
ಬ್ರಹ್ಮಸ್ವಭಾವಃ ಸುಶ್ರೋಣಿ ಸಮಃ ಸರ್ವತ್ರ ಮೇ ಮತಃ ॥ ೫೮ ॥

---

೫೫. ಶೂದ್ರನೂ ಸಹ ಬ್ರಾಹ್ಮಣನಂತೆ ಸೇವೆಹೊಂದಲು ಅರ್ಹನು" ಎಂದು ಬ್ರಹ್ಮನೇ ಸಾಕ್ಷಾತ್ತಾಗಿ ಹೇಳಿರುವನು. "ಶೂದ್ರನಾದವನು ತನಗೆ ವಿಹಿತವಾದ ಕರ್ಮಗಳನ್ನೇ ಆಚರಿಸುತ್ತಿದ್ದರೆ ಅವನು ಎಲ್ಲಿದ್ದರೂ-

೫೬. ದ್ವಿಜರಿಗಿಂತಲೂ ಶುದ್ಧನೆಂಬುದಾಗಿ ಭಾವಿಸಬೇಕು" ಎಂಬುದು ನನ್ನ ಮತವು. "ಜಾತಿಯಾಗಲೀ, ಜಾತಕರ್ಮಾದಿ ಸಂಸ್ಕಾರಗಳಾಗಲೀ, ವೇದಗಳಾಗಲೀ, ವಂಶವಾಗಲೀ,-

೫೭. ಬ್ರಾಹ್ಮಣ್ಯಕ್ಕೆ ಕಾರಣಗಳಲ್ಲವು. ಮನುಷ್ಯನ ಶೀಲವೇ ಬ್ರಾಹ್ಮಣ್ಯಕ್ಕೆ ಕಾರಣವು. ಪ್ರತಿಯೊಬ್ಬ ಮಾನವನೂ, ತನ್ನ ಸದ್ವರ್ತನೆಯಿಂದ ಬ್ರಾಹ್ಮಣನಾಗುವನು.

೫೮. ಶೂದ್ರನಾದರೂ ಸದಾಚಾರಸಂಪನ್ನನಾಗಿದ್ದರೆ ಬ್ರಾಹ್ಮಣ್ಯವನ್ನು ಪಡೆಯುವನು. ಎಲೆ ಸುಶ್ರೋಣಿ! (ಅಂದವಾದ ನಿತಂಬಗಳುಳ್ಳವಳು) ಯಾವನು ಸರ್ವತ್ರ ಸಮಭಾವವನ್ನು ತೋರುವನೋ ಅವನೇ ಬ್ರಾಹ್ಮಣ ಸ್ವಭಾವದವನೆಂದು ನನ್ನ ಅಭಿಪ್ರಾಯವು.

ನಿರ್ಗುಣಂ ನಿರ್ಮಲಂ ಬ್ರಹ್ಮ ಯತ್ರ ತಿಷ್ಠತಿ ಸ ದ್ವಿಜಃ ।
ಏತೇ ಯೇ ವಿಮಲಾ ದೇವಿ ಸ್ಥಾನಭಾವನಿದರ್ಶಕಾಃ ॥ ೫೯ ॥

ಸ್ವಯಂ ಚ ವರದೇನೋಕ್ತಾ ಬ್ರಹ್ಮಣಾ ಸೃಜತಾ ಪ್ರಜಾಃ ।
ಬ್ರಹ್ಮಣೋ ಹಿ ಮಹತ್ಕ್ಷೇತ್ರಂ ಲೋಕೇ ಚರತಿ ಪಾದವತ್ ॥ ೬೦ ॥

ಯತ್ತತ್ರ ಬೀಜಂ ಪತತಿ ಸಾ ಕೃಷಿಃ ಪ್ರೇತ್ಯ ಭಾವಿನೀ ।
ಸಂತುಷ್ಟೇನ ಸದಾ ಭಾವ್ಯಂ ಸತ್ಪಥಾಲಂಬಿನಾ ಸದಾ ॥ ೬೧ ॥

ಬ್ರಾಹ್ಮಂ ಹಿ ಮಾರ್ಗಮಾಕ್ರಮ್ಯ ವರ್ತಿತವ್ಯಂ ಬುಭೂಷತಾ ।
ಸಂಹಿತಾಧ್ಯಾಯಿನಾ ಭಾವ್ಯಂ ಗೃಹೇ ವೈ ಗೃಹಮೇಧಿನಾ ॥ ೬೨ ॥

ನಿತ್ಯಂ ಸ್ವಾಧ್ಯಾಯಯುಕ್ತೇನ ನ ಚಾಧ್ಯಯನಜೀವಿನಾ ।
ಏವಂಭೂತೋ ಹಿ ಯೋ ವಿಪ್ರಃ ಸತತಂ ಸತ್ಪಥೇ ಸ್ಥಿತಃ ॥ ೬೩ ॥

---

೫೯. ಯಾವನ ಹೃದಯದಲ್ಲಿ ಗುಣಾತೀತನೂ, ನಿಷ್ಕಲಂಕನೂ ಆದ ಪರಮಾತ್ಮನು ನೆಲೆಸಿರುವನೋ ಅವನೇ ದ್ವಿಜನು. ಎಲೌ ದೇವಿ! ಈಗ ಹೇಳಿದಂತಹ ಸ್ಥಾನಗಳನ್ನೂ ಭಾವಗಳನ್ನೂ ನಿದರ್ಶಿಸುವಂತಹ ಶುದ್ಧವಾದ ಗುಣಗಳು-

೬೦. ಹಿಂದೆ ಪ್ರಜೆಗಳನ್ನು ಸೃಷ್ಟಿಸುವ ಸಮಯದಲ್ಲಿ ಆ ವರದಾಯಕನಾದ ಬ್ರಹ್ಮನಿಂದಲೇ ಹೇಳಲ್ಪಟ್ಟಿರುವುವು. ಈ ಲೋಕದಲ್ಲಿ ಕಾಲುಭಾಗವೆಲ್ಲವೂ ಬ್ರಹ್ಮನ ಮಹತ್ತಾದ ಕ್ಷೇತ್ರ (ಹೊಲಗದ್ದೆ) ವೆನಿಸಿರುವುದು.

೬೧. ಆ ಪ್ರದೇಶದಲ್ಲಿ ಬಿದ್ದ ಬೀಜವು ಕಾಲಕ್ರಮದಲ್ಲಿ ಸಸ್ಯವಾಗಿ ಪರಿಣಮಿಸುವುದು. ಆದುದರಿಂದ ಮಾನವನು ನಿತ್ಯಸಂತೋಷಿಯಾಗಿ ಸನ್ಮಾರ್ಗಾವಲಂಬಿಯಾಗಿರಬೇಕು.

೬೨. ಗೃಹಸ್ಥನಾದವನು ಬ್ರಾಹ್ಮಣಸಂಮತವಾದ ಮಾರ್ಗವನ್ನವಲಂಬಿಸಿ ವೇದಾಧ್ಯಯನನಿರತನಾಗಿರಬೇಕು.

೬೩-೬೪. ಆತನು ನಿತ್ಯವೂ ವೇದಾಧ್ಯಯನ ಮಾಡುತ್ತಿರಬೇಕು. ಆದರೆ ಅಧ್ಯಯನದಿಂದ ಜೀವನ ನಿರ್ವಾಹಮಾಡಬಾರದು. ಹೀಗೆ ಯಾವ

ಆಹಿತಾಗ್ನಿರಧೀಯಾನೋ ಬ್ರಹ್ಮಭೂಯಾಯ ಕಲ್ಪತೇ ।
ಬ್ರಾಹ್ಮಣ್ಯಂ ದೇವಿ ಸಂಪ್ರಾಪ್ಯ ರಕ್ಷಿತವ್ಯಂ ಯತಾತ್ಮನಾ ॥ ೬೪ ॥

ಯೋನಿಪ್ರತಿಗ್ರಹಾದಾನ್ಯೈಃ ಕರ್ಮಭಿಶ್ಚ ಶುಚಿಸ್ಮಿತೇ ।
ಏತತ್ತೇ ಗುಹ್ಯಮಾಖ್ಯಾತಂ ಯಥಾ ಶೂದ್ರೋ ಭವೇದ್ದ್ವಿಜಃ ।
ಬ್ರಾಹ್ಮಣೋ ವಾ ಚ್ಯುತೋ ಧರ್ಮಾದ್ಯಥಾ ಶೂದ್ರತ್ವಮಾಪ್ನುಯಾತ್ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಉಮಾಮಹೇಶ್ವರಸಂವಾದೇ ಸಂಕರಜಾತಿಲಕ್ಷಣವರ್ಣನಂ ನಾಮ ತ್ರಯೋವಿಂಶಾಧಿಕ-ದ್ವಿಶತತಮೋಽಧ್ಯಾಯಃ

ಬ್ರಾಹ್ಮಣನು ಸರ್ವದಾ ಸನ್ಮಾರ್ಗದಲ್ಲಿಯೇ ನಡೆಯುತ್ತಾ, ಆಹಿತಾಗ್ನಿಯಾಗಿ ಅಧ್ಯಯನಶೀಲನಾಗಿರುವನೋ ಅವನೀಗ ಬ್ರಾಹ್ಮಣ್ಯಕ್ಕೆ ಅರ್ಹನು. ಎಲೌ ದೇವಿ! ಬ್ರಾಹ್ಮಣ್ಯವನ್ನು ಒಂದುಬಾರಿ ಪಡೆದ ನಂತರ ಬಹುಪ್ರಯತ್ನಪಟ್ಟಾದರೂ ಅದನ್ನು ಸಂರಕ್ಷಿಸಿಕೊಂಡು ಬರಬೇಕು.

೬೫. ಜಾತಿ, ದಾನಸ್ವೀಕಾರ, ದಾನಮಾಡದಿರುವಿಕೆ ಮೊದಲಾದ ಕರ್ಮಗಳಿಂದ ಶೂದ್ರನಾದವನು ಬ್ರಾಹ್ಮಣ್ಯವನ್ನು ಪಡೆಯುವುದೂ, ಬ್ರಾಹ್ಮಣನಾದವನು ಧರ್ಮಚ್ಯುತನಾದರೆ ಶೂದ್ರನಾಗುವುದೂ-ಇವೆಲ್ಲ ರಹಸ್ಯವಾದ ವಿಷಯಗಳನ್ನು ನಿನಗೆ ಈಗ ತಿಳಿಸಿರುವೆನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಸಂಕರಜಾತಿಲಕ್ಷಣವರ್ಣನವೆಂಬ ಇನ್ನೂರ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ವಿಂಶಾಧಿಕದ್ವಿಶತತಮೋಽಧ್ಯಾಯಃ

॥ ಉಮೋವಾಚ ॥

ಭಗವನ್ಸರ್ವಭೂತೇಶ ಸುರಾಸುರನಮಸ್ಕೃತ ।
ಧರ್ಮಾಧರ್ಮೌ ನೃಣಾಂ ದೇವ ಬ್ರೂಹಿ ಮೇ ಸಂಶಯಂ ವಿಭೋ ॥ ೧ ॥

ಕರ್ಮಣಾ ಮನಸಾ ವಾಚಾ ತ್ರಿವಿಧೈರ್ದೇಹಿನಃ ಸದಾ ।
ಬಧ್ಯಂತೇ ಬಂಧನೈಃ ಕೈರ್ವಾ ಮುಚ್ಯಂತೇ ವಾ ಕಥಂ ವದ ॥ ೨ ॥

ಇನ್ನೂರಇಪ್ಪತ್ತನಾಲ್ಕನೆಯ ಅಧ್ಯಾಯವು

೧. ಮತ್ತೆ ಪಾರ್ವತಿಯು ಶಂಕರನನ್ನು ಕುರಿತು,— ಸುರಾಸುರರಿಂದ ನಮಸ್ಕೃತನೂ, ಸರ್ವಭೂತಗಳಿಗೂ ಅಧಿಪತಿಯೂ ಆದ ಎಲೈ ಭಗವಂತನೇ! ಮಾನವರ ಧರ್ಮಗಳಾವುವು? ಅಧರ್ಮಗಳಾವುವು? ಎಂಬ ವಿಷಯದಲ್ಲಿ ನನಗೆ ಸಂಶಯವುಂಟಾಗಿರುವುದು. ಅದನ್ನು ನೀನು ಪರಿಹರಿಸಬೇಕು.

೨. ಜೀವರೆನಿಸಿದವರು ಕರ್ಮ, ಮನಸ್ಸು, ವಾಕ್ಕುಗಳೆಂಬ ಮೂರು ಬಗೆಯಾದ ಬಂಧನಗಳಿಂದ ಹೇಗೆ ಬಂಧಿಸಲ್ಪಡುವರು? ಮತ್ತು ಆ ಬಂಧನಗಳಿಂದ ಅವರು ಬಿಡುಗಡೆ ಹೊಂದುವುದಾದರೂ ಹೇಗೆ? ಅದನ್ನು ತಿಳಿಸು.

ಕೇನ ಶೀಲೇನ ವೈ ದೇವ ಕರ್ಮಣಾ ಕೀದೃಶೇನ ವಾ ।
ಸಮಾಚಾರೈರ್ಗುಣೈಃ ಕೈರ್ವಾ ಸ್ವರ್ಗಂ ಯಾಂತೀಹ ಮಾನವಾಃ ॥ ೩ ॥

॥ ಶಿವ ಉವಾಚ ॥

ದೇವಿ ಧರ್ಮಾರ್ಥತತ್ತ್ವಜ್ಞೇ ಧರ್ಮನಿತ್ಯ ಉಮೇ ಸದಾ ।
ಸರ್ವಪ್ರಾಣಿಹಿತಃ ಪ್ರಶ್ನಃ ಶ್ರೂಯತಾಂ ಬುದ್ಧಿವರ್ಧನಃ ॥ ೪ ॥

ಸತ್ಯಧರ್ಮರತಾಃ ಶಾಂತಾಃ ಸರ್ವಲಿಂಗವಿವರ್ಜಿತಾಃ ।
ನಾಧರ್ಮೇಣ ನ ಧರ್ಮೇಣ ಬಧ್ಯಂತೇ ಛಿನ್ನಸಂಶಯಾಃ ॥ ೫ ॥

ಪ್ರಲಯೋತ್ಪತ್ತಿತತ್ತ್ವಜ್ಞಾಃ ಸರ್ವಜ್ಞಾಃ ಸರ್ವದರ್ಶಿನಃ ।
ವೀತರಾಗಾ ವಿಮುಚ್ಯಂತೇ ಪುರುಷಾಃ ಕರ್ಮಬಂಧನೈಃ ॥ ೬ ॥

---

೩. ಮಾನವರು ಯಾವ ನಡತೆಯಿಂದ, ಯಾವ ಕರ್ಮದಿಂದ, ಯಾವ ಆಚರಣೆಗಳಿಂದ, ಯಾವ ಗುಣಗಳಿಂದ ಸ್ವರ್ಗವನ್ನು ಪಡೆಯುವರು? ಅದನ್ನೂ ತಿಳಿಸಬೇಕು" ಎಂದು ಕೇಳಿದಳು.

೪. ಆಗ ಶಂಕರನು ಹೇಳತೊಡಗಿದನು :—ಧರ್ಮಾರ್ಥಗಳ ತತ್ತ್ವವನ್ನು ಬಲ್ಲವಳೂ, ಧರ್ಮದಲ್ಲಿಯೇ ನಿರತಳೂ ಆದ ಉಮಾದೇವಿಯೇ! ಕೇಳು. ನೀನು ಕೇಳಿದ ಪ್ರಶ್ನೆಯು ಎಲ್ಲ ಪ್ರಾಣಿಗಳಿಗೂ ಹಿತವಾದುದು. ಜ್ಞಾನವನ್ನು ಹೆಚ್ಚಿಸುವಂಥಹುದು.

೫. ತಿಳಿಸುವೆನು ಕೇಳು. ಯಾರು ಸತ್ಯದಲ್ಲಿಯೂ ಧರ್ಮದಲ್ಲಿಯೂ ತತ್ಪರರಾಗಿ, ಶಾಂತರಾಗಿಯೂ, ಎಲ್ಲಬಗೆಯ ವಿಕಾರಗಳಿಂದಲೂ ಬಿಡಲ್ಪಟ್ಟವರಾಗಿಯೂ ಇರುವರೋ ಅಂಥಹ ಸಂಶಯರಹಿತರು ಧರ್ಮದಿಂದಲಾಗಲೀ ಅಧರ್ಮದಿಂದಲಾಗಲೀ ಬಂಧಿಸಲ್ಪಡಲಾರರು.

೬. ಯಾವ ಪುರುಷರು ಪ್ರಳಯ ಮತ್ತು ಸೃಷ್ಟಿಗಳ ನಿಜಾಂಶವನ್ನು ಅರಿತಿರುವರೋ, ಯಾರು ಸರ್ವಜ್ಞರೂ, ಸರ್ವದರ್ಶಿಗಳೂ, ರಾಗದ್ವೇಷಾದಿ ರಹಿತರೂ ಆಗಿರುವರೋ ಅವರು ಕರ್ಮರೂಪವಾದ ಬಂಧನಗಳಿಂದ ಬಿಡುಗಡೆ ಹೊಂದುವರು.

ಕರ್ಮಣಾ ಮನಸಾ ವಾಚಾ ಯೇ ನ ಹಿಂಸಂತಿ ಕಿಂಚನ ।
ಯೇ ನ ಮಜ್ಜಂತಿ ಕಸ್ಮಿಂಶ್ಚಿತ್ತೇ ನ ಬಧ್ನಂತಿ ಕರ್ಮಭಿಃ ॥ ೭ ॥

ಪ್ರಾಣಾತಿಪಾತಾದ್ವಿರತಾಃ ಶೀಲವಂತೋ ದಯಾನ್ವಿತಾಃ ।
ತುಲ್ಯದ್ವೇಷ್ಯಪ್ರಿಯಾ ದಾಂತಾ ಮುಚ್ಯಂತೇ ಕರ್ಮಬಂಧನೈಃ ॥ ೮ ॥

ಸರ್ವಭೂತದಯಾವಂತೋ ವಿಶ್ವಾಸ್ಯಾಃ ಸರ್ವಜಂತುಷು ।
ತ್ಯಕ್ತಹಿಂಸ್ರಸಮಾಚಾರಾಸ್ತೇ ನರಾಃ ಸ್ವರ್ಗಗಾಮಿನಃ ॥ ೯ ॥

ಪರಸ್ವನಿರ್ಮಮಾ ನಿತ್ಯಂ ಪರದಾರನಿವರ್ಜಿಕಾಃ ।
ಧರ್ಮಲಬ್ಧಾರ್ಥಭೋಕ್ತಾರಸ್ತೇ ನರಾಃ ಸ್ವರ್ಗಗಾಮಿನಃ ॥ ೧೦ ॥

---

೭. ಯಾರು ತಮ್ಮ ಕರ್ಮದಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಯಾವುದನ್ನೂ ಹಿಂಸೆ ಮಾಡರೋ ಮತ್ತು ಯಾರು ಯಾವೊಂದು ವಸ್ತುವಿನಲ್ಲಿಯೂ ಮಮತೆಯನ್ನು ವಹಿಸದೆ ಇರುವರೋ ಅವರು ಕರ್ಮಗಳಿಂದ ಬದ್ಧರಾಗುವುದಿಲ್ಲ.

೮. ಯಾರು ಪ್ರಾಣಹಿಂಸೆ ಮೊದಲಾದ ಘಾತುಕಕೃತ್ಯಗಳಿಂದ ದೂರರಾಗಿ, ಶೀಲವಂತರೂ, ದಯಾಶಾಲಿಗಳೂ, ಶತ್ರು ಮಿತ್ರರಲ್ಲಿ ಸರಿಸಮಾನವಾಗಿ ವರ್ತಿಸುವರೂ, ಜಿತೇಂದ್ರಿಯರೂ ಆಗಿರುವರೋ ಅಂಥವರು ಕರ್ಮಪಾಶದಿಂದ ಬಂಧಿತರಾಗುವುದಿಲ್ಲ.

೯. ಯಾರು ಸಕಲಭೂತಗಳಲ್ಲಿಯೂ ದಯೆಯುಳ್ಳವರಾಗಿ, ಎಲ್ಲ ಪ್ರಾಣಿಗಳ ನಂಬಿಕೆಗೂ ಪಾತ್ರರಾಗಿ, ಕ್ರೂರವಾದ ನಡೆವಳಿಕೆಯನ್ನು ತೊರೆದು ಇರುವರೋ ಆ ಮಾನವರು ಸ್ವರ್ಗವನ್ನು ಸೇರುವರು.

೧೦. ಪರಧನದಲ್ಲಿಯೂ, ಪರಸ್ತ್ರೀಯರಲ್ಲಿಯೂ ಆಸೆಪಡದೆ ಅವನ್ನು ತೊರೆದು, ಧರ್ಮಮಾರ್ಗದಿಂದ ಎಷ್ಟು ಲಭಿಸುವುದೋ ಅಷ್ಟನ್ನೇ ತೃಪ್ತಿಯಿಂದ ಅನುಭವಿಸುವಂತಹ ಮಾನವರು ಸ್ವರ್ಗಕ್ಕೆ ಹೋಗುವರು.

ಮಾತೃವತ್ಸ್ವಸೃವಚ್ಚೈವ ನಿತ್ಯಂ ದುಹಿತೃವಚ್ಚ ಯೇ ।
ಪರದಾರೇಶು ವರ್ತಂತೇ ತೇ ನರಾಃ ಸ್ವರ್ಗಗಾಮಿನಃ ॥ ೧೧ ॥

ಸ್ವದಾರನಿರತಾ ಯೇ ಚ ಋತುಕಾಲಾಭಿಗಾಮಿನಃ ।
ಅಗ್ರಾಮ್ಯಸುಖಭೋಗಾಶ್ಚ ತೇ ನರಾಃ ಸ್ವರ್ಗಗಾಮಿನಃ ॥ ೧೨ ॥

ಸ್ತೈನ್ಯಾನ್ನಿವೃತ್ತಾಃ ಸತತಂ ಸಂತುಷ್ಟಾಃ ಸ್ವಧನೇನ ಚ ।
ಸ್ವಭಾಗ್ಯಾನ್ಯುಪಜೀವಂತಿ ತೇ ನರಾಃ ಸ್ವರ್ಗಗಾಮಿನಃ ॥ ೧೩ ॥

ಪರದಾರೇಷು ಯೇ ನಿತ್ಯಂ ಚಾರಿತ್ರ್ಯಾವೃತಲೋಚನಾಃ ।
ಜಿತೇಂದ್ರಿಯಾಃ ಶೀಲಪರಾಸ್ತೇ ನರಾಃ ಸ್ವರ್ಗಗಾಮಿನಃ ॥ ೧೪ ॥

ಏಷ ದೈವಕೃತೋ ಮಾರ್ಗಃ ಸೇವಿತವ್ಯಃ ಸದಾ ನರೈಃ ।
ಅಕಷಾಯಕೃತಶ್ಚೈವ ಮಾರ್ಗಃ ಸೇವ್ಯಃ ಸದಾ ಬುಧೈಃ ॥ ೧೫ ॥

---

೧೧. ಯಾರು ಪರಸ್ತ್ರೀಯರ ವಿಷಯದಲ್ಲಿ ತಾಯಂತೆಯೂ, ಅಕ್ಕ ತಂಗಿಯರಂತೆಯೂ, ಮಗಳಂತೆಯೂ ನಡೆದುಕೊಳ್ಳುವರೋ ಆ ಮನುಷ್ಯರು ಸ್ವರ್ಗವನ್ನು ಸೇರುವರು.

೧೨. ಯಾವ ಮನುಜರು ತಂತಮ್ಮ ಪತ್ನಿಯರಲ್ಲೇ ಆಸಕ್ತರಾಗಿ, ಋತುಕಾಲದಲ್ಲಿ ಮಾತ್ರ ಸಮಾಗಮವನ್ನು ಮಾಡುತ್ತಾ, ಗ್ರಾಮ್ಯವಾದ ಸುಖ ಭೋಗಗಳಿಗೆ ಮನಸೀಯದೆ ಇರುವರೋ ಅಂಥವರು ಸ್ವರ್ಗವನ್ನು ಹೊಂದುವರು.

೧೩. ಯಾರು ಕಳ್ಳತನವನ್ನು ಅವಲಂಬಿಸದೆ, ತಮಗೆ ಇರುವಷ್ಟು ಹಣದಿಂದಲೇ ಸರ್ವದಾ ತೃಪ್ತರಾಗಿ, ತಂತಮ್ಮ ಭಾಗ್ಯದಿಂದ ಬದುಕುತ್ತಿರುವರೋ ಅವರು ಸ್ವರ್ಗಕ್ಕೆ ಹೋಗುವರು.

೧೪. ಯಾರು ಸರ್ವದಾ ಚಾರಿತ್ರಭ್ರಷ್ಟರಾಗದೆ ಪರಾಂಗನೆಯರನ್ನು ಕಣ್ಣೆತ್ತಿ ಸಹ ನೋಡರೋ, ಯಾರು ಇಂದ್ರಿಯನಿಗ್ರಹಿಗಳೋ, ಯಾರು ಶೀಲವನ್ನು ಬಿಡದಿರುವರೋ ಅವರು ಸ್ವರ್ಗವನ್ನು ಹೊಂದುವರು.

೧೫. ಈರೀತಿಯಾಗಿ ದೇವರಿಂದ ನಿಯಮಿಸಲ್ಪಟ್ಟ ಸದಾಚರಣೆಯನ್ನು ಮಾನವರು ಸರ್ವದಾ ಅವಲಂಬಿಸಬೇಕು. ಇದನ್ನು ಯಾರೂ ಮನಃಕಷಾಯದಿಂದ ನಿಯಮಿಸಿಲ್ಲವು.

ಅನ್ಯಥಾಪಕೃತಶ್ಚೈವ ಮಾರ್ಗಃ ಸೇವ್ಯಃ ಸದಾ ಬುಧೈಃ ।
ದಾನಕರ್ಮತಪೋಯುಕ್ತಃ ಶೀಲಶೌಚದಯಾತ್ಮಕಃ ।
ಸ್ವರ್ಗಮಾರ್ಗಮಭೀಪ್ಸದ್ಭಿರ್ನ ಸೇವ್ಯಸ್ತ್ವತ ಉತ್ತರಃ ॥ ೧೬ ॥

॥ ಉಮೋವಾಚ ॥

ಮಾಚಾ ತು ಬಧ್ಯತೇ ಯೇನ ಮುಚ್ಯತೇ ಹ್ಯಥವಾ ಪುನಃ ।
ತಾನಿ ಕರ್ಮಾಣಿ ಮೇ ದೇವ ವದ ಭೂತಪತೇಽನಘ ॥ ೧೭ ॥

॥ ಶಿವ ಉವಾಚ ॥

ಆತ್ಮಹೇತೋಃ ಪರಾರ್ಥೇ ವಾ ಅಧರ್ಮಾಶ್ರಿತಮೇವ ಚ ।
ಯೇ ಮೃಷಾ ನ ವದಂತೀಹ ತೇ ನರಾಃ ಸ್ವರ್ಗಗಾಮಿನಃ ॥ ೧೮ ॥

ವೃತ್ತ್ಯರ್ಥಂ ಧರ್ಮಹೇತೋರ್ವಾ ಕಾಮಕಾರಾತ್ತಥೈವ ಚ ।
ಅನೃತಂ ಯೇ ನ ಭಾಷಂತೇ ತೇ ನರಾಃ ಸ್ವರ್ಗಗಾಮಿನಃ ॥ ೧೯ ॥

---

೧೬. ಮತ್ತು ವ್ಯರ್ಥವಾಗಿ ಅಪಕಾರ ಮಾಡಲೆಂದೂ ನಿಯಮಿತವಾದು ದಲ್ಲವು. ಆದುದರಿಂದ ಪ್ರಾಜ್ಞರಾದವರು ದಾನ, ಕರ್ಮ, ತಪಸ್ಸುಗಳನ್ನೊಳಗೊಂಡು ಶೀಲ, ಶೌಚ, ದಯೆಗಳಿಂದ ಕೂಡಿರುವ ಈ ಸನ್ಮಾರ್ಗವನ್ನು ಸರ್ವದಾ ಸೇವಿಸಬೇಕು. ಯಾರು ಸ್ವರ್ಗವನ್ನು ಪಡೆಯಬೇಕೆಂದು ಆಶಿಸುವರೋ ಅವರು ಈ ಸನ್ಮಾರ್ಗವನ್ನು ಬಿಟ್ಟು ಬೇರೆ ಮಾರ್ಗವನ್ನು ಹಿಡಿಯಬಾರದು ಎಂದನು.

೧೭. ಆಗ ಪಾರ್ವತಿಯು ಭೂತಪತಿಯಾದ ಶಂಕರನನ್ನು ಕುರಿತು, “ಎಲೈ ದೇವ! ಎಂತಹ ಮಾತುಗಳನ್ನಾಡಿದರೆ ಮನುಷ್ಯನು ಬದ್ಧನಾಗುವನು? ಎಂತಹ ಮಾತುಗಳನ್ನಾಡಿದರೆ ಮುಕ್ತನಾಗುವನು? ಆ ವಾಗ್ರೂಪವಾದ ಕರ್ಮಗಳನ್ನು ವಿವರಿಸಿ ತಿಳಿಸು” ಎಂಬದಾಗಿ ಪ್ರಶ್ನಿಸಿದಳು.

೧೮. ಅದಕ್ಕೆ ಆ ಶಿವನು ಹೇಳತೊಡಗಿದನು :— ಯಾವ ಮಾನವರು ತಮಗಾಗಲಿ, ಮತ್ತೊಬ್ಬರಿಗೋಸ್ಕರವಾಗಲಿ, ಸುಳ್ಳನ್ನಾಡುವುದಿಲ್ಲವೋ ಮತ್ತು ಅಧರ್ಮದಿಂದ ಕೂಡಿದ ಮಾತಾಡುವುದಿಲ್ಲವೋ ಅವರು ಸ್ವರ್ಗವನ್ನು ಕುರಿತು ತೆರಳುವರು.

೧೯. ಯಾರು ತಮ್ಮ ಜೀವಿಕೆಗಾಗಲಿ, ಧರ್ಮದ ಸಲುವಾಗಿಯಾಗಲಿ, ಸ್ವೇಚ್ಛೆಯಿಂದಾಗಲಿ ಸುಳ್ಳುಮಾತನ್ನು ಆಡಲಾರರೋ ಆ ಮಾನವರು ಸ್ವರ್ಗವನ್ನು ಸೇರುವರು.

ಶ್ಲಕ್ಷ್ಣಾಂ ವಾಣೀಂ ಸ್ವಚ್ಛವರ್ಣಾಂ ಮಧುರಾಂ ಪಾಪವರ್ಜಿತಾಂ ।
ಸ್ವಗತೇನಾಭಿಭಾಷಂತೇ ತೇ ನರಾಃ ಸ್ವರ್ಗಗಾಮಿನಃ ॥ ೨೦ ॥

ಪರುಷಂ ಯೇ ನ ಭಾಷಂತೇ ಕಟುಕಂ ನಿಷ್ಠುರಂ ತಥಾ ।
ನ ಪೈಶುನ್ಯರತಾಃ ಸಂತಸ್ತೇ ನರಾಃ ಸ್ವರ್ಗಗಾಮಿನಃ ॥ ೨೧ ॥

ಪಿಶುನಂ ನ ಪ್ರಭಾಷಂತೇ ಮಿತ್ರಭೇದಕರಂ ತಥಾ ।
ಪರಪೀಡಾಕರಂ ಚೈವ ತೇ ನರಾಃ ಸ್ವರ್ಗಗಾಮಿನಃ ॥ ೨೨ ॥

ಯೇ ವರ್ಜಯಂತಿ ಪರುಷಂ ಪರದ್ರೋಹಂ ಚ ಮಾನವಾಃ ।
ಸರ್ವಭೂತಸಮಾ ದಾಂತಾಸ್ತೇ ನರಾಃ ಸ್ವರ್ಗಗಾಮಿನಃ ॥ ೨೩ ॥

---

೨೦. ಯಾರು ಮಾತಾಡುವಾಗ ಮೃದುವಾಗಿಯೂ, ವರ್ಣಗಳು ಸ್ಪಷ್ಟವಾಗಿರುವಂತೆಯೂ, ಇಂಪಾಗಿಯೂ, ಸ್ವಗತದಂತೆಯೂ (ಅಂದರೆ ಗಟ್ಟಿಯಾಗಿ ಆಡದೆ ಮೆಲ್ಲನೆಯೂ) ಪಾಪವಾಸನೆಯು ಇಲ್ಲದಂತೆಯೂ ಮಾತಾಡುವರೋ ಅವರು ಸ್ವರ್ಗಕ್ಕೆ ಹೋಗುವರು.

೨೧. ಯಾರು ಒರಟಾಗಿಯೂ, ನಿಷ್ಠುರವಾಗಿಯೂ (ಕಠಿಣತೆಯಿಂದಲೂ) ಕ್ರೂರವಾಗಿಯೂ ಇರುವ ಮಾತನ್ನು ಆಡುವುದಿಲ್ಲವೋ ಮತ್ತು ಪಿಸುಣತನದಿಂದ ಚಾಡಿ ಮೊದಲಾದುವನ್ನು ಹೇಳುವುದಿಲ್ಲವೋ ಆ ಸತ್ಪುರುಷರು ಸ್ವರ್ಗಗಾಮಿಗಳಾಗುವರು.

೨೨. ಯಾರು ಪಿಶುನತೆಯಿಂದ ಕೂಡಿದುದೂ. ಮಿತ್ರರಿಗೆ ಭೇದವನ್ನು ಹುಟ್ಟಿಸುವಂಥಹುದೂ, ಮತ್ತೊಬ್ಬರಿಗೆ ಹಿಂಸೆಯನ್ನುಂಟುಮಾಡುವುದೂ ಆದ ಮಾತನ್ನು ಆಡದಿರುವರೋ ಅವರು ಸ್ವರ್ಗವನ್ನು ಹೊಂದುವರು.

೨೩. ಯಾವ ಮಾನವರು ಕಠಿಣವಾದ ವರ್ತನೆಯನ್ನೂ ಇತರರಿಗೆ ದ್ರೋಹವನ್ನೂ ಮಾಡದೆ ಇರುವರೋ ಮತ್ತು ಸಕಲ ಭೂತಗಳನ್ನೂ ಸಮದೃಷ್ಟಿಯಿಂದ ಕಾಣುತ್ತಾ, ಇಂದ್ರಿಯದಮನವುಳ್ಳವರಾಗಿ ಇರುವರೋ ಅವರು ಸ್ವರ್ಗವನ್ನು ಸೇರುವರು.

ಶಠಪ್ರಲಾಪಾದ್ವಿರತಾ ವಿರುದ್ಧಪರಿವರ್ಜಕಾಃ ।
ಸೌಮ್ಯಪ್ರಲಾಪಿನೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥ ೨೪ ॥

ನ ಕೋಪಾದ್ವ್ಯಾಹರಂತೇ ಯೇ ವಾಚಂ ಹೃದಯದಾರಿಣೀಂ ।
ಶಾಂತಿಂ ವಿಂದಂತಿ ಯೇ ಕ್ರುದ್ಧಾಸ್ತೇ ನರಾಃ ಸ್ವರ್ಗಗಾಮಿನಃ ॥ ೨೫ ॥

ಏಷ ವಾಣೀಕೃತೋ ದೇವಿ ಧರ್ಮಃ ಸೇವ್ಯಃ ಸದಾ ನರೈಃ ।
ಶುಭಸತ್ಯಗುಣೈರ್ನಿತ್ಯಂ ವರ್ಜನೀಯಾ ಮೃಷಾ ಬುಧೈಃ ॥ ೨೬ ॥

॥ ಉಮೋವಾಚ ॥

ಮನಸಾ ಬಧ್ಯತೇ ಯೇನ ಕರ್ಮಣಾ ಪುರುಷಃ ಸದಾ ।
ತನ್ಮೇ ಬ್ರೂಹಿ ಮಹಾಭಾಗ ದೇವದೇವ ಪಿನಾಕಧೃಕ್ ॥ ೨೭ ॥

---

೨೪. ಯಾವ ಮನುಷ್ಯರು ಶಠಪ್ರಲಾಪ (ಒಳಗೆ ಒಂದು ಅಭಿಪ್ರಾಯ ವಿಟ್ಟುಕೊಂಡು ಹೊರಗೆ ಮಾತ್ರ ಬೇರೆಯಾಗಿ ಆಡುವ ಮಾತು) ವನ್ನೂ ವಿರುದ್ಧವಾದ ವರ್ತನೆಗಳನ್ನೂ ಬಿಟ್ಟಿರುವರೋ ಮತ್ತು ಸೌಮ್ಯವಾಗಿ ಮಾತಾಡುವರೋ ಅವರು ಸ್ವರ್ಗಕ್ಕೆ ಹೋಗುವರು.

೨೫. ಯಾವ ಪುರುಷರು ಕೋಪದಿಂದ ಮತ್ತೊಬ್ಬರ ಮನಸ್ಸು ನೋಯುವಂತೆ ಮಾತಾಡುವುದಿಲ್ಲವೋ ಮತ್ತು ಕೋಪ ಬಂದಿದ್ದರೂ ಕೂಡಲೇ ಶಾಂತರಾಗಿಬಿಡುವರೋ ಅಂಥಹವರೀಗ ಸ್ವರ್ಗಲೋಕವನ್ನು ಪಡೆಯುವರು.

೨೬. ಎಲೌ ದೇವಿ! ಇದೇ ವಾಗ್ರೂಪವಾದ ಧರ್ಮವು ಇದನ್ನು ಮಾನವರು ಸದಾ ಪಾಲಿಸಿಕೊಂಡು ಬರಬೇಕು. ಶುಭಕರವಾದ ಸತ್ಯಪ್ರಿಯವಾದ ಗುಣಗಳಿಂದ ಕೂಡಿದಂತಹ ಪ್ರಾಜ್ಞರು ಎಂದೆಂದಿಗೂ ಸುಳ್ಳಾಡಬಾರದು. ಅದನ್ನು ಬಿಡಬೇಕು ಎಂದನು.

೨೭. ಆಗ ಉಮೆಯು ದೇವದೇವನೂ ಪಿನಾಕಧಾರಿಯೂ ಆದ ಶಿವನನ್ನು ಕುರಿತು "ಓ ಮಹಾನುಭಾವಾ! ಪುರುಷನಾದವನು ಯಾವರೀತಿಯು ಮಾನಸಿಕ ಕರ್ಮದಿಂದ ಬಂಧನಕ್ಕೆ ಒಳಗಾಗುವನು? ಅದನ್ನು ತಿಳಿಸಬೇಕು" ಎಂದು ಮತ್ತೆ ಪ್ರಶ್ನಿಸಿದಳು.

॥ ಮಹೇಶ್ವರ ಉವಾಚ ॥

ಮಾನಸೇನೇಹ ಧರ್ಮೇಣ ಸಂಯುಕ್ತಾಃ ಪುರುಷಾಃ ಸದಾ ।
ಸ್ವರ್ಗಂ ಗಚ್ಛಂತಿ ಕಲ್ಯಾಣಿ ತನ್ಮೇ ಕೀರ್ತಯತಃ ಶೃಣು ॥ ೨೮ ॥

ದುಷ್ಪ್ರಣೀತೇನ ಮನಸಾ ದುಷ್ಪ್ರಣೀತಾಂತರಾಕೃತಿಃ ।
ನರೋ ಬಧ್ಯೇತ ಯೇನೇಹ ಶೃಣು ವಾ ತಂ ಶುಭಾನನೇ ॥ ೨೯ ॥

ಅರಣ್ಯೇ ವಿಜನೇ ನ್ಯಸ್ತಂ ಪರಸ್ವಂ ದೃಶ್ಯತೇ ಯದಾ ।
ಮನಸಾಪಿ ನ ಗೃಹ್ಣಂತಿ ತೇ ನರಾಃ ಸ್ವರ್ಗಗಾಮಿನಃ ॥ ೩೦ ॥

ತಥೈವ ಪರದಾರಾನ್ಯೇ ಕಾಮವೃತ್ತಾ ರಹೋಗತಾಃ ।
ಮನಸಾಪಿ ನ ಹಿಂಸಂತಿ ತೇ ನರಾಃ ಸ್ವರ್ಗಗಾಮಿನಃ ॥ ೩೧ ॥

ಶತ್ರುಂ ಮಿತ್ರಂ ಚ ಯೇ ನಿತ್ಯಂ ತುಲ್ಯೇನ ಮನಸಾ ನರಾಃ ।
ಭಜಂತಿ ಮೈತ್ರ್ಯಂ ಸಂಗಮ್ಯ ತೇ ನರಾಃ ಸ್ವರ್ಗಗಾಮಿನಃ ॥ ೩೨ ॥

---

೨೮. ಆಗ ಶಿವನು ನುಡಿಯತೊಡಗಿದನು :—ಎಲೌ ಮಂಗಳಾಂಗಿ, ಸರ್ವದಾ ಮಾನಸಿಕವಾದಂತಹ ಧರ್ಮದಿಂದ ಕೂಡಿರುವ ಪುರುಷರು ಸ್ವರ್ಗವನ್ನು ಪಡೆಯುವರು. ಅವನ್ನೇ ನಾನು ನಿನಗೆ ತಿಳಿಸುವೆನು, ಕೇಳು.

೨೯. ಎಲೌ ಶುಭವದನೆ, ಮನುಷ್ಯನು ದುಷ್ಟವಾದ ಮನಸ್ಸಿನಿಂದ ತನ್ನ ಅಂತರಾತ್ಮವನ್ನು ಕೆಡಿಸಿಕೊಂಡರೆ, ಆಗವನು ಈ ಸಾಂಸಾರಿಕವಾದ ಬಂಧನಕ್ಕೆ ಒಳಗಾಗುವನು. ಅದನ್ನು ವಿವರಿಸುವೆನು, ಕೇಳು.

೩೦. ಕಾಡಿನಲ್ಲಾಗಲಿ, ಜನರಿಲ್ಲದಿರುವ ಕಡೆಯಾಗಲಿ, ಯಾರದಾದರೂ ಹಣವು ಬಿದ್ದಿದ್ದರೆ ಅದನ್ನು ಕಂಡಾಗ, ಯಾರು ಮನಸ್ಸಿನಿಂದಾಗಲಿ ಅದನ್ನು ಸ್ವೀಕರಿಸುವುದಿಲ್ಲವೋ ಅವರು ಸ್ವರ್ಗಗಾಮಿಗಳಾಗುವರು.

೩೧. ಮತ್ತು ಯಾರು ಕಾಮಾಸಕ್ತರಾಗದೆ, ಪರಸ್ತ್ರೀಯರನ್ನು ಏಕಾಂತದಲ್ಲಿಯೂ ಸಹ ಮನಸ್ಸಿನಿಂದಲೂ ನೋಯಿಸಲಾರರೋ ಅಂಥಹ ಪುರುಷರೀಗ ಸ್ವರ್ಗಕ್ಕೆ ಹೋಗುವರು.

೩೨. ಯಾರು ಶತ್ರುವನ್ನೂ ಮಿತ್ರನನ್ನೂ ಒಂದೇಬಗೆಯಾಗಿ ಕಾಣುತ್ತಾ ಮೈತ್ರಿಯಿಂದಲೇ ವರ್ತಿಸುವರೋ ಅವರು ಸ್ವರ್ಗಕ್ಕೆ ತೆರಳುವರು.

ಶ್ರುತವಂತೋ ದಯಾವತ್ತಃ ಶುಚಯಃ ಸತ್ಯಸಂಗರಾಃ ।
ಸ್ವೈರರ್ಥೈಃ ಪರಿಸಂತುಷ್ಟಾಸ್ತೇ ನರಾಃ ಸ್ವರ್ಗಗಾಮಿನಃ ॥ ೩೩ ॥

ಅವೈರಾ ಯೇ ತ್ವನಾಯಾಸಾ ಮೈತ್ರಚಿತ್ತರತಾಃ ಸದಾ ।
ಸರ್ವಭೂತದಯಾವಂತಸ್ತೇ ನರಾಃ ಸ್ವರ್ಗಗಾಮಿನಃ ॥ ೩೪ ॥

ಜ್ಞಾತವಂತಃ ಕ್ರಿಯಾವಂತಃ ಕ್ಷಮಾವಂತಃ ಸುಹೃತ್ಪ್ರಿಯಾಃ ।
ಧರ್ಮಾಧರ್ಮವಿದೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥ ೩೫ ॥

ಶುಭಾನಾಮಶುಭಾನಾಂ ಚ ಕರ್ಮಣಾಂ ಫಲಸಂಚಯೇ ।
ನಿರಾಕಾಂಕ್ಷಾಶ್ಚ ಯೇ ದೇವಿ ತೇ ನರಾಃ ಸ್ವರ್ಗಗಾಮಿನಃ ॥ ೩೬ ॥

---

೩೩. ಯಾರು ಶಾಸ್ತ್ರಾರ್ಥವನ್ನು ಬಲ್ಲವರಾಗಿಯೂ, ದಯಾಶಾಲಿಗಳಾಗಿಯೂ, ಶುದ್ಧಹೃದಯರಾಗಿಯೂ, ಸತ್ಯನಿಷ್ಠರಾಗಿಯೂ, ತಮಗೆ ಲಭಿಸಿದಷ್ಟು ಹಣದಿಂದಲೇ ಸಂತೋಷಪಡುವವರಾಗಿಯೂ ಇರುವರೋ ಅವರು ಸ್ವರ್ಗವನ್ನು ಸೇರುವರು.

೩೪. ಯಾರು ದ್ವೇಷರಹಿತರಾಗಿ, ಆಯಾಸಪಟ್ಟುಕೊಳ್ಳದೆ, ಸ್ನೇಹಪೂರಿತವಾದ ಹೃದಯದಿಂದ ಸಕಲ ಭೂತಗಳಲ್ಲಿಯೂ ದಯಾಪರರಾಗಿ ಇರುವರೋ ಅವರು ಸ್ವರ್ಗಲೋಕವನ್ನು ಪಡೆಯುವರು.

೩೫. ಯಾರು ಸರ್ವದಾ ಜ್ಞಾನಿಗಳಾಗಿಯೂ, ಕ್ರಿಯೆಯುಳ್ಳವರಾಗಿಯೂ, ಕ್ಷಮಾಶೀಲರಾಗಿಯೂ, ಸ್ನೇಹಿತರಲ್ಲಿ ಪ್ರೀತಿಯುಳ್ಳವರಾಗಿಯೂ, ಧರ್ಮಾಧರ್ಮಗಳನ್ನು ಅರಿತವರಾಗಿಯೂ ಇರುವರೋ ಅವರು ಸ್ವರ್ಗವನ್ನು ಸೇರುವರು.

೩೬. ಎಲೌ ದೇವಿ! ಶುಭಕರ್ಮಗಳಾಗಲಿ, ಅಶುಭಕರ್ಮಗಳಾಗಲಿ ಅವುಗಳಿಂದುಂಟಾಗುವ ಫಲಿತಾಂಶದಲ್ಲಿ ಯಾರು ನಿರಭಿಲಾಷಿಗಳಾಗಿ ಇರುವರೋ ಆ ಮಾನವರು ಸ್ವರ್ಗಕ್ಕೆ ಹೋಗುವರು.

ಪಾಪೋಪೇತಾನ್ವರ್ಜಯಂತಿ ದೇವದ್ವಿಜಪರಾಃ ಸದಾ ।
ಸಮುತ್ಥಾನಮನುಪ್ರಾಪ್ತಾಸ್ತೇ ನರಾಃ ಸ್ವರ್ಗಗಾಮಿನಃ ॥ ೩೭ ॥

ಶುಭೈಃ ಕರ್ಮಫಲೈರ್ದೇವಿ ಮಯೈತೇ ಪರಿಕೀರ್ತಿತಾಃ ।
ಸ್ವರ್ಗಮಾರ್ಗಪರಾ ಭೂಯಃ ಕಿಂ ತ್ವಂ ಶ್ರೋತುಮಿಹೇಚ್ಛಸಿ ॥ ೩೮ ॥

॥ ಉಮೋವಾಚ ॥

ಮಹಾನ್ಮೇ ಸಂಶಯಃ ಕಶ್ಚಿನ್ಮರ್ತ್ಯಾನ್ಪ್ರತಿ ಮಹೇಶ್ವರ ।
ತಸ್ಮಾತ್ತ್ವಂ ನಿಪುಣೇನಾದ್ಯ ಮಮ ವ್ಯಾಖ್ಯಾತುಮರ್ಹಸಿ ॥ ೩೯ ॥

ಕೇನಾಯುರ್ಲಭತೇ ದೀರ್ಘಂ ಕರ್ಮಣಾ ಪುರುಷಃ ಪ್ರಭೋ ।
ತಪಸಾ ವಾಪಿ ದೇವೇಶ ಕೇನಾಯುರ್ಲಭತೇ ಮಹತ್ ॥ ೪೦ ॥

ಕ್ಷೀಣಾಯುಃ ಕೇನ ಭವತಿ ಕರ್ಮಣಾ ಭುವಿ ಮಾನವಃ ।
ವಿಪಾಕಂ ಕರ್ಮಣಾಂ ದೇವ ವಕ್ತುಮರ್ಹಸ್ಯನಿಂದಿತ ॥ ೪೧ ॥

---

೩೭. ಯಾರು ಯಾವಾಗಲೂ ಪಾಪಿಗಳನ್ನು ಬಳಿಗೆ ಸೇರಿಸಿಕೊಳ್ಳದೆ ದೇವಬ್ರಾಹ್ಮಣರ ಸೇವೆಯಲ್ಲಿಯೇ ತೊಡಗಿರುತ್ತಾ ಅಭ್ಯುದಯಸಾಧನೆಯಲ್ಲಿರುವರೋ ಆ ನರರು ಸ್ವರ್ಗಗಾಮಿಗಳಾಗುವರು.

೩೮. ಎಲೌ ದೇವಿ! ತಾವು ಮಾಡಿದ ಶುಭಕರ್ಮಗಳ ಫಲದಿಂದ ಯಾರು ಸ್ವರ್ಗವನ್ನು ಸೇರುವರೋ ಅವರನ್ನು ತಿಳಿಸಿದೆನು. ಈ ವಿಷಯದಲ್ಲಿ ನೀನು ಇನ್ನೇನು ಕೇಳಬೇಕೆಂದಿರುವೆ? ಎಂದನು.

೩೯. ಆಗ ಉಮೆಯು ಶಿವನನ್ನು ಕುರಿತು— ಓ ಮಹೇಶ್ವರಾ! ನನಗೆ ಮನುಷ್ಯರ ವಿಷಯವಾಗಿ ಅನೇಕ ಸಂಶಯಗಳಿರುವುವು. ಆದುದರಿಂದ ನೀನು ಇದೆಲ್ಲವನ್ನೂ ನನಗೆ ಉಪಾಯವಾಗಿ ತಿಳಿಸು. ಇಲ್ಲವಿದ್ದರೆ–

೪೦. ಎಲೆ ದೇವೇಶ! ಯಾವ ಕರ್ಮವನ್ನು ಮಾಡಿದರೆ ಪುರುಷನು ಹೆಚ್ಚುಕಾಲ ಬದುಕುವನು? ಯಾವ ತಪಸ್ಸಿನಿಂದ ಹೆಚ್ಚು ಆಯುಸ್ಸನ್ನು ಪಡೆಯಬಲ್ಲನು?

೪೧. ಎಲೈ ನಿಂದಾದೂರನೇ! ಭೂಲೋಕದಲ್ಲಿರುವ ಮಾನವನು ಯಾವ ಕರ್ಮದಿಂದ ಅಲ್ಪವಾದ ಆಯುಸ್ಸನ್ನು ಹೊಂದುವನು? ಈ ಕರ್ಮಗಳ ಫಲವನ್ನು ನೀನು ನನಗೆ ತಿಳಿಸಬೇಕು.

ಅಪರೇ ಚ ಮಹಾಭಾಗ್ಯಾ ಮಂದಭಾಗ್ಯಾಸ್ತಥಾ ಪರೇ ।
ಅಕುಲೀನಾಃ ಕುಲೀನಾಶ್ಚ ಸಂಭವಂತಿ ತಥಾ ಪರೇ ॥ ೪೨ ॥

ದುರ್ದರ್ಶಾಃ ಕೇಚಿದಾಭಾಂತಿ ನರಾಃ ಕಾಷ್ಠಮಯಾ ಇವ ।
ಪ್ರಿಯದರ್ಶಾಸ್ತಥಾ ಚಾನ್ಯೇ ದರ್ಶನಾದೇವ ಮಾನವಾಃ ॥ ೪೩ ॥

ದುಷ್ಪ್ರಜ್ಞಾಃ ಕೇಚಿದಾಭಾಂತಿ ಕೇಚಿದಾಭಾಂತಿ ಪಂಡಿತಾಃ ।
ಮಹಾಪ್ರಜ್ಞಾಸ್ತಥಾ ಚಾನ್ಯೇ ಜ್ಞಾನವಿಜ್ಞಾನಭಾವಿನಃ ॥ ೪೪ ॥

ಅಲ್ಪವಾಚಾಸ್ತಥಾ ಕೇಚಿನ್ಮಹಾವಾಚಾಸ್ತಥಾ ಪರೇ ।
ದೃಶ್ಯಂತೇ ಪುರುಷಾ ದೇವ ತತೋ ವ್ಯಾಖ್ಯಾತುಮರ್ಹಸಿ ॥ ೪೫ ॥

॥ ಶಿವ ಉವಾಚ ॥

ಹಂತ ತೇಽಹಂ ಪ್ರವಕ್ಷ್ಯಾಮಿ ದೇವಿ ಕರ್ಮಫಲೋದಯಂ ।
ಮರ್ತ್ಯಲೋಕೇ ನರಃ ಸರ್ವೋ ಯೇನ ಸ್ವಂ ಫಲಮಶ್ನುತೇ ॥ ೪೬ ॥

---

೪೨. ಕೆಲವರು ಮಹಾಭಾಗ್ಯಶಾಲಿಗಳಾಗುವರು. ಮತ್ತೆ ಕೆಲವರು ಭಾಗ್ಯಹೀನರಾಗುವರು. ಇನ್ನು ಕೆಲವರು ಕುಲಹೀನರಾಗುವರು. ಬೇರೆ ಕೆಲವರು ಸತ್ಕುಲಪ್ರಸೂತರಾಗುವರು.

೪೩. ಕೆಲವರು ಮರದಿಂದ ಮಾಡಲ್ಪಟ್ಟವರಂತೆ ನೋಡುವುದಕ್ಕೂ ಸಹ ಅಸಹ್ಯಕರರಾಗಿರುವರು. ಕೆಲವರು ಮಾನವರು ಮಾತ್ರ ನೋಡುತ್ತಲೇ ನಮ್ಮ ಮನಸ್ಸನ್ನು ಆಕರ್ಷಿಸುತ್ತಾ ಸುಂದರಾಕಾರವುಳ್ಳವರಾಗಿರುವರು.

೪೪. ಕೆಲವರು ಪ್ರಜ್ಞಾಹೀನರಾಗಿ ಕಾಣುವರು. ಹಲವರು ಜ್ಞಾನಿಗಳಾಗಿ ತೋರುವರು. ಮತ್ತೆ ಕೆಲವರು ಅತಿಜಾಣರಾಗಿರುವರು. ಇನ್ನು ಕೆಲವರು ಜ್ಞಾನದಿಂದಲೂ ವಿಜ್ಞಾನದಿಂದಲೂ ಸಂಪನ್ನರಾಗಿ ತೋರುವರು.

೪೫. ಎಲೈ ದೇವ! ಕೆಲವು ಪುರುಷರು ಸ್ವಲ್ಪವಾಗಿ ಮಾತಾಡುವರು. ಮತ್ತೆ ಕೆಲವರು ಬಹುವಾಗಿ ಮಾತಾಡುವರು. ಆದುದರಿಂದ ಇವೆಲ್ಲವನ್ನೂ ವಿವರಿಸಿ ನನಗೆ ತಿಳಿಯಹೇಳಬೇಕು ಎಂದು ಪ್ರಶ್ನಿಸಿದಳು.

೪೬. ಆಗ ಶಿವನು ಪಾರ್ವತಿಗೆ ಹೇಳತೊಡಗಿದನು :—ಸಂತೋಷ! ಎಲೌ ದೇವಿ, ಪೃಥಿವಿಯಲ್ಲಿ ಮಾನವನು ಯಾವ ಕಾರಣದಿಂದ ಆಯಾ ಫಲಗಳನ್ನು ಹೊಂದುವನೋ ಅದನ್ನು ನಿನಗೆ ತಿಳಿಯಪಡಿಸುವೆನು.

ಪ್ರಾಣಾತಿಪಾತೀ ಯೋಗೀಂದ್ರೋ ದಂಡಹಸ್ತೋ ನರಃ ಸದಾ ।
ನಿತ್ಯಮುದ್ಯತಶಸ್ತ್ರಶ್ಚ ಹಂತಿ ಭೂತಗಣಾನ್ನರಃ ॥ ೪೭ ॥

ನಿರ್ದಯಃ ಸರ್ವಭೂತೇಭ್ಯೋ ನಿತ್ಯಮುದ್ವೇಗಕಾರಕಃ ।
ಅಪಿ ಕೀಟಪತಂಗಾನಾಮಶರಣ್ಯಃ ಸುನಿರ್ಘೃಣಃ ॥ ೪೮ ॥

ಏವಂಭೂತೋ ನರೋ ದೇವಿ ನಿರಯಂ ಪ್ರತಿಪದ್ಯತೇ ।
ವಿಪರೀತಸ್ತು ಧರ್ಮಾತ್ಮಾ ಸ್ವರೂಪೇಣಾಭಿಜಾಯತೇ ॥ ೪೯ ॥

ನಿರಯಂ ಯಾತಿ ಹಿಂಸಾತ್ಮಾ ಯಾತಿ ಸ್ವರ್ಗಮಹಿಂಸಕಃ ।
ಯಾತನಾಂ ನಿರಯೇ ರೌದ್ರಾಂ ಸಕೃಚ್ಛ್ರಾಂ ಲಭತೇ ನರಃ ॥ ೫೦ ॥

---

೪೭. ಯಾವ ನರನು ಪ್ರಾಣಗಳನ್ನು ಹತೋಟಿಯಲ್ಲಿಟ್ಟುಕೊಂಡು ಸರ್ವದಾ ದಂಡವನ್ನೇ ಕೈಯಲ್ಲಿ ಹಿಡಿದು ಯೋಗೀಂದ್ರನಾಗಿದ್ದರೂ (ಯೋಗಿಯು ಸಮಾಧಿ ಸ್ಥಿತಿಯನ್ನು ಹೊಂದಲು ಪ್ರಾಣವಾಯುವನ್ನು ನಿರೋಧಿಸುವನು ಮತ್ತು ಆಶ್ರಮೋಚಿತವಾದ ದಂಡವನ್ನು ಧರಿಸಿರುವನು.) ಆಯುಧಗಳನ್ನು ಹಿಡಿದುಕೊಂಡೇ ಇರುತ್ತಾ ಸಿಕ್ಕಿದ ಪ್ರಾಣಿಗಳನ್ನು ಕೊಲ್ಲುತ್ತಿರುವನೋ

೪೮. ಮತ್ತು ದಯಾರಹಿತನಾಗಿ ಎಲ್ಲ ಪ್ರಾಣಿಗಳಿಗೂ ಉದ್ವೇಗವನ್ನುಂಟುಮಾಡುತ್ತಾ, ಕ್ರಿಮಿಕೀಟಗಳಿಗೂ ಪತಂಗ (ಸೊಳ್ಳೆ ನೊಣ) ಗಳಿಗೂ ಸಹ ಅಭಯವನ್ನು ಕೊಡದೆ ಇರುವನೋ–

೪೯. ಅಂಥಹ ಮಾನವನು ನರಕಭಾಗಿಯಾಗುವನು. ಇದಕ್ಕೆ ವಿರುದ್ಧವಾದ ನಡವಳಿಕೆಯುಳ್ಳ ಧರ್ಮಾತ್ಮನು ಧರ್ಮಶೀಲನಾಗಿಯೇ ಹುಟ್ಟುವನು.

೫೦. ಹಿಂಸಾನಿರತನು ನರಕಹೊಂದುವನು. ಅಹಿಂಸಾತತ್ಪರನು ಸ್ವರ್ಗ ಸೇರುವನು. ಆ ಪಾಪಿಯಾದವನು ನರಕದಲ್ಲಿ ಘೋರವಾದ ಯಾತನೆಯನ್ನನುಭವಿಸುವನು.

ಯಃ ಕಶ್ಚಿನ್ನಿರಯಾತ್ತಸ್ಮಾತ್ಸಮುತ್ತರತಿ ಕರ್ಹಿಚಿತ್ ।
ಮಾನುಷ್ಯಂ ಲಭತೇ ವಾಪಿ ಹೀನಾಯುಸ್ತತ್ರ ಜಾಯತೇ ॥ ೫೧ ॥

ಪಾಪೇನ ಕರ್ಮಣಾ ದೇವಿ ಯುಕ್ತೋ ಹಿಂಸಾದಿಭಿರ್ಯತಃ ।
ಅಹಿತಃ ಸರ್ವಭೂತಾನಾಂ ಹೀನಾಯುರುಪಜಾಯತೇ ॥ ೫೨ ॥

ಶುಭೇನ ಕರ್ಮಣಾ ದೇವಿ ಪ್ರಾಣಿಘಾತವಿವರ್ಜಿತಃ ।
ನಿಕ್ಷಿಪ್ತಶಸ್ತ್ರೋ ನಿರ್ದಂಡೋ ನ ಹಿಂಸತಿ ಕದಾಚನ ॥ ೫೩ ॥

ನ ಘಾತಯತಿ ನೋ ಹಂತಿ ಘ್ನಂತಂ ನೈವಾನುಮೋದತೇ ।
ಸರ್ವಭೂತೇಷು ಸಸ್ನೇಹೋ ಯಥಾತ್ಮನಿ ತಥಾ ಪರೇ ॥ ೫೪ ॥

ಈದೃಶಃ ಪುರುಷೋ ನಿತ್ಯಂ ದೇವಿ ದೇವತ್ವಮಶ್ನುತೇ ।
ಉಪಪನ್ನಾನ್ಸುಖಾನ್ಭೋಗಾನ್ಸದಾಶ್ನಾತಿ ಮುದಾ ಯುತಃ ॥ ೫೫ ॥

---

೫೧. ಒಂದುವೇಳೆ ಆರೀತಿ ನರಕಭಾಗಿಯಾದವನಾವನಾದರೂ ಆ ನರಕದಿಂದ ಬಿಡುಗಡೆ ಹೊಂದಿದರೆ, ಅವನಿಗೆ ಮನುಷ್ಯಜನ್ಮವಾದರೂ ದೊರಕಿದಾದರೆ, ಆಗ ಅವನು ಆಯುಃಕ್ಷೀಣನಾಗಿ ಹುಟ್ಟುವನು.

೫೨. ಎಲೌ ದೇವಿ! ಏಕೆಂದರೆ ಹಿಂಸೆ ಮೊದಲಾದ ಪಾಪಕರ್ಮಗಳನ್ನು ಮಾಡಿರುವುದರಿಂದ ಅವನು ಎಲ್ಲ ಪ್ರಾಣಿಗಳಿಗೂ ಶತ್ರುವೆನಿಸುವನು. ಆದುದರಿಂದ ಅವನು ಆಯುರ್ಹೀನನಾಗುವನು.

೫೩. ಯಾವನು ಪ್ರಾಣಿಹಿಂಸೆಯನ್ನು ಮಾಡದೆ, ಶಸ್ತ್ರಗಳನ್ನು ಹಿಡಿಯದೆ, ಯಾರನ್ನೂ ದಂಡಿಸದೆ ಇರುತ್ತಾ ಯಾವಾಗಲೂ ಹಿಂಸೆಯನ್ನೇ ಮಾಡದೆ ಇರುವನೋ–

೫೪. ಮತ್ತು ಯಾರನ್ನೂ ಕೊಲ್ಲಿಸದೆ, ತಾನೂ ಯಾರನ್ನೂ ಕೊಲ್ಲದೆ, ಕೊಲ್ಲುವವನಿಗೂ ಬೆಂಬಲವನ್ನು ಕೊಡದೆ ಇರುತ್ತಾ, ತನ್ನಂತೆಯೇ ಎಲ್ಲರನ್ನೂ ಭಾವಿಸುತ್ತಾ ಸಕಲ ಪ್ರಾಣಿಗಳಲ್ಲಿಯೂ ಸ್ನೇಹದಿಂದಲೇ ಇರುವನೋ–

೫೫-೫೬. ಆ ಪುರುಷನು ಸರ್ವದಾ ದೇವತ್ವವನ್ನು ಪಡೆದು ವಿರಾಜಿಸುವನು. ಒಂದುವೇಳೆ ಯಾವಾಗಲಾದರೂ ಮನುಷ್ಯಲೋಕದಲ್ಲಿ ಹುಟ್ಟಿದರೆ,

ಅಥ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ।
ಏಷ ದೀರ್ಘಾಯುಷಾಂ ಮಾರ್ಗಃ ಸುವೃತ್ತಾನಾಂ ಸುಕರ್ಮಣಾಂ ।
ಪ್ರಾಣಿಹಿಂಸಾವಿಮೋಕ್ಷೇಣ ಬ್ರಹ್ಮಣಾ ಸಮುದೀರಿತಃ ॥ ೫೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಉಮಾಮಹೇಶ್ವರಸಂವಾದೇ ಧರ್ಮನಿರೂಪಣಂ ನಾಮ ಚತುರ್ವಿಂಶತ್ಯಧಿಕ-ದ್ವಿಶತತಮೋಽಧ್ಯಾಯಃ

ಆಗ ಅಂಥವನು ನಿತ್ಯಸಂತೋಷಿಯಾಗಿ ಸಕಲವಿಧವಾದ ಸುಖಭೋಗಗಳನ್ನೂ ಸರ್ವದಾ ಅನುಭವಿಸುತ್ತಿರುವನು. ಇದೀಗ ಪ್ರಾಣಿಹಿಂಸಾ ವಿಮುಖರಾದ ಪುಣ್ಯ ಚರಿತರೂ, ಶೀಲವಂತರೂ ಆದ ದೀರ್ಘಾಯುಗಳಾದ ಪುರುಷರ ರೀತಿಯು ಇದನ್ನು ಬ್ರಹ್ಮನೇ ಹೇಳಿರುವನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದ ಉಮಾಮಹೇಶ್ವರಸಂವಾದ ಸಂದರ್ಭದಲ್ಲಿ ಧರ್ಮನಿರೂಪಣವೆಂಬ ಇನ್ನೂರಇಪ್ಪತ್ತನಾಲ್ಕನೆಯ ಅಧ್ಯಾಯುವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಪಂಚವಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ಉಮೋವಾಚ ॥

ಕಿಂಶೀಲಃ ಕಿಂಸಮಾಚಾರಃ ಪುರುಷಃ ಕೈಶ್ಚ ಕರ್ಮಭಿಃ ।
ಸ್ವರ್ಗಂ ಸಮಭಿಪದ್ಯೇತ ಸಂಪ್ರದಾನೇನ ಕೇನ ವಾ ॥ ೧ ॥

॥ ಮಹೇಶ್ವರ ಉವಾಚ ॥

ದಾತಾ ಬ್ರಾಹ್ಮಣಸತ್ಕರ್ತಾ ದೀನಾರ್ತಕೃಪಣಾದಿಷು ।
ಭಕ್ಷಭೋಜ್ಯಾನ್ನಪಾನಾನಾಂ ವಾಸಸಾಂ ಚ ಮಹಾಮತಿಃ ॥ ೨ ॥

ಇನ್ನೂರಇಪ್ಪತ್ತೈದನೆಯ ಅಧ್ಯಾಯವು

೧. ಮತ್ತೆ ಉಮೆಯು ಮಹೇಶ್ವರನನ್ನು ಕುರಿತು "ಪುರುಷನು ಸ್ವರ್ಗವನ್ನು ಪಡೆಯಬೇಕಾದರೆ ಅವನ ಶೀಲವು ಹೇಗಿರಬೇಕು? ಆಚರಣೆಯು ಹೇಗಿರಬೇಕು? ಕರ್ಮಗಳು ಯಾವರೀತಿಯಿರಬೇಕು? ಎಂತಹ ದಾನ ಮಾಡಬೇಕು?" ಎಂದು ಪ್ರಶ್ನಿಸಲು

೨. ಮಹೇಶ್ವರನು ಹೇಳತೊಡಗಿದನು. ಎಲೌ ದೇವಿ! ಕೇಳು. ಯಾವ ವಿವೇಕಿಯು ಬ್ರಾಹ್ಮಣರನ್ನು ಸತ್ಕರಿಸುತ್ತಲೂ, ದಾನಶೀಲನಾಗಿಯೂ, ದೀನರಿಗೂ, ರೋಗಿಗಳಿಗೂ, ದರಿದ್ರರಿಗೂ ಭಕ್ಷ್ಯಗಳನ್ನೂ, ಭೋಜ್ಯಗಳನ್ನೂ, ಅನ್ನಪಾನೀಯಗಳನ್ನೂ, ಬಟ್ಟೆಬರೆಗಳನ್ನು ಈಯುತ್ತಲೂ ಇರುವನೋ,

ಪ್ರತಿಶ್ರಯಾನ್ಸಭಾಃ ಕುರ್ಯಾತ್ಪ್ರಸಾಃ ಪುಷ್ಕರಿಣೀಸ್ತಥಾ ।
ನಿತ್ಯಕಾದೀನಿ ಕರ್ಮಾಣಿ ಕರೋತಿ ಪ್ರಯತಃ ಶುಚಿಃ ॥ ೩ ॥

ಆಸನಂ ಶಯನಂ ಯಾನಂ ಗೃಹಂ ರತ್ನಂ ಧನಂ ತಥಾ ।
ಸಸ್ಯಜಾತಾನಿ ಸರ್ವಾಣಿ ಸಕ್ಷೇತ್ರಾಣ್ಯಥ ಯೋಷಿತಃ ॥ ೪ ॥

ಸುಪ್ರಶಾಂತಮನಾ ನಿತ್ಯಂ ಯಃ ಪ್ರಯಚ್ಛತಿ ಮಾನವಃ ।
ಏವಂಭೂತೋ ನರೋ ದೇವಿ ದೇವಲೋಕೇಽಭಿಜಾಯತೇ ॥ ೫ ॥

ತತ್ರೋಷ್ಯ ಸುಚಿರಂ ಕಾಲಂ ಭುಕ್ತ್ವಾ ಭೋಗಾನನುತ್ತಮಾನ್ ।
ಸಹಾಪ್ಸರೋಭಿರ್ಮುದಿತೋ ರಮಿತ್ವಾ ನಂದನಾದಿಷು ॥ ೬ ॥

ತಸ್ಮಾಚ್ಚ್ಯುತೋ ಮಹೇಶಾನಿ ಮಾನುಷೇಷೂಪಜಾಯತೇ ।
ಮಹಾಭಾಗಕುಲೇ ದೇವಿ ಧನಧಾನ್ಯಸಮಾಚಿತೇ ॥ ೭ ॥

---

೩. ಮತ್ತು ನಿಲ್ಲಲು ನೆಲೆಗಳನ್ನೂ, ಮಂಟಪಗಳನ್ನೂ ಕಟ್ಟಿಸುವನೋ, ಅರವಟ್ಟಿಗೆಗಳನ್ನು ಇಡಿಸುವನೋ, ಕೊಳಗಳನ್ನು ತೋಡಿಸುವನೋ ಮತ್ತು ಶುಚಿಯಾಗಿ ಜಿತೇಂದ್ರಿಯನಾಗಿ ನಿತ್ಯಕರ್ಮಾದಿಗಳನ್ನು ಅನುಷ್ಠಾನ ಮಾಡುವನೋ-

೪. ಮತ್ತು ಆಸನಗಳನ್ನೂ, ಮಂಚ ಮೊದಲಾದ ಯೋಗ್ಯವಾದ ವಸ್ತುಗಳನ್ನೂ, ಪಲ್ಲಕ್ಕಿ ಮೊದಲಾದ ಯಾನಗಳನ್ನೂ, ಮನೆಗಳನ್ನೂ, ರತ್ನಗಳನ್ನೂ, ಹಣವನ್ನೂ, ಪೈರು ಪಚ್ಚೆಗಳಿಂದ ಕೂಡಿದ ಹೊಲಗದ್ದೆಗಳನ್ನೂ, ಸ್ತ್ರೀಯರನ್ನೂ-

೫. ಪ್ರಶಾಂತವಾದ ಮನಸ್ಸಿನಿಂದ ಪ್ರತಿನಿತ್ಯವೂ ದಾನಮಾಡುವನೋ ಆ ಮಾನವನು ದೇವಲೋಕದಲ್ಲಿ ಹುಟ್ಟುವನು.

೬. ಅಲ್ಲಿ ಅಪ್ಸರಸ್ತ್ರೀಯರೊಡನೆ ನಂದನವನ ಮೊದಲಾದವುಗಳಲ್ಲಿ ಸಂತೋಷದಿಂದ ವಿಹರಿಸುತ್ತಾ, ಉತ್ತಮೋತ್ತಮವಾದ ಸುಖಗಳನ್ನು ಅನುಭವಿಸುತ್ತಾ,

೭. ಅದು ಮುಗಿದನಂತರ ಭೂಲೋಕದಲ್ಲಿ ಧನಧಾನ್ಯಾದಿಗಳಿಂದ ತುಂಬಿರುವಂತಹ ಮಹಾಭಾಗ್ಯಶಾಲಿಗಳ ಮನೆಯಲ್ಲಿ ಹುಟ್ಟುವನು.

ತತ್ರ ಕಾಮಗುಣೈಃ ಸರ್ವೈಃ ಸಮುಪೇತೋ ಮುದಾನ್ವಿತಃ ।
ಮಹಾಕಾರ್ಯೋ ಮಹಾಭೋಗೋ ಧನೀ ಭವತಿ ಮಾನವಃ ॥ ೮ ॥

ಏತೇ ದೇವಿ ಮಹಾಭಾಗಾಃ ಪ್ರಾಣಿನೋ ದಾನಶಾಲಿನಃ ।
ಬ್ರಹ್ಮಣಾ ವೈ ಪುರಾ ಪ್ರೋಕ್ತಾಃ ಸರ್ವಸ್ಯ ಪ್ರಿಯದರ್ಶನಾಃ ॥ ೯ ॥

ಅಪರೇ ಮಾನವಾ ದೇವಿ ಪ್ರದಾನಕೃಪಣಾ ದ್ವಿಜಾಃ ।
ಯೇಽನ್ನಾನಿ ನ ಪ್ರಯಚ್ಛಂತಿ ವಿದ್ಯಮಾನೇಽಪ್ಯಬುದ್ಧಯಃ ॥ ೧೦ ॥

ದೀನಾಂಧಕೃಪಣಾನ್ದೃಷ್ಟ್ವಾ ಭಿಕ್ಷುಕಾನತಿಥೀನಪಿ ।
ಯಾಚ್ಯಮಾನಾ ನಿವರ್ತಂತೇ ಜಿಹ್ವಾಲೋಭಸಮನ್ವಿತಾಃ ॥ ೧೧ ॥

ನ ಧನಾನಿ ನ ವಾಸಾಂಸಿ ನ ಭೋಗಾನ್ನ ಚ ಕಾಂಚನಂ ।
ನ ಗಾಶ್ಚ ನಾನ್ನವಿಕೃತಿಂ ಪ್ರಯಚ್ಛಂತಿ ಕದಾಚನ ॥ ೧೨ ॥

---

೮. ಅಲ್ಲಿ ಆತನು ಎಲ್ಲರಿಗೂ ಅಪೇಕ್ಷಣೀಯವಾದಂತಹ ಒಳ್ಳೆಯ ಗುಣಗಳಿಂದ ಕೂಡಿದವನಾಗಿ, ನಿತ್ಯಸಂತೋಷಿಯಾಗಿರುತ್ತಾ ತನ್ನಲ್ಲಿರುವ ಹಣದಿಂದ ದೊಡ್ಡದೊಡ್ಡ ಕಾರ್ಯಗಳನ್ನು ಎಸಗುವನಲ್ಲದೆ ಅತಿಶಯವಾದ ಭೋಗಗಳನ್ನು ಅನುಭವಿಸುವನು.

೯. ದಾನಶೀಲರೂ ಎಲ್ಲರಿಗೂ ಪ್ರಿಯವಾದ ದರ್ಶನವುಳ್ಳವರೂ ಆದ ಇಂತವರೇ ಭಾಗ್ಯಶಾಲಿಗಳೆಂದು ಹಿಂದೆ ಬ್ರಹ್ಮನು ಹೇಳಿರುವನು.

೧೦. ಎಲೌ ದೇವಿ! ಇನ್ನೊಂದು ಬಗೆಯ ಮಾನವರಿರುವರು. ಅವರು ಎಂದಿಗೂ ದಾನವನ್ನೇ ಮಾಡದಂತಹ ಲೋಭಿಗಳು. ಆ ಅವಿವೇಕಿಗಳು ಅನ್ನವು ಬೇಕಾದಷ್ಟಿದ್ದರೂ ಒಬ್ಬನಿಗೂ ಒಂದುಹಿಡಿ ಹಾಕಲಾರರು.

೧೧. ದೀನರೂ, ಕುರುಡರೂ, ದೈವೋಪಹತರೂ ಕಣ್ಣಿಗೆ ಬೀಳುತ್ತಿದ್ದರೂ, ಭಿಕ್ಷುಕರೂ ಅತಿಥಿಗಳೂ ಯಾಚಿಸುತ್ತಿದ್ದರೂ ಸಹ ಅವರು ಮಾತಿನಲ್ಲಿಯೂ ಲೋಭವನ್ನು ವಹಿಸಿ (ಮಾತನ್ನು ಆಡಿಸದೆ) ಹಾಗೆಯೇ ಹಿಂದಿರುಗುವರು.

೧೨. ಅವರು ಎಂದಿಗೂ ಸಹ ದ್ರವ್ಯವನ್ನಾಗಲಿ, ಬಟ್ಟೆಬರೆಗಳನ್ನಾಗಲಿ, ಭೋಗಸಾಮಗ್ರಿಗಳನ್ನಾಗಲಿ, ಚಿನ್ನವನ್ನಾಗಲಿ, ಗೋವುಗಳನ್ನಾಗಲಿ, ಅನ್ನಪಾನಾದಿಗಳನ್ನಾಗಲಿ ಮತ್ತೊಬ್ಬರಿಗೆ ಕೊಡಲಾರರು.

ಅಪ್ರಲುಬ್ಧಾಶ್ಚ ಯೇ ಲುಬ್ಧಾ ನಾಸ್ತಿಕಾ ದಾನವರ್ಜಿತಾಃ ।
ಏವಂಭೂತಾ ನರಾ ದೇವಿ ನಿರಯಂ ಯಾಂತ್ಯಬುದ್ಧಯಃ ॥ ೧೩ ॥

ತೇ ವೈ ಮನುಷ್ಯತಾಂ ಯಾಂತಿ ಯದಾ ಕಾಲಸ್ಯ ಪರ್ಯಯಾತ್ ।
ಧನರಿಕ್ತೇ ಕುಲೇ ಜನ್ಮ ಲಭಂತೇ ಸ್ವಲ್ಪಬುದ್ಧಯಃ ॥ ೧೪ ॥

ಕ್ಷುತ್ಪಿಪಾಸಾಪರೀತಾಶ್ಚ ಸರ್ವಲೋಕಬಹಿಷ್ಕೃತಾಃ ।
ನಿರಾಶಾಃ ಸರ್ವಭೋಗೇಭ್ಯೋ ಜೀವಂತ್ಯಧರ್ಮಜೀವಿಕಾಃ ॥ ೧೫ ॥

ಅಲ್ಪಭೋಗಕುಲೇ ಜಾತಾ ಅಲ್ಪಭೋಗರತಾ ನರಾಃ ।
ಅನೇನ ಕರ್ಮಣಾ ದೇವಿ ಭವಂತ್ಯಧನಿನೋ ನರಾಃ ॥ ೧೬ ॥

ಅಪರೇ ದಂಭಿನೋ ನಿತ್ಯಂ ಮಾನಿನಃ ಪರತೋ ರತಾಃ ।
ಆಸನಾರ್ಹಸ್ಯ ಯೇ ಪೀಠಂ ನ ಯಚ್ಛಂತ್ಯಲ್ಪಚೇತಸಃ ॥ ೧೭ ॥

---

೧೩. ಮತ್ತು ಅವರು ಲುಬ್ಧತನದಿಂದಲೂ, ನಾಸ್ತಿಕತೆಯಿಂದಲೂ ಕೂಡಿ ದಾನವನ್ನೇ ಬಿಟ್ಟುಬಿಟ್ಟಿರುವರು. ಎಲೌ ದೇವಿ! ಇಂಥಹ ಬುದ್ಧಿಹೀನರು ಸತ್ತ ಮೇಲೆ ನರಕಕ್ಕೆ ಹೋಗುವರು.

೧೪. ಕಾಲವಶದಿಂದ ಒಂದುವೇಳೆ ಅವರು ಮನುಷ್ಯರಾಗಿ ಹುಟ್ಟಿದರೆ ಆಗ ಆ ಅಲ್ಪಬುದ್ಧಿಗಳು ಧನಹೀನರಾದ ದರಿದ್ರರ ಮನೆಯಲ್ಲಿ ಹುಟ್ಟುವರು.

೧೫. ಆಗವರು ಹಸಿವು ಬಾಯಾರಿಕೆಗಳಿಂದ ತಲ್ಲಣಿಸುವರು. ಅವರನ್ನು ಎಲ್ಲ ಜನರೂ ದೂರಮಾಡುವರು. ಈರೀತಿಯಾಗಿ ಯಾವೊಂದು ಸುಖವನ್ನೂ ಅನುಭವಿಸುವುದಕ್ಕಾಗದೆ ಅವರು ನಿರಾಶರಾಗುವರು. ಹೀಗಾಗಿ ಪುನಃ ಅಧರ್ಮನಿರತರಾಗುವರು.

೧೬. ಎಲೌ ದೇವಿ! ಈರೀತಿಯಾಗಿ ತಾವು ಮಾಡಿದ ಕರ್ಮದ ಫಲದಿಂದ ಆ ನರರು ಅಲ್ಪವಾದ ಭೋಗಭಾಗಿಗಳ ಮನೆಯಲ್ಲಿ ಹುಟ್ಟಿ ಅಲ್ಪವಾದ ಭೋಗಗಳನ್ನೇ ಅನುಭವಿಸುತ್ತಾ ಹಣವಿಲ್ಲದೆ ಒದ್ದಾಡುವರು.

೧೭. ಇನ್ನೊಂದುಬಗೆಯ ಆಡಂಬರಪ್ರಿಯರಾದ ಜನರಿರುವರು. ಅವರಿಗೆ ಮಹಾ ಅಹಂಕಾರ. ಯಾರಾದರೂ ಮಾತಾಡಿಸಿದಮೇಲೆಯೇ ಮಾತನಾಡುವಂತಹ ಸ್ವಭಾವವವರದು. ಆ ಅಲ್ಪಬುದ್ಧಿಗಳು ಮಾನ್ಯನಾದವನು ಮನೆಗೆ ಬಂದರೂ ಕೂಡ ಕುಳಿತುಕೊಳ್ಳಲು ಆಸನವನ್ನು ಕೊಡಲಾರರು.

ಮಾರ್ಗಾರ್ಹಸ್ಯ ಚ ಯೇ ಮಾರ್ಗಂ ನ ಪ್ರಯಚ್ಛಂತ್ಯಬುದ್ಧಯಃ ।
ಅರ್ಘಾರ್ಹಾನ್ನ ಚ ಸಂಸ್ಕಾರೈರರ್ಚಯಂತಿ ಯಥಾವಿಧಿ ॥ ೧೮ ॥

ಪಾದ್ಯಮಾಚಮನೀಯಂ ವಾ ಪ್ರಯಚ್ಛಂತ್ಯಭಿಬುದ್ಧಯಃ ।
ಶುಭಂ ಚಾಭಿಮತಂ ಪ್ರೇಮ್ಣಾ ಗುರುಂ ನಾಭಿವದಂತಿ ಯೇ ॥ ೧೯ ॥

ಅಭಿಮಾನಪ್ರವೃದ್ಧೇನ ಲೋಭೇನ ಸಮುಪಾಸ್ಥಿತಾಃ ।
ಸಂಮಾನ್ಯಾಂಶ್ಚಾವಮನ್ಯಂತೇ ವೃದ್ಧಾನ್ಪರಿಭವಂತಿ ಚ ॥ ೨೦ ॥

ಏವಂವಿಧಾ ನರಾ ದೇವಿ ಸರ್ವೇ ನಿರಯಗಾಮಿನಃ ।
ತೇ ಚೇದ್ಯದಿ ನರಾಸ್ತಸ್ಮಾನ್ನಿರಯಾದುತ್ತರಂತಿ ಚ ॥ ೨೧ ॥

ವರ್ಷಪೂಗೈಸ್ತತೋ ಜನ್ಮ ಲಭಂತೇ ಕುತ್ಸಿತೇ ಕುಲೇ ।
ಶ್ವಪಾಕಪುಲ್ಕಸಾದೀನಾಂ ಕುತ್ಸಿತಾನಾಮಚೇತಸಾಂ ॥ ೨೨ ॥

---

೧೮. ಆ ಅವಿವೇಕಿಗಳು ದಾರಿಯಲ್ಲಿ ಹೋಗುತ್ತಿದ್ದಾಗ ಮೊದಲು ಯಾರಿಗೆ ಹಾದಿ ಬಿಡಬೇಕೋ ಅಂಥವರಿಗೆ ತಾವು ದಾರಿಯನ್ನೇ ಕೊಡರು. ಪೂಜ್ಯರಾದವರು ಮನೆಗೆ ಬಂದರೆ ವಿಧಿಪೂರ್ವಕವಾಗಿ ಅವರನ್ನು ಸತ್ಕರಿಸಲಾರರು.

೧೯. ಒಂದುವೇಳೆ ಏನಾದರೂ ಸತ್ಕರಿಸಬೇಕೆಂದು ತೋರಿದರೆ ಪಾದ್ಯವನ್ನಾಗಲಿ ಆಚಮನೀಯವನ್ನಾಗಲಿ ಕೊಡುವರು. ತಮಗೆ ಬೇಕಾದವನೂ ಶುಭಕರನೂ ಆದ ಗುರುವನ್ನೂ ಸಹ ಪ್ರೀತಿಯಿಂದ ಅವರು ನಮಸ್ಕರಿಸಲಾರರು.

೨೦. ಅವರು ಆತ್ಮಾಭಿಮಾನದಿಂದ ಬೀಗುತ್ತಾ ಒಣಹೆಮ್ಮೆಯಿಂದಲೇ ಪೆಟ್ಟುಕೊಂಡಿರುವಂತಹ ಲೋಭದಿಂದ ಕೂಡಿ ಸಮ್ಮಾನಕ್ಕೆ ಅರ್ಹರಾದವರನು ಸನ್ಮಾನಿಸದಿರುವರು. ಹಿರಿಯರನ್ನು ಅಸಡ್ಡೆಯಿಂದ ನೋಡುವರು.

೨೧. ಎಲೌ ದೇವಿ! ಈ ಬಗೆಯ ಮನುಷ್ಯರೆಲ್ಲರೂ ನರಕಕ್ಕೇ ಹೋಗುವರು. ಒಂದುವೇಳೆ ಇವರು ಆ ಯಾತನೆಗಳನ್ನೆಲ್ಲಾ ಅನುಭವಿಸಿ ನರಕದಿಂದ ಬಿಡುಗಡೆಹೊಂದಿದರೆ–

೨೨. ಅನೇಕ ವರ್ಷಗಳು ಕಳೆದನಂತರ, ಚಂಡಾಲ, ಪುಲ್ಕಸ ಮೊದಲಾದ ಅಜ್ಞರೆನಿಸಿದ ಹೀನಜಾತಿಯವರ ಮನೆಯಲ್ಲಿ ಜನ್ಮತಾಳುವರು.

ಕುಲೇಷು ತೇಽಭಿಜಾಯಂತೇ ಗುರುವೃದ್ಧೋಪತಾಪಿನಃ ।
ನ ದಂಭೀ ನ ಚ ಮಾನೀ ಯೋ ದೇವತಾತಿಥಿಪೂಜಕಃ　　॥ ೨೩ ॥

ಲೋಕಪೂಜ್ಯೋ ನಮಸ್ಕರ್ತಾ ಪ್ರಸೂತೋ ಮಧುರಂ ವಚಃ ।
ಸರ್ವಕರ್ಮಪ್ರಿಯಕರಃ ಸರ್ವಭೂತಪ್ರಿಯಃ ಸದಾ　　॥ ೨೪ ॥

ಅದ್ವೇಷೀ ಸುಮುಖಃ ಶ್ಲಕ್ಷ್ಣಃ ಸ್ನಿಗ್ಧವಾಣೀಪ್ರದಃ ಸದಾ ।
ಸ್ವಾಗತೇನೈವ ಸರ್ವೇಷಾಂ ಭೂತಾನಾಮವಿಹಿಂಸಕಃ　　॥ ೨೫ ॥

ಯಥಾರ್ಹಂ ಸತ್ಕ್ರಿಯಾಪೂರ್ವಮರ್ಚಯನ್ನವತಿಷ್ಠತೇ ।
ಮಾರ್ಗಾರ್ಹಾಯ ದದನ್ಮಾರ್ಗಂ ಗುರುಮಭ್ಯರ್ಚಯನ್ಸದಾ　　॥ ೨೬ ॥

ಅತಿಥಿಪ್ರಗ್ರಹರತಸ್ತಥಾಭ್ಯಾಗತಪೂಜಕಃ ।
ಏವಂಭೂತೋ ನರೋ ದೇವಿ ಸ್ವರ್ಗತಿಂ ಪ್ರತಿಪದ್ಯತೇ　　॥ ೨೭ ॥

---

೨೩. ಹೀಗೆ ಗುರುಗಳನ್ನೂ ವೃದ್ಧರನ್ನೂ ಲಕ್ಷ್ಯಮಾಡದೆ ಕಿರುಕುಳ ಕೊಟ್ಟವರೆಲ್ಲರೂ ಹೀನಜಾತಿಯಲ್ಲಿ ಹುಟ್ಟುವರು. ಯಾವನು ಆಡಂಬರವಿಲ್ಲದೆ, ಅಹಂಕಾರಪಡದೆ, ದೇವತೆಗಳನ್ನೂ ಅತಿಥಿಗಳನ್ನೂ ಸತ್ಕರಿಸುತ್ತಾ ಇರುವನೋ-

೨೪. ಮತ್ತು ಎಲ್ಲ ಜನರಿಂದಲೂ ಗೌರವಕ್ಕೆ ಪಾತ್ರನಾಗಿ, ಗುರು ಹಿರಿಯರಿಗೆ ನಮಸ್ಕರಿಸುತ್ತಾ, ಮಧುರವಾದ ಮಾತುಗಳನ್ನಾಡುತ್ತಾ, ಯಾವ ಕರ್ಮಗಳನ್ನೇ ಮಾಡಲಿ ಎಲ್ಲರಿಗೂ ಸಂತೋಷವಾಗುವಂತೆ ಮಾಡುತ್ತಾ, ಸಕಲ ಜನರಿಗೂ ಪ್ರಿಯನೆನಿಸಿ ಇರುವನೋ-

೨೫. ಮತ್ತೂ ಯಾರನ್ನೂ ದ್ವೇಷಿಸದೆ, ನಗುನಗುತ್ತಾ, ಮೃದುವಾಗಿ, ಇಂಪಾದ ಮಾತುಗಳನ್ನೇ ಸರ್ವದಾ ಆಡುತ್ತಾ, ಯಾವ ಪ್ರಾಣಿಗಳಿಗೂ ಹಿಂಸೆಯನ್ನು ಮಾಡದೆ, ಎಲ್ಲರಿಗೂ ಸ್ವಾಗತವನ್ನು ಕೋರುತ್ತಾ ಇರುವನೋ-

೨೬. ಮತ್ತು ಪೂಜ್ಯರಾದವರನ್ನು ಸತ್ಕಾರಾದಿಗಳಿಂದ ಅರ್ಚಿಸುತ್ತಾ, ಮಾರ್ಗದಲ್ಲಿ ಅರ್ಹರಾದವರಿಗೆ ಮೊದಲು ದಾರಿ ಬಿಡುತ್ತಾ ಸರ್ವದಾ ಗುರುಗಳನ್ನು ಅರ್ಚಿಸುತ್ತಾ ಇರುವನೋ-

೨೭. ಮತ್ತು ಅತಿಥಿಗಳನ್ನು ಸತ್ಕರಿಸುವುದರಲ್ಲಿ ಆಸಕ್ತನಾಗಿಯೂ, ಅಭ್ಯಾಗತರನ್ನು ಪೂಜಿಸುವವನಾಗಿಯೂ, ಇರುವನೋ-ಅಂತಹ ಮಾನವನು, ಸ್ವರ್ಗಲೋಕವನ್ನು ಹೊಂದುವನು.

ತತೋ ಮಾನುಷ್ಯಮಾಸಾದ್ಯ ವಿಶಿಷ್ಟಕುಲಜೋ ಭವೇತ್ ।
ತತ್ರಾಸೌ ವಿಪುಲೈರ್ಭೋಗೈಃ ಸರ್ವರತ್ನಸಮಾಯುತಃ ॥ ೨೮ ॥

ಯಥಾರ್ಹದಾತಾ ಚಾರ್ಹೇಷು ಧರ್ಮಚರ್ಯಾಪರೋ ಭವೇತ್ ।
ಸಂಮತಃ ಸರ್ವಭೂತಾನಾಂ ಸರ್ವಲೋಕನಮಸ್ಕೃತಃ ॥ ೨೯ ॥

ಸ್ವಕರ್ಮಫಲಮಾಪ್ನೋತಿ ಸ್ವಯಮೇವ ನರಃ ಸದಾ ।
ಏಷ ಧರ್ಮೋ ಮಯಾ ಪ್ರೋಕ್ತೋ ವಿಧಾತ್ರಾ ಸ್ವಯಮೀರಿತಃ ॥ ೩೦ ॥

ಯಸ್ತು ರೌದ್ರಸಮಾಚಾರಃ ಸರ್ವಸತ್ತ್ವಭಯಂಕರಃ ।
ಹಸ್ತಾಭ್ಯಾಂ ಯದಿ ವಾ ಪದ್ಭ್ಯಾಂ ರಜ್ಜ್ವಾ ದಂಡೇನ ವಾ ಪುನಃ ॥ ೩೧ ॥

ಲೋಷ್ಟೈಃ ಸ್ತಂಭೈರುಪಾಯೈರ್ವಾ ಜಂತೂನ್ಬಾಧೇತ ಶೋಭನೇ ।
ಹಿಂಸಾರ್ಥಂ ನಿಷ್ಕೃತಿಪ್ರಜ್ಞಃ ಪ್ರೋದ್ವೇಜಯತಿ ಚೈವ ಹಿ ॥ ೩೨ ॥

---

೨೮. ಅನಂತರ ಮನುಷ್ಯಲೋಕದಲ್ಲಿ ಹುಟ್ಟುವುದಾದರೆ, ವಿಶಿಷ್ಟವಾದಂತಹ (ಉತ್ತಮ) ಮನೆಯಲ್ಲಿಯೇ ಹುಟ್ಟುವನು. ಮತ್ತು ಅಲ್ಲಿ ವಿಪುಲವಾದ ಭೋಗಗಳನ್ನು ಅನುಭವಿಸುವನು. ಸಕಲವಿಧವಾದ ಶ್ರೇಷ್ಠವಸ್ತುಗಳನ್ನೂ ಪಡೆಯುವನು.

೨೯. ಅರ್ಹರಾದವರಿಗೆ ಉಚಿತವಾದಂತಹ ದಾನಮಾಡುವನು. ಧರ್ಮಕಾರ್ಯಗಳಲ್ಲೇ ಆಸಕ್ತನಾಗುವನು. ಎಲ್ಲ ಪ್ರಾಣಿಗಳಿಗೂ ಬೇಕಾದವನೆನಿಸುವನು. ಎಲ್ಲ ಜನರೂ ಆತನಿಗೆ ನಮಸ್ಕರಿಸುವರು.

೩೦. ಈರೀತಿಯಾಗಿ ಮಾನವನು ತಾನು ಮಾಡಿದ ಕರ್ಮಗಳ ಫಲವನ್ನೇ ಅನುಭವಿಸುವನು. ಈ ಧರ್ಮವನ್ನು ಹಿಂದೆ ಬ್ರಹ್ಮನು ಹೇಳಿದ್ದನು. ಅದನ್ನೇ ನಾನೀಗ ತಿಳಿಸಿದೆನು.

೩೧-೩೨. ಎಲೌ ಮಂಗಳಾಂಗಿ, ಯಾವನು ಕ್ರೂರವಾಗಿ ವರ್ತಿಸುತ್ತಾ, ಎಲ್ಲ ಪ್ರಾಣಿಗಳಿಗೂ ಭಯವನ್ನು ಹುಟ್ಟಿಸುತ್ತಾ ಕೈಗಳಿಂದಾಗಲಿ, ಕಾಲುಗಳಿಂದಾಗಲಿ, ಹಗ್ಗದಿಂದಾಗಲಿ, ಕೋಲುಗಳಿಂದಾಗಲಿ, ಹೆಂಟೆಗಳಿಂದಾಗಲಿ, ಕಂಭಗಳಿಂದಾಗಲಿ, ಇನ್ನಾವ ವಿಧವಾದ ಉಪಾಯಗಳಿಂದಾಗಲಿ ಪ್ರಾಣಿಗಳನ್ನು ಹಿಂಸೆಮಾಡುವನೋ ಮತ್ತು ಹಿಂಸೆಗೆ ಸಿದ್ಧನಾಗಿ ನಿಂತು ಅವರ ಮನಸ್ಸಿಗೆ ನಾನಾವಿಧವಾದ ಆತಂಕಗಳನ್ನು ಉಂಟುಮಾಡಿರುವನೋ-

ಉಪಕ್ರಾಮತಿ ಜಂತೂಂಶ್ಚ ಉದ್ವೇಗಜನನಃ ಸದಾ ।
ಏವಂ ಶೀಲಸಮಾಚಾರೋ ನಿರಯಂ ಪ್ರತಿಪದ್ಯತೇ ॥ ೩೩ ॥

ಸ ಚೇನ್ಮನುಷ್ಯತಾಂ ಗಚ್ಛೇದ್ಯದಿ ಕಾಲಸ್ಯ ಪರ್ಯಯಾತ್ ।
ಬಹ್ವಾಬಾಧಾಪರಿಕ್ಲಿಷ್ಟೇ ಕುಲೇ ಜಯತಿ ಸೋಽಧಮೋ ॥ ೩೪ ॥

ಲೋಕದ್ವಿಷ್ಟೋಽಧಮಃ ಪುಂಸಾಂ ಸ್ವಯಂ ಕರ್ಮಕೃತೈಃ ಫಲೈಃ ।
ಏಷ ದೇವಿ ಮನುಷ್ಯೇಷು ಬೋದ್ಧವ್ಯೋ ಜ್ಞಾತಿಬಂಧುಷು ॥ ೩೫ ॥

ಅಪರಃ ಸರ್ವಭೂತಾನಿ ದಯಾವಾನನುಪಶ್ಯತಿ ।
ಮೈತ್ರೀ ದೃಷ್ಟಿಃ ಪಿತೃಸಮೋ ನಿರ್ವೈರೋ ನಿಯತೇಂದ್ರಿಯಃ ॥ ೩೬ ॥

---

೩೩. ಮತ್ತು ಹೆದರಿಕೆ ಹುಟ್ಟಿಸುತ್ತಾ ಯಾವ ಜಂತುವನ್ನಾಗಲಿ ಹಿಡಿಯ ಹೋಗಿ ಹಿಂಬಾಲಿಸುವನೋ-ಇಂಥಹ ನಡೆವಳಿಕೆಯುಳ್ಳ ಪಾಪಿಯು ನರಕವನ್ನು ಹೊಂದುವನು.

೩೪. ಒಂದುವೇಳೆ ಕಾಲವಶದಿಂದ ಅವನು ಮನುಷ್ಯನಾಗಿ ಹುಟ್ಟಿವು ದಾದರೆ ನಾನಾವಿಧವಾದ ಆಪತ್ತುಗಳಿಂದ ನರಳುತ್ತಿರುವಂತಹ ಅಧಮರಾದವರ ಮನೆಯಲ್ಲಿ ಹುಟ್ಟುವನು.

೩೫. ಅವನನ್ನು ಜನರು ದ್ವೇಷಿಸುವರು. ಪುರುಷರಲ್ಲೆಲ್ಲಾ ಕೀಳಾಗಿ ಕಾಣುವರು. ಜ್ಞಾತಿಗಳೂ ಬಂಧುಗಳೂ ಸಹ ಕಡೆಯಾಗೆಣಿಸುವರು. ಈರೀತಿ ಯಾಗಿ ತಾನು ಮಾಡಿದ ಕರ್ಮಫಲವನ್ನು ಆ ಪಾಪಿಯು ಅನುಭವಿಸುವನು.

೩೬. ಎಲೌ ದೇವಿ ! ಮತ್ತೊಂದುರೀತಿಯ ಮಾನವನಿರುವನು. ಆತನು ಎಲ್ಲ ಪ್ರಾಣಿಗಳನ್ನೂ ಮರುಕದಿಂದ ನೋಡುವನು. ಆತನ ದೃಷ್ಟಿಯು ಸರ್ವದಾ ಮೈತ್ರಿಯಿಂದ (ಸ್ನೇಹ) ತುಂಬಿರುವುದು. ಅವನು ಎಲ್ಲರಿಗೂ ತಂದೆಯಂತೆ ಇರುವನು. ಯಾರನ್ನೂ ದ್ವೇಷಿಸುವುದಿಲ್ಲ. ಇಂದ್ರಿಯಗಳೆಲ್ಲವನ್ನೂ ಜಯಿಸಿ ಅಧೀನದಲ್ಲಿಟ್ಟುಕೊಂಡಿರುವನು.

ನೋದ್ವೇಜಯತಿ ಭೂತಾನಿ ನ ಚ ಹಂತಿ ದಯಾಪರಃ ।
ಹಸ್ತಪಾದ್ಯೈಶ್ಚ ನಿಯತೈರ್ವಿಶ್ವಾಸ್ಯಃ ಸರ್ವಜಂತುಷು ॥ ೩೭ ॥

ನ ರಜ್ಜ್ವಾ ನ ಚ ದಂಡೇನ ನ ಲೋಷ್ಟೈರ್ನಾಯುಧೇನ ಚ ।
ಉದ್ವೇಜಯತಿ ಭೂತಾನಿ ಶುಭಕರ್ಮಾ ದಯಾಪರಃ ॥ ೩೮ ॥

ಏವಂ ಶೀಲಸಮಾಚಾರಃ ಸ್ವರ್ಗೇ ಸಮುಪಜಾಯತೇ ।
ತತ್ರಾಸೌ ಭವನೇ ದಿವ್ಯೇ ಮುದಾ ವಸತಿ ದೇವವತ್ ॥ ೩೯ ॥

ಸ ಚೇತ್ಸ್ವರ್ಗಕ್ಷಯಾನ್ಮರ್ತ್ಯೇ ಮನುಷ್ಯೇಷೂಪಜಾಯತೇ ।
ಅಲ್ಪಾಯಾಸೋ ನಿರಾತಂಕಃ ಸ ಜಾತಃ ಸುಖಮೇಧತೇ ॥ ೪೦ ॥

ಸುಖಭಾಗೀ ನಿರಾಯಾಸೋ ನಿರುದ್ವೇಗಃ ಸದಾ ನರಃ ।
ಏಷ ದೇವಿ ಸತಾಂ ಮಾರ್ಗೋ ಬಾಧಾ ಯತ್ರ ನ ವಿದ್ಯತೇ ॥ ೪೧ ॥

---

೩೭. ಯಾವ ಪ್ರಾಣಿಗೂ ಆತಂಕಪಡಿಸಲಾರನು. ಯಾವುದನ್ನೂ ಕೊಲ್ಲಲಾರನು. ಕೈಗಳಿಂದಾಗಲೀ, ಕಾಲ್ಗಳಿಂದಾಗಲಿ-

೩೮. ಹಗ್ಗದಿಂದಾಗಲಿ, ಕೋಲುಗಳಿಂದಾಗಲಿ, ಕಲ್ಲುಹೆಂಟೆಗಳಿಂದಾಗಲಿ, ಆಯುಧಗಳಿಂದಾಗಲಿ, ಯಾವ ಪ್ರಾಣಿಯನ್ನೂ ಹಿಂಸೆಮಾಡಲಾರನು. ಹೆದರಿಸಲಾರನು. ಶುಭಚರಿತನೂ, ದಯಾಪರನೂ ಆದ ಆತನು ಎಲ್ಲ ಪ್ರಾಣಿಗಳಿಗೂ ನಂಬಿಕೆಗೀಡಾಗಿರುವನು.

೩೯. ಈರೀತಿಯಾದ ಶೀಲವನ್ನೂ ಆಚಾರವನ್ನೂ ಉಳ್ಳಂತಹ ಮಾನವನು ಸ್ವರ್ಗಕ್ಕೆ ಹೋಗುವನು. ಅಲ್ಲಿ ದಿವ್ಯವಾದ ಸೌಧದಲ್ಲಿ ನಿತ್ಯ ಸಂತೋಷಿಯಾಗಿ ದೇವತೆಯಂತೆ ವಾಸಮಾಡುವನು.

೪೦. ಒಂದುವೇಳೆ ಸ್ವರ್ಗಭೋಗವು ಮುಗಿದನಂತರ ಮನುಷ್ಯನಾಗಿ ಹುಟ್ಟಿದರೆ ಅವನಿಗೆ ಹೆಚ್ಚು ಆಯಾಸವುಂಟಾಗುವುದಿಲ್ಲ. ಯಾವ ಆತಂಕವೂ ಆತನನ್ನು ಪೀಡಿಸದು. ಅವನು ಯಾವಾಗಲೂ ಸುಖಿಯಾಗಿಯೇ ಇರುವನು.

೪೧. ಮತ್ತು ಆ ಮಾನವನು ನಿರಾಯಾಸವಾಗಿ ಸುಖಗಳನ್ನು ಅನುಭವಿಸುತ್ತಾ ಯಾವೊಂದು ಆತಂಕವೂ ಇಲ್ಲದೆ ಇರುವನು. ಎಲೌ ದೇವಿ! ಇದೀಗ ಯಾವೊಂದು ತೊಂದರೆಯೂ ಇಲ್ಲದಂತಹ ಸತ್ಪುರುಷರ ಮಾರ್ಗವು" ಎಂದನು.

॥ ಉಮೋವಾಚ ॥

ಇಮೇ ಮನುಷ್ಯಾ ದೃಶ್ಯಂತೇ ಊಹಾಪೋಹವಿಶಾರದಾಃ ।
ಜ್ಞಾನವಿಜ್ಞಾನಸಂಪನ್ನಾಃ ಪ್ರಜ್ಞಾವಂತೋಽರ್ಥಕೋವಿದಾಃ ॥ ೪೨ ॥

ದುಷ್ಪ್ರಜ್ಞಾಶ್ಚಾಪರೇ ದೇವ ಜ್ಞಾನವಿಜ್ಞಾನವರ್ಜಿತಾಃ ।
ಕೇನ ಕರ್ಮವಿಪಾಕೇನ ಪ್ರಜ್ಞಾವಾನ್ಪುರುಷೋ ಭವೇತ್ ॥ ೪೩ ॥

ಅಲ್ಪಪ್ರಜ್ಞೋ ವಿರೂಪಾಕ್ಷ ಕಥಂ ಭವತಿ ಮಾನವಃ ।
ಏವಂ ತ್ವಂ ಸಂಶಯಂ ಛಿಂಧಿ ಸರ್ವಧರ್ಮಭೃತಾಂ ಪರ ॥ ೪೪ ॥

ಜಾತ್ಯಂಧಾಶ್ಚಾಪರೇ ದೇವ ರೋಗಾರ್ತಾಶ್ಚಾಪರೇ ತಥಾ ।
ನರಾಃ ಕ್ಲೀಬಾಶ್ಚ ದೃಶ್ಯಂತೇ ಕಾರಣಂ ಬ್ರೂಹಿ ತತ್ರ ವೈ ॥ ೪೫ ॥

---

೪೨. ಆಗ ಉಮೆಯು ಮತ್ತೂ ಪ್ರಶ್ನಿಸಿದಳು :—ಹೇ ದೇವ! ಕೆಲವು ಮನುಷ್ಯರು ಊಹಾಪೋಹಗಳಲ್ಲಿ ಕುಶಲರಾಗಿ, ಜ್ಞಾನದಿಂದಲೂ ವಿಜ್ಞಾನದಿಂದಲೂ ಸಂಪನ್ನರಾಗಿ, ಪ್ರಾಜ್ಞರಾಗಿಯೂ, ಅರ್ಥಶಾಸ್ತ್ರದಲ್ಲಿ ನಿಪುಣರಾಗಿಯೂ ಇರುವರು.

೪೩. ಮತ್ತೆ ಕೆಲವರಿಗೆ ಪ್ರಜ್ಞೆಯೆನ್ನುವುದೇ ಇರುವುದಿಲ್ಲ. ಜ್ಞಾನವೂ ವಿಜ್ಞಾನವೂ ಕೂಡ ಅವರಿಗಿಲ್ಲ. ಪುರುಷನು ಯಾವ ಕರ್ಮದ ಫಲದಿಂದ ಪ್ರಜ್ಞೆಯುಳ್ಳವನಾಗುವನು ?

೪೪. ಎಲೈ ವಿರೂಪಾಕ್ಷನೇ! ಮನುಷ್ಯನು ಅಲ್ಪಪ್ರಜ್ಞನಾಗುವುದು ಹೇಗೆ? ಸಕಲವಾದ ಧರ್ಮಗಳನ್ನೂ ಯಾರಾರು ತಿಳಿದು ಇರುವರೋ ಅವರೆಲ್ಲರಿಗಿಂತ ನೀನು ಮೇಲೆನಿಸಿರುವೆ. ಈ ನನ್ನ ಸಂಶಯವನ್ನು ಹೋಗಲಾಡಿಸು '' ಎಂದನು.

೪೫. ಕೆಲವರು ಹುಟ್ಟುವಾಗಲೇ ಕುರುಡರಾಗಿ ಹುಟ್ಟುವರು. ಕೆಲವರು ಸದಾ ರೋಗದಿಂದ ನರಳುತ್ತಿರುವರು. ಕೆಲವರು ನಪುಂಸಕರಾಗಿ ತೇಜೋಹೀನರಾಗಿರುವರು ಈ ರೀತಿ ಆಗಲು ಕಾರಣವೇನು? ಹೇಳಬೇಕೆನಲು,

॥ ಮಹೇಶ್ವರ ಉವಾಚ ॥

ಬ್ರಾಹ್ಮಣಾನ್ವೇದವಿದುಷಃ ಸಿದ್ಧಾನ್ಧರ್ಮವಿದಸ್ತಥಾ ।
ಪರಿಪೃಚ್ಛಂತ್ಯಹರಹಃ ಕುಶಲಾಕುಶಲಂ ಸದಾ ॥ ೪೬ ॥

ವರ್ಜಯಂತೋಽಶುಭಂ ಕರ್ಮ ಸೇವಮಾನಾಃ ಶುಭಂ ತಥಾ ।
ಲಭಂತೇ ಸ್ವರ್ಗತಿಂ ನಿತ್ಯಮಿಹ ಲೋಕೇ ಯಥಾಸುಖಂ ॥ ೪೭ ॥

ಸ ಚೇನ್ಮನುಷ್ಯತಾಂ ಯಾತಿ ಮೇಧಾವೀ ತತ್ರ ಜಾಯತೇ ।
ಶ್ರುತಂ ಯಜ್ಞಾನುಗಂ ಯಸ್ಯ ಕಲ್ಯಾಣಮುಪಜಾಯತೇ ॥ ೪೮ ॥

ಪರದಾರೇಷು ಯೇ ಚಾಪಿ ಚಕ್ಷುರ್ದುಷ್ಟಂ ಪ್ರಯುಂಜತೇ ।
ತೇನ ದುಷ್ಟಸ್ವಭಾವೇನ ಜಾತ್ಯಂಧಾಸ್ತೇ ಭವಂತಿ ಹಿ ॥ ೪೯ ॥

ಮನಸಾಪಿ ಪ್ರದುಷ್ಟೇನ ನಗ್ನಾಂ ಪಶ್ಯಂತಿ ಯೇ ಸ್ತ್ರಿಯಂ ।
ರೋಗಾರ್ತಾಸ್ತೇ ಭವಂತೀಹ ನರಾ ದುಷ್ಕೃತಕಾರಿಣಃ ॥ ೫೦ ॥

---

೪೬. ಆಗ ಶಿವನು ಈರೀತಿ ಹೇಳತೊಡಗಿದನು :—“ ವೇದಾರ್ಥವನ್ನು ಬಲ್ಲವರೂ, ಧರ್ಮಸ್ವರೂಪವನ್ನು ಚೆನ್ನಾಗಿ ಅರಿತಿರುವರೂ, ಸಿದ್ಧರೆನಿಸಿದವರೂ ಆದಂತಹ ಬ್ರಾಹ್ಮಣರನ್ನು ಯಾರು ಸರ್ವದಾ ಕುಶಲವನ್ನೂ ಅಕುಶಲವನ್ನೂ (ಒಳ್ಳೆಯದಾವುದು ಕೆಟ್ಟದಾವುದು ಎಂದು) ಪ್ರಶ್ನಿಸುವರೋ-

೪೭. ಮತ್ತು ಕೆಟ್ಟಕೆಲಸಗಳನ್ನು ಬಿಟ್ಟು ಒಳ್ಳೆಯಕೆಲಸಗಳನ್ನೇ ಮಾಡುವರೋ-ಅಂಥಹವರು ಈ ಲೋಕದಲ್ಲಿ ಸುಖವಾಗಿದ್ದು ಅನಂತರ ಸ್ವರ್ಗವನ್ನು ಪಡೆಯುವರು.

೪೮. ಅಂಥಹವನು ಒಂದುವೇಳೆ ಮನುಷ್ಯನಾಗಿ ಪುನಃ ಹುಟ್ಟಿದರೆ, ಅವನು ಮೇಧಾವಿ (ಪ್ರಜ್ಞಾಶೀಲ) ಯಾಗಿ ಹುಟ್ಟುವನು. ಅವನು ಕಲಿತ ಶಾಸ್ತ್ರೀಯ ಜ್ಞಾನವೆಲ್ಲವೂ ಯಜ್ಞಾದಿ ಶುಭಕರ್ಮಗಳನ್ನು ಅನುಸರಿಸುವುದು. ಅವನಿಗೆ ಮಂಗಳವುಂಟಾಗುವುದು.

೪೯. ಯಾರು ಪರಾಂಗನೆಯರಮೇಲೆ ಕೆಟ್ಟದೃಷ್ಟಿಯನ್ನು ಬೀರುವರೋ ಅವರ ಆ ಕೆಟ್ಟಸ್ವಭಾವದಿಂದ ಮುಂದೆ ಅವರು ಹುಟ್ಟುಗುರುಡರಾಗುವರು.

೫೦. ಯಾರು ಮನಸ್ಸಿಂದಾಗಲಿ ನಗ್ನಳಾದ ಸ್ತ್ರೀಯರನ್ನು ನೋಡುವರೋ ಆ ಪಾಪಿಷ್ಠರಾದ ಮಾನವರು ರೋಗಪೀಡಿತರಾಗುವರು.

ಯೇ ತು ಮೂಢಾ ದುರಾಚಾರಾ ವಿಯೋನೌ ಮೈಥುನೇ ರತಾಃ ।
ಪುರುಷೇಷು ಸುದುಷ್ಪ್ರಜ್ಞಾಃ ಕ್ಲೀಬತ್ವಮುಪಯಾಂತಿ ತೇ ॥ ೫೧ ॥

ಪಶೂಂಶ್ಚ ಯೇ ವೈ ಬಧ್ನಂತಿ ಯೇ ಚೈವ ಗುರುತುಲ್ಪಗಾಃ ।
ಪ್ರಕೀರ್ಣಮೈಥುನಾ ಯೇ ಚ ಕ್ಲೀಬಾ ಜಾಯಂತಿ ವೈ ನರಾಃ ॥ ೫೨ ॥

॥ ಉಮೋವಾಚ ॥

ಅವದ್ಯಂ ಕಿಂ ತು ವೈ ಕರ್ಮ ನಿರವದ್ಯಂ ತಥೈವ ಚ ।
ಶ್ರೇಯಃ ಕುರ್ವನ್ನವಾಪ್ನೋತಿ ಮಾನವೋ ದೇವಸತ್ತಮ ॥ ೫೩ ॥

॥ ಮಹೇಶ್ವರ ಉವಾಚ ॥

ಶ್ರೇಯಾಂಸಂ ಮಾರ್ಗಮನ್ವಿಚ್ಛನ್ಸದಾ ಯಃ ಪೃಚ್ಛತಿ ದ್ವಿಜಾನ್ ।
ಧರ್ಮಾನ್ವೇಷೀ ಗುಣಾಕಾಂಕ್ಷೀ ಸ ಸ್ವರ್ಗಂ ಸಮುಪಾಶ್ನುತೇ ॥ ೫೪ ॥

---

೫೧. ಯಾವ ದಡ್ಡರು ಕೆಟ್ಟನಡತೆಗೆ ಸಿಕ್ಕಿಬಿದ್ದು ಜಾತ್ಯಂತರ ಪ್ರಾಣಿಗಳಲ್ಲಾಗಲಿ ಪುರುಷರಲ್ಲಾಗಲಿ ಮೈಥುನವನ್ನು (ಸಮಾಗಮ) ಆಚರಿಸುವರೋ ಆ ಬುದ್ಧಿಹೀನರು ನಪುಂಸಕರಾಗಿ ಹುಟ್ಟುವರು.

೫೨. ಯಾರು ಪಶುಗಳನ್ನು ನಿಷ್ಕಾರಣವಾಗಿ ಕಟ್ಟಿಹಾಕುವರೋ ಮತ್ತು ಯಾರು ಗುರುಪತ್ನೀ ಗಮನವನ್ನು ಮಾಡುವರೋ ಮತ್ತು ಯಾರು ಅಸಭ್ಯರೀತಿಯ ನಾನಾತರಹದ ಮೈಥುನಗಳಲ್ಲಿ ತೊಡಗಿರುವರೋ ಆ ನರರು ನಪುಂಸಕರಾಗಿ ಹುಟ್ಟುವರು ಎಂದನು.

೫೩. ಆಗ ಉಮೆಯು "ಓ ದೇವಶ್ರೇಷ್ಠ! ದುಷ್ಟವಾದ ಕರ್ಮ ವಾವುದು? ದೋಷರಹಿತವಾದ ಕರ್ಮವಾವುದು? ಯಾವ ಕರ್ಮವನ್ನಾಚರಿಸಿದರೆ ಮನುಷ್ಯನು ಶ್ರೇಯಸ್ಸನ್ನು ಹೊಂದುವನು?" ಎಂದು ಪ್ರಶ್ನಿಸಲು

೫೪. ಪುನಃ ಮಹೇಶನಿಂತೆಂದನು :—ಯಾವ ಮಾನವನು ಸರ್ವದಾ ಶ್ರೇಯೋಮಾರ್ಗವನ್ನೇ ಬಯಸುತ್ತಾ, ತಿಳಿದ ಬ್ರಾಹ್ಮಣರನ್ನು ಪ್ರಶ್ನಿಸುತ್ತಿರುವನೋ ಮತ್ತು ಧರ್ಮವನ್ನು ಹುಡುಕುತ್ತಾ ಒಳ್ಳೆಯಗುಣಗಳನ್ನು ಮೆಚ್ಚುತ್ತಾ ಇರುವನೋ ಅವನು ಸ್ವರ್ಗವನ್ನು ಹೊಂದುವನು.

ಯದಿ ಮಾನುಷ್ಯತಾಂ ದೇವಿ ಕದಾಚಿತ್ಸಂನಿಯಚ್ಛತಿ ।
ಮೇಧಾವೀ ಧಾರಣಾಯುಕ್ತಃ ಪ್ರಾಜ್ಞಸ್ತತ್ರಾಪಿ ಜಾಯತೇ ॥ ೫೫ ॥

ಏಷ ದೇವಿ ಸತಾಂ ಧರ್ಮೋ ಗಂತವ್ಯೋ ಭೂತಿಕಾರಕಃ ।
ನೃಣಾಂ ಹಿತಾರ್ಥಾಯ ಸದಾ ಮಯಾ ಚೈವಮುದಾಹೃತಃ ॥ ೫೬ ॥

॥ ಉಮೋವಾಚ ॥

ಅಪರೇ ಸ್ವಲ್ಪವಿಜ್ಞಾನಾ ಧರ್ಮವಿದ್ವೇಷಿಣೋ ನರಾಃ ।
ಬ್ರಾಹ್ಮಣಾನ್ವೇದವಿದುಷೋ ನೇಚ್ಛಂತಿ ಪರಿಸರ್ಪಿತುಂ ॥ ೫೭ ॥

ವ್ರತವಂತೋ ನರಾಃ ಕೇಚಿಚ್ಛ್ರದ್ಧಾದಮಪರಾಯಣಾಃ ।
ಅವ್ರತಾ ಭ್ರಷ್ಟನಿಯಮಾಸ್ತಥಾನ್ಯೇ ರಾಕ್ಷಸೋಪಮಾಃ ॥ ೫೮ ॥

---

೫೫. ಒಂದುವೇಳೆ ಅವನು ಮತ್ತೆ ಮನುಷ್ಯನಾಗಿ ಹುಟ್ಟಿದರೆ, ಆಗ ಮೇಧಾವಿಯಾಗಿಯೂ ಅತಿಶಯವಾದ ಸ್ಮರಣಶಕ್ತಿಯುಳ್ಳವನಾಗಿಯೂ ಪ್ರಾಜ್ಞನಾಗಿಯೂ ಹುಟ್ಟುವನು.

೫೬. ಎಲೌ ದೇವಿ! ಇದೀಗ ಮಂಗಳಕಾರಕವಾದ ಸದ್ಧರ್ಮವು. ಇದನ್ನು ಎಲ್ಲರೂ ಅನುಸರಿಸಬೇಕು. ಮಾನವರಿಗೆ ಒಳ್ಳೆಯದಾಗಲೆಂದೇ ನಾನು ಈಗ ಇದನ್ನು ವಿವರಿಸಿದೆನು ಎಂದನು.

೫೭. ಆಗ ಉಮೆಯು ಮತ್ತೆ ಈರೀತಿ ಪ್ರಶ್ನಿಸಿದಳು. “ ಇನ್ನೂ ಕೆಲವುರೀತಿಯ ಜನರಿರುವರು. ಅವರಿಗೆ ವಿಜ್ಞಾನವು ಸ್ವಲ್ಪ ತಿಳಿದಿರುವುದು. ಆದರೆ ಅವರು ಧರ್ಮವನ್ನು ದ್ವೇಷಿಸುವರು. ವೇದಾರ್ಥವನ್ನು ತಿಳಿದಂತಹ ಬ್ರಾಹ್ಮಣರ ಬಳಿಗೆ ಹೋಗಲು ಅವರು ಇಷ್ಟಪಡಲಾರರು.

೫೮. ಕೆಲವುಬಗೆಯ ಜನರು ವ್ರತಾದಿಗಳಲ್ಲಿ ಆಸಕ್ತರಾಗಿ, ಶ್ರದ್ಧೆ, ಇಂದ್ರಿಯದಮನಗಳನ್ನು ಸಂರಕ್ಷಿಸಿಕೊಂಡಿರುವರು. ಮತ್ತೆ ಕೆಲವುಮಂದಿ ಇದಕ್ಕೆ ಪ್ರತಿಯಾಗಿ ರಾಕ್ಷಸರಂತೆ ವ್ರತಾದಿಗಳಿಲ್ಲದೆ ನಿಯಮಗಳನ್ನು ತ್ಯಜಿಸಿರುವರು.

ಯಜ್ವಾನಶ್ಚ ತಥೈವಾನ್ಯೇ ನಿರ್ಮೋಹಾಶ್ಚ ತಥಾ ಪರೇ ।
ಕೇನ ಕರ್ಮವಿಪಾಕೇನ ಭವಂತೀಹ ವದಸ್ವ ಮೇ ॥ ೫೯ ॥

॥ ಮಹೇಶ್ವರ ಉವಾಚ ॥

ಆಗಮಾಲ್ಲೋಕಧರ್ಮಾಣಾಂ ಮರ್ಯಾದಾಃ ಪೂರ್ವನಿರ್ಮಿತಾಃ ।
ಪ್ರಮಾಣೇನಾನುವರ್ತಂತೇ ದೃಶ್ಯಂತೇ ಹ ದೃಢವ್ರತಾಃ ॥ ೬೦ ॥

ಅಧರ್ಮಂ ಧರ್ಮಮಿತ್ಯಾಹುರ್ಯೇ ಚ ಮೋಹವಶಂ ಗತಾಃ ।
ಅವ್ರತಾ ನಷ್ಟಮರ್ಯಾದಾಸ್ತೇ ನರಾ ಬ್ರಹ್ಮರಾಕ್ಷಸಾಃ ॥ ೬೧ ॥

ಯೇ ವೈ ಕಾಲಕೃತೋದ್ಯೋಗಾತ್ಸಂಭವಂತೀಹ ಮಾನವಾಃ ।
ನಿರ್ಹೋಮಾ ನಿರ್ವಷಟ್ಕಾರಾಸ್ತೇ ಭವಂತಿ ನರಾಧಮಾಃ ॥ ೬೨ ॥

---

೫೯. ಕೆಲವರು ಯಾಗಶೀಲರಾಗಿರುವರು. ಇನ್ನಿತರರು ಮೋಹವರ್ಜಿತರಾಗಿರುವರು. ಇವರೆಲ್ಲರೂ ಯಾವ ಕರ್ಮಫಲದಿಂದ ಈರೀತಿಯಾಗಿರುವರು? ನನಗೆ ತಿಳಿಸು'' ಎಂದಳು.

೬೦. ಅದಕ್ಕೆ ಮಹೇಶ್ವರನು ಇಂತೆಂದು ಹೇಳಿದನು :—ವೇದಗಳು ಲೋಕದಲ್ಲಿರುವ ಧರ್ಮಗಳಿಗೆ ಪ್ರಮಾಣಗಳಾಗಿ ಮೊದಲಿಂದಲೂ ನಿರ್ಮಿಸಲ್ಪಟ್ಟಿವೆ. ಆ ವೇದಗಳ ಪ್ರಾಮಾಣ್ಯವನ್ನು ಯಾರು ಒಪ್ಪಿಕೊಳ್ಳುವರೋ ಅವರು ತಾವು ಹಿಡಿದ ವ್ರತವನ್ನು ದೃಢವಾಗಿ ನಡೆಸಿಕೊಂಡುಬರುವರು.

೬೧. ಯಾರು ಮೋಹಪರವಶರಾಗಿ ಧರ್ಮವಲ್ಲದುದನ್ನೇ ಧರ್ಮವೆಂದು ಹೇಳುವರೋ ಮತ್ತು ವ್ರತಭ್ರಷ್ಟರಾಗಿ ಎಲ್ಲೆ ಮೀರಿ ವರ್ತಿಸುವರೋ ಅವರೇ ಬ್ರಾಹ್ಮಣರೂಪದ ರಾಕ್ಷಸರು.

೬೨. ಯಾರು ಕಾಲವಶದಿಂದ ಹೆತ್ತಾರು ಉದ್ಯೋಗಗಳಿಗೆ ಸಿಕ್ಕಿ ಹೋಮಾದಿಗಳಿಲ್ಲದೆಯೂ, ವಷಟ್ಕಾರಗಳಿಲ್ಲದೆಯೂ ಇರುವರೋ ಅವರೇ ನರಾಧಮರೆನಿಸುವರು.

ಏಷ ದೇವಿ ಮಯಾ ಸರ್ವಸಂಶಯಚ್ಛೇದನಾಯ ತೇ ।
ಕುಶಲಾಕುಶಲೋ ನೃಣಾಂ ವ್ಯಾಖ್ಯಾತೋ ಧರ್ಮಸಾಗರಃ ॥ ೬೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಉಮಾಮಹೇಶ್ವರಸಂವಾದೇ ಧರ್ಮನಿರೂಪಣಂ ನಾಮ ಪಂಚವಿಂಶಾಧಿಕ-ದ್ವಿಶತತಮೋಽಧ್ಯಾಯಃ

---

೬೩. ಎಲೌ ದೇವಿ! ಇದೀಗ ನಿನಗೆ ಉಂಟಾದ ಸಕಲ ಸಂಶಯಗಳ ಪರಿಹಾರಕ್ಕಾಗಿ, ನಾನು ಮನುಷ್ಯರ ಒಳ್ಳೆಯ ಮತ್ತು ಕೆಟ್ಟಫಲಗಳಿಗೆ ಕಾರಣವಾದ, ಸಾಗರದಂತೆ ಅಪಾರವಾದ, ಧರ್ಮವನ್ನು ವಿವರವಾಗಿ ತಿಳಿಸಿದೆನು" ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಉಮಾಮಹೇಶ್ವರಸಂವಾದರೂಪವಾದ ಧರ್ಮನಿರೂಪಣವೆಂಬ ಇನ್ನೂರಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಷಡ್ತ್ರಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಶ್ರುತ್ವೈನಂ ಸಾ ಜಗನ್ಮಾತಾ ಭರ್ತುರ್ವಚನಮಾದಿತಃ ।
ಹೃಷ್ಟಾ ಬಭೂವ ಸುಪ್ರೀತಾ ವಿಸ್ಮಿತಾ ಚ ತದಾ ದ್ವಿಜಾಃ ॥ ೧ ॥

ಯೇ ತತ್ರಾಸನ್ಮುನಿವರಾಸ್ತ್ರಿಪುರಾರೇಃ ಸಮೀಪತಃ ।
ತೀರ್ಥಯಾತ್ರಾಪ್ರಸಂಗೇನ ಗತಾಸ್ತಸ್ಮಿನ್ಗಿರೌ ದ್ವಿಜಾಃ ॥ ೨ ॥

ತೇಽಪಿ ಸಂಪೂಜ್ಯ ತಂ ದೇವಂ ಶೂಲಪಾಣಿಂ ಪ್ರಣಮ್ಯ ಚ ।
ಪಪ್ರಚ್ಛುಃ ಸಂಶಯಂ ಚೈವ ಲೋಕಾನಾಂ ಹಿತಕಾಮ್ಯಯಾ ॥ ೩ ॥

ಇನ್ನೂರಇಪ್ಪತ್ತಾರನೆಯ ಅಧ್ಯಾಯವು

೧. ಎಲೈ ಬ್ರಾಹ್ಮಣೋತ್ತಮರಿರಾ! ಈರೀತಿಯಾಗಿ ಆ ಜಗನ್ಮಾತೆಯು ತನ್ನ ಪತಿಯು ಹೇಳಿದ ಮಾತುಗಳನ್ನು ಮೊದಲಿನಿಂದ ಕೊನೆಯವರೆಗೆ ಸಂಪೂರ್ಣವಾಗಿ ಕೇಳಿ ಬಹುವಾಗಿ ಹರ್ಷವನ್ನೂ ಪ್ರೀತಿಯನ್ನೂ ಆಶ್ಚರ್ಯವನ್ನೂ ಹೊಂದಿದಳು.

೨-೩. ಆಗ ಅಲ್ಲಿ ತೀರ್ಥಯಾತ್ರೆಯ ಸಲುವಾಗಿ ಆ ಹಿಮವತ್ಪರ್ವತಕ್ಕೆ ಬಂದಿದ್ದು ಶಿವನ ಬಳಿಯೇ ಇದ್ದಂತಹ ಮುನಿಗಳೆಲ್ಲರೂ ಆ ಶೂಲಪಾಣಿಯನ್ನು ಪೂಜಿಸಿ ಪ್ರಪಂಚಕ್ಕೆ ಕ್ಷೇಮವುಂಟಾಗಲೆಂಬ ಆಶಯದಿಂದ ತಮ್ಮ ಸಂಶಯವನ್ನು ಪರಿಹರಿಸಿಕೊಳ್ಳಲು ಈರೀತಿ ಪ್ರಶ್ನಿಸಿದರು.

॥ ಮುನಯ ಊಚುಃ ॥

ತ್ರಿಲೋಚನ ನಮಸ್ತೇಽಸ್ತು ದಕ್ಷಕ್ರತುವಿನಾಶನ ।
ಪ್ರಷ್ಟುಮಿಚ್ಛಾಮಸ್ತ್ವಾಂ ಜಗನ್ನಾಥ ಸಂಶಯಂ ಹೃದಿ ಸಂಸ್ಥಿತಂ ॥ ೪ ॥

ಸಂಸಾರೇಽಸ್ಮಿನ್ಮಹಾಘೋರೇ ಭೈರವೇ ಲೋಮಹರ್ಷಣೇ ।
ಭ್ರಮಂತಿ ಸುಚಿರಂ ಕಾಲಂ ಪುರುಷಾಶ್ಚಾಲ್ಪಮೇಧಸಃ ॥ ೫ ॥

ಯೇನೋಪಾಯೇನ ಮುಚ್ಯಂತೇ ಜನ್ಮಸಂಸಾರಬಂಧನಾತ್ ।
ಬ್ರೂಹಿ ತಚ್ಛ್ರೋತುಮಿಚ್ಛಾಮಃ ಪರಂ ಕೌತೂಹಲಂ ಹಿ ನಃ ॥ ೬ ॥

॥ ಮಹೇಶ್ವರ ಉವಾಚ ॥

ಕರ್ಮಪಾಶನಿಬದ್ಧಾನಾಂ ನರಾಣಾಂ ದುಃಖಭಾಗಿನಾಂ ।
ನಾನ್ಯೋಪಾಯಂ ಪ್ರಪಶ್ಯಾಮಿ ವಾಸುದೇವಾತ್ಪರಂ ದ್ವಿಜಾಃ ॥ ೭ ॥

---

೪. ದಕ್ಷಯಜ್ಞವನ್ನು ನಾಶಮಾಡಿದಂತಹ ಎಲೈ ತ್ರಿಲೋಚನನೇ! ನಿನ್ನನ್ನು ನಮಸ್ಕರಿಸುವೆವು. ಎಲೈ ಜಗತ್ಪ್ರಭುವೇ! ನಮ್ಮ ಹೃದಯದಲ್ಲಿ ನೆಲೆಸಿರುವಂತಹ ಸಂಶಯವನ್ನು ಹೋಗಲಾಡಿಸಲು ನಿನ್ನನ್ನು ಕೇಳ ಬೇಕೆಂದಿರುವೆವು.

೫. ಈ ಸಂಸಾರವೆಂಬುದು ಅತಿ ಘೋರವಾದುದು. ಬಹು ಭಯಂಕರವಾದುದು. ಅದನ್ನು ಭಾವಿಸಿಕೊಂಡರೂ ಮೈ ಜುಮ್ಮೆನ್ನುವುದು. ಇಂತಹ ಸಂಸಾರದಲ್ಲಿಯೇ ಬಹುಕಾಲ ಅವಿವೇಕಿಗಳಾದ ಪುರುಷರು ತೊಳಲುತ್ತಿರುವರು.

೬. ಇಂಥಹ ಪುರುಷರು ಜನ್ಮ ಮೊದಲಾಗಿರುವ ಸಂಸಾರವೆಂಬ ಬಂಧನದಿಂದ ತಮ್ಮನ್ನು ಯಾವ ಉಪಾಯದಿಂದ ಬಿಡಿಸಿಕೊಳ್ಳುವರು? ತಿಳಿಸು. ನಾವು ಅದನ್ನು ಕೇಳಬೇಕೆಂದಿರುವೆವು. ನಮಗೆ ಈ ವಿಷಯದಲ್ಲಿ ಬಹಳ ಕುತೂಹಲವುಂಟಾಗಿರುವುದು.

೭. ಎಂದು ಪ್ರಶ್ನಿಸಲು ಆ ಮಹೇಶ್ವರನು ಇಂತೆಂದನು. "ಎಲೈ ಬ್ರಾಹ್ಮಣಶ್ರೇಷ್ಠರಿರಾ! ಕರ್ಮಪಾಶದ ಕಟ್ಟಿಗೆ ಸಿಲುಕಿ, ದುಃಖವನ್ನು ಅನುಭವಿಸುತ್ತಿರುವಂತಹ ಮಾನವರಿಗೆ ವಾಸುದೇವನಿಗಿಂತಲೂ ಉತ್ತಮವಾದ ಬೇರೆ ಉಪಾಯವಾವುದನ್ನೂ ನಾನು ಕಾಣೆನು.

ಯೇ ಪೂಜಯಂತಿ ತಂ ದೇವಂ ಶಂಖಚಕ್ರಗದಾಧರಂ ।
ವಾಙ್ಮನಃಕರ್ಮಭಿಃ ಸಮ್ಯಕ್ತೇ ಯಾಂತಿ ಪರಮಾಂ ಗತಿಂ ॥ ೮ ॥

ಕಿಂ ತೇಷಾಂ ಜೀವಿತೇನೇಹ ಪಶುವಚ್ಚೇಷ್ಟಿತೇನ ಚ ।
ಯೇಷಾಂ ನ ಪ್ರವಣಂ ಚಿತ್ತಂ ವಾಸುದೇವೇ ಜಗನ್ಮಯೇ ॥ ೯ ॥

॥ ಋಷಯ ಊಚುಃ ॥
ಪಿನಾಕಿನ್ಭಗನೇತ್ರಘ್ನ ಸರ್ವಲೋಕನಮಸ್ಕೃತ ।
ಮಾಹಾತ್ಮ್ಯಂ ವಾಸುದೇವಸ್ಯ ಶ್ರೋತುಮಿಚ್ಛಾಮ ಶಂಕರ ॥ ೧೦ ॥

॥ ಮಹೇಶ್ವರ ಉವಾಚ ॥
ಪಿತಾಮಹಾದಪಿ ವರಃ ಶಾಶ್ವತಃ ಪುರುಷೋ ಹರಿಃ ।
ಕೃಷ್ಣೋ ಜಾಂಬೂನದಾಭಾಸೋ ವ್ಯಭ್ರೇ ಸೂರ್ಯ ಇವೋದಿತಃ ॥ ೧೧ ॥

---

೮. ಶಂಖ ಚಕ್ರ ಗದಾಧರನಾದ ಆ ಪರಮಪುರುಷನನ್ನು ಯಾರು ಮನಸ್ಸು, ವಾಕ್ಕು, ಕರ್ಮಗಳಿಂದ ಚೆನ್ನಾಗಿ ಆರಾಧಿಸುವರೋ ಅವರು ಉತ್ತಮವಾದ ಪದವಿಯನ್ನು ಪಡೆಯುವರು.

೯. ಆ ಜಗನ್ಮಯನಾದ ವಾಸುದೇವನಲ್ಲಿ ಯಾರ ಮನಸ್ಸು ಏಕಾಗ್ರತೆಯಿಂದ ನೆಲಸುವುದಿಲ್ಲವೋ ಅಂಥವರು ಬದುಕನ್ನು ಸಾಗಿಸಿದರೆ ಏನು? ಪಶುಗಳಂತೆ ವರ್ತಿಸಿದರೆ ತಾನೆ ಏನು?" ಎನ್ನಲು–

೧೦. ಆ ಋಷಿಗಳು ಭಗನ ನೇತ್ರವನ್ನು ನಾಶಪಡಿಸಿದವನೂ ಸರ್ವಲೋಕಗಳಿಂದಲೂ ನಮಸ್ಕರಿಸಲ್ಪಡುವವನೂ ಆದ ಆ ಪಿನಾಕಿಯನ್ನು ಕುರಿತು ಮತ್ತೆ "ಹೇ ಶಂಕರ! ಆ ವಾಸುದೇವನ ಮಾಹಾತ್ಮ್ಯವನ್ನೇ ಕೇಳಬೇಕೆಂದು ಆಶಿಸುತ್ತೇವೆ" ಎಂದರು.

೧೧. ಆಗ ಶಂಕರನು ಹೇಳತೊಡಗಿದನು :—"ಎಲೈ ಮುನಿಗಳಿರಾ! ಆ ಶ್ರೀಹರಿಯು ಪಿತಾಮಹನಿಗಿಂತಲೂ ಮೇಲಾದವನು. ತ್ರಿಕಾಲಾಬಾಧಿತನು. (ಆದ್ಯಂತಶೂನ್ಯನು) ಪುರುಷಪದವಾಚ್ಯನು. ಚಿನ್ನದಂತೆ ಹೊಳೆವ ತೇಜಸ್ಸುಳ್ಳ ಕೃಷ್ಣನು ಮೋಡವಿಲ್ಲದ ಆಕಾಶದಲ್ಲಿರುವ ಸೂರ್ಯನಂತೆ ಬೆಳಗುವನು.

ದಶಬಾಹುರ್ಮಹಾತೇಜಾ ದೇವತಾರಿನಿಷೂದನಃ ।
ಶ್ರೀವತ್ಸಾಂಕೋ ಹೃಷೀಕೇಶಃ ಸರ್ವದೈವತಯೂಥಪಃ ॥ ೧೨ ॥

ಬ್ರಹ್ಮಾ ತಸ್ಯೋದರಭವಸ್ತಸ್ಯಾಹಂ ಚ ಶಿರೋಭವಃ ।
ಶಿರೋರುಹೇಭ್ಯೋ ಜ್ಯೋತೀಂಷಿ ರೋಮಭ್ಯಶ್ಚ ಸುರಾಸುರಾಃ ॥ ೧೩ ॥

ಋಷಯೋ ದೇಹಸಂಭೂತಾಸ್ತಸ್ಯ ಲೋಕಾಶ್ಚ ಶಾಶ್ವತಾಃ ।
ಪಿತಾಮಹಗೃಹಂ ಸಾಕ್ಷಾತ್ಸರ್ವದೇವಗೃಹಂ ಚ ಸಃ ॥ ೧೪ ॥

ಸೋಽಸ್ಯಾಃ ಪೃಥಿವ್ಯಾಃ ಕೃತ್ಸ್ನಾಯಾಃ ಸ್ರಷ್ಟಾ ತ್ರಿಭುವನೇಶ್ವರಃ ।
ಸಂಹರ್ತಾ ಚೈವ ಭೂತಾನಾಂ ಸ್ಥಾವರಸ್ಯ ಚರಸ್ಯ ಚ ॥ ೧೫ ॥

ಸ ಹಿ ದೇವದೇವಃ ಸಾಕ್ಷಾದ್ದೇವನಾಥಃ ಪರಂತಪಃ ।
ಸರ್ವಜ್ಞಃ ಸರ್ವಸಂಸ್ರಷ್ಟಾ ಸರ್ವಗಃ ಸರ್ವತೋಮುಖಃ ॥ ೧೬ ॥

೧೨-೧೩. ಆತನು ಹತ್ತು ಬಾಹುಗಳುಳ್ಳವನು. ಮಿಗಿಲಾದ ತೇಜಸ್ವಿಯು ಮತ್ತು ದೇವಶತ್ರುಗಳಾದ ದೈತ್ಯ ದಾನವರನ್ನು ನಿಗ್ರಹಿಸಿದವನು. ಶ್ರೀವತ್ಸವೆಂಬ ಮಚ್ಚೆಯುಳ್ಳವನು. ಆ ಹೃಷೀಕೇಶನು ದೇವತೆಗಳೆಲ್ಲರಿಗೂ ಮುಂದಾಳಾಗಿರುವನು. ಆತನ ಹೊಟ್ಟೆಯಲ್ಲಿ ಬ್ರಹ್ಮನು ಹುಟ್ಟಿರುವನು. ತಲೆಯಲ್ಲಿ ನಾನು ಹುಟ್ಟಿರುವೆನು. ಮತ್ತು ತಲೆಗೂದಲುಗಳಿಂದ ನಕ್ಷತ್ರಗಳೂ, ರೋಮಗಳಿಂದ ದೇವತೆಗಳೂ, ದೈತ್ಯದಾನವಾದಿಗಳೂ ಹುಟ್ಟಿರುವರು.

೧೪. ಋಷಿಗಳು ಆತನ ದೇಹದಿಂದ ಹುಟ್ಟಿರುವರು. ಮತ್ತು ಶಾಶ್ವತವಾದ ಲೋಕಗಳೂ ಆತನ ದೇಹದಿಂದಲೇ ಹುಟ್ಟಿರುವುವು. ಆತನು ಸಾಕ್ಷಾತ್ ಪಿತಾಮಹನ ನಿವಾಸವಾಗಿರುವನಲ್ಲದೆ ಎಲ್ಲ ದೇವತೆಗಳಿಗೂ ನೆಲೆಯೆನಿಸಿರುವನು.

೧೫. ಆತನು ಈ ಸಕಲ ಭೂಮಂಡಲಕ್ಕೂ ಸ್ಥಾವರ ಜಂಗಮಾತ್ಮಕರಾದ ಸಕಲ ಪ್ರಾಣಿಗಳಿಗೂ ಸೃಷ್ಟಿಕರ್ತನಾಗಿಯೂ, ಸಂಹಾರಕರ್ತನಾಗಿಯೂ ಇರುವನು.

೧೬. ಆತನು ದೇವತೆಗಳಿಗೆಲ್ಲಾ ದೇವತೆಯೆನಿಸಿರುವನು. ದೇವತೆಗಳಿಗೂ ಪ್ರಭುವೆನಿಸಿರುವನು. ಮತ್ತು ಆ ಪರಂತಪನು (ಶತ್ರುಸಂಹಾರಿಯು) ಸರ್ವಜ್ಞನು, ಸಕಲವನ್ನೂ ಸೃಷ್ಟಿಸಿದವನು, ಸರ್ವತ್ರ ಸಂಚರಿಸುವವನು ಮತ್ತು (ಎಲ್ಲಕಡೆ) ಮುಖಗಳುಳ್ಳವನು.

ನ ತಸ್ಮಾತ್ಪರಮಂ ಭೂತಂ ತ್ರಿಷು ಲೋಕೇಷು ಕಿಂಚನ ।
ಸನಾತನೋ ಮಹಾಭಾಗೋ ಗೋವಿಂದ ಇತಿ ವಿಶ್ರುತಃ ॥ ೧೭ ॥

ಸಸರ್ವಾನ್ಪಾರ್ಥಿವಾನ್ಸಂಖ್ಯೇ ಘಾತಯಿಷ್ಯತಿ ಮಾನದಃ ।
ಸುರಕಾರ್ಯಾರ್ಥಮುತ್ಪನ್ನೋ ಮಾನುಷ್ಯಂ ವಪುರಾಸ್ಥಿತಃ ॥ ೧೮ ॥

ನ ಹಿ ದೇವಗಣಾಃ ಶಕ್ತಾಸ್ತ್ರಿವಿಕ್ರಮವಿನಾಕೃತಾಃ ।
ಭುವನೇ ದೇವಕಾರ್ಯಾಣಿ ಕರ್ತುಂ ನಾಯಕವರ್ಜಿತಃ ॥ ೧೯ ॥

ನಾಯಕಃ ಸರ್ವಭೂತಾನಾಂ ಸರ್ವಭೂತನಮಸ್ಕೃತಃ ।
ಏತಸ್ಯ ದೇವನಾಥಸ್ಯ ಕಾರ್ಯಸ್ಯ ಚ ಪರಸ್ಯ ಚ ॥ ೨೦ ॥

ಬ್ರಹ್ಮಭೂತಸ್ಯ ಸತತಂ ಬ್ರಹ್ಮರ್ಷಿಶರಣಸ್ಯ ಚ ।
ಬ್ರಹ್ಮಾ ವಸತಿ ನಾಭಿಸ್ಥಃ ಶರೀರೇಽಹಂ ಚ ಸಂಸ್ಥಿತಃ ॥ ೨೧ ॥

---

೧೭. ಈ ಮೂರು ಲೋಕಗಳಲ್ಲಿಯೂ ಆತನಿಗಿಂತ ಮಿಗಿಲೆನಿಸಿದ ವಸ್ತುವು ಮತ್ತೆ ಬೇರೊಂದಿಲ್ಲ. ಆ ಸನಾತನನಾದ ಮಹಾತ್ಮನು ಗೋವಿಂದನೆಂದು ಪ್ರಖ್ಯಾತನಾಗಿರುವನು.

೧೮. ದುರಹಂಕಾರಿಗಳ ಗರ್ವವನ್ನು ಮುರಿಯುವ ಆ ದೇವನು, ದೇವತೆಗಳ ಕಾರ್ಯವನ್ನು ನೆರವೇರಿಸುವ ಸಲುವಾಗಿ ಮನುಷ್ಯರಂತೆ ಶರೀರವನ್ನು ತಾಳಿ ಎಲ್ಲ ದುಷ್ಟರಾಜರನ್ನೂ ಯುದ್ಧದಲ್ಲಿ ಕೊಲ್ಲುವನು.

೧೯. ದೇವತೆಗಳೆಲ್ಲರೂ ತಮ್ಮ ನಾಯಕನಾದ ಆ ತ್ರಿವಿಕ್ರಮನಿಲ್ಲದಿದ್ದರೆ ಈ ಪ್ರಪಂಚದಲ್ಲಿ ತಮ್ಮ ಕೆಲಸವಾಗಿದ್ದರೂ ಅದನ್ನು ನೆರವೇರಿಸಲು ಶಕ್ತಿಯಿಲ್ಲದವರಾಗಿರುವರು.

೨೦-೨೧. ಈತನು ಎಲ್ಲ ಪ್ರಾಣಿಗಳಿಗೂ ನಾಯಕ (ಮುಂದಾಳು) ನಾಗಿರುವನು. ಎಲ್ಲ ಭೂತಗಳೂ ಈತನನ್ನು ನಮಸ್ಕರಿಸುವುವು. ದೇವತೆಗಳಿಗೆಲ್ಲಾ ಒಡೆಯನೂ, ಸಕಲ ಕಾರ್ಯಸ್ವರೂಪನೂ, ಪರನೆನಿಸಿದವನೂ, ಬ್ರಹ್ಮರೂಪನೂ, ಬ್ರಹ್ಮರ್ಷಿಗಳಿಗೆ ಶರಣ (ಸಂರಕ್ಷಕ) ನೆನಿಸಿದವನೂ ಆದ ಈತನ ನಾಭಿಯಲ್ಲಿ ಬ್ರಹ್ಮನು ನೆಲೆಸಿರುವನು. ನಾನು ಶರೀರದಲ್ಲಿ ನೆಲೆಸಿರುವೆನು.

ಸರ್ವಾಃ ಸುಖಂ ಸಂಸ್ಥಿತಾಶ್ಚ ಶರೀರೇ ತಸ್ಯ ದೇವತಾಃ ।
ಸ ದೇವಃ ಪುಂಡರೀಕಾಕ್ಷಃ ಶ್ರೀಗರ್ಭಃ ಶ್ರೀಸಹೋಷಿತಃ ॥ ೨೨ ॥

ಶಾರ್ಙ್ಗಚಕ್ರಾಯುಧಃ ಖಡ್ಗೀ ಸರ್ವನಾಗರಿಪುಧ್ವಜಃ ।
ಉತ್ತಮೇನ ಸುಶೀಲೇನ ಶೌಚೇನ ಚ ದಮೇನ ಚ ॥ ೨೩ ॥

ಪರಾಕ್ರಮೇಣ ವೀರ್ಯೇಣ ವಪುಷಾ ದರ್ಶನೇನ ಚ ।
ಆರೋಹಣಪ್ರಮಾಣೇನ ವೀರ್ಯೇಣಾರ್ಜವಸಂಪದಾ ॥ ೨೪ ॥

ಆನೃಶಂಸ್ಯೇನ ರೂಪೇಣ ಬಲೇನ ಚ ಸಮನ್ವಿತಃ ।
ಅಸ್ತ್ರೈಃ ಸಮುದಿತಃ ಸರ್ವೈರ್ದಿವ್ಯೈರದ್ಭುತದರ್ಶನೈಃ ॥ ೨೫ ॥

ಯೋಗಮಾಯಾಸಹಸ್ರಾಕ್ಷೋ ವಿರೂಪಾಕ್ಷೋ ಮಹಾಮನಾಃ ।
ವಾಚಾ ಮಿತ್ರಜನಶ್ಲಾಘೀ ಜ್ಞಾತಿಬಂಧುಜನಪ್ರಿಯಃ ॥ ೨೬ ॥

---

೨೨. ಮತ್ತು ಎಲ್ಲ ದೇವತೆಗಳೂ ಆತನ ದೇಹದಲ್ಲಿ ಸುಖವಾಗಿ ನೆಲೆಸಿರುವರು. ಮತ್ತು ಆತನ ಕಣ್ಣುಗಳು ಕಮಲವನ್ನು ಹೋಲುವುವು. ಶ್ರೀಯು ಆತನ ಎದೆಯಲ್ಲಿ ನೆಲೆಸಿರುವಳು. ಮತ್ತು ಆತನು ಯಾವಾಗಲೂ ಶ್ರೀಯ ಜೊತೆಯಲ್ಲಿಯೇ ಇರುವನು.

೨೩-೨೫. ಆತನು ಶಾರ್ಙ್ಗವೆಂಬ ಧನುಸ್ಸು, (ಸುದರ್ಶನ) ಚಕ್ರ, (ನಂದಕವೆಂಬ) ಖಡ್ಗಗಳನ್ನು ಧರಿಸಿರುವನು. ಆತನಿಗೆ ಸರ್ಪವೈರಿಯಾದ ಗರುಡನು ಧ್ವಜನಾಗಿರುವನು. ಮತ್ತು ಉತ್ತಮವಾದ ನಡತೆ, ಶುಚಿತ್ವ, ಇಂದ್ರಿಯನಿಗ್ರಹ, ಪರಾಕ್ರಮ, ಶೌರ್ಯ, ದೇಹ, (ಸೌಮ್ಯವಾದ) ನೋಟ, ಎತ್ತರಕ್ಕೆ ತಕ್ಕ ಬಲ, ಅಕೃತ್ರಿಮವರ್ತನೆ, ನೃಶಂಸತೆ (ನೀಚತನ) ಯಿಲ್ಲದಿರುವಿಕೆ, ರೂಪ, ಬಲ ಇವುಗಳು ಆತನಿಗೆ ಅಂದವಾಗಿ ಒಪ್ಪುತ್ತಿರುವುವು. ಆತನನ್ನು ಅದ್ಭುತವಾದ ಆಕಾರವುಳ್ಳವಾಗಿ ಸಕಲವಾದ ಅಸ್ತ್ರಗಳು ಓಲೈಸುತ್ತಿರುವುವು.

೨೬. ಆತನೇ ತನ್ನ ಮಾಯಾಬಲದಿಂದ ಸಹಸ್ರಾಕ್ಷ (ಇಂದ್ರ) ನಾಗಿಯೂ, ವಿರೂಪಾಕ್ಷ (ಶಿವ) ನಾಗಿಯೂ ಇರುವನು. ಮತ್ತು ಆ ಉದಾರ ಹೃದಯನು ಪ್ರಿಯವಾಕ್ಯಗಳನ್ನಾಡುತ್ತಾ ಸ್ನೇಹಿತರನ್ನು ಶ್ಲಾಘಿಸುವನು. ಜ್ಞಾತಿಗಳಿಗೂ ಬಂಧುಗಳಿಗೂ ಬೇಕಾದವನು.

ಕ್ಷಮಾವಾಂಶ್ಚಾನಹಂವಾದೀ ಸ ದೇವೋ ಬ್ರಹ್ಮದಾಯಕಃ ।
ಭಯಹರ್ತಾ ಭಯಾರ್ತಾನಾಂ ಮಿತ್ರಾನಂದವಿವರ್ಧನಃ ॥ ೨೭ ॥

ಶರಣ್ಯಃ ಸರ್ವಭೂತಾನಾಂ ದೀನಾನಾಂ ಪಾಲನೇ ರತಃ ।
ಶ್ರುತವಾನಥ ಸಂಪನ್ನಃ ಸರ್ವಭೂತನಮಸ್ಕೃತಃ ॥ ೨೮ ॥

ಸಮಾಶ್ರಿತಾನಾಮುಪಕೃಚ್ಛತ್ರೂಣಾಂ ಭಯಕೃತ್ತಥಾ ।
ನೀತಿಜ್ಞೋ ನೀತಿಸಂಪನ್ನೋ ಬ್ರಹ್ಮವಾದೀ ಜಿತೇಂದ್ರಿಯಃ ॥ ೨೯ ॥

ಭವಾರ್ಥಮೇವ ದೇವಾನಾಂ ಬುದ್ಧ್ಯಾ ಪರಮಯಾ ಯುತಃ ।
ಪ್ರಾಜಾಪತ್ಯೇ ಶುಭೇ ಮಾರ್ಗೇ ಮಾನವೇ ಧರ್ಮಸಂಸ್ಕೃತೇ ॥ ೩೦ ॥

---

೨೭. ಆತನು ಕ್ಷಮಾಶೀಲನು. ಅಹಂಕಾರವು ಆತನಲ್ಲಿ ಇಲ್ಲವೇ ಇಲ್ಲ. ಆ ದೇವನೇ ವೇದಗಳನ್ನು ಇತ್ತಿರುವನು. ಮತ್ತು ಭಯದಿಂದ ತಲ್ಲಣಿಸುವವರ ಭಯವನ್ನು ಹೋಗಲಾಡಿಸುತ್ತಲೂ, ಮಿತ್ರರಾದವರಿಗೆ ಆನಂದವನ್ನು ಹೆಚ್ಚಿಸುತ್ತಲೂ ಇರುವನು.

೨೮. ಆತನನ್ನು ಎಲ್ಲ ಪ್ರಾಣಿದಳೂ ಮರೆಹೋಗುವುವು. ಆತನು ದೀನರ ಪರಿಪಾಲನೆಯಲ್ಲಿಯೇ ಆಸಕ್ತನಾಗಿಯೂ, ಶಾಸ್ತ್ರಾರ್ಥಗಳನ್ನು ಚೆನ್ನಾಗಿ ಬಲ್ಲವನಾಗಿಯೂ, ಸಂಪತ್ತುಳ್ಳವನಾಗಿಯೂ, ಸರ್ವಭೂತನಮಸ್ಕೃತನಾಗಿಯೂ ಇರುವನು.

೨೯. ಮತ್ತು ತನ್ನನ್ನು ಆಶ್ರಯಿಸಿದವರಿಗೆ ಉಪಕಾರಮಾಡುತ್ತಲೂ ಶತ್ರುಗಳಿಗೆ ಭಯವನ್ನುಂಟುಮಾಡುತ್ತಲೂ ಇರುವನು. ಮತ್ತು ಆತನು ನೀತಿಯನ್ನು ಚೆನ್ನಾಗಿ ತಿಳಿದವನಾಗಿಯೂ, ಆ ನೀತಿಯನ್ನು ಸರಿಯಾಗಿ ಉಪಯೋಗಿಸುವವನಾಗಿಯೂ, ಬ್ರಹ್ಮವಾದಿಯಾಗಿಯೂ, ಜಿತೇಂದ್ರಿಯನಾಗಿಯೂ ಇರುವನು

೩೦-೩೧. ಆ ಪರಮಪುರುಷನು ದೇವತೆಗಳ ಕಾರ್ಯದ ಸಲುವಾಗಿ ಬಹಳ ಮುಂದಾಲೋಚನೆಯಿಂದ ಮನುಷ್ಯಲೋಕದಲ್ಲಿ ಧರ್ಮಸಮ್ಮತವಾದ ಶುಭಕರವಾದ ಪ್ರಾಜಾಪತ್ಯಮಾರ್ಗದಲ್ಲಿ (ಧರ್ಮಸಂಮತವಾದ ಸ್ತ್ರೀಪುರುಷರ

ಸಮುತ್ಪತ್ಸ್ಯತಿ ಗೋವಿಂದೋ ಮನೋರ್ವಂಶೇ ಮಹಾತ್ಮನಃ ।
ಅಂಶೋ ನಾಮ ಮನೋಃ ಪುತ್ರೋ ಹ್ಯಂತರ್ಧಾಮಾ ತತಃ ಪರಂ ॥ ೩೧ ॥

ಅಂತರ್ಧಾಮ್ನೋ ಹವಿರ್ಧಾಮಾ ಪ್ರಜಾಪತಿರನಿಂದಿತಃ ।
ಪ್ರಾಚೀನಬರ್ಹಿರ್ಭವಿತಾ ಹವಿರ್ಧಾಮ್ನಃ ಸುತೋ ದ್ವಿಜಾಃ ॥ ೩೨ ॥

ತಸ್ಯ ಪ್ರಚೇತಃಪ್ರಮುಖಾ ಭವಿಷ್ಯಂತಿ ದಶಾತ್ಮಜಾಃ ।
ಪ್ರಾಚೇತಸಸ್ತಥಾ ದಕ್ಷೋ ಭವಿತೇಹ ಪ್ರಜಾಪತಿಃ ॥ ೩೩ ॥

ದಾಕ್ಷಾಯಣ್ಯಸ್ತಥಾದಿತ್ಯೋ ಮನುರಾದಿತ್ಯತಸ್ತತಃ ।
ಮನೋಶ್ಚ ವಂಶಜ ಇಲಾ ಸುದ್ಯುಮ್ನಶ್ಚ ಭವಿಷ್ಯತಿ ॥ ೩೪ ॥

ಸಮಾಗಮವನ್ನೇ ತನ್ನ ಮಾನವಶರೀರಕ್ಕೆ ನಿಮಿತ್ತ ಮಾಡಿಕೊಂಡು) ಮಹಾತ್ಮನಾದ ಮನುವಿನ ವಂಶದಲ್ಲಿ ಅವತರಿಸುವನು. ಮನುವಿಗೆ ಅಂಶನೆಂಬ ಪುತ್ರನು ಉದಯಿಸುವನು. ಆ ಅಂಶನಿಗೆ-

೩೨. ಅಂತರ್ಧಾಮನೂ, ಅವನಿಗೆ ಹವಿರ್ಧಾಮನೆಂಬುವನೂ ಜನಿಸುವರು. ಈ ಹವಿರ್ಧಾಮನೇ ನಿಷ್ಕಲಂಕನಾದ ಪ್ರಜಾಪ್ರತಿಯೆಂದು ತಿಳಿಯಿರಿ. ಎಲೈ ದ್ವಿಜರಿರಾ! ಈ ಹವಿರ್ಧಾಮನಿಗೆ ಪ್ರಾಚೀನ ಬರ್ಹಿಯು ಮಗನಾಗುವನು.

೩೩. ಅವನಿಗೆ ಪ್ರಚೇತಸ್ಸೇ ಮೊದಲಾದ ಹತ್ತುಮಂದಿ ಮಕ್ಕಳಾಗುವರು. ಇವರಿಗೆ ಪ್ರಾಚೇತಸರೆಂದೇ ಹೆಸರಾಗುವುದು. ಇವರಲ್ಲದೆ ಆ ಪ್ರಾಚೀನ ಬರ್ಹಿಗೆ ದಕ್ಷಪ್ರಜಾಪತಿಯು ಮಗನಾಗಿ ಹುಟ್ಟುವನು.

೩೪. ಅವನಿಗೆ ಆದಿತ್ಯನೆಂಬುವನೂ, ಆದಿತ್ಯನಿಗೆ ಮನುವೆಂಬುವನೂ ಜನಿಸುವರು. ಮನುವಿಗೆ ಸುದ್ಯುಮ್ನನೆಂಬ ಬೇರೊಂದು ಹೆಸರುಳ್ಳ ಇಲನೆಂಬುವನು ಮಗನಾಗುವನು. ಇಲನು ಕಾರಣಾಂತರದಿಂದ ಇಲಾ ಎಂಬ ಹೆಸರಿನ ಸ್ತ್ರೀಯಾಗಿ ಬುಧನ ಸಮಾಗಮದಿಂದ ಪುರೂರವಸ್ಸೆಂಬ ಮಗನನ್ನು ಪಡೆಯುವನು.

ಬುಧಾತ್ಪುರೂರವಾಶ್ಚಾಪಿ ತಸ್ಮಾದಾಯುರ್ಭವಿಷ್ಯತಿ ।
ನಹುಷೋ ಭವಿತಾ ತಸ್ಮಾದ್ಯಯಾತಿಸ್ತಸ್ಯ ಚಾತ್ಮಜಃ ॥ ೩೫ ॥

ಯದುಸ್ತಸ್ಮಾನ್ಮಹಾಸತ್ತ್ವಃ ಕ್ರೋಷ್ಟಾ ತಸ್ಮಾದ್ಭವಿಷ್ಯತಿ ।
ಕ್ರೋಷ್ಟುಶ್ಚೈವ ಮಹಾನ್ಪುತ್ರೋ ವೃಜಿನೀವಾನ್ಭವಿಷ್ಯತಿ ॥ ೩೬ ॥

ವೃಜಿನೀವತಶ್ಚ ಭವಿತಾ ಉಷಙ್ಗುರಪರಾಜಿತಃ ।
ಉಷಂಗೋರ್ಭವಿತಾ ಪುತ್ರಃ ಶೂರಶ್ಚಿತ್ರರಥಸ್ತಥಾ ॥ ೩೭ ॥

ತಸ್ಯ ತ್ವವರಜಃ ಪುತ್ರಃ ಶೂರೋ ನಾಮ ಭವಿಷ್ಯತಿ ।
ತೇಷಾಂ ವಿಖ್ಯಾತವೀರ್ಯಾಣಾಂ ಚಾರಿತ್ರಗುಣಶಾಲಿನಾಂ ॥ ೩೮ ॥

ಯಜ್ವಿನಾಂ ಚ ವಿಶುದ್ಧಾನಾಂ ವಂಶೇ ಬ್ರಾಹ್ಮಣಸತ್ತಮಾಃ ।
ಸ ಶೂರಃ ಕ್ಷತ್ರಿಯಶ್ರೇಷ್ಠೋ ಮಹಾವೀರ್ಯೋ ಮಹಾಯಶಾಃ । ೩೯ ॥

---

೩೫. ಬುಧನಿಂದ ಪುರೂರವನೂ ಅವನಿಂದ ಆಯುವೆಂಬುವನೂ, ಅವನಿ ನಹುಷನೂ, ನಹುಷನಿಗೆ ಯಯಾತಿಯೂ ಮಗನಾಗಿ ಹುಟ್ಟುವರು. ಅವನಿಗೆ ಯದುವು ಮಗನಾಗುವನು.

೩೬. ಆ ಯದುವಿಗೆ ಮಹಾಸತ್ತ್ವನೂ, ಅವನಿಗೆ ಕ್ರೋಷ್ಟುವೆಂಬುವನೂ, ಆತನಿಗೆ ವೃಜಿನೀವಾ ಎಂಬುವನೂ ಹುಟ್ಟುವರು.

೩೭. ಆ ವೃಜಿನೀವಂತನಿಗೆ ಮಹಾಶೂರನಾದ ಉಷಂಗುವೆಂಬುವನೂ, ಅವನಿಗೆ ಚಿತ್ರರಥನೆಂಬ ಶೂರನೂ ಮಗನಾಗುವರು.

೩೮-೩೯. ಆ ಚಿತ್ರರಥನಿಗೆ ಕೊನೆಯ ಮಗನಾಗಿ ಶೂರನೆಂಬುವನು ಹುಟ್ಟುವನು. ಈರೀತಿ ಪ್ರಖ್ಯಾತವಾದ ಪರಾಕ್ರಮವುಳ್ಳವರೂ ಒಳ್ಳೆಯ ಶೀಲದಿಂದಲೂ ಒಳ್ಳೆಯ ಗುಣಗಳಿಂದಲೂ ಮೆರೆಯುತ್ತಿರುವವರೂ, ಯಾಗಶೀಲರೂ, ಪರಿಶುದ್ಧರೂ ಆದ ಆ ನರಪತಿಗಳ ವಂಶದಲ್ಲಿ ಹುಟ್ಟುವಂಥಹ ಕ್ಷತ್ರಿಯಶ್ರೇಷ್ಠನೂ, ಮಹಾಬಲಾಢ್ಯನೂ, ಪ್ರಖ್ಯಾತ ಕೀರ್ತಿಯೂ ಆದ ಆ ಶೂರನು

ಸ್ವವಂಶವಿಸ್ತಾರಕರಂ ಜನಯಿಷ್ಯತಿ ಮಾನವಂ ।
ವಸುದೇವಮಿತಿ ಖ್ಯಾತಂ ಪುತ್ರಮಾನಕದುಂದುಭಿಂ ॥ ೪೦ ॥

ತಸ್ಯ ಪುತ್ರಶ್ಚತುರ್ಬಾಹುರ್ವಾಸುದೇವೋ ಭವಿಷ್ಯತಿ ।
ದಾತಾ ಬ್ರಾಹ್ಮಣಸತ್ಕರ್ತಾ ಬ್ರಹ್ಮಭೂತೋ ದ್ವಿಜಪ್ರಿಯಃ ॥ ೪೧ ॥

ರಾಜ್ಞೋ ಬದ್ಧಾನ್ಸ ಸರ್ವಾನ್ವೈ ಮೋಕ್ಷಯಿಷ್ಯತಿ ಯಾದವಃ ।
ಜರಾಸಂಧಂ ತು ರಾಜಾನಂ ನಿರ್ಜಿತ್ಯ ಗಿರಿಗಹ್ವರೇ ॥ ೪೨ ॥

ಸರ್ವಪಾರ್ಥಿವರತ್ನಾಢ್ಯೋ ಭವಿಷ್ಯತಿ ಸ ವೀರ್ಯವಾನ್ ।
ಪೃಥಿವ್ಯಾಮಪ್ರತಿಹತೋ ವೀರ್ಯೇಣಾಪಿ ಭವಿಷ್ಯತಿ ॥ ೪೩ ॥

ವಿಕ್ರಮೇಣ ಚ ಸಂಪನ್ನಃ ಸರ್ವಪಾರ್ಥಿವಪಾರ್ಥಿವಃ ।
ಶೂರಃ ಸಂಹನನೋ ಭೂತೋ ದ್ವಾರಕಾಯಾಂ ವಸನ್ಪ್ರಭುಃ ॥ ೪೪ ॥

---

೪೦. ತನ್ನ ವಂಶವನ್ನು ವಿಸ್ತಾರವಾಗಿ ಬೆಳೆಸುವಂತಹ, ಶತ್ರುದರ್ಪವನ್ನು ದಮನಮಾಡುವ ಆನಕದುಂದುಭಿಯೆಂಬ ಮಗನನ್ನು ಪಡೆಯುವನು. ಈ ಆನಕದುಂದುಭಿಯೇ ಕಾಲಕ್ರಮದಲ್ಲಿ ವಸುದೇವನೆಂದು ಪ್ರಸಿದ್ಧನಾಗುವನು.

೪೧-೪೨. ಆತನಿಗೆ ಸಾಕ್ಷಾತ್ಪರಮಪುರುಷನೇ ಮಗನಾಗಿ ತನ್ನ ದಿವ್ಯಸ್ವರೂಪದಿಂದ ನಾಲ್ಕು ಕೈಗಳನ್ನು ತಾಳಿ ವಾಸುದೇವನೆಂಬ ಹೆಸರಿನಿಂದ ಅವತರಿಸುವನು. ಆತನು ದಾನಶೀಲನೂ, ಬ್ರಾಹ್ಮಣಸತ್ಕಾರಪ್ರಿಯನೂ, ಬ್ರಹ್ಮಸ್ವರೂಪನೂ, ಬ್ರಾಹ್ಮಣರಲ್ಲಿ ಮಮತೆಯುಳ್ಳವನೂ ಆಗಿರುವನು. ಆ ಯಾದವಶ್ರೇಷ್ಠನು ಜರಾಸಂಧನೆಂಬ ರಾಜನನ್ನು ಗೆದ್ದು, ಅವನು ಪರ್ವತದ ಗುಹೆಗಳಲ್ಲಿ ಸೆರೆಹಾಕಿದ್ದ ಅನೇಕಮಂದಿ ಅರಸರನ್ನು ಬಿಡಿಸುವನು.

೪೩. ಮತ್ತು ಆ ಪರಾಕ್ರಮಿಯು ಎಲ್ಲ ರಾಜರ ಬಳಿಯಿರುವ ಅಮೂಲ್ಯವಾದ ರತ್ನಗಳನ್ನೂ ತನ್ನ ವಶಪಡಿಸಿಕೊಳ್ಳುವನು. ಮತ್ತು ತನ್ನ ಶೌರ್ಯದಿಂದ ಭೂಮಿಯಲ್ಲಿ ಎದುರಾಳಿಯೇ ಇಲ್ಲವೆನಿಸುವನು

೪೪-೪೫. ಮತ್ತು ಆ ವಿಕ್ರಮಶಾಲಿಯು ಎಲ್ಲ ಅರಸರಿಗೂ ಅರಸನೆನಿಸುವನು. ಆತನ ದೇಹವು ಬಲಾಢ್ಯವಾಗಿ ಸುಘಟಿತವಾಗಿರುವುದು. ಆ ಪ್ರಭುವು

ಪಾಲಯಿಷ್ಯತಿ ಗಾಂ ದೇವೀಂ ವಿನಿರ್ಜಿತ್ಯ ದುರಾಶಯಾನ್ ।
ತಂ ಭವಂತಃ ಸಮಾಸಾದ್ಯ ಬ್ರಾಹ್ಮಣೈರರ್ಹಣೈರ್ವರೈಃ ॥ ೪೫ ॥

ಅರ್ಚಯಂತು ಯಥಾನ್ಯಾಯಂ ಬ್ರಹ್ಮಾಣಮಿವ ಶಾಶ್ವತಂ ।
ಯೋ ಹಿ ಮಾಂ ದ್ರಷ್ಟುಮಿಚ್ಛೇತ ಬ್ರಹ್ಮಾಣಂ ಚ ಪಿತಾಮಹಂ ॥ ೪೬ ॥

ದ್ರಷ್ಟವ್ಯಸ್ತೇನ ಭಗವಾನ್ವಾಸುದೇವಃ ಪ್ರತಾಪವಾನ್ ।
ದೃಷ್ಟೇ ತಸ್ಮಿನ್ನಹಂ ದೃಷ್ಟೋ ನ ಮೇಽತ್ರಾಸ್ತಿ ವಿಚಾರಣಾ ॥ ೪೭ ॥

ಪಿತಾಮಹೋ ವಾಸುದೇವ ಇತಿ ವಿತ್ತ ತಪೋಧನಾಃ ।
ಸ ಯಸ್ಯ ಪುಂಡರೀಕಾಕ್ಷಃ ಪ್ರೀತಿಯುಕ್ತೋ ಭವಿಷ್ಯತಿ ॥ ೪೮ ॥

ತಸ್ಯ ದೇವಗಣಃ ಪ್ರೀತೋ ಬ್ರಹ್ಮಪೂರ್ವೋ ಭವಿಷ್ಯತಿ ।
ಯಸ್ತು ತಂ ಮಾನವೋ ಲೋಕೇ ಸಂಶ್ರಯಿಷ್ಯತಿ ಕೇಶವಂ ॥ ೪೯ ॥

ದುಷ್ಟರೆಲ್ಲರನ್ನೂ ಗೆದ್ದು ದ್ವಾರಕೆಯಲ್ಲಿ ವಾಸಮಾಡುತ್ತಾ ಸಕಲವಾದ ಭೂಮಂಡಲವನ್ನೂ ಪರಿಪಾಲಿಸುವನು. ಆತನನ್ನು ನೀವು ಬಳಿಸಾರಿ ಬ್ರಾಹ್ಮಣೋಚಿತವಾದ ಮತ್ತು ಶ್ರೇಷ್ಠವಾದ ಪೂಜಾದ್ರವ್ಯಗಳಿಂದ-

೪೬-೪೭. ಸನಾತನನಾದ ಬ್ರಹ್ಮನನ್ನು ಅರ್ಚಿಸುವಂತೆ, ಆತನ ಯೋಗ್ಯತಾನುಸಾರವಾಗಿ ಪೂಜೆಮಾಡಿರಿ. ಯಾವನು ನನ್ನನ್ನಾಗಲಿ ಲೋಕಕ್ಕೇ ಪಿತಾಮಹನೆನಿಸಿದ ಬ್ರಹ್ಮನನ್ನಾಗಲಿ ನೋಡಬೇಕೆಂದು ಅಪೇಕ್ಷಿಸುವನೋ ಅವನು ಪ್ರತಾಪಶಾಲಿಯೂ ಭಗವಂತನೂ ಆದ ವಾಸುದೇವನನ್ನು ಹೋಗಿ ನೋಡಲಿ. ಆತನನ್ನು ಸಂದರ್ಶಿಸಿದರೆ ನನ್ನನ್ನೇ ನೋಡಿದಂತಾಗುವುದು. ಈ ಅಂಶದಲ್ಲಿ ವಿಚಾರವು ಅಪ್ರಕೃತವಾದುದು.

೪೮-೫೦. ಎಲೈ ತಪೋಧನರಿರಾ! ವಾಸುದೇವನೇ ಪಿತಾಮಹನೆಂದೂ ತಿಳಿಯಿರಿ. ಪುಂಡರೀಕಾಕ್ಷನು ಯಾರನ್ನು ಪ್ರೀತಿಯಿಂದ ಕಾಣುವನೋ ಅವನ ವಿಷಯದಲ್ಲಿ ಬ್ರಹ್ಮಾದಿದೇವತೆಗಳೂ ಸುಪ್ರೀತರಾಗುವರು. ಯಾವ ಮಾನವನು ಕೇಶವನನ್ನು ಅನನ್ಯ ಶರಣನಾಗಿ ಆಶ್ರಯಿಸುವನೋ ಆ ಮಾನವನ ಯಶಸ್ಸು ಮತ್ತು ಕೀರ್ತಿಯು ಲೋಕದಲ್ಲೆಲ್ಲಾ ಹಬ್ಬುವುದಲ್ಲದೆ ಅವನು ಕೊನೆಗೆ ಸ್ವರ್ಗ

ತಸ್ಯ ಕೀರ್ತಿರ್ಯಶಶ್ಚೈವ ಸ್ವರ್ಗಶ್ಚೈವ ಭವಿಷ್ಯತಿ ।
ಧರ್ಮಾಣಾಂ ದೇಶಿಕಃ ಸಾಕ್ಷಾದ್ಭವಿಷ್ಯತಿ ಸ ಧರ್ಮವಾನ್ ॥ ೫೦ ॥

ಧರ್ಮವಿದ್ಭಿಃ ಸ ದೇವೇಶೋ ನಮಸ್ಕಾರ್ಯಃ ಸದಾಚ್ಯುತಃ ।
ಧರ್ಮ ಏವ ಸದಾ ಹಿ ಸ್ಯಾದಸ್ಮಿನ್ನಭ್ಯರ್ಚಿತೇ ವಿಭೌ ॥ ೫೧ ॥

ಸ ಹಿ ದೇವೋ ಮಹಾತೇಜಾಃ ಪ್ರಜಾಹಿತಚಿಕೀರ್ಷಯಾ ।
ಧರ್ಮಾರ್ಥಂ ಪುರುಷವ್ಯಾಘ್ರ ಋಷಿಕೋಟೀಃ ಸಸರ್ಜ ಚ ॥ ೫೨ ॥

ತಾಃ ಸೃಷ್ಟಾಸ್ತೇನ ವಿಧಿನಾ ಪರ್ವತೇ ಗಂಧಮಾದನೇ ।
ಸನತ್ಕುಮಾರಪ್ರಮುಖಾಸ್ತಿಷ್ಠಂತಿ ತಪಸಾನ್ವಿತಾಃ ॥ ೫೩ ॥

ತಸ್ಮಾತ್ಸ ವಾಗ್ಮೀ ಧರ್ಮಜ್ಞೋ ನಮಸ್ಯೋ ದ್ವಿಜಪುಂಗವಾಃ ।
ವಂದಿತೋ ಹಿ ಸ ವಂದೇತ ಮಾನಿತೋ ಮಾನಯೀತ ಚ ॥ ೫೪ ॥

ವನ್ನೂ ಹೊಂದುವನು. ಅಲ್ಲದೆ ಅವನು ಧರ್ಮನಿರತನಾಗಿ ಧರ್ಮಕಾರ್ಯಗಳಿಗೆಲ್ಲಕ್ಕೂ ಸಾಕ್ಷಾದಾಚಾರ್ಯನಾಗುವನು.

೫೧. ಧರ್ಮಜ್ಞರಾದವರು ದೇವೇಶ್ವರನನ್ನು ಸರ್ವದಾ ನಮಸ್ಕರಿಸಬೇಕು. ಆ ವಿಭುವನ್ನು ಪೂಜಿಸಲು ಧರ್ಮವನ್ನೇ ಪೂಜಿಸಿದಂತಾಗುವುದು.

೫೨. ಪುರುಷಶ್ರೇಷ್ಠನೂ ಮಹಾತೇಜಸ್ವಿಯೂ ಆದ ದೇವನು ಪ್ರಜೆಗಳಿಗೆ ಹಿತವನ್ನುಂಟುಮಾಡಬೇಕೆಂಬಾಸೆಯಿಂದ ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಅಸಂಖ್ಯಾತರಾದ ಋಷಿಗಳನ್ನು ಸೃಷ್ಟಿಸಿದನು.

೫೩. ಆ ಮಹಾತ್ಮನಿಂದ ಸೃಷ್ಟಿಸಲ್ಪಟ್ಟಂಥಾ ಸನತ್ಕುಮಾರನೇ ಮೊದಲಾದ ಋಷಿಗಳೆಲ್ಲರೂ ಗಂಧಮಾದನಪರ್ವತದಲ್ಲಿ ವಿಧಿವತ್ತಾಗಿ ತಪಸ್ಸು ಮಾಡುತ್ತಾ ನೆಲೆಸಿರುವರು.

೫೪. ಆದುದರಿಂದ, ಎಲೈ ಬ್ರಾಹ್ಮಣೋತ್ತಮರಿರಾ! ಧರ್ಮಜ್ಞನೂ ವಾಗ್ಮಿ (ಚೆನ್ನಾಗಿ ಮಾತಾಡುವವನು) ಯೂ ಆದ ಆತನನ್ನು ನಮಸ್ಕರಿಸಬೇಕು. ನಾವು ಆತನನ್ನು ವಂದಿಸಲು ಅವನು ನಮ್ಮನ್ನು ವಂದಿಸುವನು. ಗೌರವಿಸಲು ಆತನೂ ನಮ್ಮನ್ನು ಗೌರವಿಸುವನು.

ದೃಷ್ಟಃ ಪಶ್ಯೇದಹರಹಃ ಸಂಶ್ರಿತಃ ಪ್ರತಿಸಂಶ್ರಯೇತ್ ।
ಅರ್ಚಿತಶ್ಚಾರ್ಚಯೇನ್ನಿತ್ಯಂ ಸ ದೇವೋ ದ್ವಿಜಸತ್ತಮಾಃ ॥ ೫೫ ॥

ಏವಂ ತಸ್ಯಾನವದ್ಯಸ್ಯ ವಿಷ್ಣೋರ್ವೈ ಪರಮಂ ತಪಃ ।
ಆದಿದೇವಸ್ಯ ಮಹತಃ ಸಜ್ಜನಾಚರಿತಂ ಸದಾ ॥ ೫೬ ॥

ಭುವನೇಽಭ್ಯರ್ಚಿತೋ ನಿತ್ಯಂ ದೇವೈರಪಿ ಸನಾತನಃ ।
ಅಭಯೇನಾನುರೂಪೇಣ ಪ್ರಪದ್ಯ ತಮನುವ್ರತಾಃ ॥ ೫೭ ॥

ಕರ್ಮಣಾ ಮನಸಾ ವಾಚಾ ಸ ನಮಸ್ಯೋ ದ್ವಿಜೈಃ ಸದಾ ।
ಯತ್ನವದ್ಭಿರುಪಸ್ಥಾಯ ದ್ರಷ್ಟವ್ಯೋ ದೇವಕೀಸುತಃ ॥ ೫೮ ॥

---

೫೫. ನಾವು ಆತನನ್ನು ನೋಡಲು ಪ್ರತನಿತ್ಯವೂ ನಮ್ಮನ್ನು ನೋಡುವನು. ಆಶ್ರಯಿಸಲು ನಮ್ಮನ್ನೇ ಆಶ್ರಯಿಸುವನು. ನಮ್ಮಿಂದ ಪೂಜಿಸಲ್ಪಟ್ಟರೆ ಆ ದೇವನು ನಮ್ಮನ್ನು ಪೂಜಿಸುವನು.

೫೬. ಈರೀತಿಯಾಗಿ ನಿಷ್ಕಲಂಕನೂ ಆದಿದೇವನೂ ಆದ ಮಹಾವಿಷ್ಣುವಿನ ಶ್ರೇಷ್ಠವಾದ ತಪೋರೂಪವಾದ ಆಚರಣೆಯನ್ನೇ ಸಜ್ಜನರು ಸರ್ವದಾ ಆಚರಿಸುತ್ತಿರುವರು.

೫೭. ಆ ಸನಾತನನು ಈ ಪ್ರಪಂಚದಲ್ಲಿ ದೇವತೆಗಳಿಂದಲೂ ಪೂಜಿತನಾಗಿರುವನು. ಮತ್ತು ಆತನನ್ನು ಮರೆಹೊಕ್ಕು ಆತನ ಅನುರೂಪವಾದ ಅಭಯಕ್ಕೆ ಪಾತ್ರರಾಗಿ ಎಲ್ಲರೂ ಆತನನ್ನೇ ಆಶ್ರಯಿಸಿಕೊಂಡಿರುವರು.

೫೮. ಆತನನ್ನು ದ್ವಿಜರಾದವರು ಕರ್ಮಗಳಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ, ಸರ್ವದಾ ನಮಸ್ಕರಿಸಬೇಕು. ಮತ್ತು ಆ ದೇವಕೀನಂದನನನ್ನು ಪ್ರಯತ್ನಪೂರ್ವಕವಾಗಿಯಾದರೂ ತಾವಾಗಿ ಹೋಗಿ ಸಂದರ್ಶನ ಮಾಡಬೇಕು.

ಏಷ ವೈ ವಿಹಿತೋ ಮಾರ್ಗೋ ಮಯಾ ವೈ ಮುನಿಸತ್ತಮಾಃ ।
ತಂ ದೃಷ್ಟ್ವಾ ಸರ್ವದೇವೇಶಂ ದೃಷ್ಟಾಃ ಸ್ಯುಃ ಸುರಸತ್ತಮಾಃ ॥ ೫೯ ॥

ಮಹಾವರಾಹಂ ತಂ ದೇವಂ ಸರ್ವಲೋಕಪಿತಾಮಹಂ ।
ಅಹಂ ಚೈವ ನಮಸ್ಯಾಮಿ ನಿತ್ಯಮೇವ ಜಗತ್ಪತಿಂ ॥ ೬೦ ॥

ತತ್ರ ಚ ತ್ರಿತಯಂ ದೃಷ್ಟಂ ಭವಿಷ್ಯತಿ ನ ಸಂಶಯಃ ।
ಸಮಸ್ತಾ ಹಿ ವಯಂ ದೇವಾಸ್ತಸ್ಯ ದೇಹೇ ವಸಾಮಹೇ ॥ ೬೧ ॥

ತಸ್ಯೈವ ಚಾಗ್ರಜೋ ಭ್ರಾತಾ ಸಿತಾದ್ರಿನಿಚಯಪ್ರಭಃ ।
ಹಲೀ ಬಲ ಇತಿ ಖ್ಯಾತೋ ಭವಿಷ್ಯತಿ ಧರಾಧರಃ ॥ ೬೨ ॥

---

೫೯. ಎಲೈ ಮುನಿಶ್ರೇಷ್ಠರಿರಾ! ನಾನು ಇದೇ ಮಾರ್ಗವನ್ನು ಅನು-ಸರಿಸಿರುವೆನು. ಸಕಲ ದೇವತೆಗಳಿಗೂ ಅಧಿಪತಿಯೆನಿಸಿದ ಆತನನ್ನು ಕಾಣು-ತ್ತಲೇ ಎಲ್ಲ ದೇವತೆಗಳನ್ನೂ ಕಂಡಂತಾಗುವುದು.

೬೦. ನಾನೂ ಸಹ ಪ್ರತಿನಿತ್ಯವೂ ಮಹಾವರಾಹಸ್ವರೂಪನೂ, ಸರ್ವ ಲೋಕಗಳಿಗೂ ಪಿತಾಮಹನೂ, ಜಗತ್ಪ್ರಭುವೂ ಆದ ದೇವನನ್ನು ನಮ-ಸ್ಕರಿಸುವೆನು.

೬೧. ಆತನನ್ನು ಕಂಡರೆ ಮೂರನ್ನು ಕಂಡಂತೆ ಆಗುವುದು. (ಆತನು, ನಾವೆಲ್ಲ ದೇವತೆಗಳು, ಆದಿಶೇಷನು,) ನಾವೆಲ್ಲ ದೇವತೆಗಳೂ ಆತನ ಶರೀರ-ದಲ್ಲಿಯೇ ನೆಲೆಸಿರುವೆವು.

೬೨-೬೪. ಹಿಂದೆ ಕಶ್ಯಪ ಪುತ್ರನೂ ಮಹಾಬಲಾಢ್ಯನೂ ಆದ ಸುಪರ್ಣ (ಗರುಡ) ನು ಯಾವನ ಶೌರ್ಯದಿಂದ ಪರಮಾತ್ಮನೆನಿಸಿದ ಆ ದೇವನ ಕೊನೆಯನ್ನು ಕಾಣಲಾರದೆಹೋದನೋ ಆ ಧರಣೀಧರನೂ ಅನಂತನೆಂದು ಪ್ರಸಿದ್ಧನಾಗಿ ಸರ್ವದಾ ಮೂರುತಲೆಗಳನ್ನು ತಾಳಿ ಪರಮಾತ್ಮನ ಬಳಿಯಲ್ಲೇ ನೆಲೆಸಿರುವನೂ ಆದ ಶೇಷನು, ಮಹಾಸಂತೋಷದಿಂದ ವಾಸುದೇವನಿಗೆ ಅಣ್ಣ

ತ್ರಿಶಿರಾಸ್ತಸ್ಯ ದೇವಸ್ಯ ದೃಷ್ಟೋಽನಂತ ಇತಿ ಪ್ರಭೋಃ ।
ಸುಪರ್ಣೋ ಯಸ್ಯ ವೀರ್ಯೇಣ ಕಶ್ಯಪಸ್ಯಾತ್ಮಜೋ ಬಲೀ ॥ ೬೩ ॥

ಅಂತಂ ನೈವಾಶಕದ್ದ್ರಷ್ಟುಂ ದೇವಸ್ಯ ಪರಮಾತ್ಮನಃ ।
ಸ ಚ ಶೇಷೋ ವಿಚರತೇ ಪರಯಾ ವೈ ಮುದಾ ಯುತಃ ॥ ೬೪ ॥

ಅಂತರ್ವಸತಿ ಭೋಗೇನ ಪರಿರಭ್ಯ ವಸುಂಧರಾಂ ।
ಯ ಏಷ ವಿಷ್ಣುಃ ಸೋಽನಂತೋ ಭಗವಾನ್ವಸುಧಾಧರಃ ॥ ೬೫ ॥

ಯೋ ರಾಮಃ ಸ ಹೃಷೀಕೇಶೋಽಚ್ಯುತಃ ಸರ್ವಧರಾಧರಃ ।
ತಾವುಭೌ ಪುರುಷವ್ಯಾಘ್ರೌ ದಿವ್ಯೌ ದಿವ್ಯಪರಾಕ್ರಮೌ ॥ ೬೬ ॥

ನಾಗಿ, ಶ್ವೇತಪರ್ವತದಂತೆ ಶುಭ್ರವಾಗಿ ಹೊಳೆಯುತ್ತಾ, ಲಾಂಗಲವನ್ನು ಧರಿಸಿ, ಬಲರಾಮನೆಂಬ ಹೆಸರಿನಿಂದ ಪ್ರಖ್ಯಾತನಾಗಿ ಹತ್ತಿರದಲ್ಲೇ ಓಡಾಡುತ್ತಿರುವನು.

೬೫. ಯಾವನು ಭೂಮಿಯ ಕೆಳಗಡೆ ನಿಂತು, ತನ್ನ ಹೆಡೆಗಳಿಂದ ಭೂಮಿಯನ್ನು ಹೊತ್ತುಕೊಂಡು ಇರುವನೋ ಅವನೇ ಸಾಕ್ಷಾತ್ ವಿಷ್ಣುವು. ಯಾವನು ಭಗವಂತನೋ ಅವನೇ ಭೂಮಿಯನ್ನು ಹೊತ್ತಿರುವ ಅನಂತನು (ಆದಿಶೇಷನು) ಆಗಿರುವನು.

೬೬. ಯಾವನು ಬಲರಾಮನೋ ಅವನೇ ಸಕಲ ಲೋಕಗಳನ್ನೂ ಹೊತ್ತಿರುವ ನಾಶರಹಿತನಾದ ಆ ಹೃಷೀಕೇಶನು ಎಂದು ತಿಳಿಯಿರಿ. ಅದ್ಭುತವಾದ ಪರಾಕ್ರಮದಿಂದ ಮೆರೆಯುತ್ತಿರುವ, ಪುರುಷಶ್ರೇಷ್ಠರಾದ, ಚಕ್ರ ಮತ್ತು ಹಲಾಯುಧಗಳನ್ನು ಧರಿಸಿರುವ ಕೃಷ್ಣ ಬಲರಾಮರನ್ನು ಪ್ರತಿಯೊಬ್ಬರೂ ಸಂದರ್ಶಿಸಬೇಕು. ಅವರಿಗೆ ಗೌರವವನ್ನು ತೋರ್ಪಡಿಸಬೇಕು.

ದ್ರಷ್ಟವ್ಯೌ ಮಾನನೀಯೌ ಚ ಚಕ್ರಲಾಂಗಲಧಾರಿಣೌ ।
ಏಷ ವೋಽನುಗ್ರಹಃ ಪ್ರೋಕ್ತೋ ಮಯಾ ಪುಣ್ಯಸ್ತಪೋಧನಾಃ ।
ತದ್ಭವಂತೋ ಯದುಶ್ರೇಷ್ಠಂ ಪೂಜಯೇಯುಃ ಪ್ರಯತ್ನತಃ ॥ ೬೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಋಷಿಮಹೇಶ್ವರಸಂವಾದೇ
ಷಡ್ವಿಂಶತ್ಯಧಿಕದ್ವಿಶತತಮೋಽಧ್ಯಾಯಃ

---

೬೭. ಎಲೈ ತಪೋಧನರಿರಾ ! ಈಗ ನಿಮಗೆ ಅನುಗ್ರಹದಾಯಕವಾದಂತಹ ಪುಣ್ಯತಮವಾದ ಈ ವಿಷಯವನ್ನು ತಿಳಿಸಿದೆನು. ಆದುದರಿಂದ ನೀವು ಆ ಯದುಶ್ರೇಷ್ಠನನ್ನು ಪ್ರಯತ್ನಪೂರ್ವಕವಾಗಿಯಾದರೂ ಪೂಜೆಮಾಡಬೇಕು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಋಷಿಮಹೇಶ್ವರಸಂವಾದರೂಪವಾದ
ಇನ್ನೂರಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತವಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಅಹೋ ಕೃಷ್ಣಸ್ಯ ಮಾಹಾತ್ಮ್ಯಂ ಶ್ರುತಮಸ್ಮಾಭಿರದ್ಭುತಂ ।
ಸರ್ವಪಾಪಹರಂ ಪುಣ್ಯಂ ಧನ್ಯಂ ಸಂಸಾರನಾಶನಂ ॥ ೧ ॥

ಸಂಪೂಜ್ಯ ವಿಧಿವದ್ಭಕ್ತ್ಯಾ ವಾಸುದೇವಂ ಮಹಾಮುನೇ ।
ಕಾಂ ಗತಿಂ ಯಾಂತಿ ಮನುಜಾ ವಾಸುದೇವಾರ್ಚನೇ ರತಾಃ ॥ ೨ ॥

ಇನ್ನೂರಇಪ್ಪತ್ತೇಳನೆಯ ಅಧ್ಯಾಯವು

೧. ಆಗ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು “ಓ ಮಹರ್ಷೀ! ಅತ್ಯಾಶ್ಚರ್ಯಕರವಾದಂತಹ ಕೃಷ್ಣನ ಮಾಹಾತ್ಮ್ಯವನ್ನು ನಾವು ಕೇಳಿದೆವು. ಭಲೆ-ಭಲೆ! ಇದು ಸಕಲ ಪಾಪಪರಿಹಾರಕವಾದುದು. ಪುಣ್ಯತಮವಾದುದು. ಧನ್ಯವಾದುದು. ಸಂಸಾರಬಂಧವನ್ನು ಪರಿಹರಿಸುವುದು.

೨. ಆ ವಾಸುದೇವನ ಅರ್ಚನೆಯಲ್ಲೇ ಆಸಕ್ತರಾದ ಮಾನವರು ತಾವು ವಿಧಿವತ್ತಾಗಿ ಭಕ್ತಿಯಿಂದ ಆತನನ್ನು ಪೂಜೆಮಾಡಿದುದರಿಂದ ಯಾವಗತಿಯನ್ನು ಹೊಂದುವರು ?

ಕಿಂ ಪ್ರಾಪ್ನುವಂತಿ ತೇ ಮೋಕ್ಷಂ ಕಿಂವಾ ಸ್ವರ್ಗಂ ಮಹಾಮುನೇ ।
ಅಥವಾ ಕಿಂ ಮುನಿಶ್ರೇಷ್ಠ ಪ್ರಾಪ್ನುವಂತ್ಯುಭಯಂ ಫಲಂ ॥ ೩ ॥

ಛೇತ್ತುಮರ್ಹಸಿ ಸರ್ವಜ್ಞ ಸಂಶಯಂ ನೋ ಹೃದಿ ಸ್ಥಿತಂ ।
ಛೇತ್ತಾ ನಾನ್ಯೋಽಸ್ತಿ ಲೋಕೇಽಸ್ಮಿಂಸ್ತ್ವದೃತೇ ಮುನಿಸತ್ತಮ ॥ ೪ ॥

॥ ವ್ಯಾಸ ಉವಾಚ ॥

ಸಾಧು ಸಾಧು ಮುನಿಶ್ರೇಷ್ಠಾ ಭವದ್ಭಿರ್ಯದುದಾಹೃತಂ ।
ಶೃಣುಧ್ವಮಾನುಪೂರ್ವ್ಯೇಣ ವೈಷ್ಣವಾನಾಂ ಸುಖಾವಹಂ ॥ ೫ ॥

ದೀಕ್ಷಾಮಾತ್ರೇಣ ಕೃಷ್ಣಸ್ಯ ನರಾ ಮೋಕ್ಷಂ ವ್ರಜಂತಿ ವೈ ।
ಕಿಂ ಪುನರ್ಯೇ ಸದಾ ಭಕ್ತ್ಯಾ ಪೂಜಯಂತ್ಯಚ್ಯುತಂ ದ್ವಿಜಾಃ ॥ ೬ ॥

---

೩. ಓ ಮುನೀಂದ್ರ! ಅವರು ಆ ಪೂಜೆಯ ಫಲವಾಗಿ ಸ್ವರ್ಗವನ್ನು ಹೊಂದುವರೇ? ಅಥವಾ ಮೋಕ್ಷವನ್ನು ಪಡೆಯುವರೇ? ಇಲ್ಲದಿದ್ದರೆ ಅವೆರಡನ್ನೂ ಪಡೆಯುವರೇ?

೪. ಓ ಸರ್ವಜ್ಞ! ನಮ್ಮ ಹೃದಯದಲ್ಲಿರುವ ಈ ಸಂಶಯವನ್ನು ನೀನೇ ಪರಿಹರಿಸಬೇಕು. ನಿನ್ನನ್ನು ಬಿಟ್ಟರೆ ಈ ಲೋಕದಲ್ಲಿ ಮತ್ತಾರೂ ನಮ್ಮ ಸಂಶಯವನ್ನು ಪರಿಹರಿಸಲಾರರು" ಎಂದು ಕೇಳಿದರು.

೫. ಆಗ ವ್ಯಾಸನು ಹೇಳತೊಡಗಿದನು :—ಎಲೈ ಮುನಿಶ್ರೇಷ್ಠರಿರಾ! ಸೊಗಸಾದ ವಿಷಯವನ್ನೇ ಪ್ರಶ್ನಿಸಿದಿರಿ. ಭಲೆ, ಭಲೆ, ವಿಷ್ಣುಭಕ್ತರಾದವರಿಗೆಲ್ಲರಿಗೂ ಸುಖಕರವಾದಂತಹ ಈ ವಿಷಯವನ್ನು ಕ್ರಮವಾಗಿ ನಿಮಗೆ ತಿಳಿಸುವೆನು. ಕೇಳಿರಿ.

೬. ಕೃಷ್ಣನನ್ನು ಒಂದುಬಾರಿ ಪೂಜಿಸಿದ ಮಾತ್ರದಿಂದಲೇ ಮನುಷ್ಯರು ಮುಕ್ತಿಯನ್ನು ಹೊಂದುವರು. ಹೀಗಿರುವಾಗ ಸರ್ವದಾ ಯಾರು ಆ ಅಚ್ಯುತನನ್ನು ಭಕ್ತಿಯಿಂದ ಪೂಜೆಮಾಡುವರೋ ಅವರ ವಿಷಯವನ್ನು ಏನೆಂದು ಹೇಳೋಣ?

ನ ತೇಷಾಂ ದುರ್ಲಭಃ ಸ್ವರ್ಗೋ ಮೋಕ್ಷಶ್ಚ ಮುನಿಸತ್ತಮಾಃ ।
ಲಭಂತೇ ವೈಷ್ಣವಾಃ ಕಾಮಾನ್ಯಾನ್ಯಾನ್ವಾಂಛಂತಿ ದುರ್ಲಭಾನ್ ॥ ೭ ॥

ರತ್ನ ಪರ್ವತಮಾರುಹ್ಯ ನರೋ ರತ್ನಂ ಯಥಾದದೇತ್ ।
ಸ್ವೇಚ್ಛಯಾ ಮುನಿಶಾರ್ದೂಲಾಸ್ತಥಾ ಕೃಷ್ಣಾನ್ಮನೋರಥಾನ್ ॥ ೮ ॥

ಕಲ್ಪವೃಕ್ಷಂ ಸಮಾಸಾದ್ಯ ಫಲಾನಿ ಸ್ವೇಚ್ಛಯಾ ಯಥಾ ।
ಗೃಹ್ಣಾತಿ ಪುರುಷೋ ವಿಪ್ರಾಸ್ತಥಾ ಕೃಷ್ಣಾನ್ಮನೋರಥಾನ್ ॥ ೯ ॥

ಶ್ರದ್ಧಯಾ ವಿಧಿವತ್ಪೂಜ್ಯ ವಾಸುದೇವಂ ಜಗದ್ಗುರಂ ।
ಧರ್ಮಾರ್ಥಕಾಮಮೋಕ್ಷಾಣಾಂ ಪ್ರಾಪ್ನುವಂತಿ ನರಾಃ ಫಲಂ ॥ ೧೦ ॥

---

೭. ಎಲೈ ಮುನಿಶ್ರೇಷ್ಠರಿರಾ! ಆ ವಿಷ್ಣುಭಕ್ತರಿಗೆ ಸ್ವರ್ಗವೂ ಮೋಕ್ಷವೂ ಯಾವುದೂ ದುರ್ಲಭವಲ್ಲ. ಅವರು ಬಯಸುವಂತಹ ಇಷ್ಟಾರ್ಥಗಳು ಎಷ್ಟೇ ದುರ್ಲಭವಾದುವಾಗಿರಲಿ ಅವನ್ನು ಅವರು ಪಡೆದೇ ಪಡೆಯುವರು.

೮. ಎಲೈ ಮುನಿವರ್ಯರೇ! ರತ್ನಗಳು ಸಿಗುವಂತಹ ರೋಹಣ ಪರ್ವತವನ್ನು ಹತ್ತಿದ ಮನುಷ್ಯನು ತನಗಿಷ್ಟಬಂದಂತಹ ರತ್ನವನ್ನು ತೆಗೆದು ಕೊಳ್ಳುವಂತೆ ಕೃಷ್ಣನಿಂದ ಬೇಕಾದ ಇಷ್ಟಾರ್ಥಗಳನ್ನು ಭಕ್ತರಾದವರು ಪಡೆಯುವರು.

೯. ಕಲ್ಪವೃಕ್ಷವನ್ನು ಹತ್ತಿದ ಮನುಷ್ಯನು ತನಗಿಷ್ಟವಾದ ಫಲಗಳನ್ನು ಹೇಗೆ ತೆಗೆದುಕೊಳ್ಳುವನೋ ಹಾಗೆಯೇ ಆ ವಿಷ್ಣುಭಕ್ತರಾದವರು ಕೃಷ್ಣನಿಂದ ಬೇಕಾದಂತಹ ಮನೋರಥಗಳನ್ನು ಪಡೆಯುವರು.

೧೦. ಜಗತ್ಪ್ರಭುವಾದ ವಾಸುದೇವನನ್ನು ಶ್ರದ್ಧೆಯಿಂದ ವಿಧಿವತ್ತಾಗಿ ಪೂಜಿಸಿದಂತಹ ಮಾನವರು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಫಲ ಗಳನ್ನು ಹೊಂದುವರು.

ಆರಾಧ್ಯ ತಂ ಜಗನ್ನಾಥಂ ವಿಶುದ್ಧೇನಾಂತರಾತ್ಮನಾ ।
ಪ್ರಾಪ್ನುವಂತಿ ನರಾಃ ಕಾಮಾನ್ಸುರಾಣಾಮಪಿ ದುರ್ಲಭಾನ್ ॥ ೧೧ ॥

ಯೇಽರ್ಚಯಂತಿ ಸದಾ ಭಕ್ತ್ಯಾ ವಾಸುದೇವಾಖ್ಯಮವ್ಯಯಂ ।
ನ ತೇಷಾಂ ದುರ್ಲಭಂ ಕಿಂಚಿದ್ವಿದ್ಯತೇ ಭುವನತ್ರಯೇ ॥ ೧೨ ॥

ಧನ್ಯಾಸ್ತೇ ಪುರುಷಾ ಲೋಕೇ ಯೇಽರ್ಚಯಂತಿ ಸದಾ ಹರಿಂ ।
ಸರ್ವಪಾಪಹರಂ ದೇವಂ ಸರ್ವಕಾಮಫಲಪ್ರದಂ ॥ ೧೩ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾಂತ್ಯಜಾತಯಃ ।
ಸಂಪೂಜ್ಯ ತಂ ಸುರವರಂ ಪ್ರಾಪ್ನುವಂತಿ ಪರಾಂ ಗತಿಂ ॥ ೧೪ ॥

ತಸ್ಮಾಚ್ಛೃಣುಧ್ವಂ ಮುನಯೋ ಯತ್ಪೃಚ್ಛತ ಮಮಾನಘಾಃ ।
ಪ್ರವಕ್ಷ್ಯಾಮಿ ಸಮಾಸೇನ ಗತಿಂ ತೇಷಾಂ ಮಹಾತ್ಮನಾಂ ॥ ೧೫ ॥

---

೧೧. ಶುದ್ಧವಾದ ಹೃದಯದಿಂದ ಜಗನ್ನಾಥನನ್ನು ಅರ್ಚಿಸಿದ ಮಾನವರು ದೇವತೆಗಳಿಗೂ ದುರ್ಲಭವಾದ ಇಷ್ಟಾರ್ಥಗಳನ್ನು ಹೊಂದುವರು.

೧೨. ಯಾರು ಸರ್ವದಾ ಭಕ್ತಿಯಿಂದ ವಾಸುದೇವನೆಂಬ ಹೆಸರಿನ ಆ ನಾಶರಹಿತನಾದ ಪ್ರಭುವನ್ನು ಪೂಜಿಸುವರೋ ಅವರಿಗೆ ದುರ್ಲವಾದಂಥಹ ವಸ್ತುವು ಮೂರುಲೋಕಗಳಲ್ಲಿಯೂ ಇಲ್ಲ.

೧೩. ಸಕಲ ಪಾಪ ಪರಿಹಾರಕನೂ, ಎಲ್ಲಬಗೆಯ ಇಷ್ಟಾರ್ಥಗಳನ್ನೂ ಕರುಣಿಸುವವನೂ ಆದ ಶ್ರೀಹರಿಯನ್ನು ಯಾರು ಸರ್ವದಾ ಅರ್ಚಿಸುವರೋ ಆ ಪುರುಷರೇ ಧನ್ಯರು.

೧೪. ಬ್ರಾಹ್ಮಣರಾಗಲಿ, ಕ್ಷತ್ರಿಯರಾಗಲಿ, ವೈಶ್ಯರಾಗಲಿ, ಸ್ತ್ರೀಯರಾಗಲಿ, ಶೂದ್ರರಾಗಲಿ, ಹೀನಜಾತಿಯವರಾಗಲಿ, ಸುರಶ್ರೇಷ್ಠನಾದ ಹರಿಯನ್ನು ಪೂಜಿಸಿದರೆ ಉತ್ತಮವಾದ ಗತಿಯನ್ನು ಹೊಂದುವರು.

೧೫. ಎಲೈ ಪಾಪರಹಿತರಾದ ಮುನಿಗಳಿರಾ! ಆದುದರಿಂದ, ನೀವು ಕೇಳಿದಂತಹ, ವಿಷ್ಣುಭಕ್ತರಾದ ಮಹನೀಯರಿಗೆ ಎಂತಹ ಗತಿಯುಂಟಾಗುವುದೆಂಬುದನ್ನು ಸಂಕ್ಷೇಪವಾಗಿ ತಿಳಿಸುವೆನು. ಅದನ್ನು ಆಲಿಸಿರಿ :—

ತ್ಯಕ್ತ್ವಾ ಮಾನುಷ್ಯಕಂ ದೇಹಂ ರೋಗಾಯತನಮಧ್ರುವಂ ।
ಜರಾಮರಣಸಂಯುಕ್ತಂ ಜಲಬುದ್ಬುದಸಂನಿಭಂ ॥ ೧೬ ॥

ಮಾಂಸಶೋಣಿತದುರ್ಗಂಧಂ ವಿಣ್ಮೂತ್ರಾದಿಭಿರ್ಯುತಂ
ಅಸ್ಥಿಸ್ಥೂಣಮಮೇಧ್ಯಂ ಚ ಸ್ನಾಯುಚರ್ಮಶಿರಾನ್ವಿತಂ ॥ ೧೭ ॥

ಕಾಮಗೇನ ವಿಮಾನೇನ ದಿವ್ಯಗಂಧರ್ವನಾದಿನಾ ।
ತರುಣಾದಿತ್ಯವರ್ಣೇನ ಕಿಂಕಿಣೀಜಾಲಮಾಲಿನಾ ॥ ೧೮ ॥

ಉಪಗೀಯಮಾನಾ ಗಂಧರ್ವೈರಪ್ಸರೋಭಿರಲಂಕೃತಾಃ ।
ವ್ರಜಂತಿ ಲೋಕಪಾಲಾನಾಂ ಭವನಂ ತು ಪೃಥಕ್ಪೃಥಕ್ ॥ ೧೯ ॥

೧೬-೧೮. ಈ ಮನುಷ್ಯದೇಹವು ರೋಗಕ್ಕೆ ನೆಲೆಯಾದುದು. ಅಸ್ಥಿರವಾದುದು. ಮುಪ್ಪು, ಸಾವುಗಳಿಂದ ಪೀಡಿಸಲ್ಪಡುವಂಥಹುದು. ಆದುದರಿಂದ ಅದು ನೀರಮೇಲಿನ ಗುಳ್ಳೆಯಂತಿರುವುದು. ಇಷ್ಟೇ ಅಲ್ಲದೆ, ಮಾಂಸ, ರಕ್ತಗಳಿಂದ ಕೂಡಿ ಸದಾ ದುರ್ಗಂಧದಿಂದ ತುಂಬಿರುವುದು. ಮಲಮೂತ್ರಗಳಿಗೆ ಆವಾಸವಾಗಿರುವುದು. ಮತ್ತು ಈ ದೇಹಕ್ಕೆ ಮೂಳೆಗಳು ಕಂಭದಂತೆ ಊರೆಯಾಗಿರುವುವು. ಮತ್ತು ಸ್ನಾಯುಗಳು (ಸಣ್ಣನರಗಳು) ಚರ್ಮ, ಸಿರಾ (ದೊಡ್ಡನರಗಳ ರಂಧ್ರವುಳ್ಳವು) ಇವುಗಳಿಂದ ಕೂಡಿರುವುದು. ಇಂಥಹ ಅಪವಿತ್ರವಾದ ದೇಹವನ್ನು ವಿಷ್ಣುಭಕ್ತರು ಕಾಲವಶದಿಂದ ತೊರೆದನಂತರ ಇಚ್ಛಾಗಾಮಿಯಾದಂತಹ ವಿಮಾನದಲ್ಲಿ ಕುಳಿತು ಕ್ರಮವಾಗಿ ಒಬ್ಬೊಬ್ಬ ಲೋಕಪಾಲನ ಲೋಕಗಳನ್ನೂ ಹೊಂದುವರು. ಆ ವಿಮಾನದಲ್ಲಿ ಗಂಧರ್ವರು ಇಂಪಾಗಿ ಗಾನಮಾಡುತ್ತಿರುವರು. ಅದು ಮಧ್ಯಾಹ್ನದ ಸೂರ್ಯನಂತೆ ಹೊಳೆಯುತ್ತಿರುವುದು. ಮತ್ತು ಅದಕ್ಕೆ ಸಾಲುಸಾಲಾಗಿ ಕಿರುಗೆಜ್ಜೆಗಳನ್ನು ಕಟ್ಟಿರುವರು.

೧೯. ಇಂಥಹ ವಿಮಾನದಲ್ಲಿ ವಿಷ್ಣುಭಕ್ತರು ಸೊಗಸಾಗಿ ಅಲಂಕಾರವನ್ನು ಮಾಡಿಕೊಂಡು, ಗಂಧರ್ವರಿಂದಲೂ ಅಪ್ಸರೆಯರಿಂದಲೂ ಯಶೋಗಾನವನ್ನು ಮಾಡಲ್ಪಡುತ್ತಾ ಪ್ರತಿಯೊಬ್ಬ ಲೋಕಪಾಲಕರ ಲೋಕಗಳಿಗೂ ಬೇರೆಬೇರೆಯಾಗಿ ಹೋಗುವರು.

ಮನ್ವಂತರಪ್ರಮಾಣಂ ತು ಭುಕ್ತ್ವಾ ಕಾಲಂ ಪೃಥಕ್ಪೃಥಕ್ ।
ಭುವನಾನಿ ಪೃಥಕ್ತೇಷಾಂ ಸರ್ವಭೋಗೈರಲಂಕೃತಾಃ ॥ ೨೦ ॥

ತತೋಽಂತರಿಕ್ಷಂ ಲೋಕಂ ತೇ ಯಾಂತಿ ಸರ್ವಸುಖಪ್ರದಂ ।
ತತ್ರ ಭುಕ್ತ್ವಾ ವರಾನ್ಭೋಗಾನ್ದಶಮನ್ವಂತರಂ ದ್ವಿಜಾಃ ॥ ೨೧ ॥

ತಸ್ಮಾದ್ಗಂಧರ್ವಲೋಕಂ ತು ಯಾಂತಿ ವೈ ವೈಷ್ಣವಾ ದ್ವಿಜಾಃ
ವಿಂಶನ್ಮನ್ವಂತರಂ ಕಾಲಂ ತತ್ರ ಭುಕ್ತ್ವಾ ಮನೋರಮಾನ್ ॥ ೨೨ ॥

ಭೋಗಾನಾದಿತ್ಯಲೋಕಂ ತು ತಸ್ಮಾದ್ಯಾಂತಿ ಸುಪೂಜಿತಾಃ ।
ತ್ರಿಂಶನ್ಮನ್ವಂತರಂ ತತ್ರ ಭೋಗಾನ್ಭುಕ್ತ್ವಾತಿದೈವತಾನ್ ॥ ೨೩ ॥

ತಸ್ಮಾದ್ವ್ರಜಂತಿ ತೇ ವಿಪ್ರಾಶ್ಚಂದ್ರಲೋಕಂ ಸುಖಪ್ರದಂ ।
ಮನ್ವಂತರಾಣಾಂ ತೇ ತತ್ರ ಚತ್ವಾರಿಂಶದ್ಗುಣಾನ್ವಿತಂ ॥ ೨೪ ॥

---

೨೦. ಆ ಒಂದೊಂದು ಲೋಕದಲ್ಲೂ ಬೇರೆಬೇರೆಯಾಗಿ ಒಂದೊಂದು ಮನ್ವಂತರದಷ್ಟು ಕಾಲ ಸಕಲವಾದ ಭೋಗಭಾಗ್ಯಗಳನ್ನೂ ಅನುಭವಿಸುವರು.

೨೧. ಎಲೈ ಬ್ರಾಹ್ಮಣರಿರಾ! ಬಳಿಕ ಸಕಲವಿಧವಾದ ಸುಖಗಳಿಂದ ತುಂಬಿರುವ ಅಂತರಿಕ್ಷಲೋಕಕ್ಕೆ ಹೋಗಿ ಅಲ್ಲಿ ಹತ್ತು ಮನ್ವಂತರಗಳಕಾಲ ದಿವ್ಯವಾದ ಭೋಗಗಳನ್ನು ಅನುಭವಿಸುವರು.

೨೨. ಅನಂತರ ವಿಷ್ಣುಭಕ್ತರು ಗಂಧರ್ವಲೋಕವನ್ನು ಸೇರಿ ಇಪ್ಪತ್ತು ಮನ್ವಂತರಗಳಕಾಲ ಮನೋಹರವಾದ ಭೋಗಗಳನ್ನನುಭವಿಸುವರು.

೨೩. ಅನಂತರ ಅಲ್ಲಿಂದ ಸತ್ಕೃತರಾಗಿ ಸೂರ್ಯಲೋಕವನ್ನು ಸೇರಿ ಮೂವತ್ತು ಮನ್ವಂತರಗಳಕಾಲ ದೇವತೆಗಳಿಗೂ ದುರ್ಲಭವಾದ ಭೋಗಗಳನ್ನನುಭವಿಸಿ-

೨೪. ಆಮೇಲೆ ಸುಖದಾಯಕವಾದ ಚಂದ್ರಲೋಕವನ್ನು ಸೇರಿ ನಲವತ್ತು ಮನ್ವಂತರಗಳಕಾಲ ಶುಭವಾದ ಭೋಗಗಳನ್ನು ಅನುಭವಿಸುವರು.

ಕಾಲಂ ಭುಕ್ತ್ವಾ ಶುಭಾನ್ಭೋಗಾನ್ ಜರಾಮರಣವರ್ಜಿತಾಃ ।
ತಸ್ಮಾನ್ನಕ್ಷತ್ರಲೋಕಂ ತು ವಿಮಾನೈಃ ಸಮಲಂಕೃತಂ ॥ ೨೫ ॥

ವ್ರಜಂತಿ ತೇ ಮುನಿಶ್ರೇಷ್ಠಾ ಗುಣೈಃ ಸರ್ವೈರಲಂಕೃತಾಃ ।
ಮನ್ವಂತರಾಣಾಂ ಪಂಚಾಶದ್ಭುಕ್ತ್ವಾ ಭೋಗಾನ್ಯಥೇಪ್ಸಿತಾನ್ ॥ ೨೬ ॥

ತಸ್ಮಾದ್ವ್ರಜಂತಿ ತೇ ವಿಪ್ರಾ ದೇವಲೋಕಂ ಸುದುರ್ಲಭಂ ।
ಷಷ್ಟಿಮನ್ವಂತರಂ ಯಾವತ್ತತ್ರ ಭುಕ್ತ್ವಾ ಸುದುರ್ಲಭಾನ್ ॥ ೨೭ ॥

ಭೋಗಾನ್ನಾನಾವಿಧಾನ್ವಿಪ್ರಾ ಋಗ್ದ್ವಿತ್ಯಷ್ಟಕಸಮನ್ವಿತಾನ್ ।
ಶಕ್ರಲೋಕಂ ಪುನಸ್ತಸ್ಮಾದ್ಗಚ್ಛಂತಿ ಸುರಪೂಜಿತಾಃ ॥ ೨೮ ॥

ಮನ್ವಂತರಾಣಾಂ ತತ್ರೈವ ಭುಕ್ತ್ವಾ ಕಾಲಂ ಚ ಸಪ್ತತಿಂ ।
ಭೋಗಾನುಚ್ಚಾವಚಾನ್ದಿವ್ಯಾನ್ಮನಸಃ ಪ್ರೀತಿವರ್ಧನಾನ್ ॥ ೨೯ ॥

---

೨೫. ಬಳಿಕ ವಿಷ್ಣುಭಕ್ತರು ಜರಾಮರಣಗಳ ಭಯವಿಲ್ಲದೆ ವಿಮಾನಗಳಲ್ಲಿ ಕುಳಿತು ಅಲಂಕೃತವಾದ ನಕ್ಷತ್ರಲೋಕಕ್ಕೆ ತೆರಳಿ-

೨೬. ಅಲ್ಲಿ ಎಲ್ಲ ಗುಣಗಳಿಂದ ಪರಿಪೂರ್ಣರಾಗಿ ಐವತ್ತು ಮನ್ವಂತರಗಳಕಾಲ ತಾವು ಅಪೇಕ್ಷಿಸಿದ ಭೋಗಗಳೆಲ್ಲವನ್ನೂ ಅನುಭವಿಸುವರು.

೨೭. ಅನಂತರ ಅಲ್ಲಿಂದ ಹೊರಟು ದುರ್ಲಭವಾದ ದೇವಲೋಕವನ್ನು ಸೇರಿ ಅರವತ್ತು ಮನ್ವಂತರಗಳಕಾಲ ಋಗ್ವೇದದ ದ್ವಿತೀಯಾಷ್ಟಕದಲ್ಲಿ ಹೇಳಿರುವಂತಹ ಬಗೆಬಗೆಯಾದ ಭೋಗಗಳನ್ನನುಭವಿಸುತ್ತಿದ್ದು-

೨೮. ಎಲ್ಲ ದೇವತೆಗಳಿಂದಲೂ ಪೂಜಿತರಾಗಿ ಇಂದ್ರಲೋಕವನ್ನು ಸೇರುವರು.

೨೯. ಅಲ್ಲಿ ಎಪ್ಪತ್ತು ಮನ್ವಂತರಗಳಕಾಲ, ಮನಸ್ಸಿನ ಪ್ರೀತಿಯನ್ನು ಮತ್ತಷ್ಟು ಹೆಚ್ಚಿಸುವಂತಹ ದಿವ್ಯವಾದ ನಾನಾವಿಧವಾದ ಭೋಗಗಳನ್ನನುಭವಿಸಿ-

ತಸ್ಮಾದ್ವ್ರಜಂತಿ ತೇ ಲೋಕಂ ಪ್ರಾಜಾಪತ್ಯಮನುತ್ತಮಂ ।
ಭುಕ್ತ್ವಾ ತತ್ರೇಪ್ಸಿತಾನ್ಭೋಗಾನ್ಸರ್ವಕಾಮಗುಣಾನ್ವಿತಾನ್ ॥ ೩೦ ॥

ಮನ್ವಂತರಮಶೀತಿಂ ಚ ಕಾಲಂ ಸರ್ವಸುಖಪ್ರದಂ ।
ತಸ್ಮಾತ್ಪೈತಾಮಹಂ ಲೋಕಂ ಯಾಂತಿ ತೇ ವೈಷ್ಣವಾ ದ್ವಿಜಾಃ ॥ ೩೧ ॥

ಮನ್ವಂತರಾಣಾಂ ನವತಿ ಕ್ರೀಡಿತ್ವಾ ತತ್ರ ವೈ ಸುಖಂ ।
ಇಹಾಗತ್ಯ ಪುನಸ್ತಸ್ಮಾದ್ವಿಪ್ರಾಣಾಂ ಪ್ರವರೇ ಕುಲೇ ॥ ೩೨ ॥

ಜಾಯಂತೇ ಯೋಗಿನೋ ವಿಪ್ರಾ ವೇದಶಾಸ್ತ್ರಾರ್ಥಪಾರಗಾಃ ।
ಏವಂ ಸರ್ವೇಷು ಲೋಕೇಷು ಭುಕ್ತ್ವಾ ಭೋಗಾನ್ಯಥೇಪ್ಸಿತಾನ್ ॥ ೩೩ ॥

ಇಹಾಗತ್ಯ ಪುನರ್ಯಾಂತಿ ಉಪರ್ಯುಪರಿ ಚ ಕ್ರಮಾತ್ ।
ಸಂಭವೇ ಸಂಭವೇ ತೇ ತು ಶತವರ್ಷಂ ದ್ವಿಜೋತ್ತಮಾಃ ॥ ೩೪ ॥

---

೩೦. ಅನಂತರ ಶ್ರೇಷ್ಠವಾದ ಪ್ರಜಾಪತಿಗಳ ಲೋಕವನ್ನು ಹೊಂದುವರು. ಅಲ್ಲಿ ಎಲ್ಲ ಗುಣಗಳಿಂದ ತುಂಬಿರುವಂತಹ ನಾನಾಭೋಗಗಳನ್ನು ಇಷ್ಟಬಂದಂತೆ ಎಂಬತ್ತು ಮನ್ವಂತರಗಳಕಾಲ ಅನುಭವಿಸಿ ಅನಂತರ

೩೧. ಸರ್ವಸುಖ ಪರಿಪೂರ್ಣವಾದ ಪಿತಾಮಹನ ಲೋಕವನ್ನು ಸೇರುವರು.

೩೨-೩೩. ಅಲ್ಲಿ ತೊಂಬತ್ತು ಮನ್ವಂತರಗಳಕಾಲ ಸುಖವಾಗಿ ವಿಹರಿಸುತ್ತಿದ್ದು ಮತ್ತೆ ಈ ಭೂಲೋಕಕ್ಕೆ ಬಂದು ಶ್ರೇಷ್ಠವಾದ ಬ್ರಾಹ್ಮಣರ ವಂಶದಲ್ಲಿ ಹುಟ್ಟಿ, ವೇದ ವೇದಾಂಗಗಳ ಅರ್ಥವನ್ನು ಚೆನ್ನಾಗಿ ಬಲ್ಲವರಾಗಿ ಯೋಗನಿರತರಾಗಿರುವರು. ಈರೀತಿಯಾಗಿ ಎಲ್ಲ ಲೋಕಗಳಲ್ಲಿಯೂ ತಮ್ಮಿಷ್ಟಬಂದಂತಹ ಸಕಲ ಭೋಗಗಳನ್ನೂ ಅನುಭವಿಸಿ-

೩೪. ಆಮೇಲೆ ಮತ್ತೆ ಈ ಲೋಕಕ್ಕೆ ಬಂದು ಮರಳಿ ಕ್ರಮವಾಗಿ ಮೇಲೆ ಮೇಲೆ ಏರುತ್ತಾ ಹೋಗುವರು. ಎಲೈ ದ್ವಿಜೋತ್ತಮರಿರಾ! ಈರೀತಿ ಭೂಮಿಗೆ ಬಂದಾಗಲೆಲ್ಲಾ ನೂರುವರ್ಷಗಳಕಾಲ ಬದುಕಿರುತ್ತಾ-

ಭುಕ್ತ್ವಾ ಯಥೇಪ್ಸಿತಾನ್ಭೋಗಾನ್ಯಾಂತಿ ಲೋಕಾಂತರಂ ತತಃ ।
ದಶಜನ್ಮ ಯದಾ ತೇಷಾಂ ಕ್ರಮೇಣೈವಂ ಪ್ರಪೂರ್ಯತೇ ॥ ೩೫ ॥

ತದಾ ಲೋಕಂ ಹರೇರ್ದಿವ್ಯಂ ಬ್ರಹ್ಮಲೋಕಾದ್ವ್ರಜಂತಿ ತೇ ।
ಗತ್ವಾ ತತ್ರಾಕ್ಷಯಾನ್ಭೋಗಾನ್ಭುಕ್ತ್ವಾ ಸರ್ವಗುಣಾನ್ವಿತಾನ್ ॥ ೩೬ ॥

ಮನ್ವಂತರಶತಂ ಯಾವಜ್ಜನ್ಮಮೃತ್ಯುವಿವರ್ಜಿತಾಃ ।
ಗಚ್ಛಂತಿ ಭುವನಂ ಪಶ್ಚಾದ್ವಾರಾಹಸ್ಯ ದ್ವಿಜೋತ್ತಮಾಃ ॥ ೩೭ ॥

ದಿವ್ಯದೇಹಾಃ ಕುಂಡಲಿನೋ ಮಹಾಕಾಯಾ ಮಹಾಬಲಾಃ ।
ಕ್ರೀಡಂತಿ ತತ್ರ ವಿಪ್ರೇಂದ್ರಾಃ ಕೃತ್ವಾ ರೂಪಂ ಚತುರ್ಭುಜಂ ॥ ೩೮ ॥

ದಶ ಕೋಟಿಸಹಸ್ರಾಣಿ ವರ್ಷಾಣಾಂ ದ್ವಿಜಸತ್ತಮಾಃ ।
ತಿಷ್ಠಂತಿ ಶಾಶ್ವತೇ ಭಾವೇ ಸರ್ವೈರ್ದೇವೈರ್ನಮಸ್ಕೃತಾಃ ॥ ೩೯ ॥

---

೩೫. ಇಲ್ಲಿಯೂ ತಾವು ಅಪೇಕ್ಷಿಸಪಟ್ಟ ಭೋಗಗಳನ್ನೆಲ್ಲಾ ಅನುಭವಿಸಿ ಅನಂತರ ಬೇರೆ ಲೋಕಗಳನ್ನು ಹೊಂದುವರು. ಹೀಗೆ ಅವರು ಹತ್ತು ಜನ್ಮಗಳನ್ನು ಪಡೆದನಂತರ-

೩೬-೩೭. ಬ್ರಹ್ಮಲೋಕದಿಂದ ನೇರವಾಗಿ ಶ್ರೀಹರಿಯ ದಿವ್ಯವಾದ ಲೋಕವನ್ನು ಸೇರುವರು. ಆಗವರು ಹುಟ್ಟು ಸಾವುಗಳ ಹೆದರಿಕೆಯಿಲ್ಲದೆ, ನೂರು ಮನ್ವಂತರಗಳಕಾಲ ಎಲ್ಲರೀತಿಯ ಗುಣಗಳಿಂದ ಪರಿಪೂರ್ಣವಾದ ಅಕ್ಷಯವಾದ ಭೋಗಗಳನ್ನು ಅನುಭವಿಸುವರು. ಎಲೈ ದ್ವಿಜೋತ್ತಮರಿರಾ ! ಅನಂತರ ವಾರಾಹ ಲೋಕವನ್ನು ಸೇರುವರು.

೩೮. ಅಲ್ಲಿ ಅವರಿಗೆ ದಿವ್ಯವಾದ ದೇಹಗಳುಂಟಾಗುವುವು. ಅಂದವಾದ ಕುಂಡಲಗಳು ಅವರ ಕಿವಿಯಲ್ಲಿ ಶೋಭಿಸುವುವು. ಅವರು ಮಹಾಕಾಯರಾಗಿಯೂ ಮಹಾಬಲಾಢ್ಯರಾಗಿಯೂ ಇರುವರು. ಅವರು ಪ್ರತಿಯೊಬ್ಬರೂ ಚತುರ್ಭುಜರಾಗಿರುವರು.

೩೯. ಎಲೈ ದ್ವಿಜವರ್ಯರಿರಾ ! ಅಲ್ಲಿ ಹತ್ತುಕೋಟಿಸಾವಿರ ವರ್ಷಗಳು (೧೦೦,೦೦,೦೦,೦೦,೦೦೦) ಎಲ್ಲ ದೇವತೆಗಳಿಂದಲೂ ನಮಸ್ಕರಿಸಲ್ಪಡುತ್ತಾ ಶಾಶ್ವತವಾದ ಭಾವದಲ್ಲಿರುವರು.

ತತೋ ಯಾಂತಿ ತು ತೇ ಧೀರಾ ನರಸಿಂಹಗೃಹಂ ದ್ವಿಜಾಃ ।
ಕ್ರೀಡಂತೇ ತತ್ರ ಮುದಿತಾ ವರ್ಷಕೋಟ್ಯಯುತಾನಿ ಚ ॥ ೪೦ ॥

ತದಂತೇ ವೈಷ್ಣವಂ ಯಾಂತಿ ಪುರಂ ಸಿದ್ಧನಿಷೇವಿತಂ ।
ಕ್ರೀಡಂತೇ ತತ್ರ ಸೌಖ್ಯೇನ ವರ್ಷಾಣಾಮಯುತಾನಿ ಚ ॥ ೪೧ ॥

ಬ್ರಹ್ಮಲೋಕೇ ಪುನರ್ವಿಪ್ರಾ ಗಚ್ಛಂತಿ ಸಾಧಕೋತ್ತಮಾಃ ।
ತತ್ರ ಸ್ಥಿತ್ವಾ ಚಿರಂ ಕಾಲಂ ವರ್ಷಕೋಟಿಶತಾನ್ಬಹೂನ್ ॥ ೪೨ ॥

ನಾರಾಯಣಪುರಂ ಯಾಂತಿ ತತಸ್ತೇ ಸಾಧಕೇಶ್ವರಾಃ ।
ಭುಕ್ತ್ವಾ ಭೋಗಾಂಶ್ಚ ವಿವಿಧಾನ್ವರ್ಷಕೋಟ್ಯರ್ಬುದಾನಿ ಚ ॥ ೪೩ ॥

ಅನಿರುದ್ಧಪುರಂ ಪಶ್ಚಾದ್ದಿವ್ಯರೂಪಾ ಮಹಾಬಲಾಃ ।
ಗಚ್ಛಂತಿ ಸಾಧಕವರಾಃ ಸ್ತೂಯಮಾನಾಃ ಸುರಾಸುರೈಃ ॥ ೪೪ ॥

---

೪೦. ಅನಂತರ ವಿಷ್ಣುಭಕ್ತರು ನರಸಿಂಹಲೋಕವನ್ನು ಸೇರಿ ಅಯುತ ಕೋಟಿ ವರ್ಷಗಳು ಅಲ್ಲಿ ಸಂತೋಷದಿಂದ ವಿಹರಿಸುವರು.

೪೧. ಬಳಿಕ ಸಿದ್ಧರಿಂದ ಸೇವಿತವಾದ ವಿಷ್ಣುವಿನ ನಿವಾಸವನ್ನು ಸೇರಿ ಹತ್ತುಸಾವಿರ ವರ್ಷಗಳಕಾಲ ಅಲ್ಲಿ ಸುಖದಿಂದ ವಿಹರಿಸುವರು.

೪೨. ಎಲೈ ವಿಪ್ರರಿರಾ! ಮತ್ತೆ ಆ ಸಾಧಕೋತ್ತಮರು ಬ್ರಹ್ಮಲೋಕಕ್ಕೆ ಹೋಗಿ ನೂರಾರುಕೋಟಿ ವರ್ಷಗಳಕಾಲ ಅಲ್ಲಿ ವಿಹರಿಸುತ್ತಿದ್ದು-

೪೩. ಅನಂತರ ಸಾಧಕೇಶ್ವರರೆನಿಸಿ ನಾರಾಯಣನ ನಿವಾಸವನ್ನು ಸೇರಿ ಅರ್ಬುದಕೋಟಿ ವರ್ಷಗಳಕಾಲ ಒಗೆಬಗೆಯಾದ ಭೋಗಗಳನ್ನೆಲ್ಲಾ ಅನುಭವಿಸುವರು.

೪೪. ಅನಂತರ ಸಾಧಕವರೇಣ್ಯರು ಸುರರಿಂದಲೂ ಅಸುರರಿಂದಲೂ ಸ್ತುತಿಸಲ್ಪಡುತ್ತಾ ದಿವ್ಯವಾದ ರೂಪಗಳನ್ನು ಧರಿಸಿ ಮಹಾಬಲಾಢ್ಯರಾಗಿ ಅನಿರುದ್ಧನ ನಿವಾಸವನ್ನು ಹೊಂದುವರು.

ತತ್ರ ಕೋಟಿಸಹಸ್ರಾಣಿ ವರ್ಷಾಣಾಂ ಚ ಚತುರ್ದಶ ।
ತಿಷ್ಠಂತಿ ವೈಷ್ಣವಾಸ್ತತ್ರ ಜರಾಮರಣವರ್ಜಿತಾಃ ॥ ೪೫ ॥

ಪ್ರದ್ಯುಮ್ನಸ್ಯ ಪುರಂ ಪಶ್ಚಾದ್ಗಚ್ಛಂತಿ ವಿಗತಜ್ವರಾಃ ।
ತತ್ರ ತಿಷ್ಠಂತಿ ತೇ ಪಿಸ್ರಾ ಲಕ್ಷಕೋಟಿಶತತ್ರಯಂ ॥ ೪೬ ॥

ಸ್ವಚ್ಛಂದಗಾಮಿನೋ ಹೃಷ್ಟಾ ಬಲಶಕ್ತಿಸಮನ್ವಿತಾಃ ।
ಗಚ್ಛಂತಿ ಯೋಗಿನಃ ಪಶ್ಚಾದ್ಯತ್ರ ಸಂಕರ್ಷಣಃ ಪ್ರಭುಃ ॥ ೪೭ ॥

ತತ್ರೋಷಿತ್ವಾ ಚಿರಂ ಕಾಲಂ ಭುಕ್ತ್ವಾ ಭೋಗಾನ್ಸಹಸ್ರಶಃ ।
ವಿಶಂತಿ ವಾಸುದೇವೇತಿ ವಿರೂಪಾಖ್ಯೇ ನಿರಂಜನೇ ॥ ೪೮ ॥

ವಿನಿರ್ಮುಕ್ತಾಃ ಪರೇ ತತ್ತ್ವೇ ಜರಾಮರಣವರ್ಜಿತೇ ।
ತತ್ರ ಗತ್ವಾ ವಿಮುಕ್ತಾಸ್ತೇ ಭವೇಯುರ್ನಾತ್ರ ಸಂಶಯಃ ॥ ೪೯ ॥

---

೪೫. ಅಲ್ಲಿ ವೈಷ್ಣವ ಪ್ರಾಣಿಗಳು ಹದಿನಾಲ್ಕುಕೋಟಿಸಾವಿರ ವರ್ಷಗಳ ಕಾಲ ಜರಾಮರಣ ವಿವರ್ಜಿತರಾಗಿ ವಿಹರಿಸುತ್ತಿರುವರು.

೪೬. ಬಳಿಕ ಅವರು ಸಕಲ ಪಾಪಗಳನ್ನೂ ಪರಿಹರಿಸಿಕೊಂಡವರಾಗಿ ಪ್ರದ್ಯುಮ್ನ ನಿವಾಸವನ್ನು ಸೇರಿ ಮುನ್ನೂರುಲಕ್ಷಕೋಟಿ ವರ್ಷಗಳಕಾಲ ಸುಖವಾಗಿರುವರು.

೪೭. ಅನಂತರ ಅವರು ಮಹಾಸಂತೋಷಶಾಲಿಗಳಾಗಿ ಬಲದಿಂದಲೂ ಶಕ್ತಿಯಿಂದಲೂ ಕೂಡಿದವರಾಗಿ ಸ್ವಚ್ಛಂದವಾಗಿ (ತಮ್ಮಿಷ್ಟಬಂದಂತೆ) ಸಂಚರಿಸುತ್ತಾ ಯೋಗವಿದರೆನಿಸಿ ಸಂಕರ್ಷಣನ ನಿವಾಸಕ್ಕೆ ಹೋಗುವರು.

೪೮. ಅಲ್ಲಿ ಯೋಗಿಗಳು ಬಹುಕಾಲ ಸಾವಿರಾರು ಭೋಗಗಳನ್ನು ಅನುಭವಿಸುತ್ತಿದ್ದು ಅನಂತರ ನಾಮರೂಪಗಳೊಂದೂ ಇಲ್ಲದ, ನಿರ್ಲೇಪವಾದ-

೪೯. ಜರಾಮರಣ ವರ್ಜಿತವಾದ ವಾಸುದೇವನೆಂಬ ಆ ಪರತತ್ತ್ವದಲ್ಲಿ ಐಕ್ಯವಾಗಿ ಹೋಗುವರು. ಆ ಸಂಕರ್ಷಣ ನಿವಾಸವನ್ನು ಬಿಟ್ಟನಂತರ ಆ ವೈಷ್ಣವರೆಲ್ಲರೂ ಮುಕ್ತರೇ ಆಗುವರು. ಇದರಲ್ಲಿ ಸಂಶಯವಿಲ್ಲ.

ಏವಂ ಕ್ರಮೇಣ ಭುಕ್ತ್ವಾ ತೇ ಪ್ರಾಪ್ನುವಂತಿ ಮನೀಷಿಣಃ ।
ಮುಕ್ತಿಂ ಚ ಮುನಿಶಾರ್ದೂಲಾ ವಾಸುದೇವಾರ್ಚನೇ ರತಾಃ ॥ ೫೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವೈಷ್ಣವಾನಾಂ ಗತಿಖ್ಯಾಪನಂ
ನಾಮ ಷಡ್ವಿಂಶತ್ಯಧಿಕದ್ವಿಶತತಮೋಽಧ್ಯಾಯಃ

೫೦. ಎಲೈ ಮುನಿಶ್ರೇಷ್ಠರಿರಾ! ಈರೀತಿಯಾಗಿ ಆ ವಾಸುದೇವನ ಅರ್ಚನೆಯಲ್ಲೇ ತೊಡಗಿರುವ ವಿವೇಕಿಗಳು ಕ್ರಮವಾಗಿ ಅನೇಕ ಭೋಗಗಳನ್ನು ಅನುಭವಿಸಿದನಂತರ ಮೋಕ್ಷವನ್ನು ಪಡೆಯುವರು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ವಿಷ್ಣುಭಕ್ತರಿಗೆ ಪ್ರಾಪ್ತವಾಗುವ
ಸದ್ಗತಿವರ್ಣನವೆಂಬ ಇನ್ನೂರಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಅಷ್ಟಾವಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಏಕಾದಶ್ಯಾಮುಭೇ ಪಕ್ಷೇ ನಿರಾಹಾರಃ ಸಮಾಹಿತಃ ।
ಸ್ನಾತ್ವಾ ಸಮ್ಯಗ್ವಿಧಾನೇನ ಧೌತವಾಸಾ ಜಿತೇಂದ್ರಿಯಃ ॥ ೧ ॥

ಸಂಪೂಜ್ಯ ವಿಧಿವದ್ವಿಷ್ಣುಂ ಶ್ರದ್ಧಯಾ ಸುಸಮಾಹಿತಃ ।
ಪುಷ್ಪೈರ್ಗಂಧೈಸ್ತಥಾ ದೀಪೈರ್ಧೂಪೈರ್ನೈವೇದ್ಯಕೈಸ್ತಥಾ ॥ ೨ ॥

ಇನ್ನೂರಇಪ್ಪತ್ತೆಂಟನೆಯ ಅಧ್ಯಾಯವು

೧. ವ್ಯಾಸನು ಹೇಳತೊಡಗಿದನು :—ಎಲೈ ಮುನಿಗಳಿರಾ! ತಿಂಗಳಿಗೆ ಎರಡುಬಾರಿ ಬರುವ ಏಕಾದಶೀ ದಿನಗಳಲ್ಲಿ ಮಾನವನು ನಿರಾಹಾರನಾಗಿರಬೇಕು. ಮತ್ತು ವಿಧಿವತ್ತಾಗಿ ಸ್ವಚ್ಛವಾಗಿ ಸ್ನಾನಮಾಡಿ ಒಗೆದ ಬಟ್ಟೆಗಳನ್ನುಟ್ಟು ಜಿತೇಂದ್ರಿಯನಾಗಿರಬೇಕು.

೨. ಆ ದಿವಸ ಶ್ರದ್ಧೆಯಿಂದ ವಿಧ್ಯುಕ್ತವಾಗಿ ಭಗವಂತನಾದ ವಿಷ್ಣುವನ್ನು ಪುಷ್ಪಗಳಿಂದಲೂ, ಗಂಧಗಳಿಂದಲೂ, ಧೂಪ, ದೀಪ, ನೈವೇದ್ಯಗಳಿಂದಲೂ—

ಉಪಹಾರೈರ್ಬಹುವಿಧೈರ್ಜಪ್ಯೈರ್ಹೋಮಪ್ರದಕ್ಷಿಣೈಃ ।
ಸ್ತೋತ್ರೈರ್ನಾನಾವಿಧೈರ್ದಿವ್ಯೈರ್ಗೀತವಾದ್ಯೈರ್ಮನೋಹರೈಃ ॥ ೩ ॥

ದಂಡವತ್ಪ್ರಣಿಪಾತೈಶ್ಚ ಜಯಶಬ್ದೈಸ್ತಥೋತ್ತಮೈಃ ।
ಏವಂ ಸಂಪೂಜ್ಯ ವಿಧಿವದ್ರಾತ್ರೌ ಕೃತ್ವಾ ಪ್ರಜಾಗರಂ ॥ ೪ ॥

ಕಥಾಂ ವಾ ಗೀತಿಕಾಂ ವಿಷ್ಣೋರ್ಗಾಯನ್ವಿಷ್ಣುಪರಾಯಣಃ ।
ಯಾತಿ ವಿಷ್ಣೋಃ ಪರಂ ಸ್ಥಾನಂ ನರೋ ನಾಸ್ತ್ಯತ್ರ ಸಂಶಯಃ ॥ ೫ ॥

॥ ಮುನಯ ಊಚುಃ ॥

ಪ್ರಜಾಗರೇ ಗೀತಿಕಾಯಾಃ ಫಲಂ ವಿಷ್ಣೋರ್ಮಹಾಮುನೇ ।
ಬ್ರೂಹಿ ತಚ್ಛ್ರೋತುಮಿಚ್ಛಾಮಃ ಪರಂ ಕೌತೂಹಲಂ ಹಿ ನಃ ॥ ೬ ॥

೩. ಮತ್ತು ಇನ್ನೂ ಅನೇಕಬಗೆಯ ಪೂಜಾ ಸಾಮಗ್ರಿಗಳಿಂದಲೂ, ಜಪಗಳಿಂದಲೂ, ಹೋಮಾದಿಗಳಿಂದಲೂ, ಪ್ರದಕ್ಷಿಣೆಗಳಿಂದಲೂ, ವಿಧವಿಧವಾದ ಸ್ತೋತ್ರಗಳಿಂದಲೂ, ಇಂಪಾದ ಸಂಗೀತದಿಂದಲೂ, ವೀಣಾವೇಣು ಮೊದಲಾದ ವಾದ್ಯಗಳಿಂದಲೂ–

೪-೫. ದಂಡಾಕಾರವಾದ ಪ್ರಣಾಮಗಳಿಂದಲೂ ಉತ್ತಮವಾದ ಜಯ ಶಬ್ದಗಳಿಂದಲೂ ಪೂಜೆಮಾಡಿ, ಅನಂತರ ರಾತ್ರಿಯಲ್ಲಿ ಪರಮಾತ್ಮನ ದಿವ್ಯ ಚರಿತ್ರವನ್ನಾಗಲಿ ಇಲ್ಲದಿದ್ದರೆ ಆತನಿಗೆ ಸಂಬಂಧಪಟ್ಟ ಮಂಗಲಗೀತೆ (ಹಾಡು, ಭಜನೆ, ಸ್ತೋತ್ರ ಮೊದಲಾದುವು) ಗಳನ್ನಾಗಲಿ, ಅನನ್ಯಚಿತ್ತನಾಗಿ ಸಂಕೀರ್ತನ ಮಾಡುತ್ತಾ ಜಾಗರಣೆಯನ್ನು ಮಾಡಬೇಕು. ಈರೀತಿಯಾಗಿ ಆಚರಿಸಿದ ಮಾನವನು ಪರಮೋತ್ತಮವಾದ ವಿಷ್ಣುವಿನ ನಿವಾಸವನ್ನು ಸೇರುವುದರಲ್ಲಿ ಸಂದೇಹವಿಲ್ಲ ಎನ್ನಲು

೬. ಆಗ ಮುನಿಗಳು ಆತನನ್ನು ಕುರಿತು "ಎಲೈ ಮಹಾಮುನಿಯೇ! ಏಕಾದಶೀದಿವಸ ಜಾಗರಣೆಮಾಡುತ್ತಾ ವಿಷ್ಣುವನ್ನು ಗೀತಾದಿಗಳಿಂದ ಸ್ತುತಿಸಲು ಯಾವ ಫಲವುಂಟಾಗುವುದು? ಅದನ್ನು ಕೇಳಲು ನಮಗೆ ಬಹುಕುತೂಹಲ ವಾಗಿರುವುದು. ಹೇಳು"

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪ್ರವಕ್ಷ್ಯಾಮ್ಯನುಪೂರ್ವಶಃ ।
ಗೀತಿಕಾಯಾಃ ಫಲಂ ವಿಷ್ಣೋರ್ಜಾಗರೇ ಯದುದಾಹೃತಂ ॥ ೭ ॥

ಅವಂತೀ ನಾಮ ನಗರೀ ಬಭೂವ ಭುವಿ ವಿಶ್ರುತಾ ।
ತತ್ರಾಸ್ತೇ ಭಗವಾನ್ವಿಷ್ಣುಃ ಶಂಖಚಕ್ರಗದಾಧರಃ ॥ ೮ ॥

ತಸ್ಯಾ ನಗರ್ಯಾಃ ಪರ್ಯಂತೇ ಚಾಂಡಾಲೋ ಗೀತಿಕೋವಿದಃ ।
ಸದ್ವೃತ್ತ್ಯೋತ್ಪಾದಿತಧನೋ ಭೃತ್ಯಾನಾಂ ಭರಣೇ ರತಃ ॥ ೯ ॥

ವಿಷ್ಣುಭಕ್ತಃ ಸ ಚಾಂಡಾಲೋ ಮಾಸಿ ಮಾಸಿ ದೃಢವ್ರತಃ ।
ಏಕಾದಶ್ಯಾಂ ಸಮಾಗಮ್ಯ ಸೋಪವಾಸೋಽಥ ಗಾಯತಿ ॥ ೧೦ ॥

ಗೀತಿಕಾ ವಿಷ್ಣುನಾಮಾಂಕಾಃ ಪ್ರಾದುರ್ಭಾವಸಮಾಶ್ರಿತಾಃ ।
ಗಾಂಧಾರಷಡ್ಜನೈಷಾದಸ್ವರಪಂಚಮಧೈವತೈಃ ॥ ೧೧ ॥

---

೭. ಎಂದು ಪ್ರಶ್ನಿಸಿದರು. ಆಗ ವ್ಯಾಸಮುನೀಂದ್ರನು ಹೇಳತೊಡಗಿದನು :—"ಎಲೈ ಮುನಿಶ್ರೇಷ್ಠರಿರಾ! ಕೇಳಿರಿ. ಜಾಗರಣ ಸಮಯದಲ್ಲಿ ವಿಷ್ಣುವಿನ ಗೀತಗಳನ್ನು ಸಂಕೀರ್ತನಮಾಡಲು ಯಾವ ಫಲವುಂಟಾಗುವುದೆಂಬುದನ್ನು ಕ್ರಮವಾಗಿ ನಿಮಗೆ ತಿಳಿಸುವೆನು. ಆಲಿಸಿರಿ :—

೮. ಈ ಭೂಮಂಡಲದಲ್ಲಿ 'ಅವಂತಿ' (ಉಜ್ಜಯಿನಿ) ಯೆಂಬ ಪ್ರಖ್ಯಾತವಾದ ನಗರಿಯೊಂದಿದ್ದಿತು. ಅಲ್ಲಿ ಶಂಖ ಚಕ್ರ ಗದಾಧರನಾದ ಸಾಕ್ಷಾದ್ವಿಷ್ಣುವು ನೆಲೆಸಿರುವನು.

೯. ಆ ನಗರದ ಸಮೀಪದಲ್ಲಿ ಭಗವದ್ಭಜನಾದಿಗಳಲ್ಲಿ ಕುಶಲನಾದ ಚಂಡಾಲನೊಬ್ಬನಿದ್ದನು. ಅವನು ನ್ಯಾಯವಾದ ಮಾರ್ಗದಿಂದ ಹೇರಳವಾಗಿ ಹಣವನ್ನು ಗಳಿಸಿದ್ದನು. ಅನೇಕಮಂದಿ ಆಳುಕಾಳುಗಳನ್ನೂ ಸಲಹುತ್ತಿದ್ದನು.

೧೦-೧೧. ವಿಷ್ಣುಭಕ್ತನಾದ ಚಂಡಾಲನು ಹಿಡಿದ ವ್ರತವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದನಾದುದರಿಂದ ಅವನು ತಿಂಗಳು ತಿಂಗಳು ಏಕಾದಶಿಯ ದಿವಸ ಉಪವಾಸವಿದ್ದು, ವಿಷ್ಣುವಿನ ದಿವ್ಯನಾಮಗಳಿಂದ ಅಂಕಿತವಾದ ಮತ್ತು ಆತನ ಹಲವಾರು ಅವತಾರಗಳ ಕಥೆಗಳನ್ನೊಳಗೊಂಡ ಮಂಗಲಗೀತಗಳನ್ನು

ರಾತ್ರಿಜಾಗರಣೇ ವಿಷ್ಣುಂ ಗಾಥಾಭಿರುಪಗಾಯತಿ ।
ಪ್ರಭಾತೇ ಚ ಪ್ರಣಮ್ಯೇಶಂ ದ್ವಾದಶ್ಯಾಂ ಗೃಹಮೇತ್ಯ ಚ ॥ ೧೨ ॥

ಜಾಮಾತೃಭಾಗಿನೇಯಾಂಶ್ಚ ಭೋಜಯಿತ್ವಾ ಸಕನ್ಯಕಾಃ ।
ತತಃ ಸಪರಿವಾರಸ್ತು ಪಶ್ಚಾದ್ಭುಂಕ್ತೇ ದ್ವಿಜೋತ್ತಮಾಃ ॥ ೧೩ ॥

ಏವಂ ತಸ್ಯಾಸತಸ್ತತ್ರ ಕುರ್ವತೋ ವಿಷ್ಣುಪ್ರೀಣನಂ ।
ಗೀತಿಕಾಭಿರ್ವಿಚಿತ್ರಾಭಿರ್ವಯಃ ಪ್ರತಿಗತಂ ಬಹು ॥ ೧೪ ॥

ಏಕದಾ ಚೈತ್ರಮಾಸೇ ತು ಕೃಷ್ಣೈಕಾದಶಿಗೋಚರೇ ।
ವಿಷ್ಣುಶುಶ್ರೂಷಣಾರ್ಥಾಯ ಯಯೌ ವನಮನುತ್ತಮಂ ॥ ೧೫ ॥

ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮಗಳೆಂಬ ಸಪ್ತಸ್ವರಗಳಿಂದ ಮಧುರವಾಗಿ ಹಾಡುತ್ತಿದ್ದನು.

೧೨. ಮತ್ತು ರಾತ್ರಿಯಲ್ಲಿ ಜಾಗರಣೆಮಾಡುವಾಗ ಇವುಗಳ ಜೊತೆಗೆ ಗಾಥೆ (ಸಣ್ಣಹಾಡು) ಗಳನ್ನೂ ಹಾಡುತ್ತಾ ವಿಷ್ಣುವನ್ನು ಆರಾಧಿಸುತ್ತಿದ್ದನು. ಬೆಳಗಾಗುತ್ತಲೆ ಸ್ವಾಮಿಗೆ ನಮಸ್ಕಾರಮಾಡಿ ಆ ದ್ವಾದಶಿಯದಿವಸ ಮನೆಗೆ ಬಂದು–

೧೩. ಅಳಿಯಂದಿರನ್ನೂ ಸೋದರಳಿಯಂದಿರನ್ನೂ ಮದುವೆಯಾಗದ ಕನ್ಯೆಯರನ್ನೂ ಭೋಜನಮಾಡಿಸಿ ಅನಂತರ ತಾನು ತನ್ನ ಪರಿವಾರದೊಡನೆ ಊಟಮಾಡುತ್ತಿದ್ದನು.

೧೪. ಈರೀತಿಯಾಗಿ ಅವನು ವಿಚಿತ್ರವಾದ ಗೀತಗಳನ್ನು ಹಾಡಿ ಹಾಡಿ ವಿಷ್ಣುವನ್ನು ಸಂತೋಷಗೊಳಿಸುತ್ತಾ ಇರಲು, ಚಂಡಾಲನಿಗೆ ಬಹುವಾಗಿ ವಯಸ್ಸು ಕಳೆದುಹೋಯಿತು.

೧೫. ಒಂದಾನೊಂದುಸಲ ಚಂಡಾಲನು ಚೈತ್ರ ಬಹುಳ ಏಕಾದಶಿಯ ದಿವಸ ಎಂದಿನಂತೆ ವಿಷ್ಣುವನ್ನು ಆರಾಧಿಸಲು ಹೂಗಳನ್ನು ಕೊಯ್ದುಕೊಂಡು ಬರಲು ದಟ್ಟವಾದ ಕಾಡೊಂದನ್ನು ಪ್ರವೇಶಿಸಿದನು.

ವನಜಾತಾನಿ ಪುಷ್ಪಾಣಿ ಗ್ರಹೀತುಂ ಭಕ್ತಿತತ್ಪರಃ ।
ಕ್ಷಿಪ್ರಾತಟೇ ಮಹಾರಣ್ಯೇ ವಿಭೀತಕತರೋರಧಃ ॥ ೧೬ ॥

ದೃಷ್ಟಃ ಸ ರಾಕ್ಷಸೇನಾಥ ಗೃಹೀತಶ್ಚಾಪಿ ಭಕ್ಷಿತುಂ ।
ಚಾಂಡಾಲಸ್ತಮಥೋವಾಚ ನಾದ್ಯ ಭಕ್ಷ್ಯಸ್ತ್ವಯಾ ಹ್ಯಹಂ ॥ ೧೭ ॥

ಪ್ರಾತರ್ಭೋಕ್ಷ್ಯಸಿ ಕಲ್ಯಾಣ ಸತ್ಯಮೇಷ್ಯಾಮ್ಯಹಂ ಪುನಃ ।
ಅದ್ಯ ಕಾರ್ಯಂ ಮಮ ಮಹತ್ತಸ್ಮಾನ್ಮುಂಚಸ್ವ ರಾಕ್ಷಸ ॥ ೧೮ ॥

ಶ್ವಃ ಸತ್ಯೇನ ಸಮೇಷ್ಯಾಮಿ ತತಃ ಖಾದಸಿ ಮಾಮಿತಿ ।
ವಿಷ್ಣುಶುಶ್ರೂಷಣಾರ್ಥಾಯ ರಾತ್ರಿಜಾಗರಣಂ ಮಯಾ ।
ಕಾರ್ಯಂ ನ ವ್ರತವಿಘ್ನಂ ಮೇ ಕರ್ತುಮರ್ಹಸಿ ರಾಕ್ಷಸ ॥ ೧೯ ॥

೧೬-೧೮. ಆತನು ಭಕ್ತಿಯಿಂದ ಪರವಶನಾಗಿ ಕಾಡಿನಲ್ಲಿ ಬೆಳೆದಿರುವ ಬಗೆಬಗೆಯ ಹೂಗಳನ್ನು ಕೊಯ್ಯುವುದಕ್ಕೋಸ್ಕರ ತಿರುಗಾಡುತ್ತಾ ಸಿಪ್ರಾನದಿಯ ಕರೆಯಲ್ಲಿ ಮತ್ತಷ್ಟು ದಟ್ಟವಾಗಿ ಬೆಳೆದಿದ್ದ ಕಾಡಿನ ಒಳಹೊಕ್ಕು ಅಲ್ಲೊಂದು ತಾರೆ ಮರದ ಕೆಳಗೆ ಇದ್ದಂಥಹ ಒಬ್ಬ ರಾಕ್ಷಸನ ಕಣ್ಣಿಗೆ ಬಿದ್ದನು. ಅವನನ್ನು ನೋಡುತ್ತಲೇ ಆ ರಾಕ್ಷಸನು ತಿನ್ನಲು ಆಹಾರ ದೊರೆಯಿತೆಂದು ಹಿಡಿದು ಕೊಂಡನು. ಆಗ ಚಂಡಾಲನು ರಾಕ್ಷಸನನ್ನು ಕುರಿತು “ಎಲೈ ಮಂಗಳಕರ ನಾದ ರಾಕ್ಷಸನೇ! ಇಂದು ನನ್ನನ್ನು ತಿನ್ನದೆ ಬಿಡು. ನಾಳೆ ಬೆಳಿಗ್ಗೆ ತಿನ್ನುವೆ ಯಂತೆ. ಸತ್ಯವಾಗಿಯೂ ಮತ್ತೆ ಇಲ್ಲಿಗೆ ಬರುವೆನು. ಈ ದಿವಸ ನನಗೆ ಭಾರಿಯಾದ ಕೆಲಸವೊಂದಿದೆ. ಆದುದರಿಂದ ಬಿಡು.

೧೯. ನಾಳೆ ಖಂಡಿತವಾಗಿಯೂ ಬರುವೆನು. ಆಗ ನೀನು ನನ್ನನ್ನು ತಿನ್ನಬಹುದು. ಈ ದಿವಸ ವಿಷ್ಣುವನ್ನು ಆರಾಧಿಸುವುದಕ್ಕೋಸ್ಕರ ರಾತ್ರಿಯಲ್ಲಿ ಜಾಗರಣೆಯನ್ನು ನಾನು ಮಾಡಬೇಕು. ಓ ರಾಕ್ಷಸಾ! ನನ್ನೀವ್ರತಕ್ಕೆ ನೀನು ವಿಘ್ನಮಾಡಬಾರದು” ಎಂದನು.

॥ ವ್ಯಾಸ ಉವಾಚ ॥

ತಂ ರಾಕ್ಷಸಃ ಪ್ರತ್ಯುವಾಚ ದಶರಾತ್ರಮಭೋಜನಂ ।
ಮಮಾಭೂದದ್ಯ ಚ ಭವಾನ್ಮಯಾ ಲಬ್ಧೋ ಮತಂಗಜ ॥ ೨೦ ॥

ನ ಮೋಕ್ಷ್ಯೇ ಭಕ್ಷಯಿಷ್ಯಾಮಿ ಕ್ಷುಧಯಾ ಪೀಡಿತೋ ಭೃಶಂ ।
ನಿಶಾಚರವಚಃ ಶ್ರುತ್ವಾ ಮಾತಂಗಸ್ತಮುವಾಚ ಹ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಸ ಸತ್ಯವಚನೈರ್ದೃಢೈಃ ॥ ೨೧ ॥

॥ ಮಾತಂಗ ಉವಾಚ ॥

ಸತ್ಯಮೂಲಂ ಜಗತ್ಸರ್ವಂ ಬ್ರಹ್ಮರಾಕ್ಷಸ ತಚ್ಛೃಣು ।
ಸತ್ಯೇನಾಹಂ ಶಪಿಷ್ಯಾಮಿ ಪುನರಾಗಮನಾಯ ಚ ॥ ೨೨ ॥

ಆದಿತ್ಯಶ್ಚಂದ್ರಮಾ ವಹ್ನಿರ್ವಾಯುರ್ಭೂರ್ದ್ಯೌರ್ಜಲಂ ಮನಃ ।
ಅಹೋರಾತ್ರಂ ಯಮಃ ಸಂಧ್ಯೇ ದ್ವೇ ವಿದುರ್ನರಚೇಷ್ಟಿತಂ ॥ ೨೩ ॥

೨೦-೨೧. ಆಗ ರಾಕ್ಷಸನು ಅವನನ್ನು ಕುರಿತು, “ಎಲೈ ಮಾತಂಗನೇ (ಚಂಡಾಲ) ನಾನು ಊಟಮಾಡಿ ಹತ್ತುದಿನಗಳಾದುವು. ಈದಿವಸ ನೀನು ಸಿಕ್ಕಿರುವೆ. ಆದುದರಿಂದ ಹಸಿವಿಗೆ ಸಿಕ್ಕಿ ಹೆಚ್ಚಾಗಿ ಸಂಕಟಪಡುತ್ತಿರುವ ನಾನು ನಿನ್ನನ್ನು ಬಿಡಲಾರೆನು, ತಿಂದೇ ತಿನ್ನುತ್ತೇನೆ” ಎನ್ನಲು ಆ ಮಾತಂಗನು ಮೃದುವಾದಂತಹ ಸತ್ಯವಾಕ್ಯಗಳಿಂದ ರಾಕ್ಷಸನಿಗೆ ದೃಢಪಡುವಂತೆ ಸಮಾಧಾನಪಡಿಸುತ್ತಾ ಈರೀತಿ ನುಡಿದನು :—

೨೨. “ಎಲೈ ಬ್ರಹ್ಮರಾಕ್ಷಸನೇ! ಕೇಳು. ಈ ಜಗತ್ತೆಲ್ಲವೂ ಸತ್ಯದ ಆಧಾರದಮೇಲೆಯೇ ನಿಂತಿರುವುದು. ಅದೇ ಸತ್ಯದಿಂದಲೇ ನಾನು ಮತ್ತೆ ಇಲ್ಲಿಗೆ ಬರುತ್ತೇನೆಂದು ಪ್ರತಿಜ್ಞೆಮಾಡುವೆನು.

೨೩. ಮನುಷ್ಯನು ಮಾಡುವ ಕೆಲಸಗಳೆಲ್ಲಕ್ಕೂ ಸೂರ್ಯ ಚಂದ್ರರೂ, ಅಗ್ನಿ ವಾಯುಗಳೂ, ಭೂವ್ಯಾಕಾಶಗಳೂ, ನೀರೂ ಮನಸ್ಸೂ, ಹಗಲು ರಾತ್ರಿಗಳೂ, ಪ್ರಾತಸ್ಸಾಯಂಸಂಧ್ಯೆಗಳೂ, ಯಮನೂ, ಸಾಕ್ಷಿಗಳಾಗಿರುವರು.

ಪರದಾರೇಷು ಯತ್ಪಾಪಂ ಯತ್ಪರದ್ರವ್ಯಹಾರಿಷು ।
ಯಚ್ಚ ಬ್ರಹ್ಮಹನಃ ಪಾಪಂ ಸುರಾಪೇ ಗುರುತಲ್ಪಗೇ ॥ ೨೪ ॥

ವಂಧ್ಯಾಪತೇಶ್ಚ ಯತ್ಪಾಪಂ ಯತ್ಪಾಪಂ ವೃಷಲೀಪತೇಃ ।
ಯಚ್ಚ ದೇವಲಕೇ ಪಾಪಂ ಮತ್ಸ್ಯಮಾಂಸಾಶಿನಶ್ಚ ಯತ್ ॥ ೨೫ ॥

ಕ್ರೋಡಮಾಂಸಾಶಿನೋ ಯಚ್ಚ ಕೂರ್ಮಮಾಂಸಾಶಿನಶ್ಚ ಯತ್ ।
ವೃಥಾ ಮಾಂಸಾಶಿನೋ ಯಚ್ಚ ಪೃಷ್ಠಮಾಂಸಾಶಿನಶ್ಚ ಯತ್ ॥ ೨೬ ॥

ಕೃತಘ್ನೇ ಮಿತ್ರಘಾತಕೇ ಯತ್ಪಾಪಂ ದಿಧಿಷೂಪತೌ ।
ಸೂತಕಸ್ಯ ಚ ಯತ್ಪಾಪಂ ಯತ್ಪಾಪಂ ಕ್ರೂರಕರ್ಮಣಃ ॥ ೨೭ ॥

---

೨೪. ನಾನೀಗ ಶಪಥಮಾಡಿದಂತೆ ನಿನ್ನ ಬಳಿಗೆ ಬರದೇ ಇದ್ದರೆ, ಆಗ ನನಗೆ ಪರಸ್ತ್ರೀಗಮನವನ್ನು ಮಾಡಿದರೆ ಯಾವ ಪಾಪವುಂಟಾಗುವುದೋ, ಪರ ದ್ರವ್ಯವನ್ನಪಹರಿಸಿದರೇನು ಪಾಪ ಸಂಘಟಿಸುವುದೋ, ಬ್ರಹ್ಮಹತ್ಯೆ ಮಾಡಿದವ ನಿಗೂ, ಮದ್ಯಪಾನ ಮಾಡಿದವನಿಗೂ, ಗುರುಪತ್ನೀ ಸಮಾಗಮ ಮಾಡಿದವ ನಿಗೂ ಯಾವ ಯಾವ ಪಾಪಗಳುಂಟಾಗುವುವೋ ಅವೆಲ್ಲವೂ ಸಂಭವಿಸಲಿ.

೨೫. ವಂಧ್ಯಾಪತಿಯಾದವನಿಗೆ (ಮಕ್ಕಳಿಲ್ಲದುದರಿಂದ ಪಿತೃಋಣವು ಪರಿಹಾರವಾಗದಿರುವುದರಿಂದ) ಏನು ಪಾಪವೋ, ಮೈನೆರೆದ ಹುಡುಗಿಯನ್ನು ಮದುವೆಯಾಗಲು ಏನು ಪಾಪವೋ, ಜೀವನವನ್ನು ಸಾಗಿಸುವುದಕ್ಕಾಗಿ ದೇವರ ಪೂಜೆಮಾಡುವವನಿಗೆ ಏದು ಪಾಪವೋ, ಮೀನಿನ ಮಾಂಸವನ್ನು ತಿಂದರೆ ಏನು ಪಾಪವೋ ಅವೆಲ್ಲವೂ ನನಗುಂಟಾಗಲಿ.

೨೬. ಯಾವನು ಹಂದಿಯ ಮಾಂಸವನ್ನು ತಿನ್ನುವನೋ, ಯಾವನು ಆಮೆಯ ಮಾಂಸವನ್ನು ತಿನ್ನುವನೋ, ಯಾವನು ನಿಷ್ಕಾರಣವಾಗಿ ಮಾಂಸ ವನ್ನು ತಿನ್ನುವನೋ, ಯಾವನು ಬೆನ್ನಬಳಿಯ ಮಾಂಸವನ್ನು ತಿನ್ನುವನೋ ಇವರೆಲ್ಲರಿಗೂ ಯಾವ ಪಾಪಗಳುಂಟಾಗುವುವೋ ಅವೆಲ್ಲವೂ ನನಗೆ ಸಂಘಟಿಸಲಿ.

೨೭. ಕೃತಘ್ನನಿಗೂ, ಮಿತ್ರದ್ರೋಹಿಗೂ, ಪುನರ್ಭೂಪತಿ (ಮದುವೆ ಯಾದ ಗಂಡನನ್ನು ಬಿಟ್ಟ ಹೆಂಗಸನ್ನು ಮದುವೆಯಾದವನು) ಗೂ, ಸೂತಕ ದಲ್ಲಿರುವನಿಗೂ, ಕ್ರೂರ ಕರ್ಮಾಸಕ್ತನಿಗೂ ಏನೇನು ಪಾಪಗಳುಂಟೋ ಅವು ಗಳೆಲ್ಲವೂ ನನಗಾಗಲಿ.

ಕೃಪಣಸ್ಯ ಚ ಯತ್ಪಾಪಂ ಯಚ್ಚ ವಂಧ್ಯಾತಿಥೇರಪಿ ।
ಅಮಾವಾಸ್ಯಾಷ್ಟಮೀ ಷಷ್ಠೀ ಕೃಷ್ಣಶುಕ್ಲಚತುರ್ದಶೀ ॥ ೨೮ ॥

ತಾಸು ಯದ್ಗಮನಾತ್ಪಾಪಂ ಯದ್ವಿಪ್ರೋ ವ್ರಜತಿ ಸ್ತ್ರಿಯಂ ।
ರಜಸ್ವಲಾಂ ತಥಾ ಪಶ್ಚಾಚ್ಛ್ರಾದ್ಧಂ ಕೃತ್ವಾ ಸ್ತ್ರಿಯಂ ವ್ರಜೇತ್ ॥ ೨೯ ॥

ಸರ್ವಸ್ವಸ್ನಾತಭೋಜ್ಯಾನಾಂ ಯತ್ಪಾಪಂ ಮಲಭೋಜನೇ ।
ಮಿತ್ರಭಾರ್ಯಾಂ ಗಚ್ಛತಾಂ ಚ ಯತ್ಪಾಪಂ ಪಿಶುನಸ್ಯ ಚ ॥ ೩೦ ॥

ದಂಭಮಾಯಾನುರಕ್ತೇ ಚ ಯತ್ಪಾಪಂ ಮಧುಘಾತಿನಃ ।
ಬ್ರಾಹ್ಮಣಸ್ಯ ಪ್ರತಿಶ್ರುತ್ಯ ಯತ್ಪಾಪಂ ತದಯಚ್ಛತಃ ॥ ೩೧ ॥

೨೮-೨೯. ಕೃಪಣನಿಗೆ ಏನು ಪಾಪವೋ, ಮಕ್ಕಳಿಲ್ಲದವನ ಮನೆಯಲ್ಲಿ ಅತಿಥಿಯಾದವನಿಗೆ (ಊಟಮಾಡಿದವನಿಗೆ) ಏನು ಪಾಪವೋ, ಅಮಾವಾಸ್ಯಾ. ಅಷ್ಟಮೀ. ಷಷ್ಠೀ, ಶುಕ್ಲ ಮತ್ತು ಕೃಷ್ಣಪಕ್ಷಗಳ ಚತುರ್ದಶಿಗಳು ಈ ತಿಥಿಗಳಲ್ಲಿ ಸ್ತ್ರೀಸಮಾಗಮನವನ್ನು ವಿಪ್ರನಾದವನು ಮಾಡಿದರೆ ಏನು ಪಾಪವೋ ಮತ್ತು ಬ್ರಾಹ್ಮಣನು ರಜಸ್ವಲೆಯ ಸಹವಾಸ ಮಾಡಿದರೆ ಏನು ಪಾಪವೋ, ಶ್ರಾದ್ಧವನ್ನು ಮಾಡಿದವನು ಸ್ತ್ರೀಸಂಗವನ್ನು ಮಾಡಿದರೆ ಏನು ಪಾಪವೋ ಅವೆಲ್ಲವೂ ನನಗೆ ಸಂಭವಿಸಲಿ.

೩೦. ಯಾರು ಸರ್ವಸ್ವವನ್ನೂ ದಾನಮಾಡಿ, ವ್ರತಗಳೆಲ್ಲವನ್ನೂ ಮಾಡಿ ಮುಗಿಸಿ ಶುದ್ಧಾತ್ಮರೆನಿಸಿರುವರೋ ಅಂಥಹವರು ಅಮೇಧ್ಯವನ್ನು ಪ್ರಾಶನ ಮಾಡಿದರೆ ಏನು ಪಾಪವುಂಟಾಗುವುದೋ, ಸ್ನೇಹಿತನ ಹೆಂಡತಿಯನ್ನು ಕೆಡಿಸಿದವನಿಗೆ ಏನು ಪಾಪವೋ, ಚಾಡಿಹೇಳುವವನಿಗೆ ಏನು ಪಾಪವೋ ಅವುಗಳೆಲ್ಲವೂ ನನಗೆ ಉಂಟಾಗಲಿ.

೩೧. ಡಂಭಾಚಾರನಿರತನಾದವನಿಗೂ, ಮಾಯಗಾರನಿಗೂ, ಜೇನು ಇಳಿಸುವವನಿಗೂ, ಬ್ರಾಹ್ಮಣನಿಗೆ ಕೊಡುತ್ತೇನೆಂದು ಮಾತುಕೊಟ್ಟು ಬಳಿಕ ತಪ್ಪಿದವನಿಗೂ ಏನೇನು ಪಾಪಗಳು ಹೇಳಲ್ಪಟ್ಟಿವೆಯೋ ಅವು ನನಗೆ ಘಟಿಸಲಿ.

ಯಚ್ಚ ಕನ್ಯಾನೃತೇ ಪಾಪಂ ಯಚ್ಚ ಗೋಽಶ್ವತರಾನೃತೇ ।
ಸ್ತ್ರೀಬಾಲಹಂತುರ್ಯತ್ಪಾಪಂ ಯಚ್ಚ ಮಿಥ್ಯಾಭಿಭಾಷಿಣಃ ॥ ೩೨ ॥

ದೇವವೇದದ್ವಿಜನೃಪಪತ್ರಮಿತ್ರಾಸತೀಸ್ತ್ರಿಯಃ ।
ಯಚ್ಚ ನಿಂದಯತಾಂ ಪಾಪಂ ಗುರುಮಿಥ್ಯಾಪಚಾರತಃ ॥ ೩೩ ॥

ಅಗ್ನಿತ್ಯಾಗಿಷು ಯತ್ಪಾಪಮಗ್ನಿದಾಯಿಷು ಯದ್ವನೇ ।
ಗೃಹೇಷ್ವಾತ್ಯಪಾತಕೇ ಯಚ್ಚ ಯದ್ಗೋಘ್ನೇ ಯದ್ದ್ವಿಜಾಧಮೇ ॥ ೩೪ ॥

ಯತ್ಪಾಪಂ ಪರಿವಿತ್ತೇ ಚ ಯತ್ಪಾಪಂ ಪರಿವೇದಿನಃ ।
ತಯೋರ್ದಾತೃಗ್ರಹೀತ್ರೋಶ್ಚ ಯತ್ಪಾಪಂ ಭ್ರೂಣಘಾತಿನಃ ॥ ೩೫ ॥

---

೩೨. ಯಾರು ಕನ್ಯೆಯ ವಿಷಯವಾಗಿ ಸುಳ್ಳು ಹೇಳುವರೋ, ಯಾರು ಹಸುವಿನ ವಿಷಯವಾಗಿಯೂ, ಹೇಸರಗತ್ತೆಯ ವಿಷಯವಾಗಿಯೂ, ಸುಳ್ಳು ಹೇಳುವರೋ ಮತ್ತು ಯಾರು ಸ್ತ್ರೀಯರನ್ನೂ ಮಕ್ಕಳನ್ನೂ ಕೊಲ್ಲುವರೋ, ಯಾರು ಸರ್ವದಾ ಸುಳ್ಳೇ ಆಡುತ್ತಿರುವರೋ ಅವರೆಲ್ಲರಿಗೂ ಉಂಟಾಗುವ ಪಾಪಗಳೇ ನನಗೂ ಉಂಟಾಗಲಿ.

೩೩. ಯಾರು ದೇವರನ್ನೂ, ವೇದಗಳನ್ನೂ, ಬ್ರಾಹ್ಮಣರನ್ನೂ, ರಾಜರನ್ನೂ, ವಾಹನಗಳನ್ನೂ, ಸ್ನೇಹಿತರನ್ನೂ, ಪತಿವ್ರತಾಸ್ತ್ರೀಯರನ್ನೂ ನಿಂದಿಸುವರೋ, ಯಾರು ಗುರುವಿನ ವಿಷಯವಾಗಿ ಇಲ್ಲದ ದೂರನ್ನು ಹೊರಿಸುವರೋ ಅವರೆಲ್ಲರಿಗೂ ಉಂಟಾಗತಕ್ಕ ಪಾಪಗಳೆಲ್ಲವೂ ನನಗೆ ಉಂಟಾಗಲಿ.

೩೪. ಅಗ್ನಿಹೋತ್ರವನ್ನು ತ್ಯಜಿಸಿದವರಿಗೂ, ಕಾಡಿಗೆ ಕಿಚ್ಚಿಟ್ಟವರಿಗೂ, ಮನೆಗೆ ಬೆಂಕಿ ಹಚ್ಚಿದವರಿಗೂ, ಗೋಹತ್ಯೆ ಮಾಡಿದವರಿಗೂ, ದ್ವಿಜಾಧಮನಿಗೂ ಏನೇನು ಪಾಪಗಳಿವೆಯೋ ಅವೆಲ್ಲವೂ ನನಗೆ ಗಂಟುಬೀಳಲಿ.

೩೫. ಪರಿವೇತ್ತೃವಿಗೂ (ಅಣ್ಣನಿಗೆ ಮದುವೆಯಾಗದೆಯೇ ತಾನು ಮದುವೆಯಾದ ತಮ್ಮ) ಪರಿವಿತ್ತನಿಗೂ (ಅಂಥಹ ತಮ್ಮನ ಅಣ್ಣ) ಅಂಥವರ ಕೈಲಿ ದಾನಹಿಡಿದವರಿಗೂ ಮತ್ತು ದಾನಕೊಟ್ಟವನಿಗೂ, ಭ್ರೂಣಹತ್ಯೆ ಮಾಡಿದವನಿಗೂ ಏನೇನು ಪಾಪಗಳು ಸಂಘಟಿಸುವುವೋ ಅವು ನನಗೆ ಉಂಟಾಗಲಿ.

ಕಿಂ ಚಾತ್ರ ಬಹುಭಿಃ ಪ್ರೋಕ್ತೈಃ ಶಪಥೈಸ್ತವ ರಾಕ್ಷಸ ।
ಶ್ರೂಯತಾಂ ಶಪಥಂ ಭೀಮಂ ದುರ್ವಾಚ್ಯಮಪಿ ಕಥ್ಯತೇ ॥ ೩೬ ॥

ಸ್ವಕನ್ಯಾಜೀವಿನಃ ಪಾಪಂ ಗೂಢಸತ್ಯೇನ ಸಾಕ್ಷಿಣಃ ।
ಅಜಾಜ್ಯಯಾಜಕೇ ಷಂಢೇ ಯತ್ಪಾಪಂ ಶ್ರವಣೇಽಧಮೇ ॥ ೩೭ ॥

ಪ್ರವ್ರಜ್ಯಾವಸಿತೇ ಯಚ್ಚ ಬ್ರಹ್ಮಚಾರಿಣಿ ಕಾಮುಕೇ ।
ಏತೈಸ್ತು ಪಾಪೈರ್ಲಿಪ್ಯೇಽಹಂ ಯದಿ ನೈಷ್ಯಾಮಿ ತೇಽಂತಿಕಂ ॥ ೩೮ ॥

॥ ವ್ಯಾಸ ಉವಾಚ ॥

ಮಾತಂಗವಚನಂ ಶ್ರುತ್ವಾ ವಿಸ್ಮಿತೋ ಬ್ರಹ್ಮರಾಕ್ಷಸಃ ।
ಪ್ರಾಹ ಗಚ್ಛಸ್ವ ಸತ್ಯೇನ ಸಮಯಂ ಚೈವ ಪಾಲಯ ॥ ೩೯ ॥

---

೩೬. ಎಲೈ ರಾಕ್ಷಸನೇ! ಹೀಗೆಯೇ ಹೆಚ್ಚು ಆಣೆಗಳನ್ನು ಇಡುತ್ತಾ ಇರುವುದರಿಂದ ಏನು ಪ್ರಯೋಜನ? ಈ ಆಣೆಯಿಟ್ಟುಕೊಳ್ಳುವೆನು, ಕೇಳು. ಬಾಯಲ್ಲಿ ಹೇಳಲಾಗದಷ್ಟು ಘೋರವಾಗಿದ್ದರೂ ಹೇಳುವೆನು.

೩೭. ಯಾವನು ತನ್ನ ಕನ್ಯೆಯನ್ನು ಮಾರಿಕೊಂಡು ಜೀವಿಕೆಯನ್ನು ಸಾಗಿಸುವನೋ, ಯಾವನು ಸತ್ಯಾಂಶವನ್ನು ಮರೆಮಾಚಿ ಸಾಕ್ಷ್ಯಹೇಳುವನೋ, ಯಾವನು ಅರ್ಹತೆಯಿಲ್ಲದವನ ಕೈಲಿ ಯಾಗಾದಿಗಳನ್ನು ಮಾಡಿಸುವನೋ, ಯಾವನು ಷಂಢನೋ, ಯಾವನು ವೇದಬಾಹ್ಯವಾದ ಧರ್ಮದಲ್ಲಿ ಸನ್ಯಾಸ ದೀಕ್ಷೆ ವಹಿಸಿರುವನೋ, ಯಾವನು ಅಧಮನೋ–

೩೮. ಯಾವನು ಸನ್ಯಾಸಿಯಾಗಿದ್ದು ಅನಂತರ ಭ್ರಷ್ಟನಾಗಿರುವನೋ, ಯಾವನು ಬ್ರಹ್ಮಚರ್ಯದಲ್ಲಿದ್ದರೂ ಗೂಢವಾಗಿ ಕಾಮಲಂಪಟನಾಗಿರುವನೋ- ಈ ಅಧಮರೆಲ್ಲರಿಗೂ ಯಾವ ಯಾವರೀತಿಯ ಪಾಪಗಳು ಉಂಟಾಗುವುವೋ ಅವೆಲ್ಲವೂ ಕೂಡ, ನಾನು ಹೇಳಿದಂತೆ ನಿನ್ನ ಬಳಿಗೆ ಬರದೆ ಇದ್ದರೆ–ನನಗೆ ಉಂಟಾಗಲಿ ಎಂದನು.

೩೯. ಎಲೈ ಮುನಿಗಳಿರಾ! ಈರೀತಿಯಾಗಿ ಚಂಡಾಲನು ಆಣೆಯಿಟ್ಟು ಕೊಂಡುದನ್ನು ಕೇಳಿ ಬ್ರಹ್ಮರಾಕ್ಷಸನಿಗೆ ಅತ್ಯಾಶ್ಚರ್ಯವುಂಟಾಯಿತು. ಆಗವನು

ಇತ್ಯುಕ್ತಃ ಕುಣಪಾಶೇನ ಶ್ವಪಾಕಃ ಕುಸುಮಾನಿ ತು ।
ಸಮಾದಾಯಾಗಮಚ್ಚೈವ ವಿಷ್ಣೋಃ ಸ ನಿಲಯಂ ಗತಃ　　॥ ೪೦ ॥

ತಾನಿ ಪ್ರಾದಾದ್ಬ್ರಾಹ್ಮಣಾಯ ಸೋಽಪಿ ಪ್ರಕ್ಷಾಲ್ಯ ಚಾಂಭಸಾ ।
ವಿಷ್ಣುಮಭ್ಯರ್ಚ್ಯ ನಿಲಯಂ ಜಗಾಮ ಸ ತಪೋಧನಾಃ　　॥ ೪೧ ॥

ಸೋಽಪಿ ಮಾತಂಗದಾಯಾದಃ ಸೋಪವಾಸಸ್ತು ತಾಂ ನಿಶಾಂ ।
ಗಾಯನ್ಸ್ಥಿ ಬಾಹ್ಯಭೂಮಿಷ್ಠಃ ಪ್ರಜಾಗರಮುಪಾಕರೋತ್　　॥ ೪೨ ॥

ಪ್ರಭಾತಾಯಾಂ ತು ಶರ್ವರ್ಯಾಂ ಸ್ನಾತ್ವಾ ದೇವಂ ನಮಸ್ಯ ಚ ।
ಸತ್ಯಂ ಸ ಸಮಯಂ ಕರ್ತುಂ ಪ್ರತಸ್ಥೇ ಯತ್ರ ರಾಕ್ಷಸಃ　　॥ ೪೩ ॥

ಚಂಡಾಲನನ್ನು ಕುರಿತು "ಹೋಗಿ ಬಾ, ನೀನಿತ್ತ ಸತ್ಯವಚನವನ್ನು ಉಳಿಸಿಕೋ" ಎಂದು ಹೇಳಿ ಅವನನ್ನು ಬಿಟ್ಟನು.

೪೦. ಈರೀತಿಯಾಗಿ ಮಾಂಸಪ್ರಿಯನಾದ ಬ್ರಹ್ಮರಾಕ್ಷಸನಿಂದ ಬಿಡುಗಡೆಹೊಂದಿದ ಚಂಡಾಲನು ಹೂವುಗಳನ್ನು ಕೊಯ್ದುಕೊಂಡು ವಿಷ್ಣುದೇವಾಲಯಕ್ಕೆ ಹೊರಟುಬಂದನು.

೪೧. ಅನಂತರ ಅಲ್ಲಿದ್ದ ಬ್ರಾಹ್ಮಣನಿಗೆ ತಾನು ತಂದಿದ್ದ ಹೂವುಗಳನ್ನು ಕೊಡಲು, ಬ್ರಾಹ್ಮಣನು ಅವುಗಳನ್ನು ನೀರಿನಿಂದ ಚೆನ್ನಾಗಿ ಚುಮುಕಿಸಿ (ತೊಳೆದು) ವಿಷ್ಣುವಿಗ್ರಹವನ್ನು ಪೂಜೆಮಾಡಿ ಬಳಿಕ ತನ್ನ ಮನೆಗೆ ಹೊರಟುಹೋದನು.

೪೨. ಇತ್ತಲಾಗಿ ಚಂಡಾಲನು ಉಪವಾಸಪಾಗಿದ್ದು ರಾತ್ರಿಯೆಲ್ಲವೂ, ದೇವಸ್ಥಾನದ ಹೊರಗೆ ಕುಳಿತು ಜಾಗರಣೆಮಾಡುತ್ತಾ ವಿಷ್ಣುವಿನ ಕೀರ್ತನೆಗಳನ್ನು ಹಾಡುತ್ತಿದ್ದನು.

೪೩. ಬಳಿಕ ಆ ರಾತ್ರಿ ಕಳೆದು ಬೆಳಗಾಗುತ್ತಲೇ ಸ್ನಾನಮಾಡಿ ದೇವರಿಗೆ ನಮಸ್ಕಾರ ಮಾಡಿದನಂತರ ತಾನು ಆಡಿದ ಮಾತನ್ನು ಉಳಿಸಿಕೊಳ್ಳಲು ರಾಕ್ಷಸನು ಇರುವಕಡೆಗೆ ಹೊರಟನು.

ತಂ ವ್ರಜಂತಂ ಪಥಿ ನರಃ ಪ್ರಾಹ ಭದ್ರ ಕ್ವ ಗಚ್ಛಸಿ ।
ಸ ತಥಾಕಥಯತ್ಸರ್ವಂ ಸೋಽಪ್ಯೇನಂ ಪುನರಬ್ರವೀತ್ ॥ ೪೪ ॥

ಧರ್ಮಾರ್ಥಕಾಮಮೋಕ್ಷಾಣಾಂ ಶರೀರಂ ಸಾಧನಂ ಯತಃ ।
ಮಹತಾ ತು ಪ್ರಯತ್ನೇನ ಶರೀರಂ ಪಾಲಯೇದ್ಬುಧಃ ॥ ೪೫ ॥

ಜೀವಧರ್ಮಾರ್ಥಸುಖಂ ನರಸ್ತಥಾಪ್ನೋತಿ ಮೋಕ್ಷಗತಿಮಗ್ರ್ಯಾಂ ।
ಜೀವನ್ಕೀರ್ತಿಮುಪೈತಿ ಚ ಭವತಿ ಮೃತಸ್ಯ ಕಾ ಕಥಾ ಲೋಕೇ ॥ ೪೬ ॥

ಮಾತಂಗಸ್ತದ್ವಚಃ ಶ್ರುತ್ವಾ ಪ್ರತ್ಯುವಾಚಾಥ ಹೇತುಮತ್ ॥ ೪೭ ॥

॥ ಮಾತಂಗ ಉವಾಚ ॥

ಭದ್ರ ಸತ್ಯಂ ಪುರಸ್ಕೃತ್ಯ ಗಚ್ಛಾಮಿ ಶಪಥಾಃ ಕೃತಾಃ ॥ ೪೮ ॥

---

೪೪. ಹಾಗೆ ಹೊರಟು ಬರುತ್ತಿರುವಾಗ ದಾರಿಯಲ್ಲೊಬ್ಬನು ಸಿಕ್ಕಿ "ಅಪ್ಪಾ! ಎಲ್ಲಿಗೆ ಹೋಗುವೆ" ಎಂದು ಪ್ರಶ್ನಿಸಿದನು. ಆಗ ಚಂಡಾಲನು ಸಂಗತಿಯೆಲ್ಲವನ್ನೂ ತಿಳಿಸಲು ಆ ಮನುಷ್ಯನು ಇಂತೆಂದನು.

೪೫. "ಈ ಶರೀರವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಿಗೆ ಕಾರಣವಾದುದು. ಆದುದರಿಂದ ಪ್ರಾಜ್ಞನಾದವನು ಅದನ್ನು ಪ್ರಯತ್ನಪಟ್ಟಾದರೂ ಕಾಪಾಡಿಕೊಳ್ಳಬೇಕು.

೪೬. ಮನುಷ್ಯನು ಬದುಕಿದ್ದರೆ ಆಗ ಅವನು ಧರ್ಮವನ್ನೂ ಅರ್ಥವನ್ನೂ ಸುಖಗಳನ್ನೂ (ಕಾಮ) ಕೊನೆಗೆ ಶ್ರೇಷ್ಠವಾದ ಮೋಕ್ಷವನ್ನೂ ಹೊಂದುವನು. ಬದುಕಿದ್ದರೇನೇ ಮಾನವನು ಕೀರ್ತಿಯನ್ನೂ ಹೊಂದುವನು. ಸತ್ತ ಮೇಲೆ ಈ ಜಗತ್ತಿನಲ್ಲಿ ಅವನ ಸುದ್ದಿಯು ಎಲ್ಲಿರುವುದು?" ಎಂದನು.

೪೭-೪೮. ಇದನ್ನು ಕೇಳಿ ಚಂಡಾಲನು ಯುಕ್ತಿಯುಕ್ತವಾದ ಮಾತನ್ನು ಆಡಿದನು. "ಎಲೈ, ಸೌಮ್ಯನೇ, ನಾನು ಸತ್ಯವನ್ನು ಮುಂದಿಟ್ಟು ಕೊಂಡು ಹೊರಟಿದೇನೆ. ಬೇಕಾದಷ್ಟು ಪ್ರತಿಜ್ಞೆಗಳನ್ನೂ ಮಾಡಿದೇನೆ" ಎನ್ನಲು-

॥ ವ್ಯಾಸ ಉವಾಚ ॥

ತಂ ಭೂಯಃ ಪ್ರತ್ಯುವಾಚಾಥ ಕಿಮೇವಂ ಮೂಢಧೀರ್ಭವಾನ್ ।
ಕಿಂ ನ ಶ್ರುತಂ ತ್ವಯಾ ಸಾಧೋ ಮನುನಾ ಯದುದೀರಿತಂ ॥ ೪೯ ॥

ಗೋಸ್ತ್ರೀದ್ವಿಜಾನಾಂ ಪರಿರಕ್ಷಣಾರ್ಥಂ
ವಿವಾಹಕಾಲೇ ಸುರತಪ್ರಸಂಗೇ ।
ಪ್ರಾಣಾತ್ಯಯೇ ಸರ್ವಧನಾಪಹಾರೇ
ಪಂಚಾನೃತಾನ್ಯಾಹುರಪಾತಕಾನಿ ॥ ೫೦ ॥

ಧರ್ಮವಾಕ್ಯಂ ನ ಚ ಸ್ತ್ರೀಷು ನ ವಿವಾಹೇ ತಥಾ ರಿಪೌ ।
ವಂಚನೇ ಚಾರ್ಥಹಾನೌ ಚ ಸ್ವನಾಶೇಽನೃತಕೇ ತಥಾ ।
ಏವಂ ತದ್ವಾಕ್ಯಮಾಕರ್ಣ್ಯ ಮಾತಂಗಃ ಪ್ರತ್ಯುವಾಚ ಹ ॥ ೫೧ ॥

---

೪೯. ಆ ದಾರಿಯಲ್ಲಿ ಸಿಕ್ಕಿದವನು ಚಂಡಾಲನನ್ನು ಕುರಿತು “ ಇದೇಕೆ ನೀನು ಪೆಚ್ಚನಂತಾಡುವೆ ? ಎಲೈ ಸಾಧುವೆ ? ಮನುವು ಹೇಳಿದ ಮಾತನ್ನು ಕೇಳಿಲ್ಲವೆ ?

೫೦. (1) “ ಗೋವುಗಳನ್ನೂ, ಸ್ತ್ರೀಯರನ್ನೂ, ಬ್ರಾಹ್ಮಣರನ್ನೂ ಸಂರಕ್ಷಿಸಬೇಕಾದ ಸಂದರ್ಭದಲ್ಲಿಯೂ, (2) ವಿವಾಹ ಸಮಯದಲ್ಲಿಯೂ, (3) ಸುರತ ಸಮಯದಲ್ಲಿಯೂ, (4) ಪ್ರಾಣಹೋಗುವ ಸಂದರ್ಭದಲ್ಲಿಯೂ. (5) ತನ್ನ ಸರ್ವಸ್ವವೂ ಹಾಳಾಗುವ ಪ್ರಸಂಗದಲ್ಲಿಯೂ ಹೇಳತಕ್ಕುದಾದ ಐದು ವಿಧವಾದ ಸುಳ್ಳಿಗೆ ದೋಷವಿಲ್ಲ ” ಎಂಬ ಮಾತು.

೫೧. ನಿನಗೆ ತಿಳಿಯದೆ ? ಅದೂ ಅಲ್ಲದೆ, “ ಸ್ತ್ರೀಯರಲ್ಲಿಯೂ, ವಿವಾಹ ಸಮಯದಲ್ಲಿಯೂ, ಶತ್ರುವಿನಲ್ಲಿಯೂ, ಮೋಸದ ಪ್ರಕರಣದಲ್ಲಿಯೂ, ದುಡ್ಡು ಹಾಳಾಗುವಾಗಲೂ, ಆತ್ಮನಾಶದ ಸಂದರ್ಭದಲ್ಲಿಯೂ, ಸುಳ್ಳುಹೇಳಬೇಕಾದ ಕಡೆಯೂ, ಧರ್ಮಸಮ್ಮತವಾದ (ಸತ್ಯ) ವಾಕ್ಯಗಳನ್ನಾಡಬಾರದು ಎನ್ನುವುದು ನಿನಗೆ ಗೊತ್ತಿಲ್ಲವೆ ? ” ಎಂದನು. ಅದನ್ನು ಕೇಳಿ ಚಂಡಾಲನು ಅವನನ್ನು ಕುರಿತು :—

॥ ಮಾತಂಗ ಉವಾಚ ॥

ನೈವಂ ವದಸ್ವ ಭದ್ರಂ ತೇ ಸತ್ಯಂ ಲೋಕೇಷು ಪೂಜ್ಯತೇ ।
ಸತ್ಯೇನಾವಾಪ್ಯತೇ ಸೌಖ್ಯಂ ಯತ್ಕಿಂಚಿಜ್ಜಗತೀಗತಂ ॥ ೫೨ ॥

ಸತ್ಯೇನಾರ್ಕಃ ಪ್ರತಪತಿ ಸತ್ಯೇನಾಪೋ ರಸಾತ್ಮಿಕಾಃ ।
ಜ್ವಲತ್ಯಗ್ನಿಶ್ಚ ಸತ್ಯೇನ ವಾಂತಿ ಸತ್ಯೇ ವಾತಿ ಸತ್ಯೇನ ಮಾರುತಃ ॥ ೫೩ ॥

ಧರ್ಮಾರ್ಥಕಾಮಸಂಪ್ರಾಪ್ತಿರ್ಮೋಕ್ಷಪ್ರಾಪ್ತಿಶ್ಚ ದುರ್ಲಭಾ ।
ಸತ್ಯೇನ ಜಾಯತೇ ಪುಂಸಾಂ ತಸ್ಮಾತ್ಸತ್ಯಂ ನ ಸಂತ್ಯಜೇತ್ ॥ ೫೪ ॥

ಸತ್ಯಂ ಬ್ರಹ್ಮ ಪರಂ ಲೋಕೇ ಸತ್ಯಂ ಯಜ್ಞೇಷು ಚೋತ್ತಮಂ ।
ಸತ್ಯಂ ಸ್ವರ್ಗಸಮಾಯಾತಂ ತಸ್ಮಾತ್ಸತ್ಯಂ ನ ಸಂತ್ಯಜೇತ್ ॥ ೫೫ ॥

---

೫೨. “ ನೀನು ಈರೀತಿ ಹೇಳಬಾರದು. ನಿನಗೆ ಒಳ್ಳೆಯದಾಗಲಿ. ಸತ್ಯವೊಂದೇ ಜಗತ್ತಿನಲ್ಲಿ ಪೂಜಿಸಲ್ಪಡುವುದು. ಈ ಪ್ರಪಂಚದಲ್ಲಿ ಯಾವುದಾದರೂ ಸೌಖ್ಯವು ದೊರೆಯುವುದಾಗಿದ್ದರೆ ಅದು ಸತ್ಯದಿಂದಲೇ ಹೊರತು ಮತ್ತೆ ಬೇರೆ ಅಲ್ಲ.

೫೩. ಸತ್ಯದಿಂದಲೇ ಸೂರ್ಯನು ಬೆಳಗುತ್ತಿರುವನು. ಸತ್ಯದಿಂದಲೇ ನೀರು (ಮಾಧುರ್ಯಾದಿ) ರಸಗಳಿಂದ ತುಂಬಿರುವುದು. ಸತ್ಯದಿಂದಲೇ ಬೆಂಕಿಯು ಉರಿಯುತ್ತಿರುವುದು. ಸತ್ಯದಿಂದಲೇ ಗಾಳಿಯು ಬೀಸುತ್ತಿರುವುದು.

೫೪. ಧರ್ಮವಾಗಲಿ, ಅರ್ಥವಾಗಲಿ, ಕಾಮವಾಗಲಿ, ದುರ್ಲಭವಾದ ಮೋಕ್ಷವಾಗಲಿ ಪುರುಷರಿಗೆ ಲಭಸಬೇಕಾಗಿದ್ದರೆ ಅದು ಸತ್ಯವೊಂದರಿಂದಲೇ. ಆದುದರಿಂದ ಸತ್ಯವನ್ನು ಬಿಡಬಾರದು.

೫೫. ಈ ಜಗತ್ತಿನಲ್ಲಿ ಸತ್ಯವೇ ಪರಬ್ರಹ್ಮವು. ಯಜ್ಞಗಳಲ್ಲೆಲ್ಲಾ ಸತ್ಯವೇ ಮೇಲಾದುದು. ಈ ಸತ್ಯವು ಸ್ವರ್ಗಲೋಕದಿಂದ ನಮಗೆ ಪ್ರಾಪ್ತವಾಗಿರುವುದು. ಆದುದರಿಂದ ಇದನ್ನು (ನಾವು) ಬಿಡಬಾರದು ” ಎಂದು ಹೇಳಿದನು.

॥ ವ್ಯಾಸ ಉವಾಚ ॥

ಇತ್ಯುಕ್ತ್ವಾ ಸೋಽಥ ಮಾತಂಗಸ್ತಂ ಪ್ರಕ್ಷಿಪ್ಯ ನರೋತ್ತಮಂ ।
ಜಗಾಮ ತತ್ರ ಯತ್ರಾಸ್ತೇ ಪ್ರಾಣಿಹಾ ಬ್ರಹ್ಮರಾಕ್ಷಸಃ ॥ ೫೬ ॥

ತಮಾಗತಂ ಸಮೀಕ್ಷ್ಯಾಸೌ ಚಾಂಡಾಲಂ ಬ್ರಹ್ಮರಾಕ್ಷಸಃ ।
ವಿಸ್ಮಯೋತ್ಫುಲ್ಲನಯನಃ ಶಿರಃಕಂಪಂ ತಮಬ್ರವೀತ್ ॥ ೫೭ ॥

॥ ಬ್ರಹ್ಮರಾಕ್ಷಸ ಉವಾಚ ॥

ಸಾಧು ಸಾಧು ಮಹಾಭಾಗ ಸತ್ಯವಾಕ್ಯಾನುಪಾಲಕ ।
ನ ಮಾತಂಗಮಹಂ ಮನ್ಯೇ ಭವಂತಂ ಸತ್ಯಲಕ್ಷಣಂ ॥ ೫೮ ॥

ಕರ್ಮಣಾನೇನ ಮನ್ಯೇ ತ್ವಾಂ ಬ್ರಾಹ್ಮಣಂ ಶುಚಿಮವ್ಯಯಂ ।
ಯತ್ಕಿಂಚಿತ್ತ್ವಾಂ ಭದ್ರಮುಖಂ ಪ್ರವಕ್ಷ್ಯೇ ಧರ್ಮಸಂಶ್ರಯಂ ।
ಕಿಂ ತತ್ರ ಭವತಾ ರಾತ್ರೌ ಕೃತಂ ವಿಷ್ಣುಗೃಹೇ ವದ ॥ ೫೯ ॥

---

೫೬. ಎಲೈ ಮುನಿಗಳಿರಾ! ಈರೀತಿಯಾಗಿ ದಾರಿಯ ನಡುವೆ ಸಿಕ್ಕಿದ ಆ ಮನುಷ್ಯನಿಗೆ ಹೇಳಿ ಅವನಿಂದ ಬೀಳ್ಕೊಂಡು ಪ್ರಾಣಿಗಳನ್ನು ಕೊಲ್ಲುವುದೇ ಕೆಲಸವಾದ ಬ್ರಹ್ಮರಾಕ್ಷಸನಿರುವ ಕಡೆಗೆ ಹೊರಟನು.

೫೭. ಆ ಚಂಡಾಲನು ಬಂದುದನ್ನು ಕಂಡೊಡನೆ ಬ್ರಹ್ಮರಾಕ್ಷಸನಿಗೆ ಅತ್ಯಾಶ್ಚರ್ಯವುಂಟಾಯಿತು. ಆಗವನು ದೊಡ್ಡದಾಗಿ ಕಣ್ಣುಗಳನ್ನು ಅರಳಿಸಿ ತಲೆದೂಗುತ್ತಾ ಅವನನ್ನು ಕುರಿತು—

೫೮. ಎಲೈ ಮಹಾಭಾಗ್ಯಶಾಲಿಯೇ! ಭಾಪು, ಭಾಪು. ನೀನು ಕೊಟ್ಟ ಮಾತನ್ನು ಚೆನ್ನಾಗಿ ಉಳಿಸಿಕೊಂಡೆ. ಇಷ್ಟುಮಟ್ಟಿಗೆ ಸತ್ಯವನ್ನು ಕಾಪಾಡಿಕೊಂಡಿರುವ ನಿನ್ನನ್ನು ನಾನು ಚಂಡಾಲನೆಂದು ಭಾವಿಸಲಾರೆನು.

೫೯. ಈ ನಿನ್ನ ಕರ್ಮದಿಂದ (ವರ್ತನೆಯಿಂದ) ನೀನು ಶುದ್ಧನಾದ ಬ್ರಾಹ್ಮಣನೆಂದೇ ಭಾವಿಸುವೆನು. ಎಲೈ ಸೌಮ್ಯನೇ! ಧರ್ಮಕ್ಕೆ ಸಂಬಂಧ ಪಟ್ಟಂತಹ ಕೆಲವು ಮಾತುಗಳನ್ನು ನಿನ್ನೊಡನೆ ಕೇಳಬೇಕೆಂದಿರುವೆನು. ನೀನು ವಿಷ್ಣುದೇವಾಲಯದಲ್ಲಿ ರಾತ್ರಿ ಏನು ಮಾಡಿದೆ? ಹೇಳು,'' ಎಂದನು.

॥ ವ್ಯಾಸ ಉವಾಚ ॥

ತಮುಭ್ಯುವಾಚ ಮಾತಂಗಃ ಶೃಣು ವಿಷ್ಣುಗೃಹೇ ಮಯಾ ।
ಯತ್ಕೃತಂ ರಜನೀಭಾಗೇ ಯಥಾತಥ್ಯಂ ವದಾಮಿ ತೇ ॥ ೬೦ ॥

ವಿಷ್ಣೋರ್ದೇವಕುಲಸ್ಯಾಧಃ ಸ್ಥಿತೇನಾನಮ್ರಮೂರ್ತಿನಾ ।
ಪ್ರಜಾಗರಃ ಕೃತೋ ರಾತ್ರೌ ಗಾಯತಾ ವಿಷ್ಣುಗೀತಿಕಾಂ ॥ ೬೧ ॥

ತಂ ಬ್ರಹ್ಮರಾಕ್ಷಸಃ ಪ್ರಾಹ ಕಿಯಂತಂ ಕಾಲಮುಚ್ಯತಾಂ ।
ಪ್ರಜಾಗರೋ ವಿಷ್ಣುಗೃಹೇ ಕೃತಂ ಭಕ್ತಿಮತಾ ವದ ॥ ೬೨ ॥

ತಮುಭ್ಯುವಾಚ ಪ್ರಹಸನ್ವಿಂಶತ್ಯಬ್ದಾನಿ ರಾಕ್ಷಸ ।
ಏಕಾದಶ್ಯಾಂ ಮಾಸಿ ಮಾಸಿ ಕೃತಸ್ತತ್ರ ಪ್ರಜಾಗರಃ ।
ಮಾತಂಗವಚನಂ ಶ್ರುತ್ವಾ ಪ್ರೋವಾಚ ಬ್ರಹ್ಮರಾಕ್ಷಸಃ ॥ ೬೩ ॥

---

೬೦. ಎಲೈ ಮುನಿಗಳಿರಾ! ಈರೀತಿ ಬ್ರಹ್ಮರಾಕ್ಷಸನು ಹೇಳಿದುವನ್ನು ಕೇಳಿ ಚಂಡಾಲನು ಹೇಳತೊಡಗಿದನು. “ಕೇಳು, ನಿನ್ನೆರಾತ್ರಿ, ವಿಷ್ಣು ದೇವಾಲಯದಲ್ಲಿ ನಾನೇನು ಮಾಡಿದೆನೆಂದು ಕೇಳಿದೆಯಲ್ಲವೆ? ಇದ್ದುದಿದ್ದಂತೆ ಎಲ್ಲವನ್ನೂ ತಿಳಿಸುವೆನು.

೬೧. ಆ ವಿಷ್ಣುದೇವಾಲಯದ ಕೆಳಗಡೆ (ಹೊರಗೆ) ಸ್ವಲ್ಪದೂರದಲ್ಲಿ ನಾನು ಭಕ್ತಿಯಿಂದ ನಮ್ರನಾಗಿ ನಿಂತು, ಪರಮಾತ್ಮನಿಗೆ ಸಂಬಂಧಪಟ್ಟ ಗೀತಗಳನ್ನೇ ಹಾಡುತ್ತಾ ರಾತ್ರಿಯೆಲ್ಲವನ್ನೂ ಜಾಗರಣೆಮಾಡಿದೆನು” ಎನ್ನಲು

೬೨. ಆಗ ಬ್ರಹ್ಮರಾಕ್ಷಸನು ಅವನನ್ನು ಕುರಿತು “ನೀನು ಎಷ್ಟು ದಿವಸ ಆರೀತಿ ಭಕ್ತಿಯಿಂದ ವಿಷ್ಣುದೇವಾಲಯದಲ್ಲಿ ರಾತ್ರಿಯವೇಳೆ ಜಾಗರಣೆ ಮಾಡಿದೆ? ಹೇಳು” ಎಂದು ಪ್ರಶ್ನಿಸಿದನು.

೬೩. ಆಗ ಚಂಡಾಲನು ನಗುತ್ತಾ ಅವನನ್ನು ಕುರಿತು “ಎಲೈ ರಾಕ್ಷಸನೇ, ಈರೀತಿಯಾಗಿ ಇಪ್ಪತ್ತು ವರ್ಷಗಳಕಾಲ ತಿಂಗಳು ತಿಂಗಳೂ ಏಕಾದಶಿಯಲ್ಲಿ ಜಾಗರಣೆಯನ್ನು ಮಾಡುತ್ತಿದ್ದೇನೆ” ಎಂದನು. ಅದನ್ನು ಕೇಳಿ ಮತ್ತೆ ಬ್ರಹ್ಮರಾಕ್ಷಸನು :—

॥ ಬ್ರಹ್ಮರಾಕ್ಷಸ ಉವಾಚ ॥

ಯದದ್ಯ ತ್ವಾಂ ಪ್ರವಕ್ಷ್ಯಾಮಿ ತದ್ಭವಾನ್ವಕ್ತುಮರ್ಹತಿ ।
ಏಕರಾತ್ರಿಕೃತಂ ಸಾಧೋ ಮಮ ದೇಹಿ ಪ್ರಜಾಗರಂ ॥ ೬೪ ॥

ಏವಂ ತ್ವಾಂ ಮೋಕ್ಷಯಿಷ್ಯಾಮಿ ಮೋಕ್ಷಯಿಷ್ಯಾಮಿ ನಾನ್ಯಥಾ ।
ತ್ರಿಃ ಸತ್ಯೇನ ಮಹಾಭಾಗ ಇತ್ಯುಕ್ತ್ವಾ ವಿರರಾಮ ಹ ॥ ೬೫ ॥

॥ ವ್ಯಾಸ ಉವಾಚ ॥

ಮಾತಂಗಸ್ತಮುವಾಚಾಥ ಮಯಾತ್ಮಾ ತೇ ನಿಶಾಚರ ।
ನಿವೇದಿತಃ ಕಿಮುಕ್ತೇನ ಖಾದಸ್ವ ಸ್ವೇಚ್ಛಯಾಪಿ ಮಾಂ ॥ ೬೬ ॥

ತಮಾಹ ರಾಕ್ಷಸೋ ಭೂಯೋ ಯಾಮಕ್ವಯಪ್ರಜಾಗರಂ ।
ಸಗೀತಂ ಮೇ ಪ್ರಯಚ್ಛಸ್ವ ಕೃಪಾಂ ಕರ್ತುಂ ತ್ವಮರ್ಹಸಿ ॥ ೬೭ ॥

---

೬೪. "ಎಲೈ ಸತ್ಪುರುಷನೇ! ನಾನೀಗ ಕೇಳುವ ಪ್ರಶ್ನೆಗೆ ನೀನು ಉತ್ತರ ಕೊಡಬೇಕು. ಅದೇನೆಂದರೆ ಒಂದುದಿನ ರಾತ್ರಿ ನೀನು ಮಾಡಿದ ಜಾಗರಣೆಯನ್ನು (ಅದರ ಫಲವನ್ನು) ನನಗೆ ಕೊಡು. ಅಲ್ಲದೆ ಎಲೈ ಮಹಾ ಭಾಗ್ಯಶಾಲಿಯೇ,

೬೫. ಈರೀತಿಯಾಗಿ ನಿನ್ನನ್ನು ಈ ಪಾಪಿ ಜನ್ಮದಿಂದ ಬಿಡಿಸುವೆನು. ಉದ್ಧರಿಸುವೆನು ಎಂಬುದಾಗಿ ಮೂರುಬಾರಿ ಪ್ರತಿಜ್ಞಾಪೂರ್ವಕವಾಗಿ ಹೇಳು" ಎಂದು ನುಡಿದು ಸುಮ್ಮನೆ ನಿಂತನು.

೬೬. ಎಲೈ ಮುನಿಗಳಿರಾ! ಆಗ ಚಂಡಾಲನು ಬ್ರಹ್ಮರಾಕ್ಷಸನನ್ನು ಕುರಿತು "ಎಲೈ ನಿಶಾಚರನೇ! ನಿನಗೆ ನನ್ನನ್ನು ಒಪ್ಪಿಸಿಬಿಟ್ಟಿರುವೆನು. ಹೆಚ್ಚು ಹೇಳಿ ಏನು? ನಿನಗೆ ಇಷ್ಟಬಂದಹಾಗೆ ನನ್ನನ್ನು ತಿನ್ನು" ಎನ್ನಲು, ಆಗ-

೬೭. ಆ ಬ್ರಹ್ಮರಾಕ್ಷಸನು "ಓ ಭಾಗ್ಯಶಾಲಿಯೇ! ಕೃಪೆಮಾಡು, ಎರಡುಜಾವದ ಜಾಗರಣೆಯನ್ನೂ ಆಗ ನೀನು ಹಾಡಿದ ಸಂಗೀತವನ್ನೂ ನನಗೆ ಬಿಟ್ಟುಕೊಡು" ಎಂದು ಮತ್ತೆ ಪ್ರಾರ್ಥಿಸಿದನು.

ಮಾತಂಗೋ ರಾಕ್ಷಸಂ ಪ್ರಾಹ ಕಿಮಸಂಬದ್ಧಮುಚ್ಯತೇ ।
ಖಾದಸ್ವ ಸ್ವೇಚ್ಛಯಾ ಮಾಂ ತ್ವಂ ನ ಪ್ರದಾಸ್ಯೇ ಪ್ರಜಾಗರಂ ।
ಮಾತಂಗವಚನಂ ಶ್ರುತ್ವಾ ಪ್ರಾಹ ತಂ ಬ್ರಹ್ಮರಾಕ್ಷಸಃ ॥ ೬೮ ॥

॥ ಬ್ರಹ್ಮರಾಕ್ಷಸ ಉವಾಚ ॥

ಕೋ ಹಿ ದುಷ್ಟಮತಿರ್ಮಂದೋ ಭವಂತಂ ದ್ರಷ್ಟುಮುತ್ಸಹೇತ್ ।
ಧರ್ಷಯಿತುಂ ಪೀಡಯಿತುಂ ರಕ್ಷಿತಂ ಧರ್ಮಕರ್ಮಣಾ ॥ ೬೯ ॥

ದೀನಸ್ಯ ಪಾಪಗ್ರಸ್ತಸ್ಯ ವಿಷಯೈರ್ಮೋಹಿತಸ್ಯ ಚ ।
ನರಕಾರ್ತಸ್ಯ ಮೂಢಸ್ಯ ಸಾಧವಃ ಸ್ಯುರ್ದಯಾನ್ವಿತಾಃ ॥ ೭೦ ॥

ತನ್ಮಮ ತ್ವಂ ಮಹಾಭಾಗ ಕೃಪಾಂ ಕೃತ್ವಾ ಪ್ರಜಾಗರಂ ।
ಯಾಮಸ್ಯೈಕಸ್ಯ ಮೇ ದೇಹಿ ಗಚ್ಛ ವಾ ನಿಲಯಂ ಸ್ವಕಂ ॥ ೭೧ ॥

---

೬೮. ಆಗ ಚಂಡಾಲನು “ ಇದೇನು ಅಸಂಬದ್ಧವಾಗಿ ಮಾತಾಡುವೆ? ಮೊದಲು ನಿನ್ನಿಷ್ಟಬಂದಂತೆ ನನ್ನನ್ನು ತಿಂದುಬಿಡು. ನಾನು ಜಾಗರಣೆಯನ್ನು ಕೊಡಲಾರೆನು” ಎಂದು ಹೇಳಲು ಆ ಬ್ರಹ್ಮರಾಕ್ಷಸನು ಮರಳಿ ಈರೀತಿ ಪ್ರಾರ್ಥಿಸಿದನು.

೬೯. “ಯಾವ ಬುದ್ಧಿಹೀನನಾದ ದಡ್ಡನು ನಿನ್ನನ್ನು ಕಣ್ಣೆತ್ತಿಯಾದರೂ ನೋಡಿಯಾನು? ಧರ್ಮಮಯವಾದ ಕೃತ್ಯಗಳಿಂದ ನೀನು ಸುರಕ್ಷಿತನಾಗಿರುವೆ. ಹೀಗಿರುವಾಗ ನಿನ್ನನ್ನು ಧರ್ಷಣೆಮಾಡುವುದಕ್ಕೂ ಹಿಂಸೆ ಮಾಡುವುದಕ್ಕೂ ಯಾರಿಗೆತಾನೆ ಸಾಧ್ಯವಾದೀತು ?

೭೦. ದೀನನ ವಿಷಯದಲ್ಲಿಯೂ, ಪಾಪಿಯ ವಿಷಯದಲ್ಲಿಯೂ, ವಿಷಯಸುಖಗಳಲ್ಲೇ ಮಗ್ನನಾಗಿ ಬಿಡಿಸಿಕೊಳ್ಳಲಾರದವನ ವಿಷಯದಲ್ಲಿಯೂ, ನರಕದುಃಖವನ್ನು ಅನುಭವಿಸಿ ಸಾಕಾಗಿರುವವನ ವಿಷಯದಲ್ಲಿಯೂ, ಏನೂ ಅರಿಯದವನ ವಿಷಯದಲ್ಲಿಯೂ ಸಾಧುಗಳಾದವರು ಮರುಕವನ್ನು ತೋರುವರು.

೭೧. ಎಲೈ ಮಹಾಭಾಗ್ಯಶಾಲಿಯೇ! ಆದುದರಿಂದ ನೀನು ನನ್ನ ಮೇಲೆ ದಯೆಯಿಟ್ಟು ಒಂದುಯಾಮದ ಜಾಗರಣೆಯನ್ನು ಇತ್ತು ನಿನ್ನ ಮನೆಗೆ ಹೊರಡುವವನಾಗು ” ಎಂದನು.

॥ ವ್ಯಾಸ ಉವಾಚ ॥

ತಂ ಪುನಃ ಪ್ರಾಹ ಚಾಂಡಾಲೋ ನ ಯಾಸ್ಯಾಮಿ ನಿಜಂ ಗೃಹಂ ।
ನ ಚಾಪಿ ತೇನ ದಾಸ್ಯಾಮಿ ಕಥಂ ಚಿದ್ಯಾಮಜಾಗರಂ ।
ತಂ ಪ್ರಹಸ್ಯಾಥ ಚಾಂಡಾಲಂ ಪ್ರೋವಾಚ ಬ್ರಹ್ಮರಾಕ್ಷಸಃ ॥ ೭೨ ॥

॥ ಬ್ರಹ್ಮರಾಕ್ಷಸ ಉವಾಚ ॥

ರಾತ್ರ್ಯವಸಾನೇ ಯಾ ಗೀತಾ ಗೀತಿಕಾ ಕೌತುಕಾಶ್ರಯಾ ।
ತಸ್ಯಾಃ ಫಲಂ ಪ್ರಯಚ್ಛಸ್ವ ತ್ರಾಹಿ ಪಾಪಾತ್ಸಮುದ್ಧರ ॥ ೭೩ ॥

॥ ವ್ಯಾಸ ಉವಾಚ ॥

ಏವಮುಚ್ಚಾರಿತೇ ತೇನ ಮಾತಂಗಸ್ತಮುವಾಚ ಹ ॥ ೭೪ ॥

॥ ಮಾತಂಗ ಉವಾಚ ॥

ಕಿಂ ತ್ವಯಾ ಪೂರ್ವಂ ಭವತಾ ಕರ್ಮ ವಿಕೃತಂ ಕೃತಮಂಜಸಾ ।
ಯೇನ ತ್ವಂ ದೋಷಜಾತೇನ ಸಂಭೂತೋ ಬ್ರಹ್ಮರಾಕ್ಷಸಃ ॥ ೭೫ ॥

---

೭೨. ಎಲೈ ಮುನಿಗಳಿರಾ! ಇದನ್ನು ಕೇಳಿ ಚಂಡಾಲನು "ನಾನು ನಿನಗೆ ಒಂದು ಜಾವದ ಜಾಗರಣೆಯನ್ನೂ ಕೊಡಲಾರೆನು, ಮನೆಗೂ ಹೋಗಲಾರೆನು'' ಎನ್ನಲು ಬ್ರಹ್ಮರಾಕ್ಷಸನು ಗಟ್ಟಿಯಾಗಿ ನಕ್ಕು ಚಂಡಾಲನನ್ನು ಮರಳಿ ಇಂತೆಂದನು.

೭೩. "ರಾತ್ರಿಯು ಮುಗಿಯುತ್ತಾ ಬಂದಾಗ ಆಶ್ಚರ್ಯಕರವಾದ ಗೀತೆಯೊಂದನ್ನು ನೀನು ಹಾಡಿದೆಯಲ್ಲವೆ? ಅದರ ಫಲವನ್ನು ನನಗೆ ಇತ್ತು ಈ ಪಾಪದಿಂದ ಉದ್ಧಾರಮಾಡು" ಎನಲು

೭೪-೭೫. ಆಗ ಚಂಡಾಲನು ಬ್ರಹ್ಮರಾಕ್ಷಸನನ್ನು ಕುರಿತು "ನೀನೀ ರೀತಿ ಬ್ರಹ್ಮರಾಕ್ಷಸನಾಗಲು ಹಿಂದೆ ಎಂತಹ ಪಾಪಕರ್ಮವನ್ನು ಆಚರಿಸಿದ್ದೆ?'' ಎಂದು ಪ್ರಶ್ನಿಸಿದನು.

॥ ವ್ಯಾಸ ಉವಾಚ ॥

ತಸ್ಯ ತದ್ವಾಕ್ಯಮಾಕರ್ಣ್ಯ ಮಾತಂಗಂ ಬ್ರಹ್ಮರಾಕ್ಷಸಃ ।
ಪ್ರೋವಾಚ ದುಃಖಸಂತಪ್ತಃ ಸಂಸ್ಮೃತ್ಯ ಸ್ವಕೃತಂ ಕೃತಂ ॥ ೭೬ ॥

॥ ಬ್ರಹ್ಮರಾಕ್ಷಸ ಉವಾಚ ॥

ಶ್ರೂಯತಾಂ ಯೋಽಹಮಾಸಂ ವೈ ಪೂರ್ವಂ ಯಚ್ಚ ಮಯಾ ಕೃತಂ ।
ಯಸ್ಮಿನ್ಕೃತೇ ಪಾಪಯೋನಿಂ ಗತವಾನಸ್ಮಿ ರಾಕ್ಷಸೀಂ ॥ ೭೭ ॥

ಸೋಮಶರ್ಮಾ ಇತಿ ಖ್ಯಾತಃ ಪೂರ್ವಮಾಸಮಹಂ ದ್ವಿಜಃ ।
ಪುತ್ರೋಽಧ್ಯಯನಶೀಲಸ್ಯ ದೇವಶರ್ಮಸ್ಯ ಯಜ್ವನಃ ॥ ೭೮ ॥

ಕಸ್ಯಚಿದ್ಯಜಮಾನಸ್ಯ ಸೂತ್ರಮಂತ್ರಬಹಿಷ್ಕೃತಃ ।
ನೃಪಸ್ಯ ಕರ್ಮಸಕ್ತೇನ ಯೂಪಕರ್ಮಸುನಿಶ್ಚಿತಃ ॥ ೭೯ ॥

---

೭೬. ಎಲೈ ಮುನಿಗಳಿರಾ! ಈರೀತಿ ಚಂಡಾಲನು ಪ್ರಶ್ನಿಸಿದುದನ್ನು ಕೇಳಿ ಬ್ರಹ್ಮರಾಕ್ಷಸನು ತಾನು ಹಿಂದೆ ಮಾಡಿದ ಕರ್ಮವನ್ನು ನೆನೆದು ನೆನೆದು ಬಹುದುಃಖಿಸುತ್ತಾ ಇಂತೆಂದನು.

೭೭. "ಕೇಳು. ಹಿಂದೆ ನಾನು ಏನಾಗಿದ್ದೆನೆಂಬುದನ್ನೂ, ಆಗ ಎಂತಹ ಪಾಪಕಾರ್ಯವನ್ನಾಚರಿಸಿದೆನೆಂಬುದನ್ನೂ ನಿನಗೆ ವಿವರಿಸುವೆನು. ಅದರ ಫಲವಾಗಿಯೇ ಈಗ ಈ ಪಾಪಕ್ಕೆ ನೆಲೆಯೆನಿಸಿದ ರಾಕ್ಷಸ ಜಾತಿಯಲ್ಲಿ ಹುಟ್ಟಿರುವೆನು.

೭೮. ಹಿಂದೆ ನಾನು ಅಧ್ಯಯನನಿರತನೂ ಯಾಗಶೀಲನೂ ಆದ ದೇವಶರ್ಮನೆಂಬ ಬ್ರಾಹ್ಮಣನಿಗೆ ಮಗನಾಗಿ ಹುಟ್ಟಿ ಸೋಮಶರ್ಮನೆಂದು ಪ್ರಸಿದ್ಧನಾಗಿದ್ದೆನು.

೭೯-೮೦. ಆಗ ಒಬ್ಬ ರಾಜನು ಒಂದು ಯಜ್ಞವನ್ನು ಮಾಡಿದನು. ನನಗೆ ಸೂತ್ರವಾಗಲಿ, ಮಂತ್ರವಾಗಲಿ ಬರದಿದ್ದರೂ ಯೂಪ ಕರ್ಮಾದಿಗಳಲ್ಲಿ ಪ್ರವೇಶಿಸಿ ದುರಾಸೆಯಿಂದಲೂ ಅಜ್ಞಾನದಿಂದಲೂ ಆಗ್ನೀಧ್ರವೆಂಬ ಋತ್ವಿಜನ

ಅಗ್ನೀಧ್ರಂ ಚಾಕರೋದ್ಯಜ್ಞೇ ಲೋಭಮೋಹಪ್ರಪೀಡಿತಃ ।
ತಸ್ಮಿನ್ಪರಿಸಮಾಪ್ತೇ ತು ಮೌರ್ಖ್ಯಾದ್ದಂಭಮನುಷ್ಠಿತಃ ॥ ೮೦ ॥

ಯಜ್ಞಮಾರಬ್ಧವಾನಸ್ಮಿ ದ್ವಾದಶಾಹಂ ಮಹಾಕ್ರತುಂ ।
ಪ್ರವರ್ತಮಾನೇ ತಸ್ಮಿಂಸ್ತು ಕುಕ್ಷಿಶೂಲೋಽಭವನ್ಮಮ ॥ ೮೧ ॥

ಸಂಪೂರ್ಣೇ ದಶರಾತ್ರೇ ತು ನ ಸಮಾಪ್ತೇ ತಥಾ ಕ್ರತೌ ।
ವಿರೂಪಾಕ್ಷಸ್ಯ ದೀಯಂತ್ಯಾಮಾಹುತ್ಯಾಂ ರಾಕ್ಷಸೇ ಕ್ಷಣೇ ॥ ೮೨ ॥

ಮೃತೋಽಹಂ ತೇನ ದೋಷೇಣ ಸಂಭೂತೋ ಬ್ರಹ್ಮರಾಕ್ಷಸಃ ।
ಮೂರ್ಖೇಣ ಮಂತ್ರಹೀನೇನ ಸೂತ್ರಸ್ವರವಿವರ್ಜಿತಂ ॥ ೮೩ ॥

ಅಜಾನತಾ ಯಜ್ಞವಿದ್ಯಾಂ ಯದಿಷ್ಟಂ ಯಾಜಿತಂ ಚ ಯತ್ ।
ತೇನ ಕರ್ಮವಿಪಾಕೇನ ಸಂಭೂತೋ ಬ್ರಹ್ಮರಾಕ್ಷಸಃ ॥ ೮೪ ॥

ಕೆಲಸವನ್ನು ನಿರ್ವಹಿಸಿದೆನು. ಆ ಯಜ್ಞಕರ್ಮವು ಸಮಾಪ್ತವಾಯಿತು. ಬಳಿಕ ನಾನು ಮೂರ್ಖತೆಯಿಂದ ದಂಭಕ್ಕೆ ಒಳಗಾಗಿ–

೮೧. ಹನ್ನೆರಡುದಿನಗಳು ಜರುಗುವ ಒಂದುಭಾರಿ ಯಜ್ಞವನ್ನು ಪ್ರಾರಂಭಿಸಿದೆನು. ಯಜ್ಞವನ್ನು ಆರಂಭಿಸಿದನಂತರ ನನಗೆ ಹೊಟ್ಟೆಯನೋವು ಆರಂಭವಾಯಿತು.

೮೨. ಹೀಗೆಯೇ ಹತ್ತುರಾತ್ರಿಗಳು ಕಳೆದುವು. ಇನ್ನೂ ಮಹಾಯಜ್ಞವು ಮುಗಿದಿರಲಿಲ್ಲ. ಆಗ ರುದ್ರನನ್ನು ಉದ್ದೇಶಿಸಿ ಆಹುತಿಯನ್ನು ಕೊಡುವುದಕ್ಕೆ ಮೊದಲುಮಾಡಿದೆವು. ಆಗ ರಾಕ್ಷಸಕಾಲವಾಗಿತ್ತು.

೮೩. ಆ ಸಮಯದಲ್ಲಿ ನಾನು ಹೊಟ್ಟೆಯನೋವನ್ನು ತಾಳಲಾರದೆ ಸತ್ತುಹೋದೆನು. ಆ ದೋಷದಿಂದಲೇ ನಾನು ಬ್ರಹ್ಮರಾಕ್ಷಸನಾಗಿ ಹುಟ್ಟಿದೆನು. ನನಗೆ ಮಂತ್ರವೇ ತಿಳಿಯದು. ಸೂತ್ರವನ್ನಾಗಲಿ ಸ್ವರವನ್ನಾಗಲಿ ಅರಿಯೆನು. ಆದರೂ–

೮೪. ಮೂರ್ಖತೆಯಿಂದ, ಯಜ್ಞೀಯವಾದ ಪ್ರಕ್ರಿಯೆಯನ್ನರಿಯದ ನಾನು ಯಜ್ಞವನ್ನು ಮಾಡಿದುದಲ್ಲದೆ, ಮತ್ತೊಬ್ಬನಿಗೆ ಯಜ್ಞವನ್ನೂ ಮಾಡಿಸಿಬಿಟ್ಟೆನು. ಆ ಪಾಪಕಾರ್ಯದ ಫಲವಾಗಿ ನಾನು ಬ್ರಹ್ಮರಾಕ್ಷಸನಾದೆನು.

ತನ್ಮಾಂ ಪಾಪಮಹಾಂಭೋಧೌ ನಿಮಗ್ನಂ ತ್ವಂ ಸಮುದ್ಧರ ।
ಪ್ರಜಾಗರೇ ಗೀತಿಕೈಕಾಂ ಪಶ್ಚಿಮಾಂ ದಾತುಮರ್ಹಸಿ ॥ ೮೫ ॥

॥ ವ್ಯಾಸ ಉವಾಚ ॥

ತಮುವಾಚಾಥ ಚಾಂಡಾಲೋ ಯದಿ ಪ್ರಾಣಿವಧಾದ್ಭವಾನ್ ।
ನಿವೃತ್ತಿಂ ಕುರುತೇ ದದ್ಯಾಂ ತತಃ ಪಶ್ಚಿಮಗೀತಿಕಾಂ ॥ ೮೬ ॥

ಬಾಢಮಿತ್ಯವದತ್ಸೋಽಪಿ ಮಾತಂಗೋಽಪಿ ದದೌ ತದಾ ।
ಗೀತಿಕಾಫಲಮಾಮಂತ್ರ್ಯ ಮುಹೂರ್ತಾರ್ಧಪ್ರಜಾಗರಂ ॥ ೮೭ ॥

ತಸ್ಮಿನ್ಗೀತಿಫಲೇ ದತ್ತೇ ಮಾತಂಗಂ ಬ್ರಹ್ಮರಾಕ್ಷಸಃ ।
ಪ್ರಣಮ್ಯ ಪ್ರಯಯೌ ಹೃಷ್ಟಸ್ತೀರ್ಥವರ್ಯಂ ಪೃಥೂದಕಂ ॥ ೮೮ ॥

ತತ್ರಾನಶನಸಂಕಲ್ಪಂ ಕೃತ್ವಾ ಪ್ರಾಣಾನ್ ಜಹೌ ದ್ವಿಜಾಃ ।
ರಾಕ್ಷಸತ್ವಾದ್ವಿನಿರ್ಮುಕ್ತೋ ಗೀತಿಕಾಫಲಬೃಂಹಿತಃ ॥ ೮೯ ॥

---

೮೫. ಆದುದರಿಂದ ಈ ಪಾಪವೆಂಬ ಅಪಾರವಾದ ಸಮುದ್ರದಲ್ಲಿ ಮುಳುಗಿಹೋಗಿರುವ ನನ್ನನ್ನು ಮೇಲಕ್ಕೆತ್ತಬೇಕು. ಆದುದರಿಂದ ನೀನು ಆ ಜಾಗರಣ ಸಮಯದಲ್ಲಿ ಕೊನೆಯದಾಗಿ ಹಾಡಿದ ಗೀತೆಯ ಫಲವನ್ನು ನನಗೋಸ್ಕರ ದಾನಮಾಡು'' ಎಂದನು.

೮೬. ಎಲೈ ಮಹರ್ಷಿಗಳಿರಾ! ಇದನ್ನು ಕೇಳಿ ಚಂಡಾಲನು ಬ್ರಹ್ಮ ರಾಕ್ಷಸನನ್ನು ಕುರಿತು "ನೀನು ಪ್ರಾಣಿಗಳನ್ನು ಇನ್ನುಮೇಲೆ ಕೊಲ್ಲುವುದಿಲ್ಲ ವಾದರೆ ಆಗಲೀಗ ಕೊನೆಯ ಗೀತೆಯ ಫಲವನ್ನೀಯುವೆನು'' ಎಂದನು.

೮೭. ಅದಕ್ಕೆ ಬ್ರಹ್ಮರಾಕ್ಷಸನೂ ಆಗಲಿ ಎಂದು ಒಪ್ಪಿದನು. ಆಗ ಚಂಡಾಲನು ಜಾವದ ಕೊನೆಯ ಗೀತೆಯ ಫಲವನ್ನೂ ಅರೆಮುಹೂರ್ತದಷ್ಟು ಜಾಗರಣೆಯ ಫಲವನ್ನೂ ಅವನಿಗೆ ಇತ್ತನು.

೮೮. ಆಗ ಬ್ರಹ್ಮರಾಕ್ಷಸನು ಚಂಡಾಲನನ್ನು ನಮಸ್ಕರಿಸಿ ಬಹು ಸಂತೋಷದಿಂದ ಪೃಥೂದಕವೆಂಬ ತೀರ್ಥಶ್ರೇಷ್ಠವೊಂದನ್ನು ಕುರಿತು ತೆರಳಿದನು.

೮೯-೯೦ ಎಲೈ ದ್ವಿಜರೇ! ಅಲ್ಲಿ ಇನ್ನುಮೇಲೆ ಏನನ್ನೂ ತಿನ್ನುವು ದಿಲ್ಲವೆಂದು ಸಂಕಲ್ಪಿಸಿ ಅನಶನವ್ರತವನ್ನು ಕೈಕೊಂಡು ಕೆಲವುದಿವಸಗಳವರೆಗೆ ಇದ್ದು ಬಳಿಕ ತನ್ನ ಪ್ರಾಣಗಳನ್ನು ತೊರೆದುಬಿಟ್ಟನು. ಆಗ ಅವನು ಜಾಗರಣ ಸಮಯದ ಕೊನೆಯ ಗೀತದ ಮಹಿಮೆಯಿಂದಲೂ ಪೃಥೂದಕವೆಂಬ ತೀರ್ಥ

ಪೃಥೂದಕಪ್ರಭಾವಾಚ್ಚ ಬ್ರಹ್ಮಲೋಕಂ ಚ ದುರ್ಲಭಂ ।
ದಶ ವರ್ಷಸಹಸ್ರಾಣಿ ನಿರಾತಂಕೋಽವಸತ್ತತಃ ॥ ೯೦ ॥

ತಸ್ಯಾಂತೇ ಬ್ರಾಹ್ಮಣೋ ಜಾತೋ ಬಭೂವ ಸ್ಮೃತಿಮಾನ್ವಶೀ ।
ತಸ್ಯಾಹಂ ಚರಿತಂ ಭೂಯಃ ಕಥಯಿಷ್ಯಾಮಿ ಭೋ ದ್ವಿಜಾಃ ॥ ೯೧ ॥

ಮಾತಂಗಸ್ಯ ಕಥಾಶೇಷಂ ಶೃಣುಧ್ವಂ ಗದತೋ ಮಮ ।
ರಾಕ್ಷಸೇ ತು ಗತೇ ಧೀಮಾನ್ಗೃಹಮೇತ್ಯ ಯತಾತ್ಮವಾನ್ ॥ ೯೨ ॥

ತದ್ವಿಪ್ರಚರಿತಂ ಸ್ಮೃತ್ವಾ ನಿರ್ವಿಣ್ಣಃ ಶುಚಿರಪ್ಯಸೌ ।
ಪುತ್ರೇಷು ಭಾರ್ಯಾಂ ನಿಕ್ಷಿಪ್ಯ ದದೌ ಭೂಮ್ಯಾಃ ಪ್ರದಕ್ಷಿಣಾಂ ॥ ೯೩ ॥

ಕೋಕಾಮುಖಾತ್ಸಮಾರಭ್ಯ ಯಾವದ್ವೈ ಸ್ಕಂದದರ್ಶನಂ ।
ದೃಷ್ಟ್ವಾ ಸ್ಕಂದಂ ಯಯೌ ಧಾರಾಚಕ್ರೇ ಚಾಪಿ ಪ್ರದಕ್ಷಿಣಂ ॥ ೯೪ ॥

ರಾಜದ ಪ್ರಭಾವದಿಂದಲೂ ಆ ಬ್ರಹ್ಮರಾಕ್ಷಸನ ಜನ್ಮದಿಂದ ಪಾರಾಗಿ ದುರ್ಲಭವಾದ ಬ್ರಹ್ಮಲೋಕವನ್ನು ಸೇರಿ ಯಾವೊಂದು ಆತಂಕವೂ ಇಲ್ಲದೆ ಹತ್ತುಸಾವಿರ ವರ್ಷಗಳಕಾಲ ಅಲ್ಲಿ ವಾಸಮಾಡಿದನು.

೯೧. ಅದಾದ ಬಳಿಕ ಪೂರ್ವಜನ್ಮ ಸ್ಮರಣೆಯುಳ್ಳ ಜಿತೇಂದ್ರಿಯನಾದ ಬ್ರಾಹ್ಮಣನಾಗಿ ಹುಟ್ಟಿದನು. ಎಲೈ ದ್ವಿಜೋತ್ತಮರಿರಾ! ಅವನ ಚರಿತ್ರೆಯನ್ನು ನಿಮಗೆ ಇನ್ನೊಂದುಸಲ ವಿವರಿಸುವೆನು.

೯೨. ಆ ಚಂಡಾಲನಿಗೆ ಸಂಬಂಧಪಟ್ಟ ಉಳಿದ ಕಥಾಭಾಗವನ್ನು ನಿಮಗೆ ಈಗ ವಿವರಿಸುವೆನು. ಕೇಳಿರಿ. ಬ್ರಹ್ಮರಾಕ್ಷಸನು ಹಾಗೆ ಹೊರಟು ಹೋದನಂತರ ವಿವೇಕಿಯಾದ ಚಂಡಾಲನು ತನ್ನ ಮನೆಗೆ ಬಂದನು.

೯೩. ಅನಂತರ ಆ ಸೋಮಶರ್ಮನೆಂಬ ಬ್ರಾಹ್ಮಣನ ಕತೆಯನ್ನು ನೆನೆದು, ಸಂಸಾರದಲ್ಲಿ ಜಿಗುಪ್ಸೆವಹಿಸಿ ಹೆಂಡತಿಯನ್ನು ತನ್ನ ಮಕ್ಕಳ ವಶಕ್ಕೆ ಬಿಟ್ಟು ಶುದ್ಧತೆಯಿಂದ ಭೂಪ್ರದಕ್ಷಿಣೆಗಾಗಿ ತೆರಳಿದನು.

೯೪. ಹಾಗೆ ಹೊರಟವನು ಕೋಕಾಮುಖವೆಂಬ ತೀರ್ಥವನ್ನು ಆರಂಭಿಸಿ ಸ್ಕಂದಪರ್ವತದವರೆಗೆ ತೀರ್ಥಯಾತ್ರೆಯನ್ನು ಮಾಡಿ, ಆ ಸ್ಕಂದಪರ್ವತ

ತತೋಽದ್ರಿವರಮಾಗಮ್ಯ ವಿಂಧ್ಯಮುಚ್ಚಶಿಲೋಚ್ಚಯಂ ।
ಪಾಪಪ್ರಮೋಚನಂ ತೀರ್ಥಮಾಸಸಾದ ಸ ತು ದ್ವಿಜಾಃ ॥ ೯೫ ॥

ಸ್ನಾನಂ ಪಾಪಹರಂ ಚಕ್ರೇ ಸ ತು ಚಾಂಡಾಲವಂಶಜಃ ।
ವಿಮುಕ್ತಪಾಪಃ ಸಸ್ಮಾರ ಪೂರ್ವಜಾತೀರನೇಕಶಃ ॥ ೯೬ ॥

ಸ ಪೂರ್ವಜನ್ಮನ್ಯಭವದ್ಭಿಕ್ಷುಃ ಸಂಯತವಾಙ್ಮನಾಃ ।
ಯತಕಾಯಶ್ಚ ಮತಿಮಾನ್ವೇದವೇದಾಂಗಪಾರಗಃ ॥ ೯೭ ॥

ಏಕದಾ ಗೋಷು ನಗರಾದ್ಧ್ರಿಯಮಾಣಾಸು ತಸ್ಕರೈಃ ।
ಭಿಕ್ಷಾವಧೂತಾ ರಜಸಾ ಮುಕ್ತಾ ತೇನಾಥ ಭಿಕ್ಷುಣಾ ॥ ೯೮ ॥

ವನ್ನು ಸಂದರ್ಶಿಸಿದನಂತರ ಧಾರಾಚಕ್ರವೆಂಬುವನ್ನು ಪ್ರದಕ್ಷಿಣೆ ಮಾಡಿಕೊಂಡು ಹೊರಟನು.

೯೫. ಅನಂತರ ಪರ್ವತಶ್ರೇಷ್ಠವಾದ ವಿಂಧ್ಯಗಿರಿಗೆ ಬಂದು ಪಾಪ ಪ್ರಮೋಚನವೆಂಬ ತೀರ್ಥಕ್ಕೆ ಬಂದನು.

೯೬. ಆ ಚಂಡಾಲನು ತೀರ್ಥದಲ್ಲಿ ತನ್ನೆಲ್ಲ ಪಾಪಗಳನ್ನೂ ಪರಿಹರಿಸು ವಂತಹ ಶುಭಕರವಾದ ಸ್ನಾನವನ್ನು ಮಾಡಲು ಆತನ ಪಾಪಗಳು ತೊಲಗಿ ಹೋದುವು. ಅವನಿಗೆ ತನ್ನ ಮೊದಲಿನ ಜನ್ಮಗಳ ಸಂಗತಿಯೆಲ್ಲವೂ ನೆನಪಿಗೆ ಬಂದಿತು.

೯೭. ಅವನು ಪೂರ್ವಜನ್ಮದಲ್ಲಿ ಒಬ್ಬ ಸನ್ಯಾಸಿಯಾಗಿದ್ದನು. ಅವನು ಯಾರೊಡನೆಯೂ ಮಾತನಾಡದೆ ಮೌನವ್ರತವನ್ನು ವಹಿಸಿದ್ದುದಲ್ಲದೆ, ಮನ ಸ್ಸನ್ನು ನಿಗ್ರಹಿಸಿ ಶರೀರವನ್ನು ದೃಢವಾದ ನಿಯಮದಲ್ಲಿಟ್ಟು, ವಿವೇಕಶಾಲಿ ಯೆನಿಸಿ ವೇದಗಳನ್ನೂ ವೇದಾಂಗಗಳನ್ನೂ ಚೆನ್ನಾಗಿ ಬಲ್ಲವನಾಗಿದ್ದನು.

೯೮. ಒಂದುಸಲ ಅವನಿದ್ದ ಊರಿಗೆ ಕಳ್ಳರು ಬಿದ್ದು ಹಸುಗಳನ್ನು ಹಿಡಿದು ಅಪಹರಿಸಿಕೊಂಡುಹೋದರು. ಆಗ ಸನ್ಯಾಸಿಯು ಭಿಕ್ಷೆಯನ್ನು ತರುತ್ತಿದ್ದವನು ಧೂಳು ಬಿದ್ದಿತೆಂದು ತಿರಸ್ಕರಿಸಿ ಅದನ್ನು ತಿನ್ನದೆ ಬಿಟ್ಟು ಬಿಟ್ಟನು.

ಸ ತೇನಾಧರ್ಮದೋಷೇಣ ಚಾಂಡಾಲೀಂ ಯೋನಿಮಾಗತಃ |
ಪಾಪಪ್ರಮೋಚನೇ ಸ್ನಾತಃ ಸ ಮೃತೋ ನರ್ಮದಾತಟೇ ॥ ೯೯ ॥

ಮೂರ್ಖೋಽಭೂದ್ಬ್ರಾಹ್ಮಣವರೋ ವಾರಾಣಸ್ಯಾಂ ಚ ಭೋ ದ್ವಿಜಾಃ |
ತತ್ರಾದ್ಯ ವಸತೋಽಬ್ದೈಸ್ತು ತ್ರಿಂಶದ್ಭಿಃ ಸಿದ್ಧಪೂರುಷಃ ॥ ೧೦೦ ॥

ವಿರೂಪರೂಪೀ ಬಭ್ರಾಮ ಯೋಗಮಾಲಾಬಲಾನ್ವಿತಃ |
ತಂ ದೃಷ್ಟ್ವಾ ಸೋಪಹಾಸಾರ್ಥಮಭಿವಾದ್ಯಾಭ್ಯುವಾಚ ಹ ॥ ೧೦೧ ॥

ಕುಶಲಂ ಸಿದ್ಧಪುರುಷಂ ಕುತಸ್ತ್ವಾಗಮ್ಯತೇ ತ್ವಯಾ ॥ ೧೦೨ ॥

॥ ವ್ಯಾಸ ಉವಾಚ ॥

ಏವಂ ಸಂಭಾಷಿತಸ್ತೇನ ಜ್ಞಾತೋಽಹಮಿತಿ ಚಿಂತ್ಯ ತು |
ಪ್ರತ್ಯುವಾಚಾಥ ವಂದ್ಯಸ್ತಂ ಸ್ವರ್ಗಲೋಕಾದುಪಾಗತಃ ॥ ೧೦೩ ॥

---

೯೯. ಈ ಅಧರ್ಮದ ಅಪರಾಧದಿಂದಲೇ ಅವನೀಗ ಚಂಡಾಲ ಜಾತಿಯಲ್ಲಿ ಹುಟ್ಟಿದ್ದನು. ಈಗ ವಿಂಧ್ಯಗಿರಿಯ ಪಾಪವಿಮೋಚನ ತೀರ್ಥದಲ್ಲಿ ಸ್ನಾನ ಮಾಡಿದನಂತರ, ಚಂಡಾಲನು ಅಲ್ಲಲ್ಲಿ ತಿರುಗಾಡುತ್ತಾ ಇದ್ದಾಗ ನರ್ಮದಾ ನದಿಯ ದಡದಲ್ಲಿ ಸತ್ತುಹೋದನು.

೧೦೦. ಎಲೈ ಬ್ರಾಹ್ಮಣಶ್ರೇಷ್ಠರೇ! ಚಂಡಾಲನು ಸತ್ತನಂತರ ಕಾಶೀ ಕ್ಷೇತ್ರದಲ್ಲಿ ಬುದ್ಧಿಹೀನನಾದ ಬ್ರಾಹ್ಮಣನಾಗಿ ಹುಟ್ಟಿದನು. ಅವನು ಅಲ್ಲಿಯೇ ವಾಸಮಾಡುತ್ತಿರಲು ಮೂವತ್ತು ವರ್ಷಗಳು ಕಳೆದುಹೋದುವು.

೧೦೧-೧೦೨. ಒಂದುದಿನ ಯೋಗಬಲದಿಂದ ಕೂಡಿರುವಂತಹ ವಿಕಾರ ರೂಪದ ಸಿದ್ಧಪುರುಷನೊಬ್ಬನು ಆ ಬುದ್ಧಿಹೀನನಿಗೆ ಎದುರಾದನು. ಆಗ ಅವನನ್ನು ಕಂಡು ಆ ಮಂಕನು " ನಿನಗೆ ಕ್ಷೇಮವೇ? ಎಲ್ಲಿಂದ ಬರುತ್ತಿದೀಯೆ " ಎಂದು ಪ್ರಶ್ನಿಸಿದನು.

೧೦೩. ಆಗ ಸಿದ್ಧಪುರುಷನು ಸ್ವಲ್ಪಹೊತ್ತು ಆಲೋಚಿಸಿ ನಾನಿವನಿಗೆ ಎಲ್ಲಿಯಾದರೂ ಗೊತ್ತಿರಬಹುದೆಂದು ಭಾವಿಸಿದನು. ಅನಂತರ ಸ್ವರ್ಗಲೋಕದಿಂದ ಬಂದಿದ್ದ ಪೂಜ್ಯನಾದ ಸಿದ್ಧಪುರುಷನು ಅವನೊಡನೆ ಮಾತಾಡಿದನು.

ತಂ ಸಿದ್ಧಂ ಸ್ಪ್ರಾಹ ಮೂರ್ಖೋಽಸೌ ಕಿಂ ತ್ವಂ ವೇತ್ಸಿ ತ್ರಿವಿಷ್ಟಪೇ ।
ನಾರಾಯಣೋರುಸಂಭವಾಮುರ್ವಶೀಮಪ್ಸರೋವರಾಂ ॥ ೧೦೪ ॥

ಸಿದ್ಧಸ್ತಮಾಹ ತಾಂ ವೇದ್ಮಿ ಶಕ್ರಚಾಮರಧಾರಿಣೀಂ ।
ಸ್ವರ್ಗಸ್ಯಾಭರಣಂ ಮುಖ್ಯಮುರ್ವಶೀಂ ಸಾಧುಸಂಭವಾಂ ॥ ೧೦೫ ॥

ವಿಪ್ರಃ ಸಿದ್ಧಮುವಾಚಾಥ ಋಜುಮಾರ್ಗವಿವರ್ಜಿತಃ ।
ತನ್ಮಿತ್ರ ಮತ್ಕೃತೇ ವಾರ್ತಾಮುರ್ವಶ್ಯಾ ಭವತಾದರಾತ್ ॥ ೧೦೬ ॥

ಕಥನೀಯಾ ಯಚ್ಚ ಸಾ ತೇ ಬ್ರೂಯಾದಾಖ್ಯಾಸ್ಯತೇ ಭವಾನ್ ।
ಬಾಢಮಿತ್ಯಬ್ರವೀತ್ಸಿದ್ಧಃ ಸೋಽಪಿ ವಿಪ್ರೋ ಮುದಾನ್ವಿತಃ ॥ ೧೦೭ ॥

---

೧೦೪. ಆಗ ಆ ಮೂರ್ಖನು ಸಿದ್ಧಪುರುಷನನ್ನು ಕುರಿತು "ನೀನೇನಾದರೂ ನಾರಾಯಣಮಹರ್ಷಿಯ ತೊಡೆಯಿಂದ ಜನ್ಮತಾಳಿದ, ಅಪ್ಸರೆಯರಲ್ಲೆಲ್ಲಾ ಮೇಲಾದವಳೆನಿಸಿದ ಊರ್ವಶಿಯನ್ನು ಸ್ವರ್ಗದಲ್ಲಿ ಕಂಡಿರುವೆಯಾ?" ಎಂದು ಪ್ರಶ್ನಿಸಿದನು.

೧೦೫. ಆಗ ಸಿದ್ಧಪುರುಷನು ಆ ಮೂರ್ಖನನ್ನು ಕುರಿತು "ಆ ಉರ್ವಶಿಯೇ! ಅವಳು ಇಂದ್ರನನ್ನು ಚಾಮರದಿಂದ ಗಾಳಿಹಾಕುತ್ತಾ ಸೇವಿಸುವಳು. ಸ್ವರ್ಗಕ್ಕೇ ಆಭರಣಪ್ರಾಯಳಾದ ನಾರಾಯಣಮಹರ್ಷಿಯ ಊರುಸಂಭವೆಯೆನಿಸಿದ ಉರ್ವಶಿಯನ್ನು ನಾನು ಚೆನ್ನಾಗಿ ಬಲ್ಲೆನು" ಎಂದು ನುಡಿದನು.

೧೦೬. ಆಗ ಆ ಮೂರ್ಖವಿಪ್ರನು ಋಜುವಾದ (ನೇರವಾದ) ಮಾರ್ಗವನ್ನು ಬಿಟ್ಟು, ಸಿದ್ಧನನ್ನು ಕುರಿತು ಇಂತೆಂದನು. "ಎಲೈ ಮಿತ್ರನೇ, ನೀನು ನನ್ನ ಮೇಲೆ ವಿಶ್ವಾಸವಿಟ್ಟು, ನಾನು ಹೇಳಿಕಳುಹಿಸುವ ಮಾತನ್ನು ದಯವಿಟ್ಟು ಉರ್ವಶಿಗೆ ತಿಳಿಸಬೇಕು.

೧೦೭. ಮತ್ತು ಅವಳು ಅದಕ್ಕೆ ಏನು ಹೇಳುವಳೋ ಅದನ್ನು ನನಗೆ ತಿಳಿಸಲೂಬೇಕು" (ಎನ್ನಲು) ಸಿದ್ಧನು ಹಾಗೆಯೇ ಆಗಲೆಂದು ಒಪ್ಪಿದನು. ಆಗ ಆ ಮೂರ್ಖನು ಬಹುವಾಗಿ ಸಂತೋಷದಿಂದ ಇದ್ದನು.

ಬಭೂವ ಸಿದ್ಧೋಽಪಿ ಯಯೌ ಮೇರುಪೃಷ್ಠಂ ಸುರಾಲಯಂ ।
ಸಮೇತ್ಯ ಚೋರ್ವಶೀಂ ಪ್ರಾಹ ಯದುಕ್ತೋಽಸೌ ದ್ವಿಜೇನ ತು ॥ ೧೦೮ ॥

ಸಾ ಪ್ರಾಹ ತಂ ಸಿದ್ಧವರಂ ನಾಹಂ ಕಾಶಿಪತಿಂ ದ್ವಿಜಂ ।
ಜಾನಾಮಿ ಸತ್ಯಮುಕ್ತಂ ತೇ ನ ಚೇತಸಿ ಮಮ ಸ್ಥಿತಂ ॥ ೧೦೯ ॥

ಇತ್ಯುಕ್ತಃ ಪ್ರಯಯೌ ಸೋಽಪಿ ಕಾಲೇನ ಬಹುನಾ ಪುನಃ ।
ವಾರಾಣಸೀಂ ಯಯೌ ಸಿದ್ಧೋ ದೃಷ್ಟೋ ಮೂರ್ಖೇಣ ವೈ ಪುನಃ ॥೧೧೦॥

ದೃಷ್ಟಃ ಪೃಷ್ಟಃ ಕಿಲ ಭೂಯಃ ಕಿಮಾಹೋರುಭವಾ ತವ ।
ಸಿದ್ಧೋಽಬ್ರವೀನ್ನ ಜಾನಾಮಿ ನಾಮುವಾಚೋರ್ವಶೀ ಸ್ವಯಂ ॥ ೧೧೧ ॥

ಸಿದ್ಧವಾಕ್ಯಂ ತತಃ ಶ್ರುತ್ವಾ ಸ್ಮಿತಭಿನ್ನೌಷ್ಠಸಂಪುಟಃ ।
ಪುನಃ ಪ್ರಾಹ ಕಥಂ ವೇತ್ಸೀತ್ಯೇವಂ ವಾಚ್ಯಾ ತ್ವಯೋರ್ವಶೀ ॥ ೧೧೨ ॥

---

೧೦೮. ಇತ್ತಲಾಗಿ ಸಿದ್ಧನು ಮೇರುಪರ್ವತದ ಮೇಲಿರುವ ಸ್ವರ್ಗಲೋಕಕ್ಕೆ ತೆರಳಿ ಅಲ್ಲಿ ಉರ್ವಶಿಯನ್ನು ಕಂಡು ಆ ಮೂರ್ಖ ಬ್ರಾಹ್ಮಣನು ಹೇಳಿಕಳುಹಿಸಿದ್ದ ಮಾತನ್ನು ಅವಳಿಗೆ ತಿಳಿಸಿದನು.

೧೦೯. ಆಗ ಉರ್ವಶಿಯು ಸಿದ್ಧಪುರುಷನನ್ನು ಕುರಿತು “ಕಾಶಿಯಲ್ಲಿರುವ ಆ ಬ್ರಾಹ್ಮಣನನ್ನು ನಾನು ಅರಿಯೆನು. ನಾನು ನಿನಗೆ ಸುಳ್ಳನ್ನು ಹೇಳುತ್ತಿಲ್ಲ. ನಿಜವಾಗಿಯೂ ನನ್ನ ಮನಸ್ಸಿನಲ್ಲಿ ಎಷ್ಟು ನೆನೆಸಿಕೊಂಡರೂ ಆತನ ಜ್ಞಾಪಕವು ಬರಲೊಲ್ಲದು”

೧೧೦. ಎಂದಳು. ಬಳಿಕ ಸಿದ್ಧಪುರುಷನು ಬಹಳಕಾಲ ಕಳೆದಮೇಲೆ ಮತ್ತೊಮ್ಮೆ ಕಾಶಿಗೆ ಬಂದನು. ಆಗವನನ್ನು ಆ ಮೂರ್ಖ ಬ್ರಾಹ್ಮಣನು ಕಂಡನು.

೧೧೧. ಆಗವನು “ಉರ್ವಶಿಯು ನಿನಗೆ ಏನು ಹೇಳಿದಳು?” ಎಂದು ಸಿದ್ಧಪುರುಷನನ್ನು ಪ್ರಶ್ನಿಸಲು, ಅವನು “ಆ ಬ್ರಾಹ್ಮಣನ ವಿಷಯ ನನಗೇನೂ ತಿಳಿಯದೆಂದು” ಆ ಉರ್ವಶಿಯು ತಿಳಿಸಿದಳೆಂದು ಹೇಳಿದನು.

೧೧೨. ಅದನ್ನು ಕೇಳಿ ಆ ಮೂರ್ಖನು “ಹಾಗಾದರೆ ನನ್ನನ್ನು ನೀನು ತಿಳಿಯುವ ಬಗೆ ಹೇಗೆ?” ಎಂದು ಆ ಉರ್ವಶಿಯನ್ನು ಕೇಳಿಕೊಂಡು

ಬಾಢಮೇವಂ ಕರಿಷ್ಯಾಮೀತ್ಯುಕ್ತ್ವಾ ಸಿದ್ಧೋ ದಿವಂ ಗತಃ ।
ದದರ್ಶ ಶಕ್ರಭವನಾನ್ನಿಷ್ಕ್ರಾಮಂತೀಮಥೋರ್ವಶೀಂ ॥ ೧೧೩ ॥

ಪ್ರೋವಾಚ ತಾಂ ಸಿದ್ಧವರಃ ಸಾ ಚ ತಂ ಸಿದ್ಧಮಬ್ರವೀತ್ ।
ನಿಯಮಂ ಕಂಚಿದಪಿ ಹಿ ಕರೋತು ದ್ವಿಜಸತ್ತಮಃ ॥ ೧೧೪ ॥

ಯೇನಾಹಂ ಕರ್ಮಣಾ ಸಿದ್ಧ ತಂ ಜಾನಾಮಿ ನ ಚಾನ್ಯಥಾ ।
ತದುರ್ವಶೀವಚೋಽಭ್ಯೇತ್ಯ ತಸ್ಮೈ ಮೂರ್ಖದ್ವಿಜಾಯ ತು ॥ ೧೧೫ ॥

ಕಥಯಾಮಾಸ ಸಿದ್ಧಸ್ತು ಸೋಽಪೀಮಂ ನಿಯಮಂ ಜಗೌ ।
ತವಾಗ್ರೇ ಸಿದ್ಧಪುರುಷ ನಿಯಮೋಽಯಂ ಕೃತೋ ಮಯಾ ॥ ೧೧೬ ॥

ಬಂದು ನನಗೆ ತಿಳಿಸಬೇಕು" ಎಂದು ನಗುತ್ತಾ ಸಿದ್ಧಪುರುಷನನ್ನು ಪ್ರಾರ್ಥಿಸಿಕೊಂಡನು.

೧೧೩. ಆಗ ಸಿದ್ಧಪುರುಷನು ಹಾಗೆಯೇ ಆಗಲೆಂದು ಹೇಳಿ ಸ್ವರ್ಗ ಲೋಕಕ್ಕೆ ಹೊರಟುಹೋದನು. ಒಂದುದಿನ ಉರ್ವಶಿಯು ಇಂದ್ರನ ಅರಮನೆಗೆ ಹೋಗಿ ಹಿಂದಿರುಗಿ ಬರುತ್ತಿದ್ದಳು. ಆಗ ಸಿದ್ಧನು ಅವಳನ್ನು ಕಂಡು-

೧೧೪-೧೧೫. ಆ ಮೂರ್ಖ ಬ್ರಾಹ್ಮಣನು ಹೇಳಿಕಳುಹಿಸಿದ್ದ ಮಾತನ್ನು ತಿಳಿಸಿದನು. ಆಗ ಉರ್ವಶಿಯು ಸಿದ್ಧಪುರುಷನನ್ನು ಕುರಿತು "ಅವನು ಯಾವುದಾದರೂ ನಿಯಮವನ್ನು ಹಿಡಿದು ಅದನ್ನು ಪಾಲಿಸಿಕೊಂಡು ಬರಬೇಕು. ಹಾಗಾದರೆ ನಾನು ಅವನನ್ನು ಅರಿಯಬಲ್ಲೆನು. ಇಲ್ಲದಿದ್ದರೆ ಮಾತ್ರ ಸಾಧ್ಯವಿಲ್ಲ" ಎಂದು ಹೇಳಿಕಳುಹಿಸಿದಳು. ಅದನ್ನು ಕೇಳಿದ ಸಿದ್ಧಪುರುಷನು ಮರಳಿ ಕಾಶಿಗೆ ಬಂದಾಗ ಆ ಮೂರ್ಖ ಬ್ರಾಹ್ಮಣನನ್ನು ಕಂಡು ಅದೆಲ್ಲವನ್ನೂ ತಿಳಿಸಿದನು.

೧೧೬. ಆಗ ಆ ಮೂರ್ಖನು ಸಿದ್ಧಪುರುಷನೆದುರಿಗೆ ಈರೀತಿ ಪ್ರತಿಜ್ಞೆ ಮಾಡಿದನು. ಎಲೈ ಸಿದ್ಧಪುರುಷನೇ, ನಿನ್ನೆದುರಿಗೆ ಇದೋ ಈ ಪ್ರತಿಜ್ಞೆಯನ್ನು ಮಾಡಿರುವೆನು-

ಸ ಭೋಕ್ಷ್ಯೇಽದ್ಯಪ್ರಭೃತಿ ವೈ ಶಕಟಂ ಸತ್ಯಮೀರಿತಂ ।
ಇತ್ಯುಕ್ತಃ ಪ್ರಯಯೌ ಸಿದ್ಧಃ ಸ್ವರ್ಗೇ ದೃಷ್ಟ್ವೋರ್ವಶೀಮಥ ॥ ೧೧೭ ॥

ಪ್ರಾಹಾಸೌ ಶಕಟಂ ಭೋಕ್ಷ್ಯೇ ನಾದ್ಯಪ್ರಭೃತಿ ಕರ್ಹಿಚಿತ್ ।
ತಂ ಸಿದ್ಧಮುರ್ವಶೀ ಪ್ರಾಹ ಜ್ಞಾತೋಽಸೌ ಸಾಂಪ್ರತಂ ಮಯಾ ॥ ೧೧೮ ॥

ನಿಯಮಗ್ರಹಣಾದೇವ ಮೂರ್ಖೋ ಮಾಮುಪಹಾಸಕಃ ।
ಇತ್ಯುಕ್ತ್ವಾ ಪ್ರಯಯೌ ಶೀಘ್ರಂ ವಾಸಂ ನಾರಾಯಣಾತ್ಮಜಾ ॥ ೧೧೯ ॥

ಸಿದ್ಧೋಽಪಿ ವಿಚಚಾರಾಸೌ ಕಾಮಚಾರೀ ಮಹೀತಲಂ ।
ಉರ್ವಶ್ಯಪಿ ವರರೋಹಾ ಗತ್ವಾ ವಾರಾಣಸೀಂ ಪುರೀಂ ॥ ೧೨೦ ॥

---

೧೧೭. “ಇಂದು ಮೊದಲುಗೊಂಡು ಮುಂದೆಂದಿಗೂ ಖಂಡಿತವಾಗಿಯೂ ಶಕಟ (ಬಂಡಿ-ಗಾಡಿ) ವನ್ನು ತಿನ್ನುವುದಿಲ್ಲವು. ಈ ಮಾತು ಸುಳ್ಳಲ್ಲ. ಸತ್ಯವಾದುದು.” ಈರೀತಿ ಅವನು ಪ್ರತಿಜ್ಞೆ ಮಾಡಿದನಂತರ ಸಿದ್ಧನು ಸ್ವರ್ಗಕ್ಕೆ ತೆರಳಿದನು.

೧೧೮. ಅಲ್ಲಿ ಉರ್ವಶಿಯನ್ನು ಕಂಡು, “ಇನ್ನುಮೇಲೆ ನಾನೆಂದೆಂದಿಗೂ ಶಕಟವನ್ನು ತಿನ್ನುವುದಿಲ್ಲವೆಂದು ಆ ಮೂರ್ಖನು ಪ್ರತಿಜ್ಞೆ ಮಾಡಿರುವನೆಂದು” ತಿಳಿಸಿದನು. ಆಗ ಉರ್ವಶಿಯು ಸಿದ್ಧಪುರುಷನನ್ನು ಕುರಿತು, “ಈಗಲೀಗ ತಿಳಿಯಿತು-

೧೧೯. ಇವನು ಯಾವಾಗ ನಿಯಮವನ್ನು ಅವಲಂಬಿಸಿದನೋ ಆಗಲೇ ಮೂರ್ಖನೆಂಬುವುದು ಗೊತ್ತಾದಂತಾಯಿತು. ಇವನು ವಿನೋದವನ್ನು ಮಾಡುತ್ತಿಲ್ಲ.” ಎಂದು ಹೇಳಿ ತನ್ನ ಮನೆಗೆ ಹೊರಟುಹೋದಳು.

೧೨೦. ಇತ್ತಲಾಗಿ ತನ್ನ ಇಚ್ಛೆಯಂತೆ ಎಲ್ಲೆಲ್ಲಿಯೂ ಸಂಚರಿಸಬಲ್ಲ ಆ ಸಿದ್ಧಪುರುಷನು ಭೂಮಂಡಲಕ್ಕೆ ಬಂದು ಸಂಚರಿಸುತ್ತಿದ್ದನು. ಬಳಿಕ ಕಡುಚೆಲುವೆಯೆನಿಸಿದ ಆ ಉರ್ವಶಿಯು ಒಂದುದಿನ ಕಾಶಿಗೆ ಬಂದಳು.

ಮತ್ಸ್ಯೋದರೀಜಲೇ ಸ್ನಾನಂ ಚಕ್ರೇ ದಿವ್ಯವಪುರ್ಧರಾ ।
ಅಥಾಸಾವಪಿ ಮೂರ್ಖಸ್ತು ನದೀಂ ಮತ್ಸ್ಯೋದರೀಂ ಮುನೇ ॥ ೧೨೧ ॥

ಜಗಾಮಾಥ ದದರ್ಶಾಸೌ ಸ್ನಾಯಮಾನಾಮಥೋರ್ವಶೀಂ ।
ತಾಂ ದೃಷ್ಟ್ವಾ ವವೃಧೇಽಥಾಸ್ಯ ಮನ್ಮಥಃ ಕ್ಷೋಭಕೃದ್ದೃಢಂ ॥ ೧೨೨ ॥

ಚಕಾರ ಮೂರ್ಖಶ್ಚೇಷ್ಟಾಶ್ಚ ತಂ ವಿವೇದೋರ್ವಶೀ ಸ್ವಯಂ ।
ತಂ ಮೂರ್ಖಂ ಸಿದ್ಧಗದಿತಂ ಜ್ಞಾತ್ವಾ ಸಸ್ಮಿತಮಾಹ ತಂ ॥ ೧೨೩ ॥

॥ ಉರ್ವಶ್ಯುವಾಚ ॥

ಕಿಮಿಚ್ಛಸಿ ಮಹಾಭಾಗ ಮತ್ತಃ ಶೀಘ್ರಮಿಹೋಚ್ಯತಾಂ ।
ಕರಿಷ್ಯಾಮಿ ವಚಸ್ತುಭ್ಯಂ ತ್ವಂ ವಿಶ್ರಬ್ಧಂ ಕರಿಷ್ಯಸಿ ॥ ೧೨೪ ॥

---

೧೨೧. ಆಗವಳು ದಿವ್ಯವಾದ ಶರೀರವನ್ನು ಧರಿಸಿ ಮತ್ಸ್ಯೋದರೀ ನದಿಯ ನೀರಿನಲ್ಲಿ ಮೀಯುತ್ತಿದ್ದಳು. ಆ ಸಮಯಕ್ಕೆ ಸರಿಯಾಗಿ ಆ ಮೂರ್ಖ ಬ್ರಾಹ್ಮಣನೂ ಮತ್ಸ್ಯೋದರೀನದಿಗೆ ಸ್ನಾನ ಮಾಡಲು ಬಂದನು.

೧೨೨. ಅಲ್ಲವನು ಉರ್ವಶಿಯು ಸ್ನಾನಮಾಡುತ್ತಿರುವುದನ್ನು ಕಾಣುತ್ತಲೇ ಅವನಲ್ಲಿ ಕಾಮವಿಕಾರವುಂಟಾಯಿತು. ಮತ್ತು ಅದು ಕ್ರಮಕ್ರಮವಾಗಿ ಹೆಚ್ಚುತ್ತಾ ಅವನ ಮನಸ್ಸನ್ನು ಬಹುವಾಗಿ ತಳಮಳಗೊಳಿಸತೊಡಗಿತು.

೧೨೩. ಅನಂತರ ಆ ಮೂರ್ಖನು ಬಗೆಬಗೆಯಾದ ಕಾಮಚೇಷ್ಟೆಗಳಿಗೆ ಆರಂಭಿಸಿದನು. ಇದೆಲ್ಲವನ್ನೂ ಕಂಡು ಆ ಉರ್ವಶಿಯು "ಇವನೇ ಆ ಸಿದ್ಧ ಪುರುಷನು ಹೇಳಿದ ಮೂರ್ಖನಿರಬಹುದೆಂದು" ನಿಶ್ಚಯಿಸಿ ನಗುನಗುತ್ತಾ ಅವನನ್ನಿಂತೆಂದಳು.

೧೨೪. "ಎಲೈ ಭಾಗ್ಯಶಾಲಿಯೇ! ನನ್ನಿಂದ ನಿನಗೇನಾಗಬೇಕಾಗಿದೆ? ಏನನ್ನು ಬಯಸುತ್ತೀಯೆ? ಬೇಗನೆ ಹೇಳು. ನಿನ್ನ ಮಾತನ್ನು ನಡೆಸಿಕೊಡುವೆನು. ನೀನೇನೂ ಆತಂಕವಿಲ್ಲದೆ ನಿನ್ನಿಷ್ಟವನ್ನು ತಿಳಿಸಬಹುದು" ಎನ್ನಲು

॥ ಮೂರ್ಖಬ್ರಾಹ್ಮಣ ಉವಾಚ ॥

ಆತ್ಮಪ್ರದಾನೇನ ಮಮ ಪ್ರಾಣಾನ್ರಕ್ಷ ಶುಚಿಸ್ಮಿತೇ　　॥ ೧೨೫ ॥

॥ ವ್ಯಾಸ ಉವಾಚ ॥

ತಂ ಪ್ರಾಹಾಥೋರ್ವಶೀ ವಿಪ್ರಂ ನಿಯಮಸ್ಥಾಸ್ಮಿ ಸಾಂಪ್ರತಂ ।
ತ್ವಂ ತಿಷ್ಠಸ್ವ ಕ್ಷಣಮಥ ಪ್ರತೀಕ್ಷಸ್ವಾಗತಂ ಮಮ　　॥ ೧೨೬ ॥

ಸ್ಥಿತೋಽಸ್ಮೀತ್ಯಬ್ರವೀದ್ವಿಪ್ರಃ ಸಾಪಿ ಸ್ವರ್ಗಂ ಜಗಾಮ ಹ ।
ಮಾಸಮಾತ್ರೇಣ ಸಾಯಾತಾ ದದರ್ಶ ತಂ ಕೃಶಂ ದ್ವಿಜಂ　　॥ ೧೨೭ ॥

ಸ್ಥಿತಂ ಮಾಸಂ ನದೀತೀರೇ ನಿರಾಹಾರಂ ಸುರಾಂಗನಾ ।
ತಂ ದೃಷ್ಟ್ವಾ ನಿಶ್ಚಯಯುತಂ ಭೂತ್ವಾ ವೃದ್ಧವಪುಸ್ತತಃ　　॥ ೧೨೮ ॥

---

೧೨೫. ಆ ಮೂರ್ಖ ಬ್ರಾಹ್ಮಣನು ಅವಳನ್ನು ಕುರಿತು “ ಎಲೌ ಶುಚಿಸ್ಮಿತೇ ! (ಶುಭ್ರವಾದ ನಗುವುಳ್ಳವಳು) ನೀನು ನನಗೆ ವಶವಾಗಬೇಕು. ಹಾಗಾದರೆ ನನ್ನ ಪ್ರಾಣಗಳು ನಿಲ್ಲುವುವು. ಅವುಗಳನ್ನು ಕಾಪಾಡು ” ಎಂದು ಪ್ರಾರ್ಥಿಸಿದನು.

೧೨೬. ಎಲೈ ಮುನಿಗಳಿರಾ! ಆ ಉರ್ವಶಿಯು ಆಗ ಅವನನ್ನು “ ಓ ಬ್ರಾಹ್ಮಣಾ ” ನಾನೀಗ ಒಂದು ವ್ರತವನ್ನು (ನೇಮವನ್ನು) ಹಿಡಿದಿರುವೆನು. ಆದುದರಿಂದ ಒಂದು ಕ್ಷಣಕಾಲ ಮಾತ್ರ ನಿಲ್ಲು. ಇದೋ ಬಂದೆ, ಎದುರುನೋಡುತ್ತಿರು ” ಎಂದಳು.

೧೨೭. ಆಗವನು ಹಾಗೆಯೇ ಆಗಲೆಂದು ಹೇಳಿ ನಿಂತಿರುವೆನೆನ್ನಲು ಅವಳು ಸ್ವರ್ಗಕ್ಕೆ ಹೊರಟುಹೋದಳು. ಬಳಿಕ ದೇವಲೋಕದ ಅಪ್ಸರೆಯು ಒಂದು ತಿಂಗಳು ಬಿಟ್ಟುಕೊಂಡು ಆ ಬ್ರಾಹ್ಮಣನನ್ನು ನೋಡಲು ಅಲ್ಲಿಗೆ ಬಂದಳು.

೧೨೮. ಅಷ್ಟುಹೊತ್ತಿಗೆ ಬ್ರಾಹ್ಮಣನು ತನ್ನ ಮಾತಿನಂತೆ ಅತ್ತಿತ್ತ ಅಲುಗದೆ ಒಂದು ತಿಂಗಳಕಾಲ ಆ ನದೀತೀರದಲ್ಲಿಯೇ ಆಹಾರವಿಲ್ಲದೆ ಕಾಯ್ದುಕೊಂಡಿದ್ದುದರಿಂದ ಬಹುವಾಗಿ ಬಡವಾಗಿಬಿಟ್ಟಿದ್ದನು. ಈರೀತಿ ದೃಢ ನಿರ್ಧಾರದಿಂದ ಕೂಡಿದ್ದ ಅವನನ್ನು ಕಂಡು ಉರ್ವಶಿಯು ಮುದುಕಿಯಂತೆ ವೇಷವನ್ನು ತಾಳಿದಳು.

ಸಾ ಚಕಾರ ನದೀತೀರೇ ಶಕಟಂ ಶರ್ಕರಾವೃತಂ ।
ಘೃತೇನ ಮಧುನಾ ಚೈವ ನದೀಂ ಮತ್ಸ್ಯೋದರೀಂ ಗತಾ ॥ ೧೨೯ ॥

ಸ್ನಾತ್ವಾಥ ಭೂಮೌ ವಸಂತೀ ಶಕಟಂ ಚ ಯಥಾರ್ಥತಃ ।
ತಂ ಬ್ರಾಹ್ಮಣಂ ಸಮಾಹೂಯ ವಾಕ್ಯಮಾಹ ಸುಲೋಚನಾ ॥ ೧೩೦ ॥

॥ ಉರ್ವಶ್ಯುವಾಚ ॥

ಮಯಾ ತೀವ್ರಂ ವ್ರತಂ ವಿಪ್ರ ಚೀರ್ಣಂ ಸೌಭಾಗ್ಯಕಾರಣಾತ್ ।
ವ್ರತಾಂತೇ ನಿಷ್ಕೃತಿಂ ದದ್ಯಾಂ ಪ್ರತಿಗೃಹ್ಣೀಷ್ವ ಭೋ ದ್ವಿಜ ॥ ೧೩೧ ॥

॥ ವ್ಯಾಸ ಉವಾಚ ॥

ಸ ಪ್ರಾಹ ಕಿಮಿದಂ ಲೋಕೇ ದೀಯತೇ ಶರ್ಕರಾವೃತಂ ।
ಶ್ರುತ್ವಾಹಂ ಮುಕಂಠಃ ಪೃಚ್ಛಾಮಿ ಸಾಧು ಭದ್ರೇ ಸಮೀರಯ ॥ ೧೩೨ ॥

---

೧೨೯. ಬಳಿಕ ಆ ಮತ್ಸ್ಯೋದರಿಯ ತೀರದಲ್ಲಿ, ಸಕ್ಕರೆಗೆ ತುಪ್ಪವನ್ನೂ ಜೇನುತುಪ್ಪವನ್ನೂ ಬೆರೆಸಿ ಅದರಿಂದ ಬಂಡಿಯು ಹಾಗಿರುವ ಒಂದು ಭಕ್ಷ್ಯವನ್ನು ಮಾಡಿದಳು. ಆಮೇಲೆ ಮತ್ಸ್ಯೋದರೀ ನದಿಗೆ ಸ್ನಾನಮಾಡಲು ಇಳಿದಳು.

೧೩೦. ಅಲ್ಲಿ ಸ್ನಾನ ಮಾಡಿದನಂತರ ಪುನಃ ಮೇಲಕ್ಕೆ ಬಂದು ಆ ಬ್ರಾಹ್ಮಣನನ್ನು ಕರೆದು, ಸಕ್ಕರೆಯ ಗಾಡಿಯನ್ನು ಮುಂದಿಟ್ಟು ಮಾರುವೇಷದಲ್ಲಿದ್ದ ಉರ್ವಶಿಯು ಇಂತೆಂದಳು–

೧೩೧. “ ಎಲೈ ಬ್ರಾಹ್ಮಣನೇ ! ನನ್ನ ಸೌಭಾಗ್ಯವು ಸ್ಥಿರವಾಗಿರಲೆಂದು ಬಯಸಿ ಭಾರಿಯಾದ ನೇಮವೊಂದನ್ನು ಹಿಡಿದಿದ್ದೆನು. ಅದು ಇಂದಿಗೆ ಮುಗಿಯಿತು. ಆ ವ್ರತವು ಸಫಲವಾಗಲೆಂದು ಈ ಶಕಟವನ್ನು ದಾನಮಾಡಬೇಕೆಂದಿರುವೆನು. ನೀನು ಪರಿಗ್ರಹಿಸಬೇಕು. ”

೧೩೨. ಎಲೈ ಮಹರ್ಷಿಗಳಿರಾ ! ಹೀಗೆ ಅವಳು ಹೇಳಿದುದನ್ನು ಕೇಳಿ ಆ ಮೂರ್ಖ ಬ್ರಾಹ್ಮಣನು ಅವಳನ್ನು ಕುರಿತು “ ಎಲೌ ಕಲ್ಯಾಣಿ, ಹಸಿವಿನಿಂದ ಕುತ್ತಿಗೆಯೊತ್ತಿಕೊಂಡುಬರುತ್ತಿರುವ ನಾನು ಕೇಳುವೆನು. ಜನರು ಸಕ್ಕರೆಯಿಂದ ಅದೇನೋ ಮಾಡಿಕೊಡುವರಲ್ಲಾ ಅದರ ಹೆಸರೇನು ? ನನಗೆ ಹೇಳು ! ” ಎಂದು ಪ್ರಶ್ನಿಸಿದನು.

ಸಾ ಪ್ರಾಹ ಶಕಟೋ ವಿಪ್ರ ಶರ್ಕರಾಪಿಷ್ಟಸಂಯುತಃ ।
ಇಮಂ ತ್ವಂ ಸಮುಪಾದಾಯ ಪ್ರಾಣಂ ತರ್ಪಯ ಮಾ ಚಿರಂ ॥ ೧೩೩ ॥

ಸ ತಚ್ಛ್ರುತ್ವಾಥ ಸಂಸ್ಮೃತ್ಯ ಕ್ಷುಧಯಾ ಪೀಡಿತೋಽಪಿ ಸನ್ ।
ಪ್ರಾಹ ಭದ್ರೇ ನ ಗೃಹ್ಣಾಮಿ ನಿಯಮೋ ಹಿ ಕೃತೋ ಮಯಾ ॥ ೧೩೪ ॥

ಪುರತಃ ಸಿದ್ಧವರ್ಗಸ್ಯ ನ ಭೋಕ್ಷ್ಯೇ ಶಕಟಂ ತ್ವಿತಿ ।
ಪರಿಜ್ಞಾನಾರ್ಥಮುರ್ವಶ್ಯಾ ದದಸ್ವಾನ್ಯಸ್ಯ ಕಸ್ಯಚಿತ್ ॥ ೧೩೫ ॥

ಸಾಬ್ರವೀನ್ನಿಯಮೋ ಭದ್ರ ಕೃತಃ ಕಾಷ್ಠಮಯೇ ತ್ವಯಾ ।
ನಾಸೌ ಕಾಷ್ಠಮಯೋ ಭುಂಕ್ಷ್ವ ಕ್ಷುಧಯಾ ಚಾತಿಪೀಡಿತಃ ॥ ೧೩೬ ॥

---

೧೩೩. ಅದಕ್ಕವಳು "ಎಲೆ ಬ್ರಾಹ್ಮಣನೇ! ಇದು ಸಕ್ಕರೆ ಮತ್ತು ಹಿಟ್ಟನ್ನು ಬೆರೆಸಿ ಮಾಡಿದ ಶಕಟವೆಂಬುದು. ಇದನ್ನು ನೀನು ಸ್ವೀಕಾರಮಾಡಿ ಬೇಗನೆ ನನಗೆ ತೃಪ್ತಿಯಾಗುವಂತೆ ಮಾಡು" ಎಂದಳು.

೧೩೪. ಆಗ ಆ ಮೂರ್ಖನು ಹಸಿವಿನಿಂದ ಬಹುವಾಗಿ ಪೀಡಿತನಾಗಿದ್ದರೂ, ತನ್ನ ಪ್ರತಿಜ್ಞೆಯನ್ನು ಜ್ಞಾಪಿಸಿಕೊಂಡು, "ಎಲೈ ಸುಮಂಗಲಿಯೇ, ನಾನಿದನ್ನು ಸ್ವೀಕರಿಸಲಾರೆನು. ನಾನೂ ಒಂದು ನಿಯಮವನ್ನು ಹಿಡಿದಿರುವೆನು.

೧೩೫. ನಾನಿನ್ನು ಮುಂದೆ ಶಕಟವನ್ನು ತಿನ್ನಲಾರೆನೆಂದು ಸಿದ್ಧಪುರುಷನೆದುರು, "ಉರ್ವಶಿಗೆ ನಾನು ಗೊತ್ತಾಗಬೇಕು" ಎಂಬಾಸೆಯಿಂದ ಪ್ರತಿಜ್ಞೆ ಮಾಡಿರುವೆನು. ಆದುದರಿಂದ ಇದನ್ನು ಮತ್ತಾರಿಗಾದರೂ ಕೊಡು" ಎಂದು ನುಡಿದನು.

೧೩೬. ಆಗವಳು ಅದನ್ನು ಕೇಳಿ "ಎಲೈ ಸೌಮ್ಯನೇ! ನೀನು ಮರದ ಶಕಟ (ಬಂಡಿ) ವನ್ನು ತಿನ್ನುವುದಿಲ್ಲವೆಂದಲ್ಲವೇ ಪ್ರತಿಜ್ಞೆಮಾಡಿರುವುದು. ಇದು ಮರದಿಂದ ಮಾಡಿದುದಲ್ಲ. ನಿನಗೂ ಬಹು ಹಸಿವಾಗಿದೆ. ಆದುದರಿಂದ ತಿನ್ನು" ಎಂದಳು.

ತಾಂ ಬ್ರಾಹ್ಮಣಃ ಪ್ರತ್ಯುವಾಚ ಸ ಮಯಾ ತದ್ವಿಶೇಷಣಂ ।
ಕೃತಂ ಭದ್ರೇಽಥ ನಿಯಮಃ ಸಾಮಾನ್ಯೇನೈವ ಮೇ ಕೃತಃ ॥ ೧೩೭ ॥

ತಂ ಭೂಯಃ ಪ್ರಾಹ ಸಾ ತನ್ವೀ ನ ಚೇದ್ಭೋಕ್ಷ್ಯಸಿ ಬ್ರಾಹ್ಮಣ ।
ಗೃಹಂ ಗೃಹೀತ್ವಾ ಗಚ್ಛಸ್ವ ಕುಟುಂಬಂ ತವ ಭೋಕ್ಷ್ಯತಿ ॥ ೧೩೮ ॥

ಸ ತಾಮುವಾಚ ಸುದತಿ ನ ತಾವದ್ಯಾಮಿ ಮಂದಿರಂ ।
ಇಹಾಯಾತಾ ವರಾರೋಹಾ ತ್ರೈಲೋಕ್ಯೇಽಪ್ಯಧಿಕಾ ಗುಣೈಃ ॥ ೧೩೯ ॥

ಸಾ ಮಯಾ ಮದನಾರ್ತೇನ ಪ್ರಾರ್ಥಿತಾಶ್ವಾಸಿತಸ್ತಯಾ ।
ಸ್ಥೀತಾಯಂ ಕ್ಷಣಮಿತ್ಯೇವಂ ಸ್ಥಾಸ್ಯಾಮೀತಿ ಮಯೋದಿತಂ ॥ ೧೪೦ ॥

೧೩೭. ಅದಕ್ಕಾ ಮೂರ್ಖ ಬ್ರಾಹ್ಮಣನು "ಎಲೌ ಭದ್ರೆ! ನಾನು ಶಕಟವನ್ನು ತಿನ್ನುವುದಿಲ್ಲವೆಂದು ಸಾಮಾನ್ಯರೀತಿಯಿಂದ ಪ್ರತಿಜ್ಞೆಮಾಡಿದ್ದೇನೇ ವಿನಹ ಮರದ್ದೆಂದಾಗಲಿ ಮತ್ತಾವರೀತಿಯದೆಂದಾಗಲಿ ವಿಶೇಷರೀತಿಯಲ್ಲಿ ಪ್ರತಿಜ್ಞೆಮಾಡಿರಲಿಲ್ಲ" ಎನ್ನಲು

೧೩೮. ಆಗ ಮಾರುವೇಷದ ಊರ್ವಶಿಯು "ನೀನು ತಿನ್ನದೆ ಇದ್ದರೆ ಹೋಗಲಿ. ಮನೆಗಾದರೂ ತೆಗೆದುಕೊಂಡುಹೋಗು. ನಿನ್ನ ಮನೆಯವರು ತಿನ್ನುವರು" ಎಂದು ನುಡಿದಳು.

೧೩೯. ಆಗ ಅವನು ಅವಳನ್ನು ಕುರಿತು "ನಾನೀಗ ಮನೆಗೆ ಹೋಗಲಾರೆನು. ತನ್ನ ಗುಣಗಳಿಂದ ಮೂರು ಲೋಕಗಳಲ್ಲೂ ಮಿಗಿಲೆನಿಸಿರುವ ರಮಣೀರತ್ನವಾದ ಊರ್ವಶಿಯು ಇಲ್ಲಿಗೆ ಬಂದಿದ್ದಳು.

೧೪೦. ಅವಳನ್ನು ಕಂಡು ನಾನು ಕಾಮಪರವಶನಾದೆನು. ಆದರಿಂದ ನಾನು ಕಂಗೆಟ್ಟು ಅವಳನ್ನು ಒಲಿಯುವಂತೆ ಅಂಗಲಾಚಿದೆನು. ಅವಳು ನನ್ನನ್ನು ಸಂತೈಸಿ ಒಂದು ಕ್ಷಣಕಾಲ ನಿಂತಿರೆಂದಳು. ನಾನೂ ಹಾಗೆಯೇ ನಿಲ್ಲುವೆನೆಂದು ಒಪ್ಪಿದೆನು.

ಮಾಸಮಾತ್ರಂ ಗತಾಯಾಸ್ತು ತಸ್ಯಾ ಭದ್ರೇ ಸ್ಥಿತಸ್ಯ ಚ ।
ಮಮ ಸತ್ಯಾನುರಕ್ತಸ್ಯ ಸಂಗಮಾಯ ಧೃತವ್ರತೇ ॥ ೧೪೧ ॥

ತಸ್ಯ ಸಾ ವಚನಂ ಶ್ರುತ್ವಾ ಕೃತ್ವಾ ಸ್ವಂ ರೂಪಮನುತ್ತಮಂ ।
ವಿಹಸ್ಯ ಭಾವಗಂಭೀರಮುರ್ವಶೀ ಪ್ರಾಹ ತಂ ದ್ವಿಜಂ ॥ ೧೪೨ ॥

॥ ಉರ್ವಶ್ಯುವಾಚ ॥

ಸಾಧು ಸತ್ಯಂ ತ್ವಯಾ ವಿಪ್ರ ವ್ರತಂ ನಿಶ್ಚಿತಚೇತಸಾ ।
ನಿಷ್ಪಾದಿತಂ ಹಠಾದೇವ ಮಮ ದರ್ಶನಮಿಚ್ಛತಾ ॥ ೧೪೩ ॥

ಅಹಮೇವೋರ್ವಶೀ ವಿಪ್ರ ತ್ವಾಂ ಜಿಜ್ಞಾಸಾರ್ಥಮಾಗತಾ ।
ಪರೀಕ್ಷಿತೋ ನಿಶ್ಚಿತವಾನ್ಭವಾನ್ಸತ್ಯತಪಾ ಋಷಿಃ ॥ ೧೪೪ ॥

ಗಚ್ಛ ಶೂಕರವೋದ್ದೇಶಂ ರೂಪತೀರ್ಥೇತಿ ವಿಶ್ರುತಂ ।
ಸಿದ್ಧಿಂ ಯಾಸ್ಯಸಿ ವಿಪ್ರೇಂದ್ರ ತತಸ್ತ್ವಂ ಮಾಮವಾಪ್ಸ್ಯಸಿ ॥ ೧೪೫ ॥

---

೧೪೧. ಎಲೌ ಭದ್ರೆ ! ಅವಳು ಹೊರಟು ಇಂದಿಗೆ ಒಂದು ತಿಂಗಳಾಯಿತು. ನಾನೂ ಕೂಡ ಅವಳ ಸಮಾಗಮವುಂಟಾಗುವುದೆಂದು ಭಾವಿಸಿ ಕೊಟ್ಟ ಮಾತಿನಂತೆ ಅವಳನ್ನು ನಿರೀಕ್ಷಿಸುತ್ತಾ ಹೀಗೆಯೇ ನಿಂತು ಒಂದು ತಿಂಗಳಾಯಿತು " ಎಂದನು.

೧೪೨. ಇದನ್ನು ಕೇಳುತ್ತಲೇ ಆ ಕಪಟರೂಪಧಾರಿಣಿಯಾದ ಉರ್ವಶಿಯು ತನ್ನ ನಿಜವಾದ ದಿವ್ಯರೂಪವನ್ನು ಧರಿಸಿ ಭಾವಗರ್ಭಿತವಾದ ಮಾತನ್ನಾಡಿದಳು.

೧೪೩. " ಎಲೈ ಬ್ರಾಹ್ಮಣನೆ! ಒಳ್ಳೆಯದು! ನನ್ನನ್ನು ನೋಡಬೇಕೆಂದು ಬರಿಯ ಹಟದಿಂದಲೇ ಬಯಸಿದ್ದರೂ ನೀನು ನಿಯಮದಲ್ಲಿ ಶ್ರದ್ಧೆಯನ್ನಿಟ್ಟು ನಿನ್ನ ವ್ರತವನ್ನು ಚೆನ್ನಾಗಿಯೇ ನೆರವೇರಿಸಿದೆ.

೧೪೪. ನಾನು ಮತ್ತಾರೂ ಅಲ್ಲ. ಉರ್ವಶಿಯೇನೇ, ನಿನ್ನನ್ನು ಪರೀಕ್ಷಿಸಬೇಕೆಂದೇ ಈರೀತಿ ಬಂದಿದ್ದೆನು. ಈ ಪರೀಕ್ಷೆಯಲ್ಲಿ ನೀನು ಸತ್ಯವನ್ನೇ ನೆಚ್ಚಿ, ಅದನ್ನೇ ತಪಸ್ಸನ್ನಾಗಿ ಆಚರಿಸುವ ಋಷಿಯೆಂದು ನನಗೆ ಚೆನ್ನಾಗಿ ಮನವರಿಕೆಯಾಯಿತು.

೧೪೫ ಎಲೈ ವಿಪ್ರಶ್ರೇಷ್ಠನೇ! ಈಗ ನೀನು ರೂಪತೀರ್ಥವೆಂದು ಪ್ರಸಿದ್ಧವಾದ ಶೂರವವೆಂಬ ಪ್ರದೇಶಕ್ಕೆ ಹೋಗು. ಅಲ್ಲಿ ನಿನಗೆ ಸಿದ್ಧಿಯುಂಟಾಗುವುದು. ಬಳಿಕ ನೀನು ನನ್ನನ್ನು ಹೊಂದುವಿಯಂತೆ " ಎಂದಳು.

|| ವ್ಯಾಸ ಉವಾಚ ||

ಇತ್ಯುಕ್ತ್ವಾ ದಿವಮುತ್ಪತ್ಯ ಸಾ ಜಗಾಮೋರ್ವಶೀ ದ್ವಿಜಾಃ |
ಸ ಚ ಸತ್ಯತಪಾ ವಿಪ್ರೋ ರೂಪತೀರ್ಥಂ ಜಗಾಮ ಹ || ೧೪೬ ||

ತತ್ರ ಶಾಂತಿಪರೋ ಭೂತ್ವಾ ನಿಯಮವ್ರತಧೃಕ್ಶುಚಿಃ |
ದೇಹೋತ್ಸರ್ಗೇ ಜಗಾಮಾಸೌ ಗಾಂಧರ್ವಂ ಲೋಕಮುತ್ತಮಂ || ೧೪೭ ||

ತತ್ರ ಮನ್ವಂತರಶತಂ ಭೋಗಾನ್ಭುಕ್ತ್ವಾ ಯಥಾರ್ಥತಃ |
ಬಭೂವ ಸುಕುಲೇ ರಾಜಾ ಪ್ರಜಾರಂಜನತತ್ಪರಃ || ೧೪೮ ||

ಸ ಯಜ್ವಾ ವಿವಿಧೈರ್ಯಜ್ಞೈಃ ಸಮಾಪ್ತವರದಕ್ಷಿಣೈಃ |
ಪುತ್ರೇಷು ರಾಜ್ಯಂ ನಿಕ್ಷಿಪ್ಯ ಯಯೌ ಶೌಕರವಂ ಪುನಃ || ೧೪೯ ||

೧೪೬. ಎಲೈ ಮುನಿಗಳಿರಾ! ಈರೀತಿಯಾಗಿ ಉರ್ವಶಿಯು ಆ ಮೂರ್ಖ ಬ್ರಾಹ್ಮಣನಿಗೆ ಹೇಳಿ ಸ್ವರ್ಗಲೋಕಕ್ಕೆ ಹಾರಿ ಹೊರಟುಹೋದಳು. ಅನಂತರ ಉರ್ವಶಿಯಿಂದ ಸತ್ಯತಪಸ್ಸೆಂದು ಕರೆಯಲ್ಪಟ್ಟಿದ್ದ ಆ ಬ್ರಾಹ್ಮಣನು ರೂಪತೀರ್ಥಕ್ಕೆ ತೆರಳಿದನು.

೧೪೭. ಅಲ್ಲಿ ಶಾಂತಿಯನ್ನವಲಂಬಿಸಿ ನಿಯಮ ನಿಷ್ಠೆಗಳಿಂದ ಇರುತ್ತಾ ಶುದ್ಧ ಹೃದಯನಾಗಿದ್ದನು. ಕೆಲವುದಿನಗಳಮೇಲೆ ತನ್ನ ದೇಹವನ್ನು ತ್ಯಜಿಸಿದನಂತರ ಉತ್ತಮವಾದ ಗಂಧರ್ವಲೋಕವನ್ನು ಸೇರಿದನು.

೧೪೮. ಅಲ್ಲಿ ಒಂದು ನೂರು ಮನ್ವಂತರಗಳ ಕಾಲ ಭೋಗಭಾಗ್ಯಗಳನ್ನು ಅನುಭವಿಸಿ ಬಳಿಕ ಒಂದು ಒಳ್ಳೆಯ ರಾಜವಂಶದಲ್ಲಿ ಹುಟ್ಟಿ ಪ್ರಜೆಗಳನ್ನು ಪ್ರೀತಿಯಿಂದ ಸಲಹುವ ದೊರೆಯೆನಿಸಿದನು.

೧೪೯. ಆಗ ಉತ್ತಮವಾದ ದಕ್ಷಿಣೆಗಳುಳ್ಳ ಬೇಕಾದಂತಹ ಬಗೆಬಗೆಯ ಯಜ್ಞಗಳನ್ನು ಮಾಡಿದನು. ತನ್ನ ಜೀವಿತಾಂತಸಮಯದಲ್ಲಿ ರಾಜ್ಯಭಾರವನ್ನು ಮಕ್ಕಳಿಗೊಪ್ಪಿಸಿ ತಾನು ಹಿಂದೆ ಹೋಗಿದ್ದ ಶೂಕರವವೆಂಬ ಪ್ರದೇಶಕ್ಕೇ ಈಸಲವೂ ಹೋಗಿ ನೆಲೆಸಿದನು.

ರೂಪತೀರ್ಥೇ ಮೃತೋ ಭೂಯಃ ಶಕ್ರಲೋಕಮುಪಾಗತಃ ।
ತತ್ರ ಮನ್ವಂತರಶತಂ ಭೋಗಾನ್ಭುಕ್ತ್ವಾ ತತಶ್ಚ್ಯುತಃ ॥ ೧೫೦ ॥
ಪ್ರತಿಷ್ಠಾನೇ ಪುರವರೇ ಬುಧಪುತ್ರಃ ಪುರೂರವಾಃ ।
ಬಭೂವ ತತ್ರ ಚೋರ್ವಶ್ಯಾಃ ಸಂಗಮಾಯ ತಪೋಧನಾಃ ॥ ೧೫೧ ॥

ಏವಂ ಪುರಾ ಸತ್ಯತಪಾ ದ್ವಿಜಾತಿ-
ಸ್ತೀರ್ಥೇ ಪ್ರಸಿದ್ಧೇ ಸ ಹಿ ರೂಪಸಂಜ್ಞೇ
ಆರಾಧ್ಯ ಜನ್ಮನ್ಯಥ ಚಾಚ್ಯುತಂ ವಿಷ್ಣು-
ಮವಾಪ್ಯ ಭೋಗಾನಥ ಮುಕ್ತಿಮೇತಿ ॥ ೧೫೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ ಪ್ರಜಾಗರೇ ಗೀತಿಕಾಯಾಃ ಪ್ರಶಂಸಾನಿರೂಪಣಂ ನಾಮ ಅಷ್ಟಾವಿಂಶತ್ಯಧಿಕ-ದ್ವಿಶತತಮೋಽಧ್ಯಾಯಃ

೧೫೦ ಆ ರೂಪತೀರ್ಥದಲ್ಲಿ ತನ್ನ ಶರೀರವನ್ನು ತ್ಯಜಿಸಿದ ನಂತರ ಇಂದ್ರನ ಲೋಕವನ್ನು ಸೇರಿದನು. ಅಲ್ಲಿ ಒಂದುನೂರು ಮನ್ವಂತರಗಳ ಕಾಲ ಅನೇಕವಾದ ಭೋಗಗಳನ್ನು ಅನುಭವಿಸುತ್ತಿದ್ದು ಬಳಿಕ ಅಲ್ಲಿಂದ ಚ್ಯುತನಾಗಿ.

೧೫೧. ಪ್ರತಿಷ್ಠಾನವೆಂಬ ಪುರಶ್ರೇಷ್ಠದಲ್ಲಿ ಇಲಾ-ಬುಧರ ಪುತ್ರನಾದ ಪುರೂರವನಾಗಿ ಹುಟ್ಟಿದನು. ಎಲೈ ತಪೋಧನರಿರಾ! ಅಲ್ಲಿ ಅವನು ಊರ್ವಶಿಯನ್ನು ಪಡೆಯುವನು.

೧೫೨. ಈರೀತಿಯಾಗಿ ಹಿಂದೆ ಸತ್ಯತಪಸ್ಸೆಂದೇ ಪ್ರಸಿದ್ಧನಾದ ಆ ಬ್ರಾಹ್ಮಣನು ಪ್ರಸಿದ್ಧವಾದ ರೂಪತೀರ್ಥವೆಂಬಲ್ಲಿ ನೆಲೆಸಿ, ವಿಷ್ಣುವನ್ನು ಆರಾಧಿಸಿದುದರ ಫಲವಾಗಿ ನಾನಾಭೋಗಗಳನ್ನು ಅನುಭವಿಸಿ, ಕೊನೆಗೆ ಮುಕ್ತಿಯನ್ನೇ ಪಡೆಯುವನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಗೀತೆಯ ಪ್ರಶಂಸಾನಿರೂಪಣವೆಂಬ ಇನ್ನೂರಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕೋನತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಶ್ರುತಂ ಫಲಂ ಗೀತಿಕಾಯಾ ಅಸ್ಮಾಭಿಃ ಸುಪ್ರಜಾಗರೇ ।
ಕೃಷ್ಣಸ್ಯ ಯೇನ ಚಾಂಡಾಲೋ ಗತೋಽಸೌ ಪರಮಾಂ ಗತಿಂ ॥ ೧ ॥

ಯಥಾ ವಿಷ್ಣೌ ಭವೇದ್ಭಕ್ತಿಸ್ತನ್ನೋ ಬ್ರೂಹಿ ಮಹಾಮತೇ ।
ತಪಸಾ ಕರ್ಮಣಾ ಯೇನ ಶ್ರೋತುಮಿಚ್ಛಾಮ ಸಾಂಪ್ರತಂ ॥ ೨ ॥

ಇನ್ನೂರಇಪ್ಪತ್ತೊಂಭತ್ತನೆಯ ಅಧ್ಯಾಯವು

೧-೨. ಆಗ ಆ ಮುನಿಗಳು ವ್ಯಾಸನನ್ನು ಕುರಿತು "ಓ ಮಹರ್ಷಿ! ಜಾಗರಣ ಸಮಯದಲ್ಲಿ ಶ್ರೀಕೃಷ್ಣನ ಗೀತೆಯನ್ನು ಹಾಡಿದುದರ ಫಲವಾಗಿ ಆ ಚಂಡಾಲನು ಅತ್ಯುತ್ತಮವಾದ ಸದ್ಗತಿಯನ್ನು ಪಡೆದುದನ್ನು ನಾವು ಕೇಳಿದೆವು. ಇದರಿಂದ ಜಾಗರಣ ಸಮಯದಲ್ಲಿ ಭಗವನ್ನಾಮ ಸಂಕೀರ್ತನೆಯ ಪ್ರಭಾವವೇನೆಂಬುದರ ಅರಿವಾಯಿತು. ಎಲೈ ಪ್ರಾಜ್ಞಶಿರೋಮಣಿಯೇ ಆ ಪರಮಾತ್ಮನಲ್ಲಿ ಭಕ್ತಿಯುಂಟಾಗುವ ಬಗೆ ಹೇಗೆ? ಅದು ಯಾವಬಗೆಯ ತಪಸ್ಸಿನಿಂದ ಲಭಿಸುವುದು? ಅಥವಾ ಯಾವ ವಿಧವಾದ ಸತ್ಕರ್ಮದಿಂದುಂಟಾಗುವುದು? ಅದನ್ನು ಈಗ ಕೇಳಲು ನಮಗೆ ಆಸೆಯಾಗಿರುವುದು. ಅದನ್ನು ತಿಳಿಯಪಡಿಸು" ಎಂದರು.

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪ್ರವಕ್ಷ್ಯಾಮ್ಯನುಪೂರ್ವಶಃ
ಯಥಾ ಕೃಷ್ಣೇ ಭವೇದ್ಭಕ್ತಿಃ ಪುರುಷಸ್ಯ ಮಹಾಫಲಾ ॥ ೩ ॥

ಸಂಸಾರೇಽಸ್ಮಿನ್ಮಹಾಘೋರೇ ಸರ್ವಭೂತಭಯಾವಹೇ ।
ಮಹಾಮೋಹಕರೇ ನೄಣಾಂ ನಾನಾದುಃಖಶತಾಕುಲೇ ॥ ೪ ॥

ತಿರ್ಯಗ್ಯೋನಿಸಹಸ್ರೇಷು ಜಾಯಮಾನಃ ಪುನಃ ಪುನಃ ।
ಕಥಂಚಿಲ್ಲಭತೇ ಜನ್ಮ ದೇಹೀ ಮಾನುಷ್ಯಕಂ ದ್ವಿಜಾಃ ॥ ೫ ॥

ಮಾನುಷತ್ವೇಽಪಿ ವಿಪ್ರತ್ವಂ ವಿಪ್ರತ್ವೇಽಪಿ ವಿವೇಕಿತಾ ।
ವಿವೇಕಾದ್ಧರ್ಮಬುದ್ಧಿಸ್ತು ಬುದ್ಧ್ಯಾ ತು ಶ್ರೇಯಸಾಂ ಗ್ರಹಃ ॥ ೬ ॥

---

೩. ಆಗ ವ್ಯಾಸನು ಅವರನ್ನಿಂತೆಂದನು :—" ಎಲೈ ಮುನಿಶ್ರೇಷ್ಠರಿರಾ! ಕೇಳಿರಿ. ಅತಿಶಯವಾದ ಫಲಗಳನ್ನು ಕೊಡುವ ಆ ಕೃಷ್ಣಭಕ್ತಿಯು ಪುರುಷನಿಗೆ ಹೇಗೆ ಉಂಟಾಗುವುದೆಂಬುದನ್ನು ವಿವರಿಸುವೆನು. ಆಲಿಸಿರಿ.

೪. ಈ ಸಂಸಾರವೆಂಬುದು ಅತಿಘೋರವಾದುದು. ಇದಕ್ಕೆ ಎಲ್ಲ ಭೂತಗಳೂ (ಪ್ರಾಣಿಗಳೂ) ಹೆದರುವುವು. ಈ ಸಂಸಾರವೇ ಮನುಷ್ಯರಿಗೆ ಅತಿಶಯವಾದ ಮೋಹವನ್ನು ಹುಟ್ಟಿಸುವುದು. ಆದುದರಿಂದಲೇ ಬಗೆಬಗೆಯಾದ ದುಃಖಗಳು ನೂರಾರುಗಟ್ಟಲೆ ಆ ಮನುಷ್ಯರಿಗೆ ಒದಗಿ ಅವರನ್ನು ಪೀಡಿಸುವುವು.

೫. ಎಲೈ ಬ್ರಾಹ್ಮಣರಿರಾ! ಜೀವನೆನಿಸಿದವನು ಪಶುಪಕ್ಷಿಗಳೇ ಮೊದಲಾದ ಸಾವಿರಾರು ತಿರ್ಯಕ್ಪ್ರಾಣಿಗಳ ಜಾತಿಯಲ್ಲಿ ಪುನಃ ಪುನಃ ಹುಟ್ಟುತ್ತಾ ಕೊನೆಗೆ ಅತಿಕಷ್ಟದಿಂದ ಮನುಷ್ಯ ಶರೀರವನ್ನು ಹೊಂದುವನು.

೬. ಮನುಷ್ಯ ಜನ್ಮದಲ್ಲಿಯೂ, ಬ್ರಾಹ್ಮಣನೆನಿಸುವುದು ಬಹುದುಸ್ತರವು. ಬ್ರಾಹ್ಮಣ ಜಾತಿಯಲ್ಲಿ ವಿವೇಕಿಯಾದವನು ಬಹುಶ್ರೇಷ್ಠನು. ಏಕೆಂದರೆ ಆತನ ವಿವೇಚನಾಶಕ್ತಿಯಿಂದಲೇ ಧರ್ಮದಲ್ಲಿ ಶ್ರದ್ಧೆಯುಂಟಾಗುವುದು. ಆ ಧರ್ಮದಿಂದಲೇ ಮಾನವನು ಶ್ರೇಯಸ್ಸನ್ನು ಪಡೆಯುವನು.

ಯಾವತ್ಪಾಪಕ್ಷಯಂ ಪುಂಸಾಂ ನ ಭವೇಜ್ಜನ್ಮ ಸಂಚಿತಂ ।
ತಾವನ್ನ ಜಾಯತೇ ಭಕ್ತಿರ್ವಾಸುದೇವೇ ಜಗನ್ಮಯೇ ॥ ೭ ॥

ತಸ್ಮಾದ್ವಕ್ಷ್ಯಾಮಿ ಭೋ ವಿಪ್ರಾ ಭಕ್ತಿಃ ಕೃಷ್ಣೇ ಯಥಾ ಭವೇತ್ ।
ಅನ್ಯದೇವೇಷು ಯಾ ಭಕ್ತಿಃ ಪುರುಷಸ್ಯೇಹ ಜಾಯತೇ ॥ ೮ ॥

ಕರ್ಮಣಾ ಮನಸಾ ವಾಚಾ ತದ್ಗತೇನಾಂತರಾತ್ಮನಾ ।
ತೇನ ತಸ್ಯ ಭವೇದ್ಭಕ್ತಿರ್ಯಜನೇ ಮುನಿಸತ್ತಮಾಃ ॥ ೯ ॥

ಸ ಕರೋತಿ ತತೋ ವಿಪ್ರಾ ಭಕ್ತಿಂ ಚಾಗ್ನೇ ಸಮಾಹಿತಃ ।
ತುಷ್ಟೇ ಹುತಾಶನೇ ತಸ್ಯ ಭಕ್ತಿರ್ಭವತಿ ಭಾಸ್ಕರೇ ॥ ೧೦ ॥

ಪೂಜಾಂ ಕರೋತಿ ಸತತಮಾದಿತ್ಯಸ್ಯ ತತೋ ದ್ವಿಜಾಃ ।
ಪ್ರಸನ್ನೇ ಭಾಸ್ಕರೇ ತಸ್ಯ ಭಕ್ತಿರ್ಭವತಿ ಶಂಕರೇ ॥ ೧೧ ॥

---

೭. ಎಲ್ಲಿಯವರೆಗೆ ಪುರುಷನು ಮಾಡಿದ್ದ ಪಾಪಗಳು ನಿಶ್ಶೇಷವಾಗಿ ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ಜಗನ್ಮಯನಾದ ವಾಸುದೇವನಲ್ಲಿ ಅವನಿಗೆ ಭಕ್ತಿಯು ಉಂಟಾಗುವುದಿಲ್ಲ"

೮-೯. ಎಲೈ ವಿಪ್ರರಿರಾ! ಆದುದರಿಂದ ನಾನು ನಿಮಗೆ ಆ ಕೃಷ್ಣನಲ್ಲಿ ಭಕ್ತಿಯುಂಟಾಗುವ ಬಗೆಯನ್ನು ವಿವರಿಸುವೆನು. ಪುರುಷನಾದವನು ತಾನು ಮಾಡುವ ಕರ್ಮದಿಂದಲೂ, ಮಾತುಗಳಿಂದಲೂ, ಮನಸ್ಸಿನಿಂದಲೂ, ತದೇಕ ಚಿತ್ತನಾಗಿ ಇತರ ದೇವತೆಗಳನ್ನು ಆರಾಧಿಸಿರುವ ಪಕ್ಷಕ್ಕೆ ಆ ಪುಣ್ಯಫಲದಿಂದ ಅವನಿಗೆ ಯಾಗಾದಿಗಳನ್ನು ಮಾಡಲು ಭಕ್ತಿಯುಂಟಾಗುವುದು.

೧೦. ಆದರಿಂದ ಅವನು ಯಜ್ಞೇಶ್ವರನಲ್ಲಿ ಭಕ್ತಿಯನ್ನಿಡುವನು. ಈ ಭಕ್ತಿಯಿಂದ ಸಂತೋಷಗೊಂಡ ಹುತಾಶನನು ಆ ಪುರುಷನಿಗೆ ಸೂರ್ಯನಲ್ಲಿ ಭಕ್ತಿಯುಂಟಾಗುವಂತೆ ಮಾಡುವನು.

೧೧. ಎಲೈ ಬ್ರಾಹ್ಮಣರಿರಾ! ಇದರಿಂದ ಆ ಪುರುಷನು ಸೂರ್ಯನನ್ನು ಸಂತತವಾಗಿ ಆರಾಧನೆ ಮಾಡತೊಡಗುವನು. ಈ ಆರಾಧನೆಯಿಂದ ಸೂರ್ಯನು ಪ್ರಸನ್ನನಾದಲ್ಲಿ ಆ ಪುರುಷನಿಗೆ ಶಂಕರನಲ್ಲಿ ಭಕ್ತಿಯುಂಟಾಗುವುದು.

ಪೂಜಾಂ ಕರೋತಿ ವಿಧಿವತ್ಸ ತು ಶಂಭೋಃ ಪ್ರಯತ್ನತಃ ।
ತುಷ್ಟೇ ತ್ರಿಲೋಚನೇ ತಸ್ಯ ಭಕ್ತಿರ್ಭವತಿ ಕೇಶವೇ ॥ ೧೨ ॥

ಸಂಪೂಜ್ಯ ತಂ ಜಗನ್ನಾಥಂ ವಾಸುದೇವಾಖ್ಯಮವ್ಯಯಂ ।
ತತೋ ಭುಕ್ತಿಂ ಚ ಮುಕ್ತಿಂ ಚ ಸ ಪ್ರಾಪ್ನೋತಿ ದ್ವಿಜೋತ್ತಮಾಃ ॥ ೧೩ ॥

॥ ಮುನಯ ಊಚುಃ ॥

ಅವೈಷ್ಣವಾ ನರಾ ಯೇ ತು ದೃಶ್ಯಂತೇ ಚ ಮಹಾಮುನೇ ।
ಕಿಂ ತೇ ವಿಷ್ಣುಂ ನಾರ್ಚಯಂತಿ ಬ್ರೂಹಿ ತತ್ಕಾರಣಂ ದ್ವಿಜ ॥ ೧೪ ॥

॥ ವ್ಯಾಸ ಉವಾಚ ॥

ದ್ವೌ ಭೂತಸರ್ಗೌ ವಿಖ್ಯಾತೌ ಲೋಕೇಽಸ್ಮಿನ್ಮುನಿಸತ್ತಮಾಃ ।
ಆಸುರಶ್ಚ ತಥಾ ದೈವಃ ಪುರಾ ಸೃಷ್ಟಃ ಸ್ವಯಂಭುವಾ ॥ ೧೫ ॥

---

೧೨. ಅನಂತರ ಆ ಪುರುಷನು ವಿಧಿವತ್ತಾಗಿ ಬಹುಪ್ರಯತ್ನಗಳಿಂದ ಶಂಕರನನ್ನು ಪೂಜಿಸುವನು. ಶಂಕರನು ಸುಪ್ರೀತನಾದನಂತರ ಆ ಭಕ್ತನಾದ ಪುರುಷನಿಗೆ ಶ್ರೀವಾಸುದೇವನಲ್ಲಿ ಭಕ್ತಿಯುಂಟಾಗುವುದು.

೧೩. ಎಲೈ ದ್ವಿಜೋತ್ತಮರಿರಾ! ಈರೀತಿಯಾಗಿ ಭಕ್ತಿಯು ನೆಲೆಸಿದನಂತರ ಆ ಪುರುಷನು ನಾಶರಹಿತನಾದ ವಾಸುದೇವನೆಂಬ ಜಗದೀಶ್ವರನನ್ನು ಆರಾಧಿಸತೊಡಗುವನು. ಆದರಿಂದ ಅವನು ಸಕಲಭೋಗಗಳನ್ನೂ ಮೋಕ್ಷವನ್ನೂ ಹೊಂದುವನು. '' ಎಂದನು.

೧೪. ಆಗ ಋಷಿಗಳು ವ್ಯಾಸನನ್ನು ಕುರಿತು " ಓ ಬ್ರಾಹ್ಮಣೋತ್ತಮಾ, ಮಹರ್ಷೀ! ಈ ಲೋಕದಲ್ಲಿ ವಿಷ್ಣುಭಕ್ತಿರಲ್ಲದ ಅನೇಕಮಂದಿಯಿರುವರು. ಅವರಾರೂ ವಿಷ್ಣುವನ್ನು ಪೂಜಿಸುವುದಿಲ್ಲವು. ಅದಕ್ಕೆ ಕಾರಣವೇನು? ತಿಳಿಸು " ಎಂದು ಪ್ರಶ್ನಿಸಲು

೧೫. ವ್ಯಾಸನು ಹೇಳತೊಡಗಿದನು:–"ಎಲೈ ಮುನಿಶ್ರೇಷ್ಠರಿರಾ! ಕೇಳಿರಿ. ಈ ಪ್ರಪಂಚದಲ್ಲಿ ಎರಡುಬಗೆಯ ಪ್ರಾಣಿವರ್ಗಗಳಿರುವುವು. ಹಿಂದೆ ಬ್ರಹ್ಮನು ಸೃಷ್ಟಿಸುವಾಗ ಆಸುರವೆಂದೂ ದೈವವೆಂದೂ ಎರಡುಭಾಗವಾಗಿ ಪ್ರಾಣಿವರ್ಗವನ್ನು ಸೃಷ್ಟಿಸಿದನು.

ದೈವೀಂ ಪ್ರಕೃತಿಮಾಸಾದ್ಯ ಪೂಜಯಂತಿ ತತೋಽಚ್ಯುತಂ ।
ಆಸುರೀಂ ಯೋನಿಮಾಪನ್ನಾ ದೂಷಯಂತಿ ನರಾ ಹರಿಂ ॥ ೧೬ ॥

ಮಾಯಯಾ ಹತವಿಜ್ಞಾನಾ ವಿಷ್ಣೋಸ್ತೇ ತು ನರಾಧಮಾಃ ।
ಅಪ್ರಾಪ್ಯ ತಂ ಹರಿಂ ವಿಪ್ರಾಸ್ತತೋ ಯಾಂತ್ಯಧಮಾಂ ಗತಿಂ ॥ ೧೭ ॥

ತಸ್ಯ ಯಾ ಗಹ್ವರೀ ಮಾಯಾ ದುರ್ವಿಜ್ಞೇಯಾ ಸುರಾಸುರೈಃ ।
ಮಹಾಮೋಹಕರೀ ನೄಣಾಂ ದುಸ್ತರಾ ಚಾಕೃತಾತ್ಮಭಿಃ ॥ ೧೮ ॥

॥ ಮುನಯ ಊಚುಃ ॥

ಇಚ್ಛಾಮಸ್ತಾಂ ಮಹಾಮಾಯಾಂ ಜ್ಞಾತುಂ ವಿಷ್ಣೋಃ ಸುದುಸ್ತರಾಂ ।
ವಕ್ತುಮರ್ಹಸಿ ಧರ್ಮಜ್ಞ ಪರಂ ಕೌತೂಹಲಂ ಹಿ ನಃ ॥ ೧೯ ॥

---

೧೬. ದೈವೀಪ್ರಕೃತಿಯನ್ನು ಹೊಂದಿದ ದೈವವೆಂಬ ಪ್ರಾಣಿವರ್ಗವು ಶ್ರೀಹರಿಯನ್ನೇ ಪೂಜಿಸುವುದು. ಆಸುರ ವಿಭಾಗಕ್ಕೆ ಸೇರಿದ ಪ್ರಾಣಿವರ್ಗವು ಸರ್ವದಾ ಹರಿಯನ್ನು ದೂಷಿಸುತ್ತಲೇ ಇರುವುದು.

೧೭. ಎಲೈ ವಿಪ್ರರಿರಾ! ಆ ವರ್ಗಕ್ಕೆ ಸೇರಿದ ನರಾಧಮರು ವಿಷ್ಣು ಮಾಯೆಗೆ ಸಿಲುಕಿ ವಿವೇಕದಿಂದ ವಂಚಿತರಾಗಿ, ಶ್ರೀಹರಿಯನ್ನು ಹೊಂದಲಾರದೆ ಅದಕ್ಕಿಂತಲೂ ಕೀಳಾದ ಸ್ಥಿತಿಯನ್ನೇ ಪಡೆಯುವರು.

೧೮. ಆ ವಿಷ್ಣುವಿನ ಮಾಯೆಯು ಬಹುಗಹನವಾದುದು. ಸುರಾಸುರರೂ ಸಹ ಅದನ್ನು ಸರಿಯಾಗಿ ಅರಿತುಕೊಳ್ಳಲಾರರು. ಮಾನವರಿಗೆ ಆ ವಿಷ್ಣುಮಾಯೆಯಿಂದಲೇ ಎಲ್ಲಿಲ್ಲದ ಭಾರಿ ಅಜ್ಞಾನವು ಕವಿದುಕೊಳ್ಳುವುದು. ಅದನ್ನು ಆತ್ಮಶಕ್ತಿಯಿಲ್ಲದವರು ದಾಟಲಾರರು (ತಪ್ಪಿಸಿಕೊಳ್ಳಲಾರರು)" ಎಂದನು.

೧೯. ಆಗ ಮುನಿಗಳು ವ್ಯಾಸನನ್ನು ಕುರಿತು "ಎಲೈ ಧರ್ಮಜ್ಞನೇ! ಯಾರಿಗೂ ತಪ್ಪಿಸಿಕೊಳ್ಳಲಾಗದ ವಿಷ್ಣುವಿನ ಮಾಯೆಯನ್ನು ಕೇಳಬೇಕೆಂದು ಆಶಿಸುವೆವು. ನಮಗೆ ಅದರಲ್ಲಿ ಬಹುಕುತೂಹಲವುಂಟಾಗಿರುವುದು" ಎನ್ನಲು ಆ ವ್ಯಾಸನು ಹೇಳತೊಡಗಿದನು.

॥ ವ್ಯಾಸ ಉವಾಚ ॥

ಸ್ವಪ್ನೇಂದ್ರಜಾಲಸಂಕಾಶಾ ಮಾಯಾ ಸಾ ಲೋಕಕರ್ಷಣೀ ।
ಕಃ ಶಕ್ನೋತಿ ಹರೇರ್ಮಾಯಾಂ ಜ್ಞಾತುಂ ತಾಂ ಕೇಶವಾದೃತೇ ॥ ೨೦ ॥

ಯಾ ವೃತ್ತಾ ಬ್ರಾಹ್ಮಣಸ್ಯಾಸೀನ್ಮಾಯಾರ್ಥೇ ನಾರದಸ್ಯ ಚ ।
ವಿಡಂಬನಾಂ ತು ತಾಂ ವಿಪ್ರಾಃ ಶೃಣುಧ್ವಂ ಗದತೋ ಮಮ ॥ ೨೧ ॥

ಪ್ರಾಗಾಸೀನ್ನೃಪತಿಃ ಶ್ರೀಮಾನಾಗ್ನೀಧ್ರ ಇತಿ ವಿಶ್ರುತಃ ।
ನಗರೇ ಕಾಮದಮನಸ್ತಸ್ಯಾಥ ತನಯಃ ಶುಚಿಃ ॥ ೨೨ ॥

ಧರ್ಮಾರಾಮಃ ಕ್ಷಮಾಶೀಲಃ ಪಿತೃಶುಶ್ರೂಷಣೇ ರತಃ ।
ಪ್ರಜಾನುರಂಜಕೋ ದಕ್ಷಃ ಶ್ರುತಿಶಾಸ್ತ್ರಕೃತಶ್ರಮಃ ॥ ೨೩ ॥

---

೨೦. "ಆ ವಿಷ್ಣುಮಾಯೆಯು ಸ್ವಪ್ನದಂತೆಯೂ, ಇಂದ್ರಜಾಲದಂತೆಯೂ ತೋರುವುದು. ಅದು ಪ್ರಪಂಚವನ್ನೇ ತನ್ನವಶಕ್ಕೆ ಆಕರ್ಷಿಸಿಬಿಡುವುದು. ಅದನ್ನು ತಿಳಿಯಲು ವಿಷ್ಣುವಿಗೊಬ್ಬನಿಗೇ ಅಲ್ಲದೆ ಮತ್ತಾರಿಗೂ ಸಾಧ್ಯವಿಲ್ಲವು.

೨೧. ಎಲೈ ವಿಪ್ರರಿರಾ! ಹಿಂದೆ ಬ್ರಾಹ್ಮಣೋತ್ತಮನಾದ ನಾರದ ಮಹರ್ಷಿಗೆ ಇದೇ ಮಾಯೆಯ ವಿಷಯವಾಗಿ ಜರುಗಿದಂಥಾ ಒಂದು ವಿನೋದ ಪ್ರಸಂಗವನ್ನು ನಿಮಗೆ ತಿಳಿಸುವೆನು. ಕೇಳಿರಿ.

೨೨. ಹಿಂದೆ ಆಗ್ನೀಧ್ರನೆಂಬ ಒಬ್ಬ ರಾಜನಿದ್ದನು. ಅವನು ಬಹು ಪ್ರಖ್ಯಾತನಾಗಿದ್ದನು. ಅವನಿಗೆ ಕಾಮದಮನನೆಂಬ ಶುದ್ಧಾತ್ಮನಾದ ಪುತ್ರನೊಬ್ಬನಿದ್ದನು.

೨೩. ಅವನು ಯಾವಾಗಲೂ ಧರ್ಮಕಾರ್ಯಗಳಲ್ಲೇ ಆಸಕ್ತನಾದವನು. ಕ್ಷಮೆಯು ಅವನ ಹೃದಯದಲ್ಲಿ ತುಂಬಿಯೇ ಇರುವುದು. ಅವನು ತಂದೆಯನ್ನು ಸರ್ವದಾ ಶುಶ್ರೂಷೆಮಾಡುತ್ತಿದ್ದನು. ಪ್ರಜೆಗಳು ಅವನಲ್ಲಿ ಬಹುಮಟ್ಟಿಗೆ ಅನುರಾಗವನ್ನು ತಾಳಿದ್ದರು. ಅವನು ರಾಜಕೀಯ ವ್ಯವಹಾರಗಳಲ್ಲಿ ಬಹು ಕುಶಲನಾಗಿಯೂ, ವೇದವೇದಾಂಗಗಳಲ್ಲಿ ಚೆನ್ನಾಗಿ ಪರಿಶ್ರಮವುಳ್ಳವನಾಗಿಯೂ ಇದ್ದನು.

ಪಿತಾಸ್ಯ ತ್ವಕರೋದ್ಯತ್ನಂ ವಿವಾಹಾಯ ನ ಚೈಚ್ಛತ ।
ತಂ ಪಿತಾ ಪ್ರಾಹ ಕಿಮಿತಿ ನೇಚ್ಛಸೇ ದಾರಸಂಗ್ರಹಂ ॥ ೨೪ ॥

ಸರ್ವಮೇತತ್ಸುಖಾರ್ಥಂ ಹಿ ವಾಂಛಂತಿ ಮನುಜಾಃ ಕಿಲ ।
ಸುಖಮೂಲಾ ಹಿ ದಾರಾಶ್ಚ ತಸ್ಮಾತ್ತಂ ತ್ವಂ ಸಮಾಚರ ॥ ೨೫ ॥

ಸ ಪಿತುರ್ವಚನಂ ಶ್ರುತ್ವಾ ತೂಷ್ಣೀಮಾಸ್ತೇ ಚ ಗೌರವಾತ್ ।
ಮುಹುರ್ಮುಹುಸ್ತಂ ಚ ಪಿತಾ ಚೋದಯಾಮಾಸ ಭೋ ದ್ವಿಜಾಃ ॥ ೨೬ ॥

ಅಥಾಸೌ ಪಿತರಂ ಪ್ರಾಹ ತಾತ ನಾಮಾನುರೂಪತಾ ।
ಮಯಾ ಸಮಾಶ್ರಿತಾ ವ್ಯಕ್ತಾ ವೈಷ್ಣವೀ ಪರಿಪಾಲಿನೀ ॥ ೨೭ ॥

---

೨೪. ಆ ಆಗ್ನೀಧ್ರನು ತನ್ನ ಮಗನಿಗೆ ಮದುವೆಮಾಡಬೇಕೆಂದು ಪ್ರಯತ್ನಿಸಿದನು. ಆದರೆ ಅವನು ಒಪ್ಪಲಿಲ್ಲ. ಆಗ ತಂದೆಯು “ ಇದೇಕೆ ನೀನು ಮದುವೆಯನ್ನು ಒಪ್ಪದಿರುವೆ ?

೨೫. ಇದೆಲ್ಲವನ್ನೂ ಮಾನವರು ತಮ್ಮ ಸುಖಕ್ಕೋಸ್ಕರವಾಗಿಯೇ ಮಾಡಿಕೊಳ್ಳುವರಲ್ಲವೇ ? ಪತ್ನಿಯೆಂಬುವಳು ಪುರುಷನಿಗೆ ಸುಖಕ್ಕೆ ಹೇತುವೆನಿಸಿದವಳು. ಆದುದರಿಂದ ನೀನು ಮದುವೆಗೆ ಒಪ್ಪಿಕೊಳ್ಳುವವನಾಗು ” ಎಂದು ಬೋಧಿಸಿದನು.

೨೬. ಹೀಗೆ ತಂದೆಯು ಬೋಧಿಸಿದಾಗಲೆಲ್ಲ ಕಾಮದಮನನು ತನ್ನ ತಂದೆಯಲ್ಲಿ ಗೌರವದಿಂದ ಮಾತಾಡದೆ ಸುಮ್ಮನಿದ್ದುಬಿಡುತ್ತಿದ್ದನು. ಆದರೆ ಆಗ್ನೀಧ್ರನು ಆಗಾಗ್ಗೆ ಈ ವಿಷಯವನ್ನು ಒತ್ತಿ ಒತ್ತಿ ಹೇಳುತ್ತಲೇ ಇದ್ದನು.

೨೭. ಒಂದುದಿನ ಈ ಕಾಮದಮನನು ತಂದೆಯನ್ನು ಕುರಿತು “ ಅಪ್ಪಾ ! ನನ್ನ ಹೆಸರಿಗೆ ತಕ್ಕಂತೆ ಆಚರಣೆಯನ್ನು ಅವಲಂಬಿಸಿರುವೆನು. ವೈಷ್ಣವಧರ್ಮವನ್ನು ನಾನು ಸರಿಯಾಗಿ ಪಾಲಿಸಲೇಬೇಕು ” ಎಂದನು.

ತಂ ಪಿತಾ ಪ್ರಾಹ ಸಂಗಮ್ಯ ನೈಷ ಧರ್ಮೋಽಸ್ತಿ ಪುತ್ರಕೇ ।
ನ ವಿಧಾರಯಿತವ್ಯಾ ಸ್ಯಾತ್ಪುರುಷೇಣ ವಿಪಶ್ಚಿತಾ ॥ ೨೮ ॥

ಕುರು ಮದ್ವಚನಂ ಪುತ್ರ ಪ್ರಭುರಸ್ಮಿ ಪಿತಾ ತವ ।
ಮಾ ನಿಮಜ್ಜ ಕುಲಂ ಮಹ್ಯಂ ನರಕೇ ಸಂತತಿಕ್ಷಯಾತ್ ॥ ೨೯ ॥

ಸ ಹಿ ತಂ ಪಿತುರಾದೇಶಂ ಶ್ರುತ್ವಾ ಪ್ರಾಹ ಸುತೋ ವಶೀ ।
ಪ್ರೀತಃ ಸಂಸ್ಮೃತ್ಯ ಪೌರಾಣೀಂ ಸಂಸಾರಸ್ಯ ವಿಚಿತ್ರತಾಂ ॥ ೩೦ ॥

॥ ಪುತ್ರ ಉವಾಚ ॥
ಶೃಣು ತಾತ ವಚೋ ಮಹ್ಯಂ ತತ್ತ್ವವಾಕ್ಯಂ ಸಹೇತುಕಂ ।
ನಾಮಾನುರೂಪಂ ಕರ್ತವ್ಯಂ ಸತ್ಯಂ ಭವತಿ ಪಾರ್ಥಿವ ॥ ೩೧ ॥

ಮಯಾ ಜನ್ಮಸಹಸ್ರಾಣಿ ಜರಾಮೃತ್ಯುಶತಾನಿ ಚ ।
ಪ್ರಾಪ್ತಾನಿ ದಾರಸಂಯೋಗವಿಯೋಗಾನಿ ಚ ಸರ್ವಶಃ ॥ ೩೨ ॥

೨೮-೨೯. ಆಗ ತಂದೆಯು ಮಗನ ಬಳಿ ಸಾರಿ "ಮಗು, ಇದು ಧರ್ಮವಲ್ಲ. ಪುರುಷನು ವಿವೇಕಿಯಾಗಿದ್ದರೆ ಈರೀತಿಯಾಗಿ ಹಟ ಹಿಡಿಯಬಾರದು. ನನ್ನ ಮಾತಿನಂತೆ ನಡೆದುಕೋ. ನಾನು ನಿನಗೆ ತಂದೆ. ಆದುದರಿಂದಲೇ ನಿನಗೆ ನಾನು ಪ್ರಭುವೆನಿಸಿರುವೆನು. ಸಂತಾನವಿಚ್ಛೇದದಿಂದ ನಮ್ಮೀ ಕುಲವನ್ನು ಮುಳುಗಿಸಬೇಡ" ಎಂದು ಬೋಧಿಸಿದನು.

೩೦. ಹೀಗೆ ತಂದೆಯು ಬೋಧಿಸಿದುದನ್ನು ಕೇಳಿ ಜಿತೇಂದ್ರಿಯನಾದ ಆ ಕಾಮದಮನನೆಂಬ ಮಗನು ಹಿಂದಿನ ಈ ಸಂಸಾರದ ವಿಚಿತ್ರತೆಯನ್ನು ಜ್ಞಾಪಿಸಿಕೊಂಡು ಸಂತೋಷದಿಂದ ಹೇಳತೊಡಗಿದನು.

೩೧. "ಅಪ್ಪಾ! ಕೇಳು. ನಾನು ಹೇಳುವ ಮಾತು ಸಕಾರಣವಾಗಿರುವುದು. ತತ್ತ್ವದಿಂದ ಕೂಡಿರುವುದು. ನನಗೆ ನೀನಿಟ್ಟ ಹೆಸರು ಅನುರೂಪವಾಗುವಂತೆ ನಾನದನ್ನು ಸತ್ಯವಾದುದನ್ನಾಗಿ ಮಾಡಲೇಬೇಕು.

೩೨. ನಾನು ಸಾವಿರಾರು ಜನ್ಮಗಳನ್ನು ಪಡೆದುದಾಯಿತು. ನೂರಾರು ಮುಪ್ಪು, ಸಾವುಗಳನ್ನೂ ಅನುಭವಿಸಿದೆನು. ಎಷ್ಟೋ ಹೆಂಡತಿಯರು ಮದುವೆಯಾದರು. ಅವರು ಎಷ್ಟೋಮಂದಿ ಸತ್ತುಹೋದರು.

ತೃಣಗುಲ್ಮಲತಾವಲ್ಲೀಸರೀಸೃಪಮೃಗದ್ವಿಜಾಃ ।
ಪಶುಸ್ತ್ರೀಪುರುಷಾದ್ಯಾನಿ ಪ್ರಾಪ್ತಾನಿ ಶತಶೋ ಮಯಾ ॥ ೩೩ ॥

ಗಣಕಿಂನರಗಂಧರ್ವವಿದ್ಯಾಧರಮಹೋರಗಾಃ ।
ಯಕ್ಷಗುಹ್ಯಕರಕ್ಷಾಂಸಿ ದಾನವಾಪ್ಸರಸಃ ಸುರಾಃ ॥ ೩೪ ॥

ನದೀಶ್ವರಸಹಸ್ರಂ ಚ ಪ್ರಾಪ್ತಂ ತಾತ ಪುನಃ ಪುನಃ ।
ಸೃಷ್ಟಸ್ತು ಬಹುಷಃ ಸೃಷ್ಟೌ ಸಂಹಾರೇ ಚಾಪಿ ಸಂಹೃತಃ ॥ ೩೫ ॥

ಪಾರಸಂಯೋಗಯುಕ್ತಸ್ಯ ತಾತೇದೃಙ್ಮೇ ವಿಡಂಬನಾ ।
ಇತಸ್ತೃತೀಯೇ ಯದ್ವೃತ್ತಂ ಮಮ ಜನ್ಮನಿ ತಚ್ಛೃಣು ।
ಕಥಯಾಮಿ ಸಮಾಸೇನ ತೀರ್ಥಮಾಹಾತ್ಮ್ಯಸಂಭವಂ ॥ ೩೬ ॥

---

೩೩. ಇದೂ ಅಲ್ಲದೆ ನಾನು ನೂರಾರುಬಾರಿ, " ಹುಲ್ಲು, ಪೊರೆ, ಲತೆ, ಬಳ್ಳಿ, ಹಾವು, ಜಿಂಕೆ, ಬ್ರಾಹ್ಮಣ, ಪಶು, ಹೆಣ್ಣು, ಗಂಡು " ಮೊದಲಾದ ನಾನಾರೂಪಗಳನ್ನು ಹೊಂದಿಬಿಟ್ಟಿರುವೆನು.

೩೪–೩೫. ಎಲೈ ತಂದೆಯೇ, ಇದೇರೀತಿ ಗಣಗಳು, ಕಿನ್ನರರು, ಗಂಧರ್ವರು, ವಿದ್ಯಾಧರರು, ನಾಗರು, ಯಕ್ಷರು, ಗುಹ್ಯಕರು, ರಾಕ್ಷಸರು, ದಾನವರು, ಅಪ್ಸರಸೆಯರು, ದೇವತೆಗಳು, ನದಿಗಳು, ಸಾಗರಗಳು ಮುಂತಾಗಿ ಲೆಕ್ಕವಿಲ್ಲದಷ್ಟು ಜಾತಿಗಳಲ್ಲಿ ಪದೇ ಪದೇ ಜನ್ಮತಾಳಿರುವೆನು. ಸೃಷ್ಟಿ ಸಮಯದಲ್ಲಿ ನಾನಾರೀತಿಯಾಗಿ ಸೃಷ್ಟಿಸಲ್ಪಟ್ಟಿರುವೆನು. ಸಂಹಾರ ಸಮಯದಲ್ಲಿಯೂ ನಾನಾರೀತಿಯಾಗಿ ಲಯಗೊಳಿಸಲ್ಪಟ್ಟೂ ಇರುವೆನು.

೩೬. ಅಪ್ಪಾ! ಈರೀತಿಯಾಗಿ ಪತ್ನಿಯೊಬ್ಬಳೊಡಗಿದ್ದ ನನಗೆ ನಾನಾರೀತಿಯ ಹಾಸ್ಯಪ್ರಸಂಗವು ಜರುಗಿಹೋಗಿರುವುದು. ಈ ಜನ್ಮದ ಹಿಂದಿನ ಮೂರನೆಯ ಜನ್ಮದಲ್ಲಿ ನನಗೆ ಏನು ನಡೆಯಿತೆಂಬುದನ್ನು ಹೇಳುವೆನು. ಕೇಳು. ತೀರ್ಥದ ಮಾಹಾತ್ಮ್ಯದಿಂದ ಕೂಡಿದ ಆ ಸಂದರ್ಭವನ್ನು ಸಂಕ್ಷೇಪವಾಗಿ ತಿಳಿಸುವೆನು.

ಅತೀತ್ಯ ಜನ್ಮಾನಿ ಬಹೂನಿ ತಾತ
ನೃದೇವಗಂಧರ್ವಮಹೋರಗಾಣಾಂ ।
ವಿದ್ಯಾಧರಾಣಾಂ ಖಗಕಿಂನರಾಣಾಂ
ಜಾತೋ ಹಿ ವಂಶೇ ಸುತಪಾ ಮಹರ್ಷಿಃ ॥ ೩೭ ॥

ತತೋ ಮಹಾಭೂದಚಲಾ ಹಿ ಭಕ್ತಿ-
ರ್ಜನಾರ್ದನೇ ಲೋಕಪತೌ ಮಧುಘ್ನೇ ।
ವ್ರತೋಪವಾಸೈರ್ವಿವಿಧೈಶ್ಚ ಭಕ್ತ್ಯಾ
ಸಂತೋಷಿತಶ್ಚಕ್ರಗದಾಸ್ತ್ರಧಾರೀ ॥ ೩೮ ॥

ತುಷ್ಟೋಽಭ್ಯಗಾತ್ಪಕ್ಷಿಪತಿಂ ಮಹಾತ್ಮಾ
ವಿಷ್ಣುಃ ಸಮಾರುಹ್ಯ ವರಪ್ರದೋ ಮೇ ।
ಪ್ರಾಹೋಚ್ಚಶಬ್ದಂ ವ್ರಿಯತಾಂ ದ್ವಿಜಾತೇ
ವರೋ ಹಿ ಯಂ ವಾಂಛಸಿ ತಂ ಪ್ರದಾಸ್ಯೇ ॥ ೩೯ ॥

೩೭. ಓ ಜನಕಾ! ಈಗ ಹೇಳಿದಂತೆ ಮನುಷ್ಯ, ದೇವತೆ, ಗಂಧರ್ವ, ಸರ್ಪ, ವಿದ್ಯಾಧರ, ಪಕ್ಷಿ, ಕಿನ್ನರ ಮೊದಲಾದ ಅನೇಕ ಜನ್ಮಗಳನ್ನೆಲ್ಲಾ ದಾಟಿ ಬಂದನಂತರ ಒಂದು ಒಳ್ಳೆಯ ವಂಶದಲ್ಲಿ ಸುತಪಸ್ಸೆಂಬ ಮಹರ್ಷಿಯಾಗಿ ಹುಟ್ಟಿದೆನು.

೩೮. ಆಗ ನನಗೆ ಮಧುಸಂಹಾರಿಯೂ ಜಗತ್ಪ್ರಭುವೂ ಆದ ವಾಸುದೇವನಲ್ಲಿ ಅಚಲವಾದ ಭಕ್ತಿಯುಂಟಾಯಿತು. ಆದುದರಿಂದ ನಾನು ಬಗೆಬಗೆಯಾದ ವ್ರತಗಳಿಂದಲೂ ಉಪವಾಸಗಳಿಂದಲೂ ಆ ಶಂಖ ಚಕ್ರ ಗದಾಧಾರಿಯನ್ನು ಸಂತೋಷಪಡಿಸಿದೆನು.

೩೯. ಆಗ ಮಹಾಪುರುಷನಾದ ವಿಷ್ಣುವು ಸಂತುಷ್ಟನಾಗಿ ಪಕ್ಷಿರಾಜನನ್ನೇರಿ ನನಗೆ ವರವನ್ನೀಯಲು ನಾನಿದ್ದ ಬಳಿಗೆ ಬಂದು “ಎಲೈ ಬ್ರಾಹ್ಮಣನೇ! ನಿನಗಾವ ವರಬೇಕು? ಕೇಳು. ಅದನ್ನು ನಾನು ಕೊಡಲು ಬಂದಿರುವೆನು” ಎಂದು ತುಂಬಿದ ದನಿಯಲ್ಲಿ ನುಡಿದನು.

ತತೋಽಹಮೂಚೇ ಹರಿಮೀಶಿತಾರಂ
ತುಷ್ಟೋಽಸಿ ಚೇತ್ಕೇಶವ ತದ್ವೃಣೋಮಿ ।
ಯಾ ಸಾ ತ್ವದೀಯಾ ಪರಮಾ ಹಿ ಮಾಯಾ
ತಾಂ ವೇತ್ತುಮಿಚ್ಛಾಮಿ ಜನಾರ್ದನೋಽಹಂ ॥ ೪೦ ॥

ಅಥಾಬ್ರವೀನ್ಮೇ ಮಧುಕೈಟಭಾರಿಃ
ಕಿಂ ತೇ ತಯಾ ಬ್ರಹ್ಮನ್ಮಾಯಯಾ ವೈ ।
ಧರ್ಮಾರ್ಥಕಾಮಾನಿ ದದಾನಿ ತುಭ್ಯಂ
ಪುತ್ರಾಣಿ ಮುಖ್ಯಾನಿ ನಿರಾಮಯತ್ವಂ ॥ ೪೧ ॥

ತತೋ ಮುರಾರಿಂ ಪುನರುಕ್ತವಾನಹಂ
ಭೂಯೋಽರ್ಥಧರ್ಮಾರ್ಥಜಿಗೀಷಿತೈವ ಯತ್ ।
ಮಾಯಾ ತವೇಮಾಮಿಹ ವೇತ್ತುಮಿಚ್ಛೇ
ಮಮಾದ್ಯ ತಾಂ ದರ್ಶಯ ಪುಷ್ಕರಾಕ್ಷ ॥ ೪೨ ॥

---

೪೦. ಆಗ ನಾನು ಆ ಪ್ರಭುವಾದ ಶ್ರೀಹರಿಯನ್ನು ಕುರಿತು “ಹೇ ಕೇಶವ! ನೀನು ಸಂತುಷ್ಟನಾಗಿರುವುದು ನಿಜವೇ ಆದಲ್ಲಿ, ನಾನು ಈ ವರವನ್ನು ಬೇಡುವೆದು. ಎಲೈ ಜನಾರ್ದನನೇ! ನಿನ್ನ ಅಚಿಂತ್ಯವಾದ ಆ ಮಾಯೆಯನ್ನು ಸರಿಯಾಗಿ ಅರಿಯಬೇಕೆಂದು ಬೇಡುವೆನು” ಎಂದೆನು.

೪೧. ಹೀಗೆ ಬೇಡುತ್ತಲೇ ಆ ಮಧುಕೈಟಭ ಸಂಹಾರಿಯು ನನ್ನನ್ನು ಕುರಿತು “ಎಲೈ ಬ್ರಾಹ್ಮಣನೇ! ನನ್ನ ಮಾಯೆಯನ್ನು ಕಟ್ಟಿಕೊಂಡು ನಿನಗೇನಾಗಬೇಕು? ಧರ್ಮ, ಅರ್ಥ, ಕಾಮುಗಳೆಂಬ ಪುರುಷಾರ್ಥಗಳನ್ನು ಕೊಡುವೆನು. ಶ್ರೇಷ್ಠರಾದ ಪುತ್ರರನ್ನು ಕೊಡುವೆನು. ಯಾವೊಂದು ವ್ಯಾಧಿಯೂ ಬಾರದಂತೆ ಆರೋಗ್ಯವನ್ನು ನೀಡುವೆನು” ಎಂದನು.

೪೨. ಆಗ ನಾನು ವಿಷ್ಣುವನ್ನು ಕುರಿತು “ಎಲೈ ಪ್ರಭುವೇ, ಧರ್ಮದಿಂದಲೂ, ಅರ್ಥದಿಂದಲೂ, ನನಗೀಗ ಆಗಬೇಕಾದುದೇನು? ಈಗ ನಾನು ಬೇಡುವುದು ನಿನ್ನ ಮಾಯೆಯೊಂದನ್ನು ಅರಿಯುವಂತೆ ಶಕ್ತಿಯನ್ನು ದಯೆಪಾಲಿಸೆಂದೇ. ಹೇ ಕಮಲಲೋಚನ, ನನಗೆ ಅದನ್ನು ತೋರ್ಪಡಿಸುವವನಾಗು” ಎಂದೆನು.

ತತೋಽಭ್ಯುವಾಚಾಥ ನೃಸಿಂಹಮುಖ್ಯಃ
ಶ್ರೀಶಃ ಪ್ರಭುರ್ವಿಷ್ಣುರಿದಂ ವಚೋ ಮೇ ।

॥ ವಿಷ್ಣುರುವಾಚ ॥

ಮಾಯಾಂ ಮದೀಯಾಂ ನ ಹಿ ವೇತ್ತಿ ಕಶ್ಚಿ-
ನ್ನ ಚಾಪಿ ವಾ ವೇತ್ಸ್ಯತಿ ಕಶ್ಚಿದೇವ ॥ ೪೩ ॥

ಪೂರ್ವಂ ಸುರರ್ಷಿರ್ದ್ವಿಜ ನಾರದಾಖ್ಯೋ
ಬ್ರಹ್ಮಾತ್ಮಜೋಽಭೂನ್ಮಮ ಭಕ್ತಿಯುಕ್ತಃ ।
ತೇನಾಪಿ ಪೂರ್ವಂ ಭವತಾ ಯಥೈವ
ಸಂತೋಷಿತೋ ಭಕ್ತಿಮತಾ ಹಿ ತದ್ವತ್ ॥ ೪೪ ॥

ವರಂ ಚ ದತ್ತ್ವಾ ಗತವಾನಹಂ ಚ
ಸ ಚಾಪಿ ವವ್ರೇ ವರಮೇತದೇವ ।
ನಿವಾರಿತೋ ಮೂಢಮತಿಮೂರ್ಢಭಾವಾ-
ದ್ವೃಣಾನ್ಯಥೈವಂ ಕೃತವಾನ್ವರಂ ಚ ॥ ೪೫ ॥

---

೪೩. ಆಗ ನೃಸಿಂಹರೂಪಧರನೂ, ಲಕ್ಷ್ಮೀದೇವಿಯ ವಲ್ಲಭನೂ, ಪ್ರಭುವೂ ಆದ ವಿಷ್ಣುವು ನನ್ನನ್ನು ಕುರಿತು ಇಂತೆಂದನು. “ನನ್ನ ಮಾಯೆಯನ್ನು ಇದುವರೆಗೆ ಯಾವನೂ ಅರಿಯನು. ಮುಂದೆಯೂ ಸಹ ಯಾವನೂ ಅರಿಯಲಾರನು.

೪೪. ಎಲೈ ಬ್ರಾಹ್ಮಣಾ! ಹಿಂದೆ ಬ್ರಹ್ಮಪುತ್ರನಾದ ನಾರದನೆಂಬ ದೇವರ್ಷಿಯು ನನ್ನಲ್ಲಿ ಭಕ್ತಿಯುಕ್ತನಾಗಿದ್ದನು. ಆ ನಾರದನೂ ಕೂಡ ನಿನ್ನಂತೆಯೇ ಭಕ್ತಿಯಿಂದ ನನ್ನನ್ನು ಸಂತೋಷಪಡಿಸಿದನು.

೪೫. ಆಗ ನಾನೂ ಅವನಿಗೆ ವರವನ್ನು ಕೊಡಬೇಕೆಂದು ಹೋದೆನು. ಅವನು ಕೂಡ ನೀನು ಕೇಳಿದ ವರವನ್ನೇ ಬೇಡಿದನು. ನಾನೆಷ್ಟುಬಾರಿ ಬೇಡವೆಂದರೂ ಆತನು ಬಹುಮೂರ್ಖತೆಯಿಂದ ನಿನ್ನಂತೆಯೇ ಅದೇ ವರವನ್ನೇ ಬೇಡಿದನು.

ತತೋ ಮಯೋಕ್ತೋಽಂಭಸಿ ನಾರದ ತ್ವಂ
ಮಾಯಾಂ ಹಿ ಮೇ ವೇತ್ಸ್ಯಸಿ ಸಂನಿಮಗ್ನಃ ।
ತತೋ ನಿಮಗ್ನೋಽಂಭಸಿ ನಾರದೋಽಸೌ
ಕನ್ಯಾ ಬಭೌ ಕಾಶಿಪತೇಃ ಸುಶೀಲಾ ॥ ೪೬ ॥

ತಾಂ ಯೌವನಾಢ್ಯಾಮಥ ಚಾರುಧರ್ಮಿಣೇ ।
ವಿದರ್ಭರಾಜ್ಞಸ್ತನಯಾಯ ವೈ ದದೌ ।
ಸ್ವಧರ್ಮಿಣೇ ಸೋಽಪಿ ತಯಾ ಸಮೇತಃ
ಸಿಷೇವ ಕಾಮಾನತುಲಾನ್ಮಹರ್ಷಿಃ ॥ ೪೭ ॥

ಸ್ವರ್ಗೇ ಗತೇಽಸೌ ಪಿತರಿ ಪ್ರತಾಪವಾ-
ನ್ರಾಜ್ಯಂ ಕ್ರಮಾಯಾತಮವಾಪ್ಯ ಹೃಷ್ಟಃ ।
ವಿದರ್ಭರಾಷ್ಟ್ರಂ ಪರಿಪಾಲಯಾನಃ
ಪುತ್ರೈಃ ಸಪೌತ್ರೈರ್ಬಹುಭಿರ್ವೃತೋಽಭೂತ್ ॥ ೪೮ ॥

---

೪೬. ಆಗ ನಾನು ಅವನನ್ನು ಕುರಿತು "ಎಲೈ ನಾರದಾ! ನೀನು ನನ್ನ ಮಾಯೆಯನ್ನು ಅರಿಯಬೇಕಲ್ಲವೆ? ಹಾಗಾದರೆ ಈ ನೀರಿನಲ್ಲಿ ಮುಳುಗಿ ಏಳು. ಆಗ ಗೊತ್ತಾಗುವುದು" ಎಂದೆನು. ಬಳಿಕ ನಾರದನು ನನ್ನ ಮಾತಿನಂತೆ ಆ ನೀರಿನಲ್ಲಿ ಮುಳುಗಿ ಏಳಲು ಕಾಶೀರಾಜನ ಮಗಳಾದ ಸುಶೀಲೆಯೆಂಬ ಕನ್ನಿಕೆಯಾಗಿಬಿಟ್ಟನು.

೪೭. ಆ ಸುಶೀಲೆಯೆಂಬ ಕನ್ಯೆಯು ಯೌವನವತಿಯಾಗಲು ಕಾಶಿರಾಜನು ವಿದರ್ಭದೇಶದ ಅರಸನ ಮಗನಾದ ಚಾರುಧರ್ಮಿ ಎಂಬ ವರನಿಗೆ ಆವಳನ್ನು ದಾನಮಾಡಿದನು. ಬಳಿಕ ಕನ್ಯಾರೂಪದಲ್ಲಿದ್ದ ನಾರದಮಹರ್ಷಿಯು ಧರ್ಮನಿರತನಾದ ಚಾರುಧರ್ಮಿ ಎಂಬ ರಾಜಕುಮಾರನೊಂದಿಗೆ ಅನುಪಮವಾದ ಭೋಗಭಾಗ್ಯಗಳನ್ನು ಅನುಭವಿಸಿದನು.

೪೮. ಆ ಚಾರುಧರ್ಮಿಯ ತಂದೆಯು ಸ್ವರ್ಗಲೋಕಕ್ಕೆ ತೆರಳಿದ ನಂತರ, ಕುಲಕ್ರಮವಾಗಿ ಬಂದಂಥ ರಾಜ್ಯವನ್ನು ಪಡೆದು ಆ ಚಾರುಧರ್ಮಿಯು ಬ್ರಹ್ಮಪ್ರತಾಪದಿಂದಲೂ ಸಂತೋಷದಿಂದಲೂ ವಿದರ್ಭದೇಶವನ್ನು ಪರಿಪಾಲಿಸುತ್ತಾ, ಮಕ್ಕಳು ಮೊಮ್ಮಕ್ಕಳನ್ನು ಪಡೆದು ಸುಖವಾಗಿದ್ದನು.

ಅಥಾಭವದ್ಭೂಮಿಪತೇಃ ಸುಧರ್ಮಣಃ
ಕಾಶೀಶ್ವರೇಣಾಥ ಸಮಂ ಸುಯುದ್ಧಂ ।
ತತ್ರ ಕ್ಷಯಂ ಪ್ರಾಪ್ಯ ಸಪುತ್ರಪೌತ್ರಂ
ವಿದರ್ಭರಾಟ್ಕಾಶಿಪತಿಶ್ಚ ಯುದ್ಧೇ ॥ ೪೯ ॥

ತತಃ ಸುಶೀಲಾ ಪಿತರಂ ಸಪುತ್ರಂ
ಜ್ಞಾತ್ವಾ ಪತಿಂ ಚಾಪಿ ಸಪುತ್ರಪೌತ್ರಂ ।
ಪುರಾದ್ವಿನಿಃಸೃತ್ಯ ರಣಾವನಿಂ ಗತಾ
ದೃಷ್ಟ್ವಾ ಸುಶೀಲಾ ಕದನಂ ಮಹಾಂತಂ ॥ ೫೦ ॥

ಭರ್ತುರ್ಬಲೇ ತತ್ರ ಪಿತುರ್ಬಲೇ ಚ
ದುಃಖಾನ್ವಿತಾ ಸಾ ಸುಚಿರಂ ವಿಲಪ್ಯ ।
ಜಗಾಮ ಸಾ ಮಾತರಮಾರ್ತರೂಪಾ
ಭ್ರಾತೄನ್ಮೃತಾನ್ಭ್ರಾತೃಸುತಾನ್ಸಪೌತ್ರಾನ್ ॥ ೫೧ ॥

---

೪೯. ಬಳಿಕ ಒಂದಾನೊಂದು ಕಾರಣದಿಂದ ಚಾರುಧರ್ಮಿಗೂ, ಮಾವನಾದ ಕಾಶೀರಾಜನಿಗೂ ಯುದ್ಧವು ಜರುಗಿತು. ಆ ಯುದ್ಧದಲ್ಲಿ ವಿದರ್ಭದೇಶದ ಅರಸನಾದ ಚಾರುಧರ್ಮಿಯೂ ಕಾಶೀರಾಜನೂ ಮಕ್ಕಳು ಮೊಮ್ಮಕ್ಕಳೊಡನೆ ನಾಶಹೊಂದಿದರು.

೫೦. ಆಗ ಸುಶೀಲೆಯು, ತನ್ನ ತಂದೆಯೂ, ಪತಿಯೂ, ಪುತ್ರಪೌತ್ರರೊಂದಿಗೆ ಯುದ್ಧದಲ್ಲಿ ಹತರಾದುದನ್ನು ಕೇಳಿ ತನ್ನ ಊರಿನಿಂದ ಹೊರಟು, ಯುದ್ಧಭೂಮಿಗೆ ಬಂದು ಅಲ್ಲಿ ಭಾರಿಯುದ್ಧವು ಜರುಗಿರುವುದನ್ನು ಕಂಡುದಲ್ಲದೆ-

೫೧. ತನ್ನ ಗಂಡನ ಸೇನೆಯಲ್ಲಿಯೂ, ತಂದೆಯ ಸೇನೆಯಲ್ಲಿಯೂ, ತನ್ನ ಭ್ರಾತೃಗಳೂ, ಮಕ್ಕಳುಗಳೂ, ಮೊಮ್ಮಕ್ಕಳುಗಳೂ ಮಡಿದುಹೋಗಿರುವುದರಿಂದ ಅತಿಶಯವಾದ ವ್ಯಥೆಯನ್ನು ಹೊಂದಿ ಬಹುಹೊತ್ತು ಅಳುತ್ತಿದ್ದು ನೋಡಿದವರಿಗೆ ಅಯ್ಯೋ ಎನಿಸುವಷ್ಟುಮಟ್ಟಿಗೆ ದುಃಖದ ಆಕಾರವನ್ನು ವಹಿಸಿದವಳಾಗಿ ತಾಯಬಳಿಗೆ ಹೋದಳು.

ಭರ್ತಾರಮೇಷಾ ಪಿತರಂ ಚ ಗೃಹ್ಯ
ಮಹಾಶ್ಮಶಾನೇ ಚ ಮಹಾಚಿತಿಂ ಸಾ ।
ಕೃತ್ವಾ ಹುತಾಶಂ ಪ್ರದದೌ ಸ್ವಯಂ ಚ
ಯದಾ ಸಮಿದ್ಧೋ ಹುತಭುಗ್ಬಭೂವ ॥ ೫೨ ॥

ತದಾ ಸುಶೀಲಾ ಪ್ರಸಿವೇಶ ವೇಗಾ-
ದ್ಧಾ ಪುತ್ರ ಹಾ ಪುತ್ರ ಇತಿ ಬ್ರುವಾಣಾ ।
ತದಾ ಪುನಃ ಸಾ ಮುನಿರ್ನಾರದೋಽಭೂ-
ತ್ಸ ಚಾಪಿ ವಹ್ನಿಃ ಸ್ಫಟಿಕಾಮಲಾಭಃ ॥ ೫೩ ॥

ಪೂರ್ಣಂ ಸರೋಽಭೂದಥ ಚೋತ್ತತಾರ
ತಸ್ಯಾಗ್ರತೋ ದೇವವರಸ್ತು ಕೇಶವಃ ।
....
ಪ್ರಹಸ್ಯ ದೇವರ್ಷಿಮುವಾಚ ನಾರದಂ ॥ ೫೪ ॥

೫೨. ಅನಂತರ ತನ್ನ ಗಂಡನನ್ನೂ ತಂದೆಯನ್ನೂ ತೆಗೆದುಕೊಂಡು ಮಹಾಶ್ಮಶಾನವೆಂದು ಪ್ರಸಿದ್ಧವಾದ ಕಾಶೀಕ್ಷೇತ್ರದಲ್ಲಿ ಭಾರಿಬೆಂಕಿಯನ್ನು ಹೊತ್ತಿಸಿ ಅದು ಚೆನ್ನಾಗಿ ಉರಿಯತೊಡಗಿದನಂತರ ಅಗ್ನಿಗೆ ಪ್ರದಕ್ಷಿಣೆಮಾಡಿ, ಅವರೀರ್ವರನ್ನೂ ಸಂಸ್ಕರಿಸಿದಳು.

೫೩. ಬಳಿಕ ಸುಶೀಲೆಯೂ ಸಹ 'ಅಯ್ಯೋ ಮಗುವೇ, ಅಯ್ಯೋ ಮಗುವೇ' ಎಂಬದಾಗಿ ಗೋಳಿಡುತ್ತಾ ವೇಗದಿಂದ ಆ ಚಿತೆಯಲ್ಲಿ ಬಿದ್ದುಬಿಟ್ಟಳು. ಒಡನೆಯೇ ಸುಶೀಲೆಯು ನಾರದನಾಗಿಬಿಟ್ಟಳು. ಚಿತಾಗ್ನಿಯೂ ಸಹ ಸ್ಫಟಿಕದಂತೆ ಶುದ್ಧವಾಗಿ ಬೆಳಗುತ್ತಿರುವ ನೀರಿನಿಂದ ತುಂಬಿರುವ–

೫೪. ಸರಸ್ಸಾಗಿ (ಪುಷ್ಕರಿಣಿ) ಪರಿಣಮಿಸಿತು. ಆಗ ದೇವಶ್ರೇಷ್ಠನಾದ ಶ್ರೀಹರಿಯು ಸರಸ್ಸಿನ ಮುಂದೆ ಆವಿರ್ಭವಿಸಿ, ನಗುನಗುತ್ತಾ ದೇವರ್ಷಿಯಾದ ನಾರದನನ್ನು ಕುರಿತು–

ಕಸ್ತೇ ತು ಪುತ್ರೋ ವದ ಮೇ ಮಹರ್ಷೇ
ಮೃತಂ ಚ ಕಂ ಶೋಚಸಿ ನಷ್ಟಬುದ್ಧಿಃ ।
ವ್ರೀಡಾನ್ವಿತೋಽಭೂದಥ ನಾರದೋಽಸೌ
ತತೋಽಹಮೇನಂ ಪುನರೇವ ಚಾಹ ॥ ೫೫ ॥

ಇತೀದೃಶಾ ನಾರದ ಕಷ್ಟರೂಪಾ
ಮಾಯಾ ಮದೀಯಾ ಕಮಲಾಸನಾದ್ಯೈಃ ।
ಶಕ್ಯಾ ನ ವೇತ್ತುಂ ಸಮಹೇಂದ್ರರುದ್ರೈಃ
ಕಥಂ ಭವಾನ್ವೇತ್ಸ್ಯತಿ ದುರ್ವಿಭಾವ್ಯಾಂ ॥ ೫೬ ॥

ಸ ವಾಕ್ಯಮಾಕರ್ಣ್ಯ ಮಹಾಮಹರ್ಷಿ-
ರುವಾಚ ಭಕ್ತಿಂ ಮಮ ದೇಹಿ ವಿಷ್ಣೋ ।
ಪ್ರಾಪ್ತೇಽಥ ಕಾಲೇ ಸ್ಮರಣಂ ತಥೈವ
ಸದಾ ಚ ಸಂದರ್ಶನಮೀಶ ತೇಽಸ್ತು ॥ ೫೭ ॥

---

೫೫. "ಎಲೈ ಮಹರ್ಷಿಯೇ! ನಿನ್ನ ಮಗನು ಯಾರು? ಹೇಳು. ಯಾವನು ಸತ್ತುಹೋದನೆಂದು ಬುದ್ಧಿಹೀನನಾಗಿ ಈರೀತಿ ವಿಲಪಿಸುತ್ತಿರುವೆ?" ಎಂದು ಪ್ರಶ್ನಿಸಲು ಆಗ ನಾರದಮಹರ್ಷಿಯು ನಾಚಿಕೆಗೊಂಡನು. ಆಗ ನಾನು ಮತ್ತೆ ಅವನನ್ನು ಕುರಿತು ಇಂತೆಂದೆನು :—

೫೬. "ಎಲೈ ನಾರದನೇ! ಇದೀಗ ನನ್ನ ಮಾಯೆಯು. ಇದು ಬಹುಕಷ್ಟಕರವಾದುದು. ಇದನ್ನು ಬ್ರಹ್ಮನಾಗಲಿ, ಇಂದ್ರನಾಗಲಿ, ರುದ್ರನಾಗಲಿ ತಿಳಿಯಲಾರರು. ಹೀಗಿರುವಾಗ ಊಹೆಗೂ ನಿಲುಕದ ಆ ಮಾಯೆಯನ್ನು ನೀನೆಂತು ಅರಿಯಬಲ್ಲೆ?"

೫೭. ನಾನೀರೀತಿ ನುಡಿದುದನ್ನು ಕೇಳಿ ನಾರದಮಹರ್ಷಿಯು "ಎಲೈ ಸರ್ವವ್ಯಾಪಿಯಾದ ಪ್ರಭುವೆ? ನನಗೆ ನಿನ್ನಲ್ಲಿ ಭಕ್ತಿಯು ಸ್ಥಿರವಾಗಿ ಉಂಟಾಗುವಂತೆ ಅನುಗ್ರಹಿಸು. ಯುಕ್ತವಾದ ಸಂದರ್ಭದಲ್ಲೆಲ್ಲಾ ನಿನ್ನ ಸ್ಮರಣೆಯುಂಟಾಗುವಂತೆಯೂ, ಸರ್ವದಾ ನಿನ್ನ ದರ್ಶನವು ಲಭಿಸುತ್ತಿರುವಂತೆಯೂ ಅನುಗ್ರಹವನ್ನು ಮಾಡು.

ಯತ್ರಾಹಮಾರ್ತಶ್ಚಿತಿಮುದ್ಯ ರೂಢ-
ಸ್ತತ್ತೀರ್ಥಮಸ್ತ್ವಚ್ಯುತಪಾಪಹಂತ್ರಾ ।
ಅಧಿಷ್ಠಿತಂ ಕೇಶವ ನಿತ್ಯಮೇವ
ತ್ವಯಾ ಸಹಾಸಂ ಕಮಲೋದ್ಭವೇನ ॥ ೫೮ ॥

ತತೋ ಮಯೋಕ್ತೋ ದ್ವಿಜ ನಾರದೋಽಸೌ
ತೀರ್ಥಂ ಸಿತೋದೇ ಹಿ ಚಿತಿಸ್ತವಾಸ್ತು ।
ಸ್ಥಾಸ್ಯಾಮ್ಯಹಂ ಚಾತ್ರ ಸದೈವ ವಿಷ್ಣು-
ರ್ಮಹೇಶ್ವರಃ ಸ್ಥಾಸ್ಯತಿ ಚೋತ್ತರೇಣ ॥ ೫೯ ॥

ಯದಾ ವಿರಂಚೇರ್ವದನಂ ತ್ರಿನೇತ್ರಃ
ಸ ಚ್ಛೇತ್ಸ್ಯತೇಯಂ ಚ ಮಮುಗ್ರವಾಚಂ ।
ತದಾ ಕಪಾಲಸ್ಯ ತು ಮೋಚನಾಯ
ಸಮೇಷ್ಯತೇ ತೀರ್ಥಮಿದಂ ತ್ವದೀಯಂ ॥ ೬೦ ॥

---

೫೮. ಎಲೈ ಅಚ್ಯುತನೇ! ನಾನೀಗ ದುಃಖಿತನಾಗಿ ಚಿತಿಯನ್ನು ಏರಲಿಲ್ಲವೇ? ಚಿತಿಯು ಪಾಪಪರಿಹಾರಕವಾದಂತಹ ತೀರ್ಥವಾಗಿ ಪರಿಣಮಿಸಲಿ. ಎಲೈ ಕೇಶವನೇ! ಆ ತೀರ್ಥವನ್ನು ನೀನೂ, ಬ್ರಹ್ಮನೂ ಸಹ ಸರ್ವದಾ ಅಧಿಷ್ಠಾನ (ನೆಲೆ) ವನ್ನಾಗಿ ಮಾಡಿಕೊಂಡಿರಿ '' ಎಂದು ಪ್ರಾರ್ಥಿಸಿದನು.

೫೯. ಓ ಬ್ರಾಹ್ಮಣಾ! ಆಗ ನಾನು ನಾರದನನ್ನು ಕುರಿತು ''ಎಲೈ ಮಹರ್ಷಿಯೇ! ನೀನು ನುಡಿದಂತೆಯೇ ಈ ಚಿತಿಯು ಶುಭ್ರವಾದ ಜಲದಿಂದ ತುಂಬಿರುವ ಸರಸ್ಸಾಗಲಿ. ಸರ್ವವ್ಯಾಪಿಯಾದ ನಾನು ಇಲ್ಲಿ ಸರ್ವದಾ ವಾಸಿಸುವೆನು. ನನಗೆ ಉತ್ತರಪಾರ್ಶ್ವದಲ್ಲಿಯೇ ಮಹೇಶ್ವರನೂ ಸದಾ ಕಾಲದಲ್ಲಿ ನೆಲೆಸಿರುವನು.

೬೦. ಯಾವಾಗ ಆ ತ್ರಿಣೇತ್ರನಾದ ಮಹೇಶ್ವರನು ಕಠಿಣವಾಕ್ಯಗಳನ್ನಾಡುವ ಬ್ರಹ್ಮನ ತಲೆಯನ್ನು ಕತ್ತರಿಸಿಹಾಕುವನೋ ಆಗ ತನ್ನ ಕೈಗೆ ಅಂಟಿಕೊಂಡಿಯೇಬಿಡುವ ಬ್ರಹ್ಮಕಪಾಲವನ್ನು ಬಿಡಿಸಿಕೊಳ್ಳುವುದಕ್ಕೋಸ್ಕರ ನಿನ್ನೀ ತೀರ್ಥದ ಬಳಿಗೇ ಬರುವನು.

ಸ್ನಾತಸ್ಯ ತೀರ್ಥೇ ತ್ರಿಪುರಾಂತಕಸ್ಯ
ಪತಿಷ್ಯತೇ ಭೂಮಿತಲೇ ಕಪಾಲಂ ।
ತತಸ್ತು ತೀರ್ಥೇತಿ ಕಪಾಲಮೋಚನಂ
ಖ್ಯಾತಂ ಪೃಥಿವ್ಯಾಂ ಚ ಭವಿಷ್ಯತೇ ತತ್ ॥ ೬೧ ॥

ತದಾ ಪ್ರಭೃತ್ಯಂಬುದವಾಹನೋऽಸೌ
ನ ಮೋಕ್ಷ್ಯತೇ ತೀರ್ಥವರಂ ಸುಪುಣ್ಯಂ ।
ನ ಚೈವ ತಸ್ಮಿನ್ದ್ವಿಜ ಸಂಪ್ರಚಕ್ಷತೇ
ತತ್ಕ್ಷೇತ್ರಮುಗ್ರಂ ತ್ವಥ ಬ್ರಹ್ಮವಧ್ಯಾ ॥ ೬೨ ॥

ಯದಾ ನ ಮೋಕ್ಷತ್ಯಮರಾರಿಹಂತಾ
ತತ್ಕ್ಷೇತ್ರಮುಖ್ಯಂ ಮಹದಾಪ್ತಪುಣ್ಯಂ ।
ತದಾ ವಿಮುಕ್ತೇತಿ ಸುರೈ ರಹಸ್ಯಂ
ತೀರ್ಥಂ ಸ್ತುತಂ ಪುಣ್ಯದಮುಮ್ಯಯಾಖ್ಯಂ ॥ ೬೩ ॥

---

೬೧. ಆ ತ್ರಿಪುರಸಂಹಾರಿಯು ಈ ತೀರ್ಥದಲ್ಲಿ ಸ್ನಾನಮಾಡುತ್ತಲೇ ಆತನ ಕೈಗೆ ಅಂಟಿಕೊಂಡಿರುವ ಬ್ರಹ್ಮಕಪಾಲವು ಕಳಚಿ ಕೆಳಗೆ ಬೀಳುವುದು. ಅನಂತರ ಈ ತೀರ್ಥವು ಕಪಾಲಮೋಚನ ತೀರ್ಥವೆಂದೇ ಜಗತ್ತಿನಲ್ಲೆಲ್ಲಾ ಪ್ರಸಿದ್ಧವಾಗುವುದು.

೬೨. ಅದು ಮೊದಲುಗೊಂಡು ಈ ಇಂದ್ರನೂ ಕೂಡ ಪುಣ್ಯದಾಯಕವೆನಿಸಿದ ಈ ಕಪಾಲವಿಮೋಚನ ತೀರ್ಥವನ್ನು ಬಿಟ್ಟು ಇರಲಾರನು. ಎಲೈ ದ್ವಿಜನೇ! ಆ ಕ್ಷೇತ್ರವು ಮಹಾಪಾತಕಗಳಿಗೆ ಅತಿಭಯಂಕರವೆನಿಸಿರುವುದು.

೬೩. ವೃತ್ರವಧಾನಂತರದಲ್ಲಿ ಇಂದ್ರನನ್ನು ಬೆನ್ನುಹತ್ತಿದ ಬ್ರಹ್ಮಹತ್ಯಾ ಪಾತಕವು ಬಿಡದೆಯೇ ಇರಲು, ಕ್ಷೇತ್ರಗಳಲ್ಲೆಲ್ಲಾ ಮುಖ್ಯವೆನಿಸಿದ ಪರಮ ಪುಣ್ಯದಾಯಕವಾದೀ ಕ್ಷೇತ್ರವನ್ನು ಇಂದ್ರನು ಬಳಿಸಾರುತ್ತಲೇ ಆ ಬ್ರಹ್ಮ ಹತ್ಯೆಯು ಬಿಟ್ಟುಹೋಯಿತಂತೆ. ಹೀಗೆಂಬುದಾಗಿ ರಹಸ್ಯವನ್ನು ಬಲ್ಲವರಾದ ದೇವತೆಗಳು ಪುಣ್ಯದಾಯಕವಾದೀ ಅನ್ವರ್ಥನಾಮಧೇಯವುಳ್ಳ ಕ್ಷೇತ್ರವನ್ನು ಪ್ರಶಂಸಿಸಿರುವರು.

ಕೃತ್ವಾ ತು ಪಾಪಾನಿ ನರೋ ಮಹಾಂತಿ
ತಸ್ಮಿನ್ಪ್ರವಿಷ್ಟಃ ಶುಚಿರಪ್ರಮಾದೀ ।
ಯದಾ ತು ಮಾಂ ಚಿಂತಯತೇ ಸ ಶುದ್ಧಃ
ಪ್ರಯಾತಿ ಮೋಕ್ಷಂ ಭಗವತ್ಪ್ರಸಾದಾತ್ ॥ ೬೪ ॥

ಭೂತ್ವಾ ತಸ್ಮಿನ್ರುದ್ರಪಿಶಾಚಸಂಜ್ಞೋ
ಯೋನ್ಯಂತರೇ ದುಃಖಮುಪಾಶ್ನುತೇಽಸೌ ।
ವಿಮುಕ್ತಪಾಪೋ ಬಹುವರ್ಷಪೂಗ್ಯೈ-
ರುತ್ಪತ್ತಿಮಾಯಾಸ್ಯತಿ ವಿಪ್ರಗೇಹೇ ॥ ೬೫ ॥

ಶುಚಿರ್ಯತಾತ್ಮಾಸ್ಯ ತತೋಽಂತಕಾಲೇ
ರುದ್ರೋ ಹಿತಂ ತಾರಕಮಸ್ಯ ಕೀರ್ತಯೇತ್ ।
ಇತ್ಯೇವಮುಕ್ತ್ವಾ ದ್ವಿಜವರ್ಯ ನಾರದಂ
ಗತೋಽಸ್ಮಿ ದುಗ್ಧಾರ್ಣವಮಾತ್ಮಗೇಹಂ ॥ ೬೬ ॥

---

೬೪. ಯಾವ ಮಾನವನು ಮಹಾಮಹಾಪಾತಕಗಳನ್ನೇ ಮಾಡಿದ್ದರೂ, ಪ್ರಮಾದಕ್ಕೆ ಆಸ್ಪದವೀಯದೆ, ಶುದ್ಧಹೃದಯನಾಗಿ ಈ ತೀರ್ಥದಲ್ಲಿ ಸ್ನಾನಮಾಡಿ ನನ್ನನ್ನು ಧ್ಯಾನಮಾಡುವನೋ ಆಗವನ ಪಾಪಗಳೆಲ್ಲವೂ ಪರಿಹಾರವಾಗಿ ಅವನು ನನ್ನ ಅನುಗ್ರಹದಿಂದ ಮೋಕ್ಷವನ್ನು ಹೊಂದುವನು. (ಅದು ಹೇಗೆಂದರೆ)

೬೫. ಆ ಪಾಪಿಯು ಈ ಜನ್ಮಾನಂತರ ರುದ್ರಪಿಶಾಚವೆಂಬ ಹೆಸರಿನ ಬೇರೊಂದು ಜಾತಿಯಲ್ಲಿ ಹುಟ್ಟಿ ದುಃಖಗಳನ್ನು ಅನುಭವಿಸುವನು. ಆರೀತಿ ಅನೇಕ ವರ್ಷಗಳಕಾಲ ಕ್ಲೇಶಗಳನ್ನು ಅನುಭವಿಸಿದನಂತರ ಅವನ ಪಾಪಗಳಿಂದ ಬಿಡುಗಡೆ ಹೊಂದಿದವನಾಗಿ ಬಳಿಕ ಬ್ರಾಹ್ಮಣನ ಗೃಹವೊಂದರಲ್ಲಿ ಜನ್ಮವನ್ನು ತಾಳುವನು.

೬೬. ಆಗವನು ಶುದ್ಧನಾಗಿಯೂ ಜಿತೇಂದ್ರಿಯನಾಗಿಯೂ ಇರುವನು. ಅವನಿಗೆ ಪ್ರಾಣೋತ್ಕ್ರಮಣ ಸಮಯದಲ್ಲಿ ಶ್ರೀ ಶಂಕರನು ಹಿತಕರವಾದಂತಹ ತಾರಕಮಂತ್ರವನ್ನುಪದೇಶಿಸುವನು" ಎಂದು ನಾರದನಿಗೆ ಹೇಳಿ ಅಲ್ಲಿಂದ ಹೊರಟು ನನ್ನ ನಿವಾಸವಾದ ಕ್ಷೀರಸಮುದ್ರಕ್ಕೆ ಬಂದನು.

ಸ ಚಾಪಿ ವಿಪ್ರಸ್ತ್ರಿದಿವಂ ಚಚಾರ
ಗಂಧರ್ವರಾಜೇನ ಸಮುಚ್ಯಮಾನಃ ।
ಏತತ್ತ್ವವೋಕ್ತಂ ನನು ಬೋಧನಾಯ
ಮಾಯಾ ಮದೀಯಾ ನ ಹಿ ಶಕ್ಯತೇ ಸಾ ॥ ೬೭ ॥

ಜ್ಞಾತುಂ ಭವಾನಿಚ್ಛತಿ ಚೇತ್ತತೋಽದ್ಯ
ಏನಂ ವಿಶಸ್ವಾಪ್ಸು ಚ ವೇತ್ಸಿ ಯೇನ ।
ಏವಂ ದ್ವಿಜಾತಿರ್ಹರಿಣಾ ಪ್ರಬೋಧಿತೋ
ಭಾವ್ಯರ್ಥಯೋಗಾನ್ನಿಮಮಜ್ಜ ತೋಯೇ ॥ ೬೮ ॥

ಕೋಕಾಮುಖೇ ತಾತ ತತೋ ಹಿ ಕನ್ಯಾ
ಚಾಂಡಾಲವೇಶ್ಮನ್ಯಭವದ್ದ್ವಿಜಃ ಸಃ ।
ರೂಪಾನ್ವಿತಾ ಶೀಲಗುಣೋಪಪನ್ನಾ
ಅವಾಪ ಸಾ ಯೌವನಮಾಸಸಾದ ॥ ೬೯ ॥

---

೬೭. ಎಲೈ ದ್ವಿಜಶ್ರೇಷ್ಠನೇ! ಅನಂತರ ನಾರದನೂ ಸಹ ಗಂಧರ್ವಾಧಿಪತಿಯಿಂದ ಪೂಜೆಯನ್ನು ಕೈಕೊಳ್ಳುತ್ತಾ ಸ್ವರ್ಗಲೋಕವನ್ನು ಸೇರಿದನು. ನನ್ನ ಮಾಯೆಯನ್ನು ಅರಿಯಲು ಯಾರಿಗೂ ಸಾಧ್ಯವಿಲ್ಲವೆಂದು ತೋರ್ಪಡಿಸುವದಕ್ಕಾಗಿಯೇ ನಿನಗೆ ಈ ಕಥೆಯನ್ನು ಹೇಳಿರುವೆನು.

೬೮. ಇದರಮೇಲೆ ನೀನೂ ಪ್ರತ್ಯಕ್ಷವಾಗಿ ಅದನ್ನರಿಯಬೇಕೆಂದು ಅಪೇಕ್ಷಿಸುವುದಾದರೆ ಈಗ ಈ ನೀರಿನಲ್ಲಿ ಮುಳುಗು. ಆಗ ನೀನು ಅರಿಯುವೆಯಂತೆ ಎಂದು ಶ್ರೀಹರಿಯು ಸುತಪಸ್ಸೆಂಬ ಬ್ರಾಹ್ಮಣನಿಗೆ ತಿಳಿಸಿದನು. ಎಲೈ ಮುನಿಗಳಿರಾ! ಆ ಸುತಪಸ್ಸೆಂಬ ಬ್ರಾಹ್ಮಣನು ಭಾವಿಕಾರ್ಯದ ಮಹಿಮೆಯಿಂದ, ಈರೀತಿ ಶ್ರೀಹರಿಯು ಎಚ್ಚರಿಕೆಯಿತ್ತಿದ್ದರೂ ಸಹ ನೀರಿನಲ್ಲಿ ಮುಳುಗಿದನು.

೬೯. ಅಪ್ಪಾ! ಆ ಸುತಪಸ್ಸೆಂಬ ಬ್ರಾಹ್ಮಣನು ಅನಂತರ ಕೋಕಾಮುಖವೆಂಬ ತೀರ್ಥದ ಬಳಿ ಚಂಡಾಲನೊಬ್ಬನ ಮನೆಯಲ್ಲಿ ಕಡುಚೆಲುವೆಯೂ, ಶೀಲದಿಂದಲೂ, ಗುಣಗಳಿಂದಲೂ ಒಪ್ಪುವವಳೂ ಆದ ಒಬ್ಬ ಕನ್ಯೆಯಾಗಿ ಹುಟ್ಟಿದನು. ಆ ಕನ್ಯೆಯು ಕಾಲಕ್ರಮದಲ್ಲಿ ಯೌವನವನ್ನು ಹೊಂದಿದಳು.

ಚಾಂಡಾಲಪುತ್ರೇಣ ಸುಬಾಹುನಾSಪಿ
ವಿವಾಹಿತಾ ರೂಪವಿವರ್ಜಿತೇನ ।
ಪತಿರ್ನ ತಸ್ಯಾ ಹಿ ಮತೋ ಬಭೂವ
ಸಾ ತಸ್ಯ ಚೈವಾಭಿಮತಾ ಬಭೂವ ॥ ೭೦ ॥

ಪುತ್ರದ್ವಯಂ ನೇತ್ರಹೀನಂ ಬಭೂವ
ಕನ್ಯಾ ಚ ಪಶ್ಚಾದ್ಬಧಿರಾ ತಥಾನ್ಯಾ ।
ಪತಿರ್ದರಿದ್ರಸ್ತ್ವಥ ಸಾಪಿ ಮುಗ್ಧಾ
ನದೀಗತಾ ರೋದಿತಿ ತತ್ರ ನಿತ್ಯಂ ॥ ೭೧ ॥

ಗತಾ ಕದಾಚಿತ್ಕಲಶಂ ಗೃಹೀತ್ವಾ
ಸಾಂತರ್ಜಲಂ ಸ್ನಾತುಮಥ ಪ್ರವಿಷ್ಟಾ ।
ಯಾವದ್ದ್ವಿಜೋSಸೌ ಪುನರೇವ ತಾವ-
ಜ್ಜಾತಃ ಕ್ರಿಯಾಯೋಗರತಃ ಸುಶೀಲಃ ॥ ೭೨ ॥

---

೭೦. ಆಗವಳನ್ನು ಸುಬಾಹುವೆಂಬ ಕುರೂಪಿಯಾದ ಚಂಡಾಲ ಕುಮಾರನೊಬ್ಬನು ಮದುವೆಯಾದನು. ಅವನಿಗೆ ಅವಳಮೇಲೆ ಬಹುವಾಗಿ ಪ್ರೇಮವಿದ್ದರೂ ಅವಳು ಮಾತ್ರ ತನ್ನ ಪತಿಯ ವಿಷಯದಲ್ಲಿ ಪ್ರೇಮವನ್ನು ಹೊಂದಿರಲಿಲ್ಲ.

೭೧. ಹೀಗೆಯೇ ಇರಲು ಅವಳಿಗೆ ಇಬ್ಬರು ಕುರುಡರಾದ ಗಂಡು ಮಕ್ಕಳು ಕಿವಿಯೇ ಕೇಳಿಸದ ಕಿವುಡಿಯಾದ ಮಗಳೊಬ್ಬಳೂ ಹುಟ್ಟಿದರು. ಆ ಗಂಡನು ಕಡುದರಿದ್ರನಾಗಿದ್ದನು. ಆದುದರಿಂದ ಆ ಚಾಂಡಾಲಿಯು ಪ್ರತಿ ನಿತ್ಯವೂ ಕೋಕಾಮುಖದ ಬಳಿಗೆ ಹೋಗಿ ಅಳುತ್ತಿದ್ದಳು.

೭೨. ಒಂದುದಿನ ಎಂದಿನಂತೆ ಚಂಡಾಲಸ್ತ್ರೀಯು ಕಂಕುಳಲ್ಲಿ ಗಡಿಗೆಯನ್ನು ಹಿಡಿದುಕೊಂಡು, ಆ ನದಿಗೆ ಬಂದು ಸ್ನಾನಮಾಡಲು ಅದರೊಳಕ್ಕೆ ಮುಳುಗಿದಳು. ಆಗವಳು ಕ್ಷಣಮಾತ್ರದಲ್ಲಿ ಮರಳಿ ಹಿಂದಿನಂತೆ ಬ್ರಾಹ್ಮಣ ಕರ್ಮಾಚರಣಾಸಕ್ತನೂ ಶೀಲವಂತನೂ ಆದ ಬ್ರಾಹ್ಮಣನಾದಳು.

ತಸ್ಯಾಃ ಸ ಭರ್ತಾಥ ಚಿರಂಗತೇತಿ
ದ್ರಷ್ಟುಂ ಜಗಾಮಾಥ ನದೀಂ ಸುಪುಣ್ಯಾಂ ।
ದದರ್ಶ ಕುಂಭಂ ನ ಚ ತಾಂ ತಟಸ್ಥಾಂ
ತತೋಽತಿದುಃಖಾತ್ಪ್ರರುರೋದ ನಾದಯನ್ ॥ ೭೩ ॥

ತತೋಽಂಧಯುಗ್ಮಂ ಬಧಿರಾ ಚ ಕನ್ಯಾ
ದುಃಖಾನ್ವಿತಾಸೌ ಸಮುಪಾಜಗಾಮ ।
ತೇ ವೈ ರುದಂತಂ ಪಿತರಂ ಚ ದೃಷ್ಟ್ವಾ
ದುಃಖಾನ್ವಿತಾ ವೈ ರರುದುರ್ಭೃಶಾರ್ತಾಃ ॥ ೭೪ ॥

ತತಃ ಸ ಪಪ್ರಚ್ಛ ನದೀತಟಸ್ಥಾ-
ನ್ದ್ವಿಜಾನ್ಭವದ್ಭಿರ್ಯದಿ ಯೋಷಿದೇಕಾ ।
ದೃಷ್ಟಾ ತು ತೋಯಾರ್ಥಮುಪಾದ್ರವಂತೀ
ಆಖ್ಯಾತ ತೇ ಪ್ರೋಚುರಿಮಾಂ ಪ್ರವಿಷ್ಟಾ ॥ ೭೫ ॥

---

೭೩. ಆ ಸಮಯಕ್ಕೆ ಸರಿಯಾಗಿ ಚಂಡಾಲಸ್ತ್ರೀಯ ಗಂಡನಾದ ಸುಬಾಹುವು ನೀರು ತರಲು ಹೋದ ತನ್ನ ಹೆಂಡತಿಯು ಬಹುಹೊತ್ತಾದರೂ ಬರಲಿಲ್ಲವೇಕೆ? ನೋಡೋಣವೆಂದು ಪಾವನವಾದ ಕೋಕಾನದಿಯ ಬಳಿಗೆ ಬಂದನು. ಆದರೇನು? ಅದರ ದಡದಲ್ಲಿ ಬಿಂದಿಗೆಯೊಂದು ಕಂಡಿತೇ ವಿನಹ ತನ್ನ ಹೆಂಡತಿಯು ಕಾಣಬರಲಿಲ್ಲ. ಆಗವನು ಬಹುವಾಗಿ ವ್ಯಥೆಪಡುತ್ತಾ ಗಟ್ಟಿಯಾಗಿ ಅಳಲಾರಂಭಿಸಿದನು.

೭೪. ಅಷ್ಟುಹೊತ್ತಿಗೆ ಕುರುಡರಾದ ಇಬ್ಬರು ಗಂಡುಮಕ್ಕಳೂ ವ್ಯಥೆ ಪಡುತ್ತಾ ಅಲ್ಲಿಗೆ ಬಂದರು. ಅವರು ತಮ್ಮ ತಂದೆಯು ಅಳುತ್ತಿರುವುದನ್ನು ಕಂಡು ತಾವೂ ಇನ್ನಷ್ಟು ಜೋರಾಗಿ ಅಳತೊಡಗಿದರು.

೭೫–೭೬. ಆಗ ಸುಬಾಹುವು ನದಿಯ ತೀರದಲ್ಲಿದ್ದ ಬ್ರಾಹ್ಮಣರನ್ನು ಕಂಡು "ನೀವೇನಾದರೂ ನೀರನ್ನು ತರಲು ಹೆಂಗುಸೊಬ್ಬಳು ಬಂದಿದ್ದುದನ್ನು ಕಂಡಿರಾ! ಹಾಗಿದ್ದರೆ ಹೇಳಿ" ಎಂದು ಪ್ರಾರ್ಥಿಸಿದನು. ಆಗವರು ಅವನನ್ನು ಕುರಿತು "ಹೌದು, ಒಬ್ಬ ಹೆಂಗಸು ಬಂದಿದ್ದಳು. ಅವಳು ಸ್ನಾನಮಾಡ

ನದೀಂ ನ ಭೂಯಸ್ತು ಸಮುತ್ತತಾರ
ಏತಾವದೇವೇಹ ಸಮೀಹಿತಂ ನಃ ।
ಸ ತದ್ವಚೋ ಘೋರತರಂ ನಿಶಮ್ಯ
ರುರೋದ ಶೋಕಾಶ್ರುಪರಿಪ್ಲುತಾಕ್ಷಃ ॥ ೭೬ ॥

ತಂ ವೈ ರುದಂತಂ ಸಸುತಂ ಸಕನ್ಯಂ
ದೃಷ್ಟ್ವಾಹಮಾರ್ತಃ ಸುತರಾಂ ಬಭೂವ ।
ಆರ್ತಿಶ್ಚ ಮೇಽಭೂದಥ ಸಂಸ್ಮೃತಿಶ್ಚ
ಚಾಂಡಾಲಯೋಷಾಹಮಿತಿ ಕ್ಷಿತೀಶ ॥ ೭೭ ॥

ತತೋಽಬ್ರವಂ ತಂ ನೃಪತೇ ಮತಂಗಂ
ಕಿಮರ್ಥಮಾರ್ತೇನ ಹಿ ರುದ್ಯತೇ ತ್ವಯಾ ।
ತಸ್ಯಾ ನ ಲಾಭೋ ಭವಿತಾತಿಮೌಖ್ಯಾ-
ದಾಕ್ರನ್ದಿತೇನೇಹ ವೃಥಾ ಹಿ ಕಿಂ ತೇ ॥ ೭೮ ॥

ಬೇಕೆಂದು ನೀರಿನಲ್ಲಿ ಮುಳುಗಿದವಳು ಮತ್ತೆ ಮೇಲಕ್ಕೆ ಏಳಲೇ ಇಲ್ಲ. ಇದೀಗ ಮಾತ್ರ ನಾವು ಕಂಡಿರುವ ವಿಷಯ" ವೆಂದು ಹೇಳಿದರು. ಈರೀತಿಯಾಗಿ ಅವರು ಕರ್ಣಕಠೋರವಾಗಿ ನುಡಿದ ಮಾತನ್ನು ಕೇಳಿದೊಡನೆಯೇ ಆ ಚಂಡಾಲನು ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಸುತ್ತಾ ಅತ್ತನು.

೭೭. ಹೀಗೆ ಆ ಚಂಡಾಲನು ಮಕ್ಕಳೊಡನೆ ಗೋಳಿಡುವುದನ್ನು ಕಂಡು ನಾನೂ ದುಃಖಿತನಾದೆನು. ನನಗೆ ಬಹುವಾಗಿ ವ್ಯಥೆಯಾಯಿತಲ್ಲದೆ ನಾನೇ ಆ ಚಂಡಾಲನ ಪತ್ನಿಯಾಗಿದ್ದೆನೆಂದೂ ನೆನಪಾಯಿತು.

೭೮. ಎಲೈ ದೊರೆಯೇ! ಆಗ ನಾನು ಚಂಡಾಲನನ್ನು ಕುರಿತು "ಏತಕ್ಕೆ ನೀನಿಂತು ವ್ಯಥೆಪಡುತ್ತಾ ಗೋಳಾಡುತ್ತಿರುವೆ? ಅವಳಿನ್ನು ಮತ್ತೆ ದೊರೆಯಲಾರಳು. ಹೀಗೆ ಅಜ್ಞಾನದಿಂದ ಎಷ್ಟು ಅತ್ತರೆತಾನೆ ಏನು ಪ್ರಯೋಜನ?" ಎಂದೆನು.

ಸ ಮಾಮುವಾಚಾತ್ಮಜಯುಗ್ಮಮಂಧಂ
ಕನ್ಯಾ ಚೈಕಾ ಬಧಿರೇಯಂ ತಥೈವ ।
ಕಥಂ ದ್ವಿಜಾತೇ ಅಧುನಾರ್ತಮೇತ-
ಮಾಶ್ವಾಸಯಿಷ್ಯೇಽಪ್ಯಥ ಪೋಷಯಿಷ್ಯೇ ॥ ೭೯ ॥

ಇತ್ಯೇವಮುಕ್ತ್ವಾ ಸ ಸುತೈಶ್ಚ ಸಾರ್ಧಂ
ಪ್ಲುತ್ಯೃತ್ಯ ಪ್ಲುತ್ಯೃತ್ಯ ಚ ರೋದಿತಿ ಸ್ಮ ।
ಯಥಾ ಯಥಾ ರೋದಿತಿ ಸ ಶ್ವಪಾಕ-
ಸ್ತಥಾ ತಥಾ ಮೇ ಹ್ಯಭವತ್ಪ್ರತಾಪಿ ॥ ೮೦ ॥

ತತೋಽಹಮಾರ್ತಂ ತು ನಿವಾರ್ಯ ತಂ ವೈ
ಸ್ವವಂಶವೃತ್ತಾಂತಮಥಾಚಚಕ್ಷೇ ।
ತತಃ ಸ ದುಃಖಾತ್ಸಹ ಪುತ್ರಕೈಃ ಸಂ-
ವಿವೇಶ ಕೋಕಾಮುಖಮಾರ್ತರೂಪಃ ॥ ೮೧ ॥

---

೭೯. ಆಗವನು ನನ್ನನ್ನು ಕುರಿತು “ ಇದೋ ನನ್ನೀ ಗಂಡುಮಕ್ಕಳಿಬ್ಬರೂ ಕಣ್ಣಿಲ್ಲದವರು. ಈ ಮಗಳೂ ಸಹ ಕಿವಿಯೇ ಕೇಳಿಸದವಳು. ಓ ಬ್ರಾಹ್ಮಣಾ! ಈ ಅಳುತ್ತಿರುವ ಮಕ್ಕಳನ್ನು ಈಗ ಹೇಗೆತಾನೆ ಸಮಾಧಾನಪಡಿಸಲಿ? ಮುಂದೆತಾನೇ ಹೇಗೆ ಸಲಹಲಿ ” ಎಂದು ಹೇಳಿ–

೮೦. ಆ ಚಂಡಾಲನು ತನ್ನ ಮಕ್ಕಳೊಡನೆ ಬಿಕ್ಕಿಬಿಕ್ಕಿ ಅಳತೊಡಗಿದನು. ಅವನು ಅತ್ತತ್ತಹಾಗೆಲ್ಲಾ ನನಗೂ ಕೂಡ ಬಹುವಾಗಿ ದುಃಖವು ಹೆಚ್ಚುತ್ತಿತ್ತು.

೮೧. ಆಗ ನಾನು ದುಃಖಿತನಾದ ಚಂಡಾಲನಿಗೆ ನನ್ನ ಸಂಗತಿಯೆಲ್ಲವನ್ನೂ ವಿವರಿಸಿ ಆತನು ದುಃಖಪಡದಹಾಗೆ ತಡೆದೆನು. ಆದರೇನು? ಅವನು ಶೋಕವನ್ನು ತಾಳಲಾರದೆ ತನ್ನ ಮಕ್ಕಳೊಡನೆ ಕೋಕಾಮುಖದಲ್ಲಿ ಬಿದ್ದು ಮುಳುಗಿಯೇಬಿಟ್ಟನು.

ಪ್ರವಿಷ್ಟಮಾತ್ರೇ ಸಲಿಲೇ ಮತಂಗ-
ಸ್ತೀರ್ಥಪ್ರಭಾವಾಚ್ಚ ವಿಮುಕ್ತಪಾಪಃ ।
ವಿಮಾನಮಾರುಹ್ಯ ಶಶಿಪ್ರಕಾಶಂ
ಯಯೌ ದಿವಂ ತಾತ ಮಮೋಪಪಶ್ಯತಃ ॥ ೮೨ ॥

ತಸ್ಮಿನ್ಪ್ರವಿಷ್ಟೇ ಸಲಿಲೇ ಮೃತೇ ಚ
ಮಮಾರ್ತಿರಾಸೀದತಿಮೋಹಕರ್ತ್ರೀ ।
ತತೋಽತಿಪುಣ್ಯೇ ನೃಪವರ್ಯ ಕೋಕಾ-
ಜಲೇ ಪ್ರವಿಷ್ಟಸ್ತ್ರಿದಿವಂ ಗತಶ್ಚ ॥ ೮೩ ॥

ಭೂಯೋಽಭವಂ ವೈಶ್ಯಕುಲೇ ಯಥಾರ್ಥೋ
ಜಾತಿಸ್ಮರಸ್ತೀರ್ಥವರಪ್ರಸಾದಾತ್ ।
ತತೋಽತಿನಿರ್ವಿಣ್ಣಮನಾ ಗತೋಽಹಂ
ಕೋಕಾಮುಖಂ ಸಂಯತವಾಕ್ಯಚಿತ್ತಃ ॥ ೮೪ ॥

---

೮೨. ಅವನು ಆ ನೀರಿನಲ್ಲಿ ಮುಳುಗಿದೊಡನೆಯೇ ಆ ತೀರ್ಥದ ಪ್ರಭಾವದಿಂದ ತನ್ನ ಪಾಪವೆಲ್ಲವನ್ನೂ ಕಳೆದುಕೊಂಡು, ನಾನು ನೋಡುತ್ತಿರುವಂತೆಯೇ ಚಂದ್ರನಂತೆ ಬೆಳಗುತ್ತಿದ್ದ ವಿಮಾನವನ್ನೇರಿ ಸ್ವರ್ಗಕ್ಕೆ ತೆರಳಿದನು.

೮೩. ಅಪ್ಪಾ! ಅವನೀರೀತಿ ನೀರಿಗೆ ಹಾರಿ ಸತ್ತುದನ್ನು ಕಂಡು ನನಗೂ ಕೂಡ ಬಹುವಾಗಿ ಅಜ್ಞಾನವನ್ನು ಕವಿಸುವಂತಹ ದುಃಖವುಂಟಾಯಿತು. ಎಲೈ ನೃಪಶ್ರೇಷ್ಠನೇ! ಆಗ ನಾನು ಅತಿಪಾವನವಾದ ಕೋಕಾತೀರ್ಥದಲ್ಲಿ ಹಾರಿ ಮುಳುಗಿಕೊಂಡೆನು. ಬಳಿಕ ಆ ತೀರ್ಥಮಹಿಮೆಯಿಂದ ಸ್ವರ್ಗಕ್ಕೆ ಸೇರಿದೆನು.

೮೪. ಆ ಸ್ವರ್ಗವಾಸವು ಮುಗಿದ ಬಳಿಕ ಮರಳಿ ವೈಶ್ಯನಾಗಿ ಹುಟ್ಟಿದೆನು. ಆಗ ನಾನು ಕೋಕಾಮುಖವೆಂಬ ತೀರ್ಥದ ಪ್ರಭಾವದಿಂದ ಪೂರ್ವಜನ್ಮದ ಸಂಗತಿಯೆಲ್ಲವನ್ನೂ ಅರಿತಿದ್ದೆನು. ಆದುದರಿಂದ, ನನಗೆ ಈ ಸಂಸಾರದಲ್ಲಿ ಬೇಸರವುಂಟಾಗಿ ಮಾತುಗಳನ್ನಾಡದೆ ಮೌನದಿಂದ ಇರುತ್ತಿದ್ದು ಜಿತೇಂದ್ರಿಯನಾಗಿ ಮತ್ತೆ ಕೋಕಾಮುಖಕ್ಕೇ ಹೊರಟುಹೋಗಿ,

ವ್ರತಂ ಸಮಾಸ್ಥಾಯ ಕಲೇವರಂ ಸ್ವಂ
ಸಂಶೋಷಯಿತ್ವಾ ದಿವಮಾರುರೋಹ ।
ತಸ್ಮಾಚ್ಚ್ಯುತಸ್ತ್ವದ್ಭವನೇ ಚ ಜಾತೋ
ಜಾತಿಸ್ಮರಸ್ತಾತ ಹರಿಪ್ರಸಾದಾತ್ ॥ ೮೫ ॥

ಸೋಽಹಂ ಸಮಾರಾಧ್ಯ ಮುರಾರಿದೇವಂ
ಕೋಕಾಮುಖೇ ತ್ಯಕ್ತಶುಭಾಶುಭೇಚ್ಛಃ ।
ಇತ್ಯೇವಮುಕ್ತ್ವಾ ಪಿತರಂ ಪ್ರಣಮ್ಯ
ಗತ್ವಾ ಚ ಕೋಕಾಮುಖಮುಗ್ರತೀರ್ಥಂ ।
ವಿಷ್ಣುಂ ಸಮಾರಾಧ್ಯ ವರಾಹರೂಪ-
ಮವಾಪ ಸಿದ್ಧಿಂ ಮನುಜರ್ಷಭೋಽಸೌ ॥ ೮೬ ॥

ಇತ್ಥಂ ಸ ಕಾಮದಮನಃ ಸಹಪುತ್ರಪೌತ್ರೈಃ
ಕೋಕಾಮುಖೇ ತೀರ್ಥವರೇ ಸುಪುಣ್ಯೇ ।
ತ್ಯಕ್ತ್ವಾ ತನುಂ ದೋಷಮಯೀಂ ತತಸ್ತು
ಗತೋ ದಿವಂ ಸೂರ್ಯಸಮೈರ್ವಿಮಾನೈಃ ॥ ೮೭ ॥

---

೮೫. ಅಲ್ಲಿ ವ್ರತವೊಂದನ್ನು ಹಿಡಿದು ನನ್ನ ಶರೀರವನ್ನು ಚೆನ್ನಾಗಿ ಶೋಷಿಸಿ ಬಳಿಕ ಸ್ವರ್ಗಕ್ಕೆ ತೆರಳಿದೆನು. ಅದಾದನಂತರ ಮರಳಿ ನಿನ್ನ ಮನೆಯಲ್ಲಿ ಹುಟ್ಟಿರುವೆನು. ಅಪ್ಪಾ! ಈ ಪೂರ್ವಜನ್ಮ ವೃತ್ತಾಂತವೆಲ್ಲವೂ ಶ್ರೀಹರಿಯ ಕೃಪೆಯಿಂದಲೇ ನನಗೆ ತಿಳಿದಿರುವುದು.

೮೬. ಆದುದರಿಂದ ಈಗ ನಾನು ಯಾವೊಂದು ಶುಭಾಶುಭ ಫಲಗಳನ್ನೂ ಬಯಸದೆ, ಕೋಕಾಮುಖವೆಂಬ ತೀರ್ಥಕ್ಕೆ ತೆರಳಿ ಅಲ್ಲಿ ಶ್ರೀಹರಿಯನ್ನು ಅರ್ಚಿಸಿ ಸಿದ್ಧಿಯನ್ನು ಪಡೆಯುವೆನು ಎಂದನು. ಎಲೈ ಮುನಿಗಳಿರಾ! ಈರೀತಿಯಾಗಿ ಆ ಕಾಮದಮನನೆಂಬ ಕುಮಾರನು ತನ್ನ ತಂದೆಯಾದ ನಾಗ್ನೀಧ್ರನಿಗೆ ಹೇಳಿ ಆತನನ್ನು ನಮಸ್ಕರಿಸಿ ಕೋಕಾಮುಖವೆಂಬ ಆ ತೀರ್ಥರಾಜವನ್ನು ಸೇರಿ ಅಲ್ಲಿ ವರಾಹರೂಪದಿಂದ ನೆಲೆಸಿರುವ ಶ್ರೀಹರಿಯನ್ನು ಸೇವಿಸಿ ಸಿದ್ಧಿಯನ್ನು ಹೊಂದಿದನು.

೮೭. ಈರೀತಿಯಾಗಿ ಕಾಮದಮನಕುಮಾರನು ಪುತ್ರಪೌತ್ರಾದಿ ಪರಿವಾರದೊಡನೆ ಪಾವನವಾದ ಕೋಕಾಮುಖ ತೀರ್ಥದಲ್ಲಿ ದೋಷಗಳಿಗೆ ತೌರುಮನೆಯೆನಿಸಿದ ಈ ಮಾನುಷ ಶರೀರವನ್ನು ತೊರೆದು ಬಳಿಕ ಸೂರ್ಯನಂತೆ ಮೆರೆಯುತ್ತಿರುವ ವಿಮಾನಗಳಲ್ಲಿ ಕುಳಿತು ಸ್ವರ್ಗಲೋಕವನ್ನು ಸೇರಿದನು.

ಏವಂ ಮಯೋಕ್ತಾ ಪರಮೇಶ್ವರಸ್ಯ
ಮಾಯಾ ಸುರಾಣಾಮಪಿ ದುರ್ವಿಚಿಂತ್ಯಾ ।
ಸ್ವಪ್ನೇಂದ್ರಜಾಲಪ್ರತಿಮಾ ಮುರಾರೇ-
ರ್ಯಯಾ ಜಗನ್ಮೋಹಮುಪೈತಿ ವಿಪ್ರಾಃ ॥ ೮೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವಿಷ್ಣುಧರ್ಮಾನುಕೀರ್ತನೇ ಮಾಯಾಪ್ರಾದುರ್ಭಾವನಿರೂಪಣಂ ನಾಮೈಕೋನತ್ರಿಂಶದಧಿಕ-ದ್ವಿಶತತಮೋಽಧ್ಯಾಯಃ

---

೮೮. ಎಲೈ ಮಹರ್ಷಿಗಳಿರಾ! ಈರೀತಿಯಾಗಿ ದೇವತೆಗಳ ಊಹೆಗೂ ಸಿಲುಕದಿರುವಂಥಹ ಸ್ವಪ್ನ ಮತ್ತು ಇಂದ್ರಜಾಲಗಳಿಗೆ ಸರಿಸಮನೆನಿಸಿರುವ ಆ ಪರಮಪುರುಷನ ಮಾಯೆಯನ್ನೂ, ಆ ಮಾಯೆಯಿಂದ ಜಗತ್ತು ಯಾವರೀತಿ ಮೋಹಕ್ಕೆ ಒಳಗಾಗುವುದೆಂಬುದನ್ನೂ ನಿಮಗೆ ವಿವರಿಸಿದೆನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಮಾಯಾಪ್ರಾದುರ್ಭಾವನಿರೂಪಣವೆಂಬ ಇನ್ನೂರಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಅಸ್ಮಾಭಿಸ್ತು ಶ್ರುತಂ ವ್ಯಾಸ ಯತ್ತ್ವಯಾ ಸಮುದಾಹೃತಂ ।
ಪ್ರಾದುರ್ಭಾವಾಶ್ರಿತಂ ಪುಣ್ಯಂ ಮಾಯಾ ವಿಷ್ಣೋಶ್ಚ ದುರ್ವಿದಾ ॥ ೧ ॥

ಶ್ರೋತುಮಿಚ್ಛಾಮಹೇ ತ್ವತ್ತೋ ಯಥಾವದುಪಸಂಹೃತಿಂ ।
ಮಹಾಪ್ರಲಯಸಂಜ್ಞಾಂ ಚ ಕಲ್ಪಾಂತೇ ಚ ಮಹಾಮುನೇ ॥ ೨ ॥

ಇನ್ನೂರಮೂವತ್ತನೆಯ ಅಧ್ಯಾಯವು

೧. ಆಗ ಮಹರ್ಷಿಗಳು ವ್ಯಾಸನನ್ನು ಕುರಿತು "ಓ ಮಹಾತ್ಮ! ನೀನು ಹೇಳಿದ ವಿಷ್ಣುವಿನ ಪಾವನವಾದ ಚರಿತಗಳನ್ನೂ ಮತ್ತು ಯಾರಿಗೂ ಅರಿಯಲು ಅಸಾಧ್ಯವೆನಿಸಿದ ಆತನ ಮಾಯೆಯನ್ನೂ ನಾವು ಕೇಳಿದು ದಾಯಿತು.

೨. ಈಗ ನಾವು ನಿನ್ನ ಮುಖದಿಂದ ಪ್ರಳಯವೆಂಬುದಾಗಿ ಹೆಸರನ್ನೊಳಗೊಂಡ ಈ ಪ್ರಪಂಚದ ಉಪಸಂಹಾರವನ್ನು ಕ್ರಮವಾಗಿ (ಒಂದಂಶವನ್ನೂ ಬಿಡದೆ) ಕೇಳಬೇಕೆಂದಿರುವೆವು" ಎಂದು ಪ್ರಶ್ನಿಸಿದರು

॥ ವ್ಯಾಸ ಉವಾಚ ॥

ಶ್ರೂಯತಾಂ ಭೋ ಮುನಿಶ್ರೇಷ್ಠಾ ಯಥಾವದನುಸಂಹೃತಿಃ ।
ಕಲ್ಪಾಂತೇ ಪ್ರಾಕೃತೇ ಚೈವ ಪ್ರಲಯೋ ಜಾಯತೇ ಯಥಾ ॥ ೩ ॥

ಅಹೋರಾತ್ರಂ ಪಿತೃಣಾಂ ತು ಮಾಸೋಽಬ್ದಂ ತ್ರಿದಿವೌಕಸಾಂ ।
ಚತುರ್ಯುಗಸಹಸ್ರೇ ತು ಬ್ರಹ್ಮಣೋಽಹರ್ದ್ವಿಜೋತ್ತಮಾಃ ॥ ೪ ॥

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಂ ।
ದೈವೈರ್ವರ್ಷಸಹಸ್ರೈಸ್ತು ತದ್ದ್ವಾದಶಭಿರುಚ್ಯತೇ ॥ ೫ ॥

ಚತುರ್ಯುಗಾಣ್ಯಶೇಷಾಣಿ ಸದೃಶಾನಿ ಸ್ವರೂಪತಃ ।
ಆದ್ಯಂ ಕೃತಯುಗಂ ಪ್ರೋಕ್ತಂ ಮುನಯೋಽಂತ್ಯಂ ತಥಾ ಕಲಿಂ ॥ ೬ ॥

---

೩. ಆಗ ವ್ಯಾಸನು ಅವರನ್ನು ಕುರಿತು ಹೇಳತೊಡಗಿದನು :—ಎಲೈ ಮುನಿಶ್ರೇಷ್ಠರಿರಾ ! ಕೇಳಿರಿ. ಕಲ್ಪದ ಕೊನೆಯಲ್ಲಿ (ಶ್ವೇತವರಾಹಾದಿ ಕಲ್ಪಗಳು) ಸೃಷ್ಟಿಯಾದ ಸಕಲವಸ್ತುಗಳಿಗೂ ಪ್ರಕೃತಿಸಿದ್ಧವಾದ ಪ್ರಳಯ ವುಂಟಾಗುವುದು. ಆ ವಸ್ತುಗಳ ಉಪಸಂಹಾರವನ್ನೇ ಪ್ರಳಯವೆನ್ನುವರು. ಅದನ್ನು ನಿಮಗೆ ಇದ್ದುದಿದ್ದಂತೆ ವಿವರಿಸುವೆನು.

೪. ಎಲೈ ಬ್ರಾಹ್ಮಣೋತ್ತಮರಿರಾ ! ನಮ್ಮ ಒಂದುತಿಂಗಳು ಪಿತೃಗಳಿಗೆ ಒಂದು ಅಹೋರಾತ್ರ (ದಿವಸ) ವೆನಿಸುವುದು. ಅದೇ ನಮ್ಮ ಕಾಲಮಾನದ ಒಂದುವರ್ಷವು ದೇವತೆಗಳ ಒಂದು ಅಹೋರಾತ್ರವಾಗುವುದು. ಕೃತತ್ರೇತಾದಿ ಚತುರ್ಯುಗಗಳು ಸಾವಿರಬಾರಿ ಮರಳಲು ಬ್ರಹ್ಮನಿಗೆ ಒಂದು ಅಹಸ್ಸು (ಹಗಲು) ಎನಿಸುವುದು.

೫. ಆ ಚತುರ್ಯುಗಗಳು ಕೃತ, ತ್ರೇತಾ, ದ್ವಾಪರ, ಕಲಿಯೆಂದು ಪ್ರಸಿದ್ಧವಾಗಿರುವುವು. ಈ ಚತುರ್ಯುಗಗಳ ಕಾಲವು ದೇವಮಾನದಲ್ಲಿ ಹನ್ನೆರಡುಸಾವಿರ ವರ್ಷಗಳಿಗೆ ಸರಿಸಮವೆನಿಸಿರುವುದು.

೬. ಈ ಚತುರ್ಯುಗಗಳೆಲ್ಲವೂ ತಂತಮ್ಮ ಪ್ರಮಾಣದಲ್ಲಿ ಸರಿಸಮ ನಾಗಿರುವುವು. ಇವುಗಳಲ್ಲಿ ಕೃತಯುಗವು ಮೊದಲನೆಯದು. ಕಲಿಯುಗವು ಕೊನೆಯದು.

ಆದ್ಯೇ ಕೃತಯುಗೇ ಸರ್ಗೋ ಬ್ರಹ್ಮಣಾ ಕ್ರಿಯತೇ ಯತಃ ।
ಕ್ರಿಯತೇ ಚೋಪಸಂಹಾರಸ್ತಥಾಂತೇಽಪಿ ಕಲೌ ಯುಗೇ ॥ ೭ ॥

॥ ಮುನಯ ಊಚುಃ ॥

ಕಲೇಃ ಸ್ವರೂಪಂ ಭಗವನ್ವಿಸ್ತರಾದ್ವಕ್ತುಮರ್ಹಸಿ ।
ಧರ್ಮಶ್ಚತುಷ್ಪಾದ್ಭಗವಾನ್ಯಸ್ಮಿನ್ವೈಕಲ್ಯಮೃಚ್ಛತಿ ॥ ೮ ॥

॥ ವ್ಯಾಸ ಉವಾಚ ॥

ಕಲಿಸ್ವರೂಪಂ ಭೋ ವಿಪ್ರಾ ಯತ್ಪೃಚ್ಛಧ್ವಂ ಮಮಾನಘಾಃ ।
ನಿಬೋಧಧ್ವಂ ಸಮಾಸೇನ ವರ್ತತೇ ಯನ್ಮಹತ್ತರಂ ॥ ೯ ॥

ವರ್ಣಾಶ್ರಮಾಚಾರವತೀ ಪ್ರವೃತ್ತಿರ್ನ ಕಲೌ ನೃಣಾಂ ।
ನ ಸಾಮಋಗ್ಯಜುರ್ವೇದವಿನಿಷ್ಪಾದನಹೈತುಕೀ ॥ ೧೦ ॥

---

೭. ಮೊದಲನೆಯದಾದ ಕೃತಯುಗದಲ್ಲಿ ಬ್ರಹ್ಮನು ಜಗತ್ಸೃಷ್ಟಿಯನ್ನೂ ಕೊನೆಯದಾದ ಕಲಿಯುಗದಲ್ಲಿ ಜಗತ್ತಿನ ಉಪಸಂಹಾರವನ್ನೂ ಮಾಡುವನು.

೮. ಎನ್ನಲು ಆ ಮುನಿಗಳು ವ್ಯಾಸನನ್ನು ಕುರಿತು "ಹೇ ಭಗವನ್! ಕಲಿಯುಗದ ಸ್ವರೂಪವೇನೆಂಬುದನ್ನು ವಿಸ್ತಾರವಾಗಿ ನೀನು ನಮಗೆ ತಿಳಿಸಬೇಕು. ವೃಷಭಾಕೃತಿಯನ್ನು ತಾಳಿ ನಾಲ್ಕು ಕಾಲೂರಿ ನಿಂತ ಪಾವನವಾದ ಧರ್ಮವು ಆ ಕಲಿಯಲ್ಲೇ ವಿಕಲತೆಯನ್ನು (ಹ್ರಾಸವನ್ನು) ಪಡೆಯುವುದಲ್ಲವೆ?" ಎಂದು ಪ್ರಶ್ನಿಸಿದರು.

೯. ಆಗ ವ್ಯಾಸಮಹರ್ಷಿಯು ಅವರನ್ನು ಕುರಿತು ಹೇಳತೊಡಗಿದನು :—ಎಲೈ ವಿಪ್ರರೇ! ನೀವು ನನ್ನನ್ನು ಕೇಳಿದಂಥಹ ಆ ಮಹತ್ತರವಾದ ಕಲಿಯ ಸ್ವರೂಪವನ್ನು ಸಂಕ್ಷೇಪವಾಗಿ ತಿಳಿಸುವೆನು. ಕೇಳಿರಿ.

೧೦. ಆ ಕಲಿಯುಗದಲ್ಲಿ ಮಾನವರು ಯಾರೂ ವರ್ಣವ್ಯವಸ್ಥೆ, ಆಶ್ರಮ, ನಿಯಮ, ಸದಾಚಾರಗಳಲ್ಲಿ ಪ್ರವೃತ್ತಿಯುಳ್ಳವರಾಗುವುದಿಲ್ಲ. ಇದರಿಂದ ಸಾಮ, ಋಕ್ಕು, ಯಜುಸ್ಸುಗಳೆಂಬ ವೇದಗಳ ಪರಿಪಾಠವು ಶಿಥಿಲವಾಗುವುದು.

ವಿವಾಹಾ ನ ಕಲೌ ಧರ್ಮ್ಯಾ ನ ಶಿಷ್ಯಾ ಗುರುಸಂಸ್ಥಿತಾಃ ।
ನ ಪುತ್ರಾ ಧಾರ್ಮಿಕಾಶ್ಚೈವ ನ ಚ ವಹ್ನಿಕ್ರಿಯಾಕ್ರಮಃ ॥ ೧೧ ॥

ಯತ್ರ ತತ್ರ ಕುಲೇ ಜಾತೋ ಬಲೀ ಸರ್ವೇಶ್ವರಃ ಕಲೌ ।
ಸರ್ವೇಭ್ಯ ಏವ ವರ್ಣೇಭ್ಯೋ ನರಃ ಕನ್ಯೋಪಜೀವನಃ ॥ ೧೨ ॥

ಯೇನ ತೇನೈವ ಯೋಗೇನ ದ್ವಿಜಾತಿರ್ದೀಕ್ಷಿತಃ ಕಲೌ ।
ಯೇನ ಸೈವ ಚ ವಿಪ್ರೇಂದ್ರಾಃ ಪ್ರಾಯಶ್ಚಿತ್ತಕ್ರಿಯಾ ಕಲೌ ॥ ೧೩ ॥

ಸರ್ವಮೇವ ಕಲೌ ಶಾಸ್ತ್ರಂ ಯಸ್ಯ ಯದ್ವಚನಂ ದ್ವಿಜಾಃ ।
ದೇವತಾಶ್ಚ ಕಲೌ ಸರ್ವಾಃ ಸರ್ವಃ ಸರ್ವಸ್ಯ ಚಾಶ್ರಮಃ ॥ ೧೪ ॥

---

೧೧. ಮತ್ತು ಆ ಕಲಿಯುಗದಲ್ಲಿ ಧರ್ಮಸಂಮತವಾದ ವಿವಾಹಗಳು ನಡೆಯಲಾರವು. ಗುರುವಿನಲ್ಲಿ ಭಯ ಭಕ್ತಿಯುಳ್ಳ ಶಿಷ್ಯರು ಇರಲಾರರು. ಹುಟ್ಟಿದ ಮಕ್ಕಳು ಧರ್ಮದಲ್ಲಿ ಆಸಕ್ತರಾಗಿರುವುದಿಲ್ಲ. ಯಜ್ಞೇಶ್ವರನ ಉಪಾಸನೆಯು ನಿಂತೇಹೋಗುವುದು.

೧೨. ಯಾವುದಾದರೂ ಹೆಸರಿಲ್ಲದ ಕುಲದಲ್ಲಿ ಹುಟ್ಟಿದ್ದರೂ–ಅವನು ಬಲಿಷ್ಠನಾಗಿದ್ದರೆ, ಅವನೇ ಎಲ್ಲರಿಗೂ ಪ್ರಭುವೆನಿಸುವನು. ಆಗ ಮಾನವನು ಯಾವ ವರ್ಣದ (ಜಾತಿಯ) ವನಿಗಾದರೂ ಸರಿಯೇ ತನ್ನ ಕನ್ಯೆಯನ್ನು ಮಾರಿ ಕೊಂಡು ಅದರಿಂದ ಜೀವಿಸತೊಡಗುವನು.

೧೩. ಮತ್ತು ಆ ಕಲಿಯುಗದಲ್ಲಿ ಬ್ರಾಹ್ಮಣನೆನಿಸಿದವನು ಯಾವುದಾದರೂ ಆಟಹೂಡಿ ಯಜ್ಞಯಾಗಗಳನ್ನು ಆರಂಭಿಸಿ ತಾನು ದೀಕ್ಷಿತ (ಯಜಮಾನ) ನೆನಿಸುವನು. ಎಲೈ ಬ್ರಾಹ್ಮಣೋತ್ತಮರೇ? ಆಗ ಮನಸ್ಸಿಗೆ ಯಾವುದು ತೋರಿದರೆ ಅದೇ ಪ್ರಾಯಶ್ಚಿತ್ತವೆನಿಸುವುದು.

೧೪. ಯಾವನು ಯಾವ ಮಾತನ್ನಾಡಿದರೂ ಅದೇ ಶಾಸ್ತ್ರವಾಕ್ಯದಂತೆ ಪ್ರಮಾಣವೆನಿಸುವುದು. ಆ ಕಲಿಯಲ್ಲಿ ಕಂಡುದೆಲ್ಲವೂ ದೇವರೆನಿಸುವುದು. ಯಾವ ಯಾವ ವರ್ಣದವನಾದರೂ ತನಗೆ ತೋರಿದ ಆಶ್ರಮವನ್ನೇ ಅವಲಂಬಿಸಿರುವನು.

ಉಪವಾಸಸ್ತಥಾಯಾಸೋ ವಿತ್ತೋತ್ಸರ್ಗಸ್ತಥಾ ಕಲೌ ।
ಧರ್ಮೋ ಯಥಾಭಿರುಚಿತೈರನುಷ್ಠಾನೈರನುಷ್ಠಿತಃ ॥ ೧೫ ॥

ವಿತ್ತೇನ ಭವಿತಾ ಪುಂಸಾಂ ಸ್ವಲ್ಪೇನೈವ ಮದಃ ಕಲೌ ।
ಸ್ತ್ರೀಣಾಂ ರೂಪಮದಶ್ಚೈವ ಕೇಶೈರೇವ ಭವಿಷ್ಯತಿ ॥ ೧೬ ॥

ಸುವರ್ಣಮಣಿರತ್ನಾದೌ ವಸ್ತ್ರೇ ಚೋಪಕ್ಷಯಂ ಗತೇ ।
ಕಲೌ ಸ್ತ್ರಿಯೋ ಭವಿಷ್ಯಂತಿ ತದಾ ಕೇಶೈರಲಂಕೃತಾಃ ॥ ೧೭ ॥

ಪರಿತ್ಯಕ್ಷ್ಯಂತಿ ಭರ್ತಾರಂ ವಿತ್ತಹೀನಂ ತಥಾ ಸ್ತ್ರಿಯಃ ।
ಭರ್ತಾ ಭವಿಷ್ಯತಿ ಕಲೌ ವಿತ್ತವಾನೇವ ಯೋಷಿತಾಂ ॥ ೧೮ ॥

ಯೋ ಯೋ ದದಾತಿ ಬಹುಲಂ ಸ ಸ ಸ್ವಾಮೀ ತದಾ ನೃಣಾಂ ।
ಸ್ವಾಮಿತ್ವಹೇತುಸಂಬಂಧೋ ಭವಿತಾಭಿಜನಸ್ತದಾ ॥ ೧೯ ॥

---

೧೫. ಉಪವಾಸ, ದೇಹದಂಡನಾದಿಗಳು, ಮತ್ತೊಬ್ಬನಿಗೆ ದ್ರವ್ಯ ಮೊದಲಾದುವನ್ನು ದಾನಮಾಡುವುದು ಇವೇ ಮೊದಲಾದ ಧರ್ಮಗಳು ಅವನವನ ಅಭಿರುಚಿಯಂತೆ ನಡೆಸಲ್ಪಡುವುವು.

೧೬. ಗಂಡಸಾದವನು ಸ್ವಲ್ಪಹಣವಿದ್ದರೂ ಸರಿಯೆ ಮದಾಂಧನಾಗಿ ಮೆರೆಯುವನು. ಹೆಂಗುಸೆನಿಸಿದವಳೂ ಸಹ ತನಗೆ ಸ್ವಲ್ಪ ಉದ್ದವಾದ ತಲೆಗೂದಲಿದ್ದರೆ ಅಷ್ಟರಿಂದಲೇ ತಾನೇ ರೂಪವತಿಯೆಂದು ಹೆಮ್ಮೆಪಡುವಳು.

೧೭. ಆ ಕಲಿಗಾಲದಲ್ಲಿ ಹೆಂಗುಸರು ತಮ್ಮ ಬಳಿಯಿರುವ ಚಿನ್ನ, ರತ್ನ, ಮುತ್ತು ಮೊದಲಾದ ಆಭರಣಗಳು, ಸೊಗಸಾದ ಉಡುಪುಗಳು ಇವುಗಳು ಹಾಳಾಗಿಬಿಟ್ಟರೂ ತಮ್ಮ ತಲೆಗೂದಲಿನಿಂದಲೇ ಸೊಬಗುಳ್ಳವರೆನಿಸುವರು.

೧೮. ಮತ್ತು ಗಂಡಸಾದವನು ಹಣವಿಲ್ಲದೆ ಬಡವನೆನಿಸಿದ್ದರೆ ಅವನನ್ನು ಬಿಟ್ಟೇಬಿಡುವರು - ಏಕೆಂದರೆ ಆ ಕಲಿಯುಗದಲ್ಲಿ ಹೆಂಗುಸಿಗೆ ದುಡ್ಡೊಂದಿದ್ದವನೇ ಗಂಡನೆನಿಸುವನು.

೧೯. ಆಗ ಯಾವ ಯಾವನು ದುಡ್ಡನ್ನು ಕೊಡುವನೋ ಅವನೇ ಜನರಿಗೆ ಒಡೆಯನೆನಿಸುವನು. ಮತ್ತು ಒಡೆತನವಾಗಲಿ, ಅಥವಾ ಇನ್ನಾವ ಸಂಬಂಧವಾಗಲಿ ಇದ್ದರೂ, ಅದೇ ಅವರಿಗೆ ಅಭಿಜನ (ಮನೆತನ) ವೆನಿಸುವುದು.

ಗೃಹಾಂತಾ ದ್ರವ್ಯಸಂಘಾತಾ ದ್ರವ್ಯಾಂತಾ ಚ ತಥಾ ಮತಿಃ ।
ಅರ್ಥಾಶ್ಚಾಪ್ಯುಪಭೋಗಾಂತಾ ಭವಿಷ್ಯಂತಿ ತದಾ ಕಲೌ ॥ ೨೦ ॥

ಸ್ತ್ರಿಯಃ ಕಲೌ ಭವಿಷ್ಯಂತಿ ಸ್ವೈರಿಣ್ಯೋ ಲಲಿತಸ್ಪೃಹಾಃ ।
ಅನ್ಯಾಯಾವಾಪ್ತವಿತ್ತೇಷು ಪುರುಷೇಷು ಸ್ಪೃಹಾಲವಃ ॥ ೨೧ ॥

ಅಭ್ಯರ್ಥಿತೋಽಪಿ ಸುಹೃದಾ ಸ್ವಾರ್ಥಹಾನಿಂ ತು ಮಾನವಃ ।
ಪಣಸ್ಯಾರ್ಧಾರ್ಧಮಾತ್ರೇಽಪಿ ಕರಿಷ್ಯತಿ ತದಾ ದ್ವಿಜಾಃ ॥ ೨೨ ॥

ಸದಾ ಸಪೌರುಷಂ ಚೇತೋ ಭಾವಿ ವಿಪ್ರ ತದಾ ಕಲೌ ।
ಕ್ಷೀರಪ್ರದಾನಸಂಬಂಧಿ ಭಾತಿ ಗೋಷು ಚ ಗೌರವಂ ॥ ೨೩ ॥

---

೨೦. ಆಗಿನ ಜನರೆಲ್ಲರೂ ತಾವು ಸಂಪಾದಿಸಿದ ದುಡ್ಡೆಲ್ಲವನ್ನೂ ಮನೆಗೋಸ್ಕರ ವಿನಿಯೋಗಿಸುವರು. ಮತ್ತು ಅವರ ಬುದ್ಧಿಕುಶಲತೆಯೆಲ್ಲವೂ ಧನಾರ್ಜನೆಯೊಂದನ್ನೇ ಮುಖ್ಯವಾದ ಗುರಿಯನ್ನಾಗಿಟ್ಟುಕೊಂಡಿರುವುದು. ಆರೀತಿ ಸಂಪಾದಿಸಿದ ದುಡ್ಡೆಲ್ಲವೂ, ನಾನಾವಿಧವಾದ ಉಪಭೋಗಗಳಿಗೋಸ್ಕರ ವ್ಯಯವಾಗುವುದು.

೨೧. ಆಗ ಸ್ತ್ರೀಯರು ಸ್ವೇಚ್ಛಾಪ್ರವರ್ತನೆಯುಳ್ಳವರಾಗುವರು. ಅವರ ಮನಸ್ಸೆಲ್ಲವೂ ಶೃಂಗಾರ ಚೇಷ್ಟೆಗಳ ಕಡೆ ಹರಿಯುವುದು. ಅಷ್ಟೇ ಅಲ್ಲದೆ, ಯಾವ ಪುರುಷರು ಅನ್ಯಾಯದಿಂದ ಸಂಪಾದನೆಮಾಡಿ ಹಣಗಾರರೆನಿಸಿರುವರೋ ಅಂಥಹವರನ್ನೇ ಕಾಮಿಸತೊಡಗುವರು.

೨೨. ಮತ್ತು ಸ್ನೇಹಿತನಾದವನು ಹಿತವನ್ನು ಕೋರಿ ಬೇಡ ಬೇಡವೆಂದು ತಡೆಯುತ್ತಾ ಪ್ರಾರ್ಥಿಸಿದರೂ ಕೂಡ ಮಾನವನು ಜೂಜಿಗೋಸ್ಕರ ಸ್ವಲ್ಪಸ್ವಲ್ಪವೆಂದೇ ತನ್ನ ಹಣವನ್ನೆಲ್ಲಾ ಕಳೆಯುವನು.

೨೩. ಆ ಕಲಿಯುಗದಲ್ಲಿ ಯಾವ ಪುರುಷನನ್ನು ಕಂಡರೂ, ಅವನು ದೈವವನ್ನು ಲಕ್ಷಿಸದೆ ಪುರುಷಕಾರವನ್ನೇ ನೆಮ್ಮಿಕೊಂಡಿರುವನು. ಅಥವಾ ಸಾಹಸವನ್ನು ತೋರಬೇಕೆಂದು ಬಯಸುತ್ತಿರುವನು. ಹಸುಗಳನ್ನು ಹಾಲು ಕೊಡುವ ಪ್ರಾಣಿಯೆಂದು ಭಾವಿಸಿ ಜನರು ಗೌರವವೀಯುವರೇ ವಿನಹ ಗೋಮಾತೆಯು ಪೂಜ್ಯವೆಂಬ ಕಾರಣದಿಂದಲ್ಲ.

ಅನಾವೃಷ್ಟಿಭಯಾತ್ಪ್ರಾಯಃ ಪ್ರಜಾಃ ಕ್ಷುದ್ಭಯಕಾತರಾಃ ।
ಭವಿಷ್ಯಂತಿ ತದಾ ಸರ್ವಾ ಗಗನಾಸಕ್ತದೃಷ್ಟಯಃ ॥ ೨೪ ॥

ಮೂಲಪರ್ಣಫಲಾಹಾರಾಸ್ತಾಪಸಾ ಇವ ಮಾನವಾಃ ।
ಆತ್ಮಾನಂ ಘಾತಯಿಷ್ಯಂತಿ ತದಾವೃಷ್ಟ್ಯಾಭಿದುಃಖಿತಾಃ ॥ ೨೫ ॥

ದುರ್ಭಿಕ್ಷಮೇವ ಸತತಂ ಸದಾ ಕ್ಲೇಶಮನೀಶ್ವರಾಃ ।
ಪ್ರಾಪ್ಸ್ಯಂತಿ ವ್ಯಾಹತಸುಖಂ ಪ್ರಮಾದಾನ್ಮಾನವಾಃ ಕಲೌ ॥ ೨೬ ॥

ಅಸ್ನಾತಭೋಜಿನೋ ನಾಗ್ನಿದೇವತಾತಿಥಿಪೂಜನಂ ।
ಕರಿಷ್ಯಂತಿ ಕಲೌ ಪ್ರಾಪ್ತೇ ನ ಚ ಪಿಂಡೋದಕಕ್ರಿಯಾಂ ॥ ೨೭ ॥

೨೪. ಆಗ ಪ್ರಜೆಗಳೆಲ್ಲರೂ ಅನಾವೃಷ್ಟಿ (ಮಳೆಯಿಲ್ಲದಿರುವಿಕೆ) ಯ ದೆಸೆಯಿಂದ, ಹೊಟ್ಟೆಗಿಲ್ಲದೆ ಹೇಗಿರುವುದೆಂದು ತಲ್ಲಣಿಸುತ್ತಾ ಆಕಾಶದ ಕಡೆಗೇ ಮುಖವೆತ್ತಿಕೊಂಡು ದಿಟ್ಟಿಸುತ್ತಿರುವರು.

೨೫. ಆಗಿನ ಜನರು ಕಾಲಕಾಲಕ್ಕೆ ಮಳೆಯಾಗದೆ ನಾನಾವಿಧವಾದ ದುಃಖಗಳಿಗೆ ಈಡಾಗಿ, ತಾಪಸರಂತೆ ಗೆಡ್ಡೆಗೆಣಸುಗಳನ್ನೂ, ಎಲೆಗಳನ್ನೂ, ಹಣ್ಣುಹಂಪಲುಗಳನ್ನೂ ತಿನ್ನುತ್ತಾ, ಕೊನೆಗೆ ಅದೂ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುವರು.

೨೬. ಆ ಕಲಿಯುಗದ ಜನರು ಯಾವಾಗಲೂ ಸುಖವೆಂಬುದನ್ನೇ ಕಾಣದೆ, ದುರ್ಭಿಕ್ಷದಿಂದಲೂ, ಪ್ರಮಾದವಶದಿಂದಲೂ ನಾನಾರೀತಿಯ ಕಷ್ಟಗಳನ್ನು ಅನುಭವಿಸುವರು.

೨೭. ಆ ಕಲಿಯುಗವು ಬಂದೊಡನೆಯೇ ಜನರು ಸ್ನಾನವಿಲ್ಲದಿದ್ದರೂ ಊಟಮಾಡತೊಡಗುವರು. ಯಜ್ಞೇಶ್ವರನ ಹೋಮವನ್ನೂ ದೇವರಪೂಜೆಯನ್ನೂ ಅತಿಥಿ ಸತ್ಕಾರವನ್ನೂ ಮಾಡದೆ ಬಿಟ್ಟುಬಿಡುವರು. ಅದೇರೀತಿ ತಮ್ಮ ಪಿತೃಗಳಿಗೆ ಪಿಂಡಪ್ರದಾನವನ್ನೂ ಸಲಿಲಕ್ರಿಯೆ (ತರ್ಪಣ) ಯನ್ನೂ ಮಾಡದೆ ತೊರೆದೇ ಬಿಡುವರು.

ಲೋಲುಪಾ ಹ್ರಸ್ವದೇಹಾಶ್ಚ ಬಹ್ವನ್ನಾದನತತ್ಪರಾಃ ।
ಬಹುಪ್ರಜಾಲ್ಪಭಾಗ್ಯಾಶ್ಚ ಭವಿಷ್ಯಂತಿ ಕಲೌ ಸ್ತ್ರಿಯಃ ॥ ೨೮ ॥

ಉಭಾಭ್ಯಾಮಥ ಪಾಣಿಭ್ಯಾಂ ಶಿರಃಕಂಡೂಯನಂ ಸ್ತ್ರಿಯಃ ।
ಕುರ್ವತ್ಯೋ ಗುರುಭರ್ತೄಣಾಮಾಜ್ಞಾಂ ಭೇತ್ಸ್ಯಂತ್ಯನಾವೃತಾಃ ॥ ೨೯ ॥

ಸ್ವಪೋಷಣಪರಾಃ ಕ್ರುದ್ಧಾ ದೇಹಸಂಸ್ಕಾರವರ್ಜಿತಾಃ ।
ಪುರುಷಾನೃತಭಾಷಿಣ್ಯೋ ಭವಿಷ್ಯಂತಿ ಕಲೌ ಸ್ತ್ರಿಯಃ ॥ ೩೦ ॥

ದುಃಶೀಲಾ ದುಷ್ಟಶೀಲೇಷು ಕುರ್ವತ್ಯಃ ಸತತಂ ಸ್ಪೃಹಾಂ ।
ಅಸದ್ವೃತ್ತಾ ಭವಿಷ್ಯಂತಿ ಪುರುಷೇಷು ಕುಲಾಂಗನಾಃ ॥ ೩೧ ॥

---

೨೮. ಆಗಿನ ಹೆಂಗುಸರು ಯಾವುದನ್ನು ಕಂಡರೂ ಆಸೆಪಡುವರು. ಅವರ ಶರೀರವು ಗಿಡ್ಡಾಗಿರುವುದು. ಆದರೂ ಅನ್ನವನ್ನು ಮಾತ್ರ ಹೆಚ್ಚಾಗಿಯೇ ತಿನ್ನತೊಡಗುವರು. ಅವರಿಗೆ ಹೆಚ್ಚು ಮಕ್ಕಳಾಗುವರು. ಭಾಗ್ಯವೆನ್ನುವುದು ಅಲ್ಪವಾಗುವುದು.

೨೯. ಮತ್ತು ಆಗಿನ ಹೆಂಗುಸರು ನಾಚಿಕೆ ತೊರೆದು ಹೊರಗೆ ಬರುವರಲ್ಲದೆ ಎರಡುಕೈಗಳಿಂದಲೂ ತಲೆಯನ್ನು ಕೆರೆದುಕೊಳ್ಳುತ್ತಾ ಹಿರಿಯರ ಮಾತನ್ನೂ ಪತಿಯ ಆಜ್ಞೆಯನ್ನೂ ಲಕ್ಷ್ಯಮಾಡದೆ ಮೀರಿ ನಡೆಯುವರು.

೩೦. ಮತ್ತು ಅವರಿಗೆ ತಮ್ಮ ಯೋಗಕ್ಷೇಮವಾದರೆ ತೀರಿತು : ಮತ್ತೊಬ್ಬರ ಪೋಷಣೆಯ ಆಗತ್ಯವೇ ಇರುವುದಿಲ್ಲ. ಮತ್ತು ಯಾವಾಗಲೂ ಮುಂಗೋಪಿಗಳಾಗಿರುವರು. ದೇಹದ ಅಲಂಕಾರದ ಕಡೆಗೆ (ಶುಭ್ರತೆಯ) ಗಮನವನ್ನೇ ಕೊಡದೆ ಇರತೊಡಗುವರು. ಮತ್ತು ಅವರು ಆಡುವ ಮಾತುಗಳು ಬಹು ಕಠೋರವಾಗಿಯೂ, ಸುಳ್ಳಿನಿಂದ ತುಂಬಿದವುಗಳಾಗಿಯೂ ಇರುವುವು.

೩೧. ಆ ಸ್ತ್ರೀಯರು ಸರ್ವದಾ ಶೀಲಭ್ರಷ್ಟರಾಗಿಯೇ ಇರುವರಲ್ಲದೆ, ನಡತೆಗೆಟ್ಟ ಕೆಟ್ಟಪುರುಷರ ಸಹವಾಸವನ್ನೇ ಬಯಸುತ್ತಾ ಕೆಟ್ಟರೀತಿಯಲ್ಲಿ ವರ್ತಿಸುವರು.

ವೇದಾದಾನಂ ಕರಿಷ್ಯಂತಿ ವಡವಾಶ್ಚ ತಥಾವ್ರತಾಃ ।
ಗೃಹಸ್ಥಾಶ್ಚ ನ ಹೋಷ್ಯಂತಿ ನ ದಾಸ್ಯಂತ್ಯುಚಿತಾನ್ಯಪಿ ॥ ೩೨ ॥

ಭವೇಯುರ್ವನವಾಸಾ ವೈ ಗ್ರಾಮ್ಯಾಹಾರಪರಿಗ್ರಹಾಃ ।
ಭಿಕ್ಷವಶ್ಚಾಪಿ ಪುತ್ರಾ ಹಿ ಸ್ನೇಹಸಂಬಂಧಯಂತ್ರಕಾಃ ॥ ೩೩ ॥

ಅರಕ್ಷಿತಾರೋ ಹರ್ತಾರಃ ಶುಲ್ಕವ್ಯಾಜೇನ ಪಾರ್ಥಿವಾಃ ।
ಹಾರಿಣೋ ಜನವಿತ್ತಾನಾಂ ಸಂಪ್ರಾಪ್ತೇ ಚ ಕಲೌ ಯುಗೇ ॥ ೩೪ ॥

ಯೋ ಯೋಽಶ್ವರಥನಾಗಾಢ್ಯಃ ಸ ಸ ರಾಜಾ ಭವಿಷ್ಯತಿ ।
ಯಶ್ಚ ಯಶ್ಚಾಬಲಃ ಸರ್ವಃ ಸ ಸ ಭೃತ್ಯಃ ಕಲೌ ಯುಗೇ ॥ ೩೫ ॥

---

೩೨. ಆ ಕಲಿಯುಗದಲ್ಲಿ ಬ್ರಾಹ್ಮಣರೆನಿಸಿದವರು ವ್ರತಾದಿಗಳನ್ನು ಮಾಡುವುದಿಲ್ಲ. ಮತ್ತು ಗೃಹಸ್ಥರಾದವರು ಹೋಮಾದಿಗಳಿಂದ ಯಜ್ಞೇಶ್ವರನನ್ನು ಪೂಜಿಸುವುದಿಲ್ಲ. ವಿಹಿತವೆನಿಸಿದ ದಾನಗಳಾವುವನ್ನೂ ಮಾಡರು.

೩೩. ಸನ್ಯಾಸಿಗಳೆನಿಸಿದವರೂ ಸಹ ತಾವು ವನಗಳಲ್ಲಿಯೇ ವಾಸ ಮಾಡಬೇಕಾಗಿದ್ದರೂ, ಗ್ರಾಮ್ಯವಾದ (ಊರಿನ ರುಚಿಕರವಾದ) ಆಹಾರಗಳಲ್ಲಿ ಆಸಕ್ತರಾಗಿಯೂ, ಮಕ್ಕಳುಮರಿಗಳೆಂಬ ಮಮತೆಗೆ ಸಿಲುಕಿದವರಾಗಿಯೂ ಇರುವರು.

೩೪. ಆ ಕಲಿಯುಗದಲ್ಲಿ ದೊರೆಗಳೆನಿಸಿದವರು ತಾವು ಸರಿಯಾಗಿ ಪ್ರಜೆಗಳನ್ನು ಪಾಲಿಸವೆ ಇದ್ದರೂ ಹತ್ತಾರು ಸುಂಕ ಸಾರಿಗೆಗಳೆಂದು ಹೇಳಿ ಜನರ ಹಣವನ್ನು ಸುಲಿಯುವರು.

೩೫. ಯಾವನಬಳಿಯಾದರೂ, ಕುದುರೆಯಾಗಲಿ, ಆನೆಯಾಗಲಿ, ರಥವಾಗಲಿ, ಇದ್ದುಬಿಟ್ಟರೆ ಅವನೇ ರಾಜನೆನಿಸುವನು. ಯಾವನು ಕೈಲಾಗದೆ ದುರ್ಬಲನೆನಿಸಿರುವನೋ ಅವನು ಯಾರಿಗಾದರೂ ಸೇವಕನಾಗಬೇಕಾಗುವುದು.

ವೈಶ್ಯಾಃ ಕೃಷಿವಣಿಜ್ಯಾದಿ ಸಂತ್ಯಜ್ಯ ನಿಜಕರ್ಮ ಯತ್ ।
ಶೂದ್ರವೃತ್ತ್ಯಾ ಭವಿಷ್ಯಂತಿ ಕಾರುಕರ್ಮೋಪಜೀವಿನಃ ॥ ೩೬ ॥

ಭೈಕ್ಷ್ಯವ್ರತಾಸ್ತಥಾ ಶೂದ್ರಾಃ ಪ್ರವ್ರಜ್ಯಾಲಿಂಗಿನೋಽಧಮಾಃ ।
ಪಾಷಂಡಸಂಶ್ರಯಾಂ ವೃತ್ತಿಮಾಶ್ರಯಿಷ್ಯಂತ್ಯಸಂಸ್ಕೃತಾಃ ॥ ೩೭ ॥

ದುರ್ಭಿಕ್ಷಕರಪೀಡಾಭಿರತೀವೋಪದ್ರುತಾ ಜನಾಃ ।
ಗೋಧೂಮಾನ್ನಯವಾನ್ನಾಢ್ಯಾನ್ದೇಶಾನ್ಯಾಸ್ಯಂತಿ ದುಃಖಿತಾಃ ॥ ೩೮ ॥

ವೇದಮಾರ್ಗೇ ಪ್ರಲೀನೇ ಚ ಪಾಷಂಡಾಢ್ಯೇ ತತೋ ಜನೇ ।
ಅಧರ್ಮವೃದ್ಧ್ಯಾ ಲೋಕಾನಾಮಲ್ಪಮಾಯುರ್ಭವಿಷ್ಯತಿ ॥ ೩೯ ॥

೩೬. ವೈಶ್ಯರೆನಿಸಿದವರು ತಮ್ಮ ಕುಲಕ್ಕೆ ಉಚಿತವಾದ ಕೃಷಿ, ವಾಣಿಜ್ಯ ಮೊದಲಾದ ಕಸುಬುಗಳನ್ನು ಬಿಟ್ಟು, ಮರಗೆಲಸ ಮೊದಲಾದ ಕಸುಬುಗಳನ್ನು ಹಿಡಿದು ಶೂದ್ರರಂತೆ ಜೀವಿಸುವರು.

೩೭. ಶೂದ್ರರು ಭಿಕ್ಷೆಯನ್ನು ಜೀವಿಕೆಗಾಗಿ ಅವಲಂಬಿಸಿಬಿಡುವರು. ಅಧಮರೆನಿಸಿದವರೆಲ್ಲರೂ, ಸನ್ಯಾಸಿವೇಷವನ್ನು ತಾಳಿ ಹೊಟ್ಟೆಹೊರೆಯತೊಡಗುವರು. ಜನರು ಯಾವೊಂದು ಸಂಸ್ಕಾರವೂ ಇಲ್ಲದೆ ಇರುವವರಾಗಿ ಪಾಷಂಡ ವೃತ್ತಿಯನ್ನು ಆಶ್ರಯಿಸುವರು.

೩೮. ಆ ಕಲಿಗಾಲದಲ್ಲಿ ದುರ್ಭಿಕ್ಷದಿಂದಲೂ, ಕಂದಾಯದ ಹೊರೆಯಿಂದಲೂ, ಬಹುವಾಗಿ ಕಂಗೆಟ್ಟು ಜನರೆಲ್ಲರೂ, ಯಾವಾವದೇಶದಲ್ಲಿ ಗೋಧಿ, ಜವೆ, ಅಕ್ಕಿ ಮೊದಲಾದ ಧಾನ್ಯಗಳ ಅನ್ನವು ಸಿಗುವುದೋ ಆಯಾದೇಶಗಳಿಗೆ ದುಃಖದಿಂದ ಅಲೆಯತೊಡಗುವರು.

೩೯. ಆಗ ವೇದವಿಹಿತವಾದ ಕರ್ಮಕಲಾಪಗಳೆಲ್ಲವೂ ಕಣ್ಮರೆಯಾಗಿಬಿಡುವುವು. ಜನರೆಲ್ಲರೂ ಪಾಷಂಡವ್ರತವನ್ನು ಅವಲಂಬಿಸುವರು. ಎಲ್ಲೆಲ್ಲೂ ಅಧರ್ಮವು ಹೆಚ್ಚತೊಡಗುವುದು. ಹೀಗಾಗಿ ಜನರ ಆಯುಸ್ಸು ಕ್ಷೀಣವಾಗತೊಡಗುವುದು.

ಅಶಾಸ್ತ್ರವಿಹಿತಂ ಘೋರಂ ತಪ್ಯಮಾನೇಷು ನೈ ತಪಃ ।
ನರೇಷು ನೃಪದೋಷೇಣ ಬಾಲಮೃತ್ಯುರ್ಭವಿಷ್ಯತಿ ॥ ೪೦ ॥

ಭವಿತ್ರೀ ಯೋಷಿತಾಂ ಸೂತಿಃ ಪಂಚಷಟ್ಸಪ್ತವಾರ್ಷಿಕೀ ।
ನವಾಷ್ಟದಶವರ್ಷಾಣಾಂ ಮನುಷ್ಯಾಣಾಂ ತಥಾ ಕಲೌ ॥ ೪೧ ॥

ಪಲಿತೋದ್ಗಮಶ್ಚ ಭವಿತಾ ತದಾ ದ್ವಾದಶವಾರ್ಷಿಕಃ ।
ನ ಜೀವಿಷ್ಯತಿ ನೈ ಕಶ್ಚಿತ್ಕಲೌ ವರ್ಷಾಣಿ ವಿಂಶತಿಂ ॥ ೪೨ ॥

ಅಲ್ಪಪ್ರಜ್ಞಾ ವೃಥಾಲಿಂಗಾ ದುಷ್ಟಾಂತಃಕರಣಾಃ ಕಲೌ ।
ಯತಸ್ತತೋ ವಿನಶ್ಯಂತಿ ಕಾಲೇನಾಲ್ಪೇನ ಮಾನವಾಃ ॥ ೪೩ ॥

---

೪೦. ಶಾಸ್ತ್ರದಲ್ಲಿ ತಮಗೆ ವಿಧಾನಮಾಡದಿರುವಂತಹ ತಪಸ್ಸನ್ನು ಮಾಡಬೇಕೆಂದೇ ಜನರು ಪ್ರಯತ್ನಿಸುವರು. ಇಂಥಹವರನ್ನು ದೊರೆಯಾದವನು ದಂಡಿಸದೆ ಉಪೇಕ್ಷಿಸುವನು. ಆದುದರಿಂದ, ಚಿಕ್ಕವಯಸ್ಸಿನ ಮಕ್ಕಳು ಸಾಯತೊಡಗುವರು.

೪೧. ಮತ್ತು ಆ ಕಲಿಗಾಲದಲ್ಲಿ ಗಂಡಸರು ಎಂಟು, ಒಂಭತ್ತು, ಹತ್ತು ವರ್ಷ ವಯಸ್ಸಿನವರಾದರೂ, ಹೆಂಗಸರು ಐದು, ಆರು, ಏಳು ವರ್ಷಗಳ ವಯಸ್ಸಿನವರಾಗಿದ್ದರೂ ಅವರಿಬ್ಬರಿಗೆ ಮಕ್ಕಳು ಹುಟ್ಟತೊಡಗುವುವು.

೪೨. ಹನ್ನೆರಡು ವರ್ಷಗಳ ವಯಸ್ಸಿಗಾಗಲೇ ತಲೆಯಲ್ಲಿ ನರೆಯು ಕಾಣತೊಡಗುವುದು. ಯಾವ ಮಾನವನೂ ಕೂಡ ಇಪತ್ತು ವರ್ಷಗಳು ಪೂರ್ತಿ ಬದುಕಲಾರನು.

೪೩. ಆಗಿನ ಮಾನವರಿಗೆ ಪ್ರಜ್ಞೆಯು ಬರುಬರುತ್ತಾ ಕಡಮೆಯಾಗುವುದು. ಅಂತಃಕರಣದಲ್ಲಿ ಬೇಕಾದಷ್ಟು ಕಶ್ಮಲವನ್ನು ತುಂಬಿಕೊಂಡಿದ್ದರೂ ಮೇಲುಗಡೆ ಮಾತ್ರ ಅವರ ಚಿಹ್ನೆಗಳು ಬಹು ಆಡಂಬರದಿಂದ ಕೂಡಿರುವುವು. ಹೀಗಾಗಿ ಅವರೆಲ್ಲರೂ ಅತ್ಯಲ್ಪಕಾಲದಲ್ಲಿಯೇ ಎಲ್ಲಿದ್ದರಲ್ಲಿ ಹಾಳಾಗಿಹೋಗುವರು.

ಯದಾ ಯದಾ ಹಿ ಪಾಷಂಡವೃತ್ತಿರತ್ರೋಪಲಕ್ಷ್ಯತೇ ।
ತದಾ ತದಾ ಕಲೇರ್ವೃದ್ಧಿರನುಮೇಯಾ ವಿಚಕ್ಷಣೈಃ ॥ ೪೪ ॥

ಯದಾ ಯದಾ ಸತಾಂ ಹಾನಿರ್ವೇದಮಾರ್ಗಾನುಸಾರಿಣಾಂ ।
ತದಾ ತದಾ ಕಲೇರ್ವೃದ್ಧಿರನುಮೇಯಾ ವಿಚಕ್ಷಣೈಃ ॥ ೪೫ ॥

ಪ್ರಾರಂಭಾಶ್ಚಾವಸೀದಂತಿ ಯದಾ ಧರ್ಮಕೃತಾಂ ನೃಣಾಂ ।
ತದಾನುಮೇಯಂ ಪ್ರಾಧಾನ್ಯಂ ಕಲೇರ್ವಿಪ್ರಾ ವಿಚಕ್ಷಣೈಃ ॥ ೪೬ ॥

ಯದಾ ಯದಾ ನ ಯಜ್ಞಾನಾಮೀಶ್ವರಃ ಪುರುಷೋತ್ತಮಃ ।
ಇಜ್ಯತೇ ಪುರುಷೈರ್ಯಜ್ಞೈಸ್ತದಾ ಜ್ಞೇಯಂ ಕಲೇರ್ಬಲಂ ॥ ೪೭ ॥

---

೪೪. ಈ ಭೂಲೋಕದಲ್ಲಿ ಪಾಷಂಡರೀತಿಯ ನಡೆವಳಿಕೆಯು ಕಂಡು ಬಂದಾಗಲೆಲ್ಲ ಕಲಿಯು ಅಭಿವೃದ್ಧಿಯನ್ನು ಪಡೆಯಿತೆಂದು ಬುದ್ಧಿವಂತರಾದವರು ಅರಿಯಬೇಕು.

೪೫. ವೇದೋಕ್ತವಾದ ಮಾರ್ಗದಲ್ಲಿ ನಂಬಿಕೆಯಿಟ್ಟು ನಡೆಯುತ್ತಿರುವ ಸತ್ಪುರುಷರು ಕಡಮೆಯಾಗುತ್ತಾ ಬಂದಂತೆಲ್ಲ ಪ್ರಾಜ್ಞರಾದವರು 'ಕಲಿಯು ವೃದ್ಧಿಯನ್ನು ಹೊಂದುತ್ತಿರುವುದಾಗಿ' ತಿಳಿಯಬೇಕು.

೪೬. ಎಲೈ ವಿಪ್ರರಿರಾ! ಧರ್ಮಕಾರ್ಯಾಸಕ್ತರಾದ ಮಾನವರು ಆರಂಭಿಸುವ ಧರ್ಮಕಾರ್ಯಗಳೆಲ್ಲ ಯಾವಾಗ ಹಾಳಾಗತೊಡಗುವುವೋ ಆಗ ಲೀಗ ಕಲಿಯ ಪ್ರಾಬಲ್ಯವು ಉಂಟಾಯಿತೆಂಬುದಾಗಿ ಜಾಣರಾದವರು ಅರಿಯಬೇಕು.

೪೭. ಯಾವಾಗ ಯಜ್ಞಗಳಿಗೆಲ್ಲಾ ಪ್ರಭುವೆನಿಸಿದ ಆ ಪುರುಷೋತ್ತಮನನ್ನು ಪುರುಷರೆನಿಸಿದವರು ಯಜ್ಞಯಾಗಾದಿಗಳಿಂದ ಆರಾಧಿಸದೆ ಇರತೊಡಗುವರೋ ಆಗ ಕಲಿಯ ಬಲವು ಹೆಚ್ಚಿತೆಂದು ತಿಳಿಯಬಹುದು.

ನ ಪ್ರೀತಿರ್ವೇದವಾದೇಷು ಪಾಷಂಡೇಷು ಯದಾ ರತಿಃ ।
ಕಲೇರ್ವೃದ್ಧಿಸ್ತದಾ ಪ್ರಾಜ್ಞೈರನುಮೇಯಾ ದ್ವಿಜೋತ್ತಮಾಃ ॥ ೪೮ ॥

ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರಮೀಶ್ವರಂ ।
ನಾರ್ಚಯಿಷ್ಯಂತಿ ಭೋ ವಿಪ್ರಾಃ ಪಾಷಂಡೋಪಹತಾ ನರಾಃ ॥ ೪೯ ॥

ಕಿಂ ದೇವೈಃ ಕಿಂ ದ್ವಿಜೈರ್ವೇದೈಃ ಕಿಂ ಶೌಚೇನಾಂಬುಜಲ್ಪನಾ ।
ಇತ್ಯೇವಂ ಪ್ರಲಪಿಷ್ಯಂತಿ ಪಾಷಂಡೋಪಹತಾ ನರಾಃ ॥ ೫೦ ॥

ಅಲ್ಪವೃಷ್ಟಿಶ್ಚ ಪರ್ಜನ್ಯಃ ಸ್ವಲ್ಪಂ ಸಸ್ಯಫಲಂ ತಥಾ ।
ಫಲಂ ತಥಾಽಲ್ಪಸಾರಂ ಚ ವಿಪ್ರಾಃ ಪ್ರಾಪ್ತೇ ಕಲೌ ಯುಗೇ ॥ ೫೧ ॥

---

೪೮. ಎಲೈ ಬ್ರಾಹ್ಮಣೋತ್ತಮರೇ! ವೇದಗಳು ಬೋಧಿಸುವ ಸನ್ಮಾರ್ಗಗಳಲ್ಲಿ ಯಾವಾಗ ಜನರಿಗೆ ಆಸಕ್ತಿಯು ಇಲ್ಲವಾಗುವುದೋ ಮತ್ತು ಪಾಷಂಡ ವರ್ತನೆಯಲ್ಲಿ ಆದರವು ಯಾವಾಗ ಹೆಚ್ಚತೊಡಗುವುದೋ ಆಗಲೀಗ ಕಲಿಯು ಅಭಿವೃದ್ಧಿಹೊಂದಿತೆಂದು ಪ್ರಾಜ್ಞರು ಊಹಿಸಬೇಕು.

೪೯. ಎಲೈ ವಿಪ್ರರೇ, ಆ ಕಲಿಕಾಲದಲ್ಲಿ ಮಾನವರೆಲ್ಲರೂ ಪಾಷಂಡ ಮತಗಳನ್ನು ಆಶ್ರಯಿಸಿದವರಾಗಿ ಜಗತ್ಪ್ರಭುವೂ, ಸಕಲ ವಸ್ತುಗಳನ್ನೂ ಸೃಷ್ಟಿ ಮಾಡಿದವನೂ ಆದ ಆ ಶ್ರೀಮನ್ನಾರಾಯಣನನ್ನು ಪೂಜಿಸಲಾರರು.

೫೦. ಆಗ ಪಾಷಂಡಮತಾವಲಂಬಿಗಳಾದ ಮಾನವರು, "ದೇವತೆಗಳನ್ನೇಕೆ ಪೂಜಿಸಬೇಕು?. ಬ್ರಾಹ್ಮಣರಿಗೇಕೆ ಮರ್ಯಾದೆ ಕೊಡಬೇಕು? ವೇದಗಳನ್ನೇಕೆ ಪ್ರಮಾಣವಾಗಿ ಒಪ್ಪಬೇಕು? ನೀರು ಮುಂತಾದುವುಗಳಲ್ಲಿ ಮುಳುಗಿ ಏಕೆ ಶುದ್ಧಿಯನ್ನು ಪಡೆಯಬೇಕು?" ಎಂದು ಮುಂತಾಗಿ ಹರಟತೊಡಗುವರು.

೫೧. ಆಗ ಮಳೆಯು ಸ್ವಲ್ಪವಾಗಿ ಬೀಳುವುದು ಪೈರುಗಳು ಸ್ವಲ್ಪವಾಗಿ ಫಲವನ್ನು ಕೊಡುವುವು. ಆರೀತಿ ಪೈರುಪಚ್ಚೆಗಳು ಬಿಡುವ ಫಲವೂ ಸಹ ಗಟ್ಟಿಯಾಗಿಲ್ಲದೆ ಜಳ್ಳಾಗತೊಡಗುವುದು. ಇದೆಲ್ಲವೂ ಕಲಿಯುಗವು ಪ್ರಾರಂಭವಾದಾಗಿನಿಂದಲೂ ಆಗತೊಡಗುವುದು.

ಜಾನುಪ್ರಾಯಾಣಿ ವಸ್ತ್ರಾಣಿ ಶಮೀಪ್ರಾಯಾ ಮಹೀರುಹಾಃ ।
ಶೂದ್ರಪ್ರಾಯಾಸ್ತಥಾ ವರ್ಣಾ ಭವಿಷ್ಯಂತಿ ಕಲೌ ಯುಗೇ ॥ ೫೨ ॥

ಅಣುಪ್ರಾಯಾಣಿ ಧಾನ್ಯಾನಿ ಆಜಪ್ರಾಯಂ ತಥಾ ಪಯಃ ।
ಭವಿಷ್ಯತಿ ಕಲೌ ಪ್ರಾಪ್ತೆ ಔಶೀರಂ ಚಾನುಲೇಪನಂ ॥ ೫೩ ॥

ಶ್ವಶ್ರೂಶ್ವಶುರಭೂಯಿಷ್ಠಾ ಗುರವಶ್ಚ ನೃಣಾಂ ಕಲೌ ।
ಶಾಲಾದ್ಯಾಹಾರಿಭಾರ್ಯಾಶ್ಚ ಸುಹೃದೋ ಮುನಿಸತ್ತಮಾಃ ॥ ೫೪ ॥

ಕಸ್ಯ ಮಾತಾ ಪಿತಾ ಕಸ್ಯ ಯದಾ ಕರ್ಮಾತ್ಮಕಃ ಪುಮಾನ್ ।
ಇತಿ ಚೋದಾಹರಿಷ್ಯಂತಿ ಶ್ವಶುರಾನುಗತಾ ನರಾಃ ॥ ೫೫ ॥

೫೨. ಆಗ ಬಟ್ಟೆಗಳೆಲ್ಲವೂ ಮಂಡಿಯುದ್ದ ಮಾತ್ರ ಮುಚ್ಚುವಂತೆ ಇರುವುವು. ಭಾರಿಭಾರಿ ಮರಗಳೆಲ್ಲವೂ ಶಮೀ (ಬನ್ನಿ) ವೃಕ್ಷದಷ್ಟು ಎತ್ತರವಾಗತೊಡಗುವುವು. ಉತ್ತಮರೆನಿಸಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ತ್ರಿವರ್ಣದವರು ಶೂದ್ರರಂತೆ (ತಂತಮ್ಮ ವೃತ್ತಿಯಿಂದ) ಆಗುವರು.

೫೩. ಆ ಕಲಿಯುಗದಲ್ಲಿ ಧಾನ್ಯಗಳು ಅಣುವಿನಷ್ಟು ಸಣ್ಣನಾಗುವುವು. ಹಾಲು (ಹಸುವಿನ) ದೊರೆಯದೆ ಆಡಿನ ಹಾಲೇ ದೊರೆಯುವಂತೆ ಆಗುವುದು. ಅಥವಾ ಹಸು ಮೊದಲಾದವುಗಳು ಮೇಕೆಯ ಹಾಲಿನಷ್ಟು ಪ್ರಮಾಣದಲ್ಲಿ ಹಾಲು ಕೊಡುವುವು. ಶ್ರೀಗಂಧಕ್ಕೆ ಬದಲಾಗಿ ಲಾಮಂಚವನ್ನು ಅರೆದು ಮೈಗೆ ಲೇಪಿಸಿಕೊಳ್ಳುವರು.

೫೪. ಎಲೈ ಮುನಿಶ್ರೇಷ್ಠರಿರಾ! ಆ ಕಾಲದಲ್ಲಿ ಜನರಿಗೆ ತಂದೆತಾಯಿ ಮೊದಲಾದವರಿಗಿಂತಲೂ ಅತ್ತೆಮಾವ ಮೊದಲಾದವರೇ ಹಿರಿಯರೆನಿಸುವರು. ಮತ್ತು ಮನೆಮಠ ಮುಂತಾದುವುಗಳಲ್ಲಿರುವ ಹೆಣ್ಣುಮಕ್ಕಳನ್ನು ಕದ್ದು ತಂದು ಮದುವೆ ಮಾಡಿಸುವರೇ ನಿಜವಾದ ಸ್ನೇಹಿತರೆನಿಸುವರು.

೫೫. ಅತ್ತೆಮಾವಂದಿರನ್ನೇ ನಂಬಿ ಅವರು ಹೇಳಿದಂತೆ ನಡೆಯುತ್ತಿರುವ ಆ ಮಾನವರು, “ಮನುಷ್ಯನಾದವನು ಒಂದಲ್ಲ ಒಂದು ಕೆಲಸವನ್ನು ಅವಲಂಬಿಸಲೇಬೇಕು. ಹಾಗಿರುವಾಗ ಅಂಥಹ ಮಾನವನಿಗೆ ತಂದೆಯಾರು? ತಾಯಿಯಾರು?” ಎಂದು ವಾದಿಸತೊಡಗುವರು.

ವಾಙ್ಮನಃಕಾಯಜೈರ್ದೋಷೈರಭಿಭೂತಾಃ ಪುನಃ ಪುನಃ ।
ನರಾಃ ಪಾಪಾನ್ಯಹರ್ದಿನಂ ಕರಿಷ್ಯಂತ್ಯಲ್ಪಮೇಧಸಃ ॥ ೫೬ ॥

ನಿಃಸತ್ಯಾನಾಮಶೌಚಾನಾಂ ನಿರ್ಹ್ರೀಕಾಣಾಂ ತಥಾ ದ್ವಿಜಾಃ ।
ಯದ್ಯದ್ದುಃಖಾಯ ತತ್ಸರ್ವಂ ಕಲಿಕಾಲೇ ಭವಿಷ್ಯತಿ ॥ ೫೭ ॥

ನಿಃಸ್ವಾಧ್ಯಾಯವಷಟ್ಕಾರೇ ಸ್ವಧಾಸ್ವಾಹಾವಿವರ್ಜಿತೇ ।
ತದಾ ಪ್ರವಿರಲೋ ವಿಪ್ರಃ ಕಶ್ಚಿಲ್ಲೋಕೇ ಭವಿಷ್ಯತಿ ॥ ೫೮ ॥

ತತ್ರಾಲ್ಪೇನೈವ ಕಾಲೇನ ಪುಣ್ಯಸ್ಕಂಧಮನುತ್ತಮಂ ।
ಕರೋತಿ ಯಃ ಕೃತಯುಗೇ ಕ್ರಿಯತೇ ತಪಸಾ ಹಿ ಯಃ ॥ ೫೯ ॥

---

೫೬. ಈರೀತಿಯಾಗಿ ಅಲ್ಪವಾದ ಪ್ರಜ್ಞೆಯುಳ್ಳ ಆ ಮಾನವರು ವಾಚಿಕವೂ, ಮಾನಸಿಕವೂ, ಶಾರೀರಕವೂ ಆದ ತಪ್ಪುಗಳಿಗೆ (ದೋಷಗಳಿಗೆ) ಮೇಲೆಮೇಲೆ (ಪದೇಪದೇ) ಗುರಿಯಾಗುತ್ತಾ ಪ್ರತಿನಿತ್ಯವೂ ಪಾಪಕರ್ಮಗಳನ್ನು ಆಚರಿಸುವರು.

೫೭. ಎಲೈ ಬ್ರಾಹ್ಮಣರಿರಾ! ಆರೀತಿ ಸತ್ಯವಾಕ್ಯವನ್ನು ತೊರೆದು, ಶೌಚಾಚಾರವನ್ನು ಬಿಟ್ಟು, ನಾಚಿಕೆಯನ್ನೂ ಬಿಟ್ಟಿರುವ ಆ ಕಲಿಗಾಲದ ಮನುಜರಿಗೆ ಯಾವಾವುದು ದುಃಖಕ್ಕೆ ಕಾರಣವೆಂಬುದಾಗಿ ಭಾವಿಸಲ್ಪಟ್ಟಿರುವುದೋ ಅದೆಲ್ಲವೂ ಸಂಘಟಿಸುವುದು.

೫೮-೫೯. ಈರೀತಿಯಾಗಿ ವೇದಾಧ್ಯಯನವಿಲ್ಲದೆ, ಸ್ವಾಹಾಕಾರ, ಸ್ವಧಾಕಾರ, ವಷಟ್ಕಾರಗಳು, (ಹವ್ಯಕವ್ಯಾದಿಗಳಲ್ಲಿ ದೇವತೆಗಳಿಗೂ ಪಿತೃಗಳಿಗೂ ಸಲ್ಲಲೆಂದು ಆಯಾ ವಸ್ತುಗಳನ್ನು ಕೊಡುವಾಗ ಹೇಳುತಕ್ಕ ಮಂತ್ರಗಳು) ಲುಪ್ತವಾಗಿಹೋಗಿರುವ ಆ ಕಲಿಗಾಲದಲಿ ಎಲ್ಲಿಯೋ ಅಪರೂಪವಾಗಿ ಒಬ್ಬೊಬ್ಬ ಶುದ್ಧನಾದ ಬ್ರಾಹ್ಮಣನು ನೆಲೆಸಿರುವನು. ಅವನು ಮಾತ್ರ ತನ್ನ ಧರ್ಮಾನುಷ್ಠಾನದಿಂದ ಹಿಂದೆ ಕೃತಯುಗದಲ್ಲಿ ಬೇಕಾದಷ್ಟು ತಪಸ್ಸುಮಾಡಿದರೆ ಮಾತ್ರ ದೊರೆಯುತ್ತಿದ್ದಂತಹ ಅತ್ಯುತ್ತಮವಾದ ಪುಣ್ಯಫಲವನ್ನು ಅತ್ಯಲ್ಪವಾದ ಕಾಲದಲ್ಲಿಯೇ ಹೊಂದುವನು" ಎಂದನು.

॥ ಮುನಯ ಊಚುಃ ॥

ಕಸ್ಮಿನ್ಕಾಲೇಽಲ್ಪಕೋ ಧರ್ಮೋ ದದಾತಿ ಸುಮಹಾಫಲಂ ।
ವಕ್ತುಮರ್ಹಸ್ಯಶೇಷೇಣ ಶ್ರೋತುಂ ವಾಂಛಾ ಪ್ರವರ್ತತೇ ॥ ೬೦ ॥

॥ ವ್ಯಾಸ ಉವಾಚ ॥

ಧನ್ಯೇ ಕಲೌ ಭವೇದ್ವಿಪ್ರಾಸ್ತ್ವಲ್ಪಕ್ಲೇಶೈರ್ಮಹತ್ಫಲಂ ।
ತಥಾ ಭವೇತಾಂ ಸ್ತ್ರೀಶೂದ್ರೌ ಧನ್ಯೌ ಚಾನ್ಯನ್ನಿಬೋಧತ ॥ ೬೧ ॥

ಯತ್ಕೃತೇ ದಶಭಿರ್ವರ್ಷೈಸ್ತ್ರೇತಾಯಾಂ ಹಾಯನೇನ ತತ್ ।
ದ್ವಾಪರೇ ತಚ್ಚ ಮಾಸೇನ ಅಹೋರಾತ್ರೇಣ ತತ್ಕಲೌ ॥ ೬೨ ॥

---

೬೦. ಆಗ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು 'ಯಾವ ಕಾಲದಲ್ಲಿ ಸ್ವಲ್ಪ ಧರ್ಮವನ್ನು ಆಚರಿಸಿದರೂ, ಅತಿಶಯವಾದ ಶುಭಫಲವು ದೊರೆಯುವುದೋ ಅಂಥಹ ಕಾಲವನ್ನೂ ಆ ಧರ್ಮಕಾರ್ಯಗಳನ್ನೂ ಸಮಗ್ರವಾಗಿ ನಮಗೆ ನೀನು ತಿಳಿಸಬೇಕು. ಅದನ್ನು ಕೇಳಬೇಕೆಂದು ನಮಗೆ ಆಸೆಯುಂಟಾಗಿರುವುದು" ಎಂದು ಪ್ರಶ್ನಿಸಲು ಆ ಮಹರ್ಷಿಯು ಈರೀತಿ ಹೇಳತೊಡಗಿದನು.

೬೧. ಎಲೈ ವಿಪ್ರರಿರಾ! ಆಲಿಸಿರಿ. ಆ ಕಲಿಕಾಲವು ಧನ್ಯವಾದುದು. ಆ ಕಾಲದಲ್ಲಿಯೇ ಸ್ವಲ್ಪಮಟ್ಟಿಗೆ ಕಷ್ಟಪಟ್ಟರೂ ಹೆಚ್ಚಾದ ಫಲವು ದೊರೆಯುವುದು. ಆ ಕಲಿಯುಗದಲ್ಲಿ ಹುಟ್ಟುವ ಸ್ತ್ರೀಪುರುಷರೇ ಭಾಗ್ಯಶಾಲಿಗಳು. ನಿಮಗೆ ಮತ್ತೂ ಒಂದು ರಹಸ್ಯವನ್ನು ತಿಳಿಸುವೆನು. ಕೇಳಿರಿ.

೬೨. ಕೃತಯುಗದಲ್ಲಿ ಹತ್ತು ವರ್ಷಗಳಕಾಲ ಸಾಧನೆಯಲ್ಲಿದ್ದರೆ ಮಾತ್ರ ದೊರೆಯತಕ್ಕಂತಹ ಫಲವು ತ್ರೇತಾಯುಗದಲ್ಲಿ ಒಂದು ವರ್ಷಕಾಲ ಸಾಧನೆಯಿಂದ ಇದ್ದರೆ ಲಭಿಸುವುದು. ಅದೇ ಫಲವು ದ್ವಾಪರಯುಗದಲ್ಲಿ ಒಂದು ತಿಂಗಳುಕಾಲದಲ್ಲಿಯೂ ಕಲಿಯುಗದಲ್ಲಿ ಒಂದೇ ಒಂದು ಅಹೋರಾತ್ರ (ದಿನ) ಕಾಲದಲ್ಲಿಯೂ ಸಾಧನಾಮಾರ್ಗದಲ್ಲಿದ್ದರೆ ದೊರೆಯುವುದು.

ತಪಸೋ ಬ್ರಹ್ಮಚರ್ಯಸ್ಯ ಜಪಾದೇಶ್ಚ ಫಲಂ ದ್ವಿಜಾಃ ।
ಪ್ರಾಪ್ನೋತಿ ಪುರುಷಸ್ತೇನ ಕಲೌ ಸಾಧ್ವಿತಿ ಭಾಷಿತಂ ॥ ೬೩ ॥

ಧ್ಯಾಯನ್ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ ॥ ೬೪ ॥

ಧರ್ಮೋತ್ಕರ್ಷಮತೀವಾತ್ರ ಪ್ರಾಪ್ನೋತಿ ಪುರುಷಃ ಕಲೌ ।
ಸ್ವಲ್ಪಾಯಾಸೇನ ಧರ್ಮಜ್ಞಾಸ್ತೇನ ತುಷ್ಟೋಽಸ್ಮ್ಯಹಂ ಕಲೌ ॥ ೬೫ ॥

ವ್ರತಚರ್ಯಾಪರೈರ್ಗ್ರಾಹ್ಯಾ ವೇದಾಃ ಪೂರ್ವಂ ದ್ವಿಜಾತಿಭಿಃ ।
ತತಸ್ತು ಧರ್ಮಸಂಪ್ರಾಪ್ತೈರ್ಯಷ್ಟವ್ಯಂ ವಿಧಿವದ್ಧನೈಃ ॥ ೬೬ ॥

---

೬೩. ಎಲೈ ಬ್ರಾಹ್ಮಣರಿರಾ! ತಪಸ್ಸಿಗೂ, ಬ್ರಹ್ಮಚರ್ಯಕ್ಕೂ, ಜಪಾದಿಗಳಿಗೂ ಏನೇನುಫಲವು ಇರುವುದೋ, ಅವೆಲ್ಲವೂ ಸಹ, ಕಲಿಯುಗದಲ್ಲಿ ಒಂದೇ ಒಂದು ಒಳ್ಳೆಯ ಮಾತಿನಿಂದ ಪುರುಷನಿಗೆ ಉಂಟಾಗುವುದು.

೬೪. ಕೃತಯುಗದಲ್ಲಿ ಧ್ಯಾನಮಗ್ನನಾದವನು ಏನುಫಲವನ್ನು ಪಡೆಯುವನೋ, ತ್ರೇತಾಯುಗದಲ್ಲಿ ಯಜ್ಞಯಾಗಗಳನ್ನು ಮಾಡಿದವನು ಯಾವ ಫಲವನ್ನು ಹೊಂದುವನೋ, ದ್ವಾಪರಯುಗದಲ್ಲಿ ಪೂಜೆಯನ್ನು ಮಾಡಿದವನು ಯಾವಫಲವನ್ನು ಪಡೆಯುವನೋ ಅದೇಫಲವನ್ನು ಕಲಿಯುಗದಲ್ಲಿ ಶ್ರೀಹರಿಯನ್ನು ಸಂಕೀರ್ತನಮಾಡುವುದರಿಂದಲೇ ಪುರುಷನು ಪಡೆಯುವನು.

೬೫. ಎಲೈ ಧರ್ಮಜ್ಞರಿರಾ! ಆ ಕಲಿಯುಗದಲ್ಲಿ ಪುರುಷನಾದವನು ಹೆಚ್ಚು ಶ್ರಮಪಡದೆ ಅತ್ಯಧಿಕವಾದ ಪುಣ್ಯಫಲವನ್ನು ಸಂಪಾದಿಸಬಹುದು. ಆದುದರಿಂದಲೇ ನನಗೆ ಕಲಿಯುಗದ ವಿಷಯವಾಗಿ ಬಹುಸಂತೋಷವಾಗುವುದು.

೬೬. ದ್ವಿಜರಾದವರು (ವೇದಾಧ್ಯಯನವನ್ನು ಮಾಡುವುದಕ್ಕೆ) ಮೊದಲು (ಪ್ರಾಜಾಪತ್ಯಾದಿ) ವೇದವ್ರತಗಳನ್ನು ಆಚರಿಸಿಯೇ ಬಳಿಕ ವೇದಗಳನ್ನು ಅಧ್ಯಯನಮಾಡಬೇಕು. ಅನಂತರ ಧರ್ಮಸಂಮತವಾದರೀತಿಯಿಂದ ಸಂಪಾದಿಸಿದ ದ್ರವ್ಯದಿಂದ ವಿಧಿಪೂರ್ವಕವಾಗಿ ಯಜ್ಞಯಾಗಗಳನ್ನು ಮಾಡಬೇಕು.

ವೃಥಾ ಕಥಾ ವೃಥಾ ಭೋಜ್ಯಂ ವೃಥಾ ಸ್ವಂ ಚ ದ್ವಿಜನ್ಮನಾಂ ।
ಪತನಾಯ ತಥಾ ಭಾವ್ಯಂ ತೈಸ್ತು ಸಂಯತಿಭಿಃ ಸಹ ॥ ೬೭ ॥

ಅಸಮ್ಯಕ್ಕರಣೇ ದೋಷಾಸ್ತೇಷಾಂ ಸರ್ವೇಷು ವಸ್ತುಷು ।
ಭೋಜ್ಯಪೇಯಾದಿಕಂ ಚೈಷಾಂ ನೇಚ್ಛಾಪ್ರಾಪ್ತಿಕರಂ ದ್ವಿಜಾಃ ॥ ೬೮ ॥

ಪಾರತಂತ್ರ್ಯಂ ಸಮಸ್ತೇಷು ತೇಷಾಂ ಕಾರ್ಯೇಷು ವೈ ತತಃ ।
ಲೋಕಾನ್ಕ್ಲೇಶೇನ ಮಹತಾ ಯಜಂತಿ ವಿನಯಾನ್ವಿತಾಃ ॥ ೬೯ ॥

ದ್ವಿಜಶುಶ್ರೂಷಣೇನೈವ ಪಾಕಯಜ್ಞಾಧಿಕಾರವಾನ್ ।
ನಿಜಂ ಜಯತಿ ವೈ ಲೋಕಂ ಶೂದ್ರೋ ಧನ್ಯತರಸ್ತತಃ ॥ ೭೦ ॥

---

೬೭. ವ್ಯರ್ಥವಾದ ಮಾತುಕತೆಯೂ, ವ್ಯರ್ಥವಾದ ಊಟಉಪಚಾರಗಳೂ, ವ್ಯರ್ಥವಾದ ಧನರಾಶಿಯೂ, ದ್ವಿಜನಾದವನನ್ನು ಪತಿತನನ್ನಾಗಿ ಮಾಡುವುವು. ಆದುದರಿಂದಲೇ ದ್ವಿಜರೆನಿಸಿದವರು ಸರ್ವಕಾಲದಲ್ಲಿಯೂ ಸಂಯಮಶೀಲರಾಗಿ ಇರಬೇಕು.

೬೮. ಏಕೆಂದರೆ ಯಾವುವೇ ಆಗಲಿ ಅದೆಲ್ಲವನ್ನೂ ಸರಿಯಾದರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ ಮಹತ್ತಾದ ದೋಷವುಂಟಾಗುವುದು. (ಹಾಗೆ ಮಾಡದಿದ್ದರೆ ಆ ದ್ವಿಜನು ನೀಡುವ ಭೋಜನಾದಿ ವಸ್ತುಗಳೂ, ಪಾನೋಪಯೋಗಿ ದ್ರವ್ಯಗಳೂ, ತನ್ನ ಇಷ್ಟವನ್ನು ಈಡೇರಿಸಲಾರವು.)

೬೯. ಅವರು ಸಕಲ ಕಾರ್ಯಗಳಲ್ಲಿಯೂ ವಿಧಿನಿಯಮಾದಿಗಳಿಗೆ ಯಾವ ಕೆಲಸವನ್ನು ನಡೆಸಲೂ ಅವರಿಗೆ ಸ್ವಾತಂತ್ರ್ಯವಿಲ್ಲವು. ಆದುದರಿಂದಲೇ ಅವರು ವಿನಯವನ್ನು ಅವಲಂಬಿಸಿ ಎಷ್ಟೇಕಷ್ಟವಾದರೂ ಅನುಭವಿಸುತ್ತಾ ಯಜ್ಞಯಾಗಗಳನ್ನು ಮಾಡಿ ಉತ್ತಮಲೋಕಗಳನ್ನು ಪಡೆಯಬೇಕಾಗುವುದು. (ಕಲಿಯುಗದಲ್ಲಿ ಈ ಶ್ರಮವಿಲ್ಲ. ಭಗವನ್ನಾಮಸಂಕೀರ್ತನೆಯೇ ಸಾಕು) ಎಂದು ಆಶಯ.

೭೦. ಶೂದ್ರನಾದವನು ಆ ದ್ವಿಜರು ಮಾಡತಕ್ಕ ಪಾಕಯಜ್ಞಾದಿ ಕಾರ್ಯಗಳಲ್ಲಿ ಉಚಿತವಾದ ಸೇವೆಯನ್ನು ಮಾಡುವುದರಿಂದಲೇ, ತನಗೆ ಲಭಿಸಬೇಕಾದ ಉತ್ತಮಲೋಕವನ್ನು ಪಡೆಯುವನು. ಆದುದರಿಂದಲೇ ಶೂದ್ರನು ಮತ್ತಷ್ಟು ಭಾಗ್ಯಶಾಲಿಯು.

ಭಕ್ಷ್ಯಾಭಕ್ಷ್ಯೇಷು ನಾಶಾಸ್ತಿ ಯೇಷಾಂ ಪಾಪೇಷು ವಾ ಯತಃ ।
ನಿಯಮೋ ಮುನಿಶಾರ್ದೂಲಾಸ್ತೇನಾಸೌ ಸಾಧ್ವಿತೀರಿತಂ ॥ ೭೧ ॥

ಸ್ವಧರ್ಮಸ್ಯಾವಿರೋಧೇನ ನರೈರ್ಲಭ್ಯಂ ಧನಂ ಸದಾ ।
ಪ್ರತಿಪಾದನೀಯಂ ಪಾತ್ರೇಷು ಯಷ್ಟವ್ಯಂ ಚ ಯಥಾವಿಧಿ ॥ ೭೨ ॥

ತಸ್ಯಾರ್ಜನೇ ಮಹಾನ್ಕ್ಲೇಶಃ ಪಾಲನೇನ ದ್ವಿಜೋತ್ತಮಾಃ ।
ತಥಾ ಸದ್ವಿನಿಯೋಗಾಯ ವಿಜ್ಞೇಯಂ ಗಹನಂ ನೃಣಾಂ ॥ ೭೩ ॥

---

೭೧. ಎಲೈ ಮುನಿಶ್ರೇಷ್ಠರಿರಾ! ಶೂದ್ರನಾದವನಿಗೆ "ಇದನ್ನು ತಿನ್ನಬಹುದು. ಇದನ್ನು ತಿನ್ನಬಾರದು" ಎಂಬ ನಿಯಮವಾಗಲೀ, ಪಾಪಪುಣ್ಯಗಳೆಂಬ ನಿಯಮವಾಗಲೀ ಕೂಡ ಇಲ್ಲದಿರುವುದರಿಂದಲೇ ನಾನು ಭಲೆ ಎಂದು ಆ ಜಾತಿಯನ್ನು ಹೊಗಳಿದೆನು. (ಯಾವೊಂದು ನಿಯಮಗಳನ್ನೂ ಪಾಲಿಸದೆ ಇದ್ದರೂ ದ್ವಿಜಶುಶ್ರೂಷೆಯೊಂದರಿಂದಲೇ ಉತ್ತಮಲೋಕಗಳನ್ನು ಸುಲಭೋಪಾಯದಿಂದ ಪಡೆಯಬಹುದು ಎಂಬ ಆಶಯದಿಂದ ಮೆಚ್ಚಿದುದಾಗಿ ಗ್ರಾಹ್ಯವು.)

೭೨. ಮನುಷ್ಯನಾದವನು ತನ್ನ ಧರ್ಮಕ್ಕೆ ವಿರೋಧವು ಬಾರದಂತೆ ದ್ರವ್ಯವನ್ನು ಸಂಪಾದಿಸಬೇಕು. ಹಾಗೆ ಸಂಪಾದಿಸಿದ ದ್ರವ್ಯವನ್ನು ಶಾಸ್ತ್ರೀಯವಾದ ವಿಧಿಗನುಸಾರವಾಗಿ ಸರಿಯಾದ ಪಾತ್ರವನ್ನು ಹುಡುಕಿ ದಾನ ಮಾಡಬೇಕು.

೭೩. ಆ ದ್ರವ್ಯವನ್ನು ಸಂಪಾದಿಸುವುದಕ್ಕೆ ಬಹುಕ್ಲೇಶಪಡಬೇಕಾಗುವುದು. ಹಾಗೆ ಸಂಪಾದಿಸಿದರೂ ಕಾಪಾಡುವುದಕ್ಕೆ ಮತ್ತಷ್ಟು ಶ್ರಮಪಡಬೇಕಾಗುವುದು. ಆರೀತಿ ಕಾಪಾಡಿಕೊಂಡು ಬಂದ ದ್ರವ್ಯವನ್ನು ಸತ್ಪಾತ್ರದಲ್ಲಿ ವಿನಿಯೋಗಮಾಡುವುದಕ್ಕಂತೂ ಮತ್ತೂ ಅಷ್ಟು ಕಷ್ಟವನ್ನು ಮಾನವನು ಪಡಬೇಕಾಗುವುದು.

ಏಭಿರನ್ಯೈಸ್ತಥಾ ಕ್ಲೇಶೈಃ ಪುರುಷಾ ದ್ವಿಜಸತ್ತಮಾಃ ।
ನಿಜಾನ್ ಜಯಂತಿ ವೈ ಲೋಕಾನ್ಪ್ರಾಜಾಪತ್ಯಾದಿಕಾನ್ಕ್ರಮಾತ್ ॥ ೭೪ ॥

ಯೋಷಿಚ್ಛುಶ್ರೂಷಣಾದ್ಭರ್ತುಃ ಕರ್ಮಣಾ ಮನಸಾ ಗಿರಾ ।
ಏತದ್ವಿಷಯಮಾಪ್ನೋತಿ ತತ್ಸಾಲೋಕ್ಯಂ ಯತೋ ದ್ವಿಜಾಃ ॥ ೭೫ ॥

ನಾತಿಕ್ಲೇಶೇನ ಮಹತಾ ತಾನೇವ ಪುರುಷೋ ಯಥಾ ।
ತೃತೀಯಂ ವ್ಯಾಹೃತಂ ತೇನ ಮಯಾ ಸಾಧ್ವಿತಿ ಯೋಷಿತಃ ॥ ೭೬ ॥

ಏತದ್ವಃ ಕಥಿತಂ ವಿಪ್ರಾ ಯನ್ನಿಮಿತ್ತಮಿಹಾಗತಾಃ ।
ತತ್ಪೃಚ್ಛಧ್ವಂ ಯಥಾಕಾಮಮಹಂ ವಕ್ಷ್ಯಾಮಿ ವಃ ಸ್ಫುಟಂ ॥ ೭೭ ॥

---

೭೪. ಎಲೈ ದ್ವಿಜಶ್ರೇಷ್ಠರಿರಾ! ಈರೀತಿಯಾಗಿ ಪುರುಷನೆನಿಸಿದವನು ಪ್ರಾಜಾಪತ್ಯಾದಿ (ಬ್ರಹ್ಮನಿವಾಸವಾದ ಸತ್ಯಲೋಕ ಮೊದಲಾದ) ಲೋಕಗಳನ್ನು ಕ್ರಮವಾಗಿ ಪಡೆಯಬೇಕಾದರೆ ಮೇಲೆ ವಿವರಿಸಿದ ಕ್ಲೇಶಗಳ ಜೊತೆಗೆ ಮತ್ತಷ್ಟು ಕ್ಲೇಶಗಳನ್ನೂ ಅನುಭವಿಸಬೇಕಾಗುವುದು.

೭೫. ಆದರೆ ಸ್ತ್ರೀಯಾದವಳು ತಾನು ಮಾಡುವ ಕರ್ಮಗಳಿಂದಲೂ, ಆಡುವ ಮಾತುಗಳಿಂದಲೂ, ಮನಸ್ಸಿನಿಂದಲೂ ತನ್ನ ಪತಿಯನ್ನು ಸೇವಿಸಿದರೆ ಸಾಕು; ಅವಳು ತನ್ನ ಪತಿಯಾದವನು (ಮೇಲೆ ವಿವರಿಸಿದ ಸತ್ಕರ್ಮಗಳನ್ನು ಮಾಡಿ) ಪಡೆಯತಕ್ಕ ಬ್ರಹ್ಮಾದಿ ಲೋಕಗಳನ್ನು ತಾನೂ ಅವನ ಜೊತೆಯಲ್ಲಿಯೇ ಪಡೆಯುವಳು.

೭೬. ಎಲೈ ಮುನಿಗಳಿರಾ! ಈರೀತಿಯಾಗಿ ಪುರುಷನೆನಿಸಿದವನು ಬಹುಶ್ರಮದಿಂದಲೇ ಹೊಂದಬೇಕಾದ ಸದ್ಗತಿಯನ್ನು ಸ್ತ್ರೀಯಾದವಳು ಹೆಚ್ಚು ಶ್ರಮವಿಲ್ಲದೆಯೇ ಪಡೆಯಬಹುದಾದುದರಿಂದಲೇ ನಾನು ಆ ಸ್ತ್ರೀಜಾತಿಯನ್ನು ಮೆಚ್ಚಿ ಭಲೆ ಎಂಬುದಾಗಿ ಹೊಗಳುವೆನು.

೭೭. ಎಲೈ ವಿಪ್ರರಿರಾ! ನೀವು ಯಾವುದನ್ನು ಕೇಳುವ ಸಲುವಾಗಿ ಇಲ್ಲಿಯವರೆಗೆ ಬಂದಿರೋ ಆ ವೃತ್ತಾಂತವೆಲ್ಲವನ್ನೂ ನಿಮಗೆ ತಿಳಿಸಲಾಯಿತು. ನೀವು ಇನ್ನೂ ಏನೇನು ಕೇಳಬೇಕೆಂದು ಆಶಿಸುವಿರೋ ಅದೆಲ್ಲವನ್ನೂ, ಸ್ವಲ್ಪವೂ ಹಿಂಜರಿಯದೆ ಮನಬಿಚ್ಚಿ ಕೇಳಿರಿ. ನಾನು ತಿಳಿಸಲು ಸಿದ್ಧನಾಗಿರುವೆನು.

ಅಲ್ಪೇನೈವ ಪ್ರಯತ್ನೇನ ಧರ್ಮಃ ಸಿಧ್ಯತಿ ವೈ ಕಲೌ
ನರೈರಾತ್ಮಗುಣಾಂಭೋಭಿಃ ಕ್ಷಾಲಿತಾಖಿಲಕಿಲ್ಬಿಷೈಃ ॥ ೭೮ ॥

ಶೂದ್ರೈಶ್ಚ ದ್ವಿಜಶುಶ್ರೂಷಾತತ್ಪರೈರ್ಮುನಿಸತ್ತಮಾಃ ।
ತಥಾ ಸ್ತ್ರೀಭಿರನಾಯಾಸಾತ್ಪತಿಶುಶ್ರೂಷಯೈವ ಹಿ ॥ ೭೯ ॥

ತತಸ್ತ್ರಿತಯಮಪ್ಯೇತನ್ಮಮ ಧನ್ಯತಮಂ ಮತಂ ।
ಧರ್ಮಸಂರಾಧನೇ ಕ್ಲೇಶೋ ದ್ವಿಜಾತೀನಾಂ ಕೃತಾದಿಷು ॥ ೮೦ ॥

ತಥಾ ಸ್ವಲ್ಪೇನ ತಪಸಾ ಸಿದ್ಧಿಂ ಯಾಸ್ಯಂತಿ ಮಾನವಾಃ ।
ಧನ್ಯಾ ಧರ್ಮಂ ಚರಿಷ್ಯಂತಿ ಯುಗಾಂತೇ ಮುನಿಸತ್ತಮಾಃ ॥ ೮೧ ॥

---

೭೮. ಆ ಕಲಿಯುಗದಲ್ಲಿ ಅತ್ಯಲ್ಪ ಪ್ರಯಾಸದಿಂದಲೇ ಪುಣ್ಯವನ್ನು ಸಂಪಾದಿಸಬಹುದು. ಆಗ ಮಾನವರು ತಮ್ಮ ತಮ್ಮ ಸದ್ಗುಣಗಳೆಂಬ ನೀರಿನಿಂದ ಸಕಲವಾದ ಕಶ್ಮಲ (ಪಾಪ) ಗಳನ್ನೂ ಕಳೆದುಕೊಂಡುಬಿಡುವರು.

೭೯. ಶೂದ್ರರು ಬ್ರಾಹ್ಮಣಾದಿ ವರ್ಣತ್ರಯದ ಶುಶ್ರೂಷೆಯಿಂದಲೂ, ಸ್ತ್ರೀಯರು ತಂತಮ್ಮ ಪತಿಗಳ ಸೇವೆಯಿಂದಲೂ ನಿರಾಯಾಸವಾಗಿ ಪುಣ್ಯವನ್ನು ಗಳಿಸುವರು.

೮೦. ಆದುದರಿಂದಲೇ ಈ ಕಲಿಕಾಲವನ್ನೂ, ಸ್ತ್ರೀಯರನ್ನೂ, ಶೂದ್ರರನ್ನೂ ನಾನು ಧನ್ಯರೆಂಬುದಾಗಿ ಹೇಳಿದೆನು. ಕೃತ ತ್ರೇತಾ ದ್ವಾಪರಯುಗಗಳಲ್ಲಿ ಧರ್ಮವನ್ನು (ಪುಣ್ಯವನ್ನು) ಸಂಪಾದಿಸಲು ದ್ವಿಜರಾದವರು ಬಹು ಕಷ್ಟಪಡಬೇಕಾಗುವುದು.

೮೧. ಎಲೈ ಮುನಿಶ್ರೇಷ್ಠರಿರಾ! ಈ ಕಲಿಗಾಲದಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ತಪಸ್ಸುಮಾಡಿದರೂ ಸಾಕು. ಮಾನವರು ಸಿದ್ಧಿಯನ್ನು ಹೊಂದುವರು. ಆಗ ಧರ್ಮಕಾರ್ಯಗಳನ್ನು ಯಾರು ಆಚರಿಸುವರೋ ಅವರೇ ಧನ್ಯರು.

ಭವದ್ಭಿರ್ಯದಭಿಪ್ರೇತಂ ತದೇತತ್ಕಥಿತಂ ಮಯಾ ।
ಅಪೃಷ್ಟೇನಾಪಿ ಧರ್ಮಜ್ಞಾಃ ಕಿಮನ್ಯತ್ಕ್ರಿಯತಾಂ ದ್ವಿಜಾಃ ॥ ೮೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಭವಿಷ್ಯಕಥನಂ ನಾಮ ತ್ರಿಂಶದಧಿಕ-
ದ್ವಿಶತತಮೋಽಧ್ಯಾಯಃ

---

೮೨. ಎಲೈ ಧರ್ಮಜ್ಞರಿರಾ! ನೀವು ನನ್ನನ್ನು ಪ್ರತ್ಯೇಕವಾಗಿ ಕೇಳದಿದ್ದರೂ ನಿಮ್ಮ ನಿಮ್ಮ ಮನಸ್ಸಿನಲ್ಲಿ ಏನೇನು ಕೇಳಬೇಕೆಂದು ಇದ್ದಿತೋ ಅವೆಲ್ಲವನ್ನೂ ತಿಳಿಸಿರುವೆನು. ಮತ್ತೆ ಇನ್ನೇನು ಹೇಳಲಿ? ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಭವಿಷ್ಯಕಥನವೆಂಬ ಇನ್ನೂರಮೂವತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಆಸನ್ನಂ ವಿಪ್ರಕೃಷ್ಟಂ ವಾ ಯದಿ ಕಾಲಂ ನ ವಿದ್ಮಹೇ ।
ತತೋ ದ್ವಾಪರವಿಧ್ವಂಸಂ ಯುಗಾಂತಂ ಸ್ಪೃಹಯಾಮಹೇ ॥ ೧ ॥

ಪ್ರಾಪ್ತಾ ವಯಂ ಹಿ ತತ್ಕಾಲಮನಯಾ ಧರ್ಮತೃಷ್ಣಯಾ ।
ಆದದ್ಯಾಮ ಪರಂ ಧರ್ಮಂ ಸುಖಮಲ್ಪೇನ ಕರ್ಮಣಾ ॥ ೨ ॥

ಇನ್ನೂರಮೂವತ್ತೊಂದನೆಯ ಅಧ್ಯಾಯವು

೧. ಆಗ ಮಹರ್ಷಿಗಳು ವ್ಯಾಸನನ್ನು ಕುರಿತು "ಎಲೈ ಧರ್ಮಜ್ಞನೇ, ನಮಗೆ ಕಾಲವು ಸಮೀಪವಾಗಿದೆಯೋ, ಇಲ್ಲವೇ ದೂರವಾಗಿರುವುದೋ ಒಂದೂ ತಿಳಿಯದು. ಆದುದರಿಂದ ದ್ವಾಪರಯುಗದ ಅಂತ್ಯವನ್ನೂ ಕಲಿಯುಗದ ಸ್ವರೂಪವನ್ನೂ ಅರಿಯಬೇಕೆಂದು ಆಶಿಸುವೆವು.

೨. ನಮಗೆ ಧರ್ಮದಮೇಲೆ ಬಹುವಾಗಿ ಆಸೆಯಾಗಿರುವುದು. ಆದುದರಿಂದಲೇ ಆ ಕಲಿಗಾಲವನ್ನು ನಾವು ಹೊಂದಿ ಹೆಚ್ಚು ಶ್ರಮಪಡದೆ ಅತ್ಯಲ್ಪ ಕರ್ಮಗಳಿಂದಲೇ ಶ್ರೇಷ್ಠವಾದ ಧರ್ಮವನ್ನು ಗಳಿಸಬೇಕೆಂದಿರುವೆವು.

ಸಂತ್ರಾಸೋದ್ವೇಗಜನನಂ ಯುಗಾಂತಂ ಸಮುಪಸ್ಥಿತಂ ।
ಪ್ರನಷ್ಟಧರ್ಮಂ ಧರ್ಮಜ್ಞ ನಿಮಿತ್ತೈರ್ವಕ್ತುಮರ್ಹಸಿ ॥ ೩ ॥

॥ ವ್ಯಾಸ ಉವಾಚ ॥

ಅರಕ್ಷಿತಾರೋ ಹರ್ತಾರೋ ಬಲಿಭಾಗಸ್ಯ ಪಾರ್ಥಿವಾಃ ।
ಯುಗಾಂತೇ ಪ್ರಭವಿಷ್ಯಂತಿ ಸ್ವರಕ್ಷಣಪರಾಯಣಾಃ ॥ ೪ ॥

ಅಕ್ಷತ್ರಿಯಾಶ್ಚ ರಾಜಾನೋ ವಿಪ್ರಾಃ ಶೂದ್ರೋಪಜೀವಿನಃ ।
ಶೂದ್ರಾಶ್ಚ ಬ್ರಾಹ್ಮಣಾಚಾರಾ ಭವಿಷ್ಯಂತಿ ಯುಗಕ್ಷಯೇ ॥ ೫ ॥

ಶ್ರೋತ್ರಿಯಾಃ ಕಾಂಡಪೃಷ್ಠಾಶ್ಚ ನಿಷ್ಕರ್ಮಾಣಿ ಹವೀಂಷಿ ಚ ।
ಏಕಪಂಕ್ತ್ಯಾಮಶಿಷ್ಯಂತಿ ಯುಗಾಂತೇ ಮುನಿಸತ್ತಮಾಃ ॥ ೬ ॥

---

೩. ಆ ಕಲಿಗಾಲವು ಬಹುಹೆದರಿಕೆಯನ್ನೂ ತಳಮಳವನ್ನೂ ಉಂಟು ಮಾಡುವಂಥದೆಂತಲೂ, ಧರ್ಮಗಳೆಲ್ಲಾ ಆಗ ಲೋಪಹೊಂದಿಬಿಡುವುವೆಂತಲೂ ಕೇಳಿರುವೆವು. ಅಂಥಹ ಕಲಿಗಾಲವು ಬಂದಿತೆನ್ನಲು ಕುರುಹುಗಳು ಯಾವುವು? ತಿಳಿಸಬೇಕು '' ಎಂದು ಪ್ರಶ್ನಿಸಿದರು.

೪. ಆಗ ವ್ಯಾಸನು ಹೇಳತೊಡಗಿದನು :—ಎಲೈ ಮುನಿಗಳಿರಾ! ಆ ಕಲಿಗಾಲದಲ್ಲಿ ರಾಜರಾದವರು, ಪ್ರಜೆಗಳನ್ನು ನ್ಯಾಯವಾದರೀತಿಯಲ್ಲಿ ಪರಿಪಾಲನೆಮಾಡದೆ ಇರುತ್ತಿದ್ದರೂ, ಕಪ್ಪಕಾಣಿಕೆಗಳನ್ನು ಮಾತ್ರ ಕಸಿದು ಕೊಳ್ಳುತ್ತಾ ಸ್ವಾರ್ಥಪರರಾಗಿ ತಂತಮ್ಮ ರಕ್ಷಣೆಯಲ್ಲಿಯೇ ತೊಡಗುವರು.

೫. ಆಗ ಕ್ಷತ್ರಿಯರಲ್ಲದವರೇ ಅರಸರಾಗುವರು. ಬ್ರಾಹ್ಮಣರೆನಿಸಿ ದವರು ಶೂದ್ರರ ಸೇವೆಯಿಂದ ತಮ್ಮ ಬದುಕನ್ನು ಸಾಗಿಸುವರು. ಮತ್ತು ಶೂದ್ರರು ಬ್ರಾಹ್ಮಣರಂತೆ ಆಚಾರವುಳ್ಳವರಾಗುವರು.

೬. ಸರ್ವದಾ ವೇದಪಾರಾಯಣಾದಿಗಳಲ್ಲಿ ತೊಡಗಿರುತ್ತಿದ್ದ ಬ್ರಾಹ್ಮಣರು ಆ ಅಂತಿಮ ಯುಗದಲ್ಲಿ ಬಿಲ್ಲು ಬತ್ತಳಿಕೆಗಳನ್ನು ತಮ್ಮ ಬೆನ್ನುಮೇಲೆ ಹೊತ್ತು ತಿರುಗುತ್ತಾ ಅವರ ಸಹಾಯದಿಂದಲೇ ಜೀವಿಸತೊಡಗುವರು. ಮತ್ತು ಹವಿಸ್ಸುಗಳಿಗೆ ಉಪಯೋಗವಿಲ್ಲವಾಗುವುದು. ಎಲ್ಲ ಜನರೂ ವರ್ಣಾದಿ ಭೇದ ವಿಲ್ಲದೆ ಒಂದೇ ಪಂಕ್ತಿಯಲ್ಲಿ ಕುಳಿತು ಊಟಮಾಡುವರು.

ಅಶಿಷ್ಟವಂತೋಽರ್ಥಪರಾ ನರಾ ಮದ್ಯಾಮಿಷಪ್ರಿಯಾಃ ।
ಮಿತ್ರಭಾರ್ಯಾಂ ಭಜಿಷ್ಯಂತಿ ಯುಗಾಂತೇ ಪುರುಷಾಧಮಾಃ ॥ ೭ ॥

ರಾಜವೃತ್ತಿಸ್ಥಿತಾಶ್ಚೌರಾ ರಾಜಾನಶ್ಚೌರಶೀಲಿನಃ ।
ಭೃತ್ಯಾ ಹ್ಯನಿರ್ದಿಷ್ಟಭುಜೋ ಭವಿಷ್ಯಂತಿ ಯುಗಕ್ಷಯೇ ॥ ೮ ॥

ಧನಾನಿ ಶ್ಲಾಘನೀಯಾನಿ ಸತಾಂ ವೃತ್ತಮಪೂಜಿತಂ ।
ಅಕುತ್ಸನಾ ಚ ಪತಿತೇ ಭವಿಷ್ಯತಿ ಯುಗಕ್ಷಯೇ ॥ ೯ ॥

ಪ್ರನಷ್ಟನಾಸಾಃ ಪುರುಷಾ ಮುಕ್ತಕೇಶಾ ವಿರೂಪಿಣಃ ।
ಊನಷೋಡಶವರ್ಷಾಶ್ಚ ಪ್ರಸೋಽಷ್ಯಂತಿ ತಥಾ ಸ್ತ್ರಿಯಃ ॥ ೧೦ ॥

---

೭. ಆ ಯುಗಾಂತದಲ್ಲಿ (ಕಲಿಯುಗದಲ್ಲಿ) ಮಾನವರು ಶಿಷ್ಟಾಚಾರಗಳನ್ನು ತೊರೆಯುವರು. ಹಣವೊಂದೇ ಅವರ ಜೀವನದ ಗುರಿಯಾಗುವುದು. ಮದ್ಯ ಮಾಂಸಗಳಲ್ಲಿ ಅವರಿಗೆ ಹೆಚ್ಚು ಪ್ರೀತಿಯು ಉಂಟಾಗುವುದು. ಆ ಪುರುಷಾಧಮರು ತಮ್ಮ ಮಿತ್ರನ ಭಾರ್ಯೆಯನ್ನೂ ಸಮಾಗಮ ಮಾಡಿಬಿಡುವರು.

೮. ಮತ್ತು ಆ ಕಲಿಯುಗದಲ್ಲಿ ಕಳ್ಳರು ರಾಜವೃತ್ತಿಯನ್ನು ಅವಲಂಬಿಸುವರು. ರಾಜರು ಕಳ್ಳರಂತೆ ಜೀವಿಸತೊಡಗುವರು. ಭೃತ್ಯರಾದವರು ತಮ್ಮ ಸ್ವಾಮಿಯ ಅಪ್ಪಣೆಯನ್ನು ಪಡೆಯದೆಯೇ ತಮಗೆ ಬೇಕಾದುದೆಲ್ಲವನ್ನೂ ತೆಗೆದುಕೊಂಡು ಅನುಭವಿಸುವರು.

೯. ಆ ಕಾಲದಲ್ಲಿ ಹಣವೊಂದಕ್ಕೆ ಬೆಲೆಕೊಡುವರು. ಸತ್ಪುರುಷಸಮ್ಮತವಾದ ಆಚಾರಗಳಿಗೆ ಮರ್ಯಾದೆಯಿಲ್ಲವಾಗುವುದು. ಪರಮ ಪತಿತನಾಗಿದ್ದವನನ್ನೂ ಕೂಡ ಯಾರೂ ನಿಂದೆಮಾಡಲಾರರು.

೧೦. ಆ ಕಲಿಯುಗದ ಪುರುಷರು ಮೂಗಿಲ್ಲದವರೂ, ಶಿಖಾಹೀನರೂ (ಕೂದಲನ್ನು ಗಂಟುಹಾಕಿಕೊಳ್ಳದೆ ಬಿಟ್ಟಿರುವವರೂ) ರೂಪರಹಿತರೂ (ವಿಕಾರ ರೂಪವುಳ್ಳವರೂ) ಆಗುವರು. ಹೆಂಗಸರು ಹದಿನಾರು ವರ್ಷಗಳಾಗುವ ಮೊದಲೇ ಮಕ್ಕಳನ್ನು ಹೆರತೊಡಗುವರು.

ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ।
ಪ್ರಮದಾಃ ಕೇಶಶೂಲಾಶ್ಚ ಭವಿಷ್ಯಂತಿ ಯುಗಕ್ಷಯೇ ॥ ೧೧ ॥

ಸರ್ವೇ ಬ್ರಹ್ಮ ವದಿಷ್ಯಂತಿ ದ್ವಿಜಾ ವಾಜಸನೇಯಿಕಾಃ
ಶೂದ್ರಾಭಾ ವಾದಿನಶ್ಚೈವ ಬ್ರಾಹ್ಮಣಾಶ್ಚಾಂತ್ಯವಾಸಿನಃ ॥ ೧೨ ॥

ಶುಕ್ಲದಂತಾ ಜಿತಾಕ್ಷಾಶ್ಚ ಮುಂಡಾಃ ಕಾಷಾಯವಾಸಸಃ ।
ಶೂದ್ರಾ ಧರ್ಮಂ ವದಿಷ್ಯಂತಿ ಶಾಕ್ಯಬುದ್ಧ್ಯೋಪಜೀವಿನಃ ॥ ೧೩ ॥

ಶ್ವಾಪದಪ್ರಚುರತ್ವಂ ಚ ಗವಾಂ ಚೈವ ಪರಿಕ್ಷಯಃ ।
ಸಾಧೂನಾಂ ಪರಿವೃತ್ತಿಶ್ಚ ವಿದ್ಯಾದಂತಗತೇ ಯುಗೇ ॥ ೧೪ ॥

---

೧೧. ಆಗ ದೇಶದಲ್ಲಿ ಎಲ್ಲಿ ನೋಡಿದರೂ, ಅನ್ನವನ್ನು ಮಾರಿಕೊಂಡು ಜೀವಿಸುವರೇ ಕಾಣಿಸುವರು. ಬ್ರಾಹ್ಮಣರು ವೇದವನ್ನು ಮಾರಿಕೊಂಡು ಬದುಕನ್ನು ನೂಕುವರು. ಸ್ತ್ರೀಯರು ತಮ್ಮ ಸ್ತ್ರೀತ್ವವನ್ನೇ ಮಾರಾಟಕ್ಕಿಟ್ಟು ಅದರಿಂದ ಬದುಕುವರು.

೧೨. ಯಾರನ್ನು ನೋಡಲಿ ಅವರು ಬ್ರಹ್ಮವಿಷಯವಾಗಿ ಮಾತನಾಡುವರು (ಅಥವಾ ವೇದವನ್ನು ಪಠಿಸುವರು) ವಾಜಸನೇಯಾದಿ ಶ್ರುತಿಪಾಠನಿರತರಾದ ಬ್ರಾಹ್ಮಣರು ಶೂದ್ರರಂತೆ ವರ್ತಿಸುತ್ತಾ ಪರಸ್ಪರವಾಗಿ ತಮ್ಮ ತಮ್ಮಲ್ಲೇ ಕಚ್ಚಾಡುತ್ತಾ ಬಹು ನಿಕೃಷ್ಟವಾದ ರೀತಿಯಲ್ಲಿ ವಾಸಮಾಡ ತೊಡಗುವರು.

೧೩. ಆ ಕಲಿಕಾಲದಲ್ಲಿ ಶೂದ್ರರೆನಿಸಿದವರು ಧೂರ್ತತನವನ್ನವಲಂಬಿಸಿ ತಲೆಯನ್ನು ಬೋಳಿಸಿಕೊಂಡು, ಕಾಷಾಯವಸ್ತ್ರವನ್ನು ಧರಿಸಿ ಇಂದ್ರಿಯಗಳನ್ನು ನಿಗ್ರಹಿಸಿ ಬೆಳ್ಳಗೆ ಹಲ್ಲುಗಳು ಕಾಣುವಂತೆ ಮಾತಾಡುತ್ತಾ ಧರ್ಮವನ್ನು ಉಪದೇಶಿಸುವರು.

೧೪. ಆಗ ಎಲ್ಲಿ ನೋಡಿದರೂ ದುಷ್ಟಮೃಗಗಳು ಹೆಚ್ಚತೊಡಗುವುವು. ಹಸುಗಳು ಕ್ಷೀಣವಾಗತೊಡಗುವುವು. ಸಾಧುಗಳೆನಿಸಿಕೊಂಡಿದ್ದವರೂ ಸಹ ತಮ್ಮತಮ್ಮ ವೃತ್ತಿಯಲ್ಲಿ (ನಡವಳಿಕೆ) ಬದಲಾವಣೆಯನ್ನು ಹೊಂದ ತೊಡಗುವರು.

ಅಂತ್ಯಾ ಮಧ್ಯೇ ನಿವತ್ಸ್ಯಂತಿ ಮಧ್ಯಾಶ್ಚಾಂತನಿವಾಸಿನಃ ।
ನಿರ್ಹ್ರೀಕಾಶ್ಚ ಪ್ರಜಾಃ ಸರ್ವಾ ನಷ್ಟಾಸ್ತತ್ರ ಯುಗಕ್ಷಯೇ ॥ ೧೫ ॥

ತಪೋಯಜ್ಞಫಲಾನಾಂ ಚ ವಿಕ್ರೇತಾರೋ ದ್ವಿಜೋತ್ತಮಾಃ ।
ಋತವೋ ವಿಪರೀತಾಶ್ಚ ಭವಿಷ್ಯಂತಿ ಯುಗಕ್ಷಯೇ ॥ ೧೬ ॥

ತಥಾ ದ್ವಿಹಾಯನಾ ದಮ್ಯಾಃ ಕಲೌ ಲಾಂಗಲಧಾರಿಣಃ ।
ಚಿತ್ರವರ್ಷೀ ಚ ಪರ್ಜನ್ಯೋ ಯುಗೇ ಕ್ಷೀಣೇ ಭವಿಷ್ಯತಿ ॥ ೧೭ ॥

ಸರ್ವೇ ಶೂರಕುಲೇ ಜಾತಾಃ ಕ್ಷಮಾನಾಥಾ ಭವಂತಿ ಹಿ ।
ಯಥಾ ನಿಮ್ನಾಃ ಪ್ರಜಾಃ ಸರ್ವಾ ಭವಿಷ್ಯಂತಿ ಯುಗಕ್ಷಯೇ ॥ ೧೮ ॥

---

೧೫. ಆ ಕೊನೆಯ ಯುಗದಲ್ಲಿ ಯಾರು ಅಂತ್ಯಜರೆನಿಸಿರುವರೋ (ಅತಿ ತುಚ್ಛರು) ಅವರು ಮಧ್ಯಮವರ್ಗದ ಜನರು ವಾಸಮಾಡುವ ಕಡೆ ವಾಸಿಸಲಾರಂಬಿಸುವರು. ಆ ಮಧ್ಯಮವರ್ಗದವರು ಅಂತ್ಯಜನರು ವಾಸಿಸುವಕಡೆ ಹೋಗಿ ನೆಲೆಸಲಾರಂಭಿಸುವರು. ಆಗಿನ ಪ್ರಜೆಗಳೆಲ್ಲರೂ ನಾಚಿಕೆಯನ್ನು ಬಿಟ್ಟವರಾಗಿ ತಮ್ಮ ನಾಶಕ್ಕೆ ತಾವೇ ದಾರಿಮಾಡಿಕೊಳ್ಳುವರು

೧೬. ಆಗ ದ್ವಿಜಶ್ರೇಷ್ಠರೆನಿಸಿದವರು ಹಣದಾಸೆಗೆ ಸಿಕ್ಕಿಬಿದ್ದು ತಪಃ ಫಲವನ್ನೂ ಯಜ್ಞಫಲವನ್ನೂ ಮಾರಿಕೊಳ್ಳುವರು. ಋತುಗಳೂ ಸಹ ತಮ್ಮ ತಮ್ಮ ಧರ್ಮಗಳನ್ನು ಬಿಟ್ಟು ವ್ಯತ್ಯಾಸ ಹೊಂದುತ್ತಾ ಬರುವುವು.

೧೭. ಆ ಕಲಿಯುಗದಲ್ಲಿ ಎರಡುವರ್ಷದ ಕರುಗಳನ್ನು ನೇಗಲಿಗೆ ಕಟ್ಟಿ ಉಳತೊಡಗುವರು. ಮಳೆಯೂ ಸಹ ಕಾಲಕಾಲಕ್ಕೆ ಸರಿಯಾಗಿ ಬಾರದೆ ವಿಚಿತ್ರವಾಗಿ ಹುಯ್ಯತೊಡಗುವುದು.

೧೮. ಶೂರರಾದವರ ವಂಶದಲ್ಲಿ ಹುಟ್ಟಿದವರೆನಿಸಿಕೊಂಡವರೆಲ್ಲರೂ ಆಯಾ ಭೂಭಾಗಕ್ಕೆ ಒಡೆಯರೆನಿಸಿ ಆಳತೊಡಗುವರು. ಹೀಗಾಗಿ ಪ್ರಜೆಗಳು ಬಹುವಾಗಿ ಕಿರುಕುಳಕ್ಕೆ ಸಿಕ್ಕಿ (ಸರ್ವಾಂಶದಲ್ಲಿಯೂ) ಕೆಳಮಟ್ಟಕ್ಕೆ ಇಳಿಯತೊಡಗುವರು.

ಪಿತೃದೇಯಾನಿ ದತ್ತಾನಿ ಭವಿಷ್ಯಂತಿ ತಥಾ ಸುತಾಃ ।
ನ ಚ ಧರ್ಮಂ ಚರಿಷ್ಯಂತಿ ಮಾನವಾ ನಿರ್ಗತೇ ಯುಗೇ ॥ ೧೯ ॥

ಊಷರಾ ಬಹುಲಾ ಭೂಮಿಃ ಪಂಥಾನಸ್ತಸ್ಕರಾವೃತಾಃ ।
ಸರ್ವೇ........ವಾಣಿಕಾಶ್ಚೈವ ಭವಿಷ್ಯಂತಿ ಯುಗಕ್ಷಯೇ ॥ ೨೦ ॥

ಪಿತೃದಾಯಾದದತ್ತಾನಿ ವಿಭಜಂತಿ ತಥಾ ಸುತಾಃ ।
ಹರಣೇ ಯತ್ನವಂತೋಽಪಿ ಲೋಭಾದಿಭಿರ್ವಿರೋಧಿನಃ ॥ ೨೧ ॥

ಸೌಕುಮಾರ್ಯೇ ತಥಾ ರೂಪೇ ರತ್ನೇ ಚೋಪಕ್ಷಯಂ ಗತೇ ।
ಭವಿಷ್ಯಂತಿ ಯುಗಸ್ಯಾಂತೇ ನಾರ್ಯಃ ಕೇಶೈರಲಂಕೃತಾಃ ॥ ೨೨ ॥

---

೧೯. ಮಕ್ಕಳಾದವರು ಪಿತೃಗಳಿಗೆ ಸಲ್ಲಿಸಬೇಕಾದ ಶ್ರಾದ್ಧಾದಿಗಳನ್ನು ಮಾಡದೆಯೇ ಅವನ್ನು ಮಾಡಿಯಾಯಿತೆಂದು ಹೇಳತೊಡಗುವರು. ಆ ಕಲಿ ಯುಗದ ಮಾನವರು ಧರ್ಮವನ್ನು ಆಚರಿಸದೆಯೇ ಇದ್ದುಬಿಡುವರು.

೨೦. ಆ ಯುಗಕ್ಷಯದಲ್ಲಿ (ಕಲಿ) ಭೂಮಿಯೆಲ್ಲವೂ ಊಷರ ಕ್ಷೇತ್ರ (ಚೌಳು ನೆಲ) ವಾಗುವುದು. ದಾರಿಯಲ್ಲೆಲ್ಲಾ ಕಳ್ಳಕಾಕರರ ಭೀತಿಯು ಹೆಚ್ಚಾಗುವುದು. ಯಾರನ್ನು ನೋಡಲಿ ಸುಳ್ಳಾಡುವರೇ ಹೆಚ್ಚಿಗೆ ಸಿಗುವರು.

೨೧. ತಮ್ಮ ತಂದೆಗಾಗಲಿ ಅಥವಾ ಜ್ಞಾತಿಗಳಿಗಾಗಲಿ ಸೇರಿರುವ ವಸ್ತುಗಳನ್ನು ಮಕ್ಕಳೆನಿಸಿದವರು ಲೋಭಕ್ಕೊಳಗಾಗಿ ಪರಸ್ಪರವಾಗಿ ವೈರವನ್ನು ತಾಳುತ್ತಾ ಒಬ್ಬರಿಗೊಬ್ಬರು ಕಾಣದಂತೆ ಅಪಹರಿಸಲು ಯತ್ನಿಸುತ್ತಾ ವಿಭಾಗಿಸಿ ಕೊಳ್ಳುವರು.

೨೨. ಮತ್ತು ಸೌಕುಮಾರ್ಯವೂ, ರೂಪವೂ, ರತ್ನಾದ್ಯಾಭರಣಗಳೂ ಇಲ್ಲದಿದ್ದರೂ, ಆಕಾಲದಲ್ಲಿ ಸ್ತ್ರೀಯರು ತಮ್ಮ ಸ್ತ್ರೀಚಿಹ್ನೆಪೊಂದರಿಂದಲೇ ಅಂದಗಾತಿಯರೆನಿಸುವರು. (ಪುರುಷರನ್ನು ಆಕರ್ಷಿಸುವರು.)

ನಿರ್ವೀರ್ಯಸ್ಯ ರತಿಸ್ತತ್ರ ಗೃಹಸ್ಥಸ್ಯ ಭವಿಷ್ಯತಿ ।
ಯುಗಾಂತೇ ಸಮನುಪ್ರಾಪ್ತೇ ನಾನ್ಯಾ ಭಾರ್ಯಾಸಮಾ ರತಿಃ ॥ ೨೩ ॥

ಕುಶೀಲಾನಾರ್ಯಭೂಯಿಷ್ಠಾ ವೃಥಾರೂಪಸಮನ್ವಿತಾಃ ।
ಪುರುಷಾಲ್ಪಂ ಬಹುಸ್ತ್ರೀಕಂ ತದ್ಯುಗಾಂತಸ್ಯ ಲಕ್ಷಣಂ ॥ ೨೪ ॥

ಬಹುಯಾಚನಕೋ ಲೋಕೋ ನ ದಾಸ್ಯತಿ ಪರಸ್ಪರಂ ।
ರಾಜಚೌರಾಗ್ನಿದಂಡಾದಿಕ್ಷೀಣಃ ಕ್ಷಯಮುಪೈಷ್ಯತಿ ॥ ೨೫ ॥

ಅಫಲಾನಿ ಚ ಸಸ್ಯಾನಿ ತರುಣಾ ವೃದ್ಧಶೀಲಿನಃ ।
ಅಶೀಲಾಃ ಸುಖಿನೋ ಲೋಕೇ ಭವಿಷ್ಯಂತಿ ಯುಗಕ್ಷಯೇ ॥ ೨೬ ॥

---

೨೩. ಗೃಹಸ್ಥನಾದವನು ನಿರ್ವೀರ್ಯನಾಗತೊಡಗುವನು. ಆದುದರಿಂದಲೇ ಸುರತಾದಿಗಳಲ್ಲಿ ಅಸಮರ್ಥನಾದ ಆತನು (ತನ್ನ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳುವುದಕ್ಕಾಗಿ) ಏಕಪತ್ನೀವ್ರತಸ್ಥನೆಂಬುದಾಗಿ ಹೇಳಿಕೊಳ್ಳುತ್ತಾ ಕೈಹಿಡಿದ ಭಾರ್ಯೆಯ ಸಮಾಗಮವನ್ನೇ ಮಾಡಬೇಕೆಂದು ಪ್ರಶಂಸಿಸುವನು.

೨೪. ಆ ಯುಗಾಂತವೊದಗಿತೆನ್ನಲು ಮತ್ತು ಒಂದು ಗುರುತನ್ನು ಹೇಳುವೆನು. ಆಗ ಎಲ್ಲೆಲ್ಲಿ ನೋಡಿದರೂ ದುಷ್ಟವಾದ ಆಚಾರಗಳಲ್ಲೇ ನಿರತರೂ ಅನಾರ್ಯರೂ ಆದವರೇ ಕಾಣಬರುವರು. ಅವರು ಎಷ್ಟೇ ರೂಪವಂತರಾಗಿದ್ದರೂ ಅವರ ಶೀಲಭ್ರಷ್ಟತೆಯಿಂದ ಆ ರೂಪವು ವ್ಯರ್ಥವೆನಿಸುವುದು. ಆಗ ಪುರುಷರು ಬರಬರುತ್ತಾ ಕಮ್ಮಿಯಾಗತೊಡಗುವರು. ಸ್ತ್ರೀಯರು ಹೆಚ್ಚುತ್ತಾ ಬರುವರು.

೨೫. ಯಾರನ್ನು ನೋಡಲಿ, ಪ್ರತಿಯೊಬ್ಬನೂ ಬೇಡುವವನೇ ಹೊರತು ತಾನುಮಾತ್ರ ತನ್ನನ್ನು ಬೇಡುವವನಿಗೆ ಏನನ್ನೂ ಕೊಡಲಾರನು. ಹೀಗೆ ಅವನು ಸಂಪಾದಿಸಿದ ದ್ರವ್ಯವೂ ಸಹ ರಾಜದಂಡನೆಯಿಂದಾಗಲೀ, ಕಳ್ಳಕಾಕರಿಂದಾಗಲೀ, ಬೆಂಕಿ ಮೊದಲಾದ ಆಕಸ್ಮಿಕ ಅಪಾಯಗಳಿಂದಾಗಲೀ ಕರಗುತ್ತಾ ಬಂದು ಕೊನೆಗೆ ಸಂಪೂರ್ಣವಾಗಿ ನಾಶವಾಗುವುದು.

೨೬. ಆಗ ಬೆಳೆದ ಬೆಳಸೆಲ್ಲವೂ ಫಲವನ್ನೇ ಬಿಡಲಾರದು. ಯುವಕರೆನಿಸಿದವರೂ ಸಹ ವೃದ್ಧರಂತೆ ದುರ್ಬಲರಾಗುವರು. ಆಗಿನ ಜನರು ಯಾರೂ ಯಾವೊಂದು ಶೀಲವನ್ನೂ ಅವಲಂಬಿಸದೆ ಐಹಿಕಭೋಗಗಳಲ್ಲಿಯೇ ಮುಳುಗಿ ಹೋಗಿರುವರು.

ವರ್ಷಾಸು ಪುರುಷಾ ವಾತಾ ನೀಚಾಃ ಶರ್ಕರವರ್ಷಿಣಃ ।
ಸಂದಿಗ್ಧಃ ಪರಲೋಕಶ್ಚ ಭವಿಷ್ಯತಿ ಯುಗಕ್ಷಯೇ ॥ ೨೭ ॥

ವೈಶ್ಯಾ ಇವ ಚ ರಾಜನ್ಯಾ ಧನಧಾನ್ಯೋಪಜೀವಿನಃ ।
ಯುಗಾಪಕ್ರಮಣೇ ಪೂರ್ವಂ ಭವಿಷ್ಯಂತಿ ನ ಬಾಂಧವಾಃ ॥ ೨೮ ॥

ಅಪ್ರವೃತ್ತಾಃ ಪ್ರಪಶ್ಯಂತಿ ಸಮಯಾಃ ಶಪಥಾಸ್ತಥಾ ।
ಋಣಂ ಸವಿನಯಭ್ರಂಶಂ ಯುಗೇ ಕ್ಷೀಣೇ ಭವಿಷ್ಯತಿ ॥ ೨೯ ॥

ಭವಿಷ್ಯತ್ಯಫಲೋ ಹರ್ಷಃ ಕ್ರೋಧಶ್ಚ ಸಫಲೋ ನೃಣಾಂ ।
ಅಜಾಶ್ಚಾಪಿ ನಿರೋತ್ಸ್ಯಂತಿ ಪಯಸೋಽರ್ಥೇ ಯುಗಕ್ಷಯೇ ॥ ೩೦ ॥

---

೨೭. ಮಳೆಗಾಲದಲ್ಲಿ ತೀವ್ರವಾಗಿ ಗಾಳಿಯೆದ್ದು ಮರಳನ್ನು ಎರಚುತ್ತಾ ಕರ್ಕಶವಾಗಿ ಬೀಸತೊಡಗುವುದು. ಆ ಯುಗಕ್ಷಯ (ಕಲಿಗಾಲ) ದಲ್ಲಿ ಪರಲೋಕದ ವಿಷಯವಾಗಿ ಸಂದೇಹವು ಹೆಚ್ಚಾಗುವುದು.

೨೮. ರಾಜವಂಶೀಯರು ವೈಶ್ಯರಂತೆ ಲೇವಾದೇವಿ, ವ್ಯಾಪಾರಸಾಪಾರಗಳಿಂದ ತಮ್ಮ ಜೀವನವನ್ನು ನಿರ್ವಹಿಸುವರು. ಆಗ (ಕಲಿಗಾಲದಲ್ಲಿ) ಬಂಧುಬಾಂಧವರೆಂಬುವರು ಇದ್ದೂ ಇಲ್ಲದಂತಾಗುವರು. (ಬಾಂಧವರೆಂಬ ಮಮತೆಯು ತಪ್ಪಿಹೋಗುವುದು).

೨೯. ಮತ್ತು ಮಾಡಿದ ಪ್ರತಿಜ್ಞೆಗಳೂ, ಕೊಟ್ಟಿರತಕ್ಕ ಗಡುವೂ ಸಹ ಆ ಕಲಿಗಾಲದಲ್ಲಿ ನಡೆಯದೆಯೇ (ಆಚರಣೆಗೆ ಬಾರದೆಯೇ) ಹಾಳಾಗುವುವು. ಮಾಡಿದ ಸಾಲವು ತೀರಬೇಕೆಂಬ ನಿಯಮವೇ ಇಲ್ಲವಾಗುವುದು.

೩೦. ಆಕಾಲದ ಮನುಜರಿಗೆ ಉಂಟಾಗತಕ್ಕ ಸಂತೋಷಕ್ಕೆ ಪ್ರತಿಫಲವಾವುದೂ ಇಲ್ಲದಿದ್ದರೂ ಕೋಪಕ್ಕೆ ಮಾತ್ರ ಪ್ರತಿಫಲವು ಒಡನೆಯೇ ದೊರೆಯುವುದು. ಸ್ವಲ್ಪಕೋಪಬಂದರೂ ಮಾನವನು ಹಿಂಸಾಕೃತ್ಯಗಳಿಗೆ ಕೈಹಾಕುವನು. ಯಾವನಿಂದಾದರೂ ತನ್ನ ಕೆಲಸವು ನೆರವೇರಿದರೆ ತನಗೆ ಸಂತೋಷವೇ ಆದರೂ ಅದರಿಂದ ಕೆಲಸಮಾಡಿಕೊಟ್ಟವನಿಗೆ ಕಾಸಿನಷ್ಟು ಉಪಕಾರವನ್ನೂ ಮಾಡಲಾರನು. ಆಗ ಹಾಲಿಗಾಗಿ ಆಡುಗಳನ್ನು ಕಟ್ಟಿಪೋಷಿಸುವರು.

ಅಶಾಸ್ತ್ರವಿಹಿತೋ ಯಜ್ಞ ಏವಮೇವ ಭವಿಷ್ಯತಿ ।
ಅಪ್ರಮಾಣಂ ಕರಿಷ್ಯಂತಿ ನರಾಃ ಪಂಡಿತಮಾನಿನಃ ॥ ೩೧ ॥

ಶಾಸ್ತ್ರೋಕ್ತಸ್ಯಾಪ್ರವಕ್ತಾರೋ ಭವಿಷ್ಯಂತಿ ನ ಸಂಶಯಃ ।
ಸರ್ವಃ ಸರ್ವಂ ವಿಜಾನಾತಿ ವೃದ್ಧಾನನುಪಸೇವ್ಯ ವೈ ॥ ೩೨ ॥

ನ ಕಶ್ಚಿದಕವಿರ್ನಾಮ ಯುಗಾಂತೇ ಸಮುಪಸ್ಥಿತೇ ।
ನಕ್ಷತ್ರಾಣಿ ವಿಯೋಗಾನಿ ನ ಕರ್ಮಸ್ಥಾ ದ್ವಿಜಾತಯಃ ॥ ೩೩ ॥

ಚೌರಪ್ರಾಯಾಶ್ಚ ರಾಜಾನೋ ಯುಗಾಂತೇ ಸಮುಪಸ್ಥಿತೇ ।
ಕುಂಡೀವೃಷಾ ನೈಕೃತಿಕಾಃ ಸುರಾಪಾ ಬ್ರಹ್ಮವಾದಿನಃ ॥ ೩೪ ॥

---

೩೧. ಮತ್ತು ಆ ಕಾಲದಲ್ಲಿ ಶಾಸ್ತ್ರಗಳಲ್ಲಿ ಉಕ್ತವಾಗದಿರುವ ರೀತಿಯಲ್ಲೇ ಯಜ್ಞಯಾಗಾದಿಗಳು ನಡೆಯುವುವು. ಆಗ ತಾವೇ ಎಲ್ಲವನ್ನೂ ಬಲ್ಲವರೆಂಬ ವೃಥಾಭಿಮಾನಕ್ಕೆ ಒಳಗಾದ ಮಾನವರು, ಶಾಸ್ತ್ರಾದಿಗಳನ್ನು ಪ್ರಮಾಣವನ್ನಾಗಿ ಪರಿಗಣಿಸದೆ ತಮ್ಮ ಮನಸ್ಸಿಗೆ ತೋರಿದಂತೆ ಸಕಲಕಾರ್ಯಗಳನ್ನೂ ನಡೆಸುವರು.

೩೨. ಆ ಕಲಿಕಾಲದಲ್ಲಿ ಶಾಸ್ತ್ರಾರ್ಥವನ್ನು ಸರಿಯಾಗಿ ತಿಳಿದು ಹೇಳುವವನು ಯಾವನೂ ಇಲ್ಲದೆ ಹೋಗುವನು. ಆಗ ಪ್ರತಿಯೊಬ್ಬ ಮಾನವನೂ ಸಹ ಹಿರಿಯರ ಬಳಿ ಓಡಾಡಿ ಅನುಭವವನ್ನು ಪಡೆಯದೆಯೇ ಇದ್ದರೂ ತಾನೇ ಸರ್ವಜ್ಞನೆಂದು ಮೆರೆಯುವನು.

೩೩. ಆ ಯುಗಾಂತವು ಸನ್ನಿಹಿತವಾದಾಗ ಕವಿಯಾಗದಿರುವ ಮಾನವನು ಯಾವನೂ ದೊರೆಯಲಾರನು. (ಪ್ರತಿಯೊಬ್ಬನೂ ಕವಿಯೇ) ಆಗ ದ್ವಿಜರೆನಿಸಿದವರೂ ಸಹ ನಕ್ಷತ್ರಗಳನ್ನೂ ಯೋಗಗಳನ್ನೂ ಲಕ್ಷ್ಯಮಾಡಲಾರರು. ಕರ್ಮಗಳನ್ನಂತೂ ತೊರೆದೇಬಿಡುವರು.

೩೪. ಆಗ ರಾಜರೆನಿಸಿದವರೂ ಸಹ ವೇಷದಲ್ಲಿಯೂ ಪದವಿಯಲ್ಲಿಯೂ ರಾಜರಂತಿರುವರೇ ವಿನಾ ಕೃತ್ಯದಲ್ಲಿ ಮಾತ್ರ ಕಳ್ಳರೇ ಆಗಿರುವರು. ಮತ್ತು ಚಾರಿತ್ರಭ್ರಷ್ಟರೂ ಕೊರಮರೂ ಮದ್ಯಪಾಯಿಗಳೂ ಆದವರು ಬ್ರಹ್ಮವಾದಿಗಳೆನಿಸುವರು (ಬಾಯಿಂದ ಬರಿಯ ವೇದಾಂತವನ್ನೇ ಆಡುವರು.)

ಅಶ್ವಮೇಧೇನ ಯಕ್ಷ್ಯಂತೇ ಯುಗಾಂತೇ ದ್ವಿಜಸತ್ತಮಾಃ ।
ಯಾಜಯಿಷ್ಯಂತ್ಯಯಾಜ್ಯಾಂಸ್ತು ತಥಾಭಕ್ಷ್ಯಸ್ಯ ಭಕ್ಷಿಣಃ ॥ ೩೫ ॥

ಬ್ರಾಹ್ಮಣಾ ಧನತೃಷ್ಣಾರ್ತಾ ಯುಗಾಂತೇ ಸಮುಪಸ್ಥಿತೇ ।
ಭೋಃಶಬ್ದಮಭಿಧಾಸ್ಯಂತಿ ನ ಚ ಕಶ್ಚಿತ್ಪಠಿಷ್ಯತಿ ॥ ೩೬ ॥

ಏಕಶಂಖಾಸ್ತಥಾ ನಾರ್ಯೋ ಗವೇಧುಕಪಿನದ್ಧಕಾಃ ।
ನಕ್ಷತ್ರಾಣಿ ವಿವರ್ಣಾನಿ ವಿಪರೀತಾ ದಿಶೋ ದಶ ॥ ೩೭ ॥

ಸಂಧ್ಯಾರಾಗೋ ವಿದಗ್ಧಾಂಗೋ ಭವಿಷ್ಯತಿ ಯುಗಕ್ಷಯೇ ।
ಪ್ರೇಷಯಂತಿ ಪಿತೄನ್ಪುತ್ರಾ ವಧೂಃ ಶ್ವಶ್ರೂಃ ಸ್ವಕರ್ಮಸು ॥ ೩೮ ॥

---

೩೫. ಆ ಕಲಿಗಾಲದಲ್ಲಿ ಬ್ರಾಹ್ಮಣರು ಅಶ್ವಮೇಧಯಾಗಮಾಡಲು ಹವಣಿಸುವರು ಮತ್ತು ಯಜ್ಞಯಾಗಾದಿಗಳಿಗೆ ಅನರ್ಹರಾದವರ ಕೈಯಿಂದಲೇ ಯಾಗಗಳನ್ನು ಮಾಡಿಸತೊಡಗುವರು, ಮತ್ತು ನಿಷಿದ್ಧವಾದ ವಸ್ತುಗಳನ್ನೇ ಭುಜಿಸತೊಡಗುವರು.

೩೬. ಆ ಕೊನೆಯ ಯುಗವು ಆರಂಭವಾಗುತ್ತಲೇ ಬ್ರಾಹ್ಮಣರೆನಿಸಿ ಪವರೂ ಸಹ ಹಣದಾಸೆಗೆ ಬಲಿಬಿದ್ದು ಅತಿನಿಹೀನರಾದವರನ್ನೂ 'ಭೋ' ಎಂದು ಮುಂತಾದ ಗೌರವವಾಕ್ಯಗಳಿಂದ ಸಂಬೋಧಿಸುವರು. ಯಾವನೂ ಕೂಡ ಜ್ಞಾನಸಾಧನೆಗಾಗಿ ಶಾಸ್ತ್ರಾದಿಗಳನ್ನು ಪಠಿಸಲಾರನು.

೩೭. ಆ ಕಾಲದ ಹೆಂಗಸರು ಏಕಶಂಖರಾಗಿಯೂ ಗವೇಧುಕಗಳನ್ನು ಕಟ್ಟಿಕೊಂಡವರಾಗಿಯೂ ಇರತೊಡಗುವರು. ನಕ್ಷತ್ರಗಳೂ ಕಾಂತಿಹೀನವಾಗ ತೊಡಗುವವು. ಪೂರ್ವಾದಿದಶದಿಕ್ಕುಗಳೂ ವೈಪರೀತ್ಯವನ್ನು ಹೊಂದುವುವು.

೩೮. ಆಗ ಸಂಜೆಯ ಕೆಂಪುಬಣ್ಣವೂ ಮಲಿನವಾಗ ತೊಡಗುವುದು. ಪುತ್ರನಾದವನು ತನ್ನ ತಂದೆಯನ್ನು ಕೆಲಸಮಾಡುವಂತೆ ಆಜ್ಞೆಮಾಡತೊಡಗುವನು. ಸೊಸೆಯಾದವಳು ತನ್ನ ಅತ್ತೆಯನ್ನು ಕೆಲಸಕಾರ್ಯಗಳಲ್ಲಿ ನೇಮಿಸಿ ಅವಳಿಂದ ಕೆಲಸತೆಗೆಯುವಳು.

ಯುಗೇಷ್ವೇವಂ ನಿವತ್ಸ್ಯಂತಿ ಪ್ರಮದಾಶ್ಚ ನರಾಸ್ತಥಾ ।
ಅಕೃತ್ವಾಗ್ರಾಣಿ ಭೋಕ್ಷ್ಯಂತಿ ದ್ವಿಜಾಶ್ಚೈವಾಹುತಾಗ್ನಯಃ　　॥ ೩೯ ॥

ಭಿಕ್ಷಾಂ ಬಲಿಮದತ್ತ್ವಾ ಚ ಭೋಕ್ಷ್ಯಂತಿ ಪುರುಷಾಃ ಸ್ವಯಂ ।
ವಂಚಯಿತ್ವಾ ಪತೀನ್ಸುಪ್ತಾನ್ಗಮಿಷ್ಯಂತಿ ಸ್ತ್ರಿಯೋಽನ್ಯತಃ　　॥ ೪೦ ॥

ನ ವ್ಯಾಧಿತಾನ್ನಾಪ್ಯರೂಪಾನ್ನೋದ್ಯತಾನ್ನಾಪ್ಯಸೂಯಕಾನ್ ।
ಕೃತೇ ನ ಪ್ರತಿಕರ್ತಾ ಚ ಯುಗೇ ಕ್ಷೀಣೇ ಭವಿಷ್ಯತಿ　　॥ ೪೧ ॥

---

೩೯. ಎಲೈ ಮುನಿಗಳಿರಾ! ಈರೀತಿಯಾಗಿ ಆ ಕಲಿಯುಗದಲ್ಲಿ ಹೆಂಗುಸರೂ ಗಂಡಸರೂ ನಡೆಯುತ್ತಾ ಬರುವರು. ಆಗ ದ್ವಿಜರೆನಿಸಿದವರು ಸಹ ತಮಗೆ ವಿಹಿತವಾದ ಅಗ್ನ್ಯುಪಾಸನೆಯನ್ನು ತೊರೆದು ಆಗ್ರಯಣವೆಂಬ ಹೋಮವನ್ನು ಮಾಡದೆಯೇ (ಹೊಸದಾಗಿ ಧಾನ್ಯವು ಮನೆಗೆ ಬಂದಾಗ ಪ್ರಪ್ರಥಮವಾಗಿ ಆ ಧಾನ್ಯದಿಂದ ಹವಿಸ್ಸನ್ನು ಸಿದ್ಧಗೊಳಿಸಿ ದೇವತೆಗಳಿಗೆ ಅದನ್ನು ನಿವೇದಿಸತಕ್ಕ ಧಾನ್ಯಶುದ್ಧಿಕರ್ಮ) ಹೊಸದಾಗಿ ಬಂದ ದವಸಧಾನ್ಯಗಳನ್ನು ಭುಜಿಸತೊಡಗುವರು.

೪೦. ಆ ಕಲಿಕಾಲದಲ್ಲಿ ಪುರುಷರು (ಬೇಡುವವರಿಗೆ) ಭಿಕ್ಷವನ್ನೂ ಪ್ರಾಣಿಗಳಿಗೆ ಬಲಿಯನ್ನೂ ಕೊಡದೆಯೂ ತಾವು ಊಟಮಾಡುವರು ಮತ್ತು ಸ್ತ್ರೀಯರು ತಮ್ಮ ಪತಿಗಳು ಮಲುಗುವುದನ್ನೇ ಕಾದಿದ್ದು ಅನಂತರ ಅವರನ್ನು ವಂಚಿಸಿ ಪರಪುರುಷರೊಡನೆ ವಿಹರಿಸತೊಡಗುವರು.

೪೧. ಆ ಗಂಡಂದಿರೆನಿಸಿದವರು ಎಷ್ಟೇ ಆರೋಗ್ಯಶಾಲಿಗಳಾಗಿರಲಿ, ಎಷ್ಟೇ ರೂಪವಂತರಾಗಿರಲಿ ಎಷ್ಟೇ ಕಾರ್ಯಾಂತರಗಳಿದ್ದರೂ ಆದನ್ನು ಬಿಟ್ಟು ತಮ್ಮ ಪ್ರೀತಿಯನ್ನೇ ಬಯಸುವವರಾಗಿರಲಿ, ಎಷ್ಟೇ ಅಸೂಯಾರಹಿತರಾಗಲಿ, ಅವ್ಯೊಂದೂ ಆ ಪರಪುರುಷಲಂಪಟರಾದ ಸ್ತ್ರೀಯರಿಗೆ ಬೇಕಾಗುವುದಿಲ್ಲ ಮತ್ತು ಆ ಕಲಿಕಾಲದಲ್ಲಿ ಯಾವ ಮಾನವನೂ ಕೂಡ ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲಾರನು ಎಂದನು.

॥ ಮುನಯ ಊಚುಃ ॥

ಏವಂ ವಿಲಂಬಿತೇ ಧರ್ಮೇ ಮಾನುಷಾಃ ಕರಪೀಡಿತಾಃ ।
ಕುತ್ರ ದೇಶೇ ನಿವತ್ಸ್ಯಂತಿ ಕಿಮಾಹಾರವಿಹಾರಿಣಃ ॥ ೪೨ ॥

ಕಿಂಕರ್ಮಾಣಃ ಕಿಮೀಹಂತಃ ಕಿಂಪ್ರಮಾಣಾಃ ಕಿಮಾಯುಷಃ ।
ಕಾಂ ಚ ಕಾಷ್ಠಾಂ ಸಮಾಸಾದ್ಯ ಪ್ರಪತ್ಸ್ಯಂತಿ ಕೃತಂ ಯುಗಂ ॥ ೪೩ ॥

॥ ವ್ಯಾಸ ಉವಾಚ ॥

ಅತ ಊರ್ಧ್ವಂ ಚ್ಯುತೇ ಧರ್ಮೇ ಗುಣಹೀನಾಃ ಪ್ರಜಾಸ್ತಥಾ ।
ಶೀಲವ್ಯಸನಮಾಸಾದ್ಯ ಪ್ರಾಪ್ಸ್ಯಂತಿ ಹ್ರಾಸಮಾಯುಷಃ ॥ ೪೪ ॥

ಆಯುರ್ಹಾನ್ಯಾವಲಗ್ಲಾನಿರ್ವಲಗ್ಲಾನ್ಯಾ ವಿವರ್ಣತಾ ।
ವೈವರ್ಣ್ಯಾದ್ವ್ಯಾಧಿಸಂಪೀಡಾ ನಿರ್ವೇದೋ ವ್ಯಾಧಿಪೀಡನಾತ್ ॥ ೪೫ ॥

೪೨-೪೩. ಆಗ ಆ ಮುನಿಗಳು ವ್ಯಾಸಮಹರ್ಷಿಯನ್ನು ಕುರಿತು ಈ ರೀತಿಯಾಗಿ ಧರ್ಮವು ಶಿಥಿಲವಾಗಿ ಓಲಾಡುತ್ತಿರುವಂತಹ ಆ ಸಂದರ್ಭದಲ್ಲಿ ಕಪ್ಪಕಾಣಿಕೆಗಳನ್ನು ತೆರಲಾರದ ಆ ಮನುಜರು ಯಾವ ದೇಶಕ್ಕೆ ಹೋಗುವರು? ಎಲ್ಲಿ ನೆಲೆಸುವರು? ಅವರ ಆಹಾರವೇನು? ವಿಹಾರವೇನು? ಅವರು ಮಾಡ ತಕ್ಕ ಕರ್ಮಗಳಾವುವು? ಅವರ ಆಸೆಯು ಯಾವ ವಿಷಯಗಳ ಕಡೆಹರಿಯುವುದು? ಅವರ ಶರೀರಪ್ರಮಾಣವೇನು? ಆಯುಃಪರಿಮಿತಿಯೆಷ್ಟು? ಮತ್ತು ಕೊನೆಕೊನೆಗೆ ಯಾವ ಮಟ್ಟವನ್ನು ಮುಟ್ಟಿ ಮತ್ತೆ ಕೃತಯುಗವನ್ನು ಪಡೆಯುವರು? ಎಂದು ಪ್ರಶ್ನಿಸಿದರು. ಆಗ ವ್ಯಾಸನು ಹೇಳತೊಡಗಿದನು.

೪೪. ಎಲೈ ಮುನಿಗಳಿರಾ! ಕೇಳಿರಿ ಆ ಕಲಿಯು ಹೆಚ್ಚುತ್ತಾ ಬಂದಂತೆಲ್ಲ ಧರ್ಮವು ಸಂಪೂರ್ಣವಾಗಿ ನಾಶ (ಮರೆ) ವಾಗುವುದು. ಪ್ರಜೆಗಳೆಲ್ಲರೂ ಸದ್ಗುಣಗಳಿಲ್ಲದವರಾಗುವರು. ಇದರಿಂದ ನಾನಾತರದ ವ್ಯಸನ (ಹವ್ಯಾಸ) ಗಳಿಗೆ ಬಲಿಬಿದ್ದು ಶೀಲವನ್ನು ಕಳೆದುಕೊಳ್ಳುವರು. ಹೀಗಾಗಿ ಅವರು ಆಯುಸ್ಸು ಕ್ಷೀಣವಾಗತೊಡಗುವುದು.

೪೫. ಆಯುಸ್ಸು ಯಾವಾಗ ಕ್ಷೀಣಿಸುತ್ತಾ ಬರುವುದೋ ಆಗ ಬಲವೂ ಕ್ಷೀಣವಾಗತೊಡಗುವುದು. ಬಲವು ಕ್ಷಯಿಸುತ್ತಾ ಬಂದಂತೆಲ್ಲಾ ಶರೀರದ ತೇಜಸ್ಸು ಕೆಡುತ್ತಾ ಬರುವುದು. ಹಾಗೆ ಕಾಂತಿಯು ಕಂಗೆಡುತ್ತಾ

ನಿರ್ವೇದಾದಾತ್ಮಸಂಬೋಧಃ ಸಂಬೋಧಾದ್ಧರ್ಮಶೀಲತಾ ।
ಏವಂ ಗತ್ವಾ ಪರಾಂ ಕಾಷ್ಠಾಂ ಪ್ರಪತ್ಸ್ಯಂತಿ ಕೃತಂ ಯುಗಂ ॥ ೪೬ ॥

ಉದ್ದೇಶತೋ ಧರ್ಮಶೀಲಾಃ ಕೇಚಿನ್ಮಧ್ಯಸ್ಥತಾಂ ಗತಾಃ ।
ಕಿಂಧರ್ಮಶೀಲಾಃ ಕೇಚಿತ್ತು ಕೇಚಿದತ್ರ ಕುತೂಹಲಾಃ ॥ ೪೭ ॥

ಪ್ರತ್ಯಕ್ಷಮನುಮಾನಂ ಚ ಪ್ರಮಾಣಮಿತಿ ನಿಶ್ಚಿತಾಃ ।
ಅಪ್ರಮಾಣಂ ಕರಿಷ್ಯಂತಿ ಸರ್ವಮಿತ್ಯಪರೇ ಜನಾಃ ॥ ೪೮ ॥

ನಾಸ್ತಿಕ್ಯಪರತಾಶ್ಚಾಪಿ ಕೇಚಿದ್ಧರ್ಮವಿಲೋಪಕಾಃ ।
ಭವಿಷ್ಯಂತಿ ನರಾ ಮೂಢಾ ದ್ವಿಜಾಃ ಪಂಡಿತಮಾನಿನಃ ॥ ೪೯ ॥

ಬಂದಂತೆಲ್ಲಾ ದೇಹದಲ್ಲಿ ಬಗೆಬಗೆಯ ರೋಗಗಳು ಉತ್ಪತ್ತಿಯಾಗಿ ಪೀಡಿಸ ತೊಡಗುವುವು. ವ್ಯಾಧಿಗೆ ಸಿಕ್ಕಿ ನರಳುತ್ತಾ ಬಂದಂತೆಲ್ಲಾ ಪ್ರಪಂಚದಲ್ಲಿ ಬೇಸರ ಹುಟ್ಟುವುದು.

೪೬. ಆರೀತಿ ಜಗತ್ತಿನಲ್ಲಿ ಹೇಯಬುದ್ಧಿಯುಂಟಾದೊಡನೆಯೇ ಮಾನವನು ಧರ್ಮದ ಕಡೆಗೆ ತಿರುಗುವನು. ಹೀಗಾಗಿ ಧರ್ಮಕಾರ್ಯಗಳಲ್ಲಿ ಆಸಕ್ತಿಯುಂಟಾಗುವುದು. ಈರೀತಿಯಾಗಿ ಮಾನವನು ಕಲಿಯುಗದಲ್ಲಿ ಅಧರ್ಮದ ಪರಮಾವಧಿಯನ್ನು ಮುಟ್ಟಿದ ನಂತರ ಸ್ವಾಭಾವಿಕವಾಗಿಯೇ ಕೃತಯುಗ ಧರ್ಮವನ್ನು ಅವಲಂಬಿಸುವನು.

೪೭. ಕೆಲವರು ತಮ್ಮ ಇಚ್ಛೆಯಿಂದಲೇ ಧರ್ಮಕಾರ್ಯಗಳನ್ನಾಚರಿಸದಿದ್ದರೂ ಮತ್ತೊಬ್ಬರ ಧರ್ಮಕಾರ್ಯಗಳಿಗೆ ಅಡ್ಡಿಮಾಡದೆ ಮಧ್ಯಸ್ಥಿಕೆಯಿಂದಿರುವರು. ಮತ್ತೆ ಕೆಲವರು ಯಾರಾರು ಯಾವ ಬಗೆಯ ಧರ್ಮವನ್ನು ಆಚರಿಸುವರು ಎಂದು ನೋಡಲು ಕುತೂಹಲಪರವಶರಾಗಿರುವರು.

೪೮. ಮತ್ತೆ ಕೆಲವರು ಪ್ರತ್ಯಕ್ಷ ಅನುಮಾನಗಳೆಂಬ ಪ್ರಮಾಣಗಳೇ ಯುಕ್ತವೆಂದೂ ಇನ್ನುಳಿದ ಪ್ರಮಾಣಗಳೆಲ್ಲವೂ ಪ್ರಮಾಣಗಳೇ ಅಲ್ಲವೆಂದೂ ಭಾವಿಸಿರುವರು.

೪೯. ಕೆಲವರು ಶುದ್ಧ ನಾಸ್ತಿಕಮತವನ್ನವಲಂಬಿಸಿ ಧರ್ಮವನ್ನು ಲೋಪಮಾಡುತ್ತಿರುವರು. ಆ ನಾಸ್ತಿಕವಾದಪ್ರಿಯರಾದ ಜನರು ಬರಿಯ ಅಜ್ಞಾನಿಗಳು. ತಾವೇ ಮಹಾಪಂಡಿತರೆಂಬುದಾಗಿ ತಿಳಿದುಕೊಂಡು ಬಿಟ್ಟಿರುವರು.

ತದಾತ್ವಮಾತ್ರಶ್ರದ್ಧೇಯಾ ಶಾಸ್ತ್ರಜ್ಞಾನಬಹಿಷ್ಕೃತಾಃ ।
ದಾಂಭಿಕಾಸ್ತೇ ಭವಿಷ್ಯಂತಿ ನರಾ ಜ್ಞಾನವಿಲೋಪಿತಾಃ ॥ ೫೦ ॥

ತಥಾ ವಿಲುಲಿತೇ ಧರ್ಮೇ ಜನಾಃ ಶ್ರೇಷ್ಠಪುರಸ್ಕೃತಾಃ ।
ಶುಭಾನ್ಸಮಾಚರಿಷ್ಯಂತಿ ದಾನಶೀಲಪರಾಯಣಾಃ ॥ ೫೧ ॥

ಸರ್ವಭಕ್ಷಾಃ ಸ್ವಯಂಗುಪ್ತಾ ನಿರ್ಘೃಣಾ ನಿರಪತ್ರಪಾಃ ।
ಭವಿಷ್ಯಂತಿ ತದಾ ಲೋಕೇ ತತ್ಕಷಾಯಸ್ಯ ಲಕ್ಷಣಂ ॥ ೫೨ ॥

ಕಷಾಯೋಪಪ್ಲವೇ ಕಾಲೇ ಜ್ಞಾನನಿಷ್ಠಾಪ್ರಣಾಶನೇ ।
ಸಿದ್ಧಿಮಲ್ಪೇನ ಕಾಲೇನ ಪ್ರಾಪ್ಸ್ಯಂತಿ ನಿರುಪಸ್ಕೃತಾಃ ॥ ೫೩ ॥

---

೫೦. ಅವರು ತಾವು ಇರತಕ್ಕ ಕಾಲವನ್ನಲ್ಲದೆ ಹಿಂದಿನ ಕಾಲದಲ್ಲಿ ನಡೆದುದನ್ನೂ, ಮುಂದೆ ನಡೆಯುವುದನ್ನೂ ನಂಬಲಾರರು ಮತ್ತು ಅವರಿಗೆ ಶಾಸ್ತ್ರೀಯವಾದ ಜ್ಞಾನವು ಇರುವುದಿಲ್ಲ. ಹೀಗೆ ಅವರು ಜ್ಞಾನವರ್ಜಿತರಾಗಿದ್ದೂ ಕೂಡ ಬಹು ದಂಭಾಚಾರದಿಂದ ವರ್ತಿಸುವರು.

೫೧. ಈರೀತಿಯಾಗಿ ಧರ್ಮವು ಲೋಪವಾಗಿರತಕ್ಕ ಆ ಸಮಯದಲ್ಲಿಯೂ ಕೆಲವು ಮಂದಿ ಮಾನವಶ್ರೇಷ್ಠರು ಮಾತ್ರ ದಾನಾದಿಸತ್ಕಾರ್ಯಗಳನ್ನೂ ಶುದ್ಧವಾದ ಶೀಲವನ್ನೂ ಸಂರಕ್ಷಿಸಿಕೊಂಡು ಆಚರಿಸುತ್ತಾ ಬರುತ್ತಿರುವರು.

೫೨. ಯಾವಾಗ ಜಗತ್ತಿನಲ್ಲಿರತಕ್ಕ ಜನರು ಭಕ್ಷ್ಯಾಭಕ್ಷ್ಯನಿಯಮವಿಲ್ಲದೆ ಎಲ್ಲವನ್ನೂ ತಿನ್ನತೊಡಗುವರೋ, ಮತ್ತೊಬ್ಬರ ಸಹಾಯವನ್ನು ಬಯಸದೆ ತಮಗೆ ತಾವೇ ಸಂರಕ್ಷಕರಾಗಿ ಭಾವಿಸುವರೋ ಮತ್ತು ದಯಾಶೂನ್ಯರಾಗಿಯೂ ನಾಚಿಕೆಯಿಲ್ಲದವರಾಗಿಯೂ ಆಗುವರೋ ಆಗಲೀಗ ಸಾಂಕರ್ಯ ಉಂಟಾಯಿತೆಂದು ಅರಿಯಬೇಕು.

೫೩. ಹೀಗೆ ಎತ್ತೆತ್ತಲೂ ಧರ್ಮಸಾಂಕರ್ಯವುಂಟಾಗಿ ಜ್ಞಾನವೆಂಬುದರಲ್ಲಿ ನಿಷ್ಠೆಯೇ ಉಂಟಾಗದಿರುವ ಆ ದುಷ್ಕಾಲದಲ್ಲಿ ಇಂತಹ ಸಾಂಕರ್ಯಕ್ಕೆ ಸಿಕ್ಕಿಬೀಳದ ಜನರು ಮಾತ್ರ ಅತ್ಯಲ್ಪಕಾಲದಲ್ಲಿಯೇ ಸಿದ್ಧಿಯನ್ನು ಪಡೆಯುವರು.

ವಿಪ್ರಾಣಾಂ ಶಾಶ್ವತೀಂ ವೃತ್ತಿಂ ಯದಾ ವರ್ಣಾವರೇ ಜನಾಃ ।
ಸಂಶ್ರಯಿಷ್ಯಂತಿ ಭೋ ವಿಪ್ರಾಸ್ತತ್ಕಷಾಯಸ್ಯ ಲಕ್ಷಣಂ ॥ ೫೪ ॥

ಮಹಾಯುದ್ಧಂ ಮಹಾವರ್ಷಂ ಮಹಾವಾತಂ ಮಹಾತಪಃ ।
ಭವಿಷ್ಯತಿ ಯುಗೇ ಕ್ಷೀಣೇ ತತ್ಕಷಾಯಸ್ಯ ಲಕ್ಷಣಂ ॥ ೫೫ ॥

ವಿಪ್ರರೂಪೇಣ ಯಕ್ಷಾಂಸಿ ರಾಜಾನಃ ಕರ್ಣವೇದಿನಃ ।
ಪೃಥಿವೀಮುಪಭೋಕ್ಷ್ಯಂತಿ ಯುಗಾಂತೇ ಸಮುಪಸ್ಥಿತೇ ॥ ೫೬ ॥

ನಿಃಸ್ವಾಧ್ಯಾಯವಷಟ್ಕಾರಾಃ ಕುನೇತಾರೋಽಭಿಮಾನಿನಃ ।
ಕ್ರವ್ಯಾದಾ ಬ್ರಹ್ಮರೂಪೇಣ ಸರ್ವಭಕ್ಷ್ಯಾ ವೃಥಾವ್ರತಾಃ ॥ ೫೭ ॥

---

೫೪. ಎಲೈ ಬ್ರಾಹ್ಮಣರಿರಾ! ಯಾವಾಗ ಕೀಳುಜಾತಿಯ ಮನುಜರು ಮೇಲುಜಾತಿಯವರೆನಿಸಿದ ಬ್ರಾಹ್ಮಣರ ವೃತ್ತಿಯನ್ನು ಆಶ್ರಯಿಸತೊಡಗುವರೋ ಆಗಲೀಗ ಧರ್ಮಸಾಂಕರ್ಯಕ್ಕೆ ಕುರುಹೆಂದು ಅರಿಯಿರಿ.

೫೫. ಆ ಕಲಿಯುಗದಲ್ಲಿ ಯಾವಾಗ ಭಾರಿಭಾರಿ ಯುದ್ಧಗಳೂ, ಭಾರಿ ಭಾರಿ ಮಳೆಯೂ ಅತಿತೀವ್ರವಾದ ಗಾಳಿಯೂ, ಪ್ರಚಂಡವಾದ ಬಿಸಿಲೂ ಉಂಟಾಗುವುದೋ ಆಗಲೀಗ ವರ್ಣಾದಿಸಾಂಕರ್ಯಕ್ಕೆ ಹೆಗ್ಗುರುತೆಂದು ತಿಳಿಯಿರಿ.

೫೬. ಆ ಕಲಿಕಾಲಬಂದಾಗ ರಾಕ್ಷಸರು ಬ್ರಾಹ್ಮಣರೂಪದಲ್ಲಿಯೂ ಕರ್ಣವೇದಿ (ಒಂದು ಬಗೆಯ ಪಿಶಾಚ) ಗಳು ರಾಜರರೂಪದಲ್ಲಿಯೂ ಹುಟ್ಟಿ ಕೊಂಡು ಭೂಮಿಯನ್ನು ಪೀಡಿಸುವರು.

೫೭. ಆಗ ರಾಕ್ಷಸರು ಬ್ರಾಹ್ಮಣರೂಪವನ್ನು ಧರಿಸುವರಷ್ಟೆ, ಆ ಬ್ರಾಹ್ಮಣರು ವೇದಾಧ್ಯಯನರಹಿತರೂ ವಷಟ್ಕಾರವನ್ನು ಅರಿಯದವರು (ಅಗ್ನಿಹೋತ್ರವನ್ನು ಆಚರಿಸದವರೂ) ಆಗಿದ್ದರೂ ದುರಭಿಮಾನಗ್ರಸ್ತರಾಗಿ ಸಿಕ್ಕಿದುದನ್ನು ತಿನ್ನುತ್ತಾ ನಿಯಮನಿಷ್ಠೆಗಳನ್ನು ಕೇವಲ ತೋರಿಕೆಗಾಗಿ ಅವ ಲಂಬಿಸುತ್ತಾ ಜನರನ್ನು ಕುತ್ಸಿತವಾದ ದಾರಿಗೆಳೆಯುವರು.

ಮೂರ್ಖಾಶ್ಚಾರ್ಥಪರಾ ಲುಬ್ಧಾಃ ಕ್ಷುದ್ರಾಃ ಕ್ಷುದ್ರಪರಿಚ್ಛದಾಃ ।
ವ್ಯವಹಾರೋಪಪನ್ನಾಶ್ಚ ಚ್ಯುತಾ ಧರ್ಮಾಚ್ಚ ಶಾಶ್ವತಾತ್ ॥ ೫೮ ॥

ಹರ್ತಾರಃ ಪರರತ್ನಾನಾಂ ಪರದಾರಪ್ರಧರ್ಷಕಾಃ ।
ಕಾಮಾತ್ಮಾನೋ ದುರಾತ್ಮಾನಃ ಸೋಪಧಾಃ ಪ್ರಿಯಸಾಹಸಾಃ ॥ ೫೯ ॥

ತೇಷು ಪ್ರಭವಮಾಣೇಷು ಜನೇಷ್ವಪಿ ಚ ಸರ್ವಶಃ ।
ಅಭಾವಿನೋ ಭವಿಷ್ಯಂತಿ ಮುನಯೋ ಬಹುರೂಪಿಣಃ ॥ ೬೦ ॥

ಕಲೌ ಯುಗೇ ಸಮುತ್ಪನ್ನಾಃ ಪ್ರಧಾನಪುರುಷಾಶ್ಚ ಯೇ ।
ಕಥಾಯೋಗೇನ ತಾನ್ಸರ್ವಾನ್ಪೂಜಯಿಷ್ಯಂತಿ ಮಾನವಾಃ ॥ ೬೧ ॥

---

೫೮. ಮತ್ತು ಮೂರ್ಖರೂ ಅತಿನೀಚರೂ ಆದ ಅವರು ಕೇವಲ ಹಣದ ಆಸೆಯುಳ್ಳವರಾಗಿ ದುಷ್ಟರನ್ನು ಜೊತೆಯಾಗಿ ಮಾಡಿಕೊಂಡು ನಾನಾ ರೀತಿಯ ವ್ಯವಹಾರಗಳಲ್ಲಿ ಆಸಕ್ತರಾಗುವರು. ಅವರು ತಮ್ಮ ವರ್ತನೆಯಿಂದ ಸನಾತನವಾದ ಧರ್ಮದಿಂದ ಭ್ರಷ್ಟರಾಗುವರು.

೫೯. ಇಷ್ಟೇ ಅಲ್ಲದೆ ಆ ದುರಾತ್ಮರು ಕಾಮುವಶರಾಗಿ ಇಲ್ಲದಸಲ್ಲದ ನೆಪಗಳನ್ನು ಒಡ್ಡುತ್ತಾ ಮತ್ತೊಬ್ಬರ ರತ್ನಾದಿವಸ್ತುಗಳನ್ನು ಅಪಹರಿಸುತ್ತಲೂ ಪರಸ್ತ್ರೀಯರನ್ನು ಬಲಾತ್ಕಾರದಿಂದ ಕೆಡಿಸುತ್ತಲೂ, ಸಾಹಸಕಾರ್ಯಗಳಲ್ಲೇ ಆಸಕ್ತಿವಹಿಸುತ್ತಲೂ ಇರುವರು.

೬೦. ಈತೆರದ ಜನಗಳು ಹೆಚ್ಚಿಕೊಂಡಂತೆಲ್ಲಾ ನಾನಾರೂಪದಲ್ಲಿರುತ್ತಿದ್ದ ಮುನಿಗಳು ಕಣ್ಮರೆಯಾಗುವರು.

೬೧. ಆ ಕಲಿಯುಗದಲ್ಲಿ ಯಾರಾರು ಪ್ರಧಾನಪುರುಷರೆನಿಸುವರೋ ಅವರೆಲ್ಲರನ್ನೂ ಆಗಿನ ಮಾನವರು ಇಲ್ಲದ ಕತೆಗಳನ್ನು (ಅವರ ವಿಷಯವಾಗಿ) ಸೃಷ್ಟಿಸಿಕೊಳ್ಳುತ್ತಾ ಪೂಜಿಸತೊಡಗುವರು.

ಸಸ್ಯಚೌರಾ ಭವಿಷ್ಯಂತಿ ತಥಾ ಚೈಲಾಪಹಾರಿಣಃ ।
ಭೋಕ್ಷ್ಯಭೋಜ್ಯಹರಾಶ್ಚೈವ ಕರಂಡಾನಾಂ ಚ ಹಾರಿಣಃ ॥ ೬೨ ॥

ಚೌರಾಶ್ಚೌರಸ್ಯ ಹರ್ತಾರೋ ಹಂತಾ ಹಂತುರ್ಭವಿಷ್ಯತಿ ।
ಚೌರೈಶ್ಚೌರಕ್ಷಯೇ ಚಾಪಿ ಕೃತೇ ಕ್ಷೇಮಂ ಭವಿಷ್ಯತಿ ॥ ೬೩ ॥

ನಿಃಸಾರೇ ಕ್ಷುಭಿತೇ ಕಾಲೇ ನಿಷ್ಕ್ರಿಯೇ ಸಂವ್ಯವಸ್ಥಿತೇ ।
ನರಾ ವನಂ ಶ್ರಯಿಷ್ಯಂತಿ ಕರಭಾರಪ್ರಪೀಡಿತಾಃ ॥ ೬೪ ॥

ಯಜ್ಞಕರ್ಮಣ್ಯುಪರತೇ ರಕ್ಷಾಂಸಿ ಶ್ವಾಪದಾನಿ ಚ ।
ಕೀಟಮೂಷಕಸರ್ಪಾಶ್ಚ ಧರ್ಷಯಿಷ್ಯಂತಿ ಮಾನವಾನ್ ॥ ೬೫ ॥

---

೬೨. ಮತ್ತು ಆಕಾಲದ ಮನುಜರು ಬೆಳೆಯುತ್ತಿರುವ ಪಯಿರನ್ನೇ ಕದ್ದುಬಿಡುವರು. ಇಷ್ಟೇ ಅಲ್ಲದೆ, ತಿಂಡಿತಿನಿಸುಗಳಾಗಲೀ, ಅನ್ನಾದಿ ಭೋಜನ ವಸ್ತುಗಳಾಗಲಿ, ಕರಂಡ (ಕೈಪೆಟ್ಟಿಗೆ) ಗಳಾಗಲಿ ಯಾವುದು ಸಿಕ್ಕಿದರೆ ಅದನ್ನು ಅಪಹರಿಸುವರು.

೬೩. ಯಾರು ಕಳ್ಳರೋ ಅವರ ಮನೆಯ ವಸ್ತುಗಳನ್ನೂ ಬೇರೊಬ್ಬ ಕಳ್ಳರೂ ಅಪಹರಿಸುವರು. ಕೊಲೆಗಡಕನಾದವನನ್ನು ಮತ್ತೊಬ್ಬ ಕೊಲೆ ಗಡಕನು ಸಂಹರಿಸಿಬಿಡುವನು. ಹೀಗೆ ಪರಸ್ಪರವಾಗಿ (ಒಬ್ಬರಿಗೊಬ್ಬರು) ನಾಶವಾದನಂತರ ಜಗತ್ತಿಗೆ ಕ್ಷೇಮವುಂಟಾಗುವುದು.

೬೪. ಯಾವಾಗ ಜಗತ್ತು ಸಾರರಹಿತವಾಗುವುದೋ ಮತ್ತು ಯಾವೊಂದುವಿಧವಾದ ಕೆಲಸಕಾರ್ಯಗಳೂ ಇಲ್ಲದೆ ಅಲ್ಲಕಲ್ಲೋಲವಾಗುವುದೋ ಆಗ ಮಾನವರು ಕಂದಾಯದ ಭಾರವನ್ನು (ಹೆಗರೆ) ತೆರಲಾರದೆ ಕಾಡುಗಳಿಗೆ ಹೋಗಿ ನೆಲೆಸಲಾರಂಭಿಸುವರು.

೬೫. ಹೀಗೆಯೇ ಯಜ್ಞಯಾಗಾದಿಗಳು ನಿಂತುಹೋದುದರಿಂದ, ರಾಕ್ಷಸರೂ, ದುಷ್ಟಮೃಗಗಳೂ, ಕ್ರಿಮಿಕೀಟಗಳೂ, ಇಲಿಹೆಗ್ಗಣಗಳೂ, ಹಾವುಗಳೂ ಹೆಚ್ಚಿಕೊಂಡು ಮನುಷ್ಯರನ್ನು ಪೀಡಿಸತೊಡಗುವುವು.

ಕ್ಷೇಮಂ ಸುಭಿಕ್ಷಮಾರೋಗ್ಯಂ ಸಾಮಗ್ರ್ಯಂ ಚೈವ ಬಂಧುಷು ।
ಉದ್ದೇಶೇಷು ನರಾಃ ಶ್ರೇಷ್ಠಾ ಭವಿಷ್ಯಂತಿ ಯುಗಕ್ಷಯೇ ॥ ೬೬ ॥

ಸ್ವಯಂಪಾಲಾಃ ಸ್ವಯಂ ಚೌರಾಃ ಪ್ಲವಸಂಭಾರಸಂಭೃತಾಃ ।
ಮಂಡಲೈಃ ಸಂಭವಿಷ್ಯಂತಿ ದೇಶೇ ದೇಶೇ ಪೃಥಕ್ಪೃಥಕ್ ॥ ೬೭ ॥

ಸ್ವದೇಶೇಭ್ಯಃ ಪರಿಭ್ರಷ್ಟಾ ನಿಃಸಾರಾಃ ಸಹ ಬಂಧುಭಿಃ ।
ನರಾಃ ಸರ್ವೇ ಭವಿಷ್ಯಂತಿ ತದಾ ಕಾಲಪರಿಕ್ಷಯಾತ್ ॥ ೬೮ ॥

ತತಃ ಸರ್ವೇ ಸಮಾದಾಯ ಕುಮಾರಾನ್ಪ್ರದ್ರುತಾ ಭಯಾತ್ ।
ಕೌಶಿಕೀಂ ಸಂತರಿಷ್ಯಂತಿ ನರಾಃ ಕ್ಷುದ್ಭಯಪೀಡಿತಾಃ ॥ ೬೯ ॥

ಅಂಗಾನ್ವಂಗಾನ್ಕಲಿಂಗಾಂಶ್ಚ ಕಾಶ್ಮೀರಾನಥ ಕೋಶಲಾನ್ ।
ಋಷಿಕಾಂತಗಿರಿದ್ರೋಣೀಃ ಸಂಶ್ರಯಿಷ್ಯಂತಿ ಮಾನವಾಃ ॥ ೭೦ ॥

---

೬೬. ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಕ್ಷೇಮವೂ, ಸುಭಿಕ್ಷವೂ, ಆರೋಗ್ಯವೂ, ಬಂಧುಬಾಂಧವರಲ್ಲಿ ಒಗ್ಗಟ್ಟೂ ನೆಲೆಸಿಸುವುದು. ಅಂಥಹ ಪ್ರದೇಶಗಳಲ್ಲಿಯೇ ಶ್ರೇಷ್ಠರಾದ ಮಾನವರು ಆ ಕಲಿಗಾಲದಲ್ಲಿ ವಾಸಿಸುವರು.

೬೭-೬೮. ಆಗ ಜನರೆಲ್ಲರೂ ತಾವೇ ಕಳ್ಳರಾದುದರಿಂದ ಬಹು ಎಚ್ಚರಿಕೆಯಿಂದ ಸಾಮಗ್ರಿಗಳನ್ನು ನೋಡಿಕೊಳ್ಳುತ್ತಾ ತಾವಿರುವಕಡೆಗೇ ಸಂಸಾರವನ್ನೂ ಒಯ್ಯುತ್ತಾ ಗುಂಪುಗುಂಪಾಗಿ ದೇಶದಿಂದ ದೇಶಕ್ಕೆ ಅಲೆಯತೊಡಗುವರು. ಈರೀತಿ ತಮ್ಮ ಕಾಲವು (ದೆಸೆಯು) ಕಳೆದುಹೋದುದರಿಂದ ಆ ಮಾನವರು ನಿಸ್ಸಾರರಾಗಿ ತಮ್ಮ ಬಂಧುಗಳೊಡನೆ ಸ್ವದೇಶವನ್ನು ಬಿಟ್ಟು ಹೊರಗೆ ಅಲೆಯಲಾರಂಭಿಸುವರು.

೬೯. ಆಗ ಹಸಿವಿನಿಂದಲೂ, ಹೆದರಿಕೆಯಿಂದಲೂ ತಲ್ಲಣಿಸುತ್ತಿರುವ ಆ ಜನರು ತಮ್ಮ ತಮ್ಮ ಮಕ್ಕಳನ್ನು ಎತ್ತಿಕೊಂಡು ಓಡುತ್ತಾ ಕೌಶಿಕೀನದಿಯನ್ನು ದಾಟಿ ಮುಂದೆ ಹೋಗುವರು.

೭೦. ಬಳಿಕ ಅಂಗದೇಶವನ್ನೂ, ವಂಗದೇಶವನ್ನೂ, ಕಲಿಂಗ, ಕಾಶ್ಮೀರ, ಕೋಸಲದೇಶಗಳನ್ನೂ, ಋಷಿಗಳ ಮನಸ್ಸನ್ನು ಸೆಳೆವಂತಹ ಬೆಟ್ಟದ ಗುಹಾದಿ ಪ್ರದೇಶಗಳನ್ನೂ ಸೇರಿ ಅಲ್ಲಿ ಆಸರೆಪಡೆಯುವರು.

ಕೃತ್ಸ್ನಂ ಚ ಹಿಮವತ್ಪಾರ್ಶ್ವಂ ಕೂಲಂ ಚ ಲವಣಾಂಭಸಃ ।
ವಿವಿಧಂ ಜೀರ್ಣಪತ್ರಂ ಚ ವಲ್ಕಲಾನ್ಯಜಿನಾನಿ ಚ ॥ ೨೧ ॥

ಸ್ವಯಂ ಕೃತ್ವಾ ನಿವತ್ಸ್ಯಂತಿ ತಸ್ಮಿನ್ಪ್ರಾಪ್ತೇ ಯುಗಕ್ಷಯೇ ।
ಅರಣ್ಯೇಷು ಚ ವತ್ಸ್ಯಂತಿ ನರಾ ಮ್ಲೇಚ್ಛಗಣೈಃ ಸಹ ॥ ೨೨ ॥

ನೈವ ಶೂನ್ಯಾ ನವಾರಣ್ಯಾ ಭವಿಷ್ಯತಿ ವಸುಂಧರಾ ।
ಅಗೋಪ್ತಾರಶ್ಚ ಗೋಪ್ತಾರೋ ಭವಿಷ್ಯಂತಿ ನರಾಧಿಪಾಃ ॥ ೨೩ ॥

ಮೃಗೈರ್ಮತ್ಸ್ಯೈರ್ವಿಹಂಗೈಶ್ಚ ಶ್ವಾಪದೈಃ ಸರ್ಪಕೀಟಕೈಃ ।
ಮಧುಶಾಕಫಲೈರ್ಮೂಲೈರ್ವರ್ತಯಿಷ್ಯಂತಿ ಮಾನವಾಃ ॥ ೨೪ ॥

---

೨೧. ಮತ್ತು ಹಿಮಾಚಲದ ತಪ್ಪಲುಪ್ರದೇಶವೆಲ್ಲವನ್ನೂ ಲವಣೋದಧಿಯ ತೀರಪ್ರದೇಶವನ್ನೂ ಆಶ್ರಯಿಸಿ ನಿಲ್ಲುವರು. ಮತ್ತು ಅವರು ಉಡಲು ಬಟ್ಟೆಯಿಲ್ಲದೆ, ಉದುರಿಬಿದ್ದಿರುವ ತರಗೆಲೆಗಳನ್ನೂ, ಮರದ ತೊಗಟೆಗಳನ್ನೂ, ಜಿಂಕೆ ಮೊದಲಾದ ಪ್ರಾಣಿಗಳ ತೊಗಲನ್ನೂ ಬಟ್ಟೆಯಂತೆ ಮಾಡಿಕೊಂಡು ಉಡುವರು.

೨೨. ಆ ಮಾನವರು (ಸ್ಪಷ್ಟವಾಗಿ ಮಾತಾಡಲು ಬಾರದಂತಹ ಅನಾಗರಿಕರಾದ) ಮ್ಲೇಚ್ಛರೊಡನೆ ಕಾಡಿನಲ್ಲಿ ವಾಸಿಸತೊಡಗುವರು.

೨೩. ಆಗ ಭೂಮಿಯಮೇಲಿರುವ ಯಾವ ಅರಣ್ಯವನ್ನೇ ನೋಡಲಿ ಅದೆಲ್ಲವೂ ಜನರಿಂದ ನಿಬಿಡವಾಗಿರುವುದಲ್ಲದೆ ಜನಶೂನ್ಯವಾಗಿ ಯಾವುದೂ ಇರುವುದಿಲ್ಲ. ಮತ್ತು ಪ್ರಜೆಗಳಿಗೆ ಈರೀತಿ ಬಾಧೆಗಳು ಬಾರದಂತೆ ಸಂರಕ್ಷಿಸಬೇಕಾದ ಪೃಥಿವೀಪಾಲಕರೂ ಸಹ ಸಾಮರ್ಥ್ಯವಿಲ್ಲದವರಾಗಿ ಅವರನ್ನು ಸಂರಕ್ಷಿಸದೆಹೋಗುವರು.

೨೪. ಆ ಮಾನವರು ಜಿಂಕೆ ಮೊದಲಾದ ಮೃಗಗಳನ್ನೂ ಮೀನುಗಳನ್ನೂ ಹಕ್ಕಿಗಳನ್ನೂ, ದುಷ್ಟಪ್ರಾಣಿಗಳನ್ನೂ, ಸರ್ಪಗಳನ್ನೂ, ಕೀಟಗಳನ್ನೂ ತಮ್ಮ ಆಹಾರಕ್ಕಾಗಿ ಉಪಯೋಗಿಸಿಕೊಳ್ಳುವರಲ್ಲದೆ, ಜೇನು, ಸೊಪ್ಪುಸೆದೆ, ಗೆಡ್ಡೆಗೆಣಸು, ಹಣ್ಣುಹಂಪಲು ಮೊದಲಾದುವುಗಳನ್ನೂ ತಿನ್ನುತ್ತಾ ಪ್ರಾಣರಕ್ಷಣೆ ಮಾಡಿಕೊಳ್ಳುವರು.

ಶೀರ್ಣಪರ್ಣಫಲಾಹಾರಾ ವಲ್ಕಲಾನ್ಯಜಿನಾನಿ ಚ ।
ಸ್ವಯಂ ಕೃತ್ವಾ ನಿವತ್ಸ್ಯಂತಿ ಯಥಾ ಮುನಿಜನಸ್ತಥಾ ॥ ೭೫ ॥

ಬೀಜಾನಾಮುಕ್ತತಸ್ನೇಹಾ ಆಹತಾಃ ಕಾಷ್ಠಶಂಕುಭಿಃ ।
ಅಜೈಡಕಂ ಖರೋಷ್ಟ್ರಂ ಚ ಪಾಲಯಿಷ್ಯಂತಿ ನಿತ್ಯಶಃ ॥ ೭೬ ॥

ನದೀಸ್ರೋತಾಂಸಿ ರೋತ್ಸ್ಯಂತಿ ತೋಯಾರ್ಥಂ ಕೂಲಮಾಶ್ರಿತಾಃ ।
ಪಕ್ವಾನ್ನವ್ಯವಹಾರೇಣ ವಿಪಣಂತಃ ಪರಸ್ಪರಂ ॥ ೭೭ ॥

ತನೂರುಹೈರ್ಯಥಾಜಾತೈಃ ಸಮುಲಾಂತರಸಂಭೃತೈಃ ।
ಬಹ್ವಪತ್ಯಾಃ ಪ್ರಜಾಹೀನಾಃ ಕುಲಶೀಲವಿವರ್ಜಿತಾಃ ॥ ೭೮ ॥

---

೭೫. ಆಗಿನ ಜನರು ಉದುರಿಬಿದ್ದ ಎಲೆಗಳನ್ನೂ ಹಣ್ಣುಗಳನ್ನೂ ತಿನ್ನುತ್ತಾ ಮರದ ತೊಗಟೆಗಳನ್ನೂ ಪ್ರಾಣಿಗಳ ಚರ್ಮಗಳನ್ನೂ ಉಡುತ್ತಿದ್ದರೆ ಮುನಿವೃತ್ತಿಯಲ್ಲಿರುವವರಂತೆ ತೋರುವರು.

೭೬. ಮತ್ತು ಅವರು ಪ್ರತಿನಿತ್ಯವೂ ಕಾಳುಗಳಿಗೋಸ್ಕರ ಒಬ್ಬರಿಗೊಬ್ಬರು ಕಚ್ಚಾಡುತ್ತಾ ಕಟ್ಟಿಗೆಗಳಿಂದಲೂ, ಮೊಳೆ ಮೊದಲಾದುವುಗಳಿಂದಲೂ ಹೊಡೆದಾಡುವರು. ಮತ್ತೇನೂ ವೃತ್ತಿಯಿಲ್ಲದೆ ಆಡುಗಳನ್ನೂ ಕುರಿಗಳನ್ನೂ ಕತ್ತೆಗಳನ್ನೂ ಒಂಟೆಗಳನ್ನೂ ಸಾಕುತ್ತಾ ಅದರಿಂದ ಜೀವನವನ್ನು ಸಾಗಿಸುವರು.

೭೭. ಮತ್ತು ನದಿಗಳ ದಡದಲ್ಲಿ ವಾಸಿಸುತ್ತಾ ಆದರ ನೀರಿಗಾಗಿ ಕಟ್ಟೆಗಳನ್ನು ಹಾಕಿ ತಡೆಯುವರು. ಆ ನೀರಿಗೂ ಸಹ ಪಕ್ವಾನ್ನಕ್ಕೆ ಹೊಡೆದಾಡುವಂತೆ ಒಬ್ಬರಿಗೊಬ್ಬರು ಹೊಡೆದಾಡುವರು.

೭೮. ಆಗಿನ ಜನರು ಕುಲಶೀಲಗಳೊಂದೂ ಇಲ್ಲದೆ, ಮೈಯ್ಯೆಲ್ಲಾ ಕೂದಲು ಬೆಳೆದುಕೊಂಡು ಅವುಗಳಲ್ಲೆಲ್ಲಾ ಬಹುವಾಗಿ ಕೊಳೆ ಮೆತ್ತಿಕೊಂಡು ಅಸಹ್ಯಕರವಾಗಿರುವರು. ಮತ್ತು (ಹೊಟ್ಟೆಗಿಲ್ಲದೆ) ಸಾಯುತ್ತಿರುವ ಅವರು ಬಹುಮಂದಿ ಮಕ್ಕಳಿಗೆ ಜನ್ಮವನ್ನು ಈಯುವರು.

ಏವಂ ಭವಿಷ್ಯಂತಿ ತದಾ ನರಾಶ್ಚಾಧರ್ಮಜೀವಿನಃ ।
ಹೀನಾ ಹೀನಂ ತಥಾ ಧರ್ಮಂ ಪ್ರಜಾ ಸಮನುವರ್ತ್ಸ್ಯತಿ ॥ ೭೯ ॥

ಆಯುಸ್ತತ್ರ ಚ ಮರ್ತ್ಯಾನಾಂ ಪರಂ ತ್ರಿಂಶದ್ಭವಿಷ್ಯತಿ ।
ದುರ್ಬಲಾ ವಿಷಯಗ್ಲಾನಾ ಜರಾಶೋಕೈರಭಿಪ್ಲುತಾಃ ॥ ೮೦ ॥

ಭವಿಷ್ಯಂತಿ ತದಾ ತೇಷಾಂ ರೋಗೈರಿಂದ್ರಿಯಸಂಕ್ಷಯಃ ।
ಆಯುಃಪ್ರತ್ಯಯಸಂರೋಧಾದ್ವಿಷಯಾದುಪರಂಸ್ಯತೇ ॥ ೮೧ ॥

ಶುಶ್ರೂಷವೋ ಭವಿಷ್ಯಂತಿ ಸಾಧೂನಾಂ ದರ್ಶನೇ ರತಾಃ ।
ಸತ್ಯಂ ಚ ಪ್ರತಿಪತ್ಸ್ಯಂತಿ ವ್ಯವಹಾರೋಪಸಂಕ್ಷಯಾತ್ ॥ ೮೨ ॥

---

೭೯. ಈರೀತಿಯಾಗಿ ಆ ಕಲಿಗಾಲದಲ್ಲಿ ಮನುಜರು ಅಧರ್ಮಾಚರಣೆಯಲ್ಲೇ ನಿರತರಾಗಿರುತ್ತಾ ನಷ್ಟಪ್ರಾಯರಾಗಿ ನಾಶಹೊಂದುತ್ತಿರುವ ಧರ್ಮವನ್ನು ಅನುಸರಿಸುವರು.

೮೦. ಆಗಿನಕಾಲದಲ್ಲಿ ಮನುಷ್ಯರಿಗೆ ಮೂವತ್ತು ವರ್ಷಗಳೇ ಅತಿ ಹೆಚ್ಚಿನ ಆಯುಸ್ಸೆನಿಸುವುದು. ಆ ಮಾನವರು ಸಿಕ್ಕಿದಂತೆ ವಿಷಯಸುಖಗಳಲ್ಲಿ ತೊಳಲಿರುವುದರಿಂದ ಬಲವನ್ನು ಕಳೆದುಕೊಂಡು ಅಕಾಲವಾದ ಮುಪ್ಪಿನಿಂದಲೂ ಬಗೆಬಗೆಯ ವ್ಯಾಧಿಗಳಿಂದಲೂ ಪೀಡಿತರಾಗಿ ಕಂಗೆಟ್ಟುಹೋಗುವರು.

೮೧. ಹಾಗೆ ರೋಗಗಳಲ್ಲಿ ನರಳುವುದರಿಂದ ಅವರ ಇಂದ್ರಿಯಗಳು ಸಂಪೂರ್ಣವಾಗಿ ನಶಿಸಿಹೋಗುವುವು. ಹೀಗಾಗಿ ಅಸಾಮರ್ಥ್ಯದಿಂದಲೂ, ಆಯುಸ್ಸು ಕ್ಷಯಿಸುವುದೆಂಬ ಹೆದರಿಕೆಯಿಂದಲೂ ಆ ಮಾನವರು ವಿಷಯಗಳಿಂದ ದೂರವಾಗುವರು.

೮೨. ಈರೀತಿಯಾಗಿ ಕ್ರಮಕ್ರಮವಾಗಿ ಪ್ರಾಪಂಚಿಕವ್ಯವಹಾರಗಳು ನಶಿಸುತ್ತಾ ಬಂದಂತೆಲ್ಲ ಅವರು ಸತ್ಪುರುಷರಾದವರ ಸಂದರ್ಶನವನ್ನೇ ಬಯಸುತ್ತಾ ಆ ಸಾಧುಜನಗಳ ಸೇವಾವೃತ್ತಿಯನ್ನೇ ಕೈಗೊಳ್ಳುವರು.

ಭವಿಷ್ಯಂತಿ ಚ ಕಾಮಾನಾಮಲಾಭಾದ್ಧರ್ಮಶೀಲಿನಃ ।
ಕರಿಷ್ಯಂತಿ ಚ ಸಂಸ್ಕಾರಂ ಸ್ವಯಂ ಚ ಕ್ಷಯಪೀಡಿತಾಃ ॥ ೮೩ ॥

ಏವಂ ಶುಶ್ರೂಷವೋ ದಾನೇ ಸತ್ಯೇ ಪ್ರಾಣ್ಯಭಿರಕ್ಷಣೇ ।
ತತಃ ಪಾದಪ್ರವೃತ್ತೇ ತು ಧರ್ಮೇ ಶ್ರೇಯೋ ನಿಪತ್ಸ್ಯತೇ ॥ ೮೪ ॥

ತೇಷಾಂ ಲಬ್ಧಾನುಮಾನಾನಾಂ ಗುಣೇಷು ಪರಿವರ್ತತಾಂ ।
ಸ್ವಾದು ಕಿಂತ್ವಿತಿ ವಿಜ್ಞಾಯ ಧರ್ಮ ಏವ ಚ ದೃಶ್ಯತೇ ॥ ೮೫ ॥

ಯಥಾ ಹಾನಿಕ್ರಮಂ ಪ್ರಾಪ್ತಾಸ್ತಥಾ ವೃದ್ಧಿಕ್ರಮಂ ಗತಾಃ ।
ಪ್ರಗೃಹೀತೇ ತತೋ ಧರ್ಮೇ ಪ್ರಪಶ್ಯಂತಿ ಕೃತಂ ಯುಗಂ ॥ ೮೬ ॥

---

೮೩. ಮತ್ತು ತಾವು ಬಯಸುವಂತಹ ಅಭಿಲಷಿತ ವಸ್ತುಗಳು ದೊರೆಯದೆಹೋಗುವುದರಿಂದ ಅವರು ಧರ್ಮಮಾರ್ಗವನ್ನೇ ಅವಲಂಬಿಸುವರು. ಮತ್ತು ಆ ದುಷ್ಕಾಲದಲ್ಲಿ ನಾನಾವಿಧವಾದ ಹಾನಿಯನ್ನು ಅನುಭವಿಸಿದುದರಿಂದ ಒಂದುಬಗೆಯ ಸಂಸ್ಕಾರವನ್ನು ಪಡೆಯುವರು.

೮೪. ಈರೀತಿಯಾಗಿ ದಾನಗಳಲ್ಲಿಯೂ, ಸತ್ಯದಲ್ಲಿಯೂ, ಪ್ರಾಣಿಗಳನ್ನು ಪರಿಪಾಲಿಸುವುದರಲ್ಲಿಯೂ ಅವರು ಮನಸ್ಸಿಟ್ಟು ನಡೆಯುವರು. ಹೀಗಾಗಿ ಧರ್ಮವು ಕಾಲುಪಾಲು ಬೇರೂರಿ ನಿಲ್ಲುವುದು. ಆಗ ಕ್ರಮವಾಗಿ ಶ್ರೇಯಸ್ಸುಂಟಾಗುವುದು.

೮೫. ಆ ಮನುಜರು ಸರಿಯಾದ ಹೇತುಗಳಿಂದ ವಿಚಾರಮಾಡುತ್ತಾ ಒಳ್ಳೆಯಗುಣಗಳನ್ನು ಸಂಪಾದಿಸಲು ಹವಣಿಸುವರು. ಹಾಗೆ ಸದ್ಗುಣಗಳನ್ನು ಪಡೆದನಂತರ ಒಳ್ಳೆಯದಾವುದು ? (ಹಿತವಾವುದು) ಎಂಬುದಾಗಿ ತಾವೇ ವಿಚಾರಮಾಡಿ ಕೊನೆಗೆ ಧರ್ಮವೇ ಶ್ರೇಯಸ್ಕರವಾದುದೆಂದು ನಿರ್ಣಯಿಸಿಕೊಳ್ಳುವರು.

೮೬. ಆ ಮಾನವರು ಯಾವರೀತಿಯಲ್ಲಿ ಅಧೋಗತಿಗೆ ಇಳಿಯುವರೋ ಅದೇರೀತಿಯಲ್ಲಿಯೇ ಕ್ರಮಕ್ರಮವಾಗಿ ಅಭಿವೃದ್ಧಿಯನ್ನೂ ಹೊಂದುವರು. ಅನಂತರ ಅವರು ಧರ್ಮವನ್ನೇ ಅವಲಂಬಿಸಿದರೆ ಆಗ ಕೃತಯುಗವನ್ನು ಮತ್ತೆ ಕಾಣುವರು.

ಸಾಧುವೃತ್ತಿಃ ಕೃತಯುಗೇ ಕಷಾಯೋ ಹಾನಿರುಚ್ಯತೇ ।
ಏಕ ಏವ ತು ಕಾಲೋಽಯಂ ಹೀನವರ್ಣೋ ಯಥಾ ಶಶೀ ॥ ೮೭ ॥

ಛನ್ನಶ್ಚ ತಮಸಾ ಸೋಮೋ ಯಥಾ ಕಲಿಯುಗಂ ತಥಾ ।
ಮುಕ್ತಶ್ಚ ತಮಸಾ ಸೋಮ ಏವಂ ಕೃತಯುಗಂ ಚ ತತ್ ॥ ೮೮ ॥

ಅರ್ಥವಾದಃ ಪರಂ ಬ್ರಹ್ಮ ವೇದಾರ್ಥ ಇತಿ ತಂ ವಿದುಃ ।
ಅವಿವಿಕ್ತಮವಿಜ್ಞಾತಂ ದಾಯಾದ್ಯಮಿಹ ಧಾರ್ಯತೇ ॥ ೮೯ ॥

ಇಷ್ಟವಾದಸ್ತಪೋ ನಾಮ ತಪೋ ಹಿ ಸ್ಥವಿರೀಕೃತಃ ।
ಗುಣೈಃ ಕರ್ಮಾಭಿನಿರ್ವೃತ್ತಿರ್ಗುಣಾಃ ಶುಧ್ಯಂತಿ ಕರ್ಮಣಾ ॥ ೯೦ ॥

---

೮೭. ಕೃತಯುಗದಲ್ಲಿ ಸದ್ವರ್ತನೆಯು ತಾನೇತಾನಾಗಿರುವುದು. ಸಂಕರ ಕಾಲದಲ್ಲಿ (ಕಲಿ) ಆ ಸದ್ವರ್ತನೆಯು ಸಂಪೂರ್ಣವಾಗಿ ನಾಶಹೊಂದುವುದು. ಕಾಲವೇನೋ ಒಂದೇ ಆದರೂ ಆಗ ಅದು ಕಳೆಗುಂದಿದ ಚಂದ್ರನಂತೆ ಕಾಂತಿ ಹೀನವಾಗುವುದು.

೮೮. ಆ ಕಲಿಗಾಲವು ಕತ್ತಲು ಮುಸುಕಿದ ಚಂದ್ರನಂತೆಯೂ, ಕೃತ ಯುಗವು ಕತ್ತಲಿಂದ ಬಿಡಲ್ಪಟ್ಟು ಪ್ರಕಾಶಿಸುತ್ತಿರುವ ಚಂದ್ರನಂತೆಯೂ ಇರುವುದು.

೮೯. ಆ ಪರಬ್ರಹ್ಮನನ್ನು ಅರ್ಥವಾದವೆನ್ನುವರು. ಆ ಪರಮ ಪುರುಷನೇ ವೇದಗಳ ಅರ್ಥ (ಅಭಿಧೇಯ ಅಥವಾ ವಿಷಯ) ವೆಂಬುದಾಗಿ ಜ್ಞಾನಿಗಳು ಅರಿತಿರುವರು. ಆ ಪರಬ್ರಹ್ಮಸ್ವರೂಪವು ವಿವೇಚನೆಗೂ, ತಿಳಿವಳಿಕೆಗೂ ಅತೀತವಾದುದು. ಅಂಥಹ ಪರಬ್ರಹ್ಮವಸ್ತುವನ್ನು ತಮ್ಮ ಆಸ್ತಿಯಂತೆ ಆ ಕೃತಯುಗದಲ್ಲಿನ ಮಾನವರು ಭಾವಿಸಿ ಸರ್ವದಾ ಕಾಪಾಡಿಕೊಂಡಿರುವರು.

೯೦. ತಪಸ್ಸನ್ನೇ ಇಷ್ಟವಾದವೆನ್ನುವರು. ಆ ತಪಸ್ಸು ವೃದ್ಧರಂತೆ ಮಾನ್ಯವಾಗಿರುವುದು. ಮಾನವನ ಕರ್ಮವು ಗುಣಗಳಿಂದಲೇ ಅವಲಂಬಿಸಲ್ಪಡುವುದು. ಆ ಮಾನವನು ಮಾಡುವ ಕರ್ಮಗಳಿಂದ ಆ ಗುಣಗಳು ಶುದ್ಧಿಗೊಳಿಸಲ್ಪಡುವುವು.

ಆಶೀಸ್ತು ಪುರುಷಂ ದೃಷ್ಟ್ವಾ ದೇಶಕಾಲಾನುವರ್ತಿನೀ ।
ಯುಗೇ ಯುಗೇ ಯಥಾಕಾಲಮೃಷಿಭಿಃ ಸಮುದಾಹೃತಾ ॥ ೯೧ ॥

ಧರ್ಮಾರ್ಥಕಾಮಮೋಕ್ಷಾಣಾಂ ದೇವಾನಾಂ ಚ ಪ್ರತಿಕ್ರಿಯಾ ।
ಆಶಿಷಶ್ಚ ಶಿವಾಃ ಪುಣ್ಯಾಸ್ತಥೈವಾಯುರ್ಯುಗೇ ಯುಗೇ ॥ ೯೨ ॥

ತಥಾ ಯುಗಾನಾಂ ಪರಿವರ್ತನಾನಿ
ಚಿರಪ್ರವೃತ್ತಾನಿ ವಿಧಿಸ್ವಭಾವಾತ್ ।
ಕ್ಷಣಂ ನ ಸಂತಿಷ್ಠತಿ ಜೀವಲೋಕಃ
ಕ್ಷಯೋದಯಾಭ್ಯಾಂ ಪರಿವರ್ತಮಾನಃ ॥ ೯೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಭವಿಷ್ಯಕಥನಂ ನಾಮೈಕತ್ರಿಂಶದಧಿಕ-
ದ್ವಿಶತತಮೋಽಧ್ಯಾಯಃ

---

೯೧. ಋಷಿಗಳಾದವರು ಆಯಾ ದೇಶಕಾಲಗಳನ್ನು ಅನುಸರಿಸಿಯೇ ಪುರುಷನನ್ನು ಆಶೀರ್ವದಿಸಿರುವರು.

೯೨. ಪ್ರತಿಯೊಂದು ಯುಗದಲ್ಲಿಯೂ, ಅದದಕ್ಕೆ ಅನುಗುಣವಾಗಿ ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳೂ ದೇವತೆಗಳೂ, ಪಾವನವೂ ಮಂಗಲದಾಯಕವೂ ಆದ ಆಶೀರ್ವಾದಗಳೂ, ಆಯುಸ್ಸೂ ಬೇರೆ ಬೇರೆಯಾಗಿ ವಿಂಗಡಿಸಲ್ಪಟ್ಟಿರುವುವು.

೯೩. ಹಾಗೆಯೇ ದೈವನಿಯಮದಿಂದ ಈ ನಾಲ್ಕುಯುಗಗಳೂ ಬಹು ಹಿಂದಿನಿಂದಲೂ ಸ್ವಾಭಾವಿಕವಾಗಿ ಮರಳುತ್ತಲೇ ಇರುವುವು. ಈರೀತಿಯಾಗಿ ಹುಟ್ಟು, ಸಾವುಗಳ ಸುರುಳಿಗೆ ಸಿಕ್ಕಿರುವ ಜೀವರಾಶಿಯು ಕ್ಷಣಕಾಲವೂ ಒಂದು ಕಡೆ ನಿಲ್ಲದೆ ಸುತ್ತುತ್ತಲೇ ಇರುವುದು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಭವಿಷ್ಯಕಥನವೆಂಬ ಇನ್ನೂರಮೂವತ್ತೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ದ್ವಾತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಸರ್ವೇಷಾಮೇವ ಭೂತಾನಾಂ ತ್ರಿವಿಧಃ ಪ್ರತಿಸಂಚರಃ ।
ನೈಮಿತ್ತಿಕಃ ಪ್ರಾಕೃತಿಕಸ್ತಥೈವಾತ್ಯಂತಿಕೋ ಮತಃ ॥ ೧ ॥

ಬ್ರಾಹ್ಮೋ ನೈಮಿತ್ತಿಕಸ್ತೇಷಾಂ ಕಲ್ಪಾಂತೇ ಪ್ರತಿಸಂಚರಃ ।
ಆತ್ಯಂತಿಕೋ ವೈ ಮೋಕ್ಷಶ್ಚ ಪ್ರಾಕೃತೋ ದ್ವಿಪರಾರ್ಧಿಕಃ ॥ ೨ ॥

ಇನ್ನೂರಮೂವತ್ತೆರಡನೆಯ ಅಧ್ಯಾಯವು

೧. ವ್ಯಾಸಮಹರ್ಷಿಯು ಮತ್ತೆ ಹೇಳತೊಡಗಿದನು. "ಎಲೈ ಮುನಿಗಳಿರಾ! ಸಕಲ ಪ್ರಾಣಿಗಳಿಗೂ ಮೂರುಬಗೆಯಾದ ಪ್ರಳಯಗಳಿರುವುವು. ಅವುಗಳಿಗೆ ಕ್ರಮವಾಗಿ ನೈಮಿತ್ತಿಕ, ಪ್ರಾಕೃತಿಕ, ಆತ್ಯಂತಿಕ ಪ್ರಳಯಗಳೆಂದು ಹೆಸರು.

೨. ಕಲ್ಪದ ಕೊನೆಯಲ್ಲಿ ಬ್ರಹ್ಮನ ನೈಮಿತ್ತಿಕ ಪ್ರಳಯವುಂಟಾಗುವುದು. ಆತ್ಯಂತಿಕ ಪ್ರಳಯವೇ ಮೋಕ್ಷವೆನಿಸುವುದು. ಪ್ರಾಕೃತಿಕ ಪ್ರಳಯವು ಎರಡು ಪರಾರ್ಧವರ್ಷಗಳಿಗೆ ಒಮ್ಮೆ ಉಂಟಾಗುವುದು" ಎನ್ನಲು

॥ ಮುನಯ ಊಚುಃ ॥

ಪರಾರ್ಧಸಂಖ್ಯಾಂ ಭಗವಂಸ್ತ್ವಮಾಚಕ್ಷ್ವ ಯಥೋದಿತಾಂ ।
ದ್ವಿಗುಣೀಕೃತಯಜ್ಜ್ಞೇಯಃ ಪ್ರಾಕೃತಃ ಪ್ರತಿಸಂಚರಃ ॥ ೩ ॥

॥ ವ್ಯಾಸ ಉವಾಚ ॥

ಸ್ಥಾನಾತ್ಸ್ಥಾನಂ ದಶಗುಣಮೇಕೈಕಂ ಗಣ್ಯತೇ ದ್ವಿಜಾಃ ।
ತತೋಽಷ್ಟಾದಶಮೇ ಭಾಗೇ ಪರಾರ್ಧಮಭಿಧೀಯತೇ ॥ ೪ ॥

ಪರಾರ್ಧಂ ದ್ವಿಗುಣಂ ಯತ್ತು ಪ್ರಾಕೃತಃ ಸ ಲಯೋ ದ್ವಿಜಾಃ ।
ತದಾವ್ಯಕ್ತೇಽಖಿಲಂ ವ್ಯಕ್ತಂ ಸಹೇತೌ ಲಯಮೇತಿ ವೈ ॥ ೫ ॥

---

೩. ಆ ಮುನಿಗಳು ಆತನನ್ನು ಕುರಿತು "ಎಲೈ ಭಗವಂತನೇ (ಪೂಜ್ಯನೇ) ಆ ಪ್ರಾಕೃತವೆಂಬ ಪ್ರಲಯವು ಎರಡು ಪರಾರ್ಧವರ್ಷಗಳಿಗೊಮ್ಮೆ ನಡೆಯುವುದು ಎಂದೆಯಲ್ಲವೆ? ಆ ಪರಾರ್ಧದ ಲೆಕ್ಕವನ್ನು ವಿವರವಾಗಿ ನಮಗೆ ತಿಳಿಸಬೇಕು" ಎಂದು ಪ್ರಶ್ನಿಸಿದರು. ಆಗ ವ್ಯಾಸನು ಹೇಳ ತೊಡಗಿದನು :—

೪. ಏಕಾದಿ ಸ್ಥಾನಗಳಲ್ಲಿ ಒಂದಕ್ಕಿಂತ ಒಂದು ಹತ್ತುಮಡಿ ಹೆಚ್ಚಾಗಿರುವುದು. ಹೀಗೆ ಆ ಸ್ಥಾನಗಳನ್ನು ಕ್ರಮವಾಗಿ ಹದಿನೆಂಟುಬಾರಿ ನಿರ್ದೇಶಿಸಿದರೆ ಆ ಹದಿನೆಂಟನೆಯ ಸ್ಥಾನದಲ್ಲಿ ನಿಲ್ಲುವ ಸಂಖ್ಯೆಯೇ ಪರಾರ್ಧವೆನಿಸುವುದು.

೫. ಇಂತಹ ಪರಾರ್ಧ ಸಂಖ್ಯೆಯ ವರ್ಷಗಳು ಎರಡುಬಾರಿ (100000000000000000) (ಪರಾರ್ಧ) ಎರಡುಬಾರಿ ಮರಳಿದನಂತರ ಆ ಪ್ರಾಕೃತ ಪ್ರಲಯವು ಸಂಭವಿಸುವುದು. ಆ ಸಮಯದಲ್ಲಿ ವ್ಯಕ್ತವಾಗಿ ತೋರುವ ಈ ಪ್ರಪಂಚವೆಲ್ಲವೂ ತನಗೆ ಮೂಲಕಾರಣವೆನಿಸಿದ (ಪ್ರಕೃತಿಯೆಂಬ) ಅವ್ಯಕ್ತದಲ್ಲಿ ಅಡಗಿಹೋಗುವುದು. (ಆದುದರಿಂದಲೇ ಅದನ್ನು ಪ್ರಾಕೃತ ಪ್ರಳಯವೆನ್ನುವರು.)

ನಿಮೇಷೋ ಮಾನುಷೋ ಯೋಽಯಂ ಮಾತ್ರಾಮಾತ್ರಪ್ರಮಾಣತಃ ।
ತೈಃ ಪಂಚದಶಭಿಃ ಕಾಷ್ಠಾ ತ್ರಿಂಶತ್ಕಾಷ್ಠಾಸ್ತಥಾ ಕಲಾ ॥ ೬ ॥

ನಾಡಿಕಾ ತು ಪ್ರಮಾಣೇನ ಕಲಾ ಚ ದಶ ಪಂಚ ಚ ।
ಉನ್ಮಾನೇನಾಂಭಸಃ ಸಾ ತು ಪಲಾನ್ಯರ್ಧತ್ರಯೋದಶ ॥ ೭ ॥

ಹೇಮಮಾಷೈಃ ಕೃತಚ್ಛಿದ್ರಾ ಚತುರ್ಭಿಶ್ಚತುರಂಗುಲೈಃ ।
ಮಾಗಧೇನ ಪ್ರಮಾಣೇನ ಜಲಪ್ರಸ್ಥಸ್ತು ಸ ಸ್ಮೃತಃ ॥ ೮ ॥

ನಾಡಿಕಾಭ್ಯಾಮಥ ದ್ವಾಭ್ಯಾಂ ಮುಹೂರ್ತೋ ದ್ವಿಜಸತ್ತಮಾಃ ।
ಅಹೋರಾತ್ರಂ ಮುಹೂರ್ತಾಸ್ತು ತ್ರಿಂಶನ್ಮಾಸೋ ದಿನೈಸ್ತಥಾ ॥ ೯ ॥

---

೬. ಮಾನವನು ಕಣ್ಣುಮುಚ್ಚಿ ತೆರೆಯುವಷ್ಟು ಸಮಯವನ್ನು ನಿಮೇಷ ವೆನ್ನುವರು. (ಮಾತ್ರೆಯೆಂತಲೂ ಕರೆಯುವರು.) ಅಂಥಹ ಹದಿನೈದು ನಿಮೇಷಗಳು ಕಾಷ್ಠಾ ಎಂಬ ಹೆಸರನ್ನು ಪಡೆಯುವುವು. ಅಂತಹ ಮೂವತ್ತು ಕಾಷ್ಠೆಗಳು ಸೇರಿ ಒಂದು ಕಲಾ ಎನಿಸುವುವು.

೭. ಆ ಕಲೆಗಳು ಹದಿನೈದು ಸೇರಿದರೆ ಒಂದು ನಾಡಿಯೆನಿಸುವುದು (ಗಳಿಗೆ) ಇದನ್ನೇ ನೀರಿನ ಅಳತೆಯಿಂದ ಹೇಳುವುದಾದರೆ ಹವಿಮೂರುವರೆ ಪಲವೆನ್ನುವರು (?)

೮. ಚತುರಂಗುಲ (ನಾಲ್ಕು ಬೆಟ್ಟುಗಳು) ಪ್ರಮಾಣವಿರುವ ನಾಲ್ಕು ಚಿನ್ನದ ಮಾಷಗಳಿಂದ ಛಿದ್ರಿಸಲ್ಪಟ್ಟಂಥಹ ಆ ಅಳತೆಯನ್ನು ಮಗಧದೇಶದ ಅಳತೆಯಂತೆ ಜಲಪ್ರಸ್ಥ (ನೀರಿನ ಕೊಳಗ) ವೆನ್ನುವರು. (?)

೯. ಎಲೈ ವಿಪ್ರೋತ್ತಮರಿರಾ! ಎರಡು ನಾಡಿಗಳು ಸೇರಿ ಒಂದು ಮುಹೂರ್ತವೆನಿಸುವುದು. ಅಂಥಹ ಮುಹೂರ್ತಗಳು ಮೂವತ್ತು ಸೇರಿದರೆ ಮನುಷ್ಯರ ಒಂದು ಅಹೋರಾತ್ರ (ದಿವಸ) ವಾಗುವುದು. ಅಂಥಹ ಮೂವತ್ತು ಅಹೋರಾತ್ರಗಳು ಸೇರಿದರೆ ಒಂದು ತಿಂಗಳೆನಿಸುವುದು.

ಮಾಸೈರ್ದ್ವಾದಶಭಿರ್ವರ್ಷಮಹೋರಾತ್ರಂ ತು ತದ್ದಿವಿ ।
ತ್ರಿಭಿರ್ವರ್ಷಶತೈರ್ವರ್ಷಂ ಷಷ್ಟ್ಯಾ ಚೈವಾಸುರದ್ವಿಷಾಂ ॥ ೧೦ ॥

ತೈಸ್ತು ದ್ವಾದಶಸಾಹಸ್ರೈಶ್ಚತುರ್ಯುಗಮುದಾಹೃತಂ ।
ಚತುರ್ಯುಗಸಹಸ್ರಂ ತು ಕಥ್ಯತೇ ಬ್ರಹ್ಮಣೋ ದಿನಂ ॥ ೧೧ ॥

ಸ ಕಲ್ಪಸ್ತತ್ರ ಮನವಶ್ಚತುರ್ದಶ ದ್ವಿಜೋತ್ತಮಾಃ ।
ತದಂತೇ ಚೈವ ಭೋ ವಿಪ್ರಾ ಬ್ರಹ್ಮನೈಮಿತ್ತಿಕೋ ಲಯಃ ॥ ೧೨ ॥

ತಸ್ಯ ಸ್ವರೂಪಮತ್ಯುಗ್ರಂ ದ್ವಿಜೇಂದ್ರಾ ಗದತೋ ಮಮ ।
ಶೃಣುಧ್ವಂ ಪ್ರಾಕೃತಂ ಭೂಯಸ್ತತೋ ವಕ್ಷ್ಯಾಮ್ಯಹಂ ಲಯಂ ॥ ೧೩ ॥

---

೧೦. ಇಂಥಹ ಹನ್ನೆರಡು ತಿಂಗಳುಗಳು ಒಂದು ವರ್ಷವೆನಿಸುವುವು. ಈ ಮಾನವ ವರ್ಷವು (ದೇವಮಾನದರೀತಿಯಲ್ಲಿ) ದೇವತೆಗಳ ಒಂದು ದಿವಸವೆನಿಸುವುದು. ನಮ್ಮ ಮುನ್ನೂರರವತ್ತು ವರ್ಷಗಳಾದರೆ ದೇವಮಾನದಲ್ಲಿ ಒಂದುವರ್ಷವೆನಿಸುವುದು.

೧೧. ಆ ದೇವಮಾನದ ಹನ್ನೆರಡುಸಾವಿರವರ್ಷಗಳು ಒಂದು ಚತುರ್ಯುಗದ ಕಾಲವೆನಿಸುವುದು. ಇಂಥಹ ಚತುರ್ಯುಗಗಳು ಒಂದುಸಾವಿರಸಲ ಮರಳಿದರೆ ಬ್ರಹ್ಮನ ಒಂದುಹಗಲಾಗುವುದು.

೧೨. ಎಲೈ ವಿಪ್ರಶ್ರೇಷ್ಠರಿರಾ! ಈ ಬ್ರಹ್ಮನ ಒಂದುಹಗಲಿನಷ್ಟು ಕಾಲವನ್ನೇ ಕಲ್ಪವೆಂದು ಕರೆಯುವರು. ಆ ಒಂದುಕಲ್ಪದಲ್ಲಿ ಹದಿನಾಲ್ಕು ಮನುಗಳು ಆಗಿಹೋಗುವರು. ಆ ಕಲ್ಪವು ಕಳೆದೊಡನೆಯೇ (ಕೊನೆಯನ್ನೇ) ಬ್ರಹ್ಮನ ನೈಮಿತ್ತಿಕಲಯವೆನ್ನುವರು.

೧೩. ಎಲೈ ದ್ವಿಜವರ್ಯರಿರಾ! ಆ ನೈಮಿತ್ತಿಕಪ್ರಳಯದ ಬಹು ಭಯಂಕರವಾದ ಸ್ವರೂಪವನ್ನು ವಿವರಿಸುವೆನು, ಕೇಳಿರಿ. ಇನ್ನೊಂದುಬಾರಿ ನಿಮಗೆ ಆ ಪ್ರಾಕೃತಪ್ರಳಯದ ಸ್ವರೂಪವನ್ನು ವಿವರಿಸುವೆನು.

ಚತುರ್ಯುಗಸಹಸ್ರಾಂತೇ ಕ್ಷೀಣಪ್ರಾಯೇ ಮಹೀತಲೇ ।
ಅನಾವೃಷ್ಟಿರತೀವೋಗ್ರಾ ಜಾಯತೇ ಶತವಾರ್ಷಿಕೀ ॥ ೧೪ ॥

ತತೋ ಯಾನ್ಯಲ್ಪಸಾರಾಣಿ ತಾನಿ ಸತ್ತ್ವಾನ್ಯನೇಕಶಃ ।
ಕ್ಷಯಂ ಯಾಂತಿ ಮುನಿಶ್ರೇಷ್ಠಾಃ ಪಾರ್ಥಿವಾನ್ಯತಿಪೀಡನಾತ್ ॥ ೧೫ ॥

ತತಃ ಸ ಭಗವಾನ್ಕೃಷ್ಣೋ ರುದ್ರರೂಪೀ ತಥಾವ್ಯಯಃ ।
ಕ್ಷಯಾಯ ಯತತೇ ಕರ್ತುಮಾತ್ಮಸ್ಥಾಃ ಸಕಲಾಃ ಪ್ರಜಾಃ ॥ ೧೬ ॥

ತತಃ ಸ ಭಗವಾನ್ವಿಷ್ಣುರ್ಭಾನೋಃ ಸಪ್ತಸು ರಶ್ಮಿಷು ।
ಸ್ಥಿತಃ ಪಿಬತ್ಯಶೇಷಾಣಿ ಜಲಾನಿ ಮುನಿಸತ್ತಮಾಃ ॥ ೧೭ ॥

ಪೀತ್ವಾಂಭಾಂಸಿ ಸಮಸ್ತಾನಿ ಪ್ರಾಣಿಭೂತಗತಾನಿ ವೈ ।
ಶೋಷಂ ನಯತಿ ಭೋ ವಿಪ್ರಾಃ ಸಮಸ್ತಂ ಪೃಥಿವೀತಲಂ ॥ ೧೮ ॥

---

೧೪. ಹಿಂದೆ ಹೇಳಿದ ಚತುರ್ಯುಗಗಳು ಒಂದುಸಾವಿರಬಾರಿ ಮರಳಿದ ನಂತರ ಭೂಮಿಯೆಲ್ಲವೂ ಕ್ಷಯಿಸಿಹೋದಂತಾಗುವುದು. ಆಗ ನೂರುವರ್ಷಗಳ ಕಾಲ ಅತ್ಯುಗ್ರವಾದಂಥಹ ಅನಾವೃಷ್ಟಿಯು ಉಂಟಾಗುವುದು. (ಮಳೆಯಿಲ್ಲದೆ ಹೋಗುವುದು.

೧೫. ಎಲೈ ಮುನಿಗಳಿರಾ! ಆ ಅನಾವೃಷ್ಟಿಯ ದೆಸೆಯಿಂದ ಬಹುವಾದ ತೊಂದರೆಗಳಿಗೆ ಈಡಾಗಿ ಭೂಮಿವಾಸಿಗಳಾದ ಬಲಹೀನ ಪ್ರಾಣಿಗಳು ಅಸಂಖ್ಯಾತವಾದರೀತಿಯಲ್ಲಿ ಸತ್ತುಹೋಗುವುವು.

೧೬. ಆ ನೂರುವರ್ಷಗಳು ಮುಗಿಯುತ್ತಲೇ ನಾಶರಹಿತನೂ ಭಗವಂತನೂ ಆದ ಕೃಷ್ಣನು ಪ್ರಳಯರುದ್ರನ ರೂಪವನ್ನು ತಾಳಿ ಸಕಲ ಸೃಷ್ಟಿವರ್ಗವನ್ನೂ ತನ್ನಲ್ಲಿ ಅಡಗಿಸಿಕೊಳ್ಳಲು ಅವುಗಳ ಸಂಹಾರಕಾರ್ಯಕ್ಕೆ ಕೈಹಾಕುವನು.

೧೭. ಆಗ ಸರ್ವವ್ಯಾಪಿಯಾದ ಭಗವಂತನು ಸೂರ್ಯನ ಏಳು ಕಿರಣಗಳಲ್ಲಿ ನೆಲೆಸಿ ಭೂಮಿಯಲ್ಲಿರುವ ನೀರೆಲ್ಲವನ್ನೂ ಹೀರತೊಡಗುವನು.

೧೮. ಎಲೈ ವಿಪ್ರರಿರಾ! ಈರೀತಿಯಾಗಿ ಆ ಭಗವಂತನು ಪ್ರಾಣಿಗಳಲ್ಲಿಯೂ ಅಡಗಿರತಕ್ಕ ನೀರೆಲ್ಲವನ್ನೂ ಒಂದು ಬಿಂದುವೂ ಇಡದಹಾಗೆ ಹೀರಿಬಿಟ್ಟು ಸಕಲಭೂಮಂಡಲವನ್ನೂ ಶೋಷಿಸಿಬಿಡುವನು (ಒಣಗಿಸಿಬಿಡುವನು.)

ಸಮುದ್ರಾನ್ಸರಿತಃ ಶೈಲಾನ್ ಶೈಲಪ್ರಸ್ರವಣಾನಿ ಚ ।
ಪಾತಾಲೇಷು ಚ ಯತ್ತೋಯಂ ತತ್ಸರ್ವಂ ನಯತಿ ಕ್ಷಯಂ ॥ ೧೯ ॥

ತತಸ್ತಸ್ಯಾಸ್ಯಭಾವೇನ ತೋಯಾಹಾರೋಪಬೃಂಹಿತಾಃ ।
ಸಹಸ್ರರಶ್ಮಯಃ ಸಪ್ತ ಜಾಯಂತೇ ತತ್ರ ಭಾಸ್ಕರಾಃ ॥ ೨೦ ॥

ಅಧಶ್ಚೋರ್ಧ್ವಂ ಚ ತೇ ದೀಪ್ತಾಸ್ತತಃ ಸಪ್ತ ದಿವಾಕರಾಃ ।
ದಹಂತ್ಯಶೇಷಂ ತ್ರೈಲೋಕ್ಯಂ ಸಪಾತಾಲತಲಂ ದ್ವಿಜಾಃ ॥ ೨೧ ॥

ದಹ್ಯಮಾನಂ ತು ತೈರ್ದೀಪ್ತೈಸ್ತ್ರೈಲೋಕ್ಯಂ ದೀಪ್ತಭಾಸ್ಕರೈಃ ।
ಸಾದ್ರಿನಗಾರ್ಣವಾಭೋಗಂ ನಿಃಸ್ನೇಹಮಭಿಜಾಯತೇ ॥ ೨೨ ॥

---

೧೯. ಸಮುದ್ರಗಳು, ನದಿಗಳು, ಬೆಟ್ಟಗುಟ್ಟಗಳು, ಅವುಗಳಲ್ಲಿ ಮೇಲಿಂದ ಕೆಳಕ್ಕೆ ಹರಿಯುವ ಝುರಿಗಳು, ಪಾತಾಲಲೋಕಗಳು ಇವುಗಳಲ್ಲಿ ಎಲ್ಲೆಲ್ಲಿ ನೀರು ಇವೆಯೋ ಅದೆಲ್ಲವನ್ನೂ ಹೀರಿಬಿಡುವನು.

೨೦. ಬಳಿಕ ಆ ನೀರೆಲ್ಲವೂ ಇಲ್ಲವಾಗುತ್ತಲೇ ಸೂರ್ಯನು ತಾನು ಆಹಾರವಾಗಿ ಸೇವಿಸಿದ ಆ ನೀರಿನ ಮಹಿಮೆಯಿಂದ ಏಳುಮಂದಿ ಸೂರ್ಯರಾಗುವನು. ಪ್ರತಿಯೊಂದು ಸೂರ್ಯನೂ ಸಾವಿರಕಿರಣಗಳಿಂದ ಉಜ್ವಲಿಸುತ್ತಿರುವನು.

೨೧. ಎಲೈ ಬ್ರಾಹ್ಮಣರಿರಾ! ಈರೀತಿಯಾಗಿ ಏಳುಸಂಖ್ಯೆಯನ್ನು ಪಡೆದ ಸೂರ್ಯರು ಕೆಳಮುಖವಾಗಿಯೂ ಮೇಲ್ಮುಖವಾಗಿಯೂ ಉರಿಯುತ್ತಾ ಭೂಮಿಯನ್ನೂ ಸ್ವರ್ಗವನ್ನೂ ಪಾತಾಲವನ್ನೂ ಸುಡಲಾರಂಭಿಸುವರು.

೨೨. ಹೀಗೆ ಆ ಏಳುಮಂದಿ ಸೂರ್ಯರು ದಹಿಸತೊಡಗಲು ಮೂರು ಲೋಕವೆಲ್ಲವೂ ತನ್ನಲ್ಲಿರುವ ಬೆಟ್ಟಗುಟ್ಟಗಳು ಸಮುದ್ರಗಳು ಮುಂತಾದುವುಗಳೊಡನೆ ಸಂಪೂರ್ಣವಾಗಿ ನೀರಿನ ತೇವವೂ ಇಲ್ಲದಂತಾಗುವುದು.

ತತೋ ನಿರ್ದಗ್ಧವೃಕ್ಷಾಂಬು ತ್ರೈಲೋಕ್ಯಮಖಿಲಂ ದ್ವಿಜಾಃ ।
ಭವತ್ಯೇಷಾ ಚ ವಸುಧಾ ಕೂರ್ಮಪೃಷ್ಠೋಪಮಾಕೃತಿಃ　　॥ ೨೩ ॥

ತತಃ ಕಾಲಾಗ್ನಿರುದ್ರೋऽಸೌ ಭೂತಸರ್ಗಹರೋ ಹರಃ ।
ಶೇಷಾಹಿಶ್ವಾಸಸಂತಾಪಾತ್ಪಾತಾಲಾನಿ ದಹತ್ಯಧಃ　　॥ ೨೪ ॥

ಪಾತಾಲಾನಿ ಸಮಸ್ತಾನಿ ಸ ದಗ್ಧ್ವಾ ಜ್ವಲನೋ ಮಹಾನ್ ।
ಭೂಮಿಮಭ್ಯೇತ್ಯ ಸಕಲಂ ದಗ್ಧ್ವಾ ತು ವಸುಧಾತಲಂ　　॥ ೨೫ ॥

ಭುವೋ ಲೋಕಂ ತತಃ ಸರ್ವಂ ಸ್ವರ್ಗಲೋಕಂ ಚ ದಾರುಣಃ ।
ಜ್ವಾಲಾಮಾಲಾಮಹಾವರ್ತಸ್ತತ್ರೈವ ಪರಿವರ್ತತೇ　　॥ ೨೬ ॥

---

೨೩. ಬಳಿಕ ಆ ಮೂರುಲೋಕದಲ್ಲಿರುವ ಗಿಡಮರಗಳೆಲ್ಲವೂ ಸುಟ್ಟು ಉರಿದುಹೋಗುವುವು. ಹೀಗಾಗಿ ಈ ಭೂಮಿಯು ಆಮೆಯ ಬೆನ್ನುಚಿಪ್ಪಿನಂತೆ ಆಗಿಬಿಡುವುದು.

೨೪. ಅನಂತರ ಸೃಷ್ಟಿಸಲ್ಪಟ್ಟ ಸಕಲಜೀವರಾಶಿಯನ್ನೂ ಸಂಹರಿಸಲು ಉದ್ಯುಕ್ತನಾದ ಆ ಕಾಲಾಗ್ನಿರುದ್ರನು ಆದಿಶೇಷನ ವಿಷಫೂತ್ಕಾರಜ್ವಾಲೆಗಳಿಂದ ಪಾತಾಳ ಮೊದಲಾದ ಕೆಳಗಿನ ಲೋಕಗಳನ್ನು ಸುಡತೊಡಗುವನು.

೨೫. ಆ (ಕೆಳಲೋಕಗಳಲ್ಲಿ ಎದ್ದ) ಬೆಂಕಿಯು ಪಾತಾಳಲೋಕಗಳನ್ನೆಲ್ಲಾ ಆವರಿಸಿಕೊಂಡು ಸಂಪೂರ್ಣವಾಗಿ ಸುಟ್ಟುಹಾಕಿದನಂತರ ಭೂಮಿಗೆ ಹಬ್ಬಿ ಅದನ್ನೂ ಸಮಗ್ರವಾಗಿ ಸುಟ್ಟನಂತರ-

೨೬. ಭುವರ್ಲೋಕವನ್ನೂ ಆವರಿಸುವುದು. ಅಲ್ಲಿ ಆ ಬೆಂಕಿಯು ಭಾರಿಭಾರಿ ಸುಳಿಗಳಂತೆ ಮಂಡಲಾಕಾರವಾಗಿ ಸುತ್ತುತ್ತಿರುವ ಸಾವಿರಾರು ಜ್ವಾಲೆಗಳಿಂದ ಬಹುಭಯಂಕರವಾಗಿ ತೋರುತ್ತಾ ಆ ಭುವರ್ಲೋಕವನ್ನು ಸುಟ್ಟುಹಾಕಿ ಬಳಿಕ ಸ್ವರ್ಗಲೋಕವನ್ನೂ ವ್ಯಾಪಿಸಿ ಜ್ವಲಿಸತೊಡಗುವುದು.

ಅಂಬರೀಷಮಿವಾಭಾತಿ ತ್ರೈಲೋಕ್ಯಮಖಿಲಂ ತದಾ ।
ಜ್ವಾಲಾವರ್ತಪರೀವಾರಮುಪಕ್ಷೀಣಬಲಾಸ್ತತಃ ॥ ೨೭ ॥

ತತಸ್ತಾಪಪರೀತಾಸ್ತು ಲೋಕದ್ವಯನಿವಾಸಿನಃ ।
ಹೃತಾವಕಾಶಾ ಗಚ್ಛಂತಿ ಮಹರ್ಲೋಕಂ ದ್ವಿಜಾಸ್ತದಾ ॥ ೨೮ ॥

ತಸ್ಮಾದಪಿ ಮಹಾತಾಪತಪ್ತಾ ಲೋಕಾಸ್ತತಃ ಪರಂ ।
ಗಚ್ಛಂತಿ ಜನಲೋಕಂ ತೇ ದಶಾವೃತ್ಯಾ ಪರೈಷಿಣಃ ॥ ೨೯ ॥

ತತೋ ದಗ್ಧ್ವಾ ಜಗತ್ಸರ್ವಂ ರುದ್ರರೂಪೀ ಜನಾರ್ದನಃ ।
ಮುಖನಿಃಶ್ವಾಸಜಾನ್ಮೇಘಾನ್ಕರೋತಿ ಮುನಿಸತ್ತಮಾಃ ॥ ೩೦ ॥

---

೨೭. ಆಗ ಸಾವಿರಾರು ಉರಿಯನಾಲಗೆಗಳಿಂದ ತುಂಬಿ ಮುಚ್ಚಿಹೋಗಿರುವ ಈ ಮೂರುಲೋಕವೆಲ್ಲವೂ ಕೆಂಪಗೆ ಕಾದಿರುವ ಹುರಿಯುವ ಓಡಿನಂತೆ ಕಾಣುವುದು.

೨೮. ಅನಂತರ ಆ ಭುವರ್ಲೋಕ ಮತ್ತು ಸುವರ್ಲೋಕದಲ್ಲಿರುವ ಜನಗಳು ಆ ಉರಿಯಬೇಗೆಗೆ ಸಿಕ್ಕಿ ತಾಳಲಾರದೆ ನಿಲ್ಲಲು ನೆಲೆಯಿಲ್ಲದೆ ತಲ್ಲಣಿಸುತ್ತಾ ಮಹರ್ಲೋಕಕ್ಕೆ ಹೋಗುವರು.

೨೯. ಅಲ್ಲಿಯೂ ಕೂಡ ಆ ಜನರು ತಾಪವನ್ನು ತಾಳಲಾರದೆ ಅದನ್ನು ಬಿಟ್ಟು ಮೇಲಿನ ಜನಲೋಕಕ್ಕೆ ಹೋಗುವರು. ಹೀಗೆ ತಾವು ನೆಲೆಸಿದ ಪ್ರದೇಶದಲ್ಲಿಯೂ ಉರಿಯುತಗುಲಿ ತಾಪವು ಸಹಿಸಲಾಗದಂತಾದರೆ ಅದನ್ನೂ ಬಿಟ್ಟು ಮುಂದಿನ ಲೋಕವನ್ನು ಹೊಂದಲು ಆಶಿಸುವರು.

೩೦. ಅನಂತರ ಪ್ರಳಯರುದ್ರಸ್ವರೂಪನಾದ ಆ ಜನಾರ್ದನನು ಈರೀತಿಯಾಗಿ ಜಗತ್ತೆಲ್ಲವನ್ನೂ ಸುಟ್ಟುಹಾಕಿದಮೇಲೆ ತನ್ನ ನಿಶ್ವಾಸದಿಂದ ಮೇಘಗಳನ್ನು ಸೃಷ್ಟಿಸುವನು.

ತತೋ ಗಜಕುಲಪ್ರಖ್ಯಾಸ್ತಡಿದ್ವಂತೋ ನಿನಾದಿನಃ ।
ಉತ್ತಿಷ್ಠಂತಿ ತದಾ ವ್ಯೋಮ್ನಿ ಘೋರಾಃ ಸಂವರ್ತಕಾ ಘನಾಃ ॥ ೩೧ ॥

ಕೇಚಿದಂಜನಸಂಕಾಶಾಃ ಕೇಚಿತ್ಕುಮುದಸಂನಿಭಾಃ ।
ಧೂಮವರ್ಣಾ ಘನಾಃ ಕೇಚಿತ್ಕೇಚಿತ್ಪೀತಾಃ ಪಯೋಧರಾಃ ॥ ೩೨ ॥

ಕೇಚಿದ್ಧರಿದ್ರಾವರ್ಣಾಭಾ ಲಾಕ್ಷಾರಸನಿಭಾಸ್ತಥಾ ।
ಕೇಚಿದ್ವೈದೂರ್ಯಸಂಕಾಶಾ ಇಂದ್ರನೀಲನಿಭಾಸ್ತಥಾ ॥ ೩೩ ॥

ಶಂಖಕುಂದನಿಭಾಶ್ಚಾನ್ಯೇ ಜಾತೀಕುಂದನಿಭಾಸ್ತಥಾ ।
ಇಂದ್ರಗೋಪನಿಭಾಃ ಕೇಚಿನ್ಮನಃಶಿಲಾನಿಭಾಸ್ತಥಾ ॥ ೩೪ ॥

---

೩೧. ಹಾಗೆ ಸೃಷ್ಟಿಸಲ್ಪಟ್ಟ ಸಂವರ್ತಕಾದಿಮೇಘಗಳು ಆನೆಯ ಹಿಂಡಿನಂತೆ ಗುಂಪುಗುಂಪಾಗಿ ಸೇರುತ್ತಾ ಮಿಂಚು ಗುಡುಗು ಸಿಡಿಲುಗಳಿಂದ ಬಹು ಭಯಂಕರಗಳಾಗಿರುತ್ತಾ ಆಕಾಶವನ್ನೆಲ್ಲಾ ವ್ಯಾಪಿಸುವುವು.

೩೨. ಆ ಮೇಘಗಳಲ್ಲಿ ಕೆಲವು ಕಾಡಿಗೆಯಂತೆ ಬಣ್ಣವುಳ್ಳವು. ಕೆಲವು ಕುಮುದಪುಷ್ಪ (ನೈದಿಲೆ) ದಂತೆ ಬಣ್ಣವುಳ್ಳವು. ಕೆಲವು ಧೂಮದಂತೆಯೂ (ಹೊಗೆಯಂತೆ) ಮತ್ತೆ ಕೆಲವು ಹಳದಿಯ ಬಣ್ಣವಾಗಿಯೂ ಇರುವುವು.

೩೩. ಇನ್ನು ಕೆಲವು ಮೋಡಗಳು ಅರಿಸಿನದ ಬಣ್ಣವಾಗಿಯೂ, ಮತ್ತೆ ಕೆಲವು ಅರಗಿನ ಬಣ್ಣವಾಗಿಯೂ ತೋರುವುವು. ಕೆಲವು ಮೇಘಗಳು ವೈದೂರ್ಯಗಳಂತೆಯೂ, ಕೆಲವು ಇಂದ್ರನೀಲ (ಪಚ್ಚೆ) ಮಣಿಗಳಂತೆಯೂ ಹೊಳೆಯುತ್ತಿರುವುವು.

೩೪. ಮತ್ತೂ ಕೆಲವು ಮೇಘಗಳು ಶಂಖದಂತೆಯೂ, ಮೊಲ್ಲೆಯ ಮೊಗ್ಗುಗಳಂತೆಯೂ, ಜಾಜಿಹೂಗಳಂತೆಯೂ ಬೆಳ್ಳಗೆ ಇರುವುವು. ಇನ್ನೂ ಕೆಲವು ಮೇಘಗಳು ಇಂದ್ರಗೋಪವೆಂಬ ಹುಳುಗಳಂತೆಯೂ, ಮಣಿಸಿಲೆಯಂತೆಯೂ ಕೆಂಪಗೆ ಇರುವುವು.

ಪದ್ಮಪತ್ರನಿಭಾಃ ಕೇಚಿದುತ್ತಿಷ್ಠಂತಿ ಘನಾ ಘನಾಃ ।
ಕೇಚಿತ್ಪುರವರಾಕಾರಾಃ ಕೇಚಿತ್ಪರ್ವತಸಂನಿಭಾಃ ॥ ೩೫ ॥

ಕೂಟಾಗಾರನಿಭಾಶ್ಚಾನ್ಯೇ ಕೇಚಿತ್ಸ್ಥಲನಿಭಾ ಘನಾಃ ।
ಮಹಾಕಾಯಾ ಮಹಾರಾವಾ ಪೂರಯಂತಿ ನಭಸ್ತಲಂ ॥ ೩೬ ॥

ವರ್ಷಂತಸ್ತೇ ಮಹಾಸಾರಾಸ್ತಮಗ್ನಿಮತಿಭೈರವಂ ।
ಶಮಯಂತ್ಯಖಿಲಂ ವಿಪ್ರಾಸ್ತ್ರೈಲೋಕ್ಯಾಂತರವಿಸ್ತೃತಂ ॥ ೩೭ ॥

ನಷ್ಟೇ ಚಾಗ್ನೌ ಶತಂ ತೇಽಪಿ ವರ್ಷಾಣಾಮಧಿಕಂ ಘನಾಃ ।
ಪ್ಲಾವಯಂತೋ ಜಗತ್ಸರ್ವಂ ವರ್ಷಂತಿ ಮುನಿಸತ್ತಮಾಃ ॥ ೩೮ ॥

---

೩೫. ಕೆಲವು ಮೇಘಗಳು ತಾವರೆಯ ಬಣ್ಣವನ್ನು ಹೋಲುವುವು. ಮತ್ತು ಆ ಮೋಡಗಳಲ್ಲಿ ಕೆಲವು ಭಾರಿಭಾರಿ ಊರಿಗಳಂತೆ ಆಕಾರವುಳ್ಳವುಗಳು. ಕೆಲವು ಪರ್ವತಗಳಂತೆ ಭಾರಿಯಾದುವು.

೩೬. ಕೆಲವು ಮೇಘಗಳು ಗುಡಾರದಂತೆಯೂ ಮತ್ತೆಕೆಲವು ಮೋಡಗಳು ಬಯಲಿನಂತೆಯೂ ತೋರುವುವು. ಹೀಗೆ ಬೃಹತ್ತಾದ ಆಕಾರದಿಂದಲೂ, ಕಠೋರವಾದ ಶಬ್ದದಿಂದಲೂ ಕೂಡಿರುವ ಆ ಮೇಘಗಳು ಆಕಾಶವನ್ನೆಲ್ಲಾ ಮುಚ್ಚಿಬಿಡುವುವು.

೩೭. ಎಲೈ ವಿಪ್ರರಿರಾ! ಆ ಮೇಘಗಳು ಭಾರಿಭಾರಿಯಾದ ಧಾರೆಗಳಲ್ಲಿ (ಹನಿ) ಮಳೆಯನ್ನು ಸುರಿಸುತ್ತಾ ಮೂರುಲೋಕವನ್ನೂ ವ್ಯಾಪಿಸಿಕೊಂಡು ಉರಿಯುತ್ತಿರುವ ಆ ಅತಿಭಯಂಕರವಾದ ಬೆಂಕಿಯನ್ನು ಆರಿಸಿಬಿಡುವುವು.

೩೮. ಆ ಅಗ್ನಿಯು ಶಾಂತವಾದನಂತರ ಆ ಮಹಾಮೇಘಗಳು ಪ್ರಪಂಚವೆಲ್ಲವೂ ಕೊಚ್ಚಿಕೊಂಡುಹೋಗುವಂತೆ, ನೂರುವರ್ಷಗಳಿಗಿಂತಲೂ ಹೆಚ್ಚಾಗಿ ಮಳೆಯನ್ನು ಸುರಿಸುತ್ತಿರುವುವು.

ಧಾರಾಭಿರಕ್ಷಮಾತ್ರಾಭಿಃ ಪ್ಲಾವಯಿತ್ವಾಖಿಲಾಂ ಭುವಂ ।
ಭುವೋ ಲೋಕಂ ತಥೈವೋರ್ಧ್ವಂ ಪ್ಲಾವಯಂತಿ ದಿವಂ ದ್ವಿಜಾಃ ॥ ೩೯ ॥

ಅನ್ಧಕಾರೀಕೃತೇ ಲೋಕೇ ನಷ್ಟೇ ಸ್ಥಾವರಜಂಗಮೇ ।
ವರ್ಷಂತಿ ತೇ ಮಹಾಮೇಘಾ ವರ್ಷಾಣಾಮಧಿಕಂ ಶತಂ ॥ ೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಸಂಹಾರಲಕ್ಷಣಕಥನಂ ನಾಮ ದ್ವಾತ್ರಿಂಶದಧಿಕ-
ದ್ವಿಶತತಮೋಽಧ್ಯಾಯಃ

---

೩೯. ಎಲೈ ದ್ವಿಜರಿರಾ! ಈರೀತಿಯಾಗಿ ತಾರೆಕಾಯಿನಷ್ಟು ಗಾತ್ರದಲ್ಲಿ ಬೀಳುತ್ತಿರುವ ಜಲಧಾರೆಗಳಿಂದ ಭೂಮಂಡಲವೆಲ್ಲವನ್ನೂ ನೀರಿನಲ್ಲಿ ಮುಳುಗುವಂತೆ ಮಾಡಿದನಂತರ ಆ ಮಹಾಮೇಘಗಳು ಭುವರ್ಲೋಕವನ್ನೂ ಅದಾದನಂತರ ಸ್ವರ್ಗಲೋಕವನ್ನೂ ನೀರಿನಿಂದ ತುಂಬಿಹೋಗುವಂತೆ ಮಾಡುವುವು.

೪೦. ಆಗ ಪ್ರಪಂಚದಲ್ಲಿರುವ ಸ್ಥಾವರಜಂಗಮಾತ್ಮಕವಾದ ಜೀವರಾಶಿಗಳೆಲ್ಲವೂ ಸಂಪೂರ್ಣವಾಗಿ ಹಾಳಾಗಿ ಅಲ್ಲೆಲ್ಲಾ ಕತ್ತಲು ತಾನೇತಾನಾಗಿ ವ್ಯಾಪಿಸಿ ಬಿಡುವುದು. ಹೀಗೆ ಅಂಧಕಾರದಿಂದ ತುಂಬಿಹೋದ ಆ ಪ್ರಪಂಚದ ಮೇಲೆ ಆ ಮಹಾಮೇಘಗಳು ನೂರುವರ್ಷಗಳಿಗಿಂತಲೂ ಅಧಿಕವಾಗಿ ಮಳೆಯನ್ನು ಸುರಿಸುವುವು ಎಂದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಸಂಹಾರಲಕ್ಷಣಕಥನವೆಂಬ
ಇನ್ನೂರಮೂವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯಸ್ತ್ರಿಂಶತ್ಯಧಿಕದ್ವಿಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಸಪ್ತರ್ಷಿಸ್ಥಾನಮಾಕ್ರಮ್ಯ ಸ್ಥಿತೇಽಂಭಸಿ ದ್ವಿಜೋತ್ತಮಾಃ ।
ಏಕಾರ್ಣವಂ ಭವತ್ಯೇತತ್ತ್ರೈಲೋಕ್ಯಮಖಿಲಂ ತತಃ ॥ ೧ ॥

ಅಥ ನಿಃಶ್ವಾಸಜೋ ವಿಷ್ಣೋರ್ವಾಯುಸ್ತಾನ್ ಜಲದಾಂಸ್ತತಃ ।
ನಾಶಂ ನಯತಿ ಭೋ ವಿಪ್ರಾ ವರ್ಷಾಣಾಮಧಿಕಂ ಶತಂ ॥ ೨ ॥

ಸರ್ವಭೂತಮಯೋಽಚಿಂತ್ಯೋ ಭಗವಾನ್ಭೂತಭಾವನಃ ।
ಅನಾದಿರಾದಿರ್ವಿಶ್ವಸ್ಯ ಪೀತ್ವಾ ವಾಯುಮಶೇಷತಃ ॥ ೩ ॥

ಇನ್ನೂರಮೂವತ್ತಮೂರನೆಯ ಅಧ್ಯಾಯವು

೧. ವ್ಯಾಸನು ಹೇಳತೊಡಗಿದನು :—ಎಲೈ ಮುನಿಗಳಿರಾ ! ಆ ಮಳೆಯ ನೀರು ಸಪ್ತರ್ಷಿಗಳ ಲೋಕದವರೆಗೂ ವ್ಯಾಪಿಸಿಕೊಂಡು ನಿಂತುಬಿಡಲು ಈ ಪ್ರಪಂಚವೆಲ್ಲವೂ ಒಂದೇ ಒಂದು ಸಮುದ್ರವಾಗಿ ಹೋಗುವುದು.

೨. ಬಳಿಕ ಆ ವಿಷ್ಣುವಿನ ನಿಶ್ವಾಸದಿಂದ ಹುಟ್ಟಿದ ವಾಯುವು ಒಂದು ನೂರು ವರ್ಷಗಳಕಾಲ ಆ ಮೋಡಗಳನ್ನು ಚೆದುರಿಸಿ ನಾಶಮಾಡುವುದು.

೩-೪. ಅನಂತರ ಸಕಲಪ್ರಾಣಿಸ್ವರೂಪನೂ, ಊಹಾತೀತನೂ, ಭೂತ ಭಾವನನೂ, ಆದಿಶೂನ್ಯನೂ, ಪ್ರಪಂಚಕ್ಕೆ ಆದಿಪುರುಷನೂ ಆದ ಭಗವಂತನಾದ

ಏಕಾರ್ಣವೇ ತತಸ್ತಸ್ಮಿನ್ ಶೇಷಶಯ್ಯಾಸ್ಥಿತಃ ಪ್ರಭುಃ ।
ಬ್ರಹ್ಮರೂಪಧರಃ ಶೇತೇ ಭಗವಾನಾದಿಕೃದ್ಧರಿಃ ॥ ೪ ॥

ಜನಲೋಕಗತೈಃ ಸಿದ್ಧೈಃ ಸನಕಾದ್ಯೈರಭಿಷ್ಟುತಃ ।
ಬ್ರಹ್ಮಲೋಕಗತೈಶ್ಚೈವ ಚಿಂತ್ಯಮಾನೋ ಮುಮುಕ್ಷುಭಿಃ ॥ ೫ ॥

ಆತ್ಮಮಾಯಾಮಯೀಂ ದಿವ್ಯಾಂ ಯೋಗನಿದ್ರಾಂ ಸಮಾಸ್ಥಿತಃ ।
ಆತ್ಮಾನಂ ವಾಸುದೇವಾಖ್ಯಂ ಚಿಂತಯನ್ಪರಮೇಶ್ವರಃ ॥ ೬ ॥

ಏಷ ನೈಮಿತ್ತಿಕೋ ನಾಮ ವಿಪ್ರೇಂದ್ರಾಃ ಪ್ರತಿಸಂಚರಃ ।
ನಿಮಿತ್ತಂ ತತ್ರ ಯಚ್ಛೇತೇ ಬ್ರಹ್ಮರೂಪಧರೋ ಹರಿಃ ॥ ೭ ॥

ಶ್ರೀಹರಿಯು ಆ ವಾಯುವೆಲ್ಲವನ್ನೂ ತನ್ನಲ್ಲಿಯೇ ಅಡಗಿಸಿಕೊಂಡುಬಿಡುವನು. ಬಳಿಕ ಒಂದೇ ಒಂದು ಸಾಗರವಾಗಿ ಪರಿಣಮಿಸಿರುವ ಅಪಾರಜಲರಾಶಿಯಲ್ಲಿ ಆದಿಶೇಷನೆಂಬ ಶಯ್ಯೆಯಮೇಲೆ ಬ್ರಹ್ಮರೂಪವನ್ನು ಧರಿಸಿ ಮಲಗಿಬಿಡುವನು.

೫. ಆಗ ಪರಮಪುರುಷನನ್ನು ಜನಲೋಕದಲ್ಲಿರುವ ಸನಕ ಸನಂದ ನಾದಿಗಳಾದ ಸಿದ್ಧರು ಸ್ತೋತ್ರಮಾಡುವರು. ಬ್ರಹ್ಮಲೋಕದಲ್ಲಿರುವ ಮೋಕ್ಷಾಪೇಕ್ಷಿಗಳಾದ ಪುಣ್ಯಪುರುಷರು ಧ್ಯಾನಮಾಡತೊಡಗುವರು.

೬. ಆ ಪರಮೇಶ್ವರನು ಶೇಷತಲ್ಪದಲ್ಲಿ ಪವಡಿಸಿರುವಾಗ ತನ್ನ ಮಾಯೆಯೇ ಆಗಿರುವ ದಿವ್ಯವಾದ ಯೋಗನಿದ್ರೆಯನ್ನು ಅವಲಂಬಿಸಿ ವಾಸುದೇವನೆಂಬ ತನ್ನ ಪದಸ್ವರೂಪವನ್ನು ಧ್ಯಾನಿಸುತ್ತಾ ಇರುವನು.

೭. ಎಲೈ ವಿಪ್ರೇಂದ್ರರಿರಾ! ಇದೀಗ ನೈಮಿತ್ತಿಕ ಪ್ರಳಯವು. ಆ ಅಪಾರಜಲರಾಶಿಯಲ್ಲಿ ಬ್ರಹ್ಮರೂಪವನ್ನು ತಾಳಿ ಮಲಗಿರುವ ಶ್ರೀಹರಿಯೇ ಇದಕ್ಕೆ ನಿಮಿತ್ತವಾದುದರಿಂದ ಈ ಪ್ರಳಯವು ನೈಮಿತ್ತಿಕವೆಂಬುದಾಗಿ ಹೆಸರನ್ನು ಪಡೆಯಿತು.

ಯದಾ ಜಾಗರ್ತಿ ಸರ್ವಾತ್ಮಾ ಸ ತದಾ ಚೇಷ್ಟತೇ ಜಗತ್ ।
ನಿಮೀಲತ್ಯೇತದಖಿಲಂ ಮಾಯಾಶಯ್ಯಾಶಯೋಽಚ್ಯುತೇ ॥ ೮ ॥

ಪದ್ಮಯೋನೇರ್ದಿನಂ ಯತ್ತು ಚತುರ್ಯುಗಸಹಸ್ರವತ್ ।
ಏಕಾರ್ಣವಕೃತೇ ಲೋಕೇ ತಾವತೀ ರಾತ್ರಿರುಚ್ಯತೇ ॥ ೯ ॥

ತತಃ ಪ್ರಬುದ್ಧೋ ರಾತ್ರ್ಯಂತೇ ಪುನಃ ಸೃಷ್ಟಿಂ ಕರೋತ್ಯಜಃ ।
ಬ್ರಹ್ಮಸ್ವರೂಪಧೃಗ್ವಿಷ್ಣುರ್ಯಥಾ ವಃ ಕಥಿತಂ ಪುರಾ ॥ ೧೦ ॥

ಇತ್ಯೇಷ ಕಲ್ಪಸಂಹಾರೋ ಅಂತರಪ್ರಲಯೋ ದ್ವಿಜಾಃ ।
ನೈಮಿತ್ತಿಕೋ ವಃ ಕಥಿತಃ ಶೃಣುಧ್ವಂ ಪ್ರಾಕೃತಂ ಪರಂ ॥ ೧೧ ॥

---

೮. ಸಕಲಸ್ವರೂಪನೂ ನಾಶರಹಿತನೂ ಆದ ಶ್ರೀಹರಿಯು ಎಚ್ಚೆತ್ತಾಗ ಈ ಜಗತ್ತೆಲ್ಲವೂ ಮತ್ತೆ ಮೊದಲಿನಂತೆ ಕಂಗೊಳಿಸುವುದು. ಆ ಪ್ರಭುವು ಶೇಷ ಶಯ್ಯೆಯ ಮೇಲೆ ಮಲಗಿ ಯೋಗನಿದ್ರೆಯಲ್ಲಿ ಮುಳುಗಿದಾಗ ಈ ಜಗತ್ತೆಲ್ಲವೂ ಲಯವನ್ನು ಹೊಂದುವುದು.

೯. ಚತುರ್ಯುಗಗಳು ಒಂದುಸಾವಿರಬಾರಿ ಮರಳಿದರೆ ಒಂದುಹಗಲು ಆಗುವಂತೆಯೇ, ಆ ಪ್ರಪಂಚವೆಲ್ಲವೂ ಒಂದೇ ಒಂದು ಜಲರಾಶಿಯಾದನಂತರ. ಆ ಬ್ರಹ್ಮನಿಗೆ ಅಷ್ಟೇಹೊತ್ತು (ಒಂದುಸಾವಿರ ಚತುರ್ಯುಗಗಳಕಾಲ) ರಾತ್ರಿಯೆನಿಸುವುದು.

೧೦. ಆ ರಾತ್ರಿಯು ಮುಗಿದನಂತರ ಬ್ರಹ್ಮರೂಪಧರನಾದ ಶ್ರೀಹರಿಯು ಹಿಂದೆ ನಿಮಗೆ ನಾನು ವಿವರಿಸಿರುವಂತೆ ಮತ್ತೆ ಜಗತ್ಸೃಷ್ಟಿಯನ್ನು ಮಾಡುವನು.

೧೧. ಎಲೈ ದ್ವಿಜರಿರಾ! ಈಗ ನಿಮಗೆ ಕಲ್ಪವನ್ನೂ, ಅದರ ಕೊನೆಯನ್ನೂ, ನೈಮಿತ್ತಿಕವೆಂಬ ಹೆಸರಿನ ಅಂತರಪ್ರಳಯವನ್ನೂ ತಿಳಿಸಿದೆನು. ಇನ್ನು ಪ್ರಾಕೃತಪ್ರಳಯದ ಸ್ವರೂಪವನ್ನು ವಿವರಸುವೆನು. ಕೇಳಿರಿ.

ಅನ್ವೃಷ್ಟ್ಯಗ್ನ್ಯಾದಿಭಿಃ ಸಮ್ಯಕ್ಕೃತೇ ಶಯ್ಯಾಲಯೇ ದ್ವಿಜಾಃ ।
ಸಮಸ್ತೇಷ್ವೇವ ಲೋಕೇಷು ಪಾತಾಲೇಷ್ವಖಿಲೇಷು ಚ ॥ ೧೨ ॥

ಮಹದಾದೇರ್ವಿಕಾರಸ್ಯ ವಿಶೇಷಾತ್ತತ್ರ ಸಂಕ್ಷಯೇ ।
ಕೃಷ್ಣೇಚ್ಛಾಕಾರಿತೇ ತಸ್ಮಿನ್ಪ್ರವೃತ್ತೇ ಪ್ರತಿಸಂಚರೇ ॥ ೧೩ ॥

ಆಪೋ ಗ್ರಸಂತಿ ವೈ ಪೂರ್ವಂ ಭೂಮೇರ್ಗಂಧಾದಿಕಂ ಗುಣಂ ।
ಆತ್ತಗಂಧಾ ತತೋ ಭೂಮಿಃ ಪ್ರಲಯಾಯ ಪ್ರಕಲ್ಪತೇ ॥ ೧೪ ॥

ಪ್ರನಷ್ಟೇ ಗಂಧತನ್ಮಾತ್ರೇ ಭವತ್ಯುರ್ವೀ ಜಲಾತ್ಮಿಕಾ ।
ಆಪಸ್ತದಾ ಪ್ರವೃತ್ತಾಸ್ತು ವೇಗವತ್ಯೋ ಮಹಾಸ್ವನಾಃ ॥ ೧೫ ॥

ಸರ್ವಮಾಪೂರಯಂತೀದಂ ತಿಷ್ಠಂತಿ ವಿಚರಂತಿ ಚ ।
ಸಲಿಲೇನೈವೋರ್ಮಿಮತಾ ಲೋಕಾಲೋಕಃ ಸಮಂತತಃ ॥ ೧೬ ॥

೧೨-೧೩. ಆ ಪರಮಪುರುಷನಾದ ಶ್ರೀಹರಿಯ ಇಚ್ಛೆಯಿಂದ ಮಹತ್ತತ್ತ್ವ ಮೊದಲಾದ ಪ್ರಕೃತಿಯ ವಿಕಾರಗಳಲ್ಲಿ ಒಂದುಬಗೆಯ ವಿಶೇಷವುಂಟಾಗುವುದು. ಅದರಿಂದ ಆ ಪ್ರಾಕೃತಪ್ರಳಯವುಂಟಾಗುವುದು. ಆಗಲೂ ಸಹ, ಭೂಲೋಕ, ಪಾತಾಳಸ್ವರ್ಗಲೋಕ ಮುಂತಾದುವುಗಳೆಲ್ಲವೂ, ಅನಾವೃಷ್ಟಿಯಿಂದಲೂ, ಅಗ್ನಿಯದೆಸೆಯಿಂದಲೂ ಹಾಳಾಗುವುವು.

೧೪. ಆಗ ಮೊತ್ತಮೊದಲನೆಯದಾಗಿ ಜಲವು ಭೂಮಿಯ ಗಂಧತನ್ಮಾತ್ರವನ್ನು ನುಂಗಿಬಿಡುವುದು. (ಅಡಗಿಸಿಕೊಳ್ಳುವುದು.) ಹೀಗೆ ತನ್ನ ವಿಶೇಷಧರ್ಮವಾದ ಗಂಧತನ್ಮಾತ್ರವು ಅಪಹೃತವಾದೊಡನೆಯೇ ಭೂಮಿಯು ಪ್ರಳಯಕ್ಕೆ ಸಿದ್ಧವಾಗುವುದು.

೧೫. ಆಗ ಅದೆಲ್ಲವೂ ನೀರಾಗಿ ಪರಿಣಮಿಸಿಬಿಡುವುದು. ಆಗ ಎಲ್ಲೆಲ್ಲೂ ನೀರೇನೀರಾಗುವುದು. ಆ ನೀರು ಮಹಾವೇಗದಿಂದ ಹರಿಯುತ್ತಾ, ಮೊರೆಯತೊಡಗುವುದು.

೧೬. ಬಳಿಕ ಲೋಕಾಲೋಕ ಪರ್ವತದ ಸುತ್ತಲೂ ಆ ನೀರು ಭಾರಿಭಾರಿ ಅಲೆಗಳನ್ನು ತಾಳಿ ಒಂದುಕಡೆ ಹರಿಯುತ್ತಲೂ ಒಂದುಕಡೆ ನಿಲ್ಲುತ್ತಲೂ ಇರುತ್ತಾ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡು ನೆಲೆಸುವುದು.

ಅಪಾಮಪಿ ಗುಣೋ ಯಸ್ತು ಜ್ಯೋತಿಷಾ ಪೀಯತೇ ತು ಸಃ ।
ನಶ್ಯಂತ್ಯಾಪಃ ಸುತಸ್ತಾಶ್ಚ ರಸತನ್ಮಾತ್ರಸಂಕ್ಷಯಾತ್ ॥ ೧೭ ॥

ತತಶ್ಚಾಪೋಽಮೃತರಸಾ ಜ್ಯೋತಿಷ್ಟ್ವಂ ಪ್ರಾಪ್ನುವಂತಿ ವೈ ।
ಅಗ್ನ್ಯವಸ್ಥೇ ತು ಸಲಿಲೇ ತೇಜಸಾ ಸರ್ವತೋ ವೃತೇ ॥ ೧೮ ॥

ಸ ಚಾಗ್ನಿಃ ಸರ್ವತೋ ವ್ಯಾಪ್ಯ ಆದತ್ತೇ ತಜ್ಜಲಂ ತದಾ ।
ಸರ್ವಮಾಪೂರ್ಯತೋ ಚಾಭಿಸ್ತದಾ ಜಗದಿದಂ ಶನೈಃ ॥ ೧೯ ॥

ಅರ್ಚಿಭಿಃ ಸಂತತೇ ತಸ್ಮಿಂಸ್ತಿರ್ಯಗೂರ್ಧ್ವಮಧಸ್ತಥಾ ।
ಜ್ಯೋತಿಷೋಽಪಿ ಪರಂ ರೂಪಂ ವಾಯುರತ್ತಿ ಪ್ರಭಾಕರಂ ॥ ೨೦ ॥

ಪ್ರಲೀನೇ ಚ ತತಸ್ತಸ್ಮಿನ್ವಾಯುಭೂತೇಽಖಿಲಾತ್ಮಕೇ ।
ಪ್ರನಷ್ಟೇ ರೂಪತನ್ಮಾತ್ರೇ ಕೃತರೂಪೋ ವಿಭಾವಸುಃ ॥ ೨೧ ॥

---

೧೭. ಅನಂತರ ಆ ಜಲದ ಮುಖ್ಯಗುಣವಾದ ರಸತನ್ಮಾತ್ರವನ್ನು ತೇಜಸ್ಸು ಹೀರಿಕೊಂಡುಬಿಡುವುದು. ಹೀಗೆ ರಸತನ್ಮಾತ್ರವು ಇಲ್ಲವಾಗುತ್ತಲೇ ಆ ನೀರು ಕುದಿಯತೊಡಗಿ ಕೊನೆಗೆ ಇಲ್ಲವಾಗುವುದು.

೧೮-೧೯. ಆಗ ಅಮೃತವೆನಿಸಿದ ರಸಸ್ವರೂಪವಾದ ಆ ಜಲವು ತೇಜೋರೂಪವಾಗಿಬಿಡುವುದು. ಹೀಗೆ ಜಲವೆಲ್ಲವೂ ಯಾವಾಗ ತೇಜೋರೂಪವನ್ನು ತಾಳುವುದೋ ಆಗ ಆ ತೇಜಸ್ಸು ಎಲ್ಲಕಡೆಗೂ ಸರ್ರನೆಹಬ್ಬಿ ಜಗತ್ತೆಲ್ಲವನ್ನೂ ಮೆಲ್ಲಮೆಲ್ಲನೆ ವ್ಯಾಪಿಸುತ್ತಾ ಬರುವುದು.

೨೦. ಹೀಗೆ ಆ ತೇಜಸ್ಸು ತನ್ನ ಜ್ವಾಲೆಗಳನ್ನು ಮೇಲಕ್ಕೂ, ಕೆಳಕ್ಕೂ, ಅಡ್ಡಡ್ಡಲಾಗಿಯೂ ಹರಡಿದನಂತರ ಅದರ ವಿಶೇಷಗುಣವೆನಿಸಿದ ರೂಪತನ್ಮಾತ್ರವನ್ನು ವಾಯುವು ಅಡಗಿಸಿಬಿಡುವುದು.

೨೧-೨೨. ಅಖಿಲಸ್ವರೂಪವಾದ ಆ ವಾಯುವಿನಲ್ಲಿ ರೂಪತನ್ಮಾತ್ರವು ಅಡಗಿಹೋದಮೇಲೆ ಬೆಂಕಿಯ ಜ್ವಾಲೆಗಳೆಲ್ಲವೂ ಅಡಗಿಹೋಗುವುವು. ಹೀಗೆ

ಪ್ರಶಾಮ್ಯತಿ ತದಾ ಜ್ಯೋತಿರ್ವಾಯುರ್ದೋಧೂಯತೇ ಮಹಾನ್ ।
ನಿರಾಲೋಕೇ ತದಾ ಲೋಕೇ ವಾಯುಸಂಸ್ಥೇ ಚ ತೇಜಸಿ ॥ ೨೨ ॥

ತತಃ ಪ್ರಲಯಮಾಸಾದ್ಯ ವಾಯುಸಂಭವಮಾತ್ಮನಃ ।
ಊರ್ಧ್ವಂ ಚ ವಾಯುಸ್ತಿರ್ಯಕ್ಚ ದೋಧವೀತಿ ದಿಶೋ ದಶ ॥ ೨೩ ॥

ವಾಯೋಸ್ತ್ವಪಿ ಗುಣಂ ಸ್ಪರ್ಶಮಾಕಾಶಂ ಗ್ರಸತೇ ತತಃ ।
ಪ್ರಶಾಮ್ಯತಿ ತದಾ ವಾಯುಃ ಖಂ ತು ತಿಷ್ಠತ್ಯನಾವೃತಂ ॥ ೨೪ ॥

ಅರೂಪಮರಸಸ್ಪರ್ಶಮಗನ್ಧವದಮೂರ್ತಿತಂ ।
ಸರ್ವಮಾಪೂರಯಚ್ಚೈವ ಸುಮಹತ್ತತ್ಪ್ರಕಾಶತೇ ॥ ೨೫

ಪರಿಮಂಡಲತಸ್ತಸ್ತು ಆಕಾಶಂ ಶಬ್ದಲಕ್ಷಣಂ ।
ಶಬ್ದಮಾತ್ರಂ ತಥಾಕಾಶಂ ಸರ್ವಮಾವೃತ್ಯ ತಿಷ್ಠತಿ ॥ ೨೬ ॥

ತೇಜಸ್ಸು ವಾಯುವಿನಲ್ಲಿ ಲೀನವಾಗುತ್ತಲೇ ಪ್ರಪಂಚವೆಲ್ಲವೂ ಅಂಧಕಾರಾವೃತ ವಾಗುವುದು. ಆಗ ಆ ವಾಯುವು ಬಹು ಜೋರಾಗಿ ಬೀಸತೊಡಗುವುದು.

೨೩. ಆ ವಾಯುವು ಮೇಲ್ಮುಖವಾಗಿಯೂ, ಅಡ್ಡಡ್ಡವಾಗಿಯೂ ಬೀಸುತ್ತಾ ಹತ್ತು ದಿಕ್ಕುಗಳನ್ನೂ ಅಲ್ಲಾಡಿಸಿ ಬಿಡುವುದು.

೨೪. ಅನಂತರ ಆ ವಾಯುವಿನ ಸ್ಪರ್ಶತನ್ಮಾತ್ರವನ್ನು ಆಕಾಶವು ನುಂಗಿಬಿಡುವುದು. ಆಗ ಆ ಬಿರುಗಾಳಿಯು ಪ್ರಶಾಂತವಾಗುವುದು. ಆಗ ಆಕಾಶವೊಂದೇ ಯಾವೊಂದು ಆವರಣವೂ ಇಲ್ಲದೆ ನಿಲ್ಲುವುದು.

೨೫. ಆಕಾಶವು ರೂಪವಿಲ್ಲದೆಯೂ ಸ್ಪರ್ಶವಿಲ್ಲದೆಯೂ, ಗಂಧವಿಲ್ಲ ದೆಯೂ, ಆಕಾರವಿಲ್ಲದೆಯೂ ಇರುತ್ತಾ ಎಲ್ಲವನ್ನೂ ಆವರಿಸಿ ಬಹು ದೊಡ್ಡ ದಾಗಿ ತೋರುವುದು.

೨೬. ಆ ಆಕಾಶವು ಶಬ್ದವನ್ನೇ ಗುಣವಾಗಿ ಪಡೆಯುವುದು. ಆ ಶಬ್ದವೇ ತನ್ಮಾತ್ರವೆನಿಸಿದ ಆಕಾಶವು ಎಲ್ಲವನ್ನೂ ಆವರಿಸಿ ಕೊಂಡಿರುವುದು.

ತತಃ ಶಬ್ದಗುಣಂ ತಸ್ಯ ಭೂತಾದಿರ್ಗ್ರಸತೇ ಪುನಃ ।
ಭೂತೇಂದ್ರಿಯೇಷು ಯುಗಪದ್ಭೂತಾದೌ ಸಂಸ್ಥಿತೇಷು ವೈ ॥ ೨೭ ॥

ಅಭಿಮಾನಾತ್ಮಕೋ ಹ್ಯೇಷ ಭೂತಾದಿಸ್ತಾಮಸಃ ಸ್ಮೃತಃ ।
ಭೂತಾದಿಂ ಗ್ರಸತೇ ಚಾಪಿ ಮಹಾಬುದ್ಧಿರ್ವಿಚಕ್ಷಣಾ ॥ ೨೮ ॥

ಉರ್ವೀ ಮಹಾಂಶ್ಚ ಜಗತಃ ಪ್ರಾಂತೇಽಂತರ್ಬಾಹ್ಯತಸ್ತಥಾ ।
ಏವಂ ಸಪ್ತಮಹಾಬುದ್ಧಿಃ ಕ್ರಮಾತ್ಪ್ರಕೃತಯಸ್ತಥಾ ॥ ೨೯ ॥

ಪ್ರತ್ಯಾಹಾರೈಸ್ತು ತಾಃ ಸರ್ವಾಃ ಪ್ರವಿಶಂತಿ ಪರಸ್ಪರಂ ।
ಯೇನೇದಮಾವೃತಂ ಸರ್ವಮಂಡಮಪ್ಸು ಪ್ರಲೀಯತೇ ॥ ೩೦ ॥

---

೨೭. ಅನಂತರ ಆಕಾಶದ ಶಬ್ದತನ್ಮಾತ್ರವನ್ನು ಭೂತಾದಿಯು ಅಡಗಿಸಿಕೊಳ್ಳುವುದು. ಈರೀತಿಯಾಗಿ ಪಂಚಭೂತಗಳಿಗೆ ಸಂಬಂಧಿಸಿದ ಇಂದ್ರಿಯಗಳೆಲ್ಲವೂ ಆ ಭೂತಾದಿಯಲ್ಲಿ ಒಟ್ಟಿಗೆ ನೆಲೆಸುವುವು.

೨೮. ಈ ಭೂತಾದಿಯನ್ನೇ ತಾಮಸಾಭಿಮಾನ ತಾಮಸಾಹಂಕಾರವೆನ್ನುವರು. ತಾಮಸಾಹಂಕಾರವೆಂಬ ಹೆಸರುಳ್ಳ ಈ ಭೂತಾದಿಯನ್ನು ಮಹತ್ತೆಂಬ ಬುದ್ಧಿತತ್ವವು ನುಂಗಿಹಾಕುವುದು.

೨೯. ಈ ಜಗತ್ತಿನ ಹೊರಪ್ರಾಂತದಲ್ಲಿ ಭೂಮಿಯೂ ಒಳಪ್ರಾಂತದಲ್ಲಿ ಮಹಾಬುದ್ಧಿತತ್ವವೂ ನೆಲೆಸಿರುವುದು. ಈರೀತಿಯಾಗಿ ಭೂಮಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಭೂತಾದಿಯೆಂಬ ತಾಮಸಾಹಂಕಾರ, ಮಹತ್ತತ್ವವೆಂಬ ಬುದ್ಧಿ ಇವು ಏಳೂ ಪ್ರಕೃತಿಯ ವಿಕಾರಗಳೇ ಆಗಿರುವುವು.

೩೦. ಮೇಲೆ ಹೇಳಿದ ಈ ಪ್ರಕೃತಿಯ ವಿಕೃತಿಗಳು ಹಿಂದೆ ವಿವರಿಸಿದಂತೆ ಒಂದು ಮತ್ತೊಂದರಲ್ಲಿ ಸೇರಿಹೋಗುವುದು. ಹೀಗೆ ಸಕಲ ಜಗತ್ತನ್ನೂ ಆವರಿಸಿರುವ ಬ್ರಹ್ಮಾಂಡವೆನ್ನುವುದು ನೀರಿನಲ್ಲಿ ಅಡಗಿಹೋಗುವುದು.

ಸಪ್ತದ್ವೀಪಸಮುದ್ರಾಂತಂ ಸಪ್ತಲೋಕಂ ಸಪರ್ವತಂ ।
ಉದಕಾವರಣಂ ಹ್ಯತ್ರ ಜ್ಯೋತಿಷಾ ಪೀಯತೇ ತು ತತ್ ॥ ೩೧ ॥

ಜ್ಯೋತಿರ್ವಾಯೌ ಲಯಂ ಯಾತಿ ಯಾತ್ಯಾಕಾಶೇ ಸಮೀರಣಃ ।
ಆಕಾಶಂ ಚೈವ ಭೂತಾದಿರ್ಗ್ರಸತೇ ತಂ ತಥಾ ಮಹಾನ್ ॥ ೩೨ ॥

ಮಹಾಂತಮೇಭಿಃ ಸಹಿತಂ ಪ್ರಕೃತಿರ್ಗ್ರಸತೇ ದ್ವಿಜಾಃ ।
ಗುಣಸಾಮ್ಯಮನುದ್ರಿಕ್ತಮನ್ಯೂನಂ ಚ ದ್ವಿಜೋತ್ತಮಾಃ ॥ ೩೩ ॥

ಪ್ರೋಚ್ಯತೇ ಪ್ರಕೃತಿರ್ಹೇತುಃ ಪ್ರಧಾನಂ ಕಾರಣಂ ಪರಂ ।
ಇತ್ಯೇಷಾ ಪ್ರಕೃತಿಃ ಸರ್ವಾ ವ್ಯಕ್ತಾವ್ಯಕ್ತಸ್ವರೂಪಿಣೀ ॥ ೩೪ ॥

---

೩೧. ಜಂಬೂಪ್ಲಕ್ಷಾದಿಸಪ್ತದ್ವೀಪಗಳು, ಲವಣೇಕ್ಷುಸುರಾದಿ ಸಪ್ತ ಸಮುದ್ರಗಳು, ಭೂವ್ಯಾದಿಸಪ್ತಲೋಕಗಳು, ಮೇರು ಮಂದರಾದಿ ಸಪ್ತಕುಲಾ ಚಲಗಳು ಇವುಗಳನ್ನೊಳಗೊಂಡಿರುವ ಈ ಬ್ರಹ್ಮಾಂಡವು ಉದಕದಿಂದ ಆವೃತ ವಾಗಿರುವುದು. ಆ ಉದಕಾವರಣವನ್ನು ತೇಜಸ್ಸು ಹೀರಿಬಿಡುವುದು.

೩೨. ಆ ತೇಜಸ್ಸೂ ವಾಯುವಿನಲ್ಲಿ ಲಯಹೊಂದುವುದು. ವಾಯುವು ಆಕಾಶದಲ್ಲಿ ಐಕ್ಯಹೊಂದುವುದು. ಆಕಾಶವನ್ನು ಭೂತಾದಿಯೂ ಆ ಭೂತಾದಿ ಯನ್ನು (ತಾಮಸಾಹಂಕಾರ) ಮಹತ್ತತ್ತ್ವವೂ ಕಬಳಿಸಿಬಿಡುವುದು.

೩೩. ಎಲೈ ಬ್ರಾಹ್ಮಣರಿರಾ! ಹಿಂದೆ ಹೇಳಿದುದೆಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡ ಆ ಮಹತ್ತತ್ತ್ವವನ್ನು ಪ್ರಕೃತಿಯು ನುಂಗಿ ತನ್ನಲ್ಲಿ ಐಕ್ಯ ಮಾಡಿಕೊಳ್ಳುವುದು. ಸತ್ತ್ವರಜಸ್ತಮಸ್ಸುಗಳೆಂಬ ಗುಣತ್ರಯಗಳಲ್ಲಿ ಯಾವುದೂ ಹೆಚ್ಚಾಗಲೀ ಕಮ್ಮಿಯಾಗಲೀ ಆಗದೆ ಸಮಾನಸ್ಥಿತಿಯಲ್ಲಿರುವುದೇ ಪ್ರಕೃತಿಯೆನಿಸಿಕೊಳ್ಳುವುದು.

೩೪. ಆ ಪ್ರಕೃತಿಯನ್ನೇ ಹೇತುವೆಂತಲೂ, ಪ್ರಧಾನವೆಂತಲೂ ಕರೆ ಯುವರು. ವ್ಯಕ್ತವೂ ಅವ್ಯಕ್ತವೂ ಆದ ತತ್ತ್ವಗಳೆಲ್ಲವೂ ಆ ಪ್ರಕೃತಿಯೇ ಆದುದರಿಂದ ಅದನ್ನು ವ್ಯಕ್ತಾವ್ಯಕ್ತಸ್ವರೂಪಿಣಿಯೆನ್ನುವರು.

ವ್ಯಕ್ತಸ್ವರೂಪಮವ್ಯಕ್ತೇ ತಸ್ಯಾಂ ವಿಪ್ರಾಃ ಪ್ರಲೀಯತೇ ।
ಏಕಃ ಶುದ್ಧೋಽಕ್ಷರೋ ನಿತ್ಯಃ ಸರ್ವವ್ಯಾಪೀ ತಥಾ ಪುನಃ ॥ ೩೫ ॥

ಸೋಽಪ್ಯಂಶಃ ಸರ್ವಭೂತಸ್ಯ ದ್ವಿಜೇಂದ್ರಾಃ ಪರಮಾತ್ಮನಃ ।
ನಶ್ಯಂತಿ ಸರ್ವಾ ಯತ್ರಾಪಿ ನಾಮಜಾತ್ಯಾದಿಕಲ್ಪನಾಃ ॥ ೩೬ ॥

ಸತ್ತಾಮಾತ್ರಾತ್ಮಕೇ ಜ್ಞೇಯೇ ಜ್ಞಾನಾತ್ಮನ್ಯಾತ್ಮನಃ ಪರೇ ।
ಸ ಬ್ರಹ್ಮ ತತ್ಪರಂ ಧಾಮ ಪರಮಾತ್ಮಾ ಪರೇಶ್ವರಃ ॥ ೩೭ ॥

ಸ ವಿಷ್ಣುಃ ಸರ್ವಮೇವೇದಂ ಯತೋ ನಾವರ್ತತೇ ಪುನಃ ।
ಪ್ರಕೃತಿರ್ಯಾ ಮಯಾಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ ॥ ೩೮ ॥

ಪುರುಷಶ್ಚಾಪ್ಯುಭಾವೇತೌ ಲೀಯೇತೇ ಪರಮಾತ್ಮನಿ ।
ಪರಮಾತ್ಮಾ ಚ ಸರ್ವೇಷಾಮಾಧಾರಃ ಪರಮೇಶ್ವರಃ ॥ ೩೯ ॥

---

೩೫. ಆ ಪ್ರಕೃತಿಯ ವ್ಯಕ್ತಸ್ವರೂಪವೆಲ್ಲವೂ ಅವ್ಯಕ್ತಸ್ವರೂಪದಲ್ಲಿ ಲೀನವಾಗುವುದು. ಇದಲ್ಲದೆ ನಿಷ್ಕಲಂಕವೂ, ನಾಶರಹಿತವೂ ನಿತ್ಯವೂ ನಿರ್ಲೇಪವೂ ಸರ್ವವ್ಯಾಪಿಯೂ ಆದ ಪುರುಷನೆಂಬ ಚೈತನ್ಯಾಂಶವೊಂದಿರುವುದು.

೩೬-೩೭. ಈ ಅಂಶವೂ ಸಹ ಪರಮಾತ್ಮನ ಅಂಶವೇ ಆಗಿರುವುದು. ಯಾವ ಪರಸ್ವರೂಪದಲ್ಲಿ ನಾಮ, ಜಾತಿ ಮೊದಲಾದ ಕಲ್ಪನೆಗಳೆಲ್ಲವೂ ನಿರ್ನಾಮವಾಗುವುವೋ ಆ ಸತ್ಯಸ್ವರೂಪನೂ, ಜ್ಞಾನಜ್ಞೇಯಾತ್ಮಕನೂ, ಪುರುಷನಿಗಿಂತಲೂ ಶ್ರೇಷ್ಠನೆನಿಸಿದವನೂ ಆದ ಪರಸ್ವರೂಪವೇ ಬ್ರಹ್ಮವು. ಅದೇ ಪರಂಜ್ಯೋತಿಯು, ಅವನೇ ಪರಮಾತ್ಮನು. ಅವನೇ ಪರಮೇಶ್ವರನು.

೩೮-೩೯. ವಿಷ್ಣುವೆನಿಸಿದ ಆತನಲ್ಲಿ ಈಗ ಹೇಳಿದುದೆಲ್ಲವೂ ಐಕ್ಯವಾಗಿ ಹೋಗುವುದು. ಬಳಿಕ ಮತ್ತೆ ಹಿಂದಕ್ಕೆ ಬರಲಾರದು. ನಾನು ಹಿಂದೆ ವ್ಯಕ್ತಾವ್ಯಕ್ತಸ್ವರೂಪಿಣಿಯೆಂದು ಹೇಳಿದ ಪ್ರಕೃತಿಯೂ, ಪುರುಷನೂ ಇವರಿಬ್ಬರೂ ಆ ಪರಮಾತ್ಮನಲ್ಲೇ ಲೀನರಾಗುವರು. ಆ ಪರಮಾತ್ಮನೇ ಎಲ್ಲಕ್ಕೂ ಆಧಾರಭೂತನಾದ ಪರಮೇಶ್ವರನು.

ವಿಷ್ಣುನಾಮ್ನಾ ಸ ವೇದೇಷು ವೇದಾಂತೇಷು ಚ ಗೀಯತೇ ।
ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಂ ॥ ೪೦ ॥

ತಾಭ್ಯಾಮುಭಾಭ್ಯಾಂ ಪುರುಷೈರ್ಯಜ್ಞಮೂರ್ತಿಃ ಸ ಇಜ್ಯತೇ ।
ಋಗ್ಯಜುಃಸಾಮಭಿರ್ಮಾರ್ಗೈಃ ಪ್ರವೃತ್ತೈರಿಜ್ಯತೇ ಹ್ಯಸೌ ॥ ೪೧ ॥

ಯಜ್ಞೇಶ್ವರೋ ಯಜ್ಞಪುಮಾನ್ಪುರುಷೈಃ ಪುರುಷೋತ್ತಮಃ ।
ಜ್ಞಾನಾತ್ಮಾ ಜ್ಞಾನಯೋಗೇನ ಜ್ಞಾನಮೂರ್ತಿಃ ಸ ಇಜ್ಯತೇ ॥ ೪೨ ॥

ನಿವೃತ್ತೈರ್ಯೋಗಮಾರ್ಗೈಶ್ಚ ವಿಷ್ಣುರ್ಮುಕ್ತಿಫಲಪ್ರದಃ ।
ಹ್ರಸ್ವದೀರ್ಘಪ್ಲುತೈರ್ಯತ್ತು ಕಿಂಚಿದ್ವಸ್ತ್ವಭಿಧೀಯತೇ ॥ ೪೩ ॥

ಯಚ್ಚ ವಾಚಾಮವಿಷಯಸ್ತತ್ಸರ್ವಂ ವಿಷ್ಣುರವ್ಯಯಃ ।
ವ್ಯಕ್ತಃ ಸ ಏವಮವ್ಯಕ್ತಃ ಸ ಏವ ಪುರುಷೋಽವ್ಯಯಃ ॥ ೪೪ ॥

೪೦-೪೩. ಆತನನ್ನೇ ವೇದಗಳಲ್ಲೂ ವೇದಾಂಗಗಳಲ್ಲೂ ವಿಷ್ಣುವೆಂಬುದಾಗಿ ಸಂಕೀರ್ತನೆಮಾಡುವರು. ವೇದವಿಹಿತವಾದ ಕರ್ಮಗಳು ಪ್ರವೃತ್ತವೆಂದೂ ನಿವೃತ್ತವೆಂದೂ ಎರಡು ಬಗೆಯಾಗಿರುವುವು. ಯಜ್ಞಸ್ವರೂಪನಾದ ಆ ಪರಮಪುರುಷನನ್ನು (ವಿಷ್ಣು) ಈಗ ಹೇಳಿದ ಉಭಯವಿಧವಾದ (ಎರಡು ಬಗೆಯ) ಕರ್ಮಗಳೂ ಆರಾಧಿಸುವುವು. ಪ್ರವೃತ್ತಿಮಾರ್ಗಕ್ಕೆ ಸೇರಿದ ಋಗ್ಯಜುಸ್ಸಾಮಗಳಿಂದ ಯಜ್ಞೇಶ್ವರನೂ ಯಜ್ಞಪುರುಷನೂ ಆದ ಆ ಪುರುಷೋತ್ತಮನು ಆರಾಧಿಸಲ್ಪಡುವನು. ಮತ್ತು ಜ್ಞಾನಾತ್ಮಕನೂ ಜ್ಞಾನಾಕಾರನೂ ಆದ ಆ ವಿಷ್ಣುವು ನಿವೃತ್ತಮಾರ್ಗಕ್ಕೆ ಸೇರಿದ ಜ್ಞಾನಯೋಗದಿಂದ ಆರಾಧಿಸಲ್ಪಡುತ್ತಾ ಮೋಕ್ಷರೂಪವಾದ ಫಲವನ್ನು ಕೊಡುವನು. ಯಾವ ವಸ್ತುವು ಹ್ರಸ್ವದೀರ್ಘಪ್ಲುತಗಳೆಂಬ ಸ್ವರಗಳಿಂದ ಹೇಳಲ್ಪಡುವುದೋ ಮತ್ತು

೪೪. ಯಾವ ವಸ್ತುವು ಮಾತುಗಳಿಗೂ ನಿಲುಕದೆ ಇರುವುದೋ ಅದೆಲ್ಲವೂ ಆ ಅವಿನಾಶಿಯಾದ ವಿಷ್ಣುವೆಂದೇ ತಿಳಿಯಬೇಕು. ಆ ಪುರುಷನೇ ವ್ಯಕ್ತನೂ ಅವ್ಯಕ್ತನೂ ಆಗಿರುವನು.

ಪರಮಾತ್ಮಾ ಚ ವಿಶ್ವಾತ್ಮಾ ವಿಶ್ವರೂಪಧರೋ ಹರಿಃ ।
ವ್ಯಕ್ತಾವ್ಯಕ್ತಾತ್ಮಿಕಾ ತಸ್ಮಿನ್ಪ್ರಕೃತಿಃ ಸಾ ವಿಲೀಯತೇ ॥ ೪೫ ॥

ಪುರುಷಶ್ಚಾಪಿ ಭೋ ವಿಪ್ರಾ ಯಸ್ತದವ್ಯಾಕೃತಾತ್ಮನಿ ।
ದ್ವಿಪರಾರ್ಧಾತ್ಮಕಃ ಕಾಲಃ ಕಥಿತೋ ಯೋ ಮಯಾ ದ್ವಿಜಾಃ ॥ ೪೬ ॥

ತದಹಸ್ತಸ್ಯ ವಿಪ್ರೇಂದ್ರಾ ವಿಷ್ಣೋರೀಶಸ್ಯ ಕಥ್ಯತೇ ।
ವ್ಯಕ್ತೇ ತು ಪ್ರಕೃತೌ ಲೀನೇ ಪ್ರಕೃತ್ಯಾಂ ಪುರುಷೇ ತಥಾ ॥ ೪೭ ॥

ತತ್ರಾಸ್ಥಿತೇ ನಿಶಾ ತಸ್ಯ ತತ್ಪ್ರಮಾಣಾ ತಪೋಧನಾಃ ।
ನೈವಾಹಸ್ತಸ್ಯ ಚ ನಿಶಾ ನಿತ್ಯಸ್ಯ ಪರಮಾತ್ಮನಃ ॥ ೪೮ ॥

೪೫-೪೬. ಎಲೈ ದ್ವಿಜರಿರಾ! ಆ ವಿಶ್ವರೂಪಧರನಾದ ಹರಿಯೇ ಪರಮಾತ್ಮನೂ ವಿಶ್ವಾತ್ಮನೂ ಆಗಿರುವನು. ವ್ಯಕ್ತಾವ್ಯಕ್ತಸ್ವರೂಪಳಾದ ಪ್ರಕೃತಿಯೂ ಮತ್ತು ಪುರುಷನೂ ಅವ್ಯಾಕೃತಸ್ವರೂಪನಾದ ಆ ಪರಮಾತ್ಮನಲ್ಲಿ ಲೀನವಾಗುವವರೆಗಿನ ಕಾಲವೇ ದ್ವಿಪರಾರ್ಧಾತ್ಮಕವಾದ (ಎರಡು ಪರಾರ್ಧಗಳಷ್ಟು ವರ್ಷಗಳ ಕಾಲ) ಕಾಲವು. ಇದನ್ನೇ ನಾನು ನಿಮಗೆ ತಿಳಿಸಿದೆನು.

೪೭. ಎಲೈ ವಿಪ್ರಶ್ರೇಷ್ಠರಿರಾ, ಪ್ರಭುವಾದ ಆ ವಿಷ್ಣುವಿನಲ್ಲಿ ಲೀನವಾಗಿರುವ ಪ್ರಕೃತಿಯೂ ಪುರುಷನೂ ಕ್ರಮಕ್ರಮವಾಗಿ ಮಹಾದಾದಿ ತತ್ತ್ವಗಳಲ್ಲಿ ವ್ಯಕ್ತತೆಯನ್ನು ಹೊಂದಿದರೆ ಅದೀಗ ಆ ವಿಷ್ಣುವಿನ ಹಗಲೆನಿಸುವುದು.

೪೮. ಆ ಪ್ರಕೃತಿಪುರುಷರು ಪರಮಾತ್ಮನಲ್ಲಿ ಲೀನರಾದಾಗಲೇ (ಆ ವಿಷ್ಣುವಿಗೆ) ರಾತ್ರಿಯೆನಿಸುವುದು. ಆ ವಿಷ್ಣುವಿನ ಹಗಲೂ ರಾತ್ರಿಗಳು ಒಂದೊಂದೂ ಎರಡು ಪರಾರ್ಧಗಳಷ್ಟು ಕಾಲಪರಿಮಾಣವುಳ್ಳುದಾಗಿರುವುದು. ಎಲೈ ತಪೋಧನರುಗಳಿರಾ! ನಿತ್ಯನಾದ ಆ ಪರಮಪುರುಷನಿಗೆ ಹಗಲೆಂಬುದೂ ರಾತ್ರಿಯೆಂಬುದೂ ನಿಜವಾಗಿಯೂ ಇಲ್ಲವು.

ಉಪಚಾರಾತ್ತಥಾಪ್ಯೇತತ್ತಸ್ಯೇಶಸ್ಯ ತು ಕಥ್ಯತೇ ।
ಇತ್ಯೇಷ ಮುನಿಶಾರ್ದೂಲಾಃ ಕಥಿತಃ ಪ್ರಾಕೃತೋ ಲಯಃ ॥ ೪೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಪ್ರಾಕೃತಲಯನಿರೂಪಣಂ ನಾಮ ತ್ರಯಸ್ತ್ರಿಂಶದಧಿಕದ್ವಿಶತತಮೋಽಧ್ಯಾಯಃ

---

೪೯. ಆದರೂ ಆ ಪ್ರಭುವಿಗೆ ಹಗಲುರಾತ್ರಿಗಳೆಂಬ ಕಾಲವ್ಯವಸ್ಥೆಯನ್ನು ಔಪಚಾರಿಕವಾಗಿ (ನಮ್ಮಂತೆ ಎಂಬ ಭಾವನೆಯಿಂದ ಆರೋಪಮಾಡಿ) ಹೇಳಿದೆ. ಎಲೈ ಮುನಿಶ್ರೇಷ್ಠರಿರಾ, ಇದೀಗ ನೀವು ಕೇಳಿದಂತಹ ಪ್ರಾಕೃತಿಕ ಪ್ರಳಯವನ್ನೂ ವಿವರವಾಗಿ ತಿಳಿಸಿದೆನು ಎಂದನು.

ಇಲ್ಲಿಗೆ ಶ್ರೀಬ್ರಹ್ಮಮಹಾಪುರಾಣದಲ್ಲಿ ಪ್ರಾಕೃತಪ್ರಳಯವರ್ಣನವೆಂಬ ಇನ್ನೂರಮೂವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ. ಮಹಾಪುರಾಣೇ ಬ್ರಾಹ್ಮೇ

ಚತುಸ್ತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಆಧ್ಯಾತ್ಮಿಕಾದಿ ಭೋ ವಿಪ್ರಾ ಜ್ಞಾತ್ವಾ ತಾಪತ್ರಯಂ ಬುಧಃ ।
ಉತ್ಪನ್ನಜ್ಞಾನವೈರಾಗ್ಯಃ ಪ್ರಾಪ್ನೋತ್ಯಾತ್ಯಂತಿಕಂ ಲಯಂ ॥ ೧ ॥

ಆಧ್ಯಾತ್ಮಿಕೋಽಪಿ ದ್ವಿವಿಧಃ ಶಾರೀರೋ ಮಾನಸಸ್ತಥಾ ।
ಶಾರೀರೋ ಬಹುಭಿರ್ಭೇದೈರ್ಭಿದ್ಯತೇ ಶ್ರೂಯತಾಂ ಚ ಸಃ ॥ ೨ ॥

ಶಿರೋರೋಗಪ್ರತಿಶ್ಯಾಯಜ್ವರಶೂಲಭಗಂದರೈಃ ।
ಗುಲ್ಮಾರ್ಶಃಶ್ವಯಥುಶ್ವಾಸಚ್ಛರ್ದ್ಯಾದಿಭಿರನೇಕಧಾ ॥ ೩ ॥

ಇನ್ನೂರಮೂವತ್ತನಾಲ್ಕನೆಯ ಅಧ್ಯಾಯವು

೧. ವ್ಯಾಸನು ಹೇಳಿದನು —ಎಲೈ ಋಷಿಗಳೇ, ವಿದ್ವಾಂಸನಾದವನು ಆಧ್ಯಾತ್ಮಿಕಾದಿ ತಾಪತ್ರಯಗಳ ಸ್ವರೂಪವನ್ನು ತಿಳಿದು ಜ್ಞಾನ ವೈರಾಗ್ಯಗಳನ್ನು ಪಡೆದು ಆತ್ಯಂತಿಕಲಯವೆಂಬ ಮೋಕ್ಷವನ್ನು ಹೊಂದುವನು.

೨-೬. ತಾಪತ್ರಯಗಳಲ್ಲಿ ಆಧ್ಯಾತ್ಮಿಕವೆಂಬುದು ಶಾರೀರಮಾನಸ ಎಂದು ಎರಡು ಬಗೆಯಾಗಿರುವುದು. ಶಾರೀರತಾಪವು ಅನೇಕಬಗೆಯಾಗಿರುವುದು. ಅದನ್ನು ಹೇಳುವೆನು ಕೇಳಿರಿ ತಲೆನೋವು, ಕ್ಷಯ, ಜ್ವರ, ಹೊಟ್ಟೆ

ತಥಾಕ್ಷಿರೋಗಾತೀಸಾರಕುಷ್ಠಾಂಗಾಮಯಸಂಜ್ಞಕೈಃ ।
ಭಿದ್ಯತೇ ದೇಹಜಸ್ತಾಪೋ ಮಾನಸಂ ಶ್ರೋತುಮರ್ಹಥ ॥ ೪ ॥

ಕಾಮಕ್ರೋಧಭಯದ್ವೇಷಲೋಭಮೋಹವಿಷಾದಜಃ ।
ಶೋಕಾಸೂಯಾವಮಾನೇರ್ಷ್ಯಾಮಾತ್ಸರ್ಯಾಭಿಭವಸ್ತಥಾ ॥ ೫ ॥

ಮಾನಸೋಽಪಿ ದ್ವಿಜಶ್ರೇಷ್ಠಾಸ್ತಾಪೋ ಭವತಿ ನೈಕಧಾ ।
ಇತ್ಯೇವಮಾದಿಭಿರ್ಭೇದೈಸ್ತಾಪೋ ಹ್ಯಾಧ್ಯಾತ್ಮಿಕಃ ಸ್ಮೃತಃ ॥ ೬ ॥

ಮೃಗಪಕ್ಷಿಮನುಷ್ಯಾದ್ಯೈಃ ಪಿಶಾಚೋರಗರಾಕ್ಷಸೈಃ ।
ಸರೀಸೃಪಾದ್ಯೈಶ್ಚ ನೃಣಾಂ ಜನ್ಯತೇ ಚಾಧಿಭೌತಿಕಃ ॥ ೭ ॥

ಶೀತೋಷ್ಣವಾತವರ್ಷಾಂಬುವೈದ್ಯುತಾದಿಸಮುದ್ಭವಃ ।
ತಾಪೋ ದ್ವಿಜವರಶ್ರೇಷ್ಠಾಃ ಕಥ್ಯತೇ ಚಾಧಿದೈವಿಕಃ ॥ ೮ ॥

ಗರ್ಭಜನ್ಮಜರಾಜ್ಞಾನಮೃತ್ಯುನಾರಕಜಂ ತಥಾ ।
ದುಃಖಂ ಸಹಸ್ರಶೋ ಭೇದೈರ್ಭಿದ್ಯತೇ ಮುನಿಸತ್ತಮಾಃ ॥ ೯ ॥

ಶೂಲೆ, ಭಗಂಧರ, ಜ್ವರದಗಡ್ಡೆ, ಮೂಲವ್ಯಾಧಿ, ಶೋಭೆ, ಉಬ್ಬಸ, ವಾಂತಿ ಕಣ್ಣುನೋವು, ಅತಿಸಾರ, ಕುಷ್ಠ, ಮೈನೋವು ಇವೇ ಶರೀರತಾಪಗಳು. ಕಾಮ ಕ್ರೋಧ, ಭಯ, ದ್ವೇಷ. ಲೋಭ, ಮೋಹ, ವಿಷಾದ. ದುಃಖ, ಅಸೂಯೆ ಅಪಮಾನ, ಹೊಟ್ಟೆಕಿಚ್ಚು ಮುಂತಾದ ಮನಸ್ಸಿನ ತಾಪಗಳೂ ಅನೇಕಬಗೆ ಯಾಗಿರುವುವು. ಇವೇ ಆಧ್ಯಾತ್ಮಿಕವೆಂಬ ತಾಪವು.

೭-೮. ದುಷ್ಟಮೃಗಗಳು, ಪಕ್ಷಿಗಳು, ಮನುಷ್ಯರು, ಪಿಶಾಚಿಗಳು ಸರ್ಪಗಳು, ರಾಕ್ಷಸರು, ಹುಳುಗಳು ಇವುಗಳಿಂದ ಮನುಷ್ಯರಿಗೆ ಉಂಟಾ ಗುವ ದುಃಖವು ಆದಿಭೌತಿಕವೆನಿಸುವುದು. ಚಳಿ, ಗಾಳಿ, ಮಳೆ, ಬಿಸಿಲು ಮಿಂಚು, ಸಿಡಿಲು ಮುಂತಾದುವುಗಳಂದ ಹುಟ್ಟುವ ತಾಪವು ಆಧಿದೈವಿಕವೆನಿಸು ವುದು. ಇವುಗಳಲ್ಲದೆ,

೯-೧೨. ಗರ್ಭವಾಸ. ಪ್ರಸವ, ಮುಪ್ಪು ಅಜ್ಞಾನ, ಮರಣ, ನರಕ ಮುಂತಾದ ಸಾವಿರಾರು ದುಃಖಗಳೂ ಇರುವುವು. ಜೀವನು ಗರ್ಭದಲ್ಲಿದ್ದಾಗ

ಸುಕುಮಾರತನುರ್ಗರ್ಭೇ ಜಂತುರ್ಬಹುಮಲಾವೃತೇ ।
ಉಲ್ಬಸಂವೇಷ್ಟಿತೋ ಭಗ್ನಪೃಷ್ಠಗ್ರೀವಾಸ್ಥಿಸಂಹತಿಃ ॥ ೧೦ ॥

ಅತ್ಯಮ್ಲಕಟುತೀಕ್ಷ್ಣೋಷ್ಣಲವಣೈರ್ಮಾತೃಭೋಜನೈಃ ।
ಅತಿತಾಪಿಭಿರತ್ಯರ್ಥಂ ಬಾಧ್ಯಮಾನೋಽತಿವೇದನಃ ॥ ೧೧ ॥

ಪ್ರಸಾರಣಾಕುಂಚನಾದೌ ನಾಂಗಾನಾಂ ಪ್ರಭುರಾತ್ಮನಃ ।
ಶಕೃನ್ಮೂತ್ರಮಹಾಪಂಕಶಾಯೀ ಸರ್ವತ್ರ ಪೀಡಿತಃ ॥ ೧೨ ॥

ನಿರುಚ್ಛ್ವಾಸಃ ಸಚೈತನ್ಯಃ ಸ್ಮರನ್ ಜನ್ಮಶತಾನ್ಯಥ ।
ಆಸ್ತೇ ಗರ್ಭೇಽತಿದುಃಖೇನ ನಿಜಕರ್ಮನಿಬಂಧನಃ ॥ ೧೩ ॥

ಜಾಯಮಾನಃ ಪುರೀಷಾಸೃಙ್ಮೂತ್ರಶುಕ್ರಾವಿಲಾನನಃ ।
ಪ್ರಾಜಾಪತ್ಯೇನ ವಾತೇನ ಪೀಡ್ಯಮಾನಾಸ್ಥಿಬಂಧನಃ ॥ ೧೪ ॥

ಮೃದುವಾದ ಶರೀರವುಳ್ಳವನಾಗಿ ಕೊಳೆಯಿಂದ ತುಂಬಿದ ಹೊಟ್ಟೆಯೊಳಗೆ ಸೊಂಟ, ಕುತ್ತಿಗೆ, ಮೂಳೆಗಳು ಇವುಗಳನ್ನೆಲ್ಲ ಮುದುರಿಕೊಂಡು ಜರಾಯುವೆಂಬ ಒಂದು ಚೀಲದೊಳಗೆ ಸೇರಿಕೊಂಡಿರುವನು. ತಾಯಿಯು ಊಟಮಾಡಿದ ವಿಶೇಷವಾದ ಹುಳಿ, ಉಪ್ಪು, ಕಾರ, ಬಿಸಿ, ಕಹಿ ಮುಂತಾದ ಪದಾರ್ಥಗಳಿಂದ ಹೆಚ್ಚಾದ ನೋವನ್ನು ಹೊಂದಿ ತನ್ನ ಕೈಕಾಲುಗಳನ್ನು ನೀಡುವುದಕ್ಕೂ ಮಡಿಸುವುದಕ್ಕೂ ಶಕ್ತಿಯಿಲ್ಲದೆ ಮಲಮೂತ್ರಗಳ ದೊಡ್ಡಕೆಸರಿನಲ್ಲಿ ಮಲಗಿಕೊಂಡು ಬಾಧೆಪಡುತ್ತಿರುವನು.

೧೩. ಜೀವನು ತನ್ನ ಕರ್ಮಕ್ಕನುಸಾರವಾಗಿ ಗರ್ಭವಲ್ಲಿದ್ದಾಗ ತನಗೆ ಶಕ್ತಿಯಿದ್ದರೂ ಉಸಿರು ಬಿಡುವುದಕ್ಕಾಗದೆ ತನ್ನ ಹಿಂದಿನ ನೂರಾರು ಜನ್ಮಗಳನ್ನು ಸ್ಮರಿಸಿಕೊಂಡು ಅತ್ಯಂತ ದುಃಖದಿಂದಿರುವನು.

೧೪-೨೦. ಹುಟ್ಟುವಾಗ ಪ್ರಾಜಾಪತ್ಯವೆಂಬ ವಾಯುವಿನಿಂದ ತನ್ನ ಮೂಳೆಗಳಲ್ಲಿ ನೋವನ್ನು ಹೊಂದಿ ಮಲ, ರಕ್ತ, ಮೂತ್ರ, ಶುಕ್ರ ಇವುಗಳು ಮುಖಕ್ಕೆ ಬಳಿದುಕೊಂಡಿರಲು ಬಲವಾದ ಪ್ರಸವವಾಯುವಿನಿಂದ ತಲೆಯನ್ನು ಕೆಳಗೆ ಮಾಡಿಕೊಂಡು ಬಹಳ ಕಷ್ಟದಿಂದ ತಾಯಿಯ ಹೊಟ್ಟೆಯಿಂದ ಹೊರಕ್ಕೆ

ಅಧೋಮುಖಸ್ತೈಃ ಕ್ರಿಯತೇ ಪ್ರಬಲೈಃ ಸೂತಿಮಾರುತೈಃ ।
ಕ್ಲೇಶೈರ್ನಿಷ್ಕ್ರಾಂತಿಮಾಪ್ನೋತಿ ಜಠರಾನ್ಮಾತುರಾತುರಃ ॥ ೧೫ ॥

ಮೂರ್ಛಾಮವಾಪ್ಯ ಮಹತೀಂ ಸಂಸ್ಪೃಷ್ಟೋ ಬಾಹ್ಯವಾಯುನಾ ।
ವಿಜ್ಞಾನಭ್ರಂಶಮಾಪ್ನೋತಿ ಜಾತಸ್ತು ಮುನಿಸತ್ತಮಾಃ ॥ ೧೬ ॥

ಕಂಟಕೈರಿವ ತುನ್ನಾಂಗಃ ಕ್ರಕಚೈರಿವ ದಾರಿತಃ ।
ಪೂತಿವ್ರಣಾನ್ನಿಪತಿತೋ ಧರಣ್ಯಾಂ ಕ್ರಿಮಿಕೋ ಯಥಾ ॥ ೧೭ ॥

ಕಂಡೂಯನೇಽಪಿ ಚಾಶಕ್ತಃ ಪರಿವರ್ತೇಽಪ್ಯನೀಶ್ವರಃ ।
ಸ್ತನಪಾನಾದಿಕಾಹಾರಮವಾಪ್ನೋತಿ ಪರೇಚ್ಛಯಾ ॥ ೧೮ ॥

ಅಶುಚಿಸ್ರಸ್ತರೇ ಸುಪ್ತಃ ಕೀಟದಂಶಾದಿಭಿಸ್ತಥಾ ।
ಭಕ್ಷ್ಯಮಾಣೋಽಪಿ ನೈವೈಷಾಂ ಸಮರ್ಥೋ ವಿನಿವಾರಣೇ ॥ ೧೯ ॥

ಜನ್ಮದುಃಖಾನ್ಯನೇಕಾನಿ ಜನ್ಮನೋಽನಂತರಾಣಿ ಚ ।
ಬಾಲಭಾವೇ ಯದಾಪ್ನೋತಿ ಆಧಿಭೂತಾದಿಕಾನಿ ಚ ॥ ೨೦ ॥

ಬರುವನು. ಹೊರಗಿನ ಗಾಳಿಯು ತನ್ನ ಶರೀರಕ್ಕೆ ತಗುಲಿದೊಡನೆ ತನ್ನ ಜ್ಞಾನವನ್ನು ಕಳೆದುಕೊಂಡು ದೊಡ್ಡ ಅಜ್ಞಾನವನ್ನು ಹೊಂದುವನು. ಕೆಟ್ಟ ವಾಸನೆಯ ಹುಣ್ಣಿನಿಂದ ಬೀಳುತ್ತಿರುವ ಕ್ರಿಮಿಯಂತೆಯೂ ಮುಳ್ಳಿನಿಂದ ಚುಚ್ಚಿದಂತೆಯೂ ಗರಗಸದಿಂದ ಸೀಳಿದಂತೆಯೂ ಅವಯವಗಳ ನೋವನ್ನು ಹೊಂದುವನು. ಮೈಯನ್ನು ಕೆರೆದುಕೊಳ್ಳುವುದಕ್ಕೂ ಅತ್ತಿತ್ತ ತಿರುಗುವುದಕ್ಕೂ ಶಕ್ತಿಯಿಲ್ಲದೆ ಇತರರ ಅಧೀನವಾಗಿ ಸ್ತನ್ಯಪಾನಾದಿಗಳಿಂದ ಆಹಾರಗಳನ್ನು ಪಡೆಯುವನು. ಕೊಳೆಯಾದ ಹಾಸಿಗೆಯಲ್ಲಿ ಮಲಗಿ ಸೊಳ್ಳೆ, ನೊಣ ಮುಂತಾದುವು ಕಡಿಯುತ್ತಿದ್ದರೂ ಅದನ್ನು ತಪ್ಪಿಸಿಕೊಳ್ಳಲು ಶಕ್ತನಾಗಿರುವುದಿಲ್ಲ. ಹುಟ್ಟುವಾಗಲೂ ಹುಟ್ಟಿದಮೇಲೆಯೂ ಬಾಲಕನಾಗಿರುವಾಗಲೂ ಅನೇಕ ದುಃಖಗಳನ್ನು ಅನುಭವಿಸುವನು.

ಅಜ್ಞಾನತಮಸಾ ಛನ್ನೋ ಮೂಢಾಂತಃಕರಣೋ ನರಃ ।
ನ ಜಾನಾತಿ ಕುತಃ ಕೋಽಹಂ ಕುತ್ರ ಗಂತಾ ಕಿಮಾತ್ಮಕಃ ॥ ೨೧ ॥

ಕೇನ ಬಂಧೇನ ಬದ್ಧೋಽಹಂ ಕಾರಣಂ ಕಿಮಕಾರಣಂ ।
ಕಿಂ ಕಾರ್ಯಂ ಕಿಮಕಾರ್ಯಂ ವಾ ಕಿಂ ವಾಚ್ಯಂ ಕಿಂ ನ ಚೋಚ್ಯತೇ ॥

ಕೋ ಧರ್ಮಃ ಕಶ್ಚ ವಾಧರ್ಮಃ ಕಸ್ಮಿನ್ವರ್ತೇತ ವೈ ಕಥಂ ।
ಕಿಂ ಕರ್ತವ್ಯಮಕರ್ತವ್ಯಂ ಕಿಂ ವಾ ಕಿಂ ಗುಣದೋಷವತ್ ॥ ೨೩ ॥

ಏವಂ ಪಶುಸಮೈರ್ಮೂಢೈರಜ್ಞಾನಪ್ರಭವಂ ಮಹತ್ ।
ಅವಾಪ್ಯತೇ ನರೈರ್ದುಃಖಂ ಶಿಶ್ನೋದರಪರಾಯಣೈಃ ॥ ೨೪ ॥

ಅಜ್ಞಾನಂ ತಾಮಸೋ ಭಾವಃ ಕಾರ್ಯಾರಂಭಪ್ರವೃತ್ತಯಃ ।
ಅಜ್ಞಾನಿನಾಂ ಪ್ರವರ್ತಂತೇ ಕರ್ಮಲೋಪಸ್ತತೋ ದ್ವಿಜಾಃ ॥ ೨೫ ॥

೨೧-೨೪. ಅಜ್ಞಾನವೆಂಬ ಕತ್ತಲೆಯು ಕವಿದಿರಲು ತಿಳುವಳಿಕೆ ಇಲ್ಲದ ಮನಸ್ಸುಳ್ಳ ಮನುಜನು-ನಾನು ಯಾರು? ಎಲ್ಲಿಂದ ಬಂದೆನು? ಎಲ್ಲಿಗೆ ಹೋಗುವೆನು? ನನ್ನ ಸ್ವರೂಪವೆಂತಹುದು? ಯಾವ ಕಟ್ಟಿಗೆ ಸಿಕ್ಕಿಕೊಡಿರುವೆನು? ಇದಕ್ಕೆ ಕಾರಣವಿರುವುದೇ? ಇಲ್ಲವೇ? ಮಾಡಬೇಕಾದ ಕೆಲಸವೇನು? ಮಾಡಬಾರದುದಾವುದು? ಯಾವ ಮಾತನ್ನಾಡಬೇಕು? ಯಾವದನ್ನಾಡಬಾರದು? ಧರ್ಮವಾವುದು? ಅಧರ್ಮವಾವುದು? ಯಾವ ಮಾರ್ಗದಲ್ಲಿ ಹೇಗೆ ನಡೆಯಬೇಕು? ಗುಣಯುಕ್ತವಾದುದಾವುದು? ದೋಷಯುಕ್ತವಾದುದಾವುದು? ಎಂಬುದನ್ನು ತಿಳಿಯದೆ ಉಂಡು ಮಲಗುವುದೆರಡನ್ನೇ ಮುಖ್ಯವಾಗಿ ಮಾಡುತ್ತಿರುವ ಪಶುಸಮಾನರಾದ ಮೂಢರು ಅಜ್ಞಾನದಿಂದುಂಟಾದ ಮಹಾದುಃಖವನ್ನು ಅನುಭವಿಸುವರು.

೨೫-೨೬. ಅಜ್ಞಾನವೆಂಬುದು ಜಡಸ್ವಭಾವವಾದುದು. ಇಂಥವರಿಗೆ ಕಾರ್ಯಾರಂಭವೂ ಕಾರ್ಯದಲ್ಲಿ ಆಸಕ್ತಿಯೂ ಇರುವುದಿಲ್ಲ. ಇದರಿಂದ

ನರಕಂ ಕರ್ಮಣಾಂ ಲೋಪಾತ್ಫಲಮಾಹುರ್ಮಹರ್ಷಯಃ ।
ತಸ್ಮಾದಜ್ಞಾನಿನಾಂ ದುಃಖಮಿಹ ಚಾಮುತ್ರ ಚೋತ್ತಮಂ ॥ ೨೬ ॥

ಜರಾಜರ್ಜರದೇಹಶ್ಚ ಶಿಥಿಲಾವಯವಃ ಪುಮಾನ್ ।
ವಿಚಲಚ್ಛೀರ್ಣದಶನೋ ವಲಿಸ್ನಾಯುಶಿರಾವೃತಃ ॥ ೨೭ ॥

ದೂರಪ್ರನಷ್ಟನಯನೋ ವ್ಯೋಮಾಂತರ್ಗತತಾರಕಃ ।
ನಾಸಾವಿವರನಿರ್ಯಾತರೋಮಪುಂಜಶ್ಚಲದ್ವಪುಃ ॥ ೨೮ ॥

ಪ್ರಕಟೀಭೂತಸರ್ವಾಸ್ಥಿರ್ನತಪೃಷ್ಠಾಸ್ಥಿಸಂಹತಿಃ ।
ಉತ್ಸನ್ನಜಠರಾಗ್ನಿತ್ವಾದಲ್ಪಾಹಾರೋಽಲ್ಪಚೇಷ್ಟಿತಃ ॥ ೨೯ ॥

ಕೃಚ್ಛ್ರಾಚಂಕ್ರಮಣೋತ್ಥಾನಶಯನಾಸನಚೇಷ್ಟಿತಃ ।
ಮಂದೀಭವಚ್ಛ್ರೋತ್ರನೇತ್ರಗಲಲ್ಲಾಲಾವಿಲಾನನಃ ॥ ೩೦ ॥

ಕರ್ಮಲೋಪವೂ ಕರ್ಮಲೋಪದಿಂದ ನರಕದುಃಖವೂ ಉಂಟಾಗುವುದೆಂದು ಋಷಿಗಳು ಹೇಳುವರು. ಆ ಕಾರಣದಿಂದ ಅಜ್ಞಾನಿಗಳಿಗೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಹೆಚ್ಚಾಗಿ ದುಃಖವೇ ಉಂಟಾಗುವುದು.

೨೭-೩೫. ಮುಪ್ಪಿನಿಂದ ಬಲಹೀನವಾದ ಅವಯವಗಳುಳ್ಳ ಮನುಜನು ಹಲ್ಲುಗಳೆಲ್ಲ ಅಲ್ಲಾಡುತ್ತಿರಲು, ಶರೀರದ ಚರ್ಮ ಸುಕ್ಕುಹಿಡಿದು ನರಗಳೆಲ್ಲಾ ಕಾಣುತ್ತಿರಲು ಕಣ್ಣುಗಳು ಗುಂಡಿಗಿಳಿದು ಕಾಣದಿರಲು ಮೂಗಿನೊಳಗೆ ಕೂದಲುಗಳು ಹೊರಟುಕೊಂಡು ಶರೀರವೆಲ್ಲ ನಡುಗುತ್ತ ಎಲ್ಲ ಶರೀರದ ಮೂಳೆಗಳು ಕಾಣುತ್ತಿರಲು, ಬೆನ್ನು ಬಗ್ಗಿಹೋಗಿ ಜಠರಾಗ್ನಿಯಿಲ್ಲದ್ದುದರಿಂದ ಸ್ವಲ್ಪವಾದ ಆಹಾರವೂ ಜೀರ್ಣವಾಗದೆ ನಡೆವುದು, ಏಳುವುದು, ಕೂಡುವುದು, ಮಲಗುವುದು ಈ ಕೆಲಸಗಳನ್ನು ಬಹು ಕಷ್ಟದಿಂದ ಮಾಡುತ್ತಾ ಕಿವಿ ಕೇಳದೆ, ಕಣ್ಣು ಕಾಣದೆ ಬಾಯಲ್ಲಿ ಜೊಲ್ಲು ಸುರಿಯುತ್ತಾ ಸಮಸ್ತ ಇಂದ್ರಿಯಗಳೂ ಸ್ವಾಧೀನ ತಪ್ಪಿಹೋಗಿರಲು ಆಗತಾನೆ ಅನುಭವಿಸಿದ ವಿಷಯಗಳನ್ನು ಜ್ಞಾಪಿಸಿಕೊಳ್ಳಲು ಶಕ್ತಿಯಿಲ್ಲದೆ ಒಂದಾವರ್ತಿ ಮಾತನಾಡಿದರೆ ವಿಶೇಷವಾಗಿ ಆಯಾಸಪಡುತ್ತ

ಅನಾಯಸ್ತೈಃ ಸಮಸ್ತೈಶ್ಚ ಕರಣೈರ್ಮರಣೋನ್ಮುಖಃ ।
ತತ್ಕ್ಷಣೇಽಪ್ಯನುಭೂತಾನಾಮಸ್ಮರ್ತಾಖಿಲವಸ್ತುನಾಂ ॥ ೩೧ ॥

ಸಕೃದುಚ್ಚಾರಿತೇ ವಾಕ್ಯೇ ಸಮುದ್ಭೂತಮಹಾಶ್ರಮಃ ।
ಶ್ವಾಸಕಾಸಾಮಯಾಯಾಸಸಮುದ್ಭೂತಪ್ರಜಾಗರಃ ॥ ೩೨ ॥

ಅನ್ಯೇನೋತ್ಥಾಪ್ಯತೇಽನ್ಯೇನ ತಥಾ ಸಂವೇಶ್ಯತೇ ಜರೀ ।
ಭೃತ್ಯಾತ್ಮಪುತ್ರದಾರಾಣಾಮಪಮಾನಪರಾಕೃತಃ ॥ ೩೩ ॥

ಪ್ರಕ್ಷೀಣಾಖಿಲಶೌಚಶ್ಚ ವಿಹಾರಾಹಾರಸಂಸ್ಪೃಹಃ ।
ಹಾಸ್ಯಃ ಪರಿಜನಸ್ಯಾಪಿ ನಿರ್ವಿಣ್ಣಾಶೇಷಬಾಂಧವಃ ॥ ೩೪ ॥

ಅನುಭೂತಮಿವಾನ್ಯಸ್ಮಿನ್ ಜನ್ಮನ್ಯಾತ್ಮವಿಚೇಷ್ಟಿತಂ ।
ಸಂಸ್ಮರನ್ಯೌವನೇ ದೀರ್ಘಂ ನಿಶ್ವಸಿತ್ಯತಿತಾಪಿತಃ ॥ ೩೫ ॥

ಏವಮಾದೀನಿ ದುಃಖಾನಿ ಜರಾಯಾಮನುಭೂಯ ಚ ।
ಮರಣೇ ಯಾನಿ ದುಃಖಾನಿ ಪ್ರಾಪ್ನೋತಿ ಶೃಣು ತಾನ್ಯಪಿ ॥ ೩೬ ॥

ಉಬ್ಬಸ, ಕೆಮ್ಮುರೋಗ ಇವುಗಳಿಂದ ನಿದ್ರೆಯಿಲ್ಲದೆ ಯಾವಾಗಲೂ ಎಚ್ಚರದಿಂದಿರುತ್ತ ಏಳುವುದು, ಕೂಡುವುದು, ಮುಂತಾದ ಕೆಲಸಗಳನ್ನು ಇತರರ ಸಹಾಯದಿಂದ ಮಾಡುತ್ತ ಆಳುಗಳು, ಮಕ್ಕಳು, ಹೆಂಡತಿ ಇವರು ಮಾಡುವ ಅಸಮಾನಕ್ಕೆ ಗುರಿಯಾಗಿ ಯಾವ ವಿಧವಾದ ಶುಚಿತ್ವವೂ ಇಲ್ಲದೆ ಆಹಾರವಿಹಾರಗಳಲ್ಲಿ ಮಾತ್ರ ಅತ್ಯಾಸೆಯಿಂದ ಕೂಡಿ ಪರಿಜನರ ಮತ್ತು ನೆಂಟರ ಉದಾಸೀನತೆಗೆ ಗುರಿಯಾಗಿ ತಾನು ಪ್ರಾಯದಲ್ಲಿದ್ದಾಗ ಮಾಡಿದ ಕೆಲಸಗಳನ್ನು ಜ್ಞಾಪಿಸಿಕೊಂಡು ಅದೇ ಒಂದು ಜನ್ಮವೆಂದು ಭಾವಿಸಿ ನಿಟ್ಟುಸಿರನ್ನು ಬಿಡುತ್ತ ಅತ್ಯಂತ ದುಃಖವನ್ನನುಭವಿಸುವನು.

೩೬. ಮುಪ್ಪಿನಲ್ಲಿ ಈ ದುಃಖಗಳನ್ನು ಅನುಭವಿಸಿದಮೇಲೆ ಮರಣಕಾಲದಲ್ಲಿ ಅನುಭವಿಸಿದ ದುಃಖಗಳನ್ನು ಹೇಳುವೆನು ಕೇಳಿರಿ.

ಶ್ಲಥಗ್ರೀವಾಂಘ್ರಿಹಸ್ತೋऽಥ ಪ್ರಾಪ್ತೋ ವೇಪಥುನಾ ನರಃ ।
ಮುಹುರ್ಗ್ಲಾನಿಪರಶ್ಚಾಸೌ ಮುಹುರ್ಜ್ಞಾನಬಲಾನ್ವಿತಃ ॥ ೩೭ ॥

ಹಿರಣ್ಯಧಾನ್ಯತನಯಭಾರ್ಯಾಭೃತ್ಯಗೃಹಾದಿಷು ।
ಏತೇ ಕಥಂ ಭವಿಷ್ಯಂತೀತ್ಯತೀವಮಮತಾಕುಲಃ ॥ ೩೮ ॥

ಮರ್ಮವಿದ್ಭಿರ್ಮಹಾರೋಗೈಃ ಕ್ರಕಚೈರಿವ ದಾರುಣೈಃ ।
ಶರೈರಿವಾಂತಕಸ್ಯೋಗ್ರೈಶ್ಛಿದ್ಯಮಾನಾಸ್ಥಿ ಬಂಧನಃ ॥ ೩೯ ॥

ಪರಿವರ್ತಮಾನತಾರಾಕ್ಷಿಹಸ್ತಪಾದಂ ಮುಹುಃ ಕ್ಷಿಪನ್ ।
ಸಂಶುಷ್ಯಮಾಣತಾಲ್ವೋಷ್ಠಕಂಠೋ ಘುರಘುರಾಯತೇ ॥ ೪೦ ॥

ನಿರುದ್ಧಕಂಠದೇಶೋऽಪಿ ಉದಾನಶ್ವಾಸಪೀಡಿತಃ ।
ತಾಪೇನ ಮಹತಾ ವ್ಯಾಪ್ತಸ್ತೃಷಾ ವ್ಯಾಪ್ತಸ್ತಥಾ ಕ್ಷುಧಾ ॥ ೪೧ ॥

೩೭–೪೦. ಮರಣಕಾಲದಲ್ಲಿ ಮನುಷ್ಯನ ಕುತ್ತಿಗೆ ಕೈಕಾಲುಗಳು ಬಲಹೀನವಾಗಿ ಪುನಃಪುನಃ ಅವನ ಶರೀರದಲ್ಲಿ ಮೂರ್ಛೆಯೂ ಎಚ್ಚರವೂ ಉಂಟಾಗುತ್ತ ಹಣ, ಧಾನ್ಯ, ಮಕ್ಕಳು, ಹೆಂಡತಿ, ಆಳುಗಳು, ಮನೆ, ಇವೆಲ್ಲ ಮುಂದೆ ಏನಾಗುವುವು ಎಂಬ ಅಭಿಮಾನದಿಂದ ಕೂಡಿ ವ್ಯಾಕುಲಚಿತ್ತನಾಗಿ, ಮಹಾರೋಗಗಳು ಶರೀರದಲ್ಲಿ ಮರ್ಮಸ್ಥಾನಗಳಿಗೆ ಅಪಾಯವನ್ನುಂಟುಮಾಡುತ್ತಿರಲು, ಹರಿತವಾದ ಗರಗಸದಿಂದಲೂ ಯಮನ ಕ್ರೂರವಾದ ಬಾಣಗಳಿಂದಲೂ ಶರೀರದ ಮೂಳೆಯ ಕಟ್ಟು ಕತ್ತರಿಸುತ್ತಿರಲು, ಕಣ್ಣುಗುಡ್ಡೆಗಳನ್ನು ತಿರುಗಿಸುತ್ತ ಕೈಕಾಲುಗಳನ್ನು ಅತ್ತಿತ್ತ ಎಸೆಯುತ್ತ ದವಡೆಗಳೂ, ತುಟಿಗಳೂ ಗಂಟಲೂ ಒಣಗುತ್ತಿರಲು ಘುರುಘುರು ಶಬ್ದವನ್ನು ಮಾಡುತ್ತಿರುವನು.

೪೧–೪೩. ಗಂಟಲು ಕಟ್ಟಿಕೊಂಡಿದ್ದರೂ ಉದಾನವಾಯುವಿನ ಬಾಧೆಯಿಂದ ಮಹಾತಾಪದಿಂದಲೂ ಹಸಿವು ಬಾಯಾರಿಕೆಗಳಿಂದಲೂ ಕೂಡಿ ಬಹಳ ಕಷ್ಟದಿಂದ ಯಮಭಟರ ಬಾಧೆಗೆ ಸಿಕ್ಕಿ ಶರೀರವನ್ನು ಬಿಡುವನು. ಬಳಿಕ

ಕ್ಲೇಶಾದುತ್ಕ್ರಾಂತಿಮಾಪ್ನೋತಿ ಯಾಮ್ಯಕಿಂಕರಪೀಡಿತಃ ।
ತತಶ್ಚ ಯಾತನಾದೇಹಂ ಕ್ಲೇಶೇನ ಪ್ರತಿಪದ್ಯತೇ ॥ ೪೨ ॥

ಏತಾನ್ಯನ್ಯಾನಿ ಚೋಗ್ರಾಣಿ ದುಃಖಾನಿ ಮರಣೇ ನೃಣಾಂ ।
ಶೃಣುಧ್ವಂ ನರಕೇ ಯಾನಿ ಪ್ರಾಪ್ಯಂತೇ ಪುರುಷೈರ್ಮೃತೈಃ ॥ ೪೩ ॥

ಯಾಮ್ಯಕಿಂಕರಪಾಶಾದಿಗ್ರಹಣಂ ದಂಡತಾಡನಂ ।
ಯಮಸ್ಯ ದರ್ಶನಂ ಚೋಗ್ರಮುಗ್ರಮಾರ್ಗವಿಲೋಕನಂ ॥ ೪೪ ॥

ಕರಂಭವಾಲುಕಾವಹ್ನಿಯಂತ್ರಶಸ್ತ್ರಾದಿಭೀಷಣೇ ।
ಪ್ರತ್ಯೇಕಂ ಯಾತನಾಯಾಶ್ಚ ಯಾತನಾದಿ ದ್ವಿಜೋತ್ತಮಾಃ ॥ ೪೫ ॥

ಕ್ರಕಚೈಃ ಪೀಡ್ಯಮಾನಾನಾಂ ಮೃಷಾಯಾಂ ಚಾಪಿ ಧ್ಮಾಸ್ಯತಾಂ ।
ಕುಠಾರೈಃ ಪಾಟ್ಯಮಾನಾನಾಂ ಭೂಮೌ ಚಾಪಿ ನಿಖನ್ಯತಾಂ ॥ ೪೬ ॥

ಬಹಳ ಕಷ್ಟದಿಂದ ಯಾತನಾದೇಹವನ್ನು ಪಡೆಯುವನು. ಮನುಷ್ಯರಿಗೆ ಮರಣಕಾಲದಲ್ಲಿ ಇವುಗಳಲ್ಲದೆ ಇನ್ನೂ ಅನೇಕ ದುಃಖಗಳುಂಟಾಗುವುವು. ಸತ್ತಮನುಜರು ನರಕದಲ್ಲಿ ಏನು ದುಃಖವನ್ನನುಭವಿಸುವರೋ ಅದನ್ನು ಹೇಳುವೆನು ಕೇಳಿರಿ.

೪೪-೪೯. ಮನುಷ್ಯನು ಶರೀರವನ್ನು ಬಿಟ್ಟಮೇಲೆ ಯಮನ ಆಳುಗಳು ಜೀವವನ್ನು ಹಗ್ಗದಲ್ಲಿ ಕಟ್ಟಿ ದೊಣ್ಣೆಯಿಂದ ಬಡಿದು ಕ್ರೂರವಾದ ದಾರಿಯಿಂದ ಕರೆದುಕೊಂಡು ಹೋಗಿ ಅವನಿಗೆ ಭಯಂಕರನಾದ ಯಮನನ್ನು ತೋರಿಸುವರು. ಕಾಯ್ದ ಸಣ್ಣಮರಳು, ಅಗ್ನಿಯಂತ್ರ, ಶಸ್ತ್ರಗಳು ಇವುಗಳಿಂದ ಬೇರೆಬೇರೆಯಾಗಿ ಭಯಂಕರವಾದ ಹಿಂಸೆಯನ್ನು ಮಾಡುವರು. ಗರಗಸದಲ್ಲಿ ಕೊಯ್ಯುವರು. ಮೂಸೆಯಲ್ಲಿಟ್ಟು ಕರಗಿಸುವರು. ಕೊಡಲಿಯಿಂದ ಕಡಿಯುವರು. ಭೂಮಿಯಲ್ಲಿ ಹೂಳುವರು. ಶೂಲಕ್ಕೆ ಏರಿಸುವರು. ಹುಲಿಯಬಾಯಿಗೆ ಕೊಡುವರು. ಹದ್ದುಗಳು, ಚಿರತೆ ಮುಂತಾದ ದುಷ್ಟ ಪ್ರಾಣಿಗಳು

ಶೂಲೇಷ್ವಾರೋಪ್ಯಮಾಣಾನಾಂ ವ್ಯಾಘ್ರವಕ್ತ್ರೇ ಪ್ರವೇಶ್ಯತಾಂ |
ಗೃಧ್ರೈಃ ಸಂಭಕ್ಷ್ಯಮಾಣಾನಾಂ ದ್ವೀಪಿಭಿಶ್ಚೋಪಭುಜ್ಯತಾಂ ॥ ೪೭ ॥

ಕ್ವಥ್ಯತಾಂ ತೈಲಮಧ್ಯೇ ಚ ಕ್ಲಿದ್ಯತಾಂ ಕ್ಷಾರಕರ್ದಮೇ ।
ಉಚ್ಚಾನ್ನಿಪಾತ್ಯಮಾನಾನಾಂ ಕ್ಷಿಪ್ಯತಾಂ ಕ್ಷೇಪಯಂತ್ರಕೈಃ ॥ ೪೮ ॥

ನರಕೇ ಯಾನಿ ದುಃಖಾನಿ ಪಾಪಹೇತೂದ್ಭವಾನಿ ವೈ ।
ಪ್ರಾಪ್ಯಂತೇ ನಾರಕೈರ್ವಿಪ್ರಾಸ್ತೇಷಾಂ ಸಂಖ್ಯಾ ನ ವಿದ್ಯತೇ ॥ ೪೯ ॥

ನ ಕೇವಲಂ ದ್ವಿಜಶ್ರೇಷ್ಠಾ ನರಕೇ ದುಃಖಪದ್ಧತಿಃ |
ಸ್ವರ್ಗೇಽಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ ॥ ೫೦ ॥

ಪುನಶ್ಚ ಗರ್ಭೋ ಭವತಿ ಜಾಯತೇ ಚ ಪುನರ್ನರಃ ।
ಗರ್ಭೇ ವಿಲೀಯತೇ ಭೂಯೋ ಜಾಯಮಾನೋಽಸ್ತಮೇತಿ ಚ ॥ ೫೧ ॥

ಇವನನ್ನು ತಿನ್ನುವುವು. ಕುದಿಯುತ್ತಿರುವ ಎಣ್ಣೆಯಲ್ಲಿ ಅದ್ದುವರು. ಉಪ್ಪಿನ ಕೆಸರಿನಲ್ಲಿ ನೆನಸುವರು. ಎತ್ತರದಿಂದ ಕೆಳಕ್ಕೆ ಕೆಡಹುವರು. ಗಾಳಿಯ ಯಂತ್ರಕ್ಕೆ ಕೊಟ್ಟು ದೂರಕ್ಕೆ ಎಸೆಯುವರು. ನರಕದಲ್ಲಿ ಆಗುವ ದುಃಖಗಳಿಗೆಲ್ಲ ಪಾಪವೇ ಕಾರಣವು. ನರಕದಲ್ಲಿ ಜೀವರಿಗೆ ಆಗುವ ದುಃಖಗಳನ್ನು ಲೆಕ್ಕ ಮಾಡುವುದಕ್ಕಾಗುವುದಿಲ್ಲ.

೫೦. ಎಲೈ ಬ್ರಾಹ್ಮಣಶ್ರೇಷ್ಠರೇ, ನರಕದಲ್ಲಿ ಮಾತ್ರ ದುಃಖವಿರುವುದು ಮತ್ತೆಲ್ಲಿಯೂ ಇಲ್ಲವೆಂದು ತಿಳಿಯಬಾರದು. ಸ್ವರ್ಗದಲ್ಲಿಯೂ ಪುಣ್ಯವು ಕಳೆದು ಹೋದಮೇಲೆ ಅಲ್ಲಿಂದ ಬೀಳುತ್ತಿರುವ ಜೀವನಿಗೆ ಭಯದಿಂದ ಸುಖವಿರುವುದೇ ಇಲ್ಲ.

೫೧-೫೭. ಸ್ವರ್ಗವನ್ನು ಬಿಟ್ಟುಬಂದ ಜೀವನು ಮತ್ತೆ ಗರ್ಭದಲ್ಲಿ ಹುಟ್ಟುವನು. ಗರ್ಭದಲ್ಲಿಯೇ ನಾಶವಾಗುವನು. ಅಥವಾ ಹುಟ್ಟುವಾಗಲಾಗಲೀ ಹುಟ್ಟಿದ ಮೇಲಾಗಲೀ ಬಾಲಕನಾಗಿರುವಾಗಲಾಗಲೀ ಪ್ರಾಯದಲ್ಲಾಗಲೀ ಮರಣವನ್ನು ಹೊಂದುವನು. ಎಲೈ ಬ್ರಾಹ್ಮಣರೇ, ಮನುಷ್ಯನಿಗೆ ಯಾವಯಾವುದು ಇಷ್ಟವಾದುದಾಗಿರುವುದೋ ಅದೇ ದುಃಖವೆಂಬ ಮರಕ್ಕೆ

ಜಾತಮಾತ್ರಶ್ಚ ಮ್ರಿಯತೇ ಬಾಲಭಾವೇ ಚ ಯೌವನೇ ।
ಯದ್ಯತ್ಪ್ರೀತಿಕರಂ ಪುಂಸಾಂ ವಸ್ತು ವಿಪ್ರಾಃ ಪ್ರಜಾಯತೇ ॥ ೫೨ ॥

ತದೇವ ದುಃಖವೃಕ್ಷಸ್ಯ ಬೀಜತ್ವಮುಪಗಚ್ಛತಿ ।
ಕಲತ್ರಪುತ್ರಮಿತ್ರಾದಿಗೃಹಕ್ಷೇತ್ರಧನಾದಿಕೈಃ ॥ ೫೩ ॥

ಕ್ರಿಯತೇ ನ ತಥಾ ಭೂರಿ ಸುಖಂ ಪುಂಸಾಂ ಯಥಾಸುಖಂ ।
ಇತಿ ಸಂಸಾರದುಃಖಾರ್ಕತಾಪತಾಪಿತಚೇತಸಾಂ ॥ ೫೪ ॥

ವಿಮುಕ್ತಿಪಾದಪಚ್ಛಾಯಾಮೃತೇ ಕುತ್ರ ಸುಖಂ ನೃಣಾಂ ।
ತದಸ್ಯ ತ್ರಿವಿಧಸ್ಯಾಪಿ ದುಃಖಜಾತಸ್ಯ ಪಂಡಿತೈಃ ॥ ೫೫ ॥

ಗರ್ಭಜನ್ಮಜರಾದ್ಯೇಷು ಸ್ಥಾನೇಷು ಪ್ರಭವಿಷ್ಯತಃ ।
ನಿರಸ್ತಾತಿಶಯಾಹ್ಲಾದಂ ಸುಖಭಾವೈಕಲಕ್ಷಣಂ ॥ ೫೬ ॥

ಭೇಷಜಂ ಭಗವತ್ಪ್ರಾಪ್ತಿರೇಕಾ ಚಾತ್ಯಂತಿಕೀ ಮತಾ ।
ತಸ್ಮಾತ್ತತ್ಪ್ರಾಪ್ತಯೇ ಯತ್ನಃ ಕರ್ತವ್ಯಃ ಪಂಡಿತೈರ್ನರೈಃ ॥ ೫೭ ॥

ಬೀಜರೂಪವಾಗುವುದು. ಹೆಂಡತಿ, ಮಕ್ಕಳು, ಸ್ನೇಹಿತರು, ಮನೆ, ಗದ್ದೆ, ಹಣ ಮುಂತಾದವುಗಳಿಂದ ಮನುಜನಿಗೆ ವಿಶೇಷವಾದ ಸುಖವುಂಟಾಗುವುದಿಲ್ಲ. ದುಃಖವೇ ಹೆಚ್ಚಾಗಿರುವುದು. ಹೀಗೆ ಸಂಸಾರದುಃಖವೆಂಬ ಸೂರ್ಯನ ತಾಪದಿಂದ ಬೆಂದ ಮನಸ್ಸಿನ ಜೀವರಿಗೆ ಮುಕ್ತಿಯೆಂಬ ಮರದ ನೆರಳನ್ನು ಬಿಟ್ಟು ಮತ್ತೆಲ್ಲಿ ಸುಖವುಂಟಾಗುವುದು? ಆದುದರಿಂದ ಗರ್ಭ, ಜನ್ಮ, ಮುಪ್ಪು ಮುಂತಾದ ಸಮಯಗಳಲ್ಲಿ ಉಂಟಾಗುವ ಮೂರು ವಿಧವಾದ ದುಃಖಸಮೂಹಗಳಿಗೂ (ತಾಪತ್ರಯ) ಯಾವ ವಿಶೇಷವೂ ಇಲ್ಲದ ಅತ್ಯಂತ ಸಂತೋಷಕರವೂ ಸುಖಕರವೂ ಆದ ಭಗವಂತನ ಸ್ವರೂಪವನ್ನು ಪಡೆವುದೇ ಮುಖ್ಯವಾದ ಔಷಧವಾಗಿರುವುದು ಎಂದು ಪಂಡಿತರು ಹೇಳುವರು. ಆ ಕಾರಣದಿಂದ ವಿದ್ವಾಂಸರಾದವರು ಭಗವಂತನ ಸ್ವರೂಪಪ್ರಾಪ್ತಿಗೆ ಯತ್ನವನ್ನು ಮಾಡಬೇಕು.

ತತ್ಪ್ರಾಪ್ತಿಹೇತುರ್ಜ್ಞಾನಂ ಚ ಕರ್ಮ ಚೋಕ್ತಂ ದ್ವಿಜೋತ್ತಮಾಃ ।
ಆಗಮೋತ್ಥಂ ವಿವೇಕಾಚ್ಚ ದ್ವಿಧಾ ಜ್ಞಾನಂ ತಥೋಚ್ಯತೇ ॥ ೫೮ ॥

ಶಬ್ದಬ್ರಹ್ಮಾಗಮಮಯಂ ಪರಂ ಬ್ರಹ್ಮ ವಿವೇಕಜಂ ।
ಅಂಧಂ ತಮ ಇವಾಜ್ಞಾನಂ ದೀಪವಚ್ಚೇಂದ್ರಿಯೋದ್ಭವಂ ॥ ೫೯ ॥

ಯಥಾ ಸೂರ್ಯಸ್ತಥಾ ಜ್ಞಾನಂ ಯದ್ವೈ ವಿಪ್ರಾ ವಿವೇಕಜಂ ।
ಮನುರಪ್ಯಾಹ ವೇದಾರ್ಥಂ ಸ್ಮೃತ್ವಾ ಯನ್ಮುನಿಸತ್ತಮಾಃ । ೬೦ ॥

ತದೇತಚ್ಛ್ರೂಯತಾಮತ್ರ ಸಂಬಂಧೇ ಗದತೋ ಮಮ ।
ದ್ವೇ ಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ॥ ೬೧ ॥

ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ।
ದ್ವೇ ವಿದ್ಯೇ ವೈ ವೇದಿತವ್ಯೇ ಇತಿ ಚಾಥರ್ವಣೀ ಶ್ರುತಿಃ ॥ ೬೨ ॥

೫೮-೬೦. ಬ್ರಾಹ್ಮಣಶ್ರೇಷ್ಠರೇ, ಆ ಭಗವಂತನ ಸ್ವರೂಪಪ್ರಾಪ್ತಿಗೆ ಜ್ಞಾನವೂ ಕರ್ಮವೂ ಕಾರಣವಾದುದು. ವೇದದಿಂದುಂಟಾದ ಜ್ಞಾನಕ್ಕೆ ಶಬ್ದಬ್ರಹ್ಮವೆಂದೂ ವಿವೇಕದಿಂದುಂಟಾದ ಜ್ಞಾನಕ್ಕೆ ಪರಬ್ರಹ್ಮವೆಂದೂ ಎರಡು ವಿಧವಾಗಿ ಜ್ಞಾನಕ್ಕೆ ಹೆಸರಿರುವುದು ಅಜ್ಞಾನವೆಂಬುದು ಸಾಂದ್ರವಾದ ಕತ್ತಲೆಯಂತಿರುವುದು. ಇಂದ್ರಿಯಸಂಬಂಧವಾಗಿ ಹುಟ್ಟಿದ ಜ್ಞಾನಗಳು ದೀಪದಂತಿರತಕ್ಕವು. ವಿವೇಕದಿಂದ ಹುಟ್ಟಿದ ಜ್ಞಾನವು ಸೂರ್ಯನಂತೆ ಪ್ರಕಾಶವಾದುದು. ವೇದಾರ್ಥವನ್ನು ಜ್ಞಾಪಿಸಿಕೊಂಡು ಮನುವೂ ಕೂಡ ಧರ್ಮಶಾಸ್ತ್ರದಲ್ಲಿ ಇದನ್ನೇ ಹೇಳಿರುವನು.

೬೧-೬೨. ಈ ಸಂದರ್ಭದಲ್ಲಿ ನಾನು ಅದನ್ನು ಹೇಳುವೆನು ಕೇಳಿರಿ, ಶಬ್ದಬ್ರಹ್ಮ ಪರಬ್ರಹ್ಮ ಎಂಬೆರಡು ಬ್ರಹ್ಮಸ್ವರೂಪಗಳನ್ನು ತಿಳಿಯಬೇಕು. ಶಬ್ದಬ್ರಹ್ಮವನ್ನು ಸಂಪೂರ್ಣವಾಗಿ ತಿಳಿದವನು ಪರಬ್ರಹ್ಮಸ್ವರೂಪವನ್ನು ಪಡೆವನು. "ದ್ವೇವಿದ್ಯೇ ವೇದಿತವ್ಯೇ" ಎಂದು ಅಥರ್ವಣವೇದವು ಹೇಳಿರುವುದು.

ಪರಯಾ ಹ್ಯಕ್ಷರಪ್ರಾಪ್ತಿರ್ಋಗ್ವೇದಾದಿಮಯಾಪರಾ ।
ಯತ್ತದವ್ಯಕ್ತಮಜರಮಚಿಂತ್ಯಮಜಮವ್ಯಯಂ ॥ ೬೩ ॥

ಅನಿರ್ದೇಶ್ಯಮರೂಪಂ ಚ ಪಾಣಿಪಾದಾದ್ಯಸಂಯುತಂ ।
ವಿತ್ತಂ ಸರ್ವಗತಂ ನಿತ್ಯಂ ಭೂತಯೋನಿಮಕಾರಣಂ ॥ ೬೪ ॥

ವ್ಯಾಪ್ಯಂ ವ್ಯಾಪ್ತಂ ಯತಃ ಸರ್ವಂ ತದ್ವೈ ಪಶ್ಯಂತಿ ಸೂರಯಃ ।
ತದ್ಬ್ರಹ್ಮ ಪರಮಂ ಧಾಮ ತದ್ಧ್ಯೇಯಂ ಮೋಕ್ಷಕಾಂಕ್ಷಿಭಿಃ ॥ ೬೫ ॥

ಶ್ರುತಿವಾಕ್ಯೋದಿತಂ ಸೂಕ್ಷ್ಮಂ ತದ್ವಿಷ್ಣೋಃ ಪರಮಂ ಪದಂ ।
ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಂ ॥ ೬೬ ॥

ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ।
ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ॥ ೬೭ ॥

೬೩-೬೫. ಪರಾವಿದ್ಯೆಯಿಂದ ನಾಶರಹಿತವಾದ ಪರಬ್ರಹ್ಮಪ್ರಾಪ್ತಿಯುಂಟಾಗುವುದು. ಋಗ್ವೇದವೇ ಮೊದಲಾದ ಸಮಸ್ತ ವೇದಗಳ ಸ್ವರೂಪವೇ ಅಪರಾವಿದ್ಯೆಯು. ಇಂದ್ರಿಯಗೋಚರವಿಲ್ಲದುದೂ, ಮುಪ್ಪಿಲ್ಲದುದೂ, ಮನಸ್ಸಿನ ಆಲೋಚನೆಗೆ ಸಿಕ್ಕದುದೂ, ನಾಶರಹಿತವಾದುದೂ, ರೂಪವೂ ಕೈಕಾಲುಗಳೂ ಇಲ್ಲದುದೂ, ಜ್ಞಾನಸ್ವರೂಪವಾಗಿ ಎಲ್ಲ ವಸ್ತುಗಳಲ್ಲಿಯೂ ಇರುವುದೂ ಶಾಶ್ವತವಾದುದೂ ಸಮಸ್ತ ಭೂತಗಳಿಗೂ ಕಾರಣವಾದುದೂ ತನಗೆ ಕಾರಣವಿಲ್ಲದುದೂ ಸಮಸ್ತ ದೃಶ್ಯವಸ್ತುಸ್ವರೂಪವಾದುದೂ ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿರುವುದೂ ಆದ ತತ್ತ್ವವು ಯಾವುದೋ ಅದನ್ನು ವಿದ್ವಾಂಸರು ಪರಬ್ರಹ್ಮವೆಂದು ಹೇಳುವರು. ಅದನ್ನೇ ಮೋಕ್ಷವನ್ನಪೇಕ್ಷಿಸುವವರು ಧ್ಯಾನ ಮಾಡಬೇಕು.

೬೬-೬೮. ವೇದವಾಕ್ಯಗಳಲ್ಲಿ ಹೇಳಿರುವ ಅತ್ಯಂತ ಸೂಕ್ಷ್ಮವಾದ ಆ ತತ್ತ್ವವೇ ಸರ್ವವ್ಯಾಪಿಯಾದ ಪರಬ್ರಹ್ಮತತ್ತ್ವವು. ಸಮಸ್ತಪ್ರಪಂಚದ ಉತ್ಪತ್ತಿ, ನಾಶ, ಜೀವರುಗಳು ಪ್ರಪಂಚಕ್ಕೆ ಬಂದಬಗೆ, ಅವು ಕೊನೆಗೆ ಹೊಂದುವ ಗತಿ, ವಿದ್ಯೆ, ಅವಿದ್ಯೆ ಇವುಗಳ ಸ್ವರೂಪವನ್ನು ತಿಳಿದವನನ್ನೇ ಭಗವಂತನೆಂದು ಹೇಳು

ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ।
ಸರ್ವಾಣಿ ತತ್ರ ಭೂತಾನಿ ನಿವಸಂತಿ ಪರಾತ್ಮನಿ ॥ ೬೮ ॥

ಭೂತೇಷು ಚ ಸ ಸರ್ವಾತ್ಮಾ ವಾಸುದೇವಸ್ತತಃ ಸ್ಮೃತಃ ।
ಉವಾಚೇದಂ ಮಹರ್ಷಿಭ್ಯಃ ಪುರಾ ಪೃಷ್ಟಃ ಪ್ರಜಾಪತಿಃ ॥ ೬೯ ॥

ನಾಮವ್ಯಾಖ್ಯಾಮನಂತಸ್ಯ ವಾಸುದೇವಸ್ಯ ತತ್ತ್ವತಃ ।
ಭೂತೇಷು ವಸತೇ ಯೋಽಂತರ್ವಸಂತ್ಯತ್ರ ಚ ತಾನಿ ಯತ್ ।
ಧಾತಾ ವಿಧಾತಾ ಜಗತಾಂ ವಾಸುದೇವಸ್ತತಃ ಪ್ರಭುಃ ॥ ೭೦ ॥

ಸಸರ್ವಭೂತಪ್ರಕೃತಿರ್ಗುಣಾಂಶ್ಚ
ದೋಷಾಂಶ್ಚ ಸರ್ವಾನ್ಸಗುಣೋ ಹ್ಯತೀತಃ ।
ಅತೀತಸರ್ವಾವರಣೋಽಖಿಲಾತ್ಮಾ
ತೇನಾವೃತಂ ಯದ್ಭುವನಾಂತರಾಲಂ ॥ ೭೧ ॥

ವರು. ನೀಚವಾದ ಗುಣಗಳನ್ನು ಬಿಟ್ಟು ಜ್ಞಾನಶಕ್ತಿ, ಬಲ, ಸಂಪತ್ತು, ಪರಾಕ್ರಮ, ತೇಜಸ್ಸು, ಮುಂತಾದ ಸಕಲ ಸದ್ಗುಣಗಳೇ ಭಗವಂತನ ಸ್ವರೂಪ ವಾದುವುಗಳು. ಸಮಸ್ತ ಭೂತಗಳೂ ಆ ಪರಮಾತ್ಮನಲ್ಲಿಯೇ ವಾಸ ಮಾಡುವುವು.

೬೯-೭೦. ಆ ಸಮಸ್ತ ಭೂತಗಳಲ್ಲಿಯೂ ಆತ್ಮಸ್ವರೂಪನಾಗಿ ಅವನೇ ವಾಸವಾಗಿರುವನು. ಆದುದರಿಂದ ಅವನಿಗೆ ವಾಸುದೇವನೆಂದು ಹೆಸರಿರುವುದು. ಹಿಂದೆ ಋಷಿಗಳು ಬ್ರಹ್ಮನನ್ನು ಪ್ರಶ್ನೆಮಾಡುತ್ತಲು ಬ್ರಹ್ಮನು ಅವರಿಗೆ ಭೂತ ಗಳೊಳಗೆ ವಾಸಮಾಡುವುದರಿಂದಲೂ ಆ ಭೂತಗಳು ಆತ್ಮತತ್ವದಲ್ಲಿ ವಾಸ ಮಾಡುವುದರಿಂದಲೂ ಸೃಷ್ಟಿಕರ್ತನಾಗಿ ಜಗತ್ತಿನ ನಿಯಮಗಳನ್ನು ಮಾಡಿರು ವುದರಿಂದಲೂ ವಾಸುದೇವನೆಂಬ ಹೆಸರನ್ನು ಹೊಂದಿರುವನೆಂದು ವಾಸುದೇವ ನೆಂಬ ಹೆಸರಿನ ಅರ್ಥವನ್ನು ಹೇಳಿರುವನು.

೭೧. ಆ ಪರಮಾತ್ಮನು ಸಮಸ್ತ ಭೂತಗಳ ಮತ್ತು ಪ್ರಕೃತಿಯ ಗುಣದೋಷಗಳೆಲ್ಲವನ್ನೂ ಮೀರಿದವನು. ಸಮಸ್ತವಾದ ಅಜ್ಞಾನರೂಪವಾದ ಆವರಣಗಳನ್ನೂ ಬಿಟ್ಟವನು. ಸಕಲ ಜೀವರುಗಳಿಗೂ ಆತ್ಮಸ್ವರೂಪನು. ಈ ಪ್ರಪಂಚದ ಮಧ್ಯಪ್ರದೇಶವೆಲ್ಲವೂ ಆ ಪರಮಾತ್ಮನಿಂದಲೇ ತುಂಬಿರುವುದು.

ಸಮಸ್ತಕಲ್ಯಾಣಗುಣಾತ್ಮಕೋ ಹಿ
ಸ್ವಶಕ್ತಿಲೇಶಾದ್ಧೃತಭೂತಸರ್ಗಃ ।
ಇಚ್ಛಾಗೃಹೀತಾಭಿಮತೋರುದೇಹಃ
ಸಂಸಾಧಿತಾಶೇಷಜಗದ್ಧಿತೋಽಸೌ ॥ ೭೨ ॥

ತೇಜೋಬಲೈಶ್ವರ್ಯಮಹಾವರೋಧಃ
ಸ್ವವೀರ್ಯಶಕ್ತ್ಯಾದಿಗುಣೈಕರಾಶಿಃ ।
ಪರಃ ಪರಾಣಾಂ ಸಕಲಾ ನ ಯತ್ರ
ಕ್ಲೇಶಾದಯಃ ಸಂತಿ ಪರಾಪರೇಶೇ ॥ ೭೩ ॥

ಸ ಈಶ್ವರೋ ವ್ಯಷ್ಟಿಸಮಷ್ಟಿರೂಪೋ
ಽವ್ಯಕ್ತಸ್ವರೂಪಃ ಪ್ರಕಟಸ್ವರೂಪಃ ।
ಸರ್ವೇಶ್ವರಃ ಸರ್ವದೃಕ್ಸರ್ವವೇತ್ತಾ
ಸಮಸ್ತಶಕ್ತಿಃ ಪರಮೇಶ್ವರಾಖ್ಯಃ ॥ ೭೪ ॥

೭೨-೭೩. ಆ ಪರಮಾತ್ಮನು ಸಮಸ್ತ ಕಲ್ಯಾಣಗುಣಸ್ವರೂಪನು. ತನ್ನ ಶಕ್ತಿಯ ಅಲ್ಪಭಾಗದಿಂದ ಸಮಸ್ತ ಭೂತಗಳನ್ನೂ ಸೃಷ್ಟಿಸುವನು. ತನ್ನ ಇಷ್ಟದಂತೆ ತನಗೆ ಬೇಕಾದ ದೊಡ್ಡ ದೇಹವನ್ನು ಧರಿಸುವನು. ಸಮಸ್ತ ಲೋಕಗಳಿಗೂ ಹಿತವನ್ನುಂಟುಮಾಡುವನು. ಅವನು ತೇಜಸ್ಸು, ಬಲ, ಐಶ್ವರ್ಯ ಇವುಗಳಿಗೆ ಆಶ್ರಯನು. ಪರಾಕ್ರಮ ಶಕ್ತಿ ಮುಂತಾದ ಗುಣಸಮೂಹಸ್ವರೂಪನು. ಶ್ರೇಷ್ಠವಾದ ವಸ್ತುಗಳೆಲ್ಲಕ್ಕಿಂತ ಶ್ರೇಷ್ಠನು. ಪರಾಪರವಸ್ತುವಾದ ಅವನಲ್ಲಿ ದುಃಖಾದಿಗಳು ಇಲ್ಲವೇ ಇಲ್ಲ.

೭೪. ಪರಮೇಶ್ವರನೆಂಬ ಹೆಸರುಳ್ಳ ಆ ದೇವನು ಬೇರೆ ಬೇರೆಯಾದ ಜೀವರೂಪದಿಂದ ವ್ಯಷ್ಟಿರೂಪನೆಂದೂ ಬ್ರಹ್ಮ, ವಿಷ್ಣು ಮುಂತಾದ ರೂಪದಿಂದ ಸಮಷ್ಟಿರೂಪನೆಂದೂ ನಿರ್ಗುಣಸ್ವರೂಪದಿಂದ ಅವ್ಯಕ್ತನೆನಿಸಿಯೂ, ಸಗುಣರೂಪದಿಂದ ಪ್ರಕಟನೆನಿಸಿಯೂ ಸರ್ವೇಶ್ವರನೂ, ಸಕಲಜ್ಞಾನಸ್ವರೂಪನೂ ಸಮಸ್ತ ಶಕ್ತಿ ಸ್ವರೂಪನೂ ಆಗಿರುವನು.

ಸಂಜ್ಞಾಯತೇ ಯೇನ ತದಸ್ತದೋಷಂ
ಶುದ್ಧಂ ಪರಂ ನಿರ್ಮಲಮೇಕರೂಪಂ ।
ಸಂದೃಶ್ಯತೇ ವಾಪ್ಯಥ ಗಮ್ಯತೇ ವಾ
ತಜ್ಞಾನಮಜ್ಞಾನಮತೋಽನ್ಯದುಕ್ತಂ ॥ ೭೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ ಆತ್ಯಂತಿಕಲಯನಿರೂಪಣಂ ನಾಮ ಚತುಸ್ತ್ರಿಂಶದಧಿಕ-ದ್ವಿಶತತಮೋಽಧ್ಯಾಯಃ

---

೭೫. ಪರಿಶುದ್ಧವೂ ಶ್ರೇಷ್ಠವೂ ದೋಷರಹಿತವೂ ಅದ್ವಿತೀಯವೂ ಆದ ಆ ಪರಮಾತ್ಮನ ಸ್ವರೂಪವನ್ನು ಯಾವನು ತಿಳಿಯುವನೋ ಅಥವಾ ಅನುಭವಿಸುವನೋ ಅದನ್ನೇ ಜ್ಞಾನವೆನ್ನುವರು. ಇದಕ್ಕಿಂತ ಬೇರೆಯಾದುದನ್ನು ಅಜ್ಞಾನವೆನ್ನುವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಆತ್ಯಂತಿಕಲಯನಿರೂಪಣೆ ಎಂಬ ಇನ್ನೂರಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಪಂಚತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಇದಾನೀಂ ಬ್ರೂಹಿ ಯೋಗಂ ಚ ದುಃಖಸಂಯೋಗಭೇಷಜಂ ।
ಯಂ ವಿದಿತ್ವಾವ್ಯಯಂ ತತ್ರ ಯುಂಜಾಮಃ ಪುರುಷೋತ್ತಮಂ ॥ ೧ ॥

ಶ್ರುತ್ವಾ ಸ ವಚನಂ ತೇಷಾಂ ಕೃಷ್ಣದ್ವೈಪಾಯನಸ್ತದಾ ।
ಅಬ್ರವೀತ್ಪರಮಪ್ರೀತೋ ಯೋಗೀ ಯೋಗವಿದಾಂ ವರಃ ॥ ೨ ॥

॥ ವ್ಯಾಸ ಉವಾಚ ॥

ಯೋಗಂ ವಕ್ಷ್ಯಾಮಿ ಭೋ ವಿಪ್ರಾಃ ಶೃಣುಧ್ವಂ ಭವನಾಶನಂ ।
ಯಮಭ್ಯಸ್ಯಾಪ್ನುಯಾದ್ಯೋಗೀ ಮೋಕ್ಷಂ ಪರಮದುರ್ಲಭಂ ॥ ೩ ॥

ಇನ್ನೂರಮೂವತ್ತೈದನೆಯ ಅಧ್ಯಾಯವು

೧–೨. ಮುನಿಗಳು ಹೇಳಿದರು :—ಎಲೈ ವ್ಯಾಸನೇ, ದುಃಖವೆಂಬ ರೋಗಕ್ಕೆ ಔಷಧಸ್ವರೂಪವಾದ ಯೋಗದ ಸ್ವರೂಪವನ್ನು ಹೇಳಬೇಕು. ಯೋಗ ಶಾಸ್ತ್ರದಲ್ಲಿ ನಾಶರಹಿತನೂ ಪುರುಷಶ್ರೇಷ್ಠನೂ ಆದ ಪರಮಾತ್ಮನನ್ನು ತಿಳಿದು ಯೋಗಾಭ್ಯಾಸವನ್ನು ಮಾಡೋಣ, ಎಂದು ಹೇಳಿದ ಮುನಿಗಳ ಮಾತನ್ನು ಕೇಳಿ, ಯೋಗಿಯೂ ಯೋಗವನ್ನು ಬಲ್ಲವರಲ್ಲಿ ಶ್ರೇಷ್ಠನೂ ಆದ ವ್ಯಾಸ ಮುನಿಯು ಅತ್ಯಂತ ಸಂತೋಷದಿಂದ ಹೇಳತೊಡಗಿದನು.

೩-೫. ಎಲೈ ಬ್ರಾಹ್ಮಣರೇ, ಸಂಸಾರದುಃಖವನ್ನು ನಾಶಮಾಡುವ ಯೋಗದ ಸ್ವರೂಪವನ್ನು ಹೇಳುವೆನು ಕೇಳಿರಿ. ಅದನ್ನು ಅಭ್ಯಾಸಮಾಡಿದ

ಶ್ರುತ್ವಾದೌ ಯೋಗಶಾಸ್ತ್ರಾಣಿ ಗುರುಮಾರಾಧ್ಯ ಭಕ್ತಿತಃ ।
ಇತಿಹಾಸಂ ಪುರಾಣಂ ಚ ವೇದಾಂಶ್ಚೈವ ವಿಚಕ್ಷಣಃ ॥ ೪ ॥

ಆಹಾರಂ ಯೋಗದೋಷಾಂಶ್ಚ ದೇಶಕಾಲಂ ಚ ಬುದ್ಧಿಮಾನ್ ।
ಜ್ಞಾತ್ವಾ ಸಮಭ್ಯಸೇದ್ಯೋಗಂ ನಿರ್ದ್ವಂದ್ವೋ ನಿಷ್ಪರಿಗ್ರಹಃ ॥ ೫ ॥

ಭುಂಜನ್ನಸಕ್ತುಂ ಯವಾಗೂಂ ಚ ತಕ್ರಮೂಲಫಲಂ ಪಯಃ ।
ಯಾವಕಂ ಕಣಪಿಣ್ಯಾಕಮಾಹಾರಂ ಯೋಗಸಾಧನಂ ॥ ೬ ॥

ನ ಮನೋವಿಕಲೇ ಧ್ಮಾತೇ ನ ಶ್ರಾಂತೇ ಕ್ಷುಧಿತೇ ತಥಾ ।
ನ ದ್ವಂದ್ವೇ ನ ಚ ಶೀತೇ ಚ ನ ಚೋಷ್ಣೇ ನಾನಿಲಾತ್ಮಕೇ ॥ ೭ ॥

ಸಶಬ್ದೇ ನ ಜಲಾಭ್ಯಾಸೇ ಜೀರ್ಣಗೋಷ್ಠೇ ಚತುಷ್ಪಥೇ ।
ಸರೀಸೃಪೇ ಶ್ಮಶಾನೇ ಚ ನ ನದ್ಯಂತೇಗ್ನಿಸಂನಿಧೌ ॥ ೮ ॥

ಯೋಗಿಯು ದುರ್ಲಭವಾದ ಮೋಕ್ಷವನ್ನು ಹೊಂದುವನು. ಬುದ್ಧಿವಂತನಾದ ಮನುಜನು ಮೊದಲು ಯೋಗಶಾಸ್ತ್ರವನ್ನೂ ಇತಿಹಾಸ ಪುರಾಣಗಳನ್ನೂ ವೇದಗಳನ್ನೂ ಕೇಳಿ ತಿಳಿದುಕೊಂಡು ಭಕ್ತಿಯಿಂದ ಗುರುವನ್ನು ಪೂಜಿಸಿ ಆಹಾರ, ದೇಶ, ಕಾಲ, ಯೋಗದೋಷಗಳು ಇವುಗಳನ್ನು ತಿಳಿದುಕೊಂಡು ಸುಖ ದುಃಖ ಶೀತೋಷ್ಣಾದಿದ್ವಂದಗಳೂ ಪತ್ನೀಪುತ್ರಾದಿಗಳ ಬಾಧೆಯೂ ಇಲ್ಲದವನಾಗಿ ಯೋಗಾಭ್ಯಾಸವನ್ನು ಮಾಡಬೇಕು.

೬. ಹಿಟ್ಟು, ಗಂಜಿ, ಮಜ್ಜಿಗೆ, ಗೆಡ್ಡೆ, ಗೆಣಸು. ಹಣ್ಣು, ಹಾಲು, ಜವೆ ಗೋದಿಯ ಹಿಟ್ಟು ಈ ಆಹಾರಗಳು ಯೋಗಸಾಧನೆಗೆ ಅನುಕೂಲವಾದುವು.

೭-೮. ಮನಸ್ಸು ವಿಕಲ್ಪವಾಗುವ ಸ್ಥಳದಲ್ಲಿಯೂ ಹೆಚ್ಚು ಗಾಳಿಬೀಸುವ ಸ್ಥಳದಲ್ಲಿಯೂ ಶರೀರಕ್ಕೆ ಆಯಾಸವಾಗಿರುವಾಗಲೂ ಹಸಿವಾಗಿರುವಾಗಲೂ ಶೀತೋಷ್ಣ ಸುಖದುಃಖಗಳನ್ನು ಅನುಭವಿಸುವಾಗಲೂ ಶರೀರದಲ್ಲಿ ವಾತವು ಹೆಚ್ಚಿದಾಗಲೂ ಜನರ ಗದ್ದಲ್ಲವಿರುವ ಸ್ಥಳದಲ್ಲಿಯೂ ನೀರಿನ ದಡದಲ್ಲಿಯೂ ಹಳೆಯ ದನದ ಕೊಟ್ಟಿಗೆಯಲ್ಲಿಯೂ ನಾಲ್ಕು ದಾರಿಗಳು ಸೇರುವ ಪ್ರದೇಶಗಳ

ನ ಚೈತ್ಯೇ ನ ಚ ವಲ್ಮೀಕೇ ಸಭಯೇ ಕೂಪಸಂನಿಧೌ ।
ನ ಶುಷ್ಕಪರ್ಣನಿಚಯೇ ಯೋಗಂ ಯುಂಜೀತ ಕರ್ಹಿಚಿತ್ ॥ ೯ ॥

ದೇಶಾನೇತಾನನಾದೃತ್ಯ ಮೂಢತ್ವಾದ್ಯೋ ಯುನಕ್ತಿ ವೈ ।
ಪ್ರವಕ್ಷ್ಯೇ ತಸ್ಯ ಯೇ ದೋಷಾ ಜಾಯಂತೇ ವಿಘ್ನಕಾರಕಾಃ ॥ ೧೦ ॥

ಬಾಧಿರ್ಯಂ ಜಡತಾ ಲೋಪಃ ಸ್ಮೃತೇರ್ಮೂಕತ್ವಮಂಧತಾ ।
ಜ್ವರಶ್ಚ ಜಾಯತೇ ಸದ್ಯಸ್ತದ್ವದಜ್ಞಾನಸಂಭವಃ ॥ ೧೧ ॥

ತಸ್ಮಾತ್ಸರ್ವಾತ್ಮನಾ ಕಾರ್ಯಾ ರಕ್ಷಾ ಯೋಗವಿದಾ ಸದಾ ।
ಧರ್ಮಾರ್ಥಕಾಮಮೋಕ್ಷಾಣಾಂ ಶರೀರಂ ಸಾಧನಂ ಯತಃ ॥ ೧೨ ॥

ಆಶ್ರಮೇ ನಿಜನೇ ಗುಹ್ಯೇ ನಿಃಶಬ್ದೇ ನಿರ್ಭಯೇ ನಗೇ ।
ಶೂನ್ಯಾಗಾರೇ ಶುಚೌ ರಮ್ಯೇ ಚೈಕಾಂತೇ ದೇವತಾಲಯೇ ॥ ೧೩ ॥

ಲ್ಲಿಯೂ ಹಾವು ಮುಂತಾದ ದುಷ್ಟಪ್ರಾಣಿಗಳು ಸಂಚರಿಸುವ ಸ್ಥಳದಲ್ಲಿಯೂ ಶ್ಮಶಾನ, ನದಿ, ಬೆಂಕಿ, ಇವುಗಳ ಸಮೀಪದಲ್ಲಿಯೂ ದೇವಾಲಯ, ಹುತ್ತ, ಬಾವಿ, ಇವುಗಳ ಸಮೀಪದಲ್ಲಿಯೂ ಒಣಗಿದೆಲೆಯ ರಾಶಿ ಮುಂತಾದ ಭಯ ವನ್ನುಂಟುಮಾಡುವ ಪ್ರದೇಶದಲ್ಲಿಯೂ ಯೋಗಾಭ್ಯಾಸವನ್ನು ಮಾಡಬಾರದು.

೧೦-೧೨. ಈ ಮಾತನ್ನು ಲಕ್ಷಿಸದೆ ದಡ್ಡತನದಿಂದ ಯಾರು ಈ ಸ್ಥಳ ಗಳಲ್ಲಿ ಯೋಗಾಭ್ಯಾಸವನ್ನು ಮಾಡುವರೋ ಅವರಿಗೆ ಯೋಗವಿಘ್ನಗಳಾದ ಕಿವುಡು, ಕುರುಡು, ಜಡತ್ವ, ಬುದ್ಧಿಭ್ರಾಂತಿ, ಜ್ವರ ಮುಂತಾದ ಅಜ್ಞಾನ ದೋಷಗಳು ಪ್ರಾಪ್ತವಾಗುವುವು. ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತು ರ್ವಿಧ ಪುರುಷಾರ್ಥಗಳಿಗೆ ಶರೀರವೇ ಸಾಧನವಾದುದರಿಂದ ಯೋಗವನ್ನು ತಿಳಿದವನು ಸರ್ವಪ್ರಯತ್ನದಿಂದಲೂ ತನ್ನ ಶರೀರವನ್ನು ಯಾವಾಗಲೂ ಕಾಪಾಡಿಕೊಳ್ಳಬೇಕು.

೧೩-೧೬. ಜನರಿಲ್ಲದ ಗೋಪ್ಯವಾದ ಯಾವ ಧ್ವನಿಯೂ ಕೇಳದ ಭಯ ವಿಲ್ಲದ ಆಶ್ರಮದಲ್ಲಿಯೂ, ಪರ್ವತ, ಯಾರೂ ಇಲ್ಲದ ಮನೆ, ಶುಚಿಯಾಗಿಯೂ ಮನೋಹರವಾಗಿಯೂ ಇರುವ ದೇವಾಲಯ, ಇವುಗಳಲ್ಲಿಯೂ ರಾತ್ರಿಯ

ರಜನ್ಯಾಃ ಪಶ್ಚಿಮೇ ಯಾಮೇ ಪೂರ್ವೇ ಚ ಸುಸಮಾಹಿತಃ ।
ಪೂರ್ವಾಹ್ಣೇ ಮಧ್ಯಮೇ ಚಾಹ್ನಿ ಯುಕ್ತಾಹಾರೋ ಜಿತೇಂದ್ರಿಯಃ ॥ ೧೪ ॥

ಆಸೀನಃ ಪ್ರಾಙ್ಮುಖೋ ರಮ್ಯ ಆಸನೇ ಸುಖನಿಶ್ಚಲೇ ।
ನಾತಿನೀಚೇ ನ ಚೋಚ್ಛ್ರಿತೇ ನಿಸ್ಸ್ಪೃಹಃ ಸತ್ಯವಾಕ್ಶುಚಿಃ ॥ ೧೫ ॥

ಯುಕ್ತನಿದ್ರೋ ಜಿತಕ್ರೋಧಃ ಸರ್ವಭೂತಹಿತೇ ರತಃ ।
ಸರ್ವದ್ವಂದ್ವಸಹೋ ಧೀರಃ ಸಮಕಾಯಾಂಘ್ರಿಮಸ್ತಕಃ ॥ ೧೬ ॥

ನಾಭೌ ನಿಧಾಯ ಹಸ್ತೌ ದ್ವೌ ಶಾಂತಃ ಪದ್ಮಾಸನೇ ಸ್ಥಿತಃ ।
ಸಂಸ್ಥಾಪ್ಯ ದೃಷ್ಟಿಂ ನಾಸಾಗ್ರೇ ಪ್ರಾಣಾನಾಯಮ್ಯ ವಾಗ್ಯತಃ ॥ ೧೭ ॥

ಸಮಾಹೃತ್ಯೇಂದ್ರಿಯಗ್ರಾಮಂ ಮನಸಾ ಹೃದಯೇ ಮುನಿಃ ।
ಪ್ರಣವಂ ದೀರ್ಘಮುದ್ಯಮ್ಯ ಸಂವೃತಾಸ್ಯಃ ಸುನಿಶ್ಚಲಃ ॥ ೧೮ ॥

ಮೊದಲನೆಯ ಮತ್ತು ಕಡೆಯ ಯಾಮದಲ್ಲಿಯೂ, ಹಗಲಿನ ಮೊದಲಿನ ಮತ್ತು ಮಧ್ಯಭಾಗದಲ್ಲಿಯೂ ಶರೀರಕ್ಕೆ ತಕ್ಕಷ್ಟು ಆಹಾರವನ್ನು ಮಾಡಿಕೊಂಡು ಜಿತೇಂದ್ರಿಯನಾಗಿ ಮನೋಹರವಾದ ಅತಿ ಎತ್ತರವೂ ತಗ್ಗೂ ಅಲ್ಲದ ಪೀಠದಲ್ಲಿ ಪೂರ್ವಾಭಿಮುಖವಾಗಿ ಕುಳಿತು ಏಕಾಗ್ರಚಿತ್ತನಾಗಿ ಯಾವ ಆಸೆಯೂ ಇಲ್ಲದವನಾಗಿ ತಕ್ಕಷ್ಟು ನಿದ್ರೆಯನ್ನು ಮಾಡುತ್ತ, ಕೋಪವನ್ನು ಜಯಿಸಿ ಸಮಸ್ತ ಪ್ರಾಣಿಗಳಿಗೂ ಹಿತವನ್ನು ಮಾಡುವುದರಲ್ಲಿ ಆಸಕ್ತನಾಗಿ ಸುಖ ದುಃಖ ಶೀತೋಷ್ಣಾದಿ ಸಮಸ್ತ ದ್ವಂದ್ವಗಳನ್ನೂ ಸಹಿಸುತ್ತ, ಶರೀರ ತಲೆ ಇವುಗಳನ್ನು ಸರಳವಾಗಿಟ್ಟುಕೊಂಡು ಯೋಗಾಭ್ಯಾಸವನ್ನು ಮಾಡಬೇಕು.

೧೭-೨೦. ಯೋಗಿಯು ತನ್ನೆರಡು ಕೈಗಳನ್ನೂ ಹೊಕ್ಕುಳಿನಲ್ಲಿಟ್ಟುಕೊಂಡು ಶಾಂತನಾಗಿ ಪದ್ಮಾಸನದಲ್ಲಿರುತ್ತ ನೋಟವನ್ನು ಮೂಗಿನ ತುದಿಯಲ್ಲಿಟ್ಟು ಪ್ರಾಣಾಯಾಮವನ್ನು ಮಾಡಿ, ಮೌನವಾಗಿ ಇಂದ್ರಿಯಗಳನ್ನು ಮನಸ್ಸಿನಿಂದ ಸೆಳೆದು ಹೃದಯದಲ್ಲಿಟ್ಟು ಪ್ರಣವವನ್ನು ದೀರ್ಘವಾಗಿ ಉಚ್ಚರಿಸುತ್ತ ಬಾಯಿಯನ್ನು ಮುಚ್ಚಿಕೊಂಡು ಚಲಿಸದೆ ರಜೋಗುಣದಿಂದ ತಮೋ

ರಜಸಾ ತಮಸೋ ವೃತ್ತಿಂ ಸತ್ತ್ವೇನ ರಜಸಸ್ತಥಾ ।
ಸಂಛಾದ್ಯ ನಿರ್ಮಲೇ ಶಾಂತೇ ಸ್ಥಿತಃ ಸಂವೃತಲೋಚನಃ ॥ ೧೯ ॥

ಹೃತ್ಪದ್ಮಕೋಟರೇ ಲೀನಂ ಸರ್ವವ್ಯಾಪಿ ನಿರಂಜನಂ ।
ಯುಂಜೀತ ಸತತಂ ಯೋಗೀ ಮುಕ್ತಿದಂ ಪುರುಷೋತ್ತಮಂ ॥ ೨೦ ॥

ಕರಣೇಂದ್ರಿಯಭೂತಾನಿ ಕ್ಷೇತ್ರಜ್ಞೇ ಪ್ರಥಮಂ ನ್ಯಸೇತ್ ।
ಕ್ಷೇತ್ರಜ್ಞಶ್ಚ ಪರೇ ಯೋಜ್ಯಸ್ತತೋಽ ಯುಂಜತಿ ಯೋಗವಿತ್ ॥ ೨೧ ॥

ಮನೋ ಯಸ್ಯಾಂತಮಭ್ಯೇತಿ ಪರಮಾತ್ಮನಿ ಚಂಚಲಂ ।
ಸಂತ್ಯಜ್ಯ ವಿಷಯಾಂಸ್ತಸ್ಯ ಯೋಗಸಿದ್ಧಿಃ ಪ್ರಕಾಶಿತಾ ॥ ೨೨ ॥

ಯದಾ ನಿರ್ವಿಷಯಂ ಚಿತ್ತಂ ಪರೇ ಬ್ರಹ್ಮಣಿ ಲೀಯತೇ ।
ಸಮಾಧೌ ಯೋಗಯುಕ್ತಸ್ಯ ತದಾಭ್ಯೇತಿ ಪರಂ ಪದಂ ॥ ೨೩ ॥

ಗುಣದ ವ್ಯಾಪಾರವನ್ನೂ ಸತ್ವಗುಣದಿಂದ ರಜೋಗುಣದ ವ್ಯಾಪಾರವನ್ನೂ ಅಡಗಿಸಿ ಶುದ್ಧವಾದ ಮನಸ್ಸಿನಿಂದ ಶಾಂತನಾಗಿದ್ದು ಕಣ್ಣುಗಳನ್ನು ಮುಚ್ಚಿ ತನ್ನ ಹೃದಯಕಮಲದ ಗುಹೆಯಲ್ಲಿ ಅಡಗಿರುವ, ಯಾವ ದೋಷವೂ ಇಲ್ಲದ, ಸರ್ವ ವ್ಯಾಪಿಯಾದ, ಮುಕ್ತಿಯನ್ನು ಕೊಡುವ ಪುರುಷಶ್ರೇಷ್ಠನಾದ ಪರಬ್ರಹ್ಮನನ್ನು ಧ್ಯಾನಮಾಡಬೇಕು.

೨೧-೨೩. ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಪಂಚಭೂತಗಳು ಇವು ಗಳನ್ನು ಕ್ಷೇತ್ರಜ್ಞನಾದ ಜೀವನಲ್ಲಿ ಐಕ್ಯಮಾಡಿ |ಆ ಕ್ಷೇತ್ರಜ್ಞನಾದ ಜೀವನನ್ನು ಪರಮಾತ್ಮನಲ್ಲಿ ನೆಲೆಗೊಳಿಸಬೇಕು. ಇದೇ ಯೋಗವೆನಿಸುವದು. ಚಂಚಲ ವಾದ ಮನಸ್ಸು ತನ್ನ ವಿಷಯಗಳನ್ನು ಬಿಟ್ಟು ಪರಮಾತ್ಮನಲ್ಲಿ ಐಕ್ಯವಾದರೆ ಅಂಥವನಿಗೆ ಯೋಗಸಿದ್ಧಿಯಾಗುವದು. ಯಾವಾಗ ಮನಸ್ಸಿನಲ್ಲಿ ವಿಷಯ ಗಳೊಂದೂ ಇಲ್ಲದೆ ಪರಬ್ರಹ್ಮತತ್ವದಲ್ಲಿ ಮನಸ್ಸು ಲೀನವಾಗುವುದೋ ಆಗ ಸಮಾಧಿಯಿಂದ ಯೋಗಯುಕ್ತನಾದವನಿಗೆ ಪರಮಪದವು ದೊರಕುವುದು.

ಅಸಂಸಕ್ತಂ ಯದಾ ಚಿತ್ತಂ ಯೋಗಿನಃ ಸರ್ವಕರ್ಮಸು ।
ಭವತ್ಯಾನಂದಮಾಸಾದ್ಯ ತದಾ ನಿರ್ವಾಣಮೃಚ್ಛತಿ ॥ ೨೪ ॥

ಶುದ್ಧಂ ಧಾಮತ್ರಯಾತೀತಂ ತುರ್ಯಾಖ್ಯಂ ಪುರುಷೋತ್ತಮಂ ।
ಪ್ರಾಪ್ಯ ಯೋಗಬಲಾದ್ಯೋಗೀ ಮುಚ್ಯತೇ ನಾತ್ರ ಸಂಶಯಃ ॥ ೨೫ ॥

ನಿಃಸ್ಪೃಹಃ ಸರ್ವಕಾಮೇಭ್ಯಃ ಸರ್ವತ್ರ ಪ್ರಿಯದರ್ಶನಃ ।
ಸರ್ವತ್ರಾನಿತ್ಯಬುದ್ಧಿಸ್ತು ಯೋಗೀ ಮುಚ್ಯೇತ ನಾನ್ಯಥಾ ॥ ೨೬ ॥

ಇಂದ್ರಿಯಾಣಿ ನ ಸೇವೇತ ವೈರಾಗ್ಯೇನ ಚ ಯೋಗವಿತ್ ।
ಸದಾ ಚಾಭ್ಯಾಸಯೋಗೇನ ಮುಚ್ಯತೇ ನಾತ್ರ ಸಂಶಯಃ ॥ ೨೭ ॥

ನ ಚ ಪದ್ಮಾಸನಾದ್ಯೋಗೋ ನ ನಾಸಾಗ್ರನಿರೀಕ್ಷಣಾತ್ ।
ಮನಸಶ್ಚೇಂದ್ರಿಯಾಣಾಂ ಚ ಸಂಯೋಗೋ ಯೋಗ ಉಚ್ಯತೇ ॥ ೨೮ ॥

ಯೋಗಿಯಾದವನ ಮನಸ್ಸು ಸಕಲ ಇಷ್ಟಾರ್ಥಗಳಲ್ಲಿಯೂ ಸಂಬಂಧಿಸದಿದ್ದರೆ ಆ ಮನಸ್ಸಿಗೆ ಆನಂದವುಂಟಾಗಿ ಮೋಕ್ಷವು ಲಭಿಸುವದು.

೨೫-೨೬. ಪರಿಶುದ್ಧನೂ ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ಮೂರು ಸ್ಥಾನಗಳನ್ನು ಮೀರಿದವನೂ ತುರ್ಯನೂ ಆದ ಪುರುಷೋತ್ತಮನಾದ ಪರ ಬ್ರಹ್ಮನನ್ನು ಹೊಂದಿ ಯೋಗಿಯು ತನ್ನ ಯೋಗಬಲದಿಂದ ಮುಕ್ತಿಯನ್ನು ಪಡೆಯುವದರಲ್ಲಿ ಸಂದೇಹವಿಲ್ಲ. ಸಕಲ ವಸ್ತುಗಳಲ್ಲಿಯೂ ಆಸೆಯಿಲ್ಲದವನಾಗಿ ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತ ಸಮಸ್ತ ವಸ್ತುಗಳೂ ಅನಿತ್ಯವಾದುವು ಗಳೆಂಬ ನಿಶ್ಚಯಜ್ಞಾನದಿಂದ ಯೋಗಿಯು ಮೋಕ್ಷವನ್ನು ಪಡೆವನು. ಬೇರೊಂದು ಮಾರ್ಗದಿಂದ ಮೋಕ್ಷವಾಗುವದಿಲ್ಲ.

೨೭-೨೮. ಯೋಗಿಯಾದವನು ಇಂದ್ರಿಯಾರ್ಥಗಳನ್ನು ಅನುಭವಿಸದೆ ವೈರಾಗ್ಯವುಳ್ಳವನಾಗಬೇಕು. ಯಾವಾಗಲೂ ಯೋಗಾಭ್ಯಾಸವುಳ್ಳವನಾಗಿದ್ದರೆ ಮುಕ್ತಿಯನ್ನು ಪಡೆವನು. ಪದ್ಮಾಸನದಲ್ಲಿ ಕುಳಿತರೂ ಮೂಗಿನ ತುದಿಯನ್ನು ನೋಡುತ್ತಿದ್ದರೂ ಯೋಗಸಿದ್ಧಿಯಾಗುವದಿಲ್ಲ. ಮನಸ್ಸೂ ಇಂದ್ರಿಯಗಳೂ ಕೂಡಿದರೆ ಯೋಗವೆನಿಸುವದು.

ಏವಂ ಮಯಾ ಮುನಿಶ್ರೇಷ್ಠಾ ಯೋಗಃ ಪ್ರೋಕ್ತೋ ವಿಮುಕ್ತಿದಃ ।
ಸಂಸಾರಮೋಕ್ಷಹೇತುಶ್ಚ ಕಿಮನ್ಯಚ್ಛ್ರೋತುಮಿಚ್ಛಥ ॥ ೨೯ ॥

॥ ಲೋಮಹರ್ಷಣ ಉವಾಚ ॥

ಶ್ರುತ್ವಾ ತೇ ವಚನಂ ತಸ್ಯ ಸಾಧು ಸಾಧ್ವಿತಿ ಚಾಬ್ರುವನ್ ।
ವ್ಯಾಸಂ ಪ್ರಶಸ್ಯ ಸಂಪೂಜ್ಯ ಪುನಃ ಪ್ರಷ್ಟುಂ ಸಮುದ್ಯತಾಃ ॥ ೩೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ ಯೋಗಾಭ್ಯಾಸನಿರೂಪಣಂ ನಾಮ ಪಂಚತ್ರಿಂಶದಧಿಕ-ದ್ವಿಶತತಮೋಽಧ್ಯಾಯಃ

---

೨೯. ಎಲೈ ಮುನಿಶ್ರೇಷ್ಠರೇ, ಮುಕ್ತಿಯನ್ನು ಕೊಡುವ, ಸಂಸಾರ ದುಃಖವನ್ನು ಬಿಡಿಸಲು ಕಾರಣವಾದ ಯೋಗದ ಸ್ವರೂಪವನ್ನು ಹೇಳಿದೆನು. ಮತ್ತೇನನ್ನು ಕೇಳಬೇಕೆಂಬುವಿರಿ? ಎಂದನು.

೩೦. ಲೋಮಹರ್ಷನು ಹೇಳಿದನು :—ವ್ಯಾಸನು ಹೇಳಿದ ಮಾತು ಗಳನ್ನು ಕೇಳಿ ಆ ಋಷಿಗಳು ಶ್ಲಾಘಿಸಿದರು. ವ್ಯಾಸನನ್ನು ಹೊಗಳಿ ಪೂಜಿಸಿ ಮತ್ತೆ ಪ್ರಶ್ನೆಮಾಡಲು ಪ್ರಾರಂಭಿಸಿದರು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಯೋಗಾಭ್ಯಾಸನಿರೂಪಣೆ ಎಂಬ ಇನ್ನೂರಮೂವತ್ತೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಷಟ್ತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ತವ ವಕ್ತ್ರಾಬ್ಧಿಸಂಭೂತಮಮೃತಂ ವಾಙ್ಮಯಂ ಮುನೇ ।
ಪಿಬತಾಂ ನೋ ದ್ವಿಜಶ್ರೇಷ್ಠ ನ ತೃಪ್ತಿರಿಹ ದೃಶ್ಯತೇ ॥ ೧ ॥

ತಸ್ಮಾದ್ಯೋಗಂ ಮುನೇ ಬ್ರೂಹಿ ವಿಸ್ತರೇಣ ವಿಮುಕ್ತಿದಂ ।
ಸಾಂಖ್ಯಂ ಚ ದ್ವಿಪದಾಂ ಶ್ರೇಷ್ಠ ಶ್ರೋತುಮಿಚ್ಛಾಮಹೇ ವಯಂ ॥ ೨ ॥

ಪ್ರಜ್ಞಾವಾನ್ ಶ್ರೋತ್ರಿಯೋ ಯಜ್ವಾ ಖ್ಯಾತಃ ಪ್ರಾಜ್ಞೋಽನಸೂಯಕಃ ।
ಸತ್ಯಧರ್ಮಮತಿರ್ಬ್ರಹ್ಮನ್ಕಥಂ ಬ್ರಹ್ಮಾಧಿಗಚ್ಛತಿ ॥ ೩ ॥

ಇನ್ನೂರಮೂವತ್ತಾರನೆಯ ಅಧ್ಯಾಯವು

೧–೫. ಮುನಿಗಳಿಂತೆಂದರು—ಎಲೈ ವ್ಯಾಸಮುನಿಯೇ, ನಿನ್ನ ಬಾಯೆಂಬ ಸಮುದ್ರದಲ್ಲಿ ಹುಟ್ಟಿದ ಮಾತೆಂಬ ಅಮೃತವನ್ನು ಪಾನಮಾಡುತ್ತಿರುವ ನಮಗೆ ತೃಪ್ತಿಯುಂಟಾಗಲಿಲ್ಲ. ಆದುದರಿಂದ ಎಲೈ ಮುನಿಯೇ, ಮೋಕ್ಷವನ್ನುಂಟುಮಾಡುವ ಯೋಗವನ್ನೂ ಸಾಂಖ್ಯವನ್ನೂ ವಿಸ್ತಾರವಾಗಿ ಹೇಳು, ನಮಗೆ ಕೇಳಬೇಕೆಂಬ ಆಸೆಯು ಇರುವುದು. ಎಲೈ ಪರಬ್ರಹ್ಮನಾದ ವ್ಯಾಸನೇ, ಶ್ರೋತ್ರಿಯನೂ ಬುದ್ಧಿವಂತನೂ ಯಜ್ಞವನ್ನು ಮಾಡತಕ್ಕವನೂ ಪ್ರಸಿದ್ಧನೂ ಜ್ಞಾನಿಯೂ ಅಸೂಯೆಯಿಲ್ಲದವನೂ ಸತ್ಯದಲ್ಲಿಯೂ ಧರ್ಮ

ತಪಸಾ ಬ್ರಹ್ಮಚರ್ಯೇಣ ಸರ್ವತ್ಯಾಗೇನ ಮೇಧಯಾ ।
ಸಾಂಖ್ಯೇ ವಾ ಯದಿ ವಾ ಯೋಗ ಏತತ್ಪೃಷ್ಟೋ ವದಸ್ವ ನಃ ॥ ೪ ॥

ಮನಸಶ್ಚೇಂದ್ರಿಯಾಣಾಂ ಚ ಯಥೈಕಾಗ್ರ್ಯಮವಾಪ್ಯತೇ ।
ಯೇನೋಪಾಯೇನ ಪುರುಷಸ್ತತ್ತ್ವಂ ವ್ಯಾಖ್ಯಾತುಮರ್ಹಸಿ ॥ ೫ ॥

॥ ವ್ಯಾಸ ಉವಾಚ ॥

ನಾನ್ಯತ್ರ ಜ್ಞಾನತಪಸೋರ್ನಾನ್ಯತ್ರೇಂದ್ರಿಯನಿಗ್ರಹಾತ್ ।
ನಾನ್ಯತ್ರ ಸರ್ವಸಂತ್ಯಾಗಾತ್ಸಿದ್ಧಿಂ ವಿಂದತಿ ಕಶ್ಚನ ॥ ೬ ॥

ಮಹಾಭೂತಾನಿ ಸರ್ವಾಣಿ ಪೂರ್ವಸೃಷ್ಟಿಃ ಸ್ವಯಂಭುವಃ ।
ಭೂಯಿಷ್ಠಂ ಪ್ರಾಣಭೃದ್ಗ್ರಾಮೇ ನಿವಿಷ್ಟಾನಿ ಶರೀರಿಷು ॥ ೭ ॥

ಭೂಮೇರ್ದೇಹೋ ಜಲಾತ್ಸ್ನೇಹೋ ಜ್ಯೋತಿಷಶ್ಚಕ್ಷುಷೀ ಸ್ಮೃತೇ ।
ಪ್ರಾಣಾಪಾನಾಶ್ರಯೋ ವಾಯುಃ ಕೋಷ್ಠಾಕಾಶಂ ಶರೀರಿಣಾಂ ॥ ೮ ॥

ವಲ್ಲಿಯೂ ಮನಸ್ಸುಳ್ಳವನೂ ಆದ ಮನುಷ್ಯನು ಪರಬ್ರಹ್ಮ ಸ್ವರೂಪವನ್ನು ಹೇಗೆ ತಿಳಿಯುವನು? ತಪಸ್ಸು, ಬ್ರಹ್ಮಚರ್ಯ, ವೈರಾಗ್ಯ, ಸೂಕ್ಷ್ಮಬುದ್ಧಿ, ಜ್ಞಾನ, ಯೋಗ, ಇವುಗಳಿಂದ ತಿಳಿಯಬಹುದೇ? ನಮಗೆ ಹೇಳು. ಮನಸ್ಸಿಗೂ ಇಂದ್ರಿಯಗಳಿಗೂ ಏಕಾಗ್ರತೆಯು ಯಾವ ಉಪಾಯದಿಂದ ಉಂಟಾಗುವದು? ಅದನ್ನು ನೀನು ನಮಗೆ ಹೇಳಬೇಕು ಎನ್ನಲು,

೬–೧೦. ವ್ಯಾಸನು ಹೇಳಿದನು :—ಜ್ಞಾನ, ತಪಸ್ಸು, ಇಂದ್ರಿಯ ನಿಗ್ರಹ, ಸನ್ಯಾಸ ಇವುಗಳಿಂದ ಹೊರತು ಬೇರೊಂದರಿಂದ ಯಾವ ಮನುಷ್ಯನೂ ಸಿದ್ಧಿಯನ್ನು ಸಂಪಾದಿಸುವದಿಲ್ಲ. ಪ್ರಾಣಿಗಳ ದೇಹದಲ್ಲಿ ಬ್ರಹ್ಮನ ಪ್ರಥಮ ಸೃಷ್ಟಿಯಾದ ಪಂಚಮಹಾಭೂತಗಳೇ ವಿಶೇಷವಾಗಿ ಇಡಲ್ಪಟ್ಟಿರುವುವು. ಭೂಮಿಯ ಅಂಶದಿಂದ ಶರೀರವು ಆಗಿರುವದು. ನೀರಿನ ಅಂಶವೇ ಅವಯವಗಳ ಸಂಬಂಧವು. ತೇಜಸ್ಸೇ ಕಣ್ಣುಗಳು. ಪ್ರಾಣಾಪಾನಾದಿಕಾರ್ಯಗಳೇ ವಾಯುವು. ಜಠರ, ಕರುಳು ಮುಂತಾದ ನಾಳಗಳೇ ಆಕಾಶವು. ನಡಿಗೆಯಲ್ಲಿ

ಕ್ರಾಂತೌ ವಿಷ್ಣುರ್ಬಲೇ ಶಕ್ರಃ ಕೋಷ್ಠೇಽಗ್ನಿರ್ಭೋಕ್ತುಮಿಚ್ಛತಿ ।
ಕರ್ಣಯೋಃ ಪ್ರದಿಶಃ ಶ್ರೋತ್ರೇ ಜಿಹ್ವಾಯಾಂ ವಾಕ್ಸರಸ್ವತೀ ॥ ೯ ॥

ಕರ್ಣೌ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಂಚಮೀ ।
ದಶ ತಾನೀಂದ್ರಿಯೋಕ್ತಾನಿ ದ್ವಾರಾಣ್ಯಾಹಾರಸಿದ್ಧಯೇ ॥ ೧೦ ॥

ಶಬ್ದಸ್ಪರ್ಶೌ ತಥಾ ರೂಪಂ ರಸಂ ಗಂಧಂ ಚ ಪಂಚಮಂ ।
ಇಂದ್ರಿಯಾರ್ಥಾನ್ಪೃಥಗ್ವಿದ್ಯಾದಿಂದ್ರಿಯೇಭ್ಯಸ್ತು ನಿತ್ಯದಾ ॥ ೧೧ ॥

ಇಂದ್ರಿಯಾಣಿ ಮನೋ ಯುಙ್ಕ್ತೇ ಅವಶ್ಯಾನಿವ ರಾಜಿನಃ ।
ಮನಶ್ಚಾಪಿ ಸದಾ ಯುಙ್ಕ್ತೇ ಭೂತಾತ್ಮಾ ಹೃದಯಾಶ್ರಿತಃ ॥ ೧೨ ॥

ಇಂದ್ರಿಯಾಣಾಂ ತಥೈವೈಷಾಂ ಸರ್ವೇಷಾಮೀಶ್ವರಂ ಮನಃ ।
ನಿಯಮೇ ಚ ವಿಸರ್ಗೇ ಚ ಭೂತಾತ್ಮಾ ಮನಸಸ್ತಥಾ ॥ ೧೩ ॥

ವಿಷ್ಣುವೂ, ಬಲದಲ್ಲಿ ಇಂದ್ರನೂ, ನಾಳಗಳಲ್ಲಿ ಅಗ್ನಿಯೂ, ನೆಲೆಯಾಗಿದ್ದು ಕೊಂಡು ವಿಷಯಾನುಭವವನ್ನು ಮಾಡುವರು. ಕಿವಿಗಳಲ್ಲಿ ಶ್ರವಣೇಂದ್ರಿಯವೂ, ದಿಗ್ದೇವತೆಯೂ, ನಾಲಿಗೆಯಲ್ಲಿ ವಾಗಿಂದ್ರಿಯವೂ ಸರಸ್ವತೀದೇವಿಯೂ ಇರುವರು. ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು, ಈ ಐದು ಜ್ಞಾನೇಂದ್ರಿಯಗಳೂ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಎಂಬ ಐದು ಕರ್ಮೇಂದ್ರಿಯಗಳೂ ಸೇರಿ ಹತ್ತು ಇಂದ್ರಿಯಗಳು ಶರೀರದ ಆಹಾರಸಿದ್ಧಿಗೆ ಮಾರ್ಗಗಳಾಗಿರುವುವು.

೧೧-೧೪. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೇ ಇಂದ್ರಿಯಾರ್ಥಗಳು. ಬೇರೆ ಬೇರೆ ಇಂದ್ರಿಯಗಳು ಇವುಗಳನ್ನು ಗ್ರಹಿಸುವುವು. ಮನಸ್ಸು ಹೃದಯಕಮಲವನ್ನಾಶ್ರಯಿಸಿ ಇಂದ್ರಿಯಗಳು ಕೆಲಸಮಾಡುವಂತೆ ಪ್ರೇರಿಸುವದು. ಈ ಇಂದ್ರಿಯಗಳಿಗೆಲ್ಲ ಮನಸ್ಸೇ ಅಧಿಪತಿಯು. ಮನಸ್ಸಿನ ಅಪ್ಪಣೆಯಿಂದಲೇ ಇಂದ್ರಿಯಗಳು ಕೆಲಸವನ್ನು ಮಾಡುತ್ತಲಿರುವುವು. ಇಂದ್ರಿಯ

ಇಂದ್ರಿಯಾಣೀಂದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಮನಃ ।
ಪ್ರಾಣಾಪಾನೌ ಚ ಜೀವಶ್ಚ ನಿತ್ಯಂ ದೇಹೇಷು ದೇಹಿನಾಂ ॥ ೧೪ ॥

ಆಶ್ರಯೋ ನಾಸ್ತಿ ಸತ್ತ್ವಸ್ಯ ಗುಣಶಬ್ದೋ ನ ಚೇತನಾಃ ।
ಸತ್ತ್ವಂ ಹಿ ತೇಜಃ ಸೃಜತಿ ನ ಗುಣಾನ್ವೈ ಕಥಂಚನ ॥ ೧೫ ॥

ಏವಂ ಸಪ್ತದಶಂ ದೇಹಂ ವೃತ್ತಂ ಷೋಡಶಭಿರ್ಗುಣೈಃ ।
ಮನೀಷೀ ಮನಸಾ ವಿಪ್ರಾಃ ಪಶ್ಯತ್ಯಾತ್ಮಾನಮಾತ್ಮನಿ ॥ ೧೬ ॥

ನ ಹ್ಯಯಂ ಚಕ್ಷುಷಾ ದೃಶ್ಯೋ ನ ಚ ಸರ್ವೈರಪೀಂದ್ರಿಯೈಃ ।
ಮನಸಾ ತು ಪ್ರದೀಪ್ತೇನ ಮಹಾನಾತ್ಮಾ ಪ್ರಕಾಶತೇ ॥ ೧೭ ॥

ಗಳಿಗೂ ಇಂದ್ರಿಯಾರ್ಥಗಳಿಗೂ ಮನಸ್ಸೇ ಸ್ವಾಭಾವಿಕವಾದ ಶಕ್ತಿಸ್ವರೂಪವಾಗಿರುವದು. ಪ್ರಾಣಿಗಳ ಶರೀರದಲ್ಲಿ ನಡೆಯುವ ಪ್ರಾಣಾಪಾನರೂಪವಾದ ವಾಯುವಿನ ವ್ಯಾಪಾರವೇ ಜೀವವೆನಿಸುವದು.

೧೫-೧೬. ಸತ್ವಾದಿಗುಣಗಳು ಚೇತನವಸ್ತುವಲ್ಲ. ಅವುಗಳಿಗೆ ಆಶ್ರಯವೂ ಇಲ್ಲ. ಸತ್ವವೆಂದರೆ ಬಲವು. ಈ ಬಲವನ್ನು ತೇಜಸ್ಸು ಸೃಷ್ಟಿಸುವದು. ಇದು ಗುಣಗಳನ್ನು ಹುಟ್ಟಿಸುವದಿಲ್ಲ. ಈರೀತಿಯಲ್ಲಿ ಜ್ಞಾನೇಂದ್ರಿಯ ಐದು, ಕರ್ಮೇಂದ್ರಿಯ ಐದು, ಇಂದ್ರಿಯಾರ್ಥ ಐದು, ಮನಸ್ಸು, ಜೀವ, ಈ ಹದಿನೇಳು ತತ್ವಗಳಿಂದ ದೇಹವಾಗಿರುವದು. ಈ ದೇಹವು ಹದಿನಾರು ಗುಣಗಳಿಂದ ಕೂಡಿರುವದು. ಎಲೈ ಋಷಿಗಳೇ, ಬುದ್ಧಿವಂತನಾದ ಜೀವನು ತನ್ನ ಮನಸ್ಸಿನಿಂದಲೇ ಆತ್ಮನನ್ನು ತಿಳಿವನು.

೧೭. ಈ ಆತ್ಮನನ್ನು ಕಣ್ಣಿನಿಂದ ನೋಡಲಾಗುವದಿಲ್ಲ. ಇವನು ಇತರ ಇಂದ್ರಿಯಗಳಿಗೂ ಗೋಚರನಲ್ಲ. ಆ ಪರಮಾತ್ಮನು ಪ್ರಕಾಶವಾದ ಮನಸ್ಸಿಗೆ ಮಾತ್ರ ಗೋಚರನಾಗುವನು.

ಅಶಬ್ದಸ್ಪರ್ಶರೂಪಂ ತಚ್ಚ ರಸಾಗಂಧಮವ್ಯಯಂ ।
ಅಶರೀರಂ ಶರೀರೇ ಸ್ವೇ ನಿರೀಕ್ಷೇತ ನಿರಿಂದ್ರಿಯಂ ॥ ೧೮ ॥

ಅವ್ಯಕ್ತಂ ಸರ್ವದೇಹೇಷು ಮರ್ತ್ಯೇಷು ಪರಮಾರ್ಚಿತಂ ।
ಯೋಽನುಪಶ್ಯತಿ ಸ ಪ್ರೇತ್ಯ ಕಲ್ಪತೇ ಬ್ರಹ್ಮಭೂಯತಃ ॥ ೧೯ ॥

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥ ೨೦ ॥

ಸ ಹಿ ಸರ್ವೇಷು ಭೂತೇಷು ಜಂಗಮೇಷು ಧ್ರುವೇಷು ಚ ।
ವಸತ್ಯೇಕೋ ಮಹಾನಾತ್ಮಾ ಯೇನ ಸರ್ವಮಿದಂ ತತಂ ॥ ೨೧ ॥

---

೧೮. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಇಂದ್ರಿಯ ವಿಷಯಗಳಿಲ್ಲದ, ಶರೀರವಿಲ್ಲದ, ನಾಶರಹಿತನೂ ಇಂದ್ರಿಯಗಳಿಲ್ಲದವನೂ ಆದ ಪರಮಾತ್ಮನನ್ನು ನಮ್ಮ ಶರೀರದಲ್ಲಿಯೇ ನೋಡಬೇಕು.

೧೯. ಸಮಸ್ತ ಮನುಷ್ಯ ಶರೀರದಲ್ಲಿಯೂ ವ್ಯಕ್ತನಾಗದೆ ಇರುತ್ತಿರುವ, ಪರಮಪೂಜ್ಯನಾದ ಪರಮಾತ್ಮನನ್ನು ಯಾವ ಜೀವನು ತಿಳಿಯುವನೋ ಅವನು ಪರಬ್ರಹ್ಮನೇ ಆಗುವನು.

೨೦. ಜ್ಞಾನಿಗಳಾದವರು ವಿದ್ಯೆಯಿಂದಲೂ ವಿನಯಾದಿ ಸದ್ಗುಣಗಳಿಂದಲೂ ಕೂಡಿದ ಬ್ರಾಹ್ಮಣನಲ್ಲಿಯೂ ಗೋವಿನಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಚಂಡಾಲನಲ್ಲಿಯೂ ಇರುವ ಆತ್ಮತತ್ವವನ್ನು ಸಮಾನಭಾವದಿಂದ ತಿಳಿಯುವರು.

೨೧. ಯಾವ ಪರಮಾತ್ಮನಿಂದ ಈ ಸಮಸ್ತ ಪ್ರಪಂಚವೂ ವ್ಯಾಪಿಸಿರುವುದೋ ಆ ಒಂದೇ ಮಹಾತತ್ವಸ್ವರೂಪನಾದ ಪರಮಾತ್ಮನು ಸಮಸ್ತ ಚರಾಚರ ಪ್ರಾಣಿಗಳಲ್ಲಿಯೂ ವಾಸವಾಗಿರುವನು.

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಯದಾ ಪಶ್ಯತಿ ಭೂತಾತ್ಮಾ ಬ್ರಹ್ಮ ಸಂಪದ್ಯತೇ ತದಾ ॥ ೨೨ ॥

ಯಾವಾನಾತ್ಮನಿ ವೇದಾತ್ಮಾ ತಾವಾನಾತ್ಮಾ ಪರಾತ್ಮನಿ ।
ಯ ಏವಂ ಸತತಂ ವೇದ ಸೋಽಮೃತತ್ವಾಯ ಕಲ್ಪತೇ ॥ ೨೩ ॥

ಸರ್ವಭೂತಾತ್ಮಭೂತಸ್ಯ ಸರ್ವಭೂತಹಿತಸ್ಯ ಚ ।
ದೇವಾಪಿ ಮಾರ್ಗೇ ಮುಹ್ಯಂತಿ ಅಪದಸ್ಯ ಪದೈಷಿಣಃ ॥ ೨೪ ॥

ಶಕುಂತಾನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಯಥಾ ಗತಿರ್ನ ದೃಶ್ಯೇತ ತಥಾ ಜ್ಞಾನವಿದಾಂ ಗತಿಃ ॥ ೨೫ ॥

---

೨೨. ಸಮಸ್ತ ಪ್ರಾಣಿಗಳಲ್ಲಿಯೂ ಆತ್ಮತತ್ವವು ಇರುವುದೆಂದೂ ಎಲ್ಲ ಪ್ರಾಣಿಗಳೂ ಆತ್ಮತತ್ವದಲ್ಲಿ ಇರುವುದೆಂದೂ ಯಾವಾಗ ಜೀವನು ತಿಳಿಯುವನೋ ಆಗ ಜೀವನು ಪರಬ್ರಹ್ಮಸ್ವರೂಪನಾಗುವನು.

೨೩. ಎಲ್ಲಿಯಪರ್ಯಂತವಾಗಿ ಮನಸ್ಸಿನಲ್ಲಿ ಆತ್ಮಸ್ವರೂಪವನ್ನು ಧ್ಯಾನಮಾಡುತ್ತಿರುವನೋ ಅಲ್ಲಿಯಪರ್ಯಂತವಾಗಿ ಆ ಮನಸ್ಸು ಆತ್ಮತತ್ವ ವಲ್ಲಿರುವದು. ಯಾವ ಜೀವನು ಯಾವಾಗಲೂ ತನ್ನ ಮನಸ್ಸನ್ನು ಆತ್ಮತತ್ವ ದಲ್ಲಿಯೇ ನೆಲಗೊಳಿಸುವನೋ ಆಗ ಅವನು ಮುಕ್ತನಾಗುವನು

೨೪-೨೫. ತನಗೆ ಒಂದು ನಿಯತವಾದ ಸ್ಥಾನವಿಲ್ಲದ, ಪರಬ್ರಹ್ಮಸ್ಥಿತಿ ಯನ್ನು ಬಯಸುವ ಸಮಸ್ತ ಪ್ರಾಣಿಗಳನ್ನೂ ತನ್ನಂತೆ ತಿಳಿದು ಅವುಗಳಿಗೆಲ್ಲ ಹಿತವನ್ನು ಬಯಸುವ ಜ್ಞಾನಿಯ ಮಾರ್ಗವನ್ನು ದೇವತೆಗಳೂ ಅರಿಯರು. ಆಕಾಶದಲ್ಲಿ ಸಂಚರಿಸುವ ಪಕ್ಷಿಗಳ ಮತ್ತು ನೀರಿನಲ್ಲಿ ಸಂಚರಿಸುವ ಮೀನುಗಳ ಮಾರ್ಗವನ್ನು ತಿಳಿಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಜ್ಞಾನಿಗಳ ಮಾರ್ಗ ವನ್ನು ತಿಳಿಯಲು ಸಾಧ್ಯವಾಗುವದಿಲ್ಲ.

ಕಾಲಃ ಪಚತಿ ಭೂತಾನಿ ಸರ್ವಾಣ್ಯೇವಾತ್ಮನಾತ್ಮನಿ ।
ಯಸ್ಮಿಂಸ್ತು ಪಚ್ಯತೇ ಕಾಲಸ್ತನ್ನ ವೇದೇಹ ಕಶ್ಚನ ॥ ೨೬ ॥

ನ ತದೂರ್ಧ್ವಂ ನ ತಿರ್ಯಕ್ಚ ನಾಧೋ ನ ಚ ಪುನಃ ಪುನಃ ।
ನ ಮಧ್ಯೇ ಪ್ರತಿಗೃಹ್ಣೀತೇ ನೈವ ಕಿಂಚಿನ್ನ ಕಶ್ಚನ ॥ ೨೭ ॥

ಸರ್ವೇ ತತ್ಸ್ಥಾ ಇಮೇ ಲೋಕಾ ಬಾಹ್ಯಮೇಷಾಂ ನ ಕಿಂಚನ ।
ಯದ್ಯಪ್ಯಗ್ರೇ ಸಮಾಗಚ್ಛೇದ್ಯಥಾ ಬಾಣೋ ಗುಣಚ್ಯುತಃ ॥ ೨೮ ॥

ನೈವಾಂತಂ ಕಾರಣಸ್ಯೇಯಾದ್ಯದ್ಯಪಿ ಸ್ಯಾನ್ಮನೋಜವಃ ।
ತಸ್ಮಾತ್ಸೂಕ್ಷ್ಮತರಂ ನಾಸ್ತಿ ನಾಸ್ತಿ ಸ್ಥೂಲತರಂ ತಥಾ ॥ ೨೯ ॥

ಸರ್ವತಃಪಾಣಿಪಾದಂ ತತ್ಸರ್ವತೋಕ್ಷಿಶಿರೋಮುಖಂ ।
ಸರ್ವತಃಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥ ೩೦ ॥

೨೬–೩೦. ಎಲ್ಲಾ ಪ್ರಾಣಿಗಳನ್ನೂ ಕಾಲವು ಕೊನೆಗಾಣಿಸುವದು. ಆ ಕಾಲವನ್ನು ಕೊನೆಗಾಣಿಸುವುದಾವುದೆಂಬುದನ್ನು ಯಾರೂ ತಿಳಿಯರು ಆ ವಸ್ತುವು ಮೇಲೆ, ಕೆಳಗೆ ಅಡ್ಡಲಾಗಿ ನಡುವೆ ಎಲ್ಲೆಲ್ಲಿ ಪುನಃ ಪುನಃ ಹುಡುಕಿದರೂ ಸಿಕ್ಕುವದಿಲ್ಲ. ಈ ಸಮಸ್ತ ಲೋಕಗಳೂ ಆ ವಸ್ತುವಿನಲ್ಲಿರುವದು. ಈ ಲೋಕಗಳ ಹೊರಗಡೆಯಲ್ಲಿ ಏನೂ ಇರುವದಿಲ್ಲ. ಧನುಸ್ಸಿನ ಹಗ್ಗದಿಂದ ಬಿಟ್ಟ ಬಾಣದಂತೆ ವೇಗವಾಗಿ ಇನ್ನೂ ಮುಂದೆ ಹೋದರೆ ಮನೋವೇಗದಿಂದ ಹೋದರೂ ಈ ಸಮಸ್ತ ಪ್ರಪಂಚಕ್ಕೂ ಕಾರಣವಾದ ವಸ್ತುವಿನ ಕೊನೆಯನ್ನು ಮುಟ್ಟಲಾರೆವು. ಆ ಕಾರಣವಸ್ತುವಿಗಿಂತ ಸೂಕ್ಷ್ಮವಾದುದಾಗಲಿ ಸ್ಥೂಲವಾದುದಾಗಲಿ ಇಲ್ಲ ಆ ವಸ್ತುವಿಗೆ ಎಲ್ಲ ಕಡೆಯಲ್ಲಿಯೂ ಕೈಕಾಲುಗಳೂ ಕಣ್ಣುಮುಖಗಳೂ ಕಿವಿಗಳೂ ಇರುವುವು. ಅದು ಈ ಸಮಸ್ತ ಲೋಕಗಳನ್ನೂ ಆವರಿಸಿರುವದು.

ತದೇವಾಣೋರಣುತರಂ ತನ್ಮಹದ್ಭ್ಯೋ ಮಹತ್ತರಂ ।
ತದಂತಃ ಸರ್ವಭೂತಾನಾಂ ಧ್ರುವಂ ತಿಷ್ಠನ್ನ ದೃಶ್ಯತೇ ॥ ೩೧ ॥

ಅಕ್ಷರಂ ಚ ಕ್ಷರಂ ಚೈವ ದ್ವೇಧಾ ಭಾವೋಽಯಮಾತ್ಮನಃ ।
ಕ್ಷರಃ ಸರ್ವೇಷು ಭೂತೇಷು ದಿವ್ಯಂ ತ್ವಮೃತಮಕ್ಷರಂ ॥ ೩೨ ॥

ನವದ್ವಾರಂ ಪುರಂ ಕೃತ್ವಾ ಹಂಸೋ ಹಿ ನಿಯತೋ ವಶೀ ।
ಈದೃಶಃ ಸರ್ವಭೂತಸ್ಯ ಸ್ಥಾವರಸ್ಯ ಚರಸ್ಯ ಚ ॥ ೩೩ ॥

ಹಾನೇನಾಭಿವಿಕಲ್ಪಾನಾಂ ನರಾಣಾಂ ಸಂಚಯೇನ ಚ ।
ಶರೀರಾಣಾಮಜಸ್ಯಾಹುರ್ಹಂಸತ್ವಂ ಪಾರದರ್ಶಿನಃ ॥ ೩೪ ॥

ಹಂಸೋಕ್ತಂ ಚ ಕ್ಷರಂ ಚೈವ ಕೂಟಸ್ಥಂ ಯತ್ತದಕ್ಷರಂ ।
ತದ್ವಿದ್ವಾನಕ್ಷರಂ ಪ್ರಾಪ್ಯ ಜಹಾತಿ ಪ್ರಾಣಜನ್ಮನಿ ॥ ೩೫ ॥

೩೧-೩೫. ಆ ಆತ್ಮತತ್ವವು ಸೂಕ್ಷ್ಮ ವಸ್ತುಗಳಿಗಿಂತ ಸೂಕ್ಷ್ಮವಾದುದು. ದೊಡ್ಡವಸ್ತುಗಳಿಗೆಲ್ಲಕ್ಕಿಂತ ದೊಡ್ಡದಾದುದು. ಅದು ಸಮಸ್ತ ಪ್ರಾಣಿಗಳೊಳಗೆ ಯಾವಾಗಲೂ ನೆಲಸಿದ್ದರೂ ಕಾಣದೆ ಇರುವದು. ಕ್ಷರ, ಅಕ್ಷರ ಎಂಬದಾಗಿ ಆತ್ಮಸ್ವರೂಪವು ಎರಡು ಬಗೆಯಾಗಿರುವದು. ಸಮಸ್ತ ಪ್ರಾಣಿಗಳಲ್ಲಿಯೂ ಇರುವ ಆತ್ಮತತ್ವವು ಪ್ರಾಣಿಗಳ ನಾಶದಿಂದ ಕಾಣದೆ ಹೋಗುವದರಿಂದ ಕ್ಷರವೆನಿಸುವುದು. ನಾಶರಹಿತವಾದ ಶ್ರೇಷ್ಠವೂ ಸರ್ವವ್ಯಾಪಿಯೂ ಆದ ತತ್ವವೇ ಅಕ್ಷರವೆನಿಸುವದು. ಹಂಸನೆಂಬ ಹೆಸರುಳ್ಳ ಆತ್ಮನು ಸ್ವತಂತ್ರನಾಗಿ ಚರಾಚರ ಪ್ರಾಣಿಗಳೆಂಬ ಒಂಭತ್ತು ಬಾಗಿಲುಗಳುಳ್ಳ ಪಟ್ಟಣವನ್ನು ಮಾಡಿಕೊಂಡು ಅದರಲ್ಲಿ ವಾಸಮಾಡುತ್ತಿರುವನು. ನಾಶವಾಗುವದರಿಂದ ವಿಕಾರವಾಗತಕ್ಕ ಶರೀರವುಳ್ಳ ಮನುಷ್ಯರ ಸಮೂಹದಿಂದ ಹೊರಟುಹೋಗಿ ಉತ್ಪತ್ತಿಯಿಲ್ಲದ ಆತ್ಮನನ್ನು ಜ್ಞಾನಿಗಳು ಹಂಸನೆನ್ನುವರು. ಕ್ಷರಸ್ವರೂಪನಾದ ಹಂಸನನ್ನು ಕೂಟಸ್ಥನಾದ ಅಕ್ಷರನನ್ನೂ ತಿಳಿದ ವಿದ್ವಾಂಸರು ನಾಶರಹಿತವಾದ ಆತ್ಮಸ್ವರೂಪವನ್ನು ಪಡೆದು ಪ್ರಾಣಸ್ವರೂಪವನ್ನೂ ಪುನರ್ಜನ್ಮವನ್ನೂ ಕಳೆದುಕೊಳ್ಳುವರು.

॥ ವ್ಯಾಸ ಉವಾಚ ॥

ಭವತಾಂ ಪೃಚ್ಛತಾಂ ವಿಪ್ರಾ ಯಥಾವದಿಹ ತತ್ತ್ವತಃ ।
ಸಾಂಖ್ಯಂ ಜ್ಞಾನೇನ ಸಂಯುಕ್ತಂ ಯದೇತತ್ಕೀರ್ತಿತಂ ಮಯಾ ॥ ೩೬ ॥

ಯೋಗಕೃತ್ಯಂ ತು ಭೋ ವಿಪ್ರಾಃ ಕೀರ್ತಯಿಷ್ಯಾಮ್ಯತಃ ಪರಂ ।
ಏಕತ್ವಂ ಬುದ್ಧಿಮನಸೋರಿಂದ್ರಿಯಾಣಾಂ ಚ ಸರ್ವಶಃ ॥ ೩೭ ॥

ಆತ್ಮನೋ ವ್ಯಾಪಿನೋ ಜ್ಞಾನಂ ಜ್ಞಾನಮೇತದನುತ್ತಮಂ ।
ತದೇತದುಪಶಾಂತೇನ ದಾಂತೇನಾಧ್ಯಾತ್ಮಶೀಲಿನಾ ॥ ೩೮ ॥

ಆತ್ಮಾರಾಮೇಣ ಬುದ್ಧೇನ ಬೋದ್ಧವ್ಯಂ ಶುಚಿಕರ್ಮಣಾ ।
ಯೋಗದೋಷಾನ್ಸಮುಚ್ಛಿದ್ಯ ಪಂಚ ಯಾನ್ಕವಯೋ ವಿದುಃ ॥ ೩೯ ॥

ಕಾಮಂ ಕ್ರೋಧಂ ಚ ಲೋಭಂ ಚ ಭಯಂ ಸ್ವಪ್ನಂ ಚ ಪಂಚಮಂ ।
ಕ್ರೋಧಂ ಶಮೇನ ಜಯತಿ ಕಾಮಂ ಸಂಕಲ್ಪವರ್ಜನಾತ್ ॥ ೪೦ ॥

೩೬-೩೯. ಎಲೈ ಬ್ರಾಹ್ಮಣರೇ, ನಿಮ್ಮ ಪ್ರಶ್ನೆಗೆ ಉತ್ತರವಾಗಿ ಜ್ಞಾನದಿಂದ ಕೂಡಿದ ಸಾಂಖ್ಯಶಾಸ್ತ್ರತತ್ವವನ್ನು ನಾನು ಹೇಳಿದೆನು. ಇಲ್ಲಿಂದ ಮುಂದೆ ಯೋಗದ ಕಾರ್ಯವನ್ನು ಹೇಳುವೆನು. ಬುದ್ಧಿ, ಮನಸ್ಸು ಸಮಸ್ತ ಇಂದ್ರಿಯಗಳು ಇವುಗಳ ಏಕತ್ವಜ್ಞಾನವೇ ಆತ್ಮಸಂಬಂಧವಾದುದಾಗಿ ಶ್ರೇಷ್ಠವಾದ ಜ್ಞಾನವೆನಿಸುವದು. ಈ ಜ್ಞಾನವನ್ನು ಬಹಿರಿಂದ್ರಿಯ ನಿಗ್ರಹವುಳ್ಳವನೂ ಶಾಂತವಾದ ಮನಸ್ಸುಳ್ಳವನೂ ಆತ್ಮಸ್ವರೂಪವನ್ನು ತಿಳಿಯತಕ್ಕವನೂ ಪರಿಶುದ್ಧವಾದ ಕರ್ಮವನ್ನು ಮಾಡತಕ್ಕವನೂ ಬುದ್ಧಿವಂತನೂ ಆತ್ಮಜ್ಞಾನದಿಂದಲೇ ಸಂತೋಷಪಡತಕ್ಕವನೂ ಆದ ಮನುಷ್ಯನು ಐದು ಯೋಗದೋಷಗಳನ್ನು ನಾಶಮಾಡಿ ತಿಳಿಯಬೇಕೆಂದು ವಿದ್ವಾಂಸರು ಹೇಳುವರು

೪೦-೪೩. ಕಾಮ, ಕ್ರೋಧ, ಲೋಭ, ಭಯ ಸ್ವಪ್ನ ಎಂಬಿವೇ ಐದು ದೋಷಗಳು. ಕ್ರೋಧವನ್ನು ಶಾಂತಿಯಿಂದಲೂ, ಕಾಮವನ್ನು ಸಂಕಲ್ಪವನ್ನು ಬಿಡುವುದರಿಂದಲೂ, ಭಯವನ್ನು ಧೈರ್ಯದಿಂದಲೂ, ಎಚ್ಚರಿಕೆಯಿಂದಲೂ,

ಸತ್ತ್ವಸಂಸೇವನಾದ್ಧೀರೋ ನಿದ್ರಾಮುಚ್ಛೇತ್ತುಮರ್ಹತಿ ।
ಧೃತ್ಯಾ ಶಿಶ್ನೋದರಂ ರಕ್ಷೇತ್ಪಾಣಿಪಾದಂ ಚ ಚಕ್ಷುಷಾ ॥ ೪೧ ॥

ಚಕ್ಷುಃ ಶ್ರೋತ್ರಂ ಚ ಮನಸಾ ಮನೋ ವಾಚಂ ಚ ಕರ್ಮಣಾ ।
ಅಪ್ರಮಾದಾದ್ಭಯಂ ಜಹ್ಯಾದ್ದಂಭಂ ಪ್ರಾಜ್ಞೋಪಸೇವನಾತ್ ॥ ೪೨ ॥

ಏವಮೇತಾನ್ಯೋಗದೋಷಾನ್ ಜಯೇನ್ನಿತ್ಯಮತಂದ್ರಿತಃ ।
ಅಗ್ನೀಂಶ್ಚ ಬ್ರಾಹ್ಮಣಾಂಶ್ಚಾಥ ದೇವತಾಃ ಪ್ರಣಮೇತ್ಸದಾ ॥ ೪೩ ॥

ವರ್ಜಯೇದುದ್ಧತಾಂ ವಾಚಂ ಹಿಂಸಾಯುಕ್ತಾಂ ಮನೋನುಗಾಂ ।
ಬ್ರಹ್ಮತೇಜೋಮಯಂ ಶುಕ್ರಂ ಯಸ್ಯ ಸರ್ವಮಿದಂ ಜಗತ್ ॥ ೪೪ ॥

ಏತಸ್ಯ ಭೂತಭೂತಸ್ಯ ದೃಷ್ಟಂ ಸ್ಥಾವರಜಂಗಮಂ ।
ಧ್ಯಾನಮಧ್ಯಯನಂ ದಾನಂ ಸತ್ಯಂ ಹ್ರೀರಾರ್ಜವಂ ಕ್ಷಮಾ ॥ ೪೫ ॥

ಸ್ವಪ್ನವನ್ನು ಸಾತ್ವಿಕಾಹಾರಸೇವನೆಯಿಂದಲೂ ಜಯಿಸಬಹುದು. ಶಿಶ್ನೋದರಗಳನ್ನು ಮನಸ್ಸಿನ ಸ್ಥೈರ್ಯದಿಂದ ರಕ್ಷಿಸಬೇಕು. ಪಾಣಿಪಾದದೋಷಗಳನ್ನು ಕಣ್ಣಿನ ನೋಟದಿಂದಲೂ, ಕಣ್ಣು ಮತ್ತು ಕಿವಿಗಳ ದೋಷಗಳನ್ನು ಮನಸ್ಸಿನಿಂದಲೂ ಮನಸ್ಸು ಮತ್ತು ಮಾತುಗಳನ್ನು ಕೆಲಸದಿಂದಲೂ ಸರಿಪಡಿಸಿಕೊಳ್ಳಬೇಕು. ದಂಭವನ್ನು ಬುದ್ಧಿವಂತರನ್ನು ಸೇವಿಸುವದರಿಂದ ಬಿಡಬೇಕು. ಈ ರೀತಿಯಲ್ಲಿ ಭೋಗದೋಷಗಳನ್ನು ಪ್ರತಿದಿನವೂ ಎಚ್ಚರಿಕೆಯಿಂದ ಜಯಿಸುತ್ತಲಿರಬೇಕು. ಅಗ್ನಿಗೂ, ಬ್ರಾಹ್ಮಣರಿಗೂ ದೇವತೆಗಳಿಗೂ ಪ್ರತಿದಿನವೂ ನಮಸ್ಕಾರಮಾಡಬೇಕು. ಹಿಂಸಾಕರವೂ ಒರಟುತನವೂ ಉಳ್ಳ, ಮನಬಂದ ಮಾತುಗಳನ್ನಾಡುವ ಸ್ವಭಾವವನ್ನು ಬಿಡಬೇಕು.

೪೪–೪೬. ಬ್ರಹ್ಮನ ತೇಜಸ್ಸಿನಿಂದ ತುಂಬಿದ ಶುಕ್ರವೇ ಈ ಸಮಸ್ತ ಜಗತ್ತಾಗಿ ಪಂಚಭೂತಸ್ವರೂಪವಾಗಿ ಚರಾಚರ ಪ್ರಾಣಿಗಳಿಂದ ಕೂಡಿರುವದು.

ಶೌಚಂ ಚೈವಾತ್ಮನಃ ಶುದ್ಧಿರಿಂದ್ರಿಯಾಣಾಂ ಚ ನಿಗ್ರಹಃ ।
ಏತೈರ್ವಿವರ್ಧತೇ ತೇಜಃ ಪಾಪ್ಮಾನಂ ಚಾಪಕರ್ಷತಿ ॥ ೪೬ ॥

ಸಮಃ ಸರ್ವೇಷು ಭೂತೇಷು ಲಭ್ಯಾಲಭ್ಯೇನ ವರ್ತಯನ್ ।
ಧೂತಪಾಪ್ಮಾ ತು ತೇಜಸ್ವೀ ಲಘ್ವಾಹಾರೋ ಜಿತೇಂದ್ರಿಯಃ ॥ ೪೭ ॥

ಕಾಮಕ್ರೋಧೌ ವಶೇ ಕೃತ್ವಾ ನಿಷೇವೇದ್ಬ್ರಹ್ಮಣಃ ಪದಂ ।
ಮನಸಶ್ಚೇಂದ್ರಿಯಾಣಾಂ ಚ ಕೃತ್ವೈಕಾಗ್ರ್ಯಂ ಸಮಾಹಿತಃ ॥ ೪೮ ॥

ಪೂರ್ವರಾತ್ರೇ ಪರಾರ್ಧೇ ಚ ಧಾರಯೇನ್ಮನ ಆತ್ಮನಃ ।
ಜಂತೋಃ ಪಂಚೇಂದ್ರಿಯಸ್ಯಾಸ್ಯ ಯದ್ಯೇಕಂ ಕ್ಲಿನ್ನಮಿಂದ್ರಿಯಂ ॥ ೪೯ ॥

ತತೋಽಸ್ಯ ಸ್ರವತಿ ಪ್ರಜ್ಞಾ ಗಿರೇಃ ಪಾದಾದಿವೋದಕಂ ।
ಮನಸಃ ಪೂರ್ವಮಾದದ್ಯಾತ್ಕೂರ್ಮಾಣಾಮಿವ ಮತ್ಸ್ಯಹಾ ॥ ೫೦ ॥

ಧ್ಯಾನ, ವೇದಾಧ್ಯಯನ, ದಾನ, ಸತ್ಯ, ನಾಚಿಕೆ, ಸರಳತೆ, ಸಹನೆ, ಮನಸ್ಸಿನ ಶುಚಿತ್ವ, ಇಂದ್ರಿಯನಿಗ್ರಹ ಇವುಗಳಿಂದ ತೇಜಸ್ಸು ಹೆಚ್ಚುವದು. ಪಾಪಗಳು ನಾಶವಾಗುವವು.

೪೭-೫೦. ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ಸಮಾನಭಾವದಿಂದಿರುತ್ತ ತನಗೆ ದೊರೆತಷ್ಟರಲ್ಲಿ ತೃಪ್ತನಾಗಿ ಪಾಪಗಳನ್ನು ಕಳೆದುಕೊಂಡು ತೇಜಸ್ಸನ್ನು ಹೊಂದಿದವನಾಗಿ ಲಘುವಾದ ಆಹಾರವನ್ನು ಮಾಡುತ್ತಾ ಇಂದ್ರಿಯಗಳನ್ನು ಜಯಿಸಿ ಕಾಮಕ್ರೋಧಗಳನ್ನು ತನ್ನಧೀನದಲ್ಲಿಟ್ಟುಕೊಂಡು ಪರಬ್ರಹ್ಮನ ಪದವಿಯನ್ನು ಅನುಭವಿಸಬೇಕು. ಮನಸ್ಸನ್ನೂ ಇಂದ್ರಿಯಗಳನ್ನೂ ಒಂದೇ ವಿಷಯದಲ್ಲಿಟ್ಟು ಧ್ಯಾನನಿಷ್ಠನಾಗಿ ರಾತ್ರಿಯ ಮೊದಲನೆಯ ಯಾಮದಲ್ಲಿಯೂ, ಕಡೆಯ ಯಾಮದಲ್ಲಿಯೂ ಮನಸ್ಸನ್ನು ಆತ್ಮನಲ್ಲಿ ನೆಲಗೊಳಿಸಬೇಕು. ಜೀವನ ಪಂಚೇಂದ್ರಿಯಗಳಲ್ಲಿ ಒಂದು ಇಂದ್ರಿಯ ಅಧೀನವಾಗದಿದ್ದರೂ ಪರ್ವತದ ತಪ್ಪಲಿನಿಂದ ನೀರು ಸೋರಿ ಹರಿದುಹೋಗುವಂತೆ ಆ ಇಂದ್ರಿಯದ ಮಾರ್ಗದಿಂದ ಜ್ಞಾನವು ಸೋರಿ ನಾಶವಾಗಿ ಹೋಗುವದು. ಆದುದರಿಂದ ಮೀನು ಹಿಡಿಯುವವನು ಮೊದಲು ಆಮೆಯನ್ನು ಹಿಡಿಯುವಂತೆ, ಸಾಧಕನು ಮೊದಲು ಮನಸ್ಸನ್ನು ತನ್ನಧೀನ ಮಾಡಿಕೊಳ್ಳಬೇಕು.

ತತಃ ಶ್ರೋತ್ರಂ ತತಶ್ಚಕ್ಷುರ್ಜಿಹ್ವಾ ಘ್ರಾಣಂ ಚ ಯೋಗವಿತ್ ।
ತತ ಏತಾನಿ ಸಂಯಮ್ಯ ಮನಸಿ ಸ್ಥಾಪಯೇದ್ಧೃದಿ ॥ ೫೧ ॥

ತಥೈವಾಪೋಹ್ಯ ಸಂಕಲ್ಪಾನ್ಮನೋ ಹ್ಯಾತ್ಮನಿ ಧಾರಯೇತ್ ।
ಪಂಚೇಂದ್ರಿಯಾಣಿ ಮನಸಿ ಹೃದಿ ಸಂಸ್ಥಾಪಯೇದ್ಧೃದಿ ॥ ೫೨ ॥

ಯದ್ವೈತಾನ್ಯವತಿಷ್ಠಂತೇ ಮನಃಷಷ್ಠಾನಿ ಚಾತ್ಮನಿ ।
ಪ್ರಸೀದಂತಿ ಚ ಸಂಸ್ಥಾಯಾಂ ತದಾ ಬ್ರಹ್ಮ ಪ್ರಕಾಶತೇ ॥ ೫೩ ॥

ವಿಧೂಮ ಇವ ದೀಪ್ತಾರ್ಚಿರಾದಿತ್ಯ ಇವ ದೀಪ್ತಿಮಾನ್ ।
ವೈದ್ಯುತೋಽಗ್ನಿರಿವಾಕಾಶೇ ಪಶ್ಯಂತ್ಯಾತ್ಮಾನಮಾತ್ಮನಿ ॥ ೫೪ ॥

ಸರ್ವಂ ತತ್ರ ತು ಸರ್ವತ್ರ ವ್ಯಾಪಕತ್ವಾಚ್ಚ ದೃಶ್ಯತೇ ।
ತಂ ಪಶ್ಯಂತಿ ಮಹಾತ್ಮಾನೋ ಬ್ರಾಹ್ಮಣಾ ಯೇ ಮನೀಷಿಣಃ ॥ ೫೫ ॥

೫೧-೫೪. ಆಮೇಲೆ ಕಿವಿ, ಕಣ್ಣು, ನಾಲಿಗೆ, ಮೂಗು ಇವುಗಳನ್ನು ಸ್ವಾಧೀನಪಡಿಸಿಕೊಂಡು ಇವುಗಳೆಲ್ಲವನ್ನೂ ಮನಸ್ಸಿನಲ್ಲಿ ನೆಲೆಗೊಳಿಸಿ ಹಾಗೆಯೇ ಮನಸ್ಸಿನ ಸಂಕಲ್ಪಗಳನ್ನು ಬಿಟ್ಟು ಮನಸ್ಸನ್ನು ಆತ್ಮನಲ್ಲಿ ನೆಲೆಗೊಳಿಸಬೇಕು. ಪಂಚೇಂದ್ರಿಯಗಳನ್ನೂ ಮನಸ್ಸಿನಲ್ಲಿಯೂ, ಮನಸ್ಸನ್ನು ಹೃದಯದಲ್ಲಿಯೂ ನೆಲೆಗೊಳಿಸಿದರೆ ಈ ಮನಸ್ಸೂ ಸೇರಿ ಆರು ತತ್ವಗಳು ಆತ್ಮನಲ್ಲಿ ನೆಲಸಿದಂತಾಗುವದು. ಹೀಗಾದರೆ ಮನಸ್ಸು ಪರಿಶುದ್ಧವಾಗಿ ಮನಸ್ಸಿನಲ್ಲಿ ಪರಬ್ರಹ್ಮತತ್ವವು ಪ್ರಕಾಶಿಸುವದು. ಹೊಗೆಯಿಲ್ಲದೆ ಉರಿಯುತ್ತಿರುವ ಬೆಂಕಿಯಂತೆಯೂ ಪ್ರಕಾಶಿಸುತ್ತಿರುವ ಸೂರ್ಯನಂತೆಯೂ ಆಕಾಶದಲ್ಲಿ ಕಾಣುವ ಮಿಂಚಿನಂತೆಯೂ ಮನಸ್ಸಿನಲ್ಲಿ ಆತ್ಮನ ಪ್ರಕಾಶವುಂಟಾಗುವುದು.

೫೫-೫೭. ಆ ಆತ್ಮತತ್ವವು ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವದರಿಂದ ಅದರಲ್ಲಿ ಸಮಸ್ತ ಪ್ರಪಂಚವೂ ಕಾಣಿಸುವದು. ಸೂಕ್ಷ್ಮಬುದ್ಧಿಯುಳ್ಳ ಬ್ರಹ್ಮನಿಷ್ಠರಾದ ಮಹಾತ್ಮರು ಅದನ್ನು ನೋಡುವರು. ವಿಶೇಷವಾದ ತಿಳುವಳಿಕೆ

ಧೃತಿಮಂತೋ ಮಹಾಪ್ರಾಜ್ಞಾಃ ಸರ್ವಭೂತಹಿತೇ ರತಾಃ ।
ಏವಂ ಪರಿಮಿತಂ ಕಾಲಮಾಚರನ್ಸಂಶಿತವ್ರತಃ ॥ ೫೬ ॥

ಆಸೀನೋ ಹಿ ರಹಸ್ಯೇಕೋ ಗಚ್ಛೇದಕ್ಷರಸಾಮ್ಯತಾಂ ।
ಪ್ರಮೋಹೋ ಭ್ರಮ ಆವರ್ತೋ ಘ್ರಾಣಂ ಶ್ರವಣದರ್ಶನೇ ॥ ೫೭ ॥

ಅದ್ಭುತಾನಿ ರಸಃ ಸ್ಪರ್ಶಃ ಶೀತೋಷ್ಣಮಾರುತಾಕೃತಿಃ ।
ಪ್ರತಿಭಾನುಪಸರ್ಗಾಶ್ಚ ಪ್ರತಿಸಂಗೃಹ್ಯ ಯೋಗತಃ ॥ ೫೮ ॥

ತಾಂಸ್ತತ್ತ್ವವಿದನಾದೃತ್ಯ ಸಾಮ್ಯೇನೈವ ನಿವರ್ತಯೇತ್ ।
ಕುರ್ಯಾತ್ಪರಿಚಯಂ ಯೋಗೇ ತ್ರೈಲೋಕ್ಯೇ ನಿಯತೋ ಮುನಿಃ ॥ ೫೯ ॥

ಗಿರಿಶೃಂಗೇ ತಥಾ ಚೈತ್ಯೇ ವೃಕ್ಷಮೂಲೇಷು ಯೋಜಯೇತ್ ।
ಸಂನಿಯಮ್ಯೇಂದ್ರಿಯಗ್ರಾಮಂ ಕೋಷ್ಠೇ ಭಾಂಡಮನಾ ಇವ ॥ ೬೦ ॥

ಯುಳ್ಳವರೂ ಧೈರ್ಯಶಾಲಿಗಳೂ ಸಮಸ್ತ ಪ್ರಾಣಿಗಳಿಗೂ ಹಿತವನ್ನು ಮಾಡುವದರಲ್ಲಿ ಆಸಕ್ತರೂ ಆದ ಯೋಗಿಗಳು ಈರೀತಿಯಲ್ಲಿ ಗೊತ್ತಾದ ಕಾಲದವರೆಗೂ ನಿಯಮವ್ರತವನ್ನು ಆಚರಿಸುತ್ತ ಗೋಪ್ಯವಾಗಿ ಒಬ್ಬನೇ ಕುಳಿತುಕೊಂಡು ನಾಶರಹಿತವಾದ ಪರಬ್ರಹ್ಮಸಾಮ್ಯವನ್ನು ಹೊಂದುವರು.

೫೮-೫೯. ಯೋಗಿಯಾದವನು ಯೋಗಶಕ್ತಿಯಿಂದ ಅಜ್ಞಾನ, ಭ್ರಾಂತಿ ವಿಕ್ಷೇಪ ಇವುಗಳನ್ನುಂಟುಮಾಡುವ ಆಶ್ಚರ್ಯಕರವಾದ ಘ್ರಾಣ, ಶ್ರವಣ ದರ್ಶನ, ರಸ, ಸ್ಪರ್ಶ, ಶೀತ, ಉಷ್ಣ, ವಾಯುರೂಪವಾದ ಸಕಲ ಶಕ್ತಿಗಳಿಗೂ ಹೊಸ ವಿಷಯಗಳನ್ನು ತಿಳಿಯುವ ಮತ್ತು ತೊಂದರೆಗಳನ್ನು ಪರಿಹರಿಸುವ ಶಕ್ತಿಗಳನ್ನೂ ಪಡೆದು ತತ್ವಜ್ಞನಾಗಿ ಇವುಗಳನ್ನೆಲ್ಲ ಉದಾಸೀನ ಮಾಡಿ ಈ ಶಕ್ತಿಗಳನ್ನು ಸ್ವಾಭಾವಿಕವಾಗಿ ಬಿಟ್ಟು ದೃಢವಾದ ಮನಸ್ಸುಳ್ಳವನಾಗಿ ಮೌನದಿಂದ ಮೂರು ಲೋಕದಲ್ಲಿಯೂ ಯೋಗವಿಷಯದಲ್ಲಿ ಹೆಚ್ಚು ತಿಳುವಳಿಕೆಯನ್ನು ಪಡೆಯಬೇಕು.

೬೦-೬೪. ಯೋಗಿಯು ತನ್ನ ಶರೀರದ ಜಠರಾದಿ ನಾಳಗಳಲ್ಲಿ ಇವು ಪಾತ್ರೆಯಂತೆ ಅಚೇತನವಾಗಿರತಕ್ಕವುಗಳು ಎಂಬ ಬುದ್ಧಿಯಿಂದ ಬೆಟ್ಟದ ಶಿಖರ

ಏಕಾಗ್ರಂ ಚಿಂತಯೇನ್ನಿತ್ಯಂ ಯೋಗಾನ್ಯೋದ್ವಿಜತೇ ಮನಃ ।
ಯೇನೋಪಾಯೇನ ಶಕ್ಯೇತ ನಿಯಂತುಂ ಚಂಚಲಂ ಮನಃ ॥ ೬೧ ॥

ತತ್ರ ಯುಕ್ತೋ ನಿಷೇವೇತ ನ ಚೈವ ವಿಚಲೇತ್ತತಃ ।
ಶೂನ್ಯಾಗಾರಾಣಿ ಚೈಕಾಗ್ರೋ ನಿವಾಸಾರ್ಥಮುಪಕ್ರಮೇತ್ ॥ ೬೨ ॥

ನಾತಿವ್ರಜೇತ್ಪರಂ ವಾಚಾ ಕರ್ಮಣಾ ಮನಸಾಪಿ ವಾ ।
ಉಪೇಕ್ಷಕೋ ಯತಾಹಾರೋ ಲಬ್ಧಾಲಬ್ಧಸಮೋ ಭವೇತ್ ॥ ೬೩ ॥

ಯಶ್ಚೈನಮಭಿನಂದೇತ ಯಶ್ಚೈನಮಭಿವಾದಯೇತ್ ।
ಸಮಸ್ತಯೋಶ್ಚಾಪ್ಯುಭಯೋರ್ನಾಭಿಧ್ಯಾಯೇಚ್ಛುಭಾಶುಭಂ ॥ ೬೪ ॥

ದಲ್ಲಿಯೂ, ದೇವಾಲಯದಲ್ಲಿಯೂ, ಮರದ ಬುಡದಲ್ಲಿಯೂ ಕುಳಿತು ಯೋಗಾಭ್ಯಾಸವನ್ನು ಮಾಡಬೇಕು. ಈ ಯೋಗಾಭ್ಯಾಸದಿಂದ ಮನಸ್ಸು ಬೇಸರವನ್ನು ಹೊಂದದೆ ಚಂಚಲವಾದ ಈ ಮನಸ್ಸು ಯಾವ ಉಪಾಯದಿಂದ ಏಕಾಗ್ರವಾಗಿ ಅಧೀನವಾಗುವುದೋ ಅದಕ್ಕೆ ತಕ್ಕಂತೆ ಪ್ರತಿದಿನವೂ ಏಕಾಗ್ರತೆಯನ್ನು ಅಭ್ಯಾಸಮಾಡುತ್ತಿರಬೇಕು. ಇದಕ್ಕಾಗಿ ಯೋಗಿಯು ತನ್ನ ವಾಸಕ್ಕಾಗಿ ಯಾರೂ ಇಲ್ಲದ ಮನೆಯನ್ನು ಗೊತ್ತುಮಾಡಿಕೊಂಡು ಅಲ್ಲಿಯೇ ಅಭ್ಯಾಸಮಾಡುತ್ತಾ ಅಲ್ಲಿಂದ ಚಲಿಸದೆ ಇರಬೇಕು. ಯೋಗಿಯು ಅತಿಯಾಗಿ ಕೆಲಸಮಾಡಬಾರದು ಮಾತನಾಡಬಾರದು ಯೋಚಿಸಲೂ ಬಾರದು. ಈ ಮೂರರ ವಿಷಯದಲ್ಲಿಯೂ ಉಪೇಕ್ಷೆಯಿಂದಿರುತ್ತಾ ನಿಯತವಾಗಿ ಆಹಾರವನ್ನು ಸೇವಿಸುತ್ತಾ ತನಗೆ ದೊರೆತಷ್ಟು ಪದಾರ್ಥಗಳಿಂದ ತೃಪ್ತನಾಗಿ ಸಮಬುದ್ಧಿಯಿಂದ ಇರಬೇಕು. ಯಾರಾದರೂ ತನ್ನನ್ನು ಹೊಗಳಿದರೂ ತನಗೆ ನಮಸ್ಕಾರಮಾಡಿದರೂ ಅಥವಾ ವಿರುದ್ಧವಾಗಿ ಮಾತನಾಡಿದರೂ ಆ ಇಬ್ಬರ ವಿಷಯದಲ್ಲಿಯೂ ಸಮಾನವಾದ ಬುದ್ಧಿಯಿಂದ ಇದ್ದು ಶುಭಾಶುಭಗಳನ್ನು ಮನಸ್ಸಿಗೆ ತಾರದೆ ಇರಬೇಕು.

ನ ಪ್ರಹೃಷ್ಯೇತ ಲಾಭೇಷು ನಾಲಾಭೇಷು ಚ ಚಿಂತಯೇತ್ ।
ಸಮಃ ಸರ್ವೇಷು ಭೂತೇಷು ಸಧರ್ಮಾ ಮಾತರಿಶ್ವನಃ ॥ ೬೫ ॥

ಏವಂ ಸ್ವಸ್ಥಾತ್ಮನಃ ಸಾಧೋಃ ಸರ್ವತ್ರ ಸಮದರ್ಶಿನಃ ।
ಷಣ್ಮಾಸಾನ್ನಿತ್ಯಯುಕ್ತಸ್ಯ ಶಬ್ದಬ್ರಹ್ಮಾಭಿವರ್ತತೇ ॥ ೬೬ ॥

ವೇದನಾರ್ತಾನ್ಪರಾನ್ದೃಷ್ಟ್ವಾ ಸಮಲೋಷ್ಟಾಶ್ಮಕಾಂಚನಃ ।
ಏವಂ ತು ನಿರತೋ ಮಾರ್ಗಂ ವಿರಮೇನ್ನ ವಿಮೋಹಿತಃ ॥ ೬೭ ॥

ಅಪಿ ವರ್ಣಾವಕೃಷ್ಟಸ್ತು ನಾರೀ ವಾ ಧರ್ಮಕಾಂಕ್ಷಿಣೀ ।
ತಾವಪ್ಯೇತೇನ ಮಾರ್ಗೇಣ ಗಚ್ಛೇತಾಂ ಪರಮಾಂ ಗತಿಂ ॥ ೬೮ ॥

೬೫-೬೮. ಯೋಗಿಯು ಸಮಸ್ತ ಪ್ರಾಣಿಗಳ ಶರೀರದಲ್ಲಿಯೂ ಸಂಚರಿಸುವ ವಾಯುವಿನಂತೆ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮಬುದ್ಧಿಯಿಂದಿರುತ್ತ ಲಾಭಾಲಾಭಗಳ ವಿಷಯದಲ್ಲಿ ಸಂತೋಷದುಃಖಗಳನ್ನು ಹೊಂದದೆ ಇರಬೇಕು. ಈರೀತಿಯಲ್ಲಿ ಸರ್ವತ್ರಸಮಾನ ಬುದ್ಧಿಯುಳ್ಳ ಶಾಂತಚಿತ್ತನಾದ ಸಾಧುವು ಆರು ತಿಂಗಳವರೆಗೆ ಯೋಗಾಭ್ಯಾಸವನ್ನು ಮಾಡಿದರೆ ಅವನಿಗೆ ಪರಮಾಗ್ರೂಪವಾದ ಶಬ್ದಬ್ರಹ್ಮಜ್ಞಾನವುಂಟಾಗುವದು. ದುಃಖಪಡುತ್ತಿರುವ ಇತರರನ್ನು ನೋಡಿ ಅಜ್ಞಾನಿಯಾಗದೆ ಮಣ್ಣುಹೆಂಟೆ, ಕಲ್ಲು, ಚಿನ್ನ ಇವುಗಳಲ್ಲಿ ಸಮಾನಬುದ್ಧಿಯಿಂದಿರುತ್ತ ಅವರಿಗೆ ತನ್ನ ಶಕ್ತ್ಯನುಸಾರವಾಗಿ ಉಪಕಾರವನ್ನು ಮಾಡಿ ವಿಶ್ರಾಂತಿಯನ್ನು ಪಡೆಯಬೇಕು. ವರ್ಣದಲ್ಲಿ ನೀಚನಾದರೂ ಧರ್ಮಾಸಕ್ತಳಾದ ಸ್ತ್ರೀಯಾದರೂ ಅವರೂ ಈ ಯೋಗಮಾರ್ಗದಿಂದ ಉತ್ತಮವಾದ ಗತಿಯನ್ನು ಹೊಂದಬಹುದು.

ಅಜಂ ಪುರಾಣಮಜರಂ ಸನಾತನಂ
ಯಮಿಂದ್ರಿಯಾತಿಗಮಗೋಚರಂ ದ್ವಿಜಾಃ ।
ಅವೇಕ್ಷ್ಯ ಚೇಮಾಂ ಪರಮೇಷ್ಠಿಸಾಮ್ಯತಾಂ
ಪ್ರಯಾಂತ್ಯನಾವೃತ್ತಿಗತಿಂ ಮನೀಷಿಣಃ ॥ ೬೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ ಸಾಂಖ್ಯಯೋಗನಿರೂಪಣಂ ನಾಮ ಷಟ್‌ತ್ರಿಂಶದಧಿಕ-ದ್ವಿಶತತಮೋಽಧ್ಯಾಯಃ

---

೬೯. ಎಲೈ ಬ್ರಾಹ್ಮಣರೇ, ಕೇಳಿರಿ. ಬುದ್ಧಿವಂತರಾದವರು ಉತ್ಪತ್ತಿ ಇಲ್ಲದವನೂ ಅನಾದಿಯಾದವನೂ ಮುಪ್ಪಿಲ್ಲದವನೂ ಇಂದ್ರಿಯಗಳಿಗೆ ಗೋಚರನಾಗದವನೂ ಆದ ಯಾವ ಪರಬ್ರಹ್ಮನನ್ನು ಸಾಕ್ಷಾತ್ಕಾರಮಾಡಿಕೊಂಡು ಅವನ ಸಾಮ್ಯವನ್ನು ಪಡೆಯುವರೋ ಅವರು ಜ್ಞಾನಿಗಳಾಗಿ ಪುನರ್ಜನ್ಮವಿಲ್ಲದ ಮೋಕ್ಷವನ್ನು ಹೊಂದುವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಸಾಂಖ್ಯಯೋಗನಿರೂಪಣೆ ಎಂಬ ಇನ್ನೂರ ಮೂವತ್ತಾರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಯದ್ಯೇವಂ ವೇದವಚನಂ ಕುರು ಕರ್ಮ ತ್ಯಜೇತಿ ಚ ।
ಕಾಂ ದಿಶಂ ವಿದ್ಯಯಾ ಯಾಂತಿ ಕಾಂ ಚ ಗಚ್ಛಂತಿ ಕರ್ಮಣಾ ॥ ೧ ॥

ಎತದ್ವೈ ಶ್ರೋತುಮಿಚ್ಛಾಮಸ್ತದ್ಭವಾನ್ಪ್ರಬ್ರವೀತು ನಃ ।
ಎತದನ್ಯೋಽನ್ಯವೈರೂಪ್ಯಂ ವರ್ತತೇ ಪ್ರತಿಕೂಲತಃ ॥ ೨ ॥

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಿಶಾರ್ದೂಲಾ ಯತ್ಪೃಚ್ಛಧ್ವಂ ಸಮಾಸತಃ ।
ಕರ್ಮವಿದ್ಯಾಮಯೌ ಚೋಭೌ ವ್ಯಾಖ್ಯಾಸ್ಯಾಮಿ ಕ್ಷರಾಕ್ಷರೌ ॥ ೩ ॥

ಇನ್ನೂರಮೂವತ್ತೇಳನೆಯ ಅಧ್ಯಾಯವು

೧-೨. ಮುನಿಗಳು ಕೇಳುವರು—ವೇದದಲ್ಲಿ ಕರ್ಮವನ್ನು ಮಾಡಬೇಕೆಂದೂ ಬಿಡಬೇಕೆಂದೂ ಹೇಳಿರುವದು. ಈ ಜ್ಞಾನದಿಂದ ಯಾವ ಗತಿಯುಂಟಾಗುವದು? ಕರ್ಮದಿಂದ ಯಾವಗತಿಯುಂಟಾಗುವದು? ಇದನ್ನು ನಾವು ಕೇಳಬೇಕೆಂದು ಅಪೇಕ್ಷಿಸುತ್ತೇವೆ. ಕರ್ಮಜ್ಞಾನಗಳೆರಡೂ ಪರಸ್ಪರ ವಿರುದ್ಧವಾದುವುಗಳು. ಮಹಾಮಹಿಮನಾದ ನೀನು ನಮಗೆ ಇವುಗಳ ವಿಷಯವನ್ನು ಚೆನ್ನಾಗಿ ಹೇಳಬೇಕು ಎನ್ನಲು,

೩-೪. ವ್ಯಾಸನು ಹೇಳುವನು.—ಎಲೈ ಋಷಿಶ್ರೇಷ್ಠರೇ, ಕೇಳಿರಿ. ನೀವು ಸಂಗ್ರಹವಾಗಿ ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವೆನು. ಕ್ಷರಾಕ್ಷರ

ಯಾಂ ದಿಶಂ ವಿದ್ಯಯಾ ಯಾಂತಿ ಯಾಂ ಗಚ್ಛಂತಿ ಚ ಕರ್ಮಣಾ ।
ಶೃಣುಧ್ವಂ ಸಾಂಪ್ರತಂ ವಿಪ್ರಾ ಗಹನಂ ಹ್ಯೇತದುತ್ತರಂ ॥ ೪ ॥

ಅಸ್ತಿ ಧರ್ಮ ಇತಿ ಯುಕ್ತಂ ನಾಸ್ತಿ ತತ್ರೈವ ಯೋ ವದೇತ್ ।
ಯಕ್ಷಸ್ಯ ಸಾದೃಶ್ಯಮಿದಂ ಯಕ್ಷಸ್ಯೇದಂ ಭವೇದಥ ॥ ೫ ॥

ದ್ವಾವಿಮಾವಥ ಪಂಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ ।
ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೋ ವಾ ವಿಭಾಷಿತಃ ॥ ೬ ॥

ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾ ಚ ವಿಮುಚ್ಯತೇ ।
ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ ॥ ೭ ॥

ಗಳೆಂಬ ಹೆಸರುಳ್ಳ ಕರ್ಮಜ್ಞಾನಗಳೆರಡನ್ನೂ ವಿವರಿಸುವೆನು. ಎಲೈ ಬ್ರಾಹ್ಮಣರೇ, ಕರ್ಮದಿಂದ ಯಾವ ಗತಿಯನ್ನು ಹೊಂದುವರು? ಜ್ಞಾನದಿಂದ ಯಾವ ಗತಿಯನ್ನು ಹೊಂದುವರು? ಎಂಬುದು ಉತ್ತಮವಾದ ಮತ್ತು ತಿಳಿಯಲು ಕಷ್ಟವಾದ ವಿಷಯವಾಗಿರುವದು. ಈಗ ಅದನ್ನು ಹೇಳುವೆನು ಕೇಳಿರಿ.

೫-೬. ಕರ್ಮವು ಇದೆಯೆಂದೂ ಇಲ್ಲವೆಂದೂ ಕೆಲವರು ಹೇಳುವರು. ಈ ಮಾತು ಈ ಆಲದಮರದಲ್ಲಿ ಯಕ್ಷನಿರುವನು ಎಂಬ ಜನರ ಮಾತಿನಂತೆ ಸಂದೇಹಾಸ್ಪದವಾಗಿರುವದು. ಎಲ್ಲಿ ವೇದವಿಧಿಯು ಆಚರಣೆಯಲ್ಲಿರುವದೋ ಅಲ್ಲಿ ಪ್ರವೃತ್ತಿಲಕ್ಷಣಧರ್ಮವೆಂದೂ ನಿವೃತ್ತಿಲಕ್ಷಣಧರ್ಮವೆಂದೂ ಎರಡು ಮಾರ್ಗಗಳಿರುವುವು.

೭-೮. ಜೀವನು ಕರ್ಮಮಾಡುವುದರಿಂದ ಸಂಸಾರಬಂಧಕ್ಕೆ ಒಳಗಾಗುವನು. ಜ್ಞಾನಾಭ್ಯಾಸದಿಂದ ಮೋಕ್ಷವನ್ನು ಹೊಂದುವನು. ಆದುದರಿಂದಲೇ ಜ್ಞಾನಿಗಳಾದ ಯತಿಗಳು ಕರ್ಮವನ್ನು ಮಾಡುವದಿಲ್ಲ. ಕರ್ಮಮಾಡುವದರಿಂದ ಜೀವನು ಒಂದು ಜನ್ಮದ ಶರೀರವನ್ನು ಬಿಟ್ಟು ಮತ್ತೊಂದು ಜನ್ಮದಲ್ಲಿ

ಕರ್ಮಣಾ ಜಾಯತೇ ಪ್ರೇತ್ಯ ಮೂರ್ತಿಮಾನ್ಷೋಡಶಾತ್ಮಕಃ ।
ವಿದ್ಯಯಾ ಜಾಯತೇ ನಿತ್ಯಮವ್ಯಕ್ತಂ ಹ್ಯಕ್ಷರಾತ್ಮಕಂ ॥ ೮ ॥

ಕರ್ಮ ತ್ವೇಕೇ ಪ್ರಶಂಸಂತಿ ಸ್ವಲ್ಪಬುದ್ಧಿರತಾ ನರಾಃ ।
ತೇನ ತೇ ದೇಹಜಾಲೇನ ರಮಯಂತ ಉಪಾಸತೇ ॥ ೯ ॥

ಯೇ ತು ಬುದ್ಧಿಂ ಪರಾಂ ಪ್ರಾಪ್ತಾ ಧರ್ಮನೈಪುಣ್ಯದರ್ಶಿನಃ ।
ನ ತೇ ಕರ್ಮ ಪ್ರಶಂಸಂತಿ ಕೂಪಂ ನದ್ಯಾಂ ಪಿಬನ್ನಿವ ॥ ೧೦ ॥

ಕರ್ಮಣಾಂ ಫಲಮಾಪ್ನೋತಿ ಸುಖದುಃಖೇ ಭವಾಭವೌ ।
ವಿದ್ಯಯಾ ತದವಾಪ್ನೋತಿ ಯತ್ರ ಗತ್ವಾ ನ ಶೋಚತಿ ॥ ೧೧ ॥

ನ ಮ್ರಿಯತೇ ಯತ್ರ ಗತ್ವಾ ಯತ್ರ ಗತ್ವಾ ನ ಜಾಯತೇ ।
ನ ಜೀರ್ಯತೇ ಯತ್ರ ಗತ್ವಾ ಯತ್ರ ಗತ್ವಾ ನ ವರ್ಧತೇ ॥ ೧೨ ॥

ಹದಿನಾರು ಕಲೆಯಿಂದಕೂಡಿದ ಶರೀರವನ್ನು ಪಡೆದು ಜನಿಸುವನು. ಪ್ರತಿದಿನವೂ ಜ್ಞಾನಾಭ್ಯಾಸವನ್ನು ಮಾಡುವುದರಿಂದ ನಾಶರಹಿತವೂ ಅವ್ಯಕ್ತವೂ ಆದ ಪರಬ್ರಹ್ಮಸ್ವರೂಪನಾಗುವನು.

೯-೧೦. ಕೆಲವರು ಅಲ್ಪಬುದ್ಧಿಯುಳ್ಳ ಮನುಜರು ಕರ್ಮವನ್ನು ಶ್ಲಾಘಿಸುವರು. ಈ ಕಾರಣದಿಂದ ಅವರು ಅನೇಕ ಶರೀರಗಳನ್ನು ಪಡೆದು ವಿನೋದಪಡುತ್ತ ಕರ್ಮವನ್ನು ಮಾಡುತ್ತಿರುವರು. ಯಾರು ಸೂಕ್ಷ್ಮಬುದ್ಧಿಯನ್ನು ಪಡೆದಿರುವರೋ ಅವರು ನಿವೃತ್ತಿಧರ್ಮವೇ ಶ್ರೇಷ್ಠವೆಂದು ತಿಳಿದು, ನದಿಯ ನೀರನ್ನು ಕುಡಿಯುತ್ತಿರುವ ಮನುಷ್ಯನು, ಭಾವಿಯ ನೀರನ್ನು ಹೇಗೆ ಶ್ಲಾಘಿಸುವುದಿಲ್ಲವೋ ಹಾಗೆ ಕರ್ಮಮಾರ್ಗವನ್ನು ಹೊಗಳುವದಿಲ್ಲ.

೧೧-೧೪. ಕರ್ಮಮಾಡಿದವರು ಅದರ ಫಲವಾದ ಸುಖದುಃಖಗಳನ್ನೂ ಜನ್ಮಮರಣಗಳನ್ನೂ ಹೊಂದುವರು. ಜ್ಞಾನಾಭ್ಯಾಸವನ್ನು ಮಾಡಿದವರು ಯಾವ ಪದವಿಯನ್ನು ಪಡೆದರೆ ದುಃಖವುಂಟಾಗುವದಿಲ್ಲವೋ ಅಂತಹ ಸ್ಥಾನವನ್ನು ಹೊಂದುವರು. ಯಾವ ಸ್ಥಾನಕ್ಕೆ ಹೋದರೆ ಜನನವೂ, ಮರಣವೂ,

ಯತ್ರ ತದ್ಬ್ರಹ್ಮ ಪರಮಮವ್ಯಕ್ತಮಚಲಂ ಧ್ರುವಂ ।
ಅವ್ಯಾಕೃತಮನಾಯಾಮಮಮೃತಂ ಚಾಧಿಯೋಗವಿತ್ ॥ ೧೩ ॥

ದ್ವಂದ್ವೈರ್ನ ಯತ್ರ ಬಾಧ್ಯಂತೇ ಮಾನಸೇನ ಚ ಕರ್ಮಣಾ ।
ಸಮಾಃ ಸರ್ವತ್ರ ಮೈತ್ರಾಶ್ಚ ಸರ್ವಭೂತಹಿತೇ ರತಾಃ ॥ ೧೪ ॥

ವಿದ್ಯಾಮಯೋಽನ್ಯಃ ಪುರುಷೋ ದ್ವಿಜಾಃ ಕರ್ಮಮಯೋಽಪರಃ ।
ವಿಪ್ರಾಶ್ಚಂದ್ರಸಮಸ್ಪರ್ಶಃ ಸೂಕ್ಷ್ಮಯಾ ಕಲಯಾ ಸ್ಥಿತಃ ॥ ೧೫ ॥

ತದೇತದೃಷಿಣಾ ಪ್ರೋಕ್ತಂ ವಿಸ್ತರೇಣಾನುಗೀಯತೇ ।
ನ ವಕ್ತುಂ ಶಕ್ಯತೇ ದ್ರಷ್ಟುಂ ಚಕ್ರತಂತುಮಿವಾಂಬರೇ ॥ ೧೬ ॥

ಕಾರ್ಶ್ಯವೂ ಉಂಟಾಗುವದಿಲ್ಲವೋ, ಯಾವ ಸ್ಥಾನದಲ್ಲಿ ನಿರ್ಗುಣವೂ ಶಾಶ್ವತವೂ ನಿರ್ವಿಕಾರವೂ ಅಮೃತಸ್ವರೂಪವೂ ಆದ ಪರಬ್ರಹ್ಮವಸ್ತುವಿರುವುದೋ, ಎಲ್ಲಿ ದ್ವಂದ್ವದುಃಖಗಳ ಮತ್ತು ಮನೋವೃತ್ತಿಗಳ ಬಾಧೆಯಿಲ್ಲವೋ, ಸರ್ವಸಮಾನವಾದ ಸ್ನೇಹಭಾವವು ಸಮಸ್ತಪ್ರಾಣಿಗಳಿಗೂ ಹಿತವನ್ನು ಮಾಡಬೇಕೆಂಬ ಆಸಕ್ತಿಯೂ ಎಲ್ಲಿ ಉಂಟಾಗುವದೋ ಅಂತಹ ಸ್ಥಾನವನ್ನು ಜ್ಞಾನಿಗಳು ಪಡೆವರು.

೧೫-೧೬. ಜೀವರುಗಳಲ್ಲಿ ಕರ್ಮಮಯಜೀವ, ವಿದ್ಯಾಮಯಜೀವ ಎಂದು ಎರಡು ಬಗೆಯಾಗಿರುವರು. ವಿದ್ಯಾಮಯಜೀವರು ಸೂಕ್ಷ್ಮವಾದ ಕಾಂತಿಯಿಂದ ಕೂಡಿ ಚಂದ್ರನನ್ನು ಮುಟ್ಟಿದಂತೆ ತಣ್ಣಗಿರುವರು. ಈ ವಿಷಯವನ್ನು ವೇದದಲ್ಲಿ ಹೇಳಿರುವದು. ಅದನ್ನೇ ಅನುಸರಿಸಿ ನಾನು ವಿಸ್ತಾರವಾಗಿ ಹೇಳುವೆನು. ಆಕಾಶದಲ್ಲಿರುವ ಸೂಕ್ಷ್ಮವಾದ ಚಕ್ರಾಕಾರವಾದ ದಾರದಂತಿರುವ ಕಾಂತಿಯಿಂದಕೂಡಿದ ಚಂದ್ರನನ್ನು ನೋಡುವದಕ್ಕೂ ವರ್ಣಿಸಿ ಹೇಳುವದಕ್ಕೂ ಹೇಗೆ ಸಾಧ್ಯವಿಲ್ಲವೋ ಹಾಗೆ ವಿದ್ಯಾಮಯವಾದ ಜೀವನನ್ನು ವರ್ಣಿಸುವದಕ್ಕೂ ನೋಡುವದಕ್ಕೂ ಸಾಧ್ಯವಿಲ್ಲ.

ಏಕಾದಶವಿಕಾರಾತ್ಮಾ ಕಲಾಸಂಭಾರಸಂಭೃತಃ ।
ಮೂರ್ತಿಮಾನಿತಿ ತಂ ವಿದ್ಯಾದ್ವಿಪ್ರಾಃ ಕರ್ಮಗುಣಾತ್ಮಕಂ ॥ ೧೭ ॥

ದೇವೋ ಯಃ ಸಂಶ್ರಿತಸ್ತಸ್ಮಿನ್ಬುದ್ಧೀನ್ದುರಿವ ಪುಷ್ಕರೇ ।
ಕ್ಷೇತ್ರಜ್ಞಂ ತಂ ವಿಜಾನೀಯಾನ್ನಿತ್ಯಂ ಯೋಗಜಿತಾತ್ಮಕಂ ॥ ೧೮ ॥

ತಮೋ ರಜಶ್ಚ ಸತ್ತ್ವಂ ಚ ಜ್ಞೇಯಂ ಜೀವಗುಣಾತ್ಮಕಂ ।
ಜೀವಮಾತ್ಮಗುಣಂ ವಿದ್ಯಾದಾತ್ಮಾನಂ ಪರಮಾತ್ಮನಃ ॥ ೧೯ ॥

ಸಚೇತನಂ ಜೀವಗುಣಂ ವದಂತಿ
ಸ ಚೇಷ್ಟತೇ ಜೀವಗುಣಂ ಚ ಸರ್ವಂ ।
ತತಃ ಪರಂ ಕ್ಷೇತ್ರವಿದೋ ವದಂತಿ
ಪ್ರಕಲ್ಪಯಂತೋ ಭುವನಾನಿ ಸಪ್ತ ॥ ೨೦ ॥

೧೭-೧೮. ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನಸ್ಸು ಎಂಬ ಹನ್ನೊಂದು ಬಗೆಯ ವಿಕಾರಗಳಿಂದ ಕೂಡಿದ ಆತ್ಮಶಕ್ತಿರೂಪವಾದ ಕಲೆಯಿಂದ ತುಂಬಿದ ಕರ್ಮಗುಣಸ್ವರೂಪವಾದ ಜೀವನನ್ನು ಮೂರ್ತಿಮಂತ (ಶರೀರವುಳ್ಳವನು) ನೆಂದು ತಿಳಿಯಬೇಕು. ಸರೋವರದಲ್ಲಿ ಪ್ರತಿಫಲಿಸುವ ಚಂದ್ರನಂತೆ ಈ ಶರೀರವನ್ನು ಆಶ್ರಯಿಸಿ ಪ್ರತಿಬಿಂಬಸಮಾನವಾಗಿ ಬುದ್ಧಿರೂಪದಿಂದಿರುವ, ಪ್ರತಿದಿನವೂ ಯೋಗಾಭ್ಯಾಸದಿಂದ ಇಂದ್ರಿಯಾದಿಗಳನ್ನು ಜಯಿಸಿರುವ ಆ ಜೀವನನ್ನೇ ಕ್ಷೇತ್ರಜ್ಞನೆಂದು ತಿಳಿಯಬೇಕು.

೧೯-೨೦. ತಮಸ್ಸು, ರಜಸ್ಸು, ಸತ್ವ ಎಂಬ ಮೂರು ಜೀವನ ಗುಣಗಳೆಂದು ತಿಳಿಯಬೇಕು. ಜೀವನು ಆತ್ಮನ ಗುಣವು. ಆತ್ಮನು ಪರಮಾತ್ಮನ ಗುಣವು. ಜೀವನಗುಣವು ಚೈತನ್ಯಯುಕ್ತವಾದುದು ಆ ಜೀವನಗುಣಗಳೆಲ್ಲವೂ ಕೆಲಸವನ್ನು ಮಾಡುವುವು ಆದುದರಿಂದಲೇ ಜೀವನನ್ನು ಕ್ಷೇತ್ರಜ್ಞನೆಂದು ಹೇಳುವರು. ಈ ಕ್ಷೇತ್ರಜ್ಞರಾದ ಜೀವರುಗಳೇ ಸಪ್ತಲೋಕಗಳನ್ನು ಕಲ್ಪಿಸುವರು.

॥ ವ್ಯಾಸ ಉವಾಚ ॥

ಪ್ರಕೃತ್ಯಾಸ್ತು ವಿಕಾರಾ ಯೇ ಕ್ಷೇತ್ರಜ್ಞಾಸ್ತೇ ಪರಿಶ್ರುತಾಃ ।
ತೇ ಚೈನಂ ನ ಪ್ರಜಾನಂತಿ ನ ಜಾನಾತಿ ಸ ತಾನಪಿ ॥ ೨೧ ॥

ತೈಶ್ಚೈವ ಕುರುತೇ ಕಾರ್ಯಂ ಮನಃಷಷ್ಠೈರಿಹೇಂದ್ರಿಯೈಃ ।
ಸುದಾಂತೈರಿವ ಸಂಯಂತಾ ದೃಢಃ ಪರಮವಾಜಿಭಿಃ ॥ ೨೨ ॥

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಃ ಪರಮಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ಪರಃ ॥ ೨೩ ॥

ಮಹತಃ ಪರಮವ್ಯಕ್ತಮವ್ಯಕ್ತಾತ್ಪರತೋಽಮೃತಂ ।
ಅಮೃತಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಪರಮಾ ಗತಿಃ ॥ ೨೪ ॥

೨೧-೨೨. ವ್ಯಾಸನು ಮತ್ತೆ ಹೇಳಿದನು ;— ಪ್ರಕೃತಿಯ ವಿಕಾರಗಳೇ ಕ್ಷೇತ್ರಜ್ಞ ನಾದ ಜೀವನಾಗಿರುವದು. ಆ ಪ್ರಕೃತಿವಿಕಾರಗಳು ಜೀವನನ್ನರಿಯವು. ಜೀವನು ಪ್ರಕೃತಿವಿಕಾರಗಳನ್ನರಿಯನು. ಜೀವನು ಆರನೆಯದಾದ ಮನಸ್ಸಿ ನೊಡನೆ ಕೂಡಿ ಪಂಚೇಂದ್ರಿಯಗಳಿಂದ ಈ ಲೋಕದಲ್ಲಿ ಕೆಲಸಮಾಡುವನು. ಇದು ಬಲವಾದ ಸವಾರನು ಶ್ರೇಷ್ಠವಾದ ಕುದುರೆಗಳನ್ನು ತನ್ನಧೀನಮಾಡಿ ಕೊಂಡು ಅವುಗಳಿಂದ ಕೆಲಸಮಾಡಿಸುವಂತಿರುವದು.

೨೩-೨೪. ಇಂದ್ರಿಯಗಳು ವಿಷಯಾಧೀನಗಳಾದುದರಿಂದ ಆ ಇಂದ್ರಿಯ ಗಳಿಗಿಂತ ವಿಷಯಗಳು ಶ್ರೇಷ್ಠವೆನಿಸುವುವು. ವಿಷಯಗಳು ಮನಸ್ಸಿನ ಸಂಕಲ್ಪಾ ಧೀನವಾದುದರಿಂದ ಮನಸ್ಸು ಶ್ರೇಷ್ಠವೆನಿಸುವದು. ಸಂಕಲ್ಪರೂಪವಾದ ಮನಸ್ಸಿ ಗಿಂತಲೂ ನಿಶ್ಚಯಾತ್ಮಕವಾದ ಬುದ್ಧಿಯು ಶ್ರೇಷ್ಠವು. ಬುದ್ಧಿಯು ಜೀವನ ಅಧೀನವಾದುದರಿಂದ ಜೀವನು ಶ್ರೇಷ್ಠನು. ಜೀವನಿಗಿಂತ ಮಹತ್ತತ್ವವು ಶ್ರೇಷ್ಠವು. ಮಹತ್ತತ್ವಕ್ಕಿಂತಲೂ ಅವ್ಯಕ್ತವೆಂಬ ಪ್ರಕೃತಿಯು ಶ್ರೇಷ್ಠವು. ಪ್ರಕೃತಿ ಗಿಂತಲೂ ಅಮೃತಸ್ವರೂಪನಾದ ಪುರುಷನು ಶ್ರೇಷ್ಠನು. ಪುರುಷನಿಗಿಂತ ಶ್ರೇಷ್ಠವಾದ ವಸ್ತುವಿಲ್ಲ. ಆದುದರಿಂದ ಪುರುಷರೂಪವಾದ ಆತ್ಮತತ್ವವೇ ಕೊನೆಯದು. ಅದೇ ಮೋಕ್ಷಸ್ವರೂಪವು.

ಏವಂ ಸರ್ವೇಷು ಭೂತೇಷು ಗೂಢಾತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥ ೨೫ ॥

ಅಂತರಾತ್ಮನಿ ಸಂಲೀಯ ಮನಃಷಷ್ಠಾನಿ ಮೇಧಯಾ ।
ಇಂದ್ರಿಯೈರಿಂದ್ರಿಯಾರ್ಥಾಂಶ್ಚ ಬಹುಚಿತ್ತಮಚಿಂತಯನ್ ॥ ೨೬ ॥

ಧ್ಯಾನೇಽಪಿ ಪರಮಂ ಕೃತ್ವಾ ವಿದ್ಯಾಸಂಪಾದಿತಂ ಮನಃ ।
ಅನೀಶ್ವರಃ ಪ್ರಶಾಂತಾತ್ಮಾ ತತೋ ಗಚ್ಛೇತ್ಪರಂ ಪದಂ ॥ ೨೭ ॥

ಇಂದ್ರಿಯಾಣಾಂ ತು ಸರ್ವೇಷಾಂ ವಶ್ಯಾತ್ಮಾ ಚಲಿತಸ್ಮೃತಿಃ ।
ಆತ್ಮನಃ ಸಂಪ್ರದಾನೇನ ಮರ್ತ್ಯೋ ಮೃತ್ಯುಮುಪಾಶ್ನುತೇ ॥ ೨೮ ॥

ವಿಹತ್ಯ ಸರ್ವಸಂಕಲ್ಪಾನ್ಸತ್ತ್ವೇ ಚಿತ್ತಂ ನಿವೇಶಯೇತ್ ।
ಸತ್ತ್ವೇ ಚಿತ್ತಂ ಸಮಾವೇಶ್ಯ ತತಃ ಕಾಲಂಜರೋ ಭವೇತ್ ॥ ೨೯ ॥

೨೫-೨೭. ಈರೀತಿಯಲ್ಲಿ ಸಮಸ್ತಪ್ರಾಣಿಗಳಲ್ಲಿ ಆತ್ಮನು ಗೋಪ್ಯನಾಗಿರುವನು. ಆದುದರಿಂದ ಯಾರೂ ಅವನನ್ನು ನೋಡಲಾರರು. ಸೂಕ್ಷ್ಮಬುದ್ಧಿಯುಳ್ಳವರು ತಮ್ಮ ಸೂಕ್ಷ್ಮವಾದ ಬುದ್ಧಿಶಕ್ತಿಯಿಂದ ಆತ್ಮನನ್ನು ನೋಡುವರು. ಜೀವನು ಅಂತರಾತ್ಮನಲ್ಲಿ ಲೀನನಾಗಿ ಮನಸ್ಸೂಕೂಡಿ ಆರು ಇಂದ್ರಿಯಗಳಿಂದ ವಿಷಯಗಳನ್ನು ಬುದ್ಧಿಶಕ್ತಿಯಿಂದ ಗ್ರಹಿಸಿ ಅನೇಕ ಆಲೋಚನೆಗಳನ್ನು ಮಾಡುವನು. ತನಗೆ ಯಾರೂ ರಕ್ಷಕರಿಲ್ಲವೆಂದು ತಿಳಿದು ತನ್ನ ಮನಸ್ಸನ್ನು ಏಕಾಗ್ರವಾದ ಶ್ರೇಷ್ಠವಾದ ಧ್ಯಾನಯೋಗದಲ್ಲಿಟ್ಟು ಜ್ಞಾನವನ್ನು ಸಂಪಾದಿಸಿ ಬಳಿಕ ಶಾಂತವಾದ ಮನಸ್ಸುಳ್ಳವನಾಗಿ ಮುಕ್ತಿಯನ್ನು ಹೊಂದಬೇಕು.

೨೮-೩೧. ಜೀವನು ಇಂದ್ರಿಯಗಳಿಗೆ ಅಧೀನನಾಗಿ ಚಂಚಲಬುದ್ಧಿಯಿಂದ ತನ್ನ ಸ್ವಸ್ವರೂಪವನ್ನು ತಿಳಿಯದೆ ಮರಣಾಧೀನನಾಗಿ ಮೃತ್ಯುವನ್ನನುಭವಿಸುವನು. ಈ ಕಾರಣದಿಂದ ಜೀವನು ತನ್ನ ಮನಸ್ಸಿನ ಸಕಲ ಸಂಕಲ್ಪಗಳನ್ನೂ ನಾಶಮಾಡಿ ಸತ್ವಗುಣದಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಹಾಗೆ ನೆಲೆಗೊಳಿಸಿದಮೇಲೆ ಕಾಲವನ್ನು ನಿರೀಕ್ಷಿಸುತ್ತಿರಬೇಕು. ಚಿತ್ತವು ನಿರ್ಮಲ

ಚಿತ್ತಪ್ರಸಾದೇನ ಯತಿರ್ಜಹಾತೀಹ ಶುಭಾಶುಭಂ ।
ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮತ್ಯಂತಮಶ್ನುತೇ ॥ ೩೦ ॥

ಲಕ್ಷಣಂ ತು ಪ್ರಸಾದಸ್ಯ ಯಥಾ ಸ್ವಪ್ನೇ ಸುಖಂ ಭವೇತ್ ।
ನಿರ್ವಾತೇ ವಾ ಯಥಾ ದೀಪೋ ದೀಪ್ಯಮಾನೋ ನ ಕಂಪತೇ ॥ ೩೧ ॥

ಏವಂ ಪೂರ್ವಾಪರೇ ರಾತ್ರೇ ಯುಂಜನ್ನಾತ್ಮಾನಮಾತ್ಮನಾ ।
ಲಘ್ವಾಹಾರೋ ವಿಶುದ್ಧಾತ್ಮಾ ಪಶ್ಯತ್ಯಾತ್ಮಾನಮಾತ್ಮನಿ ॥ ೩೨ ॥

ರಹಸ್ಯಂ ಸರ್ವವೇದಾನಾಮನೈತಿಹ್ಯಮನಾಗಮಂ ।
ಆತ್ಮಪ್ರತ್ಯಾಯಕಂ ಶಾಸ್ತ್ರಮಿದಂ ಪುತ್ರಾನುಶಾಸನಂ ॥ ೩೩ ॥

ಧರ್ಮಾಖ್ಯಾನೇಷು ಸರ್ವೇಷು ಸತ್ಯಾಖ್ಯಾನೇಷು ಯದ್ವಸು ।
ದಶವರ್ಷಸಹಸ್ರಾಣಿ ನಿರ್ಮಥ್ಯಾಮೃತಮುದ್ಧೃತಂ ॥ ೩೪ ॥

ವಾದರೆ ಸನ್ಯಾಸಿಯಾದವನೂ ಈ ಲೋಕದಲ್ಲಿ ಶುಭಾಶುಭ ಫಲದಾಯಕವಾದ ಕರ್ಮಗಳನ್ನು ಬಿಟ್ಟುಬಿಡುವನು. ಹೀಗೆ ಪರಿಶುದ್ಧವಾದ ಮನಸ್ಸುಳ್ಳವನು ತನ್ನ ಜ್ಞಾನವನ್ನು ಆತ್ಮನಲ್ಲಿ ಸ್ಥಿರಗೊಳಿಸಿ ಅತ್ಯಂತ ಶ್ರೇಷ್ಠವಾದ ಸುಖವನ್ನು ಅನುಭವಿಸುವನು. ಸುಷುಪ್ತಿಯಲ್ಲಿ ಉಂಟಾಗುವಂತೆ ಮನಸ್ಸಿಗೆ ಸುಖವುಂಟಾಗುವದೇ ಶುದ್ಧವಾದ ಮನಸ್ಸಿನ ಸ್ವರೂಪವು. ಶುದ್ಧಮನಸ್ಸು ಗಾಳಿಯಿಲ್ಲದ ಕಡೆಯಲ್ಲಿ ಉರಿಯುತ್ತಿರುವ ದೀಪವು ಚಲಿಸದಿರುವಂತೆ ಚಲಿಸದೆ ಇರುವದು.

೩೨-೩೪. ಈರೀತಿಯಲ್ಲಿ ರಾತ್ರಿಯ ಮೊದಲನೆಯ ಮತ್ತು ಕಡೆಯ ಯಾಮಗಳಲ್ಲಿ ಮನಸ್ಸಿನಲ್ಲಿ ಆತ್ಮವಿಚಾರವನ್ನು ಮಾಡುತ್ತ ಲಘುವಾದ ಆಹಾರವುಳ್ಳವನಾಗಿ ಪರಿಶುದ್ಧವಾದ ಮನಸ್ಸಿನಿಂದ ಯೋಗಿಯಾದವನು ಆತ್ಮಸ್ವರೂಪವನ್ನು ಧ್ಯಾನಮಾಡುತ್ತಿರಬೇಕು. ಈ ಯೋಗಶಾಸ್ತ್ರವು ಸಮಸ್ತ ವೇದಗಳ ಗುಟ್ಟಾಗಿರುವದು. ಇದು ಇತಿಹಾಸರೂಪವಾದುದಲ್ಲ, ಆಗಮಶಾಸ್ತ್ರವಲ್ಲ. ಆತ್ಮಸ್ವರೂಪವನ್ನು ಅನುಭವಕ್ಕೆ ತಂದುಕೊಡುವ ಶಾಸ್ತ್ರವು. ಮಕ್ಕಳಿಗೆ ಇದನ್ನು ಅವಶ್ಯಕವಾಗಿ ಹೇಳಿಕೊಡಬೇಕು. ಧರ್ಮವನ್ನು ಪ್ರಕಟಪಡಿಸುವ ನಿಜವಾದ

ನವನೀತಂ ಯಥಾ ದಧ್ನಃ ಕಾಷ್ಠಾದಗ್ನಿರ್ಯಥೈವ ಚ ।
ತಥೈವ ವಿದುಷಾಂ ಜ್ಞಾನಂ ಮುಕ್ತಿಹೇತೋಃ ಸಮುದ್ಧೃತಂ ॥ ೩೫ ॥

ಸ್ನಾತಕಾನಾಮಿದಂ ಶಾಸ್ತ್ರಂ ವಾಚ್ಯಂ ಪುತ್ರಾನುಶಾಸನಂ ।
ತದಿದಂ ನಾಪ್ರಶಾಂತಾಯ ನಾದಾಂತಾಯ ತಪಸ್ವಿನೇ ॥ ೩೬ ॥

ನಾವೇದವಿದುಷೇ ವಾಚ್ಯಂ ತಥಾ ನಾನುಗತಾಯ ಚ ।
ನಾಸೂಯಕಾಯಾನೃಜವೇ ನ ಚಾನಿರ್ದಿಷ್ಟಕಾರಿಣೇ ॥ ೩೭ ॥

ನ ತರ್ಕಶಾಸ್ತ್ರದಗ್ಧಾಯ ತಥೈವ ಪಿಶುನಾಯ ಚ ।
ಶ್ಲಾಘಿನೇ ಶ್ಲಾಘನೀಯಾಯ ಪ್ರಶಾಂತಾಯ ತಪಸ್ವಿನೇ ॥ ೩೮ ॥

ಇದಂ ಪ್ರಿಯಾಯ ಪುತ್ರಾಯ ಶಿಷ್ಯಾಯಾನುಗತಾಯ ತು ।
ರಹಸ್ಯಧರ್ಮಂ ವಕ್ತವ್ಯಂ ನಾನ್ಯಸ್ಮೈ ತು ಕಥಂಚನ ॥ ೩೯ ॥

ಪುರಾಣದ ಕಥೆಗಳಿಂದ ಹತ್ತುಸಾವಿರ ವರ್ಷಗಳವರೆಗೆ ವಿಚಾರಮಾಡಿ ಅಮೃತ ಸ್ವರೂಪವಾದ ಈ ಶಾಸ್ತ್ರವನ್ನು ವಿದ್ವಾಂಸರಿಗೆ ಜ್ಞಾನಪ್ರಾಪ್ತಿಗಾಗಿಯೂ ಮೋಕ್ಷ ಪ್ರಾಪ್ತಿಗಾಗಿಯೂ ಮಥನಮಾಡಿ ಮೊಸರಿನಿಂದ ಬೆಣ್ಣೆಯನ್ನು ತೆಗೆಯುವಂತೆಯೂ ಕಟ್ಟಿಗೆಯಿಂದ ಅಗ್ನಿಯನ್ನು ತೆಗೆಯುವಂತೆಯೂ ತೆಗೆದಿರುವುದು.

೩೬-೪೦. ವಿದ್ಯಾಭ್ಯಾಸವನ್ನುಮಾಡಿ ಸ್ನಾತಕವ್ರತವನ್ನು ಮಾಡಿದ ಶಿಷ್ಯನಿಗೂ ಮಗನಿಗೂ ಈ ಶಾಸ್ತ್ರವನ್ನು ಉಪದೇಶಿಸಬೇಕು. ಇದನ್ನು ಶಾಂತ ನಲ್ಲದವನಿಗೂ ಇಂದ್ರಿಯನಿಗ್ರಹವಿಲ್ಲದವನಿಗೂ ತಪಸ್ಸನ್ನು ಮಾಡದವನಿಗೂ ವೇದವನ್ನು ಓದದವನಿಗೂ ತನ್ನ ಧರ್ಮವನ್ನು ಅನುಸರಿಸದವನಿಗೂ ಅಸೂಯೆ ಪಡುವವನಿಗೂ ವಕ್ರಬುದ್ಧಿಯುಳ್ಳವನಿಗೂ ಹೇಳಿದಂತೆ ಕೇಳದವನಿಗೂ ತರ್ಕ ಶಾಸ್ತ್ರವಾದದಲ್ಲಿ ಆಸಕ್ತನಾದವನಿಗೂ ಚಾಡಿಕೋರನಿಗೂ ಹೇಳಿಕೊಡಬಾರದು. ಶ್ಲಾಘ್ಯವಾದ ಗುಣಗಳುಳ್ಳವನೂ ಶಾಂತಚಿತ್ತನೂ ತಪಸ್ಸನ್ನು ಮಾಡಿದವನೂ ಆದ ಪ್ರೀತಿಪಾತ್ರನಾದ ಮಗನಿಗೂ ಶಿಷ್ಯನಿಗೂ ಈ ಗುಟ್ಟಾದ ಧರ್ಮವನ್ನು

ಯದಪ್ಯಸ್ಯ ಮಹೀಂ ದದ್ಯಾದ್ರತ್ನಪೂರ್ಣಾಮಿಮಾಂ ನರಃ ।
ಇದಮೇವ ತತಃ ಶ್ರೇಯ ಇತಿ ಮನ್ಯೇತ ತತ್ತ್ವವಿತ್ ॥ ೪೦ ॥

ಅತೋ ಗುಹ್ಯತರಾರ್ಥಂ ತದಧ್ಯಾತ್ಮಮತಿಮಾನುಷಂ ।
ಯತ್ತನ್ಮಹರ್ಷಿಭಿರ್ದೃಷ್ಟಂ ವೇದಾಂತೇಷು ಚ ಗೀಯತೇ ॥ ೪೧ ॥

ತದ್ಯುಷ್ಮಭ್ಯಂ ಪ್ರಯಚ್ಛಾಮಿ ಯನ್ಮಾಂ ಪೃಚ್ಛತ ಸತ್ತಮಾಃ ।
ಯನ್ಮೇ ಮನಸಿ ವರ್ತೇತ ಯಸ್ತು ವೋ ಹೃದಿ ಸಂಶಯಃ ।
ಶ್ರುತಂ ಭವದ್ಭಿಸ್ತತ್ಸರ್ವಂ ಕಿಮನ್ಯತ್ಕಥಯಾಮಿ ವಃ ॥ ೪೨ ॥

॥ ಮುನಯ ಊಚುಃ ॥

ಅಧ್ಯಾತ್ಮಂ ವಿಸ್ತರೇಣೇಹ ಪುನರೇವ ವದಸ್ವ ನಃ ।
ಯದಧ್ಯಾತ್ಮಂ ಯಥಾ ವಿದ್ಮೋ ಭಗವನ್ನೃಷಿಸತ್ತಮ ॥ ೪೩ ॥

ಹೇಳಬೇಕು. ಇತರರಿಗೆ ಹೇಳಲೇಬಾರದು. ತತ್ವವನ್ನು ತಿಳಿದವನು ರತ್ನಗಳಿಂದ ತುಂಬಿದ ಭೂಮಿಯನ್ನು ಕೊಟ್ಟರೂ ಈ ಯೋಗಶಾಸ್ತ್ರವನ್ನು ಹೇಳಿಕೊಟ್ಟದೇ ಅದಕ್ಕಿಂತಲೂ ಹೆಚ್ಚಿನ ಪ್ರಯೋಜನವೆಂದು ತಿಳಿಯುವನು.

೪೧-೪೨. ಆ ಕಾರಣದಿಂದ ಈ ಯೋಗಶಾಸ್ತ್ರವು ಮನುಷ್ಯನ ಶಕ್ತಿಗೆ ಮೀರಿದ ಆತ್ಮತತ್ವವನ್ನು ತಿಳಿಸತಕ್ಕ ಗೋಪ್ಯವಾದ ಶಾಸ್ತ್ರವಾಗಿರುವುದು. ಇದನ್ನು ಮಹರ್ಷಿಗಳು ತಿಳಿದಿರುವರು. ವೇದಾಂತವಾದ ಉಪನಿಷತ್ತುಗಳಲ್ಲಿ ಇದು ಹೇಳಿರುವದು. ನೀವು ನನ್ನನ್ನು ಪ್ರಶ್ನೆಮಾಡಿದುದರಿಂದ ನಿಮಗೆ ಅದನ್ನೇ ಹೇಳಿಕೊಡುವೆನು. ಎಲೈ ಋಷಿಶ್ರೇಷ್ಠರೇ, ನಿಮ್ಮ ಮನಸ್ಸಿನ ಸಂದೇಹ ಪರಿಹಾರಕ್ಕೆ ನನ್ನ ಮನಸ್ಸಿನಲ್ಲಿದ್ದ ವಿಷಯವನ್ನೆಲ್ಲಾ ಹೇಳಿರುವೆನು. ಅದನ್ನು ನೀವು ಕೇಳಿದಿರಾ! ನಿಮಗೆ ಮತ್ತೇನನ್ನು ಹೇಳಬೇಕು ? ಎಂದನು

೪೩. ಅದಕ್ಕೆ ಮುನಿಗಳು ಮಹಾಮಹಿಮನಾದ ಋಷಿಶ್ರೇಷ್ಠನೇ, ಅಧ್ಯಾತ್ಮಸ್ವರೂಪವನ್ನು ನಾವು ತಿಳಿದುಕೊಳ್ಳಬೇಕು. ವಿಸ್ತಾರವಾಗಿ ಅದರ ವಿಷಯವನ್ನು ನಮಗೆ ಹೇಳಬೇಕು ಎಂದು ಕೇಳಲು,

॥ ವ್ಯಾಸ ಉವಾಚ ॥

ಅಧ್ಯಾತ್ಮಂ ಯದಿದಂ ವಿಪ್ರಾಃ ಪುರುಷಸ್ಯೇಹ ಪಠ್ಯತೇ ।
ಯುಷ್ಮಭ್ಯಂ ಕಥಯಿಷ್ಯಾಮಿ ತಸ್ಯ ವ್ಯಾಖ್ಯಾವಧಾರ್ಯತಾಂ ॥ ೪೪ ॥

ಭೂಮಿರಾಪಸ್ತಥಾ ಜ್ಯೋತಿರ್ವಾಯುರಾಕಾಶಮೇವ ಚ ।
ಮಹಾಭೂತಾನಿ ಯಶ್ಚೈವ ಸರ್ವಭೂತೇಷು ಭೂತಕೃತ್ ॥ ೪೫ ॥

॥ ಮುನಯ ಊಚುಃ ॥

ಆಕಾರಂ ತು ಭವೇದ್ಯಸ್ಯ ಯಸ್ಮಿನ್ದೇಹಂ ನ ಪಶ್ಯತಿ ।
ಆಕಾಶಾದ್ಯಂ ಶರೀರೇಷು ಕಥಂ ತದುಪವರ್ಣಯೇತ್ ।
ಇಂದ್ರಿಯಾಣಾಂ ಗುಣಾಃ ಕೇಚಿತ್ಕಥಂ ತಾನುಪಲಕ್ಷಯೇತ್ ॥ ೪೬ ॥

॥ ವ್ಯಾಸ ಉವಾಚ ॥

ಏತದ್ವೋ ವರ್ಣಯಿಷ್ಯಾಮಿ ಯಥಾವದನುದರ್ಶನಂ ।
ಶೃಣುಧ್ವಂ ತದಿಹೈಕಾಗ್ರ್ಯಾ ಯಥಾತತ್ತ್ವಂ ಯಥಾ ಚ ತತ್ ॥ ೪೭ ॥

೪೪-೪೫. ವ್ಯಾಸನಿಂತೆಂದನು :—ಎಲೈ ಬ್ರಾಹ್ಮಣರೇ, ಅಧ್ಯಾತ್ಮ ಸ್ವರೂಪವನ್ನು ನಿಮಗೆ ಹೇಳುವೆನು. ಅದರ ವ್ಯಾಖ್ಯಾನವನ್ನು ಮನಸ್ಸಿಟ್ಟು ಕೇಳಿರಿ. ಭೂಮಿ, ನೀರು, ಬೆಳಕು, ವಾಯು, ಆಕಾಶ ಇವು ಪಂಚಮಹಾ ಭೂತಗಳು. ಈ ಸಮಸ್ತ ಭೂತಗಳಲ್ಲಿಯೂ ಇವುಗಳನ್ನು ಸೃಷ್ಟಿಮಾಡಿವ ಆತ್ಮನಿರುವನು.

೪೬. ಮುನಿಗಳು ಮತ್ತೆ ಕೇಳಿದರು ;—ಯಾವ ಪರಮಾತ್ಮನಿಗೆ ದೇಹವೇ ಇರುವದಿಲ್ಲವೋ ಅಂತಹ ಆತ್ಮನ ಆಕಾರವು ಹೇಗೆ ಇರುವದು? ಆತ್ಮನ ಶರೀರ ದಲ್ಲಿ ಆಕಾಶಾದಿ ಪಂಚಭೂತಗಳನ್ನು ಹೇಗೆ ವರ್ಣಿಸಲಾಗುವದು? ಇಂದ್ರಿಯ ಗಳ ಕೆಲವು ಗುಣಗಳು ಆಕಾಶಾದಿ ಪಂಚಭೂತಗಳನ್ನು ಹೇಗೆ ತಿಳಿಯುವುವು?

೪೭-೫೦. ವ್ಯಾಸನು ಹೇಳುವನು :—ಈ ವಿಷಯವನ್ನು ಶಾಸ್ತ್ರಾನುಸಾರ ವಾಗಿ ನಿಮಗೆ ವರ್ಣನೆಮಾಡಿ ಹೇಳುವೆನು. ಅದರ ತತ್ವವನ್ನು ಏಕಾಗ್ರಚಿತ್ತ ದಿಂದ ಕೇಳಿರಿ. ಶಬ್ದಗುಣವೂ ಶ್ರೋತ್ರೇಂದ್ರಿಯವೂ ಎಲ್ಲ ವಸ್ತುಗಳಿಗೂ ಅವ ಕಾಶವನ್ನು ಕಲ್ಪಿಸುವದೂ ಆಕಾಶದ ಲಕ್ಷಣವು. ಸ್ಪರ್ಶಗುಣವೂ ಪ್ರಾಣ

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಲಕ್ಷಣಂ ।
ಪ್ರಾಣಶ್ಚೇಷ್ಟಾ ತಥಾ ಸ್ಪರ್ಶ ಏತೇ ವಾಯುಗುಣಾಸ್ತ್ರಯಃ ॥ ೪೮ ॥

ರೂಪಂ ಚಕ್ಷುರ್ವಿಪಾಕಶ್ಚ ತ್ರಿಧಾ ಜ್ಯೋತಿರ್ವಿಧೀಯತೇ ।
ರಸೋಽಥ ರಸನಂ ಸ್ವೇದೋ ಗುಣಾಸ್ತ್ವೇತೇ ತ್ರಯೋಽಂಭಸಾಂ ॥ ೪೯ ॥

ಘ್ರೇಯಂ ಘ್ರಾಣಂ ಶರೀರಂ ಚ ಭೂಮೇರೇತೇ ಗುಣಾಸ್ತ್ರಯಃ ।
ಏತಾವಾನಿಂದ್ರಿಯಗ್ರಾಮೋ ವ್ಯಾಖ್ಯಾತಃ ಪಾಂಚಭೌತಿಕಃ ॥ ೫೦ ॥

ವಾಯೋ ಸ್ಪರ್ಶೋ ರಸೋಽದ್ಭ್ಯಶ್ಚ ಜ್ಯೋತಿಷೋ ರೂಪಮುಚ್ಯತೇ ।
ಆಕಾಶಪ್ರಭವಃ ಶಬ್ದೋ ಗಂಧೋ ಭೂಮಿಗುಣಃ ಸ್ಮೃತಃ । ॥ ೫೧ ॥

ಮನೋ ಬುದ್ಧಿಃ ಸ್ವಭಾವಶ್ಚ ಗುಣಾ ಏತೇ ಸ್ವಯೋನಿಜಾಃ ।
ತೇ ಗುಣಾನತಿವರ್ತಂತೇ ಗುಣೇಭ್ಯಃ ಪರಮಾ ಮತಾಃ ॥ ೫೨ ॥

ಯಥಾ ಕೂರ್ಮ ಇವಾಂಗಾನಿ ಪ್ರಸಾರ್ಯ ಸಂನಿಯಚ್ಛತಿ ।
ಏವಮೇವೇಂದ್ರಿಯಗ್ರಾಮಂ ಬುದ್ಧಿಶ್ರೇಷ್ಠೋ ನಿಯಚ್ಛತಿ ॥ ೫೩ ॥

ವ್ಯಾಪಾರವೂ ಚಲನೆಯೂ ವಾಯುವಿನ ಲಕ್ಷಣವು. ರೂಪಗುಣವೂ ಚಕ್ಷು ರಿಂದ್ರಿಯವೂ ವಸ್ತುಗಳನ್ನು ಬಿಸಿಯಾಗಿಮಾಡುವಿಕೆಯೂ ಅಗ್ನಿ (ತೇಜಸ್ಸಿನ) ಯ ಲಕ್ಷಣವು. ರಸಗುಣವೂ ನಾಲಿಗೆ ಎಂಬ ಇಂದ್ರಿಯವೂ ಬೆವರುವದೂ ಈ ಮೂರೂ ನೀರಿನ ಲಕ್ಷಣವು. ಗಂಧಗುಣವೂ ಮೂಗೆಂಬ ಇಂದ್ರಿಯವೂ ಶರೀರವೂ ಭೂಮಿಯ ಲಕ್ಷಣವು. ಇವೇ ಪಂಚಭೂತಸಂಬಂಧವಾದ ಇಂದ್ರಿಯಗಳ ಸಮೂಹವು.

೫೧-೫೩. ವಾಯುವಿಗೆ ಸ್ಪರ್ಶಗುಣ, ನೀರಿಗೆ ರಸಗುಣ, ತೇಜಸ್ಸಿಗೆ ರೂಪಗುಣ, ಆಕಾಶಕ್ಕೆ ಶಬ್ದಗುಣ, ಭೂಮಿಗೆ ಗಂಧಗುಣ, ಮನಸ್ಸು, ಬುದ್ಧಿ, ಸ್ವಭಾವ (ಪ್ರಕೃತಿ) ಈ ಗುಣಗಳೂ ಆತ್ಮನಿಂದಲೇ ಹುಟ್ಟಿದವುಗಳು. ಈ ಗುಣಗಳನ್ನು ಅತಿಕ್ರಮಿಸಿದವನೇ ಪರಮಾತ್ಮನು. ಆಮೆಯು ತನ್ನ ಅವಯವಗಳನ್ನು ಹರಡಿ ಅವಯವಗಳಿಗೆ ಶಕ್ತಿಯನ್ನು ಕೊಡುವಂತೆ, ಶ್ರೇಷ್ಠವಾದ ಬುದ್ಧಿಯು ಇಂದ್ರಿಯಗಳ ಕಡೆಗೆ ತನ್ನ ಶಕ್ತಿಯನ್ನು ಹರಡಿ ಅವುಗಳಿಗೆ ಶಕ್ತಿಯನ್ನುಂಟುಮಾಡುವುದು.

ಯದೂರ್ಧ್ವಂ ಪಾದತಲಯೋರವಾಕೋರ್ಧ್ವಂ ಚ ಪಶ್ಯತಿ ।
ಏತಸ್ಮಿನ್ನೇವ ಕೃತ್ಸ್ನೇ ಸಾ ವರ್ತತೇ ಬುದ್ಧಿರುತ್ತಮಾ ॥ ೫೪ ॥

ಗುಣೈಸ್ತು ನೀಯತೇ ಬುದ್ಧಿರ್ಬುದ್ಧಿರೇವೇಂದ್ರಿಯಾಣ್ಯಪಿ ।
ಮನಃಷಷ್ಠಾನಿ ಸರ್ವಾಣಿ ಬುದ್ಧ್ಯಾ ಭಾವಾತ್ಮಕತೋ ಗುಣಾಃ ॥ ೫೫ ॥

ಇಂದ್ರಿಯಾಣಿ ನರೈಃ ಪಂಚ ಷಷ್ಠಂ ತನ್ಮನ ಉಚ್ಯತೇ ।
ಸಪ್ತಮೀಂ ಬುದ್ಧಿಮೇವಾಹುಃ ಕ್ಷೇತ್ರಜ್ಞಂ ವಿದ್ಧಿ ಚಾಷ್ಟಮಂ ॥ ೫೬ ॥

ಚಕ್ಷುರಾಲೋಕನಾಯೈವ ಸಂಶಯಂ ಕುರುತೇ ಮನಃ ।
ಬುದ್ಧಿರಧ್ಯವಸಾನಾಯ ಸಾಕ್ಷೀ ಕ್ಷೇತ್ರಜ್ಞ ಉಚ್ಯತೇ ॥ ೫೭ ॥

ರಜಸ್ತಮಶ್ಚ ಸತ್ತ್ವಂ ಚ ತ್ರಯ ಏತೇ ಸ್ವಯೋನಿಜಾಃ ।
ಸಮಾಃ ಸರ್ವೇಷು ಭೂತೇಷು ತಾನ್ ಗುಣಾನುಪಲಕ್ಷಯೇತ್ ॥ ೫೮ ॥

೫೪-೫೬. ಮೇಲೆ, ಕೆಳಗೆ, ಹಿಂದೆ, ಮುಂದೆ, ಇವುಗಳನ್ನು ಚೆನ್ನಾಗಿ ತಿಳಿದು ಕಾರ್ಯವನ್ನು ಮಾಡುವದೇ ಉತ್ತಮಬುದ್ಧಿಯ ಲಕ್ಷಣವು. ಪ್ರಕೃತಿಯು ಸತ್ವಾದಿಗುಣಗಳಿಂದ ಕೂಡಿ ಬುದ್ಧಿಯು ಕಾರ್ಯಗಳನ್ನು ಮಾಡುವದು. ಬುದ್ಧಿಯೇ ಮನಸ್ಸಿನೊಡನೆ ಕೂಡಿ ಆರು ಇಂದ್ರಿಯಗಳಿಂದಲೂ ಕೆಲಸವನ್ನು ಮಾಡಿಸುವದು. ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣ, ಎಂಬ ಐದು ಇಂದ್ರಿಯಗಳು, ಆರನೆಯದು ಮನಸ್ಸು, ಏಳನೆಯದು ಬುದ್ಧಿ, ಕ್ಷೇತ್ರಜ್ಞನೇ ಎಂಟನೆಯವನು.

೫೭-೬೧. ಕಣ್ಣುಗಳು ನೋಡುವ ಕೆಲಸವನ್ನು ಮಾತ್ರ ಮಾಡುವದು. ಸಂದೇಹವಾದ ಆಲೋಚನೆಯು ಮನಸ್ಸಿನದು ನಿಶ್ಚಯಸ್ವರೂಪವಾದ ಆಲೋಚನೆಯು ಬುದ್ಧಿ ಎನಿಸುವದು. ಕ್ಷೇತ್ರಜ್ಞನು ಸಾಕ್ಷಿಸ್ವರೂಪನು. ಪ್ರಕೃತಿಯಿಂದ ಹುಟ್ಟಿದ ಸತ್ವರಜಸ್ತಮೋಗುಣಗಳು ಸಮಸ್ತಗ ಪ್ರಾಣಿಗಳಲ್ಲಿಯೂ ಸಮಾನವಾಗಿರುವುವು. ಈ ಗುಣಗಳಲ್ಲಿ ಒಂದೊಂದು ಸಮಯದಲ್ಲಿ ಒಂದೊಂದು ಗುಣವು ಇರುವುದು. ಯಾವ ಸಂದರ್ಭದಲ್ಲಿ ಪ್ರೀತಿಯೂ ಹೆಚ್ಚುಕೆಲಸ

ತತ್ರ ಯತ್ಪ್ರೀತಿಸಂಯುಕ್ತಂ ಕಿಂಚಿದಾತ್ಮನಿ ಲಕ್ಷಯೇತ್ ।
ಪ್ರಶಾಂತಮಿವ ಸಂಯುಕ್ತಂ ಸತ್ತ್ವಂ ತದುಪಧಾರಯೇತ್ ॥ ೩೯ ॥

ಯತ್ತು ಸಂತಾಪಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ಪ್ರವೃತ್ತಂ ರಜ ಇತ್ಯೇವಂ ತತ್ರ ಚಾಪ್ಯುಪಲಕ್ಷಯೇತ್ ॥ ೬೦ ॥

ಯತ್ತು ಸಂಮೋಹಸಂಯುಕ್ತಮವ್ಯಕ್ತಂ ವಿಷಮಂ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥ ೬೧ ॥

ಪ್ರಹರ್ಷಃ ಪ್ರೀತಿರಾನಂದಂ ಸ್ವಾಮ್ಯಂ ಸ್ವಸ್ಥಾತ್ಮಚಿತ್ತತಾ ।
ಅಕಸ್ಮಾದ್ಯದಿ ವಾ ಕಸ್ಮಾದ್ವದಂತಿ ಸಾತ್ತ್ವಿಕಾನ್ಗುಣಾನ್ ॥ ೬೨ ॥

ಅಭಿಮಾನೋ ಮೃಷಾವಾದೋ ಲೋಭೋ ಮೋಹಸ್ತಥಾ ಕ್ಷಮಾ ।
ಲಿಂಗಾನಿ ರಜಸಸ್ತಾನಿ ವರ್ತಂತೇ ಹೇತುತತ್ತ್ವತಃ ॥ ೬೩ ॥

ತಥಾ ಮೋಹಃ ಪ್ರಮಾದಶ್ಚ ತಂದ್ರೀ ನಿದ್ರಾಽಪ್ರಬೋಧಿತಾ ।
ಕಥಂಚಿದಭಿವರ್ತಂತೇ ವಿಜ್ಞೇಯಾಸ್ತಾಮಸಾ ಗುಣಾಃ ॥ ೬೪ ॥

ಮಾಡುತ್ತಿರುವದು ಗೋಚರವಾಗುವದೂ, ಶಾಂತಸ್ವಭಾವವೂ ಜೀವನಲ್ಲಿ ಕಾಣು ವದೋ ಅದನ್ನು ಸತ್ವಗುಣವೆಂದು ತಿಳಿಯಬೇಕು. ಕೆಲಸದಲ್ಲಿಯೂ ಮನಸ್ಸಿನಲ್ಲಿ ಸಂತಾಪದಿಂದ ಕೂಡಿರುವಾಗಲೂ ಜೀವನಲ್ಲಿ ರಜೋಗುಣವು ಕೆಲಸಮಾಡುತ್ತಿರುವದೆಂದು ತಿಳಿಯಬೇಕು. ಜೀವನ ಸ್ವಭಾವವು ಅಜ್ಞಾನದಿಂದಕೂಡಿ ವಿರುದ್ಧವಾದ ಕಾರ್ಯವನ್ನು ಮಾಡುತ್ತಿದ್ದರೆ ತಮೋಗುಣವು ಹೆಚ್ಚಿರುವದೆಂದು ತಿಳಿಯಬೇಕು.

೬೨-೬೪. ಸಂತೋಷ, ಪ್ರೀತಿ, ಆನಂದ, ಗೌರವ, ಶಾಂತವಾದ ಮನಸ್ಸು ಇವುಗಳು ಯಾವ ಕಾರಣದಿಂದಲಾದರೂ ಅಥವಾ ಕಾರಣವಿಲ್ಲದೆಯೂ ಉಂಟಾದರೆ ಸಾತ್ವಿಕಗುಣವೆಂದು ಹೇಳುವರು. ಅಹಂಕಾರವೂ ಸುಳ್ಳನ್ನು ಹೇಳಿ ವಾದಮಾಡುವದೂ ಅತ್ಯಾಸೆ, ಅಜ್ಞಾನ, ಕಾಮಿಸದಿರುವದು. ಇವುಗಳು ಯಾವುದಾದರೊಂದು ಕಾರಣದಿಂದುಂಟಾಗಿ ಜೀವನಲ್ಲಿ ರಜೋಗುಣದ ಗುರುತಾಗಿರುವುವು. ಅಜ್ಞಾನವೂ ಭ್ರಾಂತಿಯೂ ತೂಕಡಿಕೆಯೂ ನಿದ್ರೆಯೂ ಎಚ್ಚರವಿಲ್ಲದಿರುವದೂ, ಇವುಗಳೆಲ್ಲ ತಾಮಸಗುಣಕ್ಕೆ ಗುರುತುಗಳು.

ಮನಃ ಪ್ರಸೃಜತೇ ಭಾವಂ ಬುದ್ಧಿರಧ್ಯವಸಾಯಿನೀ ।
ಹೃದಯಂ ಪ್ರಿಯಮೇವೇಹ ತ್ರಿವಿಧಾ ಕರ್ಮಚೋದನಾ ॥ ೬೫ ॥

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಪರಃ ಸ್ಮೃತಃ ॥ ೬೬ ॥

ಬುದ್ಧಿರಾತ್ಮಾ ಮನುಷ್ಯಸ್ಯ ಬುದ್ಧಿರೇವಾತ್ಮನಾಯಿಕಾ ।
ಯದಾ ವಿಕುರುತೇ ಭಾವಂ ತದಾ ಭವತಿ ಸಾ ಮನಃ ॥ ೬೭ ॥

ಇಂದ್ರಿಯಾಣಾಂ ಪೃಥಗ್ಭಾವಾದ್ಬುದ್ಧಿರ್ವಿಕುರುತೇ ಹ್ಯನು ।
ಶೃಣ್ವತೀ ಭವತಿ ಶ್ರೋತ್ರಂ ಸ್ಪೃಶತೀ ಸ್ಪರ್ಶ ಉಚ್ಯತೇ ॥ ೬೮ ॥

೬೫-೬೮. ಮನಸ್ಸು ಸಂಕಲ್ಪವನ್ನು ಮಾತ್ರ ಮಾಡುವನು. ಬುದ್ಧಿಯು ಯುಕ್ತಾಯುಕ್ತ ವಿಮರ್ಶೆಯನ್ನು ಮಾಡಿ ನಿಶ್ಚಯಮಾಡುವದು. ಬಳಿಕ ಜೀವನು ತನಗಿಷ್ಟವಾದುದನ್ನು ಮಾಡುವನು. ಹೀಗೆ ಒಂದು ಕಾರ್ಯವು ನಡೆಯಬೇಕಾದರೆ ಮೂರು ವಿಧದಲ್ಲಿ ಕೆಲಸಮಾಡಬೇಕಾಗಿರುವದು. ಇಂದ್ರಿಯಗಳಿಗಿಂತ ಅವುಗಳಿಗೆ ಗೋಚರವಾದ ವಿಷಯಗಳು ಹೆಚ್ಚಿನವು. ವಿಷಯಗಳಿಗಿಂತ ಅವುಗಳನ್ನನುಭವಿಸುವ ಮನಸ್ಸು ಹೆಚ್ಚಿನದು. ಮನಸ್ಸಿಗಿಂತ ಯುಕ್ತವನ್ನು ಗ್ರಹಿಸಿ ಅಯುಕ್ತವಾದುದನ್ನು ಬಿಡುವ ಬುದ್ಧಿಯು ಹೆಚ್ಚಿನದು. ಬುದ್ಧಿಗಿಂತಲೂ ಆ ಬುದ್ಧಿಗೆ ಶಕ್ತಿಯನ್ನು ಕೊಡುವ ಆತ್ಮನು ಶ್ರೇಷ್ಠನು. ಆದುದರಿಂದ ಮನುಷ್ಯನಿಗೆ ಬುದ್ಧಿಯೇ ಆತ್ಮನೆನಿಸುವದು. ಬುದ್ಧಿಯೇ ಜೀವನನ್ನು ಆತ್ಮನಲ್ಲಿ ಸೇರಿಸುವದು. ಬುದ್ಧಿಯಲ್ಲಿ ವಿಕಲ್ಪಭಾವವುಂಟಾದಾಗ ಅದು ಮನಸ್ಸೆನಿಸುವದು. ಇಂದ್ರಿಯಗಳು ಬೇರೆಬೇರೆಯಾಗಿರುವದರಿಂದ ಬುದ್ಧಿಯು ಅವುಗಳನ್ನನುಸರಿಸಿ ಕೇಳುವ ಕೆಲಸವನ್ನು ಮಾಡುವದು ಕಿವಿಯೆಂದೂ, ಮುಟ್ಟುವ ಕೆಲಸವನ್ನು ಮಾಡುವದು ಚರ್ಮವೆಂದೂ, ನೋಡುವ ಕೆಲಸವನ್ನು ಮಾಡುವದು ಕಣ್ಣೆಂದೂ, ರುಚಿಯನ್ನು ನೋಡುವ ಕೆಲಸವನ್ನು ಮಾಡುವದು ನಾಲಿಗೆಯೆಂದೂ,

ಪಶ್ಯಂತೀ ಚ ಭವೇದ್ದೃಷ್ಟೀ ರಸಂತೀ ರಸನಾ ಭವೇತ್ ।
ಜಿಘ್ರಂತೀ ಭವತಿ ಘ್ರಾಣಂ ಬುದ್ಧಿರ್ವಿಕುರುತೇ ಪೃಥಕ್ ॥ ೬೯ ॥

ಇಂದ್ರಿಯಾಣಿ ತು ತಾನ್ಯಾಹುಸ್ತೇಷಾಂ ವೃತ್ತ್ಯಾ ವಿತಿಷ್ಠತಿ ।
ತಿಷ್ಠತಿ ಪುರುಷೇ ಬುದ್ಧಿರ್ಬುದ್ಧಿಭಾವವ್ಯವಸ್ಥಿತಾ ॥ ೭೦ ॥

ಕದಾಚಿಲ್ಲಭತೇ ಪ್ರೀತಿಂ ಕದಾಚಿದಪಿ ಶೋಚತಿ ।
ನ ಸುಖೇನ ಚ ದುಃಖೇನ ಕದಾಚಿದಿಹ ಮುಹ್ಯತೇ ॥ ೭೧ ॥

ಸ್ವಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನತಿವರ್ತತೇ ।
ಸರಿತಾಂ ಸಾಗರೋ ಭರ್ತಾ ಮಹಾವೇಲಾಮಿವೋರ್ಮಿಮಾನ್ ॥ ೭೨ ॥

ಯದಾ ಪ್ರಾರ್ಥಯತೇ ಕಿಂಚಿತ್ತದಾ ಭವತಿ ಸಾ ಮನಃ ।
ಅಧಿಷ್ಠಾನೇ ಚ ವೈ ಬುದ್ಧ್ಯಾ ಪೃಥಗೇತಾನಿ ಸಂಸ್ಮರೇತ್ ॥ ೭೩ ॥

ಮೂಸಿನೋಡುವ ಕೆಲಸವನ್ನು ಮಾಡುವದು ಮೂಗೆಂದೂ ಬುದ್ಧಿಯೇ ಬೇರೆ ಬೇರೆ ವಿಕಾರವನ್ನು ಹೊಂದುವದು.

೭೦-೭೨. ಇವೇ ಇಂದ್ರಿಯಗಳು. ಬುದ್ಧಿಯು ಈ ಇಂದ್ರಿಯಗಳ ವೃತ್ತಿಯಿಂದ ಕೂಡಿರುವದು. ಈ ಬುದ್ಧಿಯು ಪುರುಷನಲ್ಲಿರುವದು. ಜೀವನು ಈ ಬುದ್ಧಿಭಾವದ ವ್ಯವಸ್ಥೆಯಿಂದ ಕೆಲವು ಕಾಲದಲ್ಲಿ ಸುಖದಿಂದ ಸಂತೋಷ ವನ್ನೂ ದುಃಖದಿಂದ ಚಿಂತೆಯನ್ನೂ ಹೊಂದುವನು. ಒಂದಾನೊಂದು ಕಾಲದಲ್ಲಿ ಮೋಹವನ್ನೂ ಹೊಂದುವನು. ಯಾವುದೋ ಒಂದುಕಾಲದಲ್ಲಿ ಜೀವನು ಸಂತೋಷ, ಚಿಂತೆ, ಮೋಹವೆಂಬ ಈ ಮೂರು ಭಾವಗಳನ್ನೂ ನದೀಪತಿಯಾದ ಸಾಗರನು ತನ್ನ ಅಲೆಗಳಿಂದ ಮೇರೆಯನ್ನು ಮೀರುವಂತೆ ಮೀರಿರುವನು.

೭೩-೭೪. ಜೀವನು ಯಾವುದಾದರೊಂದು ವಿಷಯವನ್ನು ಅಪೇಕ್ಷಿಸಿ ದಾಗ ಪ್ರಕೃತಿಯಿಂದ ಸಂಕಲ್ಪರೂಪವಾದ ಮನಸ್ಸು ಹುಟ್ಟುವುದು. ಈ ಮನ ಸ್ಸಿಗೆ ಆಶ್ರಯನು ಜೀವನು. ನಿಶ್ಚಯಾತ್ಮಕವಾದ ಬುದ್ಧಿಗಿಂತ ಈ ಮನಸ್ಸು

ಇಂದ್ರಿಯಾಣಿ ಚ ಮೇಧ್ಯಾನಿ ವಿಚೇತವ್ಯಾನಿ ಕೃತ್ಸ್ನಶಃ ।
ಸರ್ವಾಣ್ಯೇವಾನುಪೂರ್ವೇಣ ಯದ್ಯದಾ ಚ ವಿಧೀಯತೇ ॥ ೭೪ ॥

ಅವಿಭಾಗಮನಾ ಬುದ್ಧಿರ್ಭಾವೋ ಮನಸಿ ವರ್ತತೇ ।
ಪ್ರವರ್ತಮಾನಸ್ತು ರಜಃ ಸತ್ತ್ವಮಪ್ಯತಿವರ್ತತೇ ॥ ೭೫ ॥

ಯೇ ವೈ ಭಾವೇನ ವರ್ತಂತೇ ಸರ್ವೇಷ್ವೇತೇಷು ತೇ ತ್ರಿಷು ।
ಅನ್ವರ್ಥಾನ್ಸಂಪ್ರವರ್ತಂತೇ ರಥನೇಮಿಮರಾ ಇವ ॥ ೭೬ ॥

ಪ್ರದೀಪಾರ್ಥಂ ಮನಃ ಕುರ್ಯಾದಿಂದ್ರಿಯೈರ್ಬುದ್ಧಿಸತ್ತಮೈಃ ।
ನಿಶ್ಚರದ್ಭಿರ್ಯಥಾಯೋಗಮುದಾಸೀನೈರ್ಯದೃಚ್ಛಯಾ ॥ ೭೭ ॥

ಏವಂಸ್ವಭಾವಮೇವೇದಮಿತಿ ಬುದ್ಧ್ವಾ ನ ಮುಹ್ಯತಿ ।
ಅಶೋಚನ್ಸಂಪ್ರಹೃಷ್ಯಂಶ್ಚ ನಿತ್ಯಂ ವಿಗತಮತ್ಸರಃ ॥ ೭೮ ॥

ಬೇರೆಯಾದುದೆಂದು ತಿಳಿಯಬೇಕು. ಇಂದ್ರಿಯಗಳೂ ಕೂಡ ವೇದಗಳಲ್ಲಿ ಕ್ರಮವಾಗಿ ಯಾವುವು ವಿಹಿತವಾದುವುಗಳೋ ಅಂತಹ ಪರಿಶುದ್ಧವಾದ ವಿಷಯಗಳನ್ನೇ ಗ್ರಹಿಸಬೇಕು.

೭೫-೭೬. ಬುದ್ಧಿಗೂ ಮನಸ್ಸಿಗೂ ಬೇಧವಿಲ್ಲವೆಂಬ ಭಾವವು ಮನಸ್ಸಿನಲ್ಲಿರುವುದು. ರಜೋಗುಣಕಾರ್ಯ ನಡೆಯುತ್ತಿರುವಾಗ ಸತ್ವಗುಣವನ್ನು ಮೀರಿಸಿ, ರಜೋಗುಣವಿರುವುದು. ಸತ್ವ ರಜಸ್ತಮೋಗುಣಗಳಲ್ಲಿ ಮನಸ್ಸಿನಲ್ಲಿ ಯಾವ ಗುಣಭಾವವು ಅಧಿಕವಾಗಿರುವುದೋ ಅದಕ್ಕನುಸಾರವಾಗಿ ಚಕ್ರದ ಪಟ್ಟಿಯನ್ನು ಆ ಚಕ್ರದಕಾಲುಗಳು ಅನುಸರಿಸಿರುವಂತೆ ಆ ಗುಣಗಳ ಹೆಸರೇ ಅದಕ್ಕೆ ಬರುವುದು.

೭೭-೭೮. ಮನಸ್ಸು ಪ್ರಕಾಶವನ್ನು ಹೊಂದುವುದಕ್ಕಾಗಿ ಉತ್ತಮವಾದ ಬುದ್ಧಿಯುಳ್ಳವರು ವಿಷಯಗಳಕಡೆಗೆ ಹೋಗುವ ಇಂದ್ರಿಯಗಳನ್ನು ಉದಾಸೀನತೆಯಿಂದ ಅವಶ್ಯಕವಾಗಿ ತಡೆಯಬೇಕು. ಇಂದ್ರಿಯಗಳ ಸ್ವಭಾವವೇ ಇಂತಹುದೆಂದು ಭಾವಿಸಿ ಅಜ್ಞಾನವನ್ನು ಹೊಂದಬಾರದು. ಯಾವಾಗಲೂ ದುಃಖಪಡದೆ ಸಂತೋಷದಿಂದ ಮಾತ್ಸರ್ಯ ದೋಷವಿಲ್ಲದೆ ಇರಬೇಕು.

ನ ಹ್ಯಾತ್ಮಾ ಶಕ್ಯತೇ ದ್ರಷ್ಟುಮಿಂದ್ರಿಯೈಃ ಕಾಮಗೋಚರೈಃ ।
ಪ್ರವರ್ತಮಾನೈರನೇಕೈರ್ದುರ್ಧರ್ಷೈರಕೃತಾತ್ಮಭಿಃ ॥ ೭೯ ॥

ತೇಷಾಂ ತು ಮನಸಾ ರಶ್ಮೀನ್ಯದಾ ಸಮ್ಯಙ್ನಿಯಚ್ಛತಿ ।
ತದಾ ಪ್ರಕಾಶತೇಽಸ್ಯಾತ್ಮಾ ದೀಪದೀಪ್ತಾ ಯಥಾಕೃತಿಃ ॥ ೮೦ ॥

ಸರ್ವೇಷಾಮೇವ ಭೂತಾನಾಂ ತಮಸ್ಯುಪಗತೇ ಯಥಾ ।
ಪ್ರಕಾಶಂ ಭವತೇ ಸರ್ವಂ ತಥೈವಮುಪಧಾರ್ಯತಾಂ ॥ ೮೧ ॥

ಯಥಾ ವಾರಿಚರಃ ಪಕ್ಷೀ ನ ಲಿಪ್ಯತಿ ಜಲೇ ಚರನ್ ।
ವಿಮುಕ್ತಾತ್ಮಾ ತಥಾ ಯೋಗೀ ಗುಣದೋಷೈರ್ನ ಲಿಪ್ಯತೇ ॥ ೮೨ ॥

ಏವಮೇವ ಕೃತಪ್ರಜ್ಞೋ ನ ದೋಷೈರ್ವಿಷಯಾಂಶ್ಚರನ್ ।
ಅಸಜ್ಜಮಾನಃ ಸರ್ವೇಷು ನ ಕಥಂಚಿತ್ಪ್ರಲಿಪ್ಯತೇ ॥ ೮೩ ॥

೭೯-೮೦. ಅನೇಕ ವಿಷಯಗಳಕಡೆಗೆ ಹೋಗುತ್ತಿರುವ, ಹಿಡಿದು ನಿಲ್ಲಿಸಲು ಅಸಾಧ್ಯವಾದ, ಅಶುದ್ಧವಾದ, ಅತ್ಯಾಸೆಯಿಂದಕೂಡಿದ ಇಂದ್ರಿಯಗಳು ಆತ್ಮನನ್ನು ನೋಡಲಾರವು. ಮನಸ್ಸು ಆ ಇಂದ್ರಿಯಗಳ ಹಗ್ಗಗಳನ್ನು ಹಿಡಿದು ಆಕರ್ಷಿಸಿದಾಗ ದೀಪದ ಪ್ರಕಾಶದಲ್ಲಿ ಪದಾರ್ಥಗಳು ಗೋಚರವಾಗುವಂತೆ ಜೀವನಿಗೆ ಆತ್ಮಪ್ರಕಾಶವುಂಟಾಗುವುದು.

೮೧-೮೩. ಕತ್ತಲೆಯು ಹೊರಟುಹೋದಮೇಲೆ ಸಮಸ್ತ ಪ್ರಾಣಿಗಳಿಗೂ ಪ್ರಪಂಚದ ಸಕಲ ವಸ್ತುಗಳೂ ಹೇಗೆ ಕಾಣಿಸುವವೋ ಹಾಗೆ ಅಜ್ಞಾನವು ಹೊರಟುಹೋದೊಡನೆಯೇ ಜೀವನಿಗೆ ಆತ್ಮಪ್ರಕಾಶವುಂಟಾಗುವುದೆಂದು ತಿಳಿಯಬೇಕು. ನೀರಿನಲ್ಲಿ ಸಂಚರಿಸುವ ಹಕ್ಕಿಯ ಮೈಗೆ ನೀರು ಹೇಗೆ ಅಂಟುವುದಿಲ್ಲವೋ ಹಾಗೆ ಸುಖದುಃಖಗಳ ಕಟ್ಟನ್ನು ಕಳೆದುಕೊಂಡ ಯೋಗಿಗೆ ಗುಣದೋಷಗಳ ಸಂಬಂಧವಿರುವುದಿಲ್ಲ. ಹೀಗೆಯೇ ಜ್ಞಾನಿಯಾದವನು ದುಷ್ಟವಾದ ಇಂದ್ರಿಯಗಳಿಂದ ವಿಷಯಾನುಭವವನ್ನು ಮಾಡದೆ ಸಮಸ್ತ ವಿಷಯಗಳಲ್ಲಿಯೂ ಅಪೇಕ್ಷಾಬುದ್ಧಿಯಿಲ್ಲದವನಾದರೆ ಗುಣದೋಷಗಳ ಸಂಬಂಧವು ಅವನಿಗೆ ಎಂದಿಗೂ ಉಂಟಾಗುವುದಿಲ್ಲ.

ತ್ಯಕ್ತ್ವಾ ಪೂರ್ವಕೃತಂ ಕರ್ಮ ರತಿರ್ಯಸ್ಯ ಸದಾತ್ಮನಿ ।
ಸರ್ವಭೂತಾತ್ಮಭೂತಸ್ಯ ಗುಣಸಂಗೇನ ಸಜ್ಜತಃ ॥ ೮೪ ॥

ಸ್ವಯಮಾತ್ಮಾ ಪ್ರಸವತಿ ಗುಣೇಷ್ವಪಿ ಕದಾಚನ ।
ನ ಗುಣಾ ವಿದುರಾತ್ಮಾನಂ ಗುಣಾನ್ವೇದ ಸ ಸರ್ವದಾ ॥ ೮೫ ॥

ಪರಿದಧ್ಯಾದ್ಗುಣಾನಾಂ ಸ ದ್ರಷ್ಟಾ ಚೈವ ಯಥಾತಥಂ ।
ಸತ್ತ್ವಕ್ಷೇತ್ರಜ್ಞಯೋರೇವಮಂತರಂ ಲಕ್ಷಯೇನ್ನರ ॥ ೮೬ ॥

ಸೃಜತೇ ತು ಗುಣಾನೇಕ ಏಕೋ ನ ಸೃಜತೇ ಗುಣಾನ್ ।
ಪೃಥಗ್ಭೂತೌ ಪ್ರಕೃತ್ಯೈತೌ ಸಂಪ್ರಯುಕ್ತೌ ಚ ಸರ್ವದಾ ॥ ೮೭ ॥

ಯಥಾಶ್ಮನಾ ಹಿರಣ್ಯಸ್ಯ ಸಂಪ್ರಯುಕ್ತೌ ತಥೈವ ತೌ ।
ಮಶಕೌದುಂಬರೌ ವಾಪಿ ಸಂಪ್ರಯುಕ್ತೌ ಯಥಾ ಸಹ ॥ ೮೮ ॥

೮೪-೮೬. ಯಾವ ಮನುಷ್ಯನು ತಾನು ಹಿಂದೆ ಮಾಡಿದ ಕರ್ಮ ಫಲವನ್ನು ಬಿಟ್ಟು ಯಾವಾಗಲೂ ಆತ್ಮನಲ್ಲಿ ಪ್ರೀತಿಯುಳ್ಳವನಾಗುವನೋ ಸಮಸ್ತ ಪ್ರಾಣಿಗಳೂ ಆತ್ಮಸ್ವರೂಪವಾದುದೆಂಬ ತಿಳುವಳಿಕೆಯುಳ್ಳ ಅವನಿಗೆ ಸತ್ವಾದಿಗುಣಗಳ ಸಂಬಂಧವು ಇರುವುದಿಲ್ಲ. ತಾನೇ ಗುಣಗಳನ್ನು ಸೃಷ್ಟಿಸುವನು. ಗುಣಗಳು ಆತ್ಮನನ್ನು ತಿಳಿಯಲಾರವು. ಆತ್ಮನು ಗುಣಗಳನ್ನು ತಿಳಿಯುವನು. ಆತ್ಮನು ಸಾಕ್ಷಿಸ್ವರೂಪನಾಗಿ ಗುಣಗಳನ್ನು ಧರಿಸಿರುವನು. ಸತ್ವಾದಿಗುಣಗಳಿಗೂ ಕ್ಷೇತ್ರಜ್ಞನಾದ ಜೀವನಿಗೂ ಇಷ್ಟು ಭೇದವಿರುವುದೆಂಬುವನ್ನು ಮನುಷ್ಯನು ತಿಳಿಯಬೇಕು.

೮೭-೮೯. ಕ್ಷೇತ್ರಜ್ಞ ಮತ್ತು ಆತ್ಮರುಗಳಲ್ಲಿ ಕ್ಷೇತ್ರಜ್ಞನು ಗುಣಗಳನ್ನು ಸೃಷ್ಟಿಸುವನು. ಆತ್ಮನು ಗುಣಗಳನ್ನು ಸೃಷ್ಟಿಸುವುದಿಲ್ಲ. ಸ್ವಾಭಾವಿಕವಾಗಿ ಇವರಿಬ್ಬರೂ ಬೇರೆಯಾದವರು. ಕಲ್ಲಿನಲ್ಲಿ ಚಿನ್ನವು ಸೇರಿಕೊಂಡಂತೆ ಇವರಿಬ್ಬರೂ

ಇಷಿಕಾ ವಾ ಯಥಾ ಮುಂಜೇ ಪೃಥಕ್ಚ ಸಹ ಚೈವ ಹ ।
ತಥೈವ ಸಹಿತಾವೇವನ್ಯೋಽನ್ಯಸ್ಮಿನ್ಪ್ರತಿಷ್ಠಿತೌ ॥ ೮೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಸಪ್ತತ್ರಿಂಶದಧಿಕದ್ವಿಶತತಮೋಽಧ್ಯಾಯಃ

ಸೇರಿರುವರು. ಅಥವಾ ಅತ್ತಿಹಣ್ಣಿನಲ್ಲಿ ಸೊಳ್ಳೆಗಳು ಸೇರಿಕೊಂಡಂತೆ ಇರುವರು. ಅಥವಾ ನೊದೆಹುಲ್ಲಿನ ನಡುವೆ ದಿಂಡು ಸೇರಿಕೊಂಡಿರುವಂತೆ ಬೇರೆಯಾಗಿಯೂ ಜೊತೆಯಲ್ಲಿಯೂ ಇವರಿಬ್ಬರೂ ಸೇರಿಕೊಂಡಿರುವರು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ವ್ಯಾಸರ್ಷಿಸಂವಾದವೆಂಬ ಇನ್ನೂರ
ಮೂವತ್ತೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಅಷ್ಟಾತ್ರಿಂಶದಧಿಕದ್ವಿಶತತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಸೃಜತೇ ತು ಗುಣಾನ್ಸತ್ತ್ವಂ ಕ್ಷೇತ್ರಜ್ಞಸ್ತ್ವಧಿತಿಷ್ಠತಿ ।
ಗುಣಾನ್ವಿಕ್ರಿಯತಃ ಸರ್ವಾನುದಾಸೀನವದೀಶ್ವರಃ ॥ ೧ ॥

ಸ್ವಭಾವಯುಕ್ತಂ ತತ್ಸರ್ವಂ ಯದಿಮಾನ್ಸೃಜತೇ ಗುಣಾನ್ ।
ಊರ್ಣನಾಭಿರ್ಯಥಾ ಸೂತ್ರಂ ಸೃಜತೇ ತದ್ಗುಣಾಂಸ್ತಥಾ ॥ ೨ ॥

ಪ್ರವೃತ್ತಾ ನ ನಿವರ್ತಂತೇ ಪ್ರವೃತ್ತಿರ್ನೋಪಲಭ್ಯತೇ
ಏವಮೇಕೇ ವ್ಯವಸ್ಯಂತಿ ನಿವೃತ್ತಿಮಿತಿ ಚಾಪರೇ ॥ ೩ ॥

ಇನ್ನೂರಮೂವತ್ತೆಂಟನೆಯ ಅಧ್ಯಾಯವು

೧-೪. ವ್ಯಾಸನು ಹೇಳಿದನು ;—ಶಕ್ತಿಯು ಗುಣಗಳನ್ನು ಸೃಷ್ಟಿಸುವುದು. ಕ್ಷೇತ್ರಜ್ಞನಾದ ಜೀವನು ಆ ಗುಣಗಳನ್ನು ಆಶ್ರಯಿಸಿರುವನು. ಈಶ್ವರನು ವಿಕಾರವಾದ ಎಲ್ಲ ಗುಣಗಳನ್ನೂ ಉದಾಸೀನವಾಗಿ ಕಾಣುವನು. ಜಾಡರಹುಳುವು ದಾರವನ್ನು ತನ್ನ ಶರೀರದಿಂದಲೇ ಸೃಷ್ಟಿಸುವಂತೆ, ಪ್ರಕೃತಿಯು ತನ್ನ ಶಕ್ತಿಯಿಂದ ಈ ಸತ್ವಾದಿಗುಣಗಳನ್ನು ಸೃಷ್ಟಿಸುವುದು. ಕಾರ್ಯರೂಪಕ್ಕೆ ಬಂದ ಸತ್ವಾದಿಗುಣಗಳು ಕಾರ್ಯಮಾಡದೆ ಬಿಡುವುದಿಲ್ಲ. ಯಾವಾಗ ಯಾವ ಗುಣವು ಕಾರ್ಯರೂಪಕ್ಕೆ ಬರುವುದೋ ಅದನ್ನು ಜೀವನು ತಿಳಿಯಲಾರನು.

ಉಭಯಂ ಸಂಪ್ರಧಾರ್ಯೈತದಧ್ಯವಸ್ಯೇದ್ಯಥಾಮತಿ ।
ಅನೇನೈವ ವಿಧಾನೇನ ಭವೇದ್ವೈ ಸಂಶಯೋ ಮಹಾನ್ ॥ ೪ ॥

ಅನಾದಿನಿಧನೋ ಹ್ಯಾತ್ಮಾ ತಂ ಬುದ್ಧ್ವಾ ವಿಹರೇನ್ನರಃ ।
ಅಕ್ರುಧ್ಯನ್ನಪ್ರಹೃಷ್ಯಂಶ್ಚ ನಿತ್ಯಂ ವಿಗತಮತ್ಸರಃ ॥ ೫ ॥

ಇತ್ಯೇವಂ ಹೃದಯೇ ಸರ್ವೋ ಬುದ್ಧಿಂಚಿಂತಾಮಯಂ ದೃಢಂ ।
ಅನಿತ್ಯಂ ಸುಖಮಾಸೀನಮಶೋಚ್ಯಂ ಛಿನ್ನಸಂಶಯಃ ॥ ೬ ॥

ತರಯೇತ್ಪ್ರಚ್ಯುತಾಂ ಪೃಥ್ವೀಂ ಯಥಾ ಪೂರ್ಣಾಂ ನದೀಂ ನರಾಃ ।
ಅವಗಾಹ್ಯ ಚ ವಿದ್ವಾಂಸೋ ವಿಪ್ರಾ ಲೋಲಮಿಮಂ ತಥಾ ॥ ೭ ॥

ನ ತು ತಪ್ಯತಿ ವೈ ವಿದ್ವಾನ್ಸ್ಥಲೇ ಚರತಿ ತತ್ತ್ವವಿತ್ ।
ಏವಂ ವಿಚಿಂತ್ಯ ಚಾತ್ಮಾನಂ ಕೇವಲಂ ಜ್ಞಾನಮಾತ್ಮನಃ ॥ ೮ ॥

ಮತ್ತೆಕೆಲವರು ಸತ್ವಾದಿಗುಣಗಳಿಗೆ ಪ್ರವೃತ್ತಿಯು ಹೇಗೆ ಇರುವುದೋ ಹಾಗೆಯೇ ನಿವೃತ್ತಿಧರ್ಮವೂ ಇರುವುದೆಂದು ಹೇಳುವರು. ಈ ಕಾರಣದಿಂದ ಜನರಿಗೆ ಮಹಾಸಂದೇಹವುಂಟಾಗಿರುವುದು. ಈ ಎರಡನ್ನೂ ತನ್ನ ಬುದ್ಧಿಯಲ್ಲಿ ವಿಚಾರ ಮಾಡಿ ನಿಶ್ಚಯಜ್ಞಾನವನ್ನುಂಟುಮಾಡಿಕೊಳ್ಳಬೇಕು.

೫-೧೦. ಮನುಷ್ಯನು ಕೋಪವನ್ನೂ ಸಂತೋಷವನ್ನೂ ಹೊಂದದೆ ಇವರ ವಿಷಯದಲ್ಲಿ ಮಾತ್ಸರ್ಯವಿಲ್ಲದವನಾಗಿ ಆದ್ಯಂತಗಳಿಲ್ಲದ ಆತ್ಮಸ್ವರೂಪವನ್ನು ತಿಳಿದು ಆನಂದವನ್ನು ಹೊಂದಬೇಕು. ಈರೀತಿಯಲ್ಲಿ ಸರ್ವರೂ ಅಶಾಶ್ವತವಾದ ಚಿಂತೆಯಿಂದಕೂಡಿದ ಬುದ್ಧಿಯನ್ನು ಸಂದೇಹವಿಲ್ಲದಂತೆ ದೃಢ ಮಾಡಿಕೊಂಡು ಹೀನಸ್ಥಿತಿಗೆ ಬಂದ ಭೂಮಿಯನ್ನು ಉದ್ಧಾರಮಾಡಬೇಕು. ಬುದ್ಧಿವಂತನಾದ ಮನುಷ್ಯನು ತುಂಬಿ ಹರಿಯುತ್ತಿರುವ ನದಿಯಲ್ಲಿ ಸ್ನಾನವನ್ನು ಮಾಡಿ ತಾಪವನ್ನು ಕಳೆದುಕೊಳ್ಳುವಂತೆ, ಚಂಚಲವಾದ ಈ ಸಂಸಾರದಲ್ಲಿದ್ದುಕೊಂಡು ತತ್ವವನ್ನು ತಿಳಿದವನಾಗಿ ತಾಪವನ್ನು ಹೊಂದದೆ ಭೂಮಿಯಲ್ಲಿ ಸಂಚರಿಸುತ್ತಿರುವನು. ಕೃತಜ್ಞನಾದವನು ಈರೀತಿಯಲ್ಲಿ ವಿಚಾರಮಾಡಿ ಕೇವಲ ಜ್ಞಾನಸ್ವರೂಪವೇ ಆತ್ಮವೆಂದು ತಿಳಿದು ಪ್ರಪಂಚಸೃಷ್ಟಿಯನ್ನೂ ಪ್ರಾಣಿಗಳ

ತಾಂ ತು ಬುದ್ಧ್ವಾ ನರಃ ಸರ್ಗಂ ಭೂತಾನಾಮಾಗತಿಂ ಗತಿಂ ।
ಸಮುಚೇಷ್ಟಶ್ಚ ವೈ ಸಮ್ಯಗ್ಲಭತೇ ಶಮಮುತ್ತಮಂ ॥ ೯ ॥

ಏತದ್ದ್ವಿಜನ್ಮಸಾಮಗ್ರ್ಯಂ ಬ್ರಾಹ್ಮಣಸ್ಯ ವಿಶೇಷತಃ ।
ಆತ್ಮಜ್ಞಾನಸಮಸ್ನೇಹಪರ್ಯಾಪ್ತಂ ತತ್ಪರಾಯಣಂ ॥ ೧೦ ॥

ತತ್ತ್ವಂ ಬುದ್ಧ್ವಾ ಭವೇದ್ಬುದ್ಧಃ ಕಿಮನ್ಯದ್ಬುದ್ಧಲಕ್ಷಣಂ ।
ವಿಜ್ಞಾಯೈತದ್ವಿಮುಚ್ಯಂತೇ ಕೃತಕೃತ್ಯಾ ಮನೀಷಿಣಃ ॥ ೧೧ ॥

ನ ಭವತಿ ವಿದುಷಾಂ ಮಹದ್ಭಯಂ ಯ-
ದವಿದುಷಾಂ ಸುಮಹದ್ಭಯಂ ಪರತ್ರ ।
ನ ಹಿ ಗತಿರಧಿಕಾಸ್ತಿ ಕಸ್ಯಚಿ-
ದ್ಭವತಿ ಹಿ ಯಾ ವಿದುಷಃ ಸನಾತನೀ ॥ ೧೨ ॥

ಗಮನಾಗಮನಗಳನ್ನೂ ತಿಳಿದು ಸಮಾನಭಾವದಿಂದ ಇದ್ದು ಶಾಂತನಾಗುವನು. ದ್ವಿಜರಿಗೆ ಅಂದರೆ ಬ್ರಹ್ಮ, ಕ್ಷತ್ರಿಯ, ವೈಶ್ಯರಿಗೆ ಇದು ಸಮಾನವಾದ ವಿಷಯ ವಾಗಿರುವುದು. ಬ್ರಾಹ್ಮಣನಾದವನಿಗೆ ವಿಶೇಷವಾಗಿ ಆತ್ಮಜ್ಞಾನಾಸಕ್ತಿಯೂ ಇರಬೇಕು.

೧೧. ತತ್ವವನ್ನು ತಿಳಿದವನು ಜ್ಞಾನಿಯಾಗುವನು. ಜ್ಞಾನಿಗೆ ಮತ್ತಾವ ಲಕ್ಷಣವೂ ಇಲ್ಲ. ಬುದ್ಧಿವಂತರಾದವರು ಈ ತತ್ವವನ್ನು ತಿಳಿದು ಸುಖ ದುಃಖಗಳ ಬಿಡುಗಡೆಯನ್ನು ಹೊಂದುವರು.

೧೨-೧೪. ಅಜ್ಞಾನಿಗಳಿಗೆ ಪರಲೋಕ ವಿಷಯದಲ್ಲಿ ಮಹಾಭಯವಿರು ವಂತೆ ಜ್ಞಾನಿಗಳಿಗೆ ಭಯವಿರುವುದಿಲ್ಲ. ವಿದ್ವಾಂಸರಿಗೆ ಅನಾದಿಯಾದ ಯಾವ ಉತ್ತಮವಾದ ಗತಿಯು ಬರುವುದೋ ಅಂತಹ ಗತಿಗಿಂತಲೂ ಉತ್ತಮ ವಾದ ಗತಿಯು ಮತ್ತಾರಿಗೂ ಬರುವುದಿಲ್ಲ. ಈ ಲೋಕದಲ್ಲಿ ಮನುಷ್ಯನು ವ್ಯವಹಾರ ಸಂಬಂಧದಲ್ಲಿ ತಾಯಿಯನ್ನೂ ದ್ವೇಷಿಸುವನು. ಆ ತಾಯಿ ಎಂಬುವ ವಸ್ತುವಿನಲ್ಲಿ ದೇವನಾದ ಪರಮಾತ್ಮನಿರುವುದನ್ನು ತಿಳಿಯದೆ ದುಃಖ

ಲೋಕೇ ಮಾತರಮನುಸೂಯತೇ ನರ-
ಸ್ತತ್ರ ದೇವಮನಿರೀಕ್ಷ್ಯ ಶೋಚತೇ ।
ತತ್ರ ಚೇತ್ಕುಶಲೋ ನ ಶೋಚತೇ
ಯೇ ವಿದುಸ್ತದುಭಯಂ ಕೃತಾಕೃತಂ ॥ ೧೩ ॥

ಯತ್ಕರೋತ್ಯನಭಿಸಂಧಿಪೂರ್ವಕಂ
ತಚ್ಚ ನಿಂದಯತಿ ಯತ್ಪುರಾ ಕೃತಂ ।
ಯತ್ಪ್ರಿಯಂ ತದುಭಯಂ ನ ಚಾಪ್ರಿಯಂ
ತಸ್ಯ ತಜ್ಜನಯತೀಹ ಕುರ್ವತಃ ॥ ೧೪ ॥

॥ ಮುನಯ ಊಚುಃ ॥

ಯಸ್ಮಾದ್ಧರ್ಮಾತ್ಪರೋ ಧರ್ಮೋ ವಿದ್ಯತೇ ನೇಹ ಕಶ್ಚನ ।
ಯೋ ವಿಶಿಷ್ಟಶ್ಚ ಭೂತೇಭ್ಯಸ್ತದ್ಭವಾನ್ಪ್ರಬ್ರವೀತು ನಃ ॥ ೧೫ ॥

॥ ವ್ಯಾಸ ಉವಾಚ ॥

ಧರ್ಮಂ ಚ ಸಂಪ್ರವಕ್ಷ್ಯಾಮಿ ಪುರಾಣಮೃಷಿಭಿಃ ಸ್ತುತಂ ।
ವಿಶಿಷ್ಟಂ ಸರ್ವಧರ್ಮೇಭ್ಯಃ ಶೃಣುಧ್ವಂ ಮುನಿಸತ್ತಮಾಃ ॥ ೧೬ ॥

ಪಡುವನು. ಯಾರು ಈ ವಿಷಯದಲ್ಲಿ ಬುದ್ಧಿವಂತನಾಗಿ ಕೃತ್ಯಾಕೃತ್ಯಗಳನ್ನು ತಿಳಿದಿರುವರೋ ಅವರು ದುಃಖಪಡುವುದಿಲ್ಲ. ಯಾವ ಮನುಷ್ಯನು ಫಲಾಪೇಕ್ಷೆಯಿಲ್ಲದೆ ಕಾರ್ಯಗಳನ್ನು ಮಾಡುವನೋ ಅವನು ತಾನು ಹಿಂದೆ ಫಲಾಪೇಕ್ಷೆಯಿಂದ ಮಾಡಿದ ಕರ್ಮಗಳನ್ನು ನಿಂದಿಸುವನು. ಈಗ ನಿಷ್ಕಾಮವಾಗಿ ಕರ್ಮವನ್ನು ಮಾಡುವವನಿಗೂ ಹಿಂದೆ ಮಾಡಿದ ಸುಕೃತ ದುಷ್ಕೃತಗಳು ಫಲವನ್ನು ಕೊಡುತ್ತಿರುವುವು.

೧೫. ಮುನಿಗಳು ಕೇಳಿದರು :—ಯಾವ ಧರ್ಮಕ್ಕಿಂತ ಉತ್ತಮವಾದ ಧರ್ಮವಿರುವುದಿಲ್ಲವೋ ಅಂತಹ ಧರ್ಮವನ್ನೂ ಪ್ರಾಣಿಗಳಲ್ಲಿ ಯಾವ ಪ್ರಾಣಿಯು ಉತ್ತಮವಾದುದೆಂಬುದನ್ನೂ ನಮಗೆ ನೀನು ಹೇಳಬೇಕು ಎನ್ನಲು ಅದಕ್ಕೆ ವ್ಯಾಸನಿಂತೆಂದನು—

೧೬-೨೦. ಋಷಿಶ್ರೇಷ್ಠರೇ, ಪುರಾತನವಾದ ಋಷಿಗಳೆಲ್ಲರೂ ಶ್ಲಾಘಿಸುವ ಸಮಸ್ತ ಧರ್ಮಗಳಿಗಿಂತಲೂ ಉತ್ತಮವಾದ ಧರ್ಮವನ್ನು ಹೇಳುವೆನು ಕೇಳಿರಿ.

ಇಂದ್ರಿಯಾಣಿ ಪ್ರಮಾಥೀನಿ ಬುದ್ಧ್ಯಾ ಸಂಯಮ್ಯ ತತ್ತ್ವತಃ ।
ಸರ್ವತಃ ಪ್ರಸೃತಾನೀಹ ಪಿತಾ ಬಾಲಾನಿವಾತ್ಮಜಾನ್ ॥ ೧೭ ॥

ಮನಸಶ್ಚೇಂದ್ರಿಯಾಣಾಂ ಚಾಪ್ಯೈಕಾಗ್ರ್ಯಂ ಪರಮಂ ತಪಃ ।
ವಿಜ್ಞೇಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ ॥ ೧೮ ॥

ತಾನಿ ಸರ್ವಾಣಿ ಸಂಧಾಯ ಮನಃಷಷ್ಠಾನಿ ಮೇಧಯಾ ।
ಆತ್ಮತೃಪ್ತಃ ಸ ಏವಾಸೀದ್ಬಹುಚಿಂತ್ಯಮಚಿಂತಯನ್ ॥ ೧೯ ॥

ಗೋಚರೇಭ್ಯೋ ನಿವೃತ್ತಾನಿ ಯದಾ ಸ್ಥಾಸ್ಯಂತಿ ವೇಶ್ಮನಿ ।
ತದಾ ಚೈವಾತ್ಮನಾತ್ಮಾನಂ ಪರಂ ದ್ರಕ್ಷ್ಯಥ ಶಾಶ್ವತಂ ॥ ೨೦ ॥

ಸರ್ವಾತ್ಮಾನಂ ಮಹಾತ್ಮಾನಂ ವಿಧೂಮಮಿವ ಪಾವಕಂ ।
ಪ್ರಪಶ್ಯಂತಿ ಮಹಾತ್ಮಾನಂ ಬ್ರಾಹ್ಮಣಾ ಯೇ ಮನೀಷಿಣಃ ॥ ೨೧ ॥

ಸಾಧಕನು ವಿಷಯಗಳಕಡೆಗೆ ಹೋಗುತ್ತಿರುವ ಬಲವಾದ ಇಂದ್ರಿಯಗಳನ್ನು ತಂದೆಯು ಮನಬಂದಮಾರ್ಗದಲ್ಲಿ ನಡೆಯುವ ತನ್ನ ಮಕ್ಕಳನ್ನು ಸರಿಯಾದ ಮಾರ್ಗಕ್ಕೆ ತಿರುಗಿಸುವಂತೆ ಬುದ್ಧಿಯಿಂದ ತಡೆದು ನಿಲ್ಲಿಸಬೇಕು. ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯನ್ನೇ ಶ್ರೇಷ್ಠವಾದ ತಪಸ್ಸೆಂದು ಕರೆಯುವರು. ಮನಸ್ಸಿನೊಡನೆ ಕೂಡಿದ ಆರು ಇಂದ್ರಿಯಗಳನ್ನು ಬುದ್ಧಿಯಿಂದ ಒಟ್ಟಿಗೆ ಸೇರಿಸಿ ಮನಸ್ಸಿನಲ್ಲಿ ಯಾವ ಯೋಚನೆಯನ್ನೂ ಮಾಡದೆ ತೃಪ್ತನಾಗಿರುವ ಮನುಷ್ಯನು ವಿಷಯಗಳಿಂದ ಹಿಂದುರುಗಿದ ಮನಸ್ಸನ್ನು ಒಂದೆಡೆಯಲ್ಲಿ ನೆಲೆಯಾಗಿ ನಿಲ್ಲಿಸಿದಾಗ ಶಾಶ್ವತನಾದ ಪರಮಾತ್ಮನನ್ನು ನೋಡುವನು.

೨೧-೨೫. ಬುದ್ಧಿವಂತರೂ ಬ್ರಹ್ಮನಿಷ್ಠರೂ ಆದ ಬ್ರಾಹ್ಮಣರು ಸರ್ವಸ್ವರೂಪನೂ ಮಹಾಮಹಿಮನೂ ಆದ, ಹೊಗೆಯಿಲ್ಲದ ಅಗ್ನಿಯಂತೆ ಪ್ರಕಾಶಿಸುವ ಪರಮಾತ್ಮನನ್ನು ನೋಡುವರು. ಹೂ ಹಣ್ಣುಗಳಿಂದ ತುಂಬಿದ ಅನೇಕ ಕೊಂಬೆಗಳುಳ್ಳ ದೊಡ್ಡ ಮರವು ತನ್ನ ಹೂ ಎಲ್ಲಿ, ಹಣ್ಣುಗಳೆಲ್ಲಿ ಎಂದು ಹೇಗೆ ನೋಡಿ ತಿಳಿಯಲಾರದೋ ಹಾಗೆ ನಾನು ಎಲ್ಲಿಗೆ ಹೋಗುವೆನು? ಎಲ್ಲಿಂದ

ಯಥಾ ಪುಷ್ಪಫಲೋಪೇತೋ ಬಹುಶಾಖೋ ಮಹಾದ್ರುಮಃ ।
ಆತ್ಮನೋ ನಾಭಿಜಾನೀತೇ ಕ್ವ ಮೇ ಪುಷ್ಪಂ ಕ್ವ ಮೇ ಫಲಂ ॥ ೨೨ ॥

ಏವಮಾತ್ಮಾ ನ ಜಾನೀತೇ ಕ್ವ ಗಮಿಷ್ಯೇ ಕುತೋಽನ್ವಹಂ ।
ಅನ್ಯೋ ಹ್ಯಸ್ಯಾಂತರಾತ್ಮಾಸ್ತಿ ಯಃ ಸರ್ವಮನುಪಶ್ಯತಿ ॥ ೨೩ ॥

ಜ್ಞಾನದೀಪೇನ ದೀಪ್ತೇನ ಪಶ್ಯತ್ಯಾತ್ಮಾನಮಾತ್ಮನಾ ।
ದೃಷ್ಟ್ವಾತ್ಮಾನಂ ತಥಾ ಯೂಯಂ ವಿರಾಗಾ ಭವತ ದ್ವಿಜಾಃ ॥ ೨೪ ॥

ವಿಮುಕ್ತಾಃ ಸರ್ವಪಾಪೇಭ್ಯೋ ಮುಕ್ತತ್ವಚ ಇವೋರಗಾಃ ।
ಪರಾಂ ಬುದ್ಧಿಮವಾಪ್ಯೇಹಾಪ್ಯಚಿಂತಾ ವಿಗತಜ್ವರಾಃ ॥ ೨೫ ॥

ಸರ್ವತಃಸ್ರೋತಸಂ ಘೋರಾಂ ನದೀಂ ಲೋಕಪ್ರವಾಹಿಣೀಂ ।
ಪಂಚೇಂದ್ರಿಯಗ್ರಾಹವತೀಂ ಮನಃಸಂಕಲ್ಪರೋಧಸಂ ॥ ೨೬ ॥

ಬಂದೆನು ಎಂಬುದನ್ನು ಜೀವಾತ್ಮನು ತಿಳಿಯಲಾರನು. ಎಲ್ಲವನ್ನೂ ತಿಳಿಯುವ ಶಕ್ತಿಯುಳ್ಳ ಅಂತರಾತ್ಮನೊಬ್ಬನು ಈ ಜೀವಾತ್ಮನಿಗಿಂತ ಬೇರೆಯಾಗಿರುವನು. ಆ ಅಂತರಾತ್ಮನು ಪ್ರಕಾಶವಾದ ಜ್ಞಾನವೆಂಬ ದೀಪದಿಂದ ಆತ್ಮನನ್ನು ನೋಡುವನು. ಎಲೈ ಋಷಿಗಳೇ, ಹಾಗೆಯೇ ನೀವೂ ಆತ್ಮನನ್ನು ನೋಡಿ ವೈರಾಗ್ಯವನ್ನು ಪಡೆಯಿರಿ. ಆಗ ನೀವು ಪರೆಯನ್ನು ಬಿಟ್ಟ ಹಾವಿನಂತೆ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಉತ್ತಮವಾದ ಬುದ್ಧಿಯನ್ನು ಹೊಂದಿ ಲೋಕ ವ್ಯವಹಾರದಲ್ಲಿದ್ದರೂ ಯಾವ ಚಿಂತೆಯೂ ದುಃಖವೂಯಿಲ್ಲದೆ ಇರುವಿರಿ.

೨೬-೨೮. ಭಯಂಕರವಾದ ಪಂಚೇಂದ್ರಿಯಗಳೆಂಬ ಮೊಸಳೆಗಳೂ ಮನಸ್ಸಿನ ಸಂಕಲ್ಪವೆಂಬ ದಡಗಳೂ ಉಳ್ಳ, ಲೋಭ ಮೋಹನೆಂಬ ಹುಲ್ಲಿನಿಂದ ಆವರಿಸಿದುದೂ ಕಾಮಕ್ರೋಧಗಳೆಂಬ ಹಾವುಗಳಿಂದ ಕೂಡಿದುದೂ ಸತ್ಯವೆಂಬ ನೀರೂ ಸುಳ್ಳೆಂಬ ಚಲನೆಯೂ ಕೋಪವೆಂಬ ಕೆಸರೂ ಉಳ್ಳ, ಪ್ರಕೃತಿ

ಲೋಭಮೋಹತೃಣಚ್ಛನ್ನಾಂ ಕಾಮಕ್ರೋಧಸರೀಸೃಪಾಂ ।
ಸತ್ಯತೀರ್ಥಾನೃತಕ್ಷೋಭಾಂ ಕ್ರೋಧಪಂಕಾಂ ಸರಿದ್ವರಾಂ ॥ ೨೭ ॥

ಅವ್ಯಕ್ತಪ್ರಭವಾಂ ಶೀಘ್ರಾಂ ಕಾಮಕ್ರೋಧಸಮಾಕುಲಾಂ ।
ಪ್ರತರಧ್ವಂ ನದೀಂ ಬುದ್ಧ್ಯಾ ದುಸ್ತರಾಮಕೃತಾತ್ಮಭಿಃ ॥ ೨೮ ॥

ಸಂಸಾರಸಾಗರಗಮಾಂ ಯೋನಿಪಾತಾಲದುಸ್ತರಾಂ ।
ಆತ್ಮಜನ್ಮೋದ್ಭವಾಂ ತಾಂ ತು ಜಿಹ್ವಾವರ್ತದುರಾಸದಾಂ ॥ ೨೯ ॥

ಯಾಂ ತರಂತಿ ಕೃತಪ್ರಜ್ಞಾ ಧೃತಿಮಂತೋ ಮನೀಷಿಣಃ ।
ತಾಂ ತೀರ್ಣಃ ಸರ್ವತೋ ಮುಕ್ತೋ ವಿಧೂತಾತ್ಮಾತ್ಮವಾನ್ ಶುಚಿಃ॥ ೩೦ ॥

ಉತ್ತಮಾಂ ಬುದ್ಧಿಮಾಸ್ಥಾಯ ಬ್ರಹ್ಮಭೂಯಾಯ ಕಲ್ಪತೇ ।
ಉತ್ತೀರ್ಣಃ ಸರ್ವಸಂಕ್ಲೇಶಾನ್ಪ್ರಸನ್ನಾತ್ಮಾ ವಿಕಲ್ಮಷಃ ॥ ೩೧ ॥

ಯಿಂದ ಹುಟ್ಟಿ ಮಹಾವೇಗವಾಗಿ ಎಲ್ಲ ದಿಕ್ಕಿಗೂ ಹರಿಯುತ್ತ ಕಾಮಕ್ರೋಧಗಳೆಂಬ ಪ್ರವಾಹವುಳ್ಳ ,ಪಾಪಿಗಳಿಗೆ ದಾಟಲಸಾಧ್ಯವಾದ ಸಂಸಾರವೆಂಬ ನದಿಯನ್ನು ನಿಮ್ಮ ಬುದ್ಧಿಶಕ್ತಿಯಿಂದ ದಾಟಿರಿ.

೨೯-೩೧. ಜನನ ಮರಣವೆಂಬ ಸಂಸಾರಸಮುದ್ರಕ್ಕೆ ಹೋಗಿಸೇರುವ, ಅನೇಕ ಜನ್ಮಗಳೆಂಬ ಪಾತಾಳದಷ್ಟು ಆಳವಾದುದರಿಂದ ದಾಟಲಸಾಧ್ಯವಾದ, ನಾಲಗೆಯ ರುಚಿಯೆಂಬ ಸುಳಿಗಳಿಂದಕೂಡಿದ ಪುನರ್ಜನ್ಮವೆಂಬ ನದಿಯನ್ನು ಬುದ್ಧಿವಂತರೂ ಧೈರ್ಯಶಾಲಿಗಳೂ ಆದ ಯಾವ ಜ್ಞಾನಿಗಳು ದಾಟುವರೋ ಅವರೇ ಪರಿಶುದ್ಧರೂ ಜೀವತ್ವವನ್ನು ಬಿಟ್ಟವರೂ ಮುಕ್ತರೂ ಎನಿಸುವರು. ಸಮಸ್ತ ಕ್ಲೇಶಗಳನ್ನೂ ದಾಟಿ ಪರಿಶುದ್ಧ ಮನಸ್ಸಿನಿಂದಕೂಡಿ ಕೆಟ್ಟ ಆಲೋಚನೆಗಳಿಲ್ಲದೆ ಉತ್ತಮವಾದ ಬುದ್ಧಿಯನ್ನು ಪಡೆದವನು ಮಹಾಮಹಿಮನಾದ ಪರಬ್ರಹ್ಮನ ಪದವಿಯನ್ನು ಹೊಂದುವನು.

ಭೂಯಿಷ್ಠಾನೀವ ಭೂತಾನಿ ಸರ್ವಸ್ಥಾನಾನ್ನಿರೀಕ್ಷ್ಯ ಚ ।
ಅಕ್ರುಧ್ಯನ್ನಪ್ರಸೀದಂಶ್ಚ ನನೃಶಂಸಮತಿಸ್ತಥಾ ॥ ೩೨ ॥

ತತೋ ದ್ರಕ್ಷ್ಯಥ ಸರ್ವೇಷಾಂ ಭೂತಾನಾಂ ಪ್ರಭವಾಪ್ಯಯಂ ।
ಏತದ್ಧಿ ಸರ್ವಧರ್ಮೇಭ್ಯೋ ವಿಶಿಷ್ಟಂ ಮೇನಿರೇ ಬುಧಾಃ ॥ ೩೩ ॥

ಧರ್ಮಂ ಧರ್ಮಭೃತಾಂ ಶ್ರೇಷ್ಠಾ ಮುನಯಃ ಸತ್ಯದರ್ಶಿನಃ ।
ಆತ್ಮನೋ ವ್ಯಾಪಿನೋ ವಿಪ್ರಾ ಇತಿ ಪುತ್ರಾನುಶಾಸನಂ ॥ ೩೪ ॥

ಪ್ರಯತಾಯ ಪ್ರವಕ್ತವ್ಯಂ ಹಿತಾಯಾನುಗತಾಯ ಚ ।
ಆತ್ಮಜ್ಞಾನಮಿದಂ ಗುಹ್ಯಂ ಸರ್ವಗುಹ್ಯತಮಂ ಮಹತ್ ॥ ೩೫ ॥

ಅಬ್ರುವಂ ಯದಹಂ ವಿಪ್ರಾ ಆತ್ಮಸಾಕ್ಷಿಕಮಂಜಸಾ ।
ನೈವ ಸ್ತ್ರೀ ನ ಪುಮಾನೇವಂ ನ ಚೈವೇದಂ ನಪುಂಸಕಂ ॥ ೩೬ ॥

೩೨-೩೫. ಲೋಕದಲ್ಲಿರುವ ಅನೇಕ ಜೀವರುಗಳನ್ನು ನೋಡಿ ಕೋಪಗೊಳ್ಳದೆಯೂ ಅನುಗ್ರಹ ಬುದ್ಧಿಯಾಗಲಿ ಹಿಂಸಾಬುದ್ಧಿಯಾಗಲಿ ಇಲ್ಲದೆ ಇರುವ ಮನುಷ್ಯನು ಸಮಸ್ತ ಭೂತಗಳ ಉತ್ಪತ್ತಿ ನಾಶಗಳನ್ನು ತಿಳಿಯುವನು. ಇದೇ ಸಮಸ್ತ ಧರ್ಮಗಳಿಗಿಂತ ಉತ್ತಮವಾದುದೆಂದು ವಿದ್ವಾಂಸರು ತಿಳಿದಿರುವರು. ಸರ್ವವ್ಯಾಪಿಗಳೂ ಆತ್ಮಸ್ವರೂಪರೂ ಸತ್ಯಸ್ವರೂಪನಾದ ಪರಮಾತ್ಮನನ್ನು ತಿಳಿದವರೂ ತಪಸ್ವಿಗಳೂ ಧರ್ಮಾಚರಣೆಯಲ್ಲಿ ಶ್ರೇಷ್ಠರೂ ಆದ ಎಲೈ ಋಷಿಗಳೇ, ಈ ಧರ್ಮವನ್ನು ನಿಮ್ಮ ಪುತ್ರರಿಗೂ ಉಪದೇಶಮಾಡತಕ್ಕುದು. ಈ ಆತ್ಮಜ್ಞಾನವು ಅತ್ಯಂತ ಗೋಪ್ಯವಾದುದು. ಮಹಾಮಹಿಮೆಯುಳ್ಳುದು. ಪ್ರೀತಿಪಾತ್ರನೂ ಧರ್ಮವನ್ನನುಸರಿಸುವವನೂ ಪ್ರಯತ್ನಶೀಲನೂ ಆದ ಶಿಷ್ಯನಿಗೆ ಇದನ್ನು ಹೇಳಬೇಕು.

೩೬-೩೯. ಎಲೈ ಬ್ರಾಹ್ಮಣರೇ, ಆತ್ಮಸಾಕ್ಷಿಸ್ವರೂಪವಾದ ಪುರುಷನೂ ಸ್ತ್ರೀಯೂ ನಪುಂಸಕನೂ ಅಲ್ಲದ, ದುಃಖ ಸುಖವೂಯಿಲ್ಲದ, ತ್ರಿಕಾಲಸ್ವರೂಪವಾದ, ನಾನು ಹೇಳಿದ ಪರಬ್ರಹ್ಮರೂಪವನ್ನು ಪುರುಷನಾಗಲಿ ಸ್ತ್ರೀಯಾಗಲಿ ತಿಳಿದಲ್ಲಿ ಪುನರ್ಜನ್ಮವನ್ನು ಅವರು ಪಡೆಯಲಾರರು. ಈಗಲೂ ಇರುವ ಮತ್ತು ಇಲ್ಲ

ಅದುಃಖಮಸುಖಂ ಬ್ರಹ್ಮ ಭೂತಭವ್ಯಭವಾತ್ಮಕಂ ।
ಜ್ಞಾತ್ವಾ ತತ್ತ್ವಂ ಪುಮಾನ್ಸ್ತ್ರೀ ವಾ ಪುನರ್ಭವಮವಾಪ್ನುಯಾತ್ ॥ ೩೭ ॥

ಯಥಾ ಮತಾನಿ ಸರ್ವಾಣಿ ತಥೈತಾನಿ ಯಥಾ ತಥಾ ।
ಕಥಿತಾನಿ ಮಯಾ ವಿಪ್ರಾ ಭವಂತಿ ನ ಭವಂತಿ ಚ ॥ ೩೮ ॥

ತತ್ಪ್ರೀತಿಯುಕ್ತೇನ ಗುಣಾನ್ವಿತೇನ
ಪುತ್ರೇಣ ಸತ್ಪುತ್ರದಯಾನ್ವಿತೇನ ।
ದೃಷ್ಟ್ವಾ ಹಿತಂ ಪ್ರೀತಮನಾ ಯದರ್ಥಂ
ಬ್ರೂಯಾತ್ಸುತಸ್ಯೇಹ ಯದುಕ್ತಮೇತತ್ ॥ ೩೯ ॥

॥ ಮುನಯ ಊಚುಃ ॥

ಮೋಕ್ಷಃ ಪಿತಾಮಹೇನೋಕ್ತ ಉಪಾಯಾನ್ನಾನುಪಾಯತಃ ।
ತಮುಪಾಯಂ ಯಥಾನ್ಯಾಯಂ ಶ್ರೋತುಮಿಚ್ಛಾಮಹೇ ಮುನೇ ॥ ೪೦ ॥

ದಿರುವ ಸಮಸ್ತ ಮತಗಳನ್ನೂ ವಿಚಾರಮಾಡಿ ಯುಕ್ತಾಯುಕ್ತವನ್ನು ವಿಮರ್ಶಿಸಿ ನಾನು ಇದನ್ನು ನಿಮಗೆ ಹೇಳಿರುವೆನು. ಎಲೈ ಬ್ರಾಹ್ಮಣರೇ, ನಾನು ಹೇಳಿದ ಈ ವಿಷಯವನ್ನು ಪ್ರೀತಿಯಿಂದಲೂ ಸದ್ಗುಣಗಳಿಂದಲೂ ದಯೆಯಿಂದಲೂ ಕೂಡಿದ ಪುತ್ರನಿಗೆ ಅವನ ಹಿತವನ್ನು ಬಯಸಿ ವಂಶಪಾರ್ಯಂಪರ್ಯವಾಗಿ ಉಪದೇಶಮಾಡುತ್ತಾ ಬರಬೇಕು.

೪೦-೪೩. ಋಷಿಗಳು ಕೇಳುವರು :—ಬ್ರಹ್ಮನು ಮೋಕ್ಷವನ್ನು ಹೊಂದುವುದಕ್ಕೆ ಉಪಾಯವನ್ನು ಹೇಳಿರುವನಷ್ಟೆ. ಆ ಮಾರ್ಗವನ್ನನುಸರಿಸಿದ ಆ ಉಪಾಯವಾವುದು ? ಅದನ್ನು ನಮಗೆ ಹೇಳಬೇಕು ಎನ್ನಲು, ವ್ಯಾಸನು ಹೇಳಿದನು—ಪಾಪರಹಿತರೂ ಬುದ್ಧಿವಂತರೂ ಆದ ಎಲೈ ಋಷಿಗಳೇ, ಯುಕ್ತಿಯಿಂದಲೇ ಸಮಸ್ತ ಪ್ರಯೋಜನವನ್ನೂ ಹೊಂದಬೇಕೆಂದು ಉಪಾಯವನ್ನು ಹುಡುಕುತ್ತಿರುವಿರಿ. ಇದು ಯುಕ್ತವಾದುದೇ ಸರಿ. ನಿಮ್ಮ ಸೂಕ್ಷ್ಮಬುದ್ಧಿಯು ನನಗೆ ತಿಳಿಯಿತು. ಘಟವನ್ನು ಮಾಡಬೇಕೆಂದಿರುವವನು

॥ ವ್ಯಾಸ ಉವಾಚ ॥

ಅಸ್ಮಾಸು ತನ್ಮಹಾಪ್ರಾಜ್ಞಾ ಯುಕ್ತಂ ನಿಪುಣದರ್ಶನಂ ।
ಯದುಪಾಯೇನ ಸರ್ವಾರ್ಥಾನ್ಮೃಗಯಧ್ವಂ ಸದಾನಘಾಃ ॥ ೪೧ ॥

ಘಟೋಪಕರಣೇ ಬುದ್ಧಿರ್ಘಟೋತ್ಪತ್ತೌ ನ ಸಾ ಮತಾ ।
ಏವಂ ಧರ್ಮಾದ್ಯುಪಾಯಾರ್ಥೇ ನಾನ್ಯಧರ್ಮೇಷು ಕಾರಣಂ ॥ ೪೨ ॥

ಪೂರ್ವೇ ಸಮುದ್ರೇ ಯಃ ಪಂಥಾ ನ ಸ ಗಚ್ಛತಿ ಪಶ್ಚಿಮಂ ।
ಏಕಃ ಪಂಥಾ ಹಿ ಮೋಕ್ಷಸ್ಯ ತಚ್ಛೃಣುಧ್ವಂ ಮಮಾನಘಾಃ ॥ ೪೩ ॥

ಕ್ಷಮಯಾ ಕ್ರೋಧಮುಚ್ಛಿಂದ್ಯಾತ್ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾದ್ಧೀರೋ ನಿದ್ರಾಮುಚ್ಛೇತ್ತುಮರ್ಹತಿ ॥ ೪೪ ॥

ಅಪ್ರಮಾದಾದ್ಭಯಂ ರಕ್ಷೇದ್ರಕ್ಷೇತ್ಕ್ಷೇತ್ರಂ ಚ ಸಂವಿದಂ ।
ಇಚ್ಛಾಂ ದ್ವೇಷಂ ಚ ಕಾಮಂ ಚ ಧೈರ್ಯೇಣ ವಿನಿವರ್ತಯೇತ್ ॥ ೪೫ ॥

ಅದನ್ನು ಮಾಡುವುದಕ್ಕೆ ಬೇಕಾದ ಮಣ್ಣು, ಚಕ್ರ, ದಂಡ, ಮುಂತಾದ ಉಪಕರಣಗಳ ವಿಷಯದಲ್ಲಿ ಮನಸ್ಸು ಮಾಡಿದ ಮಾತ್ರಕ್ಕೇ ಘಟವನ್ನು ಮಾಡಿದಂತಾಗಲಿಲ್ಲ. ಹೀಗೆಯೇ ಧರ್ಮಾಚರಣೆ ಮುಂತಾದ ಉಪಾಯಗಳು ಮೋಕ್ಷಕಾರಣವಾಗಲಾರವು. ಪೂರ್ವದಿಕ್ಕಿನ ಸಮುದ್ರಕ್ಕೆ ಹೋಗುವ ದಾರಿಯು ಪಶ್ಚಿಮಸಮುದ್ರಕ್ಕೆ ಹೋಗುವುದಿಲ್ಲ. ಮೋಕ್ಷಕ್ಕೆ ಒಂದೇ ಒಂದು ದಾರಿಯಿರುವುದು. ಅದನ್ನು ಹೇಳುವೆನು ಕೇಳಿರಿ.

೪೪-೪೯. ಕ್ಷಮಾಗುಣದಿಂದ ಕೋಪವನ್ನೂ, ಮನಸ್ಸಿನ ಸಂಕಲ್ಪವನ್ನು ಬಿಡುವುದರಿಂದ ಕಾಮವನ್ನೂ, ಸಾತ್ವಿಕ ಗುಣಾಭ್ಯಾಸದಿಂದ ನಿದ್ರೆಯನ್ನೂ ಕೆಲಸವಲ್ಲಿ ತಪ್ಪು ಮಾಡದಿರುವುದರಿಂದ ಭಯವನ್ನೂ ಜಯಿಸಬೇಕು. ಶರೀರವನ್ನೂ ಜ್ಞಾನವನ್ನೂ ಕಾಪಾಡಿಕೊಳ್ಳಬೇಕು. ಧೈರ್ಯದಿಂದ ಇಚ್ಛೆಯನ್ನೂ ದ್ವೇಷವನ್ನೂ ಕಾಮವನ್ನೂ ಬಿಡಬೇಕು. ತತ್ವಜ್ಞನಾದವನು ಜ್ಞಾನಾಭ್ಯಾಸದಿಂದ ನಿದ್ರೆಯನ್ನೂ ಪ್ರತಿಭಾಶಕ್ತಿಯನ್ನೂ, ಹಿತವೂ ಮಿತವೂ ಸುಲಭವಾಗಿ

ನಿದ್ರಾಂ ಚ ಪ್ರತಿಭಾಂ ಚೈವ ಜ್ಞಾನಾಭ್ಯಾಸೇನ ತತ್ತ್ವವಿತ್ ।
ಉಪದ್ರವಾಂಸ್ತಥಾ ಯೋಗೀ ಹಿತಜೀರ್ಣಮಿತಾಶನಾತ್ ॥ ೪೬ ॥

ಲೋಭಂ ಮೋಹಂ ಚ ಸಂತೋಷಾದ್ವಿಷಯಾಂಸ್ತತ್ತ್ವದರ್ಶನಾತ್ ।
ಅನುಕ್ರೋಶಾದಧರ್ಮಂ ಚ ಜಯೇದ್ಧರ್ಮಮುಪೇಕ್ಷಯಾ ॥ ೪೭ ॥

ಆಯತ್ಯಾ ಚ ಜಯೇದಾಶಾಂ ಸಾಮರ್ಥ್ಯಂ ಸಂಗವರ್ಜನಾತ್ ।
ಅನಿತ್ಯತ್ವೇನ ಚ ಸ್ನೇಹಂ ಕ್ಷುಧಾಂ ಯೋಗೇನ ಪಂಡಿತಃ ॥ ೪೮ ॥

ಕಾರುಣ್ಯೇನಾತ್ಮನಾತ್ಮಾನಂ ತೃಷ್ಣಾಂ ಚ ಪರಿತೋಷತಃ ।
ಉತ್ಥಾನೇನ ಜಯೇತ್ತನ್ದ್ರಾಂ ವಿತರ್ಕಂ ನಿಶ್ಚಯಾಜ್ಜಯೇತ್ ॥ ೪೯ ॥

ಮೌನೇನ ಬಹುಭಾಷಾಂ ಚ ಶೌರ್ಯೇಣ ಚ ಭಯಂ ಜಯೇತ್ ।
ಯಚ್ಛೇದ್ವಾಙ್ಮನಸೀ ಬುದ್ಧ್ಯಾ ತಾಂ ಯಚ್ಛೇಜ್ಜ್ಞಾನಚಕ್ಷುಷಾ ॥ ೫೦ ॥

ಜ್ಞಾನಮಾತ್ಮಾ ಮಹಾನ್ಯಚ್ಛೇತ್ತಂ ಯಚ್ಛೇಚ್ಛಾಂತಿರಾತ್ಮನಃ ।
ತದೇತದುಪಶಾಂತೇನ ಬೋದ್ಧವ್ಯಂ ಶುಚಿಕರ್ಮಣಾ ॥ ೫೧ ॥

ಜೀರ್ಣಿಸುವುದೂ ಆದ ಆಹಾರದಿಂದ ಯೋಗಕ್ಕೆ ಉಂಟಾಗುವ ಉಪದ್ರವಗಳನ್ನೂ, ಸಂತೋಷದಿಂದ ಲೋಭ ಮೋಹಗಳನ್ನೂ ತತ್ವಜ್ಞಾನದಿಂದ ವಿಷಯಾಸಕ್ತಿಯನ್ನೂ ಪ್ರಪಂಚದ ಅನಿತ್ಯತ್ವಜ್ಞಾನದಿಂದ ಸ್ನೇಹವನ್ನೂ ಯೋಗಾಭ್ಯಾಸದಿಂದ ಹಸಿವನ್ನೂ ಎಚ್ಚರಿಕೆಯಿಂದ ನಿದ್ರೆಯನ್ನೂ ನಿಶ್ಚಯಜ್ಞಾನದಿಂದ ಸಂದೇಹವನ್ನೂ ಜಯಿಸಬೇಕು.

೫೦-೫೧. ಮೌನದಿಂದ ಹೆಚ್ಚುಮಾತನಾಡುವುದನ್ನೂ ಪರಾಕ್ರಮದಿಂದ ಭಯವನ್ನೂ ಜಯಿಸಬೇಕು. ಮಾತನ್ನೂ ಮನಸ್ಸನ್ನೂ ಬುದ್ಧಿಗೆ ಅಧೀನವಾಗಿ ಮಾಡಬೇಕು. ಆ ಬುದ್ಧಿಯನ್ನು ಜ್ಞಾನಕ್ಕೆ ಅಧೀನವಾಗಿ ಮಾಡಬೇಕು. ಜ್ಞಾನವನ್ನು ಮಹತ್ತತ್ವಕ್ಕೂ ಮಹತ್ತತ್ವವನ್ನೂ ಶಾಂತವಾದ ಆತ್ಮತತ್ವಕ್ಕೂ ಅಧೀನಮಾಡಬೇಕು. ಆತ್ಮತತ್ವವನ್ನು ಉಪಶಾಂತವಾದ ಪರಿಶುದ್ಧವಾದ ಕರ್ಮದಿಂದ ತಿಳಿಯಬೇಕು. ಕಾಮ, ಕ್ರೋಧ, ಲೋಭ, ಭಯ, ಸ್ವಪ್ನ,

ಯೋಗದೋಷಾನ್ಸಮುಚ್ಛಿದ್ಯ ಪಂಚ ಯಾನ್ಕವಯೋ ವಿದುಃ ।
ಕಾಮಂ ಕ್ರೋಧಂ ಚ ಲೋಭಂ ಚ ಭಯಂ ಸ್ವಪ್ನಂ ಚ ಪಂಚಮಂ ॥ ೫೨ ॥

ಪರಿತ್ಯಜ್ಯ ನಿಷೇವೇತ ಯಥಾವದ್ಯೋಗಸಾಧನಾತ್ ।
ಧ್ಯಾನಮಧ್ಯಯನಂ ದಾನಂ ಸತ್ಯಂ ಹ್ರೀರಾರ್ಜವಂ ಕ್ಷಮಾ ॥ ೫೩ ॥

ಶೌಚಮಾಚಾರತಃ ಶುದ್ಧಿರಿಂದ್ರಿಯಾಣಾಂ ಚ ಸಂಯಮಃ ।
ಏತೈರ್ವಿವರ್ಧತೇ ತೇಜಃ ಪಾಪ್ಮಾನಮುಪಹಂತಿ ಚ ॥ ೫೪ ॥

ಸಿದ್ಧ್ಯಂತಿ ಚಾಸ್ಯ ಸಂಕಲ್ಪಾ ವಿಜ್ಞಾನಂ ಚ ಪ್ರವರ್ತತೇ ।
ಧೂತಪಾಪಃ ಸ ತೇಜಸ್ವೀ ಲಘ್ವಾಹಾರೋ ಜಿತೇಂದ್ರಿಯಃ ॥ ೫೫ ॥

ಕಾಮಕ್ರೋಧೌ ವಶೇ ಕೃತ್ವಾ ನಿರ್ವಿಶೇದ್ಬ್ರಹ್ಮಣಃ ಪದಂ ।
ಅಮೂಢತ್ವಮಸಂಗಿತ್ವಂ ಕಾಮಕ್ರೋಧವಿವರ್ಜನಂ ॥ ೫೬ ॥

ಎಂಬ ಐದು ವಿಷಯಗಳನ್ನು ಬಿಟ್ಟು ಶಾಸ್ತ್ರಾನುಸಾರವಾದ ಸಾಧನಗಳಿಂದ ಯೋಗಾಭ್ಯಾಸವನ್ನು ಮಾಡಬೇಕು. ಧ್ಯಾನ, ವೇದಾಧ್ಯಯನ, ದಾನ, ಸತ್ಯ ಭಾಷಣ, ನಾಚಿಕೆ, ಸರಳತೆ, ಸಹನೆ, ಶುಚಿತ್ವ, ಶುದ್ಧವಾದ ಆಚಾರ, ಇಂದ್ರಿಯ ನಿಗ್ರಹ, ಇವುಗಳಿಂದ ತೇಜಸ್ಸು ಹೆಚ್ಚುವುದು. ಪಾಪಗಳು ನಾಶವಾಗುವುವು.

೫೫-೫೭. ಇಂತಹ ಯೋಗಿಯ ಸಂಕಲ್ಪಗಳು ಸಿದ್ಧಿಸುವುವು. ಜ್ಞಾನವು ತನ್ನ ಕೆಲಸವನ್ನು ಮಾಡುವುದು. ಆ ಯೋಗಿಯು ಪಾಪಗಳನ್ನು ಕಳೆದು ಕೊಂಡು ತೇಜಸ್ಸುಳ್ಳವನಾಗಿ ಸ್ವಲ್ಪವಾದ ಆಹಾರವನ್ನು ಮಾಡುತ್ತಾ ಇಂದ್ರಿಯ ಗಳನ್ನು ಜಯಿಸಿ ಕಾಮಕ್ರೋಧಗಳನ್ನು ತನ್ನಧೀನವಾಗಿ ಮಾಡಿಕೊಂಡು ಪರಬ್ರಹ್ಮನ ಪದವಿಯನ್ನು ಪಡೆವನು. ಅಜ್ಞಾನಿಯಾಗದಿರುವುದು, ವಿಶೇಷ ವಾದ ಲೋಕವ್ಯವಹಾರವನ್ನು ಬಿಟ್ಟಿರುವುದು, ಕಾಮಕ್ರೋಧಗಳಿಲ್ಲದೆ ಇರುವುದು, ಮತ್ತೊಬ್ಬರನ್ನು ಯಾಚಿಸದಿರುವುದು, ನಿಯಮಾನುಸಾರವಾಗಿ ನಡೆಯುವುದು,

ಅದೈನ್ಯಮನುದೀರ್ಣತ್ವಮನುದ್ವೇಗೋ ಹ್ಯವಸ್ಥಿತಿಃ ।
ಏಷ ಮಾರ್ಗೋ ಹಿ ಮೋಕ್ಷಸ್ಯ ಪ್ರಸನ್ನೋ ವಿಮಲಃ ಶುಚಿಃ ।
ತಥಾ ವಾಕ್ಕಾಯಮನಸಾಂ ನಿಯಮಾಃ ಕಾಮತೋಽವ್ಯಯಾಃ ॥ ೫೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸಾಂಖ್ಯಯೋಗನಿರೂಪಣಂ
ನಾಮಾಷ್ಟಾತ್ರಿಂಶದಧಿಕದ್ವಿಶತತಮೋಽಧ್ಯಾಯಃ

ಇವುಗಳೆಲ್ಲವೂ ಮೋಕ್ಷಕ್ಕೆ ಮಾರ್ಗಗಳಾಗಿರುವುವು. ಮುಖ್ಯವಾಗಿ ವಾಕ್ಕು, ಕಾಯ, ಮನಸ್ಸು, ಎಂಬ ತ್ರಿಕರಣಗಳ ಪರಿಶುದ್ಧತೆಯೂ ನಿಯಮಗಳೂ ಮೋಕ್ಷಕ್ಕೆ ನಾಶರಹಿತವಾದ ಮಾರ್ಗಗಳಾಗಿರುವುವು

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಸಾಂಖ್ಯಯೋಗನಿರೂಪಣೆಯೆಂಬ
ಇನ್ನೂರಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಸಾಂಖ್ಯಂ ಯೋಗಸ್ಯ ನೋ ವಿಪ್ರ ವಿಶೇಷಂ ವಕ್ತುಮರ್ಹಸಿ ।
ತವ ಧರ್ಮಜ್ಞ ಸರ್ವಂ ಹಿ ವಿದಿತಂ ಮುನಿಸತ್ತಮ ॥ ೧ ॥

॥ ವ್ಯಾಸ ಉವಾಚ ॥

ಸಾಂಖ್ಯಾಃ ಸಾಂಖ್ಯಂ ಪ್ರಶಂಸಂತಿ ಯೋಗಾನ್ಯೋಗವಿದುತ್ತಮಾಃ ।
ವದಂತಿ ಕಾರಣೈಃ ಶ್ರೇಷ್ಠೈಃ ಸ್ವಪಕ್ಷೋದ್ಭವನಾಯ ವೈ ॥ ೨ ॥

ಅನೀಶ್ವರಃ ಕಥಂ ಮುಚ್ಯೇದಿತ್ಯೇವಂ ಮುನಿಸತ್ತಮಾಃ ।
ವದಂತಿ ಕಾರಣೈಃ ಶ್ರೇಷ್ಠಂ ಯೋಗಂ ಸಮ್ಯಙ್ಮನೀಷಿಣಃ ॥ ೩ ॥

ಇನ್ನೂರಮೂವತ್ತೊಂಭತ್ತನೆಯ ಅಧ್ಯಾಯವು

೧. ಋಷಿಗಳು ಕೇಳಿದರು :—ಎಲೈ ವ್ಯಾಸಮುನಿಯೇ, ಧರ್ಮವನ್ನು ತಿಳಿದ ನಿನಗೆ ಸಮಸ್ತವೂ ತಿಳಿದಿರುವುದು. ಸಾಂಖ್ಯಶಾಸ್ತ್ರದಲ್ಲಿಯೂ ಯೋಗ ಶಾಸ್ತ್ರದಲ್ಲಿಯೂ ಇರುವ ವಿಶೇಷ ವಿಷಯಗಳನ್ನು ನಮಗೆ ಹೇಳಬೇಕು ಎನ್ನಲು,

೨-೩. ವ್ಯಾಸನು ಹೇಳಿದನು :—ಸಾಂಖ್ಯರು ಸಾಂಖ್ಯಶಾಸ್ತ್ರವನ್ನೂ ಯೋಗಿಗಳು ಯೋಗಶಾಸ್ತ್ರವನ್ನೂ ಹೊಗಳುವರು. ಅವರು ತಮ್ಮ ಪಕ್ಷವನ್ನು ಸಿದ್ಧಮಾಡುವುದಕ್ಕೆ ಕಾರಣಗಳನ್ನು ಹೇಳುವರು. ಋಷಿಶ್ರೇಷ್ಠರೇ ಕೇಳಿರಿ. ಬುದ್ಧಿವಂತರಾದವರು—ಸಾಂಖ್ಯಶಾಸ್ತ್ರಜ್ಞರು ಈಶ್ವರನಿಲ್ಲವೆಂದು ವಾದಮಾಡುವ ರಾದುದರಿಂದ ಈಶ್ವರನನ್ನು ತಿಳಿಯದ ಮನುಷ್ಯನಿಗೆ ಮುಕ್ತಿಯು ಹೇಗೆ ಬರುವುದು ? ಎಂಬ ಕಾರಣದಿಂದ ಯೋಗಶಾಸ್ತ್ರವೇ ಶ್ರೇಷ್ಠವೆಂಬುದಾಗಿ ಹೇಳುವರು.

ವದಂತಿ ಕಾರಣಂ ವೇದಂ ಸಾಂಖ್ಯಂ ಸಮಗ್ದ್ವಿಜಾತಯಃ ।
ವಿಜ್ಞಾಯೇಹ ಗತೀಃ ಸರ್ವಾ ವಿರಕ್ತೋ ವಿಷಯೇಷು ಯಃ ॥ ೪ ॥

ಊರ್ಧ್ವಂ ಸ ದೇಹಾತ್ಸುವ್ಯಕ್ತಂ ವಿಮುಚ್ಯೇದಿತಿ ನಾನ್ಯಥಾ ।
ಏತದಾಹುರ್ಮಹಾಪ್ರಾಜ್ಞಾಃ ಸಾಂಖ್ಯಂ ವೈ ಮೋಕ್ಷದರ್ಶನಂ ॥ ೫ ॥

ಸ್ವಪಕ್ಷೇ ಕಾರಣಂ ಗ್ರಾಹ್ಯಂ ಸಮರ್ಥಂ ವಚನಂ ಹಿತಂ ।
ಶಿಷ್ಟಾನಾಂ ಹಿ ಮತಂ ಗ್ರಾಹ್ಯಂ ಭವದ್ಭಿಃ ಶಿಷ್ಟಸಂಮತೈಃ ॥ ೬ ॥

ಪ್ರತ್ಯಕ್ಷಂ ಹೇತವೋ ಯೋಗಾಃ ಸಾಂಖ್ಯಾಃ ಶಾಸ್ತ್ರವಿನಿಶ್ಚಯಾಃ ।
ಉಭೇ ಚೈತೇ ಮತೇ ತತ್ತ್ವೇ ಸಮವೇತೇ ದ್ವಿಜೋತ್ತಮಾಃ ॥ ೭ ॥

ಉಭೇ ಚೈತೇ ಮತೇ ಜ್ಞಾತೇ ಮುನೀಂದ್ರಾಃ ಶಿಷ್ಟಸಂಮತೇ ।
ಅನುಷ್ಠಿತೇ ಯಥಾಶಾಸ್ತ್ರಂ ನಯೇತಾಂ ಪರಮಾಂ ಗತಿಂ ॥ ೮ ॥

೪-೬. ಬ್ರಾಹ್ಮಣರು ಸಾಂಖ್ಯಶಾಸ್ತ್ರಕ್ಕೆ ವೇದವೇ ಕಾರಣವೆಂಬುದಾಗಿ ಹೇಳುವರು. ಲೋಕದಲ್ಲಿ ಮನುಷ್ಯನಾದವನು ಇಹಲೋಕದ ಸಮಸ್ತ ಸುಖಗಳ ಸ್ವರೂಪವನ್ನು ಶಾಶ್ವತವಲ್ಲವೆಂದು ತಿಳಿದು ಇಂದ್ರಿಯಾರ್ಥಗಳಾದ ವಿಷಯಭೋಗಗಳ ವಿಷಯದಲ್ಲಿ ವೈರಾಗ್ಯವನ್ನು ಹೊಂದಿ ಈ ಶರೀರವನ್ನು ಬಿಟ್ಟಮೇಲೆ ಮೋಕ್ಷವನ್ನು ಹೊಂದುವನು. ಈ ಮಾರ್ಗವನ್ನು ಬಿಟ್ಟು ಮೋಕ್ಷಕ್ಕೆ ಬೇರೆ ಮಾರ್ಗವಿಲ್ಲವೆಂದು ಮಹಾ ಬುದ್ಧಿವಂತರಾದ ಸಾಂಖ್ಯರು ಮೋಕ್ಷಶಾಸ್ತ್ರವನ್ನು ಹೇಳುವರು. ಈ ವಿಷಯದಲ್ಲಿ ಜ್ಞಾನಕಾರಣವೂ ಮೋಕ್ಷಪ್ರತಿಪಾದನಸಮರ್ಥವೂ ಹಿತಕರವೂ ಆದ ವೇದವಚನಗಳನ್ನು ಪ್ರಮಾಣವಾಗಿ ತಿಳಿಯಬೇಕು. ಶಿಷ್ಟರಿಗೆ ಪ್ರೀತಿಪಾತ್ರರಾದ ನೀವು ಆ ಶಿಷ್ಟರ ಅಭಿಪ್ರಾಯವನ್ನು ಗ್ರಹಣಮಾಡಬೇಕು.

೭-೮. ಯೋಗಾಭ್ಯಾಸವು ಪ್ರತ್ಯಕ್ಷಫಲಕಾರಣವಾದುದು. ಸಾಂಖ್ಯಶಾಸ್ತ್ರವು ವಿಚಾರಮಾಡುವುದರಿಂದ ಮೋಕ್ಷ ವಿಷಯವನ್ನು ನಿಶ್ಚಯಿಸಿ ಹೇಳಿರುವುದು. ಎಲೈ ಬ್ರಾಹ್ಮಣರೇ, ತತ್ತ್ವವಿಷಯದಲ್ಲಿ ಈ ಸಾಂಖ್ಯ ಯೋಗ ಎಂಬೆರಡು ಮತಗಳೂ ಶಿಷ್ಟಸಮ್ಮತವಾದುವುಗಳು. ಶಾಸ್ತ್ರಾನುಸಾರವಾಗಿ ಅನುಷ್ಠಾನ

ತುಲ್ಯಂ ಶೌಚಂ ತಯೋರ್ಯುಕ್ತಂ ದಯಾ ಭೂತೇಷು ಚಾನಘಾಃ ।
ವ್ರತಾನಾಂ ಧಾರಣಂ ತುಲ್ಯಂ ದರ್ಶನಂ ತ್ವಸಮಂ ತಯೋಃ ॥ ೯ ॥

॥ ಮುನಯ ಊಚುಃ ॥

ಯದಿ ತುಲ್ಯಂ ವ್ರತಂ ಶೌಚಂ ದಯಾ ಚಾತ್ರ ಮಹಾಮುನೇ ।
ತುಲ್ಯಂ ತದ್ದರ್ಶನಂ ಕಸ್ಮಾತ್ತನ್ನೋ ಬ್ರೂಹಿ ದ್ವಿಜೋತ್ತಮ ॥ ೧೦ ॥

॥ ವ್ಯಾಸ ಉವಾಚ ॥

ರಾಗಂ ಮೋಹಂ ತಥಾ ಸ್ನೇಹಂ ಕಾಮಂ ಕ್ರೋಧಂ ಚ ಕೇವಲಂ ।
ಯೋಗಾಸ್ಥಿರೋದಿತಾನ್ದೋಷಾನ್ಪಂಚೈತಾನ್ಪ್ರಾಪ್ನುವಂತಿ ತಾನ್ ॥ ೧೧ ॥

ಯಥಾ ವಾನಿಮಿಷಾಃ ಸ್ಥೂಲಂ ಜಾಲಂ ಛಿತ್ತ್ವಾ ಪುನರ್ಜಲಂ ।
ಪ್ರಾಪ್ನುವಂತಿ ತಥಾ ಯೋಗಾತ್ತತ್ಪದಂ ವೀತಕಲ್ಮಷಾಃ ॥ ೧೨ ॥

ತಥೈವ ವಾಗುರಾಂ ಛಿತ್ತ್ವಾ ಬಲವಂತೋ ಯಥಾ ಮೃಗಾಃ ।
ಪ್ರಾಪ್ನುಯುರ್ವಿಮಲಂ ಮಾರ್ಗಂ ವಿಮುಕ್ತಾಃ ಸರ್ವಬಂಧನೈಃ ॥ ೧೩ ॥

ಮಾಡಿದರೆ ಪರಗತಿಯನ್ನು ಹೊಂದಿಸುವುವು. ಎಲೈ ಋಷಿಶ್ರೇಷ್ಠರೇ ಈ ಎರಡು ಶಾಸ್ತ್ರಗಳಿಗೂ ಶುಚಿತ್ವ ವ್ರತಾನುಷ್ಠಾನ ಭೂತದಯೆ ಇವು ಸಮಾನವಾದ ಗುಣಗಳಾಗಿರಬೇಕು. ಆದರೆ ಶಾಸ್ತ್ರಗಳು ಮಾತ್ರ ಬೇರೆಬೇರೆಯಾಗಿರುವುವು.

೧೦. ಋಷಿಗಳು ಕೇಳುವರು :—ಎಲೈ ಬ್ರಾಹ್ಮಣಶ್ರೇಷ್ಠನಾದ ವ್ಯಾಸನೇ, ಶುಚಿತ್ವ ವ್ರತಾನುಷ್ಠಾನ, ಭೂತದಯೆ ಇವುಗಳ ವಿಷಯದಲ್ಲಿ ಈ ಎರಡು ಶಾಸ್ತ್ರಗಳೂ ಸಮಾನವಾದಮೇಲೆ ಶಾಸ್ತ್ರಪದ್ಧತಿಯು ಏಕೆ ಸಮನಾಗಲಿಲ್ಲ ಆ ಕಾರಣವನ್ನು ನಮಗೆ ಹೇಳಬೇಕು ಎಂದರು.

೧೧-೧೩. ವ್ಯಾಸನು ಹೇಳಿದನು :—ಕಾಮ, ಕ್ರೋಧ, ಸ್ನೇಹ, ಪ್ರೀತಿ, ಅಜ್ಞಾನ ಎಂಬ ಐದು ದೋಷಗಳು ಯೋಗಿಗಳಿಗೆ ಉಂಟಾಗುವುವು. ಮೀನುಗಳು ಬಲೆಯನ್ನು ಕತ್ತರಿಸಿ ಮತ್ತೆ ನೀರಿಗೆ ಸೇರಿಕೊಳ್ಳುವಂತೆಯೂ ಬಲವಾದ ಮೃಗಗಳು ಬಲೆಯನ್ನು ಕತ್ತರಿಸಿ ತಮ್ಮ ಕಷ್ಟಗಳನ್ನು ಬಿಡಿಸಿಕೊಂಡು ಸರಿಯಾದ ದಾರಿಯನ್ನು ಸೇರುವಂತೆಯೂ ಯೋಗಿಗಳು ತಮ್ಮ ದೋಷಗಳನ್ನು ಕಳೆದುಕೊಂಡು ಪರಬ್ರಹ್ಮನ ಪದವಿಯನ್ನು ಹೊಂದುವರು.

ಲೋಭಜಾನಿ ತಥಾ ವಿಪ್ರಾ ಬಂಧನಾನಿ ಬಲಾನ್ವಿತಃ ।
ಛಿತ್ತ್ವಾ ಯೋಗಾತ್ಪರಂ ಮಾರ್ಗಂ ಗಚ್ಛಂತಿ ವಿಮಲಂ ಶುಭಂ ॥ ೧೪ ॥

ಅಚಲಾಸ್ತ್ವಾವಿಲಾ ವಿಪ್ರಾ ವಾಗುರಾಸು ತಥಾಪರೇ ।
ವಿನಶ್ಯಂತಿ ನ ಸಂದೇಹಸ್ತದ್ವದ್ಯೋಗಬಲಾದೃತೇ ॥ ೧೫ ॥

ಬಲಹೀನಾಶ್ಚ ವಿಪ್ರೇಂದ್ರಾ ಯಥಾ ಜಾಲಂ ಗತಾ ದ್ವಿಜಾಃ ।
ಬಂಧಂ ನ ಗಚ್ಛಂತ್ಯನಘಾ ಯೋಗಾಸ್ತೇ ತು ಸುದುರ್ಲಭಾಃ ॥ ೧೬ ॥

ಯಥಾ ಚ ಶಕುನಾಃ ಸೂಕ್ಷ್ಮಂ ಪ್ರಾಪ್ಯ ಜಾಲಮರಿಂದಮಾಃ ।
ತತ್ರಾಶಕ್ತಾ ವಿಪದ್ಯಂತೇ ಮುಚ್ಯಂತೇ ತು ಬಲಾನ್ವಿತಾಃ ॥ ೧೭ ॥

ಕರ್ಮಜೈರ್ಬಂಧನೈರ್ಬದ್ಧಾಸ್ತದ್ವದ್ಯೋಗಪರಾ ದ್ವಿಜಾಃ ।
ಅಬಲಾ ನ ವಿಮುಚ್ಯಂತೇ ಮುಚ್ಯಂತೇ ಚ ಬಲಾನ್ವಿತಾಃ ॥ ೧೮ ॥

೧೪-೧೮. ಎಲೈಬ್ರಾಹ್ಮಣರೇ, ಯೋಗಬಲವುಳ್ಳವರು ಅತ್ಯಾಸೆಯು ಉಂಟಾದ ಸಮಸ್ತ ಬಂಧಗಳನ್ನೂ ನಾಶಮಾಡಿ ಪರಿಶುದ್ಧವೂ, ಶುಭವೂ ಶ್ರೇಷ್ಠವೂ ಆದ ಮಾರ್ಗದಲ್ಲಿ ನಡೆಯುವರು. ಯೋಗಬಲವಿಲ್ಲದ ಜಡರು ಕಲ್ಮಷವಾದ ಮನಸ್ಸುಳ್ಳವರಾಗಿ ಬಲೆಯಲ್ಲಿ ಸಿಕ್ಕಿಕೊಂಡ ಮೃಗಗಳಂತೆ ಸಂಸಾರ ದಲ್ಲಿ ಸಿಕ್ಕಿ ನಾಶವಾಗುವರು. ಹಕ್ಕಿಗಳು ಸೂಕ್ಷ್ಮವಾದ ಬಲೆಗೆ ಸಿಕ್ಕಿದಮೇಲೆ ಬಲವಾದ ಹಕ್ಕಿಗಳು ತಪ್ಪಿಸಿಕೊಂಡು ಹೋಗಿ, ದುರ್ಬಲವಾದುವುಗಳು ನಾಶ ವಾಗುವಂತೆ ಯೋಗಬಲದಿಂದ ಕೂಡಿರುವರು ಬಂಧನೆಗೆ ಸಿಕ್ಕುವುದೇ ಇಲ್ಲ. ಸಿಕ್ಕಿದರೂ ತಪ್ಪಿಸಿಕೊಳ್ಳುವರು. ನಿರ್ದುಷ್ಟರಾದ ಇಂತಹ ಯೋಗಿಗಳು ದುರ್ಲಭರು. ಯೋಗದಲ್ಲಿ ಶಕ್ತಿಯಿಲ್ಲದವರು ಬಂಧಕ್ಕೆ ಸಿಕ್ಕಿ ದುಃಖದ ಬಿಡುಗಡೆಯನ್ನು ಹೊಂದುವುದೇ ಇಲ್ಲ. ಶಕ್ತಿಯುಳ್ಳವರು ಬಿಡಗಡೆಯನ್ನು ಹೊಂದುವರು.

ಅಲ್ಪಕಶ್ಚ ಯಥಾ ವಿಪ್ರಾ ವಹ್ನಿಃ ಶಾಮ್ಯತಿ ದುರ್ಬಲಃ ।
ಆಕ್ರಾಂತ ಇಂಧನೈಃ ಸ್ಥೂಲೈಸ್ತದ್ವದ್ಯೋಗಬಲಃ ಸ್ಮೃತಃ ॥ ೧೯ ॥

ಸ ಏವ ಚ ತದಾ ವಿಪ್ರಾ ವಹ್ನಿರ್ಜಾತಬಲಃ ಪುನಃ ।
ಸಮೀರಣಗತಃ ಕೃತ್ಸ್ನಾಂ ದಹೇತ್ಕ್ಷಿಪ್ರಂ ಮಹೀಮಿಮಾಂ ॥ ೨೦ ॥

ತತ್ತ್ವಜ್ಞಾನಬಲೋ ಯೋಗೀ ದೀಪ್ತತೇಜಾ ಮಹಾಬಲಃ ।
ಅಂತಕಾಲ ಇವಾದಿತ್ಯಃ ಕೃತ್ಸ್ನಂ ಸಂಶೋಷಯೇಜ್ಜಗತ್ ॥ ೨೧ ॥

ದುರ್ಬಲಶ್ಚ ಯಥಾ ವಿಪ್ರಾಃ ಸ್ರೋತಸಾ ಹ್ರಿಯತೇ ನರಃ ।
ಬಲಹೀನಸ್ತಥಾ ಯೋಗೀ ವಿಷಯೈರ್ಹ್ರಿಯತೇ ಚ ಸಃ ॥ ೨೨ ॥

ತದೇವ ತು ಯಥಾ ಸ್ರೋತೋ ವಿಷ್ಕಂಭಯತಿ ವಾರಣಃ ।
ತದ್ವದ್ಯೋಗಬಲಂ ಲಬ್ಧ್ವಾ ನ ಭವೇದ್ವಿಷಯೈರ್ಹೃತಃ ॥ ೨೩ ॥

೧೯-೨೩. ಎಲೈ ಋಷಿಗಳೇ, ಅತ್ಯಲ್ಪವಾದ ಬೆಂಕಿಗೆ ದಪ್ಪವಾದ ಸೌದೆಗಳನ್ನು ಹಾಕಿದರೆ ಆರಿಹೋಗುವುದು. ಅದೇ ಬೆಂಕಿಯು ಹುಲ್ಲು ಮುಂತಾದುವುಗಳಿಂದ ಹತ್ತಿ ಸ್ವಲ್ಪ ಬಲವನ್ನು ಹೊಂದಿದರೆ ಗಾಳಿಯ ಸಹಾಯದಿಂದ ಈ ಭೂಮಂಡಲವನ್ನೇ ಸುಟ್ಟುಬಿಡುವುದು. ಹಾಗೆಯೇ ತತ್ತ್ವಜ್ಞಾನಬಲದಿಂದ ಕೂಡಿದ ಯೋಗಿಯು ಪ್ರಕಾಶವಾದ ತೇಜಸ್ಸಿನಿಂದ ಮಹಾಬಲಶಾಲಿಯಾದ ಪ್ರಳಯಕಾಲದ ಸೂರ್ಯನಂತೆ ಈ ಪ್ರಪಂಚವನ್ನೆಲ್ಲಾ ಒಣಗಿಸಿಬಿಡುವನು. ಬಲವಿಲ್ಲದ ಮನುಷ್ಯನನ್ನು ನದಿಯ ಪ್ರವಾಹವು ಕೊಚ್ಚಿ ಎಳೆದುಕೊಂಡು ಹೋಗುವಂತೆ, ಬಲವಿಲ್ಲದ ಯೋಗಿಯು ಇಂದ್ರಿಯಗಳ ಪ್ರವಾಹಕ್ಕೆ ಸಿಕ್ಕಿ ತೇಲಿಹೋಗುವನು. ಅದೇ ಪ್ರವಾಹವನ್ನು ಆನೆಯು ತಡೆಯುವಂತೆ ಯೋಗಬಲವನ್ನು ಪಡೆದವನು ಇಂದ್ರಿಯಗಳ ಪ್ರವಾಹದಲ್ಲಿ ತೇಲಿಹೋಗುವುದಿಲ್ಲ. ಅವುಗಳ ಶಕ್ತಿಯನ್ನು ತಡೆದು ನಿಲ್ಲಿಸುವನು.

ವಿಶಂತಿ ವಾ ವಶಾದ್ವಾಥ ಯೋಗಾದ್ಯೋಗಬಲಾನ್ವಿತಾಃ ।
ಪ್ರಜಾಪತೀನ್ಮನೂನ್ಸರ್ವಾನ್ಮಹಾಭೂತಾನಿ ಚೇಶ್ವರಾಃ ॥ ೨೪ ॥

ನ ಯಮೋ ನಾಂತಕಃ ಕ್ರುದ್ಧೋ ನ ಮೃತ್ಯುರ್ಭೀಮವಿಕ್ರಮಃ ।
ವಿಶಂತೇ ತದ್ದ್ವಿಜಾಃ ಸರ್ವೇ ಯೋಗಸ್ಯಾಮಿತತೇಜಸಃ ॥ ೨೫ ॥

ಆತ್ಮನಾಂ ಚ ಸಹಸ್ರಾಣಿ ಬಹೂನಿ ದ್ವಿಜಸತ್ತಮಾಃ ।
ಯೋಗಂ ಕುರ್ಯಾದ್ಬಲಂ ಪ್ರಾಪ್ಯ ತೈಶ್ಚ ಸರ್ವೈರ್ಮಹೀಂ ಚರೇತ್ ॥೨೬॥

ಪ್ರಾಪ್ನುಯಾದ್ವಿಷಯಾನ್ಕಶ್ಚಿತ್ಪುನಶ್ಚೋಗ್ರಂ ತಪಶ್ಚರೇತ್ ।
ಸಂಕ್ಷಿಪ್ಯೇಚ್ಚ ಪುನರ್ವಿಪ್ರಾಃ ಸೂರ್ಯಸ್ತೇಜೋಗುಣಾನಿವ ॥ ೨೭ ॥

ಬಲಸ್ಥಸ್ಯ ಹಿ ಯೋಗಸ್ಯ ಬಲಾರ್ಥಂ ಮುನಿಸತ್ತಮಾಃ ।
ವಿಮೋಕ್ಷಪ್ರಭವಂ ವಿಷ್ಣುಮುಪಪನ್ನಮಸಂಶಯಂ ॥ ೨೮ ॥

೨೪-೨೭. ಯೋಗಬಲವುಳ್ಳವರು ತಮ್ಮ ಯೋಗಶಕ್ತಿಯಿಂದ ತಮ್ಮ ಇಷ್ಟಬಂದಂತೆ ಪ್ರಜಾಪತಿಗಳ ಶರೀರದಲ್ಲಿಯೂ ಮನುಗಳ ಶರೀರದಲ್ಲಿಯೂ ಮಿಕ್ಕ ಸಮಸ್ತ ಪ್ರಾಣಿಗಳ ಶರೀರದೊಳಗೂ ಪ್ರವೇಶಮಾಡಲು ಶಕ್ತರಾಗಿರುವರು ನಿಯಮನ ಶಕ್ತಿಯುಳ್ಳ ಯಮನಾಗಲೀ, ಕೋಪವನ್ನು ಹೊಂದಿದ ಅಂತಕನಾಗಲೀ, ಭಯಂಕರವಾದ ಪರಾಕ್ರಮವುಳ್ಳ ಮೃತ್ಯುದೇವತೆಯಾಗಲಿ, ಮಹಾತೇಜಶ್ಶಾಲಿಯಾದ ಯೋಗಿಯ ಶರೀರದೊಳಗೆ ಪ್ರವೇಶಮಾಡಲಾರರು. ಎಲೈ ಬ್ರಾಹ್ಮಣಶ್ರೇಷ್ಠರೇ ಅನೇಕ ಸಾವಿರ ಜೀವರು ಯೋಗಾಭ್ಯಾಸವನ್ನು ಮಾಡಿ ಆ ಯೋಗಬಲವನ್ನು ಪಡೆದು ಭೂಮಿಯಲ್ಲೆಲ್ಲಾ ಸಂಚರಿಸಬಹುದು. ತಮಗೆ ಬೇಕಾದ ವಿಷಯಸುಖಗಳನ್ನು ಅನುಭವಿಸಬಹುದು. ತಮಗೆ ಬೇಕಾದ ವಿಷಯಸುಖಗಳನ್ನು ಅನುಭವಿಸಿದ ಬಳಿಕ ಮತ್ತೆ ಕ್ರೂರವಾದ ತಪಸ್ಸನ್ನು ಮಾಡಬೇಕು. ಸೂರ್ಯನು ತನ್ನ ತೇಜಸ್ಸನ್ನು ಸಂಕೋಚಪಡಿಸುವಂತೆ ವಿಷಯಾಸಕ್ತಿಯನ್ನು ಕಡಮೆಮಾಡಿಕೊಳ್ಳಬೇಕು.

೨೮-೩೧. ಯೋಗಿಯು ತನಗೆ ಯೋಗಬಲವು ಹೆಚ್ಚುವುದಕ್ಕಾಗಿ ಮೋಕ್ಷವನ್ನು ಕೊಡಲು ಶಕ್ತನಾದ ವಿಷ್ಣುವನ್ನು ಸೇವಿಸಬೇಕು. ಎಲೈ

ಬಲಾನಿ ಯೋಗಪ್ರೋಕ್ತಾನಿ ಮಯೈತಾನಿ ದ್ವಿಜೋತ್ತಮಾಃ ।
ನಿದರ್ಶನಾರ್ಥಂ ಸೂಕ್ಷ್ಮಾಣಿ ವಕ್ಷ್ಯಾಮಿ ಚ ಪುನರ್ದ್ವಿಜಾಃ ॥ ೨೯ ॥

ಆತ್ಮನಶ್ಚ ಸಮಾಧಾನೇ ಧಾರಣಾಂ ಪ್ರತಿ ವಾ ದ್ವಿಜಾಃ ।
ನಿದರ್ಶನಾನಿ ಸೂಕ್ಷ್ಮಾಣಿ ಶೃಣುಧ್ವಂ ಮುನಿಸತ್ತಮಾಃ ॥ ೩೦ ॥

ಅಪ್ರಮತ್ತೋ ಯಥಾ ಧನ್ವೀ ಲಕ್ಷ್ಯಂ ಹಂತಿ ಸಮಾಹಿತಃ ।
ಯುಕ್ತಃ ಸಮ್ಯಕ್ತಥಾ ಯೋಗೀ ಮೋಕ್ಷಂ ಪ್ರಾಪ್ನೋತ್ಯಸಂಶಯಂ ॥ ೩೧ ॥

ಸ್ನೇಹಪಾತ್ರೇ ಯಥಾ ಪೂರ್ಣೇ ಮನ ಆಧಾಯ ನಿಶ್ಚಲಂ ।
ಪುರುಷೋ ಯುಕ್ತ ಆರೋಹೇತ್ಸೋಪಾನಂ ಯುಕ್ತಮಾನಸಃ ॥ ೩೨ ॥

ಮುಕ್ತಸ್ತಥಾಯಮಾತ್ಮಾನಂ ಯೋಗಂ ತದ್ವತ್ಸುನಿಶ್ಚಲಂ ।
ಕರೋತ್ಯಮಲಮಾತ್ಮಾನಂ ಭಾಸ್ಕರೋಪಮದರ್ಶನೇ ॥ ೩೩ ॥

ಬ್ರಾಹ್ಮಣಶ್ರೇಷ್ಠರೇ, ಯೋಗಶಕ್ತಿಯ ವಿಷಯವನ್ನೆಲ್ಲ ನಿಮಗೆ ಹೇಳಿದೆನು. ನಿಮಗೆ ಉದಾಹರಣಾರ್ಥವಾಗಿ ಸೂಕ್ಷ್ಮವಾದ ಕೆಲವು ವಿಷಯಗಳನ್ನು ಮತ್ತೆ ಹೇಳುವೆನು. ಮನಸ್ಸು ಸಮಾಧಾನಸ್ಥಿತಿಗೆ ಬರಬೇಕಾದ ಧಾರಣಾ ಎಂಬ ಯೋಗಾಂಗದ ವಿಷಯದಲ್ಲಿ ಸೂಕ್ಷ್ಮವಾದ ನಿದರ್ಶನಗಳನ್ನು ಹೇಳುವೆನು. ಧನುಸ್ಸಿಗೆ ಬಾಣವನ್ನು ಜೋಡಿಸಿ ಗುರಿಯನ್ನು ಹೊಡೆಯುವ ಬಿಲ್ಲುಗಾರನಂತೆ ಯೋಗಿಯು ಧ್ಯಾನಮಾಡುವಾಗ ಏಕಾಗ್ರತೆಯ ವಿಷಯದಲ್ಲಿ ಎಚ್ಚರಿಕೆಯಿಂದಿದ್ದರೆ ಸಂದೇಹವಿಲ್ಲದೆ ಮೋಕ್ಷವನ್ನು ಪಡೆಯುವನು.

೩೨–೩೫. ಎಣ್ಣೆಯ ಪಾತ್ರೆಯಲ್ಲಿ ತುಂಬಿದ ಎಣ್ಣೆಯು ಎಷ್ಟು ಗಾಳಿ ಬೀಸಿದರೂ ಚಲಿಸದಿರುವಂತೆ ಮನುಷ್ಯನು ಮನಸ್ಸನ್ನು ಚಲಿಸದಿರುವಂತೆ ಇಟ್ಟು ಯೋಗದ ಮೆಟ್ಟಲುಗಳನ್ನು ಹತ್ತಬೇಕು. ಯೋಗಿಯು ತನ್ನ ಮನಸ್ಸನ್ನು ಸೂರ್ಯಸಮಾನನಾಗಿ ಪ್ರಕಾಶಿಸುವ ಆತ್ಮನಲ್ಲಿ ಚಲಿಸದಂತೆ ಇಟ್ಟು ಯೋಗಾಭ್ಯಾಸವನ್ನು ಮಾಡುವನು. ಹಾಗೆಯೇ ಮುಕ್ತಿಯನ್ನು ಹೊಂದುವನು. ಎಲೈ ಬ್ರಾಹ್ಮಣಶ್ರೇಷ್ಠರೇ, ಹಡಗನ್ನು ನಡೆಸುವ ನಾವಿಕನು ದೊಡ್ಡ ಸಮುದ್ರ

ಯಥಾ ಚ ನಾವಂ ವಿಪ್ರೇಂದ್ರಾಃ ಕರ್ಣಧಾರಃ ಸಮಾಹಿತಃ ।
ಮಹಾರ್ಣವಗತಾಂ ಶೀಘ್ರಂ ನಯೇದ್ವಿಪ್ರಾಂಸ್ತು ಪತ್ತನಂ ॥ ೩೪ ॥

ತದ್ವದಾತ್ಮಸಮಾಧಾನಂ ಯುಕ್ತೋ ಯೋಗೇನ ಯೋಗವಿತ್ ।
ದುರ್ಗಮಂ ಸ್ಥಾನಮಾಪ್ನೋತಿ ಹಿತ್ವಾ ದೇಹಮಿಮಂ ದ್ವಿಜಾಃ ॥ ೩೫ ॥

ಸಾರಥಿಶ್ಚ ಯಥಾ ಯುಕ್ತ್ವಾ ಸದಶ್ವಾನ್ಸುಸಮಾಹಿತಃ ।
ದೇಶಮಿಷ್ಟಂ ನಯತ್ಯಾಶು ಧನ್ವಿನಂ ಪುರುಷರ್ಷಭಂ ॥ ೩೬ ॥

ತಥೈವ ಚ ದ್ವಿಜಾ ಯೋಗೀ ಧಾರಣಾಸು ಸಮಾಹಿತಃ ।
ಪ್ರಾಪ್ನೋತ್ಯಾಶು ಪರಂ ಸ್ಥಾನಂ ಲಕ್ಷ್ಯಮುಕ್ತ ಇವಾಶುಗಃ ॥ ೩೭ ॥

ಆವಿಶ್ಯಾತ್ಮನಿ ಚಾತ್ಮಾನಂ ಯೋಽವತಿಷ್ಠತಿ ಸೋಽಚಲಃ ।
ಪಾಶಂ ಹತ್ವೇವ ಮೀನಾನಾಂ ಪದಮಾಪ್ನೋತಿ ಸೋಽಜರಂ ॥ ೩೮ ॥

ಮಧ್ಯದಲ್ಲಿರುವ ತನ್ನ ಹಡಗನ್ನು ಬೇಗನೆ ಸಮುದ್ರದ ದಡದಲ್ಲಿರುವ ಪಟ್ಟಣಕ್ಕೆ ಹೇಗೆ ಸೇರುವನೋ ಹಾಗೆ ಯೋಗಿಯು ಯೋಗಾಭ್ಯಾಸದಿಂದ ಚಿತ್ತಸಮಾಧಾನವನ್ನು ಪಡೆದು ಈ ಶರೀರವನ್ನು ಬಿಟ್ಟು ಹೊಂದಲಸಾಧ್ಯವಾದ ಆತ್ಮಸ್ವರೂಪವನ್ನು ಪಡೆಯುವನು

೩೬–೩೮ ಒಳ್ಳೆಯ ಕುದುರೆಗಳನ್ನು ರಥಕ್ಕೆ ಕಟ್ಟಿದ ಸಾರಥಿಯು ಧನುಸ್ಸನ್ನು ಧರಿಸಿದ ರಥಿಕನನ್ನು ಬೇಗನೆ ಅವನಿಗಿಷ್ಟವಾದ ಸ್ಥಳಕ್ಕೆ ಸೇರಿಸುವಂತೆ ಯೋಗಿಯು ಧಾರಣಾ ಎಂಬ ಯೋಗಾಂಗದಲ್ಲಿ ಏಕಾಗ್ರಚಿತ್ತದಿಂದ ಕೂಡಿ ಗುರಿಯನ್ನು ಹೊಡೆದ ಬಾಣದಂತೆ ಬೇಗನೆ ಶ್ರೇಷ್ಠವಾದ ಪರಬ್ರಹ್ಮಪದವಿಯನ್ನು ಹೊಂದುವನು. ಆತ್ಮಸ್ವರೂಪದಲ್ಲಿ ಮನಸ್ಸನ್ನು ನೆಲೆಯಾಗಿಟ್ಟು ಚಲಿಸದಿರುವ ಮನುಷ್ಯನು ಬಲೆಯ ದಾರವನ್ನು ಕಿತ್ತು ಹೊರಟುಹೋದ ಮೀನಿನಂತೆ ನಾಶರಹಿತವಾದ ಸ್ಥಾನಕ್ಕೆ ಹೋಗಿ ಸೇರುವನು.

ನಾಭ್ಯಾಂ ಶೀರ್ಷೇ ಚ ಕುಕ್ಷೌ ಚ ಹೃದಿ ವಕ್ಷಸಿ ಪಾರ್ಶ್ವಯೋಃ ।
ದರ್ಶನೇ ಶ್ರವಣೇ ವಾಪಿ ಘ್ರಾಣೇ ಚಾಮಿತವಿಕ್ರಮಃ ॥ ೩೯ ॥

ಸ್ಥಾನೇಷ್ವೇತೇಷು ಯೋ ಯೋಗೀ ಮಹಾವ್ರತಸಮಾಹಿತಃ ।
ಆತ್ಮನಾ ಸೂಕ್ಷ್ಮಮಾತ್ಮಾನಂ ಯುಂಕ್ತೇ ಸಮ್ಯಗ್ದ್ವಿಜೋತ್ತಮಾಃ ॥ ೪೦ ॥

ಸುಶೀಘ್ರಮಚಲಪ್ರಖ್ಯಂ ಕರ್ಮ ದಗ್ಧ್ವಾ ಶುಭಾಶುಭಂ ।
ಉತ್ತಮಂ ಯೋಗಮಾಸ್ಥಾಯ ಯದೀಚ್ಛತಿ ವಿಮುಚ್ಯತೇ ॥ ೪೧ ॥

॥ ಮುನಯ ಊಚುಃ ॥

ಆಹಾರಾನ್ಕೀದೃಶಾನ್ಕೃತ್ವಾ ಕಾನಿ ಜಿತ್ವಾ ಚ ಸತ್ತಮ ।
ಯೋಗೀ ಬಲಮವಾಪ್ನೋತಿ ತದ್ಭವಾನ್ವಕ್ತುಮರ್ಹತಿ ॥ ೪೨ ॥

೩೯-೪೧. ಎಲೈ ಋಷಿಶ್ರೇಷ್ಠರೇ ಯೋಗಿಯು ಹೊಕ್ಕಳು, ನೆತ್ತಿ ಹೊಟ್ಟೆ, ಎದೆ, ಹೃದಯ, ಪಾರ್ಶ್ವಗಳು, ಕಣ್ಣು, ಕಿವಿ, ಮೂಗು ಈ ಅವಯವ ಗಳಲ್ಲಿ ನಿಯತವಾಗಿ ಚಿತ್ತವನ್ನು ನಿಲ್ಲಿಸಿ ಆ ಮನಸ್ಸಿನಿಂದ ಅತ್ಯಂತ ಸೂಕ್ಷ್ಮ ಸ್ವರೂಪವಾದ ಪರಮಾತ್ಮನನ್ನು ಧ್ಯಾನಿಸುವನು. ಹೀಗೆ ಉತ್ತಮವಾದ ಯೋಗಾಭ್ಯಾಸವನ್ನು ಮಾಡಿ ಬೇಗನೆ ಪರ್ವತಾಕಾರವಾದ ಶುಭಾಶುಭಕರ್ಮ ಫಲಗಳನ್ನು ಸುಟ್ಟು ಇಚ್ಛೆಪಟ್ಟಲ್ಲಿ ಮುಕ್ತಿಯನ್ನೂ ಹೊಂದುವನು.

೪೨. ಋಷಿಗಳು ಕೇಳುವರು.—ಎಲೈ ಶ್ರೇಷ್ಠಪುರುಷನಾದ ವ್ಯಾಸನೇ, ಯೋಗಿಯು ಯಾವ ಆಹಾರಗಳನ್ನು ಮಾಡಿ ಯಾವುದನ್ನು ಜಯಿಸಿ ಯೋಗ ಬಲವನ್ನು ಪಡೆವನೋ ಅದನ್ನು ನಮಗೆ ಹೇಳಬೇಕು ಎನ್ನಲು,

೪೩-೪೫. ವ್ಯಾಸನು ಹೇಳಿದನು—ಕಾಳುಗಳನ್ನು ಆರಿಸಿಕೊಂಡು ಅವು ಗಳನ್ನೇ ಆಹಾರವಾಗಿ ಮಾಡುವವನೂ, ಮರಗಳ ಮೇಣವನ್ನು ತಿನ್ನುವವನೂ, ಜಿಡ್ಡು ಪದಾರ್ಥಗಳನ್ನು ಸೇವಿಸದವನೂ ಆದ ಯೋಗಿಯು ಯೋಗಶಕ್ತಿಯನ್ನು ಪಡೆವನು. ಕಠಿಣವಾದ ಯವಧಾನ್ಯವನ್ನೇ ದಿನಕ್ಕೆ ಒಂದು ಹೊತ್ತು ಮಾತ್ರ

॥ ವ್ಯಾಸ ಉವಾಚ ॥

ಕಣಾನಾಂ ಭಕ್ಷಣೇ ಯುಕ್ತಃ ಪಿಣ್ಯಾಕಸ್ಯ ಚ ಭೋ ದ್ವಿಜಾಃ ।
ಸ್ನೇಹಾನಾಂ ವರ್ಜನೇ ಯುಕ್ತೋ ಯೋಗೀ ಬಲಮವಾಪ್ನುಯಾತ್ ॥

ಭುಂಜಾನೋ ಯಾವಕಂ ರೂಕ್ಷಂ ದೀರ್ಘಕಾಲಂ ದ್ವಿಜೋತ್ತಮಾಃ ।
ಏಕಾಹಾರೀ ವಿಶುದ್ಧಾತ್ಮಾ ಯೋಗೀ ಬಲಮವಾಪ್ನುಯಾತ್ ॥ ೪೪ ॥

ಪಕ್ಷಾನ್ಮಾಸಾನೃತೂಂಶ್ಚಿತ್ರಾನ್ಸಂಚರಂಶ್ಚ ಗುಹಾಸ್ತಥಾ ।
ಅಪಃ ಪೀತ್ವಾ ಪಯೋಮಿಶ್ರಾ ಯೋಗೀ ಬಲಮವಾಪ್ನುಯಾತ್ ॥ ೪೫ ॥

ಅಖಂಡಮಪಿ ವಾ ಮಾಸಂ ಸತತಂ ಮುನಿಸತ್ತಮಾಃ ।
ಉಪೋಷ್ಯ ಸಮ್ಯಕ್ಶುದ್ಧಾತ್ಮಾ ಯೋಗೀ ಬಲಮವಾಪ್ನುಯಾತ್ ॥ ೪೬ ॥

ಕಾಮಂ ಜಿತ್ವಾ ತಥಾ ಕ್ರೋಧಂ ಶೀತೋಷ್ಣಂ ವರ್ಷಮೇವ ಚ ।
ಭಯಂ ಶೋಕಂ ತಥಾ ಸ್ವಾಪಂ ಪೌರುಷಾನ್ವಿಷಯಾಂಸ್ತಥಾ ॥ ೪೭ ॥

ಅರತಿಂ ದುರ್ಜಯಾಂ ಚೈವ ಘೋರಾಂ ದೃಷ್ಟ್ವಾ ಚ ಭೋ ದ್ವಿಜಾಃ ।
ಸ್ಪರ್ಶಂ ನಿದ್ರಾಂ ತಥಾ ತಂದ್ರಾಂ ದುರ್ಜಯಾಂ ಮುನಿಸತ್ತಮಾಃ ॥ ೪೮ ॥

ಆಹಾರಮಾಡಿಕೊಂಡು ಶುದ್ಧವಾದ ಮನಸ್ಸಿನಿಂದ ಕೂಡಿದವನು ಯೋಗಶಕ್ತಿಯನ್ನು ಪಡೆವನು. ಒಂದು ಪಕ್ಷ ಅಥವಾ ಮಾಸ ಋತು ಈ ಕಾಲಗಳ ವರೆಗೆ ಗುಹೆಗಳಲ್ಲಿ ಸಂಚರಿಸುತ್ತ ಹಾಲಿಗೆ ನೀರನ್ನು ಬೆರಸಿ ಆಹಾರ ಮಾಡಿಕೊಂಡು ಇರುವ ಯೋಗಿಯು ಯೋಗಶಕ್ತಿಯನ್ನು ಪಡೆವನು. ಒಂದು ತಿಂಗಳೂ ಪೂರ್ತಿ ಉಪವಾಸವನ್ನು ಮಾಡಿ ಶುದ್ಧವಾದ ಮನಸ್ಸಿನಿಂದ ಧ್ಯಾನಮಾಡತಕ್ಕವನೂ ಯೋಗಶಕ್ತಿಯನ್ನು ಪಡೆವನು.

೪೬-೪೮. ಕಾಮ, ಕ್ರೋಧ, ಶೀತೋಷ್ಣ, ಮಳೆ, ಭಯ, ದುಃಖ ನಿದ್ರೆ, ಪುರುಷಪ್ರಯತ್ನದಿಂದ ಸಾಧಿಸುವ ಇಂದ್ರಿಯಾರ್ಥಗಳು ಇವುಗಳನ್ನೆಲ್ಲ ಜಯಿಸಿ ಕ್ರೂರವಾದ ಅತೃಪ್ತಿ, ಸ್ಪರ್ಶ, ನಿದ್ರೆ, ಜಡತೆ ಇವುಗಳನ್ನು ಗೆದ್ದ ವೈರಾಗ್ಯವನ್ನು ಹೊಂದಿದವನೂ ಮಹಾಬುದ್ಧಿಶಾಲಿಯೂ ಆದ ಯೋಗಿಯು ಧ್ಯಾನ ಮತ್ತು ವೇದಾಧ್ಯಯನರೂಪವಾದ ಸಂಪತ್ತಿನಿಂದ ಕೂಡಿದವನಾಗಿ ತನ್ನ ಮನಸ್ಸಿನಲ್ಲಿಯೇ ಮಹಾಮಹಿಮನಾದ ಪರಮಾತ್ಮನನ್ನು ಪ್ರಕಾಶ ಪಡಿಸುವನು.

ದೀಪಯಂತಿ ಮಹಾತ್ಮಾನಂ ಸೂಕ್ಷ್ಮನಾತ್ಮಾನಮಾತ್ಮನಾ ।
ವೀತರಾಗಾ ಮಹಾಪ್ರಾಜ್ಞಾ ಧ್ಯಾನಾಧ್ಯಯನಸಂಪದಾ ॥ ೪೯ ॥

ದುರ್ಗಸ್ತ್ವೇಷ ಮತಃ ಪಂಥಾ ಬ್ರಾಹ್ಮಣಾನಾಂ ವಿಪಶ್ಚಿತಾಂ ।
ಯಃ ಕಶ್ಚಿದ್ವ್ರಜತಿ ಕ್ಷಿಪ್ರಂ ಕ್ಷೇಮೇಣ ಮುನಿಪುಂಗವಾಃ ॥ ೫೦ ॥

ಯಥಾ ಕಶ್ಚಿದ್ವನಂ ಘೋರಂ ಬಹುಸರ್ಪಸರೀಸೃಪಂ ।
ಶ್ವಭ್ರವತ್ತೋಯಹೀನಂ ಚ ದುರ್ಗಮಂ ಬಹುಕಂಟಕಂ ॥ ೫೧ ॥

ಅಭಕ್ತಮಟವೀಪ್ರಾಯಂ ದಾವದಗ್ಧಮಹೀರುಹಂ ।
ಪಂಥಾನಂ ತಸ್ಕರಾಕೀರ್ಣಂ ಕ್ಷೇಮೇಣಾಭಿಪತೇತ್ತಥಾ ॥ ೫೨ ॥

೪೯–೫೧. ವಿದ್ವಾಂಸರಾದ ಬ್ರಹ್ಮಜ್ಞಾನಿಗಳಿಗೆ ಈ ಯೋಗಮಾರ್ಗದಲ್ಲಿ ನಡೆವುದು ಬಹಳ ಕಷ್ಟವಾಗಿರುವುದು. ಎಲೈ ಋಷಿಶ್ರೇಷ್ಠರೇ, ಈ ಯೋಗಮಾರ್ಗದಲ್ಲಿ ಯಾವನೋ ಒಬ್ಬನು ಅನೇಕ ಹುಳುಗಳೂ, ಹಾವುಗಳೂ ಹಳ್ಳಗಳೂ ಇರುವ, ನೀರಿಲ್ಲದ, ಭಯಂಕರವಾದ ಮುಳ್ಳುಗಳಿಂದ ತುಂಬಿದ ಕಾಡಿನಲ್ಲಿ ಅನ್ನವಿಲ್ಲದೆ ಕಾಡುಕಿಚ್ಚಿನಿಂದ ಸುಟ್ಟುಹೋದ ಮರಗಳೂ, ಕಳ್ಳರೂ ತುಂಬಿರುವ ದಾರಿಯಲ್ಲಿ ಸುಖವಾಗಿ ಊರಿಗೆ ಬಂದು ಸೇರಿದವನಂತೆ ಬಹಳ ಬೇಗನೆ ಸುಖವಾಗಿ ಮೋಕ್ಷಕ್ಕೆ ಹೋಗುವನು.

೫೨-೫೫. ಈ ಯೋಗಮಾರ್ಗವು ಅನೇಕ ಕಷ್ಟಗಳಿಂದ ಕೂಡಿದ್ದರೂ ಯಾವನೋ ಒಬ್ಬ ಬ್ರಾಹ್ಮಣನು ಈ ಮಾರ್ಗವನ್ನು ಆಶ್ರಯಿಸಿ ಸುಖವಾಗಿ ಉಪಶಾಂತಿಯನ್ನು ಹೊಂದುವದರಿಂದ ಈ ಮಾರ್ಗವೂ ಇಷ್ಟವಾದುದುದಾಗಿರುವುದು. ಎಲೈ ಮುನಿಗಳೇ, ಹರಿತವಾದ ಕತ್ತಿಯ ಅಲಗಿನಮೇಲೆ ನಿಂತಿರಬಹುದು. ಪುಣ್ಯವಂತರಲ್ಲದವರು ಈ ಯೋಗಧಾರಣೆಯನ್ನು ಮಾಡಲು

ಯೋಗಮಾರ್ಗಂ ಸಮಾಸಾದ್ಯ ಯಃ ಕಶ್ಚಿದ್ವ್ರಜತೇ ದ್ವಿಜಃ ।
ಕ್ಷೇಮೇಣೋಪರಮೇನ್ಮಾರ್ಗಾದ್ಬಹುದೋಷೋಽಪಿ ಸಂಮತಃ ॥ ೫೩ ॥

ಆಸ್ಥೇಯಂ ಕ್ಷುರಧಾರಾಸು ನಿಶಿತಾಸು ದ್ವಿಜೋತ್ತಮಾಃ ।
ಧಾರಣಾ ಸಾ ತು ಯೋಗಸ್ಯ ದುರ್ಗೇಯಮಕೃತಾತ್ಮಭಿಃ ॥ ೫೪ ॥

ವಿಷಮಾ ಧಾರಣಾ ವಿಪ್ರಾ ಯಾಂತಿ ವೈ ನ ಶುಭಾಂ ಗತಿಂ ।
ನೇತೃಹೀನಾ ಯಥಾ ನಾವಃ ಪುರುಷಾಣಾಂ ತು ವೈ ದ್ವಿಜಾಃ ॥ ೫೫ ॥

ಯಸ್ತು ತಿಷ್ಠತಿ ಯೋಗಾಧೌ ಧಾರಣಾಸು ಯಥಾವಿಧಿ ।
ಮರಣಂ ಜನ್ಮದುಃಖಿತ್ವಂ ಸುಖಿತ್ವಂ ಸ ವಿಶಿಷ್ಯತೇ ॥ ೫೬ ॥

ನಾನಾಶಾಸ್ತ್ರೇಷು ನಿಯತಂ ನಾನಾಮುನಿನಿಷೇವಿತಂ ।
ಪರಂ ಯೋಗಸ್ಯ ಪಂಥಾನಂ ನಿಶ್ಚಿತಂ ತಂ ದ್ವಿಜಾತಿಷು ॥ ೫೭ ॥

ಅಸಾಧ್ಯವಾಗಿರುವುದು. ಎಲೈ ಬ್ರಾಹ್ಮಣರೇ, ವಿರುದ್ಧವಾದ ಯೋಗ ಧಾರಣೆಯು ಹಡಗನ್ನು ನಡೆಸುವ ನಾವಿಕನಿಲ್ಲದ ಹಡಗಿನಲ್ಲಿರುವ ಜನರಂತೆ ಶುಭವಾದ ಮಾರ್ಗವನ್ನು ಹೊಂದಿಸುವುದಿಲ್ಲ. ಯಾವ ಮನುಷ್ಯನು ಮನಸ್ಸಿನಲ್ಲಿ ಯಾವಾಗಲೂ ಯೋಗದಲ್ಲಿ ಆಸಕ್ತನಾಗಿ ವಿಧಿಗನುಸಾರವಾಗಿ ಯೋಗಾಂಗವಾದ ಧಾರಣೆಯಲ್ಲಿ ನಿರತರಾಗಿರುವನೋ ಅವನಿಗೆ ಜನ್ಮಮರಣರೂಪವಾದ ದುಃಖಗಳೂ ಸುಖವಾಗಿ ಪರಿಣಮಿಸುವುವು. ನಾನಾಶಾಸ್ತ್ರಗಳಲ್ಲಿ ಹೇಳಿರುವ ಮತ್ತು ಅನೇಕ ಮುನಿಗಳು ಆಚರಿಸಿದ ಶ್ರೇಷ್ಠವಾದ ಯೋಗಮಾರ್ಗವನ್ನು ದ್ವಿಜರಲ್ಲಿರುವ ಸಂಧ್ಯಾದಿ ಆಚರಣೆಯಲ್ಲಿ ಕಾಣಬಹುದು.

೫೬-೬೧. ಮುನಿಶ್ರೇಷ್ಠರೇ, ಯೋಗವಿದ್ಯೆಯು ಪರಬ್ರಹ್ಮಸ್ವರೂಪವಾದುದು. ಇದನ್ನು ಬಲ್ಲ ಯೋಗಿಯು ಚತುರ್ಮುಖಬ್ರಹ್ಮ, ವಿಷ್ಣು, ಮಹೇಶ್ವರ ಇವರುಗಳನ್ನೂ ಯಮಧರ್ಮ ಮಹಾಮಹಿಮರಾದ ಬ್ರಹ್ಮಮಾನಸ

ಪರಂ ಹಿ ತದ್ಬ್ರಹ್ಮಮಯಂ ಮುನೀಂದ್ರಾ
ಬ್ರಹ್ಮಾಣಮೀಶಂ ವರದಂ ಚ ವಿಷ್ಣುಂ ।
ಭವಂ ಚ ಧರ್ಮಂ ಚ ಮಹಾನುಭಾವಂ
ಯದ್ಬ್ರಹ್ಮಪುತ್ರಾನ್ಸುಮಹಾನುಭಾವಾನ್ ॥ ೫೮ ॥

ತಮಶ್ಚ ಕಷ್ಟಂ ಸುಮಹದ್ರಜಶ್ಚ
ಸತ್ತ್ವಂ ಚ ಶುದ್ಧಂ ಪ್ರಕೃತಿಂ ಪರಾಂ ಚ ।
ಸಿದ್ಧಿಂ ಚ ದೇವೀಂ ವರುಣಸ್ಯ ಪತ್ನೀಂ
ತೇಜಶ್ಚ ಕೃತ್ಸ್ನಂ ಸುಮಹಚ್ಚ ಧೈರ್ಯಂ ॥ ೫೯ ॥

ತಾರಾಧಿಪಂ ಖೇ ವಿಮಲಂ ಸುತಾರಂ
ವಿಶ್ವಾಂಶ್ಚ ದೇವಾನುರಗಾನ್ಪಿತೄಂಶ್ಚ ।
ಶೈಲಾಂಶ್ಚ ಕೃತ್ಸ್ನಾನುದಧೀಂಶ್ಚ ವಾಚಲಾ-
ನ್ನದೀಶ್ಚ ಸರ್ವಾಃ ಸನಗಾಂಶ್ಚ ನಾಗಾನ್ ॥ ೬೦ ॥

ಸಾಧ್ಯಾಂಸ್ತಥಾ ಯಕ್ಷಗಣಾನ್ದಿಶಶ್ಚ
ಗಂಧರ್ವಸಿದ್ಧಾನ್ಪುರುಷಾನ್ಸ್ತ್ರಿಯಶ್ಚ ।
ಪರಸ್ಪರಂ ಪ್ರಾಪ್ಯ ಮಹಾನ್ಮಹಾತ್ಮಾ
ವಿಶೇತ ಯೋಗೀ ನಚಿರಾದ್ವಿಮುಕ್ತಃ ॥ ೬೧ ॥

ಪುತ್ರರು, ಕಷ್ಟವಾದ ತಮೋಗುಣ, ವಿಸ್ತಾರವಾದ ರಜೋಗುಣ, ಶುದ್ಧವಾದ ಸತ್ವಗುಣ, ಪರಾಪ್ರವೃತ್ತಿ, ವರುಣನ ಪತ್ನಿಯಾದ ಸಿದ್ಧಿದೇವಿ ಇವರುಗಳನ್ನೂ ಸಮಸ್ತ ತೇಜಸ್ಸುಗಳು, ಧೈರ್ಯ, ಆಕಾಶದಲ್ಲಿರುವ ಚಂದ್ರ, ವಿಶ್ವೇದೇವತೆಗಳು ಉರಗರು, ಪಿತೃದೇವತೆಗಳು, ಸಮಸ್ತ ಪರ್ವತಗಳು, ಸಮುದ್ರಗಳು, ನದಿಗಳು ಸಾಧ್ಯರು, ಯಕ್ಷರು, ದಿಕ್ಕುಗಳು, ಸಿದ್ಧಗಂಧರ್ವರು, ಪುರುಷರು, ಸ್ತ್ರೀಯರು ಇವರೆಲ್ಲರನ್ನೂ ಬೇಕಾದಾಗ ಪ್ರವೇಶಿಸಿ ಮಹಾಮಹಿಮನಾಗಿ ಇರಬಲ್ಲನು. ಇವನು ಬೇಗನೆ ಮುಕ್ತಿಯನ್ನು ಹೊಂದುವನು.

ಕಥಾ ಚ ಯಾ ವಿಪ್ರವರಾಃ ಪ್ರಸಕ್ತಾ
ದೈವೇ ಮಹಾವೀರ್ಯಮತೌ ಶುಭೇಯಂ ।
ಯೋಗಾನ್ಸ ಸರ್ವಾನನುಭೂಯ ಮರ್ತ್ಯಾ
ನಾರಾಯಣಂ ತಂ ದ್ರುತಮಾಪ್ನುವಂತಿ ॥ ೬೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸರ್ಷಿಸಂವಾದೇ
ಯೋಗವಿಧಿನಿರೂಪಣಂ ನಾಮೈಕೋನಚತ್ವಾರಿಂಶ-
ದಧಿಕದ್ವಿಶತತಮೋಽಧ್ಯಾಯಃ

---

೬೨. ಬ್ರಾಹ್ಮಣಶ್ರೇಷ್ಠರೇ, ನೀವು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವ ಸಂದರ್ಭದಲ್ಲಿ ಮಹಾಶಕ್ತಿಯುತವಾದ ದೇವತಾ ಶಕ್ತಿಗಳಲ್ಲಿ ಈ ಯೋಗ ಶಕ್ತಿಯು ಅತ್ಯಂತ ಮಂಗಳಕರವಾದುದೆಂದು ಹೇಳಿರುವೆನು. ಮನುಷ್ಯರು ಯೋಗಾಭ್ಯಾಸನಿರತರಾದ ಸಮಸ್ತ ಯೋಗಶಕ್ತಿಗಳನ್ನೂ ಅನುಭವಿಸಿ ಆ ನಾರಾಯಣನನ್ನು ಬೇಗನೆ ಸೇರುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಯೋಗನಿರೂಪಣೆಯೆಂಬ ಇನ್ನೂರ
ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಸಮ್ಯಕ್ಕ್ರಿಯೋಽಯಂ ವಿಪ್ರೇಂದ್ರ ವರ್ಣಿತಾ ಶಿಷ್ಟಸಂಮತಾ ।
ಯೋಗಮಾರ್ಗೋ ಯಥಾನ್ಯಾಯಂ ಶಿಷ್ಯಾಯೇಹ ಹಿತೈಷಿಣಾ ॥ ೧ ॥

ಸಾಂಖ್ಯೇ ತ್ವಿದಾನೀಂ ಧರ್ಮಸ್ಯ ವಿಧಿಂ ಪ್ರಬ್ರೂಹಿ ತತ್ತ್ವತಃ ।
ತ್ರಿಷು ಲೋಕೇಷು ಯಜ್ಜ್ಞಾನಂ ಸರ್ವಂ ತದ್ವಿದಿತಂ ಹಿ ತೇ ॥ ೨ ॥

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಯಃ ಸರ್ವಮಾಖ್ಯಾನಂ ವಿದಿತಾತ್ಮನಾಂ ।
ವಿಹಿತಂ ಯತಿಭಿರ್ವೃದ್ಧೈಃ ಕಪಿಲಾದಿಭಿರೀಶ್ವರೈಃ ॥ ೩ ॥

ಇನ್ನೂರನಲವತ್ತನೆಯ ಅಧ್ಯಾಯವು

೧-೨. ಋಷಿಗಳು ಕೇಳುವರು :—ಶಿಷ್ಯರಿಗೆ ಹಿತವನ್ನುಂಟುಮಾಡುವ ಎಲೈ ವ್ಯಾಸನೇ, ಶಿಷ್ಟಸಂಮತವಾದ ಯೋಗಮಾರ್ಗವನ್ನು ವಿಧಿಗನುಸಾರವಾಗಿ ವರ್ಣಿಸಿರುವೆ. ಈಗ ಸಾಂಖ್ಯಧರ್ಮದ ನಿಯಮವನ್ನು ನಮಗೆ ಹೇಳಬೇಕು. ಮೂರುಲೋಕದ ಸಮಸ್ತ ತಿಳಿವಳಿಕೆಯೂ ನಿನಗೆ ಇರುವುದಲ್ಲವೇ ? ಆ ಕಾರಣ ದಿಂದ ಸಾಂಖ್ಯತತ್ವವನ್ನು ನಮಗೆ ವಿಸ್ತರಿಸಿ ಹೇಳಬೇಕು ಎಂದರು.

೩-೧೨. ವ್ಯಾಸನು ಹೇಳಿದನು :—ಋಷಿಶ್ರೇಷ್ಠರಾದ ನೀವೆಲ್ಲರೂ ಆತ್ಮ ಸ್ವರೂಪವನ್ನು ಬಲ್ಲ ದೊಡ್ಡವರೂ ಯತಿಗಳೂ ಆದ ಕಪಿಲನೇ ಮೊದಲಾದ

ಯಸ್ಮಿನ್ಸ್ವವಿಭ್ರಮಾಃ ಕೇಚಿದ್ದೃಶ್ಯಂತೇ ಮುನಿಸತ್ತಮಾಃ ।
ಗುಣಾಶ್ಚ ಯಸ್ಮಿನ್ಬಹವೋ ದೋಷಹಾನಿಶ್ಚ ಕೇವಲಾ ॥ ೪ ॥

ಜ್ಞಾನೇನ ಪರಿಸಂಖ್ಯಾಯ ಸದೋಷಾನ್ವಿಷಯಾನ್ದ್ವಿಜಾಃ ।
ಮಾನುಷಾನ್ದುರ್ಜಯಾನ್ಕೃತ್ಸ್ನಾನ್ಪೈಶಾಚಾನ್ವಿಷಯಾಂಸ್ತಥಾ ॥ ೫ ॥

ವಿಷಯಾನೌರಗಾನ್ ಜ್ಞಾತ್ವಾ ಗಂಧರ್ವವಿಷಯಾಂಸ್ತಥಾ ।
ಪಿತೄಣಾಂ ವಿಷಯಾನ್ ಜ್ಞಾತ್ವಾ ತಿರ್ಯಕ್ತ್ವಂ ಚರತಾಂ ದ್ವಿಜಾಃ ॥ ೬ ॥

ಸುಪರ್ಣವಿಷಯಾನ್ ಜ್ಞಾತ್ವಾ ಮರುತಾಂ ವಿಷಯಾಂಸ್ತಥಾ ।
ಮಹರ್ಷಿವಿಷಯಾಂಶ್ಚೈವ ರಾಜರ್ಷಿವಿಷಯಾಂಸ್ತಥಾ ॥ ೭ ॥

ಆಸುರಾನ್ವಿಷಯಾನ್ ಜ್ಞಾತ್ವಾ ವೈಶ್ವದೇವಾಂಸ್ತಥೈವ ಚ ।
ದೇವರ್ಷಿವಿಷಯಾನ್ ಜ್ಞಾತ್ವಾ ಯೋಗಾನಾಮಪಿ ವೈ ಪರಾನ್ ॥ ೮ ॥

ವಿಷಯಾಂಶ್ಚ ಪ್ರಮಾಣಸ್ಯ ಬ್ರಹ್ಮಣೋ ವಿಷಯಾಂಸ್ತಥಾ ।
ಆಯುಷಶ್ಚ ಪರಂ ಕಾಲಂ ಲೋಕೈರ್ವಿಜ್ಞಾಯ ತತ್ತ್ವತಃ ॥ ೯ ॥

ಈಶ್ವರಸ್ವರೂಪರಾದ ಋಷಿಗಳು ಹೇಳಿರುವ ಸಾಂಖ್ಯಶಾಸ್ತ್ರದ ಸಮಸ್ತ ವೃತ್ತಾಂತವನ್ನೂ ಕೇಳಿರಿ. ಯಾವ ಸಾಂಖ್ಯಶಾಸ್ತ್ರದಲ್ಲಿ ಅನೇಕ ಆಶ್ಚರ್ಯ ವಿಷಯಗಳಿವೆಯೋ, ಅನೇಕ ಗುಣಗಳಿರುವುವೋ ಆ ಕಾರಣದಿಂದ ಇದನ್ನು ತಿಳಿಯುವುದರಿಂದ ಮನುಷ್ಯನ ದೋಷಗಳು ನಾಶವಾಗುವುವು. ಜಯಿಸುವುದಕ್ಕಾಗದ ಮನುಷ್ಯರು, ಪಿಶಾಚಗಳು, ಉರಗರು, ಗಂಧರ್ವರು, ಪಿತೃಗಳು ತಿರ್ಯಗ್ಯೋನಿಗಳಾದ ಮೃಗಾದಿಗಳು, ಸುಪರ್ಣಾದಿ ಪಕ್ಷಿಗಳು, ದೇವತೆಗಳು, ಮಹರ್ಷಿಗಳು, ರಾಜರ್ಷಿಗಳು, ಅಸುರರು, ವಿಶ್ವೇದೇವತೆಗಳು, ದೇವರ್ಷಿಗಳು, ಯೋಗಿಗಳು, ಬ್ರಹ್ಮ ಇವರುಗಳಲ್ಲಿರುವ ದೋಷಗಳನ್ನು ಜ್ಞಾನದಿಂದ ಲೆಕ್ಕ ಮಾಡಿ ತಿಳಿದುಕೊಂಡು ಪ್ರಾಣಿಗಳ ಆಯುಸ್ಸಿನ ಪ್ರಮಾಣವನ್ನೂ ಸುಖಾನುಭವ ಮಾಡುವ ಕಾಲಗಳನ್ನೂ, ವಿಷಯಾಪೇಕ್ಷೆಯಿಂದ ಕಾಲಕ್ಕೆ ಸರಿಯಾಗಿ ಒದಗಿದ ದುಃಖವನ್ನು ಅನುಭವಿಸುವ ಕಾಲವನ್ನೂ ನಿಕೃಷ್ಟಯೋನಿಯಲ್ಲಿಯೂ ನರಕ

ಸುಖಸ್ಯ ಚ ಪರಂ ಕಾಲಂ ವಿಜ್ಞಾಯ ಮುನಿಸತ್ತಮಾಃ ।
ಪ್ರಾಪ್ತಕಾಲೇ ಚ ಯದ್ದುಃಖಂ ಪತತಾಂ ವಿಷಯೈಷಿಣಾಂ ॥ ೧೦ ॥

ತಿರ್ಯಕ್ತ್ವೇ ಪತತಾಂ ವಿಪ್ರಾಸ್ತಥೈವ ನರಕೇಷು ಯತ್ ।
ಸ್ವರ್ಗಸ್ಯ ಚ ಗುಣಾನ್ ಜ್ಞಾತ್ವಾ ದೋಷಾನ್ಸರ್ವಾಂಶ್ಚ ಭೋ ದ್ವಿಜಾಃ॥ ೧೧ ॥

ವೇದವಾದೇ ಚ ಯೇ ದೋಷಾ ಗುಣಾ ಯೇ ಚಾಪಿ ವೈದಿಕಾಃ ।
ಜ್ಞಾನಯೋಗೇ ಚ ಯೇ ದೋಷಾ ಜ್ಞಾನಯೋಗೇ ಚ ಯೇ ಗುಣಾಃ ॥

ಸಾಂಖ್ಯಜ್ಞಾನೇ ಚ ಯೇ ದೋಷಾಂಸ್ತಥೈವ ಚ ಗುಣಾ ದ್ವಿಜಾಃ ।
ಸತ್ತ್ವಂ ದಶಗುಣಂ ಜ್ಞಾತ್ವಾ ರಜೋ ನವಗುಣಂ ತಥಾ ॥ ೧೩ ॥

ತಮಶ್ಚಾಷ್ಟಗುಣಂ ಜ್ಞಾತ್ವಾ ಬುದ್ಧಿಂ ಸಪ್ತಗುಣಾಂ ತಥಾ ।
ಷಡ್ಗುಣಂ ಚ ನಭೋ ಜ್ಞಾತ್ವಾ ತಮಶ್ಚ ತ್ರಿಗುಣಂ ಮಹತ್ ॥ ೧೪ ॥

ದಲ್ಲಿಯೂ ಬಿದ್ದು ದುಃಖವನ್ನು ಅನುಭವಿಸುವ ಕಾಲವನ್ನೂ ಸ್ವರ್ಗಸುಖಾನುಭವದ ಗುಣದೋಷಗಳನ್ನೂ ವೇದವಾದ ಮಾಡುವುದರಲ್ಲಿ ಯಾವ ಗುಣದೋಷಗಳಿರುವುವೋ ಅವುಗಳನ್ನೂ ಜ್ಞಾನಯೋಗದ ಗುಣದೋಷಗಳನ್ನೂ ಸಾಂಖ್ಯಶಾಸ್ತ್ರಜ್ಞಾನದಿಂದ ಉಂಟಾಗುವ ಗುಣದೋಷಗಳನ್ನೂ ಹೇಳುವೆನು.

೧೩-೧೬. ಪೂರ್ಣವಾದ ಶುದ್ಧ ಸತ್ವಗುಣಸ್ವರೂಪನಾದ ಆತ್ಮನು ಹತ್ತುಪಾಲಿನ ಸತ್ವಗುಣದಲ್ಲಿ ಒಂದುಪಾಲನ್ನು ಬಿಟ್ಟು ಒಂಭತ್ತುಪಾಲಿನ ರಜೋಗುಣಸ್ವರೂಪವಾಗಿ, ತರುವಾಯ ಎಂಟುಪಾಲಿನ ತಮೋಗುಣಸ್ವರೂಪವೂ, ಏಳುಪಾಲಿನ ಬುದ್ಧಿಸ್ವರೂಪವೂ, ಆರುಪಾಲಿನ ಆಕಾಶಸ್ವರೂಪವೂ, ಆಗಿ ಸ್ಥೂಲರೂಪವನ್ನು ಪಡೆದು ಮಹತ್ತತ್ವವೆನಿಸಿದ ಮೂರುಪಾಲಿನ ತಮೋಗುಣವೂ, ಎರಡುಪಾಲಿನ ರಜೋಗುಣವೂ, ಒಂದುಪಾಲಿನ ಸತ್ವಗುಣವೂ ಉಳ್ಳ ಸೃಷ್ಟಿಮಾರ್ಗವನ್ನೂ, ಈ ಒಂದುಪಾಲಿನ ಸತ್ವಗುಣವು ಅದರ ಹಿಂದಿನ

ದ್ವಿಗುಣಂ ಚ ರಜೋ ಜ್ಞಾತ್ವಾ ಸತ್ತ್ವಂ ಚೈಕಗುಣಂ ಪುನಃ ।
ಮಾರ್ಗಂ ವಿಜ್ಞಾಯ ತತ್ತ್ವೇನ ಪ್ರಲಯಪ್ರೇಕ್ಷಣೇನ ತು ॥ ೧೫ ॥

ಜ್ಞಾನವಿಜ್ಞಾನಸಂಪನ್ನಾಃ ಕಾರಣ್ಯೈರ್ಭಾವಿತಾತ್ಮಭಿಃ ।
ಪ್ರಾಪ್ನುವಂತಿ ಶುಭಂ ಮೋಕ್ಷಂ ಸೂಕ್ಷ್ಮಾ ಇವ ನಭಃ ಪರಂ ॥ ೧೬ ॥

ರೂಪೇಣ ದೃಷ್ಟಿಂ ಸಂಯುಕ್ತಾಂ ಘ್ರಾಣಂ ಗಂಧಗುಣೇನ ಚ ।
ಶಬ್ದಗ್ರಾಹ್ಯಂ ತಥಾ ಶ್ರೋತ್ರಂ ಜಿಹ್ವಾಂ ರಸಗುಣೇನ ಚ ॥ ೧೭ ॥

ತ್ವಚಂ ಸ್ಪರ್ಶಂ ತಥಾ ಶಕ್ಯಂ ವಾಯುಂ ಚೈವ ತದಾಶ್ರಿತಂ ।
ಮೋಹಂ ತಮಸಿ ಸಂಯುಕ್ತಂ ಲೋಭಂ ಮೋಹೇಷು ಸಂಶ್ರಿತಂ ॥ ೧೮ ॥

ವಿಷ್ಣುಂ ಕ್ರಾಂತೇ ಬಲೇ ಶಕ್ರಂ ಕೋಷ್ಠೇ ಸಕ್ತಂ ತಥಾನಲಂ ।
ಅಪ್ಸು ದೇವೀಂ ಸಮಾಯುಕ್ತಾಮಾಪಸ್ತೇಜಸಿ ಸಂಶ್ರಿತಾಃ ॥ ೧೯ ॥

ಗುಣಗಳಲ್ಲಿ ಕ್ರಮವಾಗಿ ಸೇರಿಕೊಂಡು ಪ್ರಳಯವಾಗುವ ರೀತಿಯನ್ನೂ ತಿಳಿದು ಜ್ಞಾನ ವಿಜ್ಞಾನಗಳಿಂದ ಕೂಡಿದವರಾಗಿ ಆತ್ಮಸ್ವರೂಪಜ್ಞಾನದಿಂದ ಸೂಕ್ಷ್ಮವಾದ ಆಕಾಶದಂತೆ ಸರ್ವವ್ಯಾಪಿಯಾಗಿ ಮನುಷ್ಯರು ಶುಭಕರವಾದ ಮೋಕ್ಷವನ್ನು ಹೊಂದುವರು.

೧೭-೨೨. ಕಣ್ಣು ರೂಪುಗುಣದಿಂದಲೂ, ಮೂಗು ಗಂಧಗುಣದಿಂದಲೂ, ಕಿವಿಯು ಶಬ್ದಗುಣದಿಂದಲೂ, ನಾಲಗೆಯು ರಸಗುಣದಿಂದಲೂ, ಚರ್ಮವು ಸ್ಪರ್ಶಗುಣದಿಂದಲೂ, ವಾಯುವು ಜೀವಶಕ್ತಿಯಿಂದಲೂ ಕೂಡಿ ಮೋಹವು ತಮೋಗುಣದಲ್ಲಿಯೂ, ಆ ಮೋಹದಲ್ಲಿ ಲೋಭವೂ ಆಶ್ರಯವನ್ನು ಪಡೆದು ಚಲನೆಯಲ್ಲಿ ವಿಷ್ಣುವೂ, ಬಲದಲ್ಲಿ ಚಂದ್ರನೂ, ಕಾಷ್ಠದಲ್ಲಿ ಅಗ್ನಿಯೂ, ನೀರಿನಲ್ಲಿ ದೇವಿಯೂ ಆಶ್ರಯವನ್ನು ಹೊಂದಿ, ನೀರು ತೇಜಸ್ಸಿನಲ್ಲಿಯೂ, ತೇಜಸ್ಸು ವಾಯುವಿನಲ್ಲಿಯೂ, ವಾಯುವು ಆಕಾಶದಲ್ಲಿಯೂ, ಆಕಾಶವು ಮಹತ್ತತ್ವದಲ್ಲಿಯೂ, ಮಹತ್ತತ್ವವು ತಮೋಗುಣದಲ್ಲಿಯೂ, ತಮೋಗುಣವು ರಜೋಗುಣದಲ್ಲಿಯೂ, ರಜೋಗುಣವು ಸತ್ವಗುಣದಲ್ಲಿಯೂ, ಸತ್ವಗುಣವು ಜೀವಾತ್ಮ

ತೇಜೋ ವಾಯೌ ತು ಸಂಯುಕ್ತಂ ವಾಯುಂ ನಭಸಿ ಚಾಶ್ರಿತಂ ।
ನಭೋ ಮಹತಿ ಸಂಯುಕ್ತಂ ತಮೋ ಮಹಸಿ ಸಂಸ್ಥಿತಂ ॥ ೨೦ ॥

ರಜಃ ಸತ್ತ್ವಂ ತಥಾ ಸಕ್ತಂ ಸತ್ತ್ವಂ ಸಕ್ತಂ ತಥಾತ್ಮನಿ ।
ಸಕ್ತಮಾತ್ಮಾನಮೀಶೇ ಚ ದೇವೇ ನಾರಾಯಣೇ ತಥಾ ॥ ೨೧ ॥

ದೇವಂ ಮೋಕ್ಷೇ ಚ ಸಂಯುಕ್ತಂ ತತೋ ಮೋಕ್ಷಂ ಚ ನ ಕ್ವಚಿತ್ ।
ಜ್ಞಾತ್ವಾ ಸತ್ತ್ವಗುಣಂ ದೇಹಂ ವೃತಂ ಷೋಡಶಭಿರ್ಗುಣೈಃ ॥ ೨೨ ॥

ಸ್ವಭಾವಂ ಭಾವನಾಂ ಚೈವ ಜ್ಞಾತ್ವಾ ದೇಹಸಮಾಶ್ರಿತಾಂ ।
ಮಧ್ಯಸ್ಥಮಿವ ಚಾತ್ಮಾನಂ ಪಾಪಂ ಯಸ್ಮಿನ್ನ ವಿದ್ಯತೇ ॥ ೨೩ ॥

ದ್ವಿತೀಯಂ ಕರ್ಮ ವೈ ಜ್ಞಾತ್ವಾ ವಿಪ್ರೇಂದ್ರಾ ವಿಷಯೈಷಿಣಾಂ ।
ಇಂದ್ರಿಯಾಣೀಂದ್ರಿಯಾರ್ಥಾಂಶ್ಚ ಸರ್ವಾನಾತ್ಮನಿ ಸಂಶ್ರಿತಾನ್ ॥ ೨೪ ॥

ನಲ್ಲಿಯೂ, ಜೀವಾತ್ಮನು ಈಶ್ವರನಾದ ನಾರಾಯಣನಲ್ಲಿಯೂ, ಆ ದೇವನಾದ ನಾರಾಯಣನು ನಿರ್ವಿಕಲ್ಪವಾದ ಮೋಕ್ಷಸ್ವರೂಪದಲ್ಲಿಯೂ ಐಕ್ಯರಾಗುವರು. ಆ ಮೋಕ್ಷಕ್ಕೆ ಆಶ್ರಯವು ಮತ್ತೊಂದಿಲ್ಲ. ಅದೇ ಸರ್ವಾಶ್ರಯವಾದುದು ಎಂಬುದನ್ನು ತಿಳಿದು, ದೇಹವು ತತ್ವಗುಣಪ್ರಧಾನವಾಗಿ ಹದಿನಾರು ಗುಣಗಳಿಂದ ಕೂಡಿದುದೆಂದು ಭಾವಿಸಬೇಕು.

೨೩-೨೬. ಸ್ವಭಾವವೂ ಮನಸ್ಸಿನ ಭಾವನೆಯೂ ದೇಹವನ್ನು ಆಶ್ರಯಿಸಿರುವುದು. ಜೀವಾತ್ಮನು ಈ ದೇಹದ ನಡುವೆ ಇರುವನು. ಇವನಿಗೆ ಪಾಪವೆಂಬುದಿದಿರುವುದಿಲ್ಲ. ಕರ್ಮವು ಜೀವನಿಗಿಂತ ಬೇರೆಯಾದುದು. ಇಂದ್ರಿಯಗಳು ವಿಷಯಾಪೇಕ್ಷೆಯಿಂದ ಕರ್ಮಗಳನ್ನು ಮಾಡಿ ಜೀವಾತ್ಮನಿಗೆ ಅಭಿಮಾನವನ್ನು ಹುಟ್ಟಿಸುವುವು. ಜೀವನು ವೇದವಾಕ್ಯಗಳಿಂದ ಮೋಕ್ಷವು ದುರ್ಲಭವಾದುದೆಂದು ತಿಳಿದು ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನ, ಎಂಬ ಐದು ವಾಯುಗಳಿಗೂ ಗಾಳಿಯೇ ಕಾರಣವೆಂದೂ ಈ ವಾಯುವಿನಿಂದ ಜೀವಸ್ವರೂಪನಾದ ತಾನು ಈ ಶರೀರದಲ್ಲಿ ಅಭಿಮಾನದಿಂದ ಸಿಕ್ಕಿಕೊಂಡಿರುವೆನೆಂದೂ

ದುರ್ಲಭತ್ವಂ ಚ ಮೋಕ್ಷಸ್ಯ ವಿಜ್ಞಾಯ ಶ್ರುತಿಪೂರ್ವಕಂ ।
ಪ್ರಾಣಾಪಾನೌ ಸಮಾನಂ ಚ ವ್ಯಾನೋದಾನೌ ಚ ತತ್ತ್ವತಃ ॥ ೨೫ ॥

ಆದ್ಯಂ ಚೈವಾನಿಲಂ ಜ್ಞಾತ್ವಾ ಪ್ರಭವಂ ಚಾನಿಲಂ ಪುನಃ ।
ಸಪ್ತಧಾ ತಾಂಸ್ತಥಾ ಶೇಷಾನ್ಸಪ್ತಧಾ ವಿಧಿವತ್ಪುನಃ ॥ ೨೬ ॥

ಪ್ರಜಾಪತೀನೃಷೀಂಶ್ಚೈವ ಸರ್ಗಾಂಶ್ಚ ಸುಬಹೂನ್ವರಾನ್ ।
ಸಪ್ತರ್ಷೀಂಶ್ಚ ಬಹೂನ್ ಜ್ಞಾತ್ವಾ ರಾಜರ್ಷೀಂಶ್ಚ ಪರಂತಪಾನ್ ॥ ೨೭ ॥

ಸುರರ್ಷೀನ್ಮರುತಶ್ಚಾನ್ಯಾನ್ಬ್ರಹ್ಮರ್ಷೀನ್ಸೂರ್ಯಸಂನಿಭಾನ್ ।
ಐಶ್ವರ್ಯಾಚ್ಚ್ಯಾವಿತಾನ್ದೃಷ್ಟ್ವಾ ಕಾಲೇನ ಮಹತಾ ದ್ವಿಜಾಃ ॥ ೨೮ ॥

ಮಹತಾಂ ಭೂತಸಂಘಾನಾಂ ಶ್ರುತ್ವಾ ನಾಶಂ ಚ ಭೋ ದ್ವಿಜಾಃ ।
ಗತಿಂ ವಾಚಾಂ ಶುಭಾಂ ಜ್ಞಾತ್ವಾ ಅರ್ಚಾರ್ಹಾಃ ಪಾಪಕರ್ಮಣಾಂ ॥ ೨೯ ॥

ವೈತರಣ್ಯಾಂ ಚ ಯದ್ದುಃಖಂ ಪತಿತಾನಾಂ ಯಮಕ್ಷಯೇ ।
ಯೋನಿಷು ಚ ವಿಚಿತ್ರಾಸು ಸಂಚಾರಾನಶುಭಾಂಸ್ತಥಾ ॥ ೩೦ ॥

ತಿಳಿಯಬೇಕು. ವಾಯುವು ಮೊದಲು ಏಳು ಭಾಗವಾಗಿ ಆ ಪ್ರತಿಯೊಂದು ಭಾಗವೂ ಮತ್ತೆ ಏಳೇಳು ಭಾಗಗಳಾಗಿ ಒಟ್ಟು ನಲವತ್ತೊಂಬತ್ತು ಭಾಗಗಳಾಗಿ ತನ್ನ ಶಕ್ತಿಯಿಂದ ಪ್ರಪಂಚದಲ್ಲಿ ಅನೇಕ ಕೆಲಸಗಳನ್ನು ಮಾಡುತ್ತಿರುವುವೆಂದು ತಿಳಿಯಬೇಕು.

೨೭-೩೦. ಬ್ರಹ್ಮನ ಸೃಷ್ಟಿಯಲ್ಲಿ ಅನೇಕ ಪ್ರಜಾಪತಿಗಳೂ, ಋಷಿಗಳೂ, ಸಪ್ತರ್ಷಿಗಳೂ, ರಾಜರ್ಷಿಗಳೂ, ದೇವರ್ಷಿಗಳೂ, ದೇವತೆಗಳೂ, ಬ್ರಹ್ಮರ್ಷಿಗಳೂ ಇವರುಗಳನ್ನೂ, ಬಹಳ ಕಾಲದಿಂದ ಐಶ್ವರ್ಯವನ್ನು ಕಳೆದುಕೊಂಡವರು, ಅನೇಕ ಪ್ರಾಣಿಗಳ ನಾಶ, ಶುಭಗತಿ, ಪಾಪಗತಿ, ಯಮನ ಮನೆಗೆ ಹೋದವರ ಮತ್ತು ವೈತರಣಿಯ ಬಿದ್ದವರ ದುಃಖ, ವಿಚಿತ್ರ ಯೋನಿಗಳಲ್ಲಿ ಸಂಚಾರ ಮಾಡುವ ದುಃಖ ಇವುಗಳನ್ನು ತಿಳಿದುಕೊಳ್ಳಬೇಕು.

ಜಠರೇ ಚಾಶುಭೇ ವಾಸಂ ಶೋಣಿತೋದಕಭಾಜನೇ ।
ಶ್ಲೇಷ್ಮಮೂತ್ರಪುರೀಷೇ ಚ ತೀವ್ರಗಂಧಸಮನ್ವಿತೇ ॥ ೩೧ ॥

ಶುಕ್ರಶೋಣಿತಸಂಘಾತೇ ಮಜ್ಜಾಸ್ನಾಯುಪರಿಗ್ರಹೇ ।
ಶಿರಾಶತಸಮಾಕೀರ್ಣೇ ನವದ್ವಾರೇ ಪುರೇಽಥ ವೈ ॥ ೩೨ ॥

ವಿಜ್ಞಾಯ ಹಿತಮಾತ್ಮಾನಂ ಯೋಗಾಂಶ್ಚ ವಿವಿಧಾನ್ದ್ವಿಜಾಃ ।
ತಾಮಸಾನಾಂ ಚ ಜಂತೂನಾಂ ರಮಣೀಯಾನ್ಕೃತಾತ್ಮನಾಂ ॥ ೩೩ ॥

ಸಾತ್ತ್ವಿಕಾನಾಂ ಚ ಜಂತೂನಾಂ ಕುತ್ಸಿತಂ ಮುನಿಸತ್ತಮಾಃ ।
ಗರ್ಹಿತಂ ಮಹತಾಮರ್ಥೇ ಸಾಂಖ್ಯಾನಾಂ ವಿದಿತಾತ್ಮನಾಂ ॥ ೩೪ ॥

ಉಪಪ್ಲವಾಂಸ್ತಥಾ ಘೋರಾನ್ ಶಶಿನಸ್ತೇಜಸಸ್ತಥಾ ।
ತಾರಾಣಾಂ ಪತನಂ ದೃಷ್ಟ್ವಾ ನಕ್ಷತ್ರಾಣಾಂ ಚ ಪರ್ಯಯಂ ॥ ೩೫ ॥

೩೧-೩೪. ಮಲಮೂತ್ರಗಳು, ಶ್ಲೇಷ್ಮ, ರಕ್ತದ ನೀರು ಇವುಗಳಿಂದ ಕೆಟ್ಟವಾಸನೆಯಿರುವ, ಅಮಂಗಳವಾದ ಪಾತ್ರೆಯಂತಿರುವ ಹೊಟ್ಟೆಯಲ್ಲಿ ಗರ್ಭವಾಸ ಮಾಡುವುದು, ಶುಕ್ರಶೋಣಿತಗಳು, ಕೊಬ್ಬು, ನರಗಳು, ರಕ್ತನಾಳಗಳು, ಇವುಗಳಿಂದ ತುಂಬಿದ ಒಂಭತ್ತು ಬಾಗಿಲಿನ ಪಟ್ಟಣದಂತಿರುವ ಶರೀರದಲ್ಲಿ ಜೀವರೂಪದಿಂದ ವಾಸವಮಾಡುವುದು, ಇದನ್ನು ತಿಳಿದು ತನಗೆ ಹಿತವಾವುದೆಂದೂ, ಯೋಗದ ಸ್ವರೂಪಗಳಾವುವೆಂದೂ, ತಾಮಸಗುಣವುಳ್ಳ ಪ್ರಾಣಿಗಳು, ರಜೋಗುಣ ಸತ್ವಗುಣಗಳಿಂದ ಕೂಡಿದ ಪ್ರಾಣಿಗಳು, ಕುತ್ಸಿತವಾದ ನಿಂದ್ಯವಾದ ಪ್ರಾಣಿಗಳು, ಇವುಗಳ ಸ್ವರೂಪಗಳನ್ನೂ, ಸಾಂಖ್ಯಶಾಸ್ತ್ರದ ತಿಳಿವಳಿಕೆಯಿಂದ ಆತ್ಮಜ್ಞಾನಿಗಳಾದವರ ಸ್ವರೂಪವನ್ನೂ ತಿಳಿಯಬೇಕು.

೩೫-೩೭. ಸೂರ್ಯ ಚಂದ್ರಾದಿಗ್ರಹಣಗಳ ತೇಜಸ್ಸಿನಿಂದುಂಟಾಗುವ ಬಾಧೆಗಳನ್ನೂ ನಕ್ಷತ್ರಗಳ ಬೀಳುವಿಕೆಗಳನ್ನೂ ಮತ್ತು ಅವುಗಳ ಸ್ಥಾನವ್ಯತ್ಯಾಸಗಳನ್ನೂ ಸುಖ ದುಃಖ ಶೀತೋಷ್ಣಾದಿ ದ್ವಂದ್ವಗಳ ವಿರುದ್ಧದ ಫಲಗಳನ್ನೂ

ದ್ವಂದ್ವಾನಾಂ ವಿಪ್ರಯೋಗಂ ಚ ವಿಜ್ಞಾಯ ಕೃಪಣಂ ದ್ವಿಜಾಃ ।
ಅನ್ಯೋನ್ಯಭಕ್ಷಣಂ ದೃಷ್ಟ್ವಾ ಭೂತಾನಾಮಪಿ ಚಾಶುಭಂ ॥ ೩೬ ॥

ಬಾಲ್ಯೇ ಮೋಹಂ ಚ ವಿಜ್ಞಾಯ ಪಕ್ವದೇಹಸ್ಯ ಚಾಶುಭಂ ।
ರಾಗಂ ಮೋಹಂ ಚ ಸಂಪ್ರಾಪ್ತಂ ಕ್ವಚಿತ್ಸತ್ತ್ವಂ ಸಮಾಶ್ರಿತಂ ॥ ೩೭ ॥

ಸಹಸ್ರೇಷು ನರಃ ಕಶ್ಚಿನ್ಮೋಕ್ಷಬುದ್ಧಿಂ ಸಮಾಶ್ರಿತಃ ।
ದುರ್ಲಭತ್ವಂ ಚ ಮೋಕ್ಷಸ್ಯ ವಿಜ್ಞಾನಂ ಶ್ರುತಿಪೂರ್ವಕಂ ॥ ೩೮ ॥

ಬಹುಮಾನಮಲಬ್ಧೇಷು ಲಬ್ಧೇ ಮಧ್ಯಸ್ಥತಾಂ ಪುನಃ ।
ವಿಷಯಾಣಾಂ ಚ ದೌರಾತ್ಮ್ಯಂ ವಿಜ್ಞಾಯ ಚ ಪುನರ್ದ್ವಿಜಾಃ ॥ ೩೯ ॥

ಗತಾಸೂನಾಂ ಚ ಸತ್ತ್ವಾನಾಂ ದೇಹಾನ್ಭಿತ್ತ್ವಾ ತಥಾ ಶುಭಾನ್ ।
ವಾಸಂ ಕುಲೇಷು ಜಂತೂನಾಂ ಮರಣಾಯ ಧೃತಾತ್ಮನಾಂ ॥ ೪೦ ॥

ಪ್ರಾಣಿಗಳು ಒಂದನ್ನೊಂದು ತಿನ್ನುವ ಅಮಂಗಳವನ್ನೂ ಬಾಲ್ಯಶರೀರವಿರುವಾಗ ಅಜ್ಞಾನ, ಮುಪ್ಪು ಬಂದ ಶರೀರಕ್ಕೆ ಒದಗುವ ಅಮಂಗಳ ಇವುಗಳನ್ನೂ ಜೀವನಿಗೆ ರಾಗಮೋಹಗಳುಂಟಾಗಿ ಕೆಲವು ಸಂದರ್ಭಗಳಲ್ಲಿ ಸಾತ್ವಿಕಗುಣವುಂಟಾಗುವ ಬಗೆಯನ್ನೂ ತಿಳಿಯಬೇಕು.

೩೮-೪೩. ಸಾವಿರ ಮನುಜರಲ್ಲಿ ಯಾವನೋ ಒಬ್ಬನು ಮೋಕ್ಷವನ್ನು ಪಡೆಯಬೇಕೆಂಬ ಬುದ್ಧಿಯಿಂದ ವೇದವಾಕ್ಯಗಳಿಂದ ಮೋಕ್ಷವು ಕಷ್ಟಸಾಧ್ಯವೆಂದು ತಿಳಿದು ತನಗೆ ದೊರೆಯದ ವಿಷಯಗಳಲ್ಲಿ ಗೌರವವನ್ನೂ ದೊರೆತುದರ ವಿಷಯದಲ್ಲಿ ಉದಾಸೀನತೆಯನ್ನೂ, ವಿಷಯಗಳ ದುಷ್ಟತೆಯನ್ನೂ ತಿಳಿದು ಪ್ರಾಣವು ಹೋದ ಜಂತುಗಳ ಶರೀರವನ್ನು ಭೇದಿಸಿಕೊಂಡು ಶುಭಕರವಾದ ಪ್ರಾಣಿಗಳ ವಂಶದಲ್ಲಿ ಹುಟ್ಟಿ ವಾಸಮಾಡುತ್ತ, ಮರಣವನ್ನು ನಿರೀಕ್ಷಿಸುತ್ತಿರುವ ಜೀವರುಗಳನ್ನೂ, ಸಾತ್ವಿಕಪ್ರಾಣಿಗಳಿಗೆ ಬರುವ ದುಃಖಗಳನ್ನೂ ಬ್ರಹ್ಮಹತ್ಯ ಮಾಡಿದವರಿಗೂ, ಪಾಪಿಗಳಿಗೂ, ದುಷ್ಟಬುದ್ಧಿಯುಳ್ಳವರಿಗೂ, ಬರುವ

ಸಾತ್ತ್ವಿಕಾನಾಂ ಚ ಜಂತೂನಾಂ ದುಃಖಂ ವಿಜ್ಞಾಯ ಭೋ ದ್ವಿಜಾಃ ।
ಬ್ರಹ್ಮಘ್ನಾನಾಂ ಗತಿಂ ಜ್ಞಾತ್ವಾ ಪತಿತಾನಾಂ ಸುದಾರುಣಾಂ ॥ ೪೧ ॥

ಸುರಾಪಾನೇ ಚ ಸಕ್ತಾನಾಂ ಬ್ರಾಹ್ಮಣಾನಾಂ ದುರಾತ್ಮನಾಂ ।
ಗುರುದಾರಪ್ರಸಕ್ತಾನಾಂ ಗತಿಂ ವಿಜ್ಞಾಯ ಚಾಶುಭಾಂ ॥ ೪೨ ॥

ಜನನೀಷು ಚ ವರ್ತಂತೇ ಯೇನ ಸಮ್ಯಗ್ದ್ವಿಜೋತ್ತಮಾಃ ।
ಸದೇವಕೇಷು ಲೋಕೇಷು ಯೇನ ವರ್ತಂತಿ ಮಾನವಾಃ ॥ ೪೩ ॥

ತೇನ ಜ್ಞಾನೇನ ವಿಜ್ಞಾಯ ಗತಿಂ ಚಾಶುಭಕರ್ಮಣಾಂ ।
ತಿರ್ಯಗ್ಯೋನಿಗತಾನಾಂ ಚ ವಿಜ್ಞಾಯ ಚ ಗತೀಃ ಪೃಥಕ್ ॥ ೪೪ ॥

ವೇದವಾದಾಂಸ್ತಥಾ ಚಿತ್ರಾನೃತೂನಾಂ ಪರ್ಯಯಾಂಸ್ತಥಾ ।
ಕ್ಷಯಂ ಸಂವತ್ಸರಾಣಾಂ ಚ ಮಾಸಾನಾಂ ಚ ಕ್ಷಯಂ ತಥಾ ॥ ೪೫ ॥

ಭಯಂಕರವಾದ ಗತಿಯನ್ನೂ, ಮದ್ಯವನ್ನು ಕುಡಿಯುವ ಬ್ರಾಹ್ಮಣನಿಗೂ, ಗುರುಪತ್ನಿಯನ್ನು ಕೂಡುವ ಶಿಷ್ಯನಿಗೂ ಬರುವ ಅಮಂಗಳವಾದ ಗತಿಯನ್ನೂ ತಿಳಿದುಕೊಳ್ಳಬೇಕು.

೪೩-೪೯. ಮನುಜರು ತಮ್ಮ ತಾಯಿಯರ ವಿಷಯದಲ್ಲಿ ಒಳ್ಳೆಯ ಮಾತೃಭಕ್ತಿಯಿಂದಿರುತ್ತ ಲೋಕವ್ಯವಹಾರ ವಿಷಯದಲ್ಲಿ ಯಾವ ನಡತೆಯಿಂದಿರುವನೋ ಅದೇ ಜ್ಞಾನದಿಂದ ಅಶುಭಕರ್ಮಗಳನ್ನು ಮಾಡಿದವರಿಗೆ ಬರುವ ಗತಿಯನ್ನು ತಿರ್ಯಗ್ಯೋನಿಯಲ್ಲಿ ಹುಟ್ಟಿದ ಜೀವರಿಗೆ ಬರುವ ಗತಿಯನ್ನೂ, ವಿಚಿತ್ರವಾದ ವೇದವಾದಗಳು, ಋತುಗಳ ವ್ಯತ್ಯಾಸಗಳು, ವರ್ಷ, ತಿಂಗಳು, ಪಕ್ಷ, ದಿವಸ, ಇವುಗಳು ಕಳೆದುಹೋಗುವುದನ್ನೂ ಚಂದ್ರನ ವೃದ್ಧಿಕ್ಷಯಗಳನ್ನೂ, ಸಮುದ್ರದ ಉಬ್ಬರವಿಳಿತಗಳನ್ನೂ, ಧನದ ವೃದ್ಧಿಕ್ಷಯಗಳನ್ನೂ,

ಪಕ್ಷಕ್ಷಯಂ ತಥಾ ದೃಷ್ಟ್ವಾ ದಿವಸಾನಾಂ ಚ ಸಂಕ್ಷಯಂ ।
ಕ್ಷಯಂ ವೃದ್ಧಿಂ ಚ ಚಂದ್ರಸ್ಯ ದೃಷ್ಟ್ವಾ ಪ್ರತ್ಯಕ್ಷತಸ್ತಥಾ ॥ ೪೬ ॥

ವೃದ್ಧಿಂ ದೃಷ್ಟ್ವಾ ಸಮುದ್ರಾಣಾಂ ಕ್ಷಯಂ ತೇಷಾಂ ತಥಾ ಪುನಃ ।
ಕ್ಷಯಂ ಧನಾನಾಂ ದೃಷ್ಟ್ವಾ ಚ ಪುನರ್ವೃದ್ಧಿಂ ತಥೈವ ಚ ॥ ೪೭ ॥

ಸಂಯೋಗಾನಾಂ ತಥಾ ದೃಷ್ಟ್ವಾ ಯುಗಾನಾಂ ಚ ವಿಶೇಷತಃ ।
ದೇಹವೈಕ್ಲವ್ಯತಾಂ ಚೈವ ಸಮ್ಯಗ್ವಿಜ್ಞಾಯ ತತ್ತ್ವತಃ ॥ ೪೮ ॥

ಆತ್ಮದೋಷಾಂಶ್ಚ ವಿಜ್ಞಾಯ ಸರ್ವಾನಾತ್ಮನಿ ಸಂಸ್ಥಿತಾನ್ ।
ಸ್ವದೇಹಾದುತ್ಥಿತಾನ್ಗಂಧಾಂಸ್ತಥಾ ವಿಜ್ಞಾಯ ಚಾಶುಭಾನ್ ॥ ೪೯ ॥

॥ ಮುನಯ ಊಚುಃ ॥

ಕಾನುತ್ಪಾತಭವಾನ್ದೋಷಾನ್ಪಶ್ಯಸಿ ಬ್ರಹ್ಮವಿತ್ತಮ ।
ಏತಂ ನಃ ಸಂಶಯಂ ಕೃತ್ಸ್ನಂ ವಕ್ತುಮರ್ಹಸ್ಯಶೇಷತಃ ॥ ೫೦ ॥

॥ ವ್ಯಾಸ ಉವಾಚ ॥

ಪಂಚ ದೋಷಾನ್ದ್ವಿಜಾ ದೇಹೇ ಪ್ರವದಂತಿ ಮನೀಷಿಣಃ ।
ಮಾರ್ಗಜ್ಞಾಃ ಕಾಪಿಲಾಃ ಸಾಂಖ್ಯಾಃ ಶೃಣುಧ್ವಂ ಮುನಿಸತ್ತಮಾಃ ॥ ೫೧ ॥

ಯುಗಗಳು ಒಂದಕ್ಕೊಂದು ಸೇರಿ ನಡೆಯುವುದನ್ನೂ ದೇಹಕ್ಕೆ ನಿಜವಾಗಿ ಬರುವ ವಿಕಾರಗಳನ್ನೂ ತನ್ನ ಶರೀರದಿಂದಲೇ ಹುಟ್ಟಿದ ಅಶುಭಗಳನ್ನೂ, ದುರ್ಗಂಧಗಳನ್ನೂ, ತಿಳಿದುಕೊಂಡು ಈ ಆತ್ಮದೋಷಗಳೆಲ್ಲವೂ ಆತ್ಮನಲ್ಲಿಯೇ ಸ್ವಾಭಾವಿಕವಾಗಿರುವುದೇ ಇಲ್ಲವೇ ಎಂಬುದನ್ನು ವಿಚಾರದಿಂದ ತಿಳಿಯಬೇಕು.

೫೦. ಋಷಿಗಳು ಕೇಳಿದರು :—ಎಲೈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ವ್ಯಾಸನೇ, ಶರೀರಸಂಬಂಧವಾದ ದೋಷಗಳಾವುವು? ಅವುಗಳೆಲ್ಲವನ್ನೂ ನಮಗೆ ತಿಳಿಸಿ ನಮ್ಮ ಸಂದೇಹಗಳನ್ನು ಪರಿಹರಿಸಬೇಕು ಎನ್ನಲು,

೫೧-೫೬. ವ್ಯಾಸನು ಹೇಳಿದನು :—ಎಲೈ ಬ್ರಾಹ್ಮಣರೇ, ಬುದ್ಧಿವಂತರಾದವರು ಈ ಶರೀರದಲ್ಲಿ ಐದು ದೋಷಗಳಿರುವುವೆಂದು ಕಪಿಲಋಷಿಯು

ಕಾಮಕ್ರೋಧೌ ಭಯಂ ನಿದ್ರಾ ಪಂಚಮಃ ಶ್ವಾಸ ಉಚ್ಯತೇ ।
ಏತೇ ದೋಷಾಃ ಶರೀರೇಷು ದೃಶ್ಯಂತೇ ಸರ್ವದೇಹಿನಾಂ ॥ ೫೨ ॥

ಛಿಂದಂತಿ ಕ್ಷಮಯಾ ಕ್ರೋಧಂ ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾನ್ನಿದ್ರಾಮಪ್ರಮಾದಾದ್ಭಯಂ ತಥಾ ॥ ೫೩ ॥

ಛಿಂದಂತಿ ಪಂಚಮಂ ಶ್ವಾಸಮಲ್ಪಾಹಾರತಯಾ ದ್ವಿಜಾಃ ।
ಗುಣಾನ್ಗುಣಶತೈರ್ಜ್ಞಾತ್ವಾ ದೋಷಾನ್ದೋಷಶತೈರಪಿ ॥ ೫೪ ॥

ಹೇತೂನ್ಹೇತುಶತೈಶ್ಚಿತ್ರೈಶ್ಚಿತ್ರಾನ್ವಿಜ್ಞಾಯ ತತ್ತ್ವತಃ ।
ಅಪಾಂ ಫೇನೋಪಮಂ ಲೋಕಂ ವಿಷ್ಣೋರ್ಮಾಯಾಶತೈಃ ಕೃತಂ ॥ ೫೫ ॥

ಚಿತ್ರಭಿತ್ತಿಪ್ರತೀಕಾಶಂ ನಲಸಾರಮನರ್ಥಕಂ ।
ತಮಃಸಂಭ್ರಮಿತಂ ದೃಷ್ಟ್ವಾ ವರ್ಷಬುದ್ಬುದಸಂನಿಭಂ ॥ ೫೬ ॥

ಹೇಳಿದ ಸಾಂಖ್ಯತತ್ವಮಾರ್ಗವನ್ನನುಸರಿಸಿ ಹೇಳುವರು. ಕಾಮ, ಕ್ರೋಧ, ಭಯ, ನಿದ್ರೆ, ಶ್ವಾಸ, ಈ ಐದು ಸಮಸ್ತ ಶರೀರಗಳಲ್ಲಿಯೂ ಕಾಣುವುವು. ಇವೇ ದೋಷಗಳು. ಕ್ಷಮಾಗುಣದಿಂದ ಕ್ರೋಧವನ್ನೂ, ಸಂಕಲ್ಪವನ್ನು ಮಾಡದಿರುವುದರಿಂದ ಕಾಮವನ್ನೂ, ಸಾತ್ವಿಕಾಹಾರ ಸೇವನೆಯಿಂದ ನಿದ್ರೆಯನ್ನೂ, ಎಚ್ಚರಿಕೆಯಿಂದ ಕೆಲಸಮಾಡುವುದರಿಂದ ಭಯವನ್ನೂ ಅಲ್ಪಾಹಾರದಿಂದ ಶ್ವಾಸವನ್ನೂ ಜಯಿಸುವರು. ನೂರಾರು ಗುಣಗಳಿಂದ ಗುಣಗಳನ್ನೂ, ದೋಷಗಳಿಂದ ದೋಷಗಳನ್ನೂ, ಕಾರಣಗಳಿಂದ ಕಾರಣಗಳನ್ನೂ, ಆಶ್ಚರ್ಯಗಳಿಂದ ಆಶ್ಚರ್ಯಗಳನ್ನೂ, ಸ್ವರೂಪಾನುಭವದಿಂದ ತಿಳಿದು ನೀರಿನ ನೊರೆಗೆ ಸಮಾನವಾದ ಈ ಪ್ರಪಂಚವು ವಿಷ್ಣುವಿನ ನೂರಾರು ಮಾಯೆಗಳಿಂದ ಮಾಡಿದುದೆಂದೂ ಚಿತ್ರದ ಗೋಡೆಯಂತೆಯೂ, ಜೊಂಡಿನ ಗಡ್ಡಿಯಂತೆಯೂ, ಅಜ್ಞಾನದ ವಿಲಾಸದಂತೆಯೂ, ನೀರಿನ ಗುಳ್ಳೆಯಂತೆಯೂ ನಾಶವಾಗತಕ್ಕುದೆಂದು ತಿಳಿಯಬೇಕು. ಈ ಪ್ರಪಂಚವು ಸುಖಾಶ್ರಯವಾದರೂ

ನಾಶಪ್ರಾಯಂ ಸುಖಾಧಾನಂ ನಾಶೋತ್ತರಮಹಾಭಯಂ ।
ರಜಸ್ತಮಸಿ ಸಂಮಗ್ನಂ ಪಂಕೇ ದ್ವಿಪಮಿವಾವಶಂ ॥ ೫೭ ॥

ಸಾಂಖ್ಯಾ ವಿಪ್ರಾ ಮಹಾಪ್ರಾಜ್ಞಾಸ್ತ್ಯಕ್ತ್ವಾ ಸ್ನೇಹಂ ಪ್ರಜಾಕೃತಂ ।
ಜ್ಞಾನಜ್ಞೇಯೇನ ಸಾಂಖ್ಯೇನ ವ್ಯಾಪಿನಾ ಮಹತಾ ದ್ವಿಜಾಃ ॥ ೫೮ ॥

ರಾಜಸಾನಶುಭಾನ್ಗಂಧಾಂಸ್ತಾಮಸಾಂಶ್ಚ ತಥಾವಿಧಾನ್ ।
ಪುಣ್ಯಾಂಶ್ಚ ಸಾತ್ತ್ವಿಕಾನ್ಗಂಧಾನ್ಸ್ಪರ್ಶಜಾನ್ದೇಹಸಂಶ್ರಿತಾನ್ ॥ ೫೯ ॥

ಛಿತ್ತ್ವಾತ್ಮಜ್ಞಾನಶಸ್ತ್ರೇಣ ತಪೋದಂಡೇನ ಸತ್ತಮಾಃ ।
ತತೋ ದುಃಖಾದಿಕಂ ಘೋರಂ ಚಿಂತಾಶೋಕಮಹಾಹ್ರದಂ ॥ ೬೦ ॥

ವ್ಯಾಧಿಮೃತ್ಯುಮಹಾಘೋರಂ ಮಹಾಭಯಮಹೋರಗಂ ।
ತಮಃಕೂರ್ಮಂ ರಜೋಮೀನಂ ಪ್ರಜ್ಞಯಾ ಸಂತರಂತ್ಯುತ ॥ ೬೧ ॥

ಸ್ನೇಹಪಂಕಂ ಜರಾದುರ್ಗಂ ಸ್ಪರ್ಶದ್ವೀಪಂ ದ್ವಿಜೋತ್ತಮಾಃ ।
ಕರ್ಮಾಗಾಧಂ ಸತ್ಯತೀರಂ ಸ್ಥಿತಂ ವ್ರತಮನೀಷಿಣಃ ॥ ೬೨ ॥

---

೫೭. ಮುಂದೆ ನಾಶವಾಗತಕ್ಕುದಾಗಿ ಮಹಾಭಯಪ್ರದವಾಗಿರುವುದು. ಕೆಸರಿನಲ್ಲಿ ಆನೆ ಮುಳುಗಿದಂತೆ ರಜೋಗುಣ, ತಮೋಗುಣಗಳಲ್ಲಿ ಮುಳುಗಿರುವುದು.

೫೮-೬೨. ಎಲೈ ಬ್ರಾಹ್ಮಣರೇ, ಕೇಳಿರಿ. ಮಹಾಜ್ಞಾನಿಗಳಾದ ಸಾಂಖ್ಯರು ಜ್ಞಾನದಿಂದಲೇ ತಿಳಿಯತಕ್ಕ ಸಾಂಖ್ಯತತ್ವಜ್ಞಾನದಿಂದ ಪ್ರಜೆಗಳ ಸಂಬಂಧದಿಂದುಂಟಾದ ಸ್ನೇಹವನ್ನು ಬಿಟ್ಟು, ರಾಜಸ, ತಾಮಸ, ಸಾತ್ವಿಕ ಗುಣ ಸಂಬಂಧವಾದ ಶುಭಾಶುಭವಾಸನೆಗಳನ್ನು ಆತ್ಮಜ್ಞಾನವೆಂಬ ಶಾಸ್ತ್ರದಿಂದ ಕತ್ತರಿಸಿ ತಮಸ್ಸೆಂಬ ದಂಡದಿಂದ ಬಡಿದು ಕ್ರೂರವಾದ ದುಃಖವೇ ಮೊದಲಾದ ಚಿಂತಾರೂಪವಾದ ದೊಡ್ಡ ಮಡುವೂ ರೋಗಗಳೆಂಬ ಭಯಂಕರವಾದ ಮೃತ್ಯುವೂ ಭಯವೆಂಬ ಸರ್ಪವೂ ಅಜ್ಞಾನವೆಂಬ ಆಮೆಯೂ ರಜೋಗುಣವೆಂಬ ಮೀನೂ ಪ್ರೀತಿಯೆಂಬ ಕೆಸರೂ ಮುಪ್ಪೆಂಬ ಜಲದುರ್ಗವೂ ಸ್ಪರ್ಶಸುಖವೆಂಬ ದ್ವೀಪವೂ ಕರ್ಮವೆಂಬ ಆಳವೂ ಸತ್ಯವೆಂಬ ದಡವೂ ಉಳ್ಳ ಸಂಸಾರಸಮುದ್ರವನ್ನು ಜ್ಞಾನದಿಂದ ದಾಟುವರು.

ಹರ್ಷಸಂಘಮಹಾವೇಗಂ ನಾನಾರಸಸಮಾಕುಲಂ ।
ನಾನಾಪ್ರೀತಿಮಹಾರತ್ನಂ ದುಃಖಜ್ವರಸಮೀರಿತಂ ॥ ೬೩ ॥

ಶೋಕತೃಷ್ಣಾಮಹಾವರ್ತಂ ತೀಕ್ಷ್ಣವ್ಯಾಧಿಮಹಾರುಜಂ ।
ಅಸ್ಥಿಸಂಘಾತಸಂಘಟ್ಟಂ ಶ್ಲೇಷ್ಮಯೋಗಂ ದ್ವಿಜೋತ್ತಮಾಃ ॥ ೬೪ ॥

ದಾನಮುಕ್ತಾಕರಂ ಘೋರಂ ಶೋಣಿತೋದ್ಗಾರವಿದ್ರುಮಂ ।
ಹಸಿತೋತ್ಕೃಷ್ಟನಿರ್ಘೋಷಂ ನಾನಾಜ್ಞಾನಸುದುಷ್ಕರಂ ॥ ೬೫ ॥

ರೋದನಾಶ್ರುಮಲಕ್ಷಾರಂ ಸಂಗಯೋಗಪರಾಯಣಂ ।
ಪ್ರಲಬ್ಧ್ವಾ ಜನ್ಮಲೋಕೋ ಯಂ ಪುತ್ರಬಾಂಧವಪತ್ತನಂ ॥ ೬೬ ॥

ಅಹಿಂಸಾಸತ್ಯಮರ್ಯಾದಂ ಪ್ರಾಣಯೋಗಮಯೋರ್ಮಿಲಂ ।
ವೃಂದಾನುಗಾಮಿನಂ ಕ್ಷೀರಂ ಸರ್ವಭೂತಪಯೋದಧಿಂ ॥ ೬೭ ॥

ಮೋಕ್ಷದುರ್ಲಭವಿಷಯಂ ವಾಡವಾಸುಖಸಾಗರಂ ।
ತರಂತಿ ಯತಯಃ ಸಿದ್ಧಾ ಜ್ಞಾನಯೋಗೇನ ಚಾನಘಾಃ ॥ ೬೮ ॥

೬೩-೬೮. ಸಂತೋಷಸಮುದಾಯವೆಂಬ ದೊಡ್ಡ ಪ್ರವಾಹವೂ ಬಗೆ ಬಗೆಯ ರಸಗಳ ಗುಂಪೂ ಬಗೆಬಗೆಯ ಪ್ರೀತಿಗಳೆಂಬ ರತ್ನವೂ ದುಃಖವೆಂಬ ಜ್ವರವೂ ದುಃಖ ಮತ್ತು ಅತ್ಯಾಸೆಗಳೆಂಬ ದೊಡ್ಡ ಸುಳಿಯೂ ಕ್ರೂರವಾದ ರೋಗಗಳೆಂಬ ಕಷ್ಟಗಳೂ ಮದವೆಂಬ ಮುತ್ತುಗಳೂ ರಕ್ತವೆಂಬ ಹವಳವೂ ನಗುವೆಂಬ ಧ್ವನಿಯೂ ದುಃಖದ ಕಣ್ಣೀರು ಮತ್ತು ಮಲವೆಂಬ ಉಪ್ಪೂ, ಮಕ್ಕಳು, ನಂಟರು ಎಂಬ ಪಟ್ಟಣವೂ, ಅಹಿಂಸಾ ಸತ್ಯಾ ಎಂಬ ತೀರವೂ, ಪ್ರಾಣಸಂಬಂಧವೆಂಬ ಅಲೆಯೂ ಇವುಗಳಿಂದ ಕೂಡಿದ, ಸಮಸ್ತ ಪ್ರಾಣಿಗಳೆಂಬ ನೀರುಳ್ಳ, ಮೋಕ್ಷವು ಸಿಕ್ಕದಿರುವ ಸಂಸಾರಸುಖವೆಂಬ ಸಾಗರವನ್ನು ಮಂತ್ರಸಿದ್ಧಿಯನ್ನು ಹೊಂದಿದ ಯತಿಗಳು ಜ್ಞಾನಯೋಗದಿಂದ ದಾಟುವರು.

ತೀರ್ತ್ವಾ ಚ ದುಸ್ತರಂ ಜನ್ಮ ವಿಶಂತಿ ವಿಮಲಂ ನಭಃ ।
ತತಸ್ತಾನ್ಸುಕೃತೀನ್ ಜ್ಞಾತ್ವಾ ಸೂರ್ಯೋ ವಹತಿ ರಶ್ಮಿಭಿಃ ॥ ೬೯ ॥

ಪದ್ಮತಂತುವದಾವಿಶ್ಯ ಪ್ರವಹನ್ವಿಷಯಾನ್ದ್ವಿಜಾಃ ।
ತತ್ರ ತಾನ್ಪ್ರವಹೋ ವಾಯುಃ ಪ್ರತಿಗೃಹ್ಣಾತಿ ಚಾನಘಾಃ ॥ ೭೦ ॥

ವೀತರಾಗಾನ್ಯತೀನ್ಸಿದ್ಧಾನ್ವೀರ್ಯಯುಕ್ತಾಂಸ್ತಪೋಧನಾನ್ ।
ಸೂಕ್ಷ್ಮಃ ಶೀತಃ ಸುಗಂಧಶ್ಚ ಸುಖಸ್ಪರ್ಶಶ್ಚ ಭೋ ದ್ವಿಜಾಃ ॥ ೭೧ ॥

ಸಪ್ತಾನಾಂ ಮರುತಾಂ ಶ್ರೇಷ್ಠೋ ಲೋಕಾನ್ಗಚ್ಛತಿ ಯಃ ಶುಭಾನ್ ।
ಸ ತಾನ್ವಹತಿ ವಿಪ್ರೇಂದ್ರಾ ನಭಸಃ ಪರಮಾಂ ಗತಿಂ ॥ ೭೨ ॥

ನಭೋ ವಹತಿ ಲೋಕೇಶಾನ್ರಜಸಃ ಪರಮಾಂ ಗತಿಂ ।
ರಜೋ ವಹತಿ ವಿಪ್ರೇಂದ್ರಾಃ ಸತ್ತ್ವಸ್ಯ ಪರಮಾಂ ಗತಿಂ ॥ ೭೩ ॥

ಸತ್ತ್ವಂ ವಹತಿ ಶುದ್ಧಾತ್ಮಾ ಪರಂ ನಾರಾಯಣಂ ಪ್ರಭುಂ ।
ಪ್ರಭುರ್ವಹತಿ ಶುದ್ಧಾತ್ಮಾ ಪರಮಾತ್ಮಾನಮಾತ್ಮನಾ ॥ ೭೪ ॥

೬೯-೭೪. ಯತಿಗಳು ದಾಟಲಸಾಧ್ಯವಾದ ಈ ಜನ್ಮವನ್ನು ದಾಟಿ ಪರಿಶುದ್ಧವಾದ ಆಕಾಶವನ್ನು ಸೇರುವರು. ತರುವಾಯ ಇವರನ್ನು ಪುಣ್ಯವಂತರೆಂದು ತಿಳಿದು ಸೂರ್ಯನು ತನ್ನ ಕಿರಣಗಳಿಂದ ಇವರನ್ನು ತೆಗೆದುಕೊಂಡು ಹೋಗುವನು. ಕಮಲದ ನಾಳದ ಅತಿ ಸೂಕ್ಷ್ಮವಾದ ಎಳೆಯಂತೆ ಈ ಯತಿಗಳು ಸೂರ್ಯಕಿರಣದಲ್ಲಿರುವಾಗ ಶೈತ್ಯ, ಸೌರಭ್ಯ, ಮಾಂದ್ಯಗುಣದಿಂದ ಸುಖಸ್ಪರ್ಶವುಳ್ಳ ಪ್ರವಹನೆಂಬ ವಾಯುವು ವೈರಾಗ್ಯವುಳ್ಳವರೂ, ಶುದ್ಧರೂ, ಸನ್ಯಾಸಿಗಳೂ, ತಪಸ್ವಿಗಳೂ, ಸಿದ್ಧಿಯ ಬಲವುಳ್ಳವರೂ ಆದ ಇವರನ್ನು ಗ್ರಹಿಸುವನು. ಸಪ್ತಮರುತ್ತುಗಳಲ್ಲಿ ಶ್ರೇಷ್ಠನಾದ ಪ್ರವಹನೆಂಬ ವಾಯುವು ಇವರನ್ನು ಆಕಾಶದಲ್ಲಿ ಉತ್ತಮಗತಿಸ್ವರೂಪವಾದ ಲೋಕಕ್ಕೆ ಸೇರಿಸುವನು. ಆ ಆಕಾಶವು ಇವರನ್ನು ರಜೋಗುಣಕ್ಕೆ ಸೇರಿಸುವುದು. ಆ ರಜೋಗುಣವು ಸತ್ವಗುಣದ ಶ್ರೇಷ್ಠವಾದ ಸ್ಥಾನಕ್ಕೂ ಸೇರಿರುವುದು. ಆ ಸತ್ವಗುಣವು ಸ್ವಾಮಿಯಾದ ನಾರಾಯಣನಲ್ಲಿ ಸೇರಿರುವುದು. ಆ ನಾರಾಯಣನು ಪರಮಾತ್ಮನಲ್ಲಿ ಸೇರಿರುವನು.

ಪರಮಾತ್ಮಾನಮಾಸಾದ್ಯ ತದ್ಭೂತಾ ಯತಯೋಽಮಲಾಃ ।
ಅಮೃತತ್ವಾಯ ಕಲ್ಪಂತೇ ನ ನಿವರ್ತಂತಿ ಚ ದ್ವಿಜಾಃ ॥ ೭೫ ॥

ಪರಮಾ ಸಾ ಗತಿರ್ವಿಪ್ರಾ ನಿರ್ದ್ವಂದ್ವಾನಾಂ ಮಹಾತ್ಮನಾಂ ।
ಸತ್ಯಾರ್ಜವರತಾನಾಂ ವೈ ಸರ್ವಭೂತದಯಾವತಾಂ ॥ ೭೬ ॥

॥ ಮುನಯ ಊಚುಃ ॥

ಸ್ಥಾನಮುತ್ತಮಮಾಸಾದ್ಯ ಭಗವಂತಂ ಸ್ಥಿರವ್ರತಾಃ ।
ಆಜನ್ಮಮರಣಂ ವಾ ತೇ ರಮಂತೇ ತತ್ರ ವಾ ನ ವಾ ॥ ೭೭ ॥

ಯದತ್ರ ತಥ್ಯಂ ತತ್ತ್ವಂ ನೋ ಯಥಾವದ್ವಕ್ತುಮರ್ಹಸಿ ।
ತ್ವದೃತೇ ಮಾನವಂ ನಾನ್ಯಂ ಪ್ರಷ್ಟುಮರ್ಹಾಮ ಸತ್ತಮ ॥ ೭೮ ॥

ಮೋಕ್ಷದೋಷೋ ಮಹಾನೇಷ ಪ್ರಾಪ್ಯ ಸಿದ್ಧಿಂ ಗತಾನೃಷೀನ್ ।
ಯದಿ ತತ್ರೈವ ವಿಜ್ಞಾನೇ ವರ್ತಂತೇ ಯತಯಃ ಪರೇ ॥ ೭೯ ॥

೭೫-೭೬. ನಿರ್ಮಲರಾದ ಆ ಯತಿಗಳು ಪರಮಾತ್ಮನನ್ನು ಹೊಂದಿ ಅವನ ಸ್ವರೂಪರಾಗಿ ಸಂಸಾರದುಃಖದ ಬಿಡುಗಡೆಯನ್ನು ಹೊಂದುವರು. ಅವರಿಗೆ ಪುನರ್ಜನ್ಮವಿಲ್ಲ. ದ್ವಂದದುಃಖವಿಲ್ಲದ ಸತ್ಯ, ಸರಳತೆ, ಭೂತದಯೆ ಈ ಗುಣಗಳುಳ್ಳ ಮಹಾತ್ಮರಿಗೆ ಅದೇ ಪರಮಗತಿಯು.

೭೭-೮೦. ಋಷಿಗಳು ಹೇಳಿದರು.—ಎಲೈ ವ್ಯಾಸಮುನಿಯೇ, ಸ್ಥಿರವಾದ ವ್ರತವನ್ನು ಮಾಡಿದವರು ಉತ್ತಮವಾದ ಸ್ಥಳವನ್ನು ಹೊಂದಿ ಹುಟ್ಟಿದಂದಿನಿಂದ ಸಾಯುವವರೆಗೂ ಅಲ್ಲಿಯೇ ಸಂತೋಷದಿಂದಿರುವರೇ ? ಅದರ ತತ್ತ್ವವನ್ನು ನಮಗೆ ಹೇಳಬೇಕು. ಉತ್ತರವನ್ನು ಹೇಳಲು ಶಕ್ತನಾದ ನಿನ್ನನ್ನು ಬಿಟ್ಟು ಮತ್ತೊಬ್ಬ ಮನುಷ್ಯನನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಮನುಷ್ಯನಿಗೆ ಮೋಕ್ಷಪ್ರಾಪ್ತಿಯಾಗಲು ಅನೇಕ ದೋಷಗಳಿರುವುವು. ಸಿದ್ಧಿಯನ್ನು ಪಡೆದ ಋಷಿಗಳೂ, ಯತಿಗಳೂ, ವಿಜ್ಞಾನಸ್ವರೂಪವಾದ ಆತ್ಮಸ್ಥಿತಿಯನ್ನು ಪಡೆದು

ಪ್ರವೃತ್ತಿಲಕ್ಷಣಂ ಧರ್ಮಂ ಪಶ್ಯಾಮ ಪರಮಂ ದ್ವಿಜ ।
ಮಗ್ನಸ್ಯ ಹಿ ಪರೇ ಜ್ಞಾನೇ ಕಿಂತು ದುಃಖಾಂತರಂ ಭವೇತ್ ॥ ೮೦ ॥

॥ ವ್ಯಾಸ ಉವಾಚ ॥

ಯಥಾನ್ಯಾಯಂ ಮುನಿಶ್ರೇಷ್ಠಾಃ ಪ್ರಶ್ನಃ ಪೃಷ್ಟಶ್ಚ ಸಂಕಟಃ ।
ಬುಧಾನಾಮಪಿ ಸಂಮೋಹಃ ಪ್ರಶ್ನೇಽಸ್ಮಿನ್ಮುನಿಸತ್ತಮಾಃ ॥ ೮೧ ॥

ಅತ್ರಾಪಿ ತತ್ತ್ವಂ ಪರಮಂ ಶೃಣುಧ್ವಂ ವಚನಂ ಮಮ ।
ಬುದ್ಧಿಶ್ಚ ಪರಮಾ ಯತ್ರ ಕಪಿಲಾನಾಂ ಮಹಾತ್ಮನಾಂ ॥ ೮೨ ॥

ಇಂದ್ರಿಯಾಣ್ಯಪಿ ಬುಧ್ಯಂತೇ ಸ್ವದೇಹಂ ದೇಹಿನಾಂ ದ್ವಿಜಾಃ ।
ಕರಣಾನ್ಯಾತ್ಮನಸ್ತಾನಿ ಸೂಕ್ಷ್ಮಂ ಪಶ್ಯಂತಿ ತೈಸ್ತು ಸಃ ॥ ೮೩ ॥

ಆತ್ಮನಾ ವಿಪ್ರಹೀಣಾನಿ ಕಾಷ್ಠಕುಡ್ಯಸಮಾನಿ ತು ।
ವಿನಶ್ಯಂತಿ ನ ಸಂದೇಹೋ ವೇಲಾ ಇವ ಮಹಾರ್ಣವೇ ॥ ೮೪ ॥

ಅದೇ ಸ್ಥಿತಿಯಲ್ಲಿರುವರೇ ? ನಮಗೆ ಪ್ರವೃತ್ತಿಲಕ್ಷಣವಾದ ಕರ್ಮಮಾರ್ಗವೇ ಶ್ರೇಷ್ಠವೆಂದು ಕಾಣುತ್ತಿರುವುದು. ಶ್ರೇಷ್ಠವಾದ ಆತ್ಮಜ್ಞಾನದಲ್ಲಿ ಮುಳುಗಿದವನಿಗೆ ದುಃಖವೇನಾದರೂ ಉಂಟಾಗುವುದೇ ಎನ್ನಲು

೮೧-೮೪. ವ್ಯಾಸನು ಹೇಳಿದನು ಮುನಿಶ್ರೇಷ್ಠರೇ, ನ್ಯಾಯಕ್ಕನಸಾರವಾಗಿ ಉತ್ತರಹೇಳಲು ಕಷ್ಟವಾದ ಪ್ರಶ್ನೆಯನ್ನು ಮಾಡಿರುವಿರಿ. ಈ ಪ್ರಶ್ನೆಯನ್ನು ಕೇಳಲು ವಿದ್ವಾಂಸರಾದವರಿಗೂ ಭ್ರಾಂತಿಯುಂಟಾಗುವುದು. ಈ ವಿಷಯದಲ್ಲಿ ನಾನುಹೇಳುವ ಶ್ರೇಷ್ಠವಾದ ತತ್ವವನ್ನು ಕೇಳಿರಿ. ಕಪಿಲಋಷಿಯ ಸಾಂಖ್ಯ ಶಾಸ್ತ್ರವನ್ನು ತಿಳಿದ ಮಹಾತ್ಮರಿಗೆ ಬುದ್ಧಿತತ್ವವೇ ಅತ್ಯಂತ ಮುಖ್ಯವಾದುದು. ಜೀವರುಗಳ ದೇಹವೂ ಇಂದ್ರಿಯಗಳೂ ಬುದ್ಧಿ ತತ್ವಕ್ಕೆ ಗೋಚರವಾಗಿರುವುವು. ಜೀವನು ತನ್ನಲ್ಲಿರುವ ಇಂದ್ರಿಯಗಳನ್ನು ಬುದ್ಧಿತತ್ವದಿಂದಲೇ ಸೂಕ್ಷ್ಮವಾಗಿ ತಿಳಿಯುವನು. ಜೀವಶಕ್ತಿಯಿಲ್ಲದ ಇಂದ್ರಿಯಗಳೂ ಶರೀರವೂ ಮರ ಗೋಡೆ ಇವುಗಳಂತೆ ನಾಶವಾಗುವುವು. ಈ ವಿಷಯದಲ್ಲಿ ಸಂದೇಹವಿಲ್ಲ.

ಇಂದ್ರಿಯೈಃ ಸಹ ಸುಪ್ತಸ್ಯ ದೇಹಿನೋ ದ್ವಿಜಸತ್ತಮಾಃ ।
ಸೂಕ್ಷ್ಮಶ್ಚರತಿ ಸರ್ವತ್ರ ನಭಸೀವ ಸಮೀರಣಃ ॥ ೮೫ ॥

ಸ ಪಶ್ಯತಿ ಯಥಾನ್ಯಾಯಂ ಸ್ಮೃತ್ವಾ ಸ್ಪೃಶತಿ ಚಾನಘಾಃ ।
ಬುಧ್ಯಮಾನೋ ಯಥಾಪೂರ್ವಮಖಿಲೇನೇಹ ಭೋ ದ್ವಿಜಾಃ ॥ ೮೬ ॥

ಇಂದ್ರಿಯಾಣಿ ಹ ಸರ್ವಾಣಿ ಸ್ವೇ ಸ್ವೇ ಸ್ಥಾನೇ ಯಥಾವಿಧಿ ।
ಅನೀಶತ್ವಾತ್ಪ್ರಲೀಯಂತೇ ಸರ್ಪಾ ವಿಷಹತಾ ಇವ ॥ ೮೭ ॥

ಇಂದ್ರಿಯಾಣಾಂ ತು ಸರ್ವೇಷಾಂ ಸ್ವಸ್ಥಾನೇಷ್ವೇವ ಸರ್ವಶಃ ।
ಆಕ್ರಮ್ಯ ಗತಯಃ ಸೂಕ್ಷ್ಮಾಶ್ಚರತ್ಯಾತ್ಮಾ ನ ಸಂಶಯಃ ॥ ೮೮ ॥

ಸತ್ತ್ವಸ್ಯ ಚ ಗುಣಾನ್ಕೃತ್ಸ್ನಾನ್ರಜಸಶ್ಚ ಗುಣಾನ್ಪುನಃ ।
ಗುಣಾಂಶ್ಚ ತಮಸಃ ಸರ್ವಾನ್ಗುಣಾನ್ಬುದ್ಧೇಶ್ಚ ಸತ್ತಮಾಃ ॥ ೮೯ ॥

ಗುಣಾಂಶ್ಚ ಮನಸಶ್ಚಾಪಿ ನಭಸಶ್ಚ ಗುಣಾಂಸ್ತಥಾ ।
ಗುಣಾನ್ವಾಯೋಶ್ಚ ಸರ್ವಜ್ಞಾಃ ಸ್ನೇಹಜಾಂಶ್ಚ ಗುಣಾನ್ಪುನಃ ॥ ೯೦ ॥

೮೫–೯೧. ಶರೀರಿಯಾದ ಜೀವನು ಇಂದ್ರಿಯಗಳೊಡನೆ ಸುಷುಪ್ತಿಯನ್ನು ಅನುಭವಿಸುವಾಗ ಆಕಾಶದಲ್ಲಿ ಗಾಳಿಯು ಸಂಚರಿಸುವಂತೆ ಸೂಕ್ಷ್ಮರೂಪದಿಂದ ಶರೀರವಲ್ಲಿ ಸಂಚರಿಸುತ್ತಿರುವನು. ಎಚ್ಚರಿಕೆಯನ್ನು ಹೊಂದಿದಮೇಲೆ ಹಿಂದಿನಂತೆ ವಿಷಯಗಳನ್ನು ಸ್ಮರಿಸಿಕೊಂಡು ಇಂದ್ರಿಯಗಳಿಂದ ಅವುಗಳ ಸುಖದುಃಖಗಳನ್ನನುಭವಿಸುವನು. ಒಡೆಯನಾದ ಜೀವನ ಶಕ್ತಿಯಿಲ್ಲದಿದ್ದರೆ ಇಂದ್ರಿಯಗಳು ತಂತಮ್ಮ ಸ್ಥಾನಗಳಲ್ಲಿ ಲೀನನಾಗಿ ವಿಷವಿಲ್ಲದ ಸರ್ಪದಂತೆ ಮಲಗಿಕೊಂಡಿರುವುವು. ಜೀವನು ತನ್ನ ಸೂಕ್ಷ್ಮಗತಿಯಿಂದ ಅದರದರ ಸ್ಥಾನದಲ್ಲಿರುವ ಸಮಸ್ತ ಇಂದ್ರಿಯಗಳನ್ನೂ ಆಕ್ರಮಿಸಿ ತನ್ನಧೀನವಾಡಿಕೊಂಡು ಸಂಚರಿಸುತ್ತಿರುವನು. ಜೀವನು ಸತ್ವರಜಸ್ತಮೋಗುಣಗಳು, ಬುದ್ಧಿ,

ಅಪಾಂ ಗುಣಾಸ್ತಥಾ ವಿಪ್ರಾಃ ಪಾರ್ಥಿವಾಂಶ್ಚ ಗುಣಾನಪಿ ।
ಸರ್ವಾನೇವ ಗುಣೈರ್ವ್ಯಾಪ್ಯ ಕ್ಷೇತ್ರಜ್ಞೇಷು ದ್ವಿಜೋತ್ತಮಾಃ ॥ ೯೧ ॥

ಆತ್ಮಾ ಚರತಿ ಕ್ಷೇತ್ರಜ್ಞಃ ಕರ್ಮಣಾ ಚ ಶುಭಾಶುಭೇ ।
ಶಿಷ್ಯಾ ಇವ ಮಹಾತ್ಮಾನಮಿಂದ್ರಿಯಾಣಿ ಚ ತಂ ದ್ವಿಜಾಃ ॥ ೯೨ ॥

ಪ್ರಕೃತಿಂ ಚಾಪ್ಯತಿಕ್ರಮ್ಯ ಶುದ್ಧಂ ಸೂಕ್ಷ್ಮಂ ಪರಾತ್ಪರಂ ।
ನಾರಾಯಣಂ ಮಹಾತ್ಮಾನಂ ನಿರ್ವಿಕಾರಂ ಪರಾತ್ಪರಂ ॥ ೯೩ ॥

ವಿಮುಕ್ತಂ ಸರ್ವಪಾಪೇಭ್ಯಃ ಪ್ರವಿಷ್ಟಂ ಚ ಹ್ಯನಾಮಯಂ ।
ಪರಮಾತ್ಮಾನಮಗುಣಂ ನಿರ್ವೃತಂ ತಂ ಚ ಸತ್ತಮಾಃ ॥ ೯೪ ॥

ಶ್ರೇಷ್ಠಂ ತತ್ರ ಮನೋ ವಿಪ್ರಾ ಇಂದ್ರಿಯಾಣಿ ಚ ಭೋ ದ್ವಿಜಾಃ ।
ಆಗಚ್ಛಂತಿ ಯಥಾಕಾಲಂ ಗುರೋಃ ಸಂದೇಶಕಾರಿಣಃ ॥ ೯೫ ॥

ಮನಸ್ಸು, ಆಕಾಶ, ವಾಯು, ತೇಜಸ್ಸು, ನೀರು, ಭೂಮಿ, ಇವುಗಳ ಸಮಸ್ತ ಗುಣಗಳನ್ನೂ ಗ್ರಹಿಸಿ ಕ್ಷೇತ್ರವೆನಿಸುವ ಈ ಶರೀರದಲ್ಲಿ ಕ್ಷೇತ್ರಜ್ಞನೆನಸಿ ಸಂಚರಿಸುತ್ತಿರುವನು.

೯೨. ಮಹಾತ್ಮನಾದ ಗುರುವನ್ನು ಅವನ ಶಿಷ್ಯರು ಅನುಸರಿಸುವಂತೆ ಶುಭಾಶುಭಕರ್ಮಫಲಗಳಿಂದಕೂಡಿದ ಕ್ಷೇತ್ರಜ್ಞನಾದ ಜೀವನನ್ನು ಇಂದ್ರಿಯ ಗಳು ಅನುಸರಿಸುವುವು.

೯೩-೯೫. ಗುರುವಿನ ಆಜ್ಞೆಯನ್ನನುಸರಿಸಿದ ಶಿಷ್ಯನಂತೆ ಜೀವನು ತನ್ನ ಮನಸ್ಸು ಮತ್ತು ಇಂದ್ರಿಯಗಳೊಡನೆ ಪ್ರಕೃತಿಯನ್ನತಿಕ್ರಮಿಸಿದ ಪರಿಶುದ್ಧನೂ ಸೂಕ್ಷ್ಮಸ್ವರೂಪನೂ ವಿಕಾರವಿಲ್ಲದವನೂ ಪಾಪಗಳಿಲ್ಲದವನೂ ರೋಗಾದಿದೋಷ ಗಳಿಲ್ಲದವನೂ ನಿರ್ಗುಣನೂ ಸುಖಸ್ವರೂಪನೂ ಆದ ಮಹಾಮಹಿಮನಾದ ನಾರಾ ಯಣನನ್ನು ತಕ್ಕಕಾಲದಲ್ಲಿ ಸೇರುವನು.

ಶಕ್ಯಂ ವಾಲ್ಪೇನ ಕಾಲೇನ ಶಾಂತಿಂ ಪ್ರಾಪ್ತುಂ ಗುಣಾಂಸ್ತಥಾ ।
ಏವಮುಕ್ತೇನ ವಿಪ್ರೇಂದ್ರಾಃ ಸಾಂಖ್ಯಯೋಗೇನ ಮೋಕ್ಷಣೇಂ ॥ ೯೬ ॥

ಸಾಂಖ್ಯಾ ವಿಪ್ರಾ ಮಹಾಪ್ರಾಜ್ಞಾ ಗಚ್ಛಂತಿ ಪರಮಾಂ ಗತಿಂ ।
ಜ್ಞಾನೇನಾನೇನ ವಿಪ್ರೇಂದ್ರಾಸ್ತುಲ್ಯಂ ಜ್ಞಾನಂ ನ ವಿದ್ಯತೇ ॥ ೯೭ ॥

ಅತ್ರ ವಃ ಸಂಶಯೋ ಮಾ ಭೂಜ್ಜ್ಞಾನಂ ಸಾಂಖ್ಯಂ ಪರಂ ಮತಂ ।
ಅಕ್ಷರಂ ಧ್ರುವಮೇವೋಕ್ತಂ ಪೂರ್ಣಂ ಬ್ರಹ್ಮ ಸನಾತನಂ ॥ ೯೮ ॥

ಅನಾದಿಮಧ್ಯನಿಧನಂ ನಿರ್ದ್ವಂದ್ವಂ ಕರ್ತೃ ಶಾಶ್ವತಂ ।
ಕೂಟಸ್ಥಂ ಚೈವ ನಿತ್ಯಂ ಚ ಯದ್ವದಂತಿ ಶಮಾತ್ಮಕಾಃ ॥ ೯೯ ॥

ಯತಃ ಸರ್ವಾಃ ಪ್ರವರ್ತಂತೇ ಸರ್ಗಪ್ರಲಯವಿಕ್ರಿಯಾಃ ।
ಏವಂ ಶಂಸಂತಿ ಶಾಸ್ತ್ರೇಷು ಪ್ರವಕ್ತಾರೋ ಮಹರ್ಷಯಃ ॥ ೧೦೦ ॥

೯೬-೯೯. ಎಲೈ ಬ್ರಾಹ್ಮಣಶ್ರೇಷ್ಠರೇ, ಸಂಸಾರದುಃಖವನ್ನು ಬಿಡಿಸತಕ್ಕ, ನಾನು ಹೇಳಿದ ಸಾಂಖ್ಯಯೋಗದಿಂದ ಸ್ವಲ್ಪಕಾಲದಲ್ಲಿಯೇ ಜೀವರು ಸದ್ಗುಣಗಳನ್ನು ಹೊಂದಿ ಶಾಂತಿರೂಪಗುಣದಿಂದ ಮಹಾಜ್ಞಾನಿಗಳಾಗಿ ಶ್ರೇಷ್ಠವಾದ ಗತಿಯನ್ನು ಹೊಂದುವರು. ಎಲೈ ಬ್ರಾಹ್ಮಣಶ್ರೇಷ್ಠರೇ, ಈ ಸಾಂಖ್ಯಶಾಸ್ತ್ರಕ್ಕೆ ಸಮವಾದ ಮತ್ತೊಂದು ಜ್ಞಾನವಿಲ್ಲ. ಈ ಸಾಂಖ್ಯಜ್ಞಾನವೇ ಶ್ರೇಷ್ಠವಾದುದೆಂಬ ವಿಷಯದಲ್ಲಿ ನೀವು ಸಂದೇಹಪಡಬಾರದು. ಇದೇ ನಾಶರಹಿತವಾದ ಪರಬ್ರಹ್ಮಸ್ವರೂಪವು. ಆದಿಮಧ್ಯಾಂತ್ಯಗಳಿಲ್ಲದ್ದು. ದ್ವಂದ್ವದುಃಖಗಳಿಲ್ಲದುದು. ಸರ್ವಕಾರಣವಾಗಿ ನಿರ್ವಿಕಾರವಾಗಿ ಯಾವಾಗಲೂ ಇರತಕ್ಕುದೆಂದು ಶಾಂತರಾದ ಮುನಿಗಳು ಹೇಳುವರು.

೧೦೦. ಸೃಷ್ಟಿ, ಸ್ಥಿತಿ, ಪ್ರಳಯರೂಪವಾದ ವಿಕಾರಗಳೆಲ್ಲವೂ ಆ ಪರಬ್ರಹ್ಮತತ್ವದಿಂದಲೇ ಉಂಟಾಗುವುವೆಂದು ಮಹರ್ಷಿಗಳು ಶಾಸ್ತ್ರಗಳಲ್ಲಿ ಹೇಳಿರುವರು.

ಸರ್ವೇ ವಿಪ್ರಾಶ್ಚ ವೇದಾಶ್ಚ ತಥಾ ಸಾಮವಿದೋ ಜನಾಃ ।
ಬ್ರಹ್ಮಣ್ಯಂ ಪರಮಂ ದೇವಮನಂತಂ ಪರಮಾಚ್ಯುತಂ ॥ ೧೦೧ ॥

ಪ್ರಾರ್ಥಯಂತಶ್ಚ ತಂ ವಿಪ್ರಾ ವದಂತಿ ಗುಣಬುದ್ಧಯಃ ।
ಸಮ್ಯಗುಕ್ತಾಸ್ತಥಾ ಯೋಗಾಃ ಸಾಂಖ್ಯಾಶ್ಚಾಮಿತದರ್ಶನಾಃ ॥ ೧೦೨ ॥

ಅಮೂರ್ತಿಸ್ತಸ್ಯ ವಿಪ್ರೇಂದ್ರಾಃ ಸಾಂಖ್ಯಂ ಮೂರ್ತಿರಿತಿ ಶ್ರುತಿಃ ।
ಅಭಿಜ್ಞಾನಾನಿ ತಸ್ಯಾಹುರ್ಮಹಾಂತಿ ಮುನಿಸತ್ತಮಾಃ ॥ ೧೦೩ ॥

ದ್ವಿವಿಧಾನಿ ಹಿ ಭೂತಾನಿ ಪೃಥಿವ್ಯಾಂ ದ್ವಿಜಸತ್ತಮಾಃ ।
ಅಗಮ್ಯಗಮ್ಯಸಂಜ್ಞಾನಿ ಗಮ್ಯಂ ತತ್ರ ವಿಶಿಷ್ಯತೇ ॥ ೧೦೪ ॥

ಜ್ಞಾನಂ ಮಹದ್ವೈ ಮಹತಶ್ಚ ವಿಪ್ರಾ
ವೇದೇಷು ಸಾಂಖ್ಯೇಷು ತಥೈವ ಯೋಗೇ ।
ಯಚ್ಚಾಪಿ ದೃಷ್ಟಂ ವಿಧಿವತ್ಪುರಾಣೇ
ಸಾಂಖ್ಯಾಗತಂ ತನ್ನಿಖಿಲಂ ಮುನೀಂದ್ರಾಃ ॥ ೧೦೫ ॥

೧೦೧-೧೦೪. ಎಲೈ ಬ್ರಾಹ್ಮಣರೇ, ಸಮಸ್ತ ಬ್ರಾಹ್ಮಣರೂ, ವೇದಗಳೂ, ಸಾಮವೇದವನ್ನು ಬಲ್ಲವರೂ, ಅನಂತನೂ, ನಾಶರಹಿತನೂ, ಪರಬ್ರಹ್ಮಸ್ವರೂಪನೂ ಆದ ದೇವನನ್ನು ಪ್ರಾರ್ಥಿಸುತ್ತ ಅವನ ಗುಣಗಳನ್ನು ಹೇಳುತ್ತಿರುವರು. ಹಿಂದೆ ಯೋಗಶಾಸ್ತ್ರವಿಚಾರವನ್ನು ಚೆನ್ನಾಗಿ ವಿವರಿಸಿದೆನು. ವಿಶೇಷವಾದ ಶಾಸ್ತ್ರತತ್ವಗಳಿಂದ ಕೂಡಿದ ಸಾಂಖ್ಯ (ಜ್ಞಾನ) ವನ್ನೂ ವಿವರಿಸಿದೆನು. ನಿರ್ವಿಕಾರವಾದ ಪರಬ್ರಹ್ಮಸ್ವರೂಪವನ್ನು ತಿಳಿಸುವ ಸಾಂಖ್ಯತತ್ವವೇ ಪರಬ್ರಹ್ಮಸ್ವರೂಪವೆಂದು ವೇದವು ಹೇಳುವುದು. ಋಷಿಶ್ರೇಷ್ಠರು ಆ ತತ್ವಕ್ಕೆ ಅನೇಕ ಅಭಿಜ್ಞಾನ ವಾಕ್ಯಗಳನ್ನು ಹೇಳಿರುವರು. ಬ್ರಾಹ್ಮಣಶ್ರೇಷ್ಠರೇ, ಭೂಮಿಯಲ್ಲಿ ಅಗಮ್ಯ ಗಮ್ಯವೆಂದು ಎರಡು ವಿಧವಾದ ಪ್ರಾಣಿಗಳಿರುವುವು. ಅವುಗಳಲ್ಲಿ ಗಮ್ಯ ಪ್ರಾಣಿಗಳೇ ವಿಶೇಷವಾದುವುಗಳು.

೧೦೫-೧೦೬. ವೇದಗಳಲ್ಲಿಯೂ ಸಾಂಖ್ಯ ಮತ್ತು ಯೋಗಶಾಸ್ತ್ರಗಳಲ್ಲಿಯೂ ಪರಮಾತ್ಮಸಂಬಂಧವಾದ ಜ್ಞಾನವೇ ದೊಡ್ಡದೆಂದು ಹೇಳಿರುವುದು.

ಯಚ್ಚೇತಿಹಾಸೇಷು ಮಹತ್ಸು ದೃಷ್ಟಂ
ಯಥಾರ್ಥಶಾಸ್ತ್ರೇಷು ವಿಶಿಷ್ಟದೃಷ್ಟಂ ।
ಜ್ಞಾನಂ ಚ ಲೋಕೇ ಯದಿಹಾಸ್ತಿ ಕಿಂಚಿ-
ತ್ಸಾಂಖ್ಯಾಗತಂ ತಚ್ಚ ಮಹಾಮುನೀಂದ್ರಾಃ ॥ ೧೦೬ ॥

ಸಮಸ್ತದೃಷ್ಟಂ ಪರಮಂ ಬಲಂ ಚ
ಜ್ಞಾನಂ ಚ ಮೋಕ್ಷಶ್ಚ ಯಥಾವದುಕ್ತಂ ।
ತಪಾಂಸಿ ಸೂಕ್ಷ್ಮಾಣಿ ಚ ಯಾನಿ ಚೈವ
ಸಾಂಖ್ಯೇ ಯಥಾವದ್ವಿಹಿತಾನಿ ವಿಪ್ರಾಃ ॥ ೧೦೭ ॥

ವಿಪರ್ಯಯಂ ತಸ್ಯ ಹಿತಂ ಸದೈವ
ಗಚ್ಛಂತಿ ಸಾಂಖ್ಯಾಃ ಸತತಂ ಸುಖೇನ ।
ತಾಂಶ್ಚಾಪಿ ಸಂಧಾರ್ಯ ತತಃ ಕೃತಾರ್ಥಾಃ
ಪತಂತಿ ವಿಪ್ರಾಯತನೇಷು ಭೂಯಃ ॥ ೧೦೮ ॥

ಮುನಿಶ್ರೇಷ್ಠರೇ, ಆ ಜ್ಞಾನವನ್ನೇ ಪುರಾಣಗಳಲ್ಲಿ ಅಭ್ಯಾಸರೂಪವಾದ ವಿಧಿಯಿಂದ ಕೂಡಿ ವಿವರಿಸಿರುವುದು. ಅವೆಲ್ಲವೂ ಸಾಂಖ್ಯಶಾಸ್ತ್ರದಿಂದಲೇ ಬಂದ ವಿಧಿಯಾಗಿರುವುವು. ದೊಡ್ಡದೊಡ್ಡ ಇತಿಹಾಸಗಳಲ್ಲಿಯೂ ಜ್ಞಾನ ವಿಚಾರವು ಸ್ವಲ್ಪವಾಗಿದ್ದರೂ ಅದೂ ಸಾಂಖ್ಯಶಾಸ್ತ್ರದಿಂದಲೇ ಬಂದುದಾಗಿರುವುದು.

೧೦೭-೧೦೯. ಸಾಂಖ್ಯಶಾಸ್ತ್ರದಲ್ಲಿ ಎಲ್ಲರಿಗೂ ಕಾಣುವ ಶ್ರೇಷ್ಠವಾದ ಬಲವೂ, ಜ್ಞಾನವೂ, ಮೋಕ್ಷಸ್ವರೂಪವೂ, ಸೂಕ್ಷ್ಮವಾದ ತಪಸ್ಸುಗಳೂ, ಕ್ರಮವನ್ನನುಸರಿಸಿ ವಿಧಾನಮಾಡಿರುವುದು. ಈ ಶಾಸ್ತ್ರವನ್ನನುಸರಿಸುವವರು ಇವುಗಳ ಹೆಚ್ಚು ಕಡಿಮೆಗಳನ್ನು ಯಾವಾಗಲೂ ತಮಗೆ ಹಿತವಾಗುವಂತೆ ಉಪಯೋಗಿಸಿಕೊಳ್ಳುವರು. ಈ ಕಾರ್ಯದಿಂದ ಅವರು ಕೃತಾರ್ಥರಾಗಿ ಮತ್ತೆ ಬ್ರಾಹ್ಮಣನ ಮನೆಯಲ್ಲಿಯೇ ಪುನರ್ಜನ್ಮವನ್ನು ಪಡೆಯುವರು. ದೇವತೆಗಳೂ ಕೂಡ ಈ ಸಾಂಖ್ಯಯೋಗವನ್ನಾಶ್ರಯಿಸಿ ತಮ್ಮ ಶರೀರವನ್ನು ಬಿಟ್ಟು ಮೋಕ್ಷವನ್ನು

ಹಿತ್ವಾ ಚ ದೇಹಂ ಪ್ರವಿಶಂತಿ ಮೋಕ್ಷಂ
ದಿವೌಕಸಶ್ಚಾಪಿ ಚ ಯೋಗಸಾಂಖ್ಯಾಃ ।
ಅತೋಽಧಿಕಂ ತೇಽಭಿರತಾ ಮಹಾರ್ಹೇ
ಸಾಂಖ್ಯೇ ದ್ವಿಜಾ ಭೋ ಇಹ ಶಿಷ್ಟಜುಷ್ಟೇ ॥ ೧೦೯ ॥

ತೇಷಾಂ ತು ತಿರ್ಯಗ್ಗಮನಂ ಹಿ ದೃಷ್ಟಂ
ನಾಧೋ ಗತಿಃ ಪಾಪಕೃತಾಂ ನಿವಾಸಃ ।
ನ ವಾ ಪ್ರಧಾನಾ ಅಪಿ ತೇ ದ್ವಿಜಾತಯೋ
ಯೇ ಜ್ಞಾನಮೇತನ್ಮುನಯೋ ನ ಸಕ್ತಾಃ ॥ ೧೧೦ ॥

ಸಾಂಖ್ಯಂ ವಿಶಾಲಂ ಪರಮಂ ಪುರಾಣಂ
ಮಹಾರ್ಣವಂ ವಿಮಲಮುದಾರಕಾಂತಂ ।
ಕೃತ್ಸ್ನಂ ಹಿ ಸಾಂಖ್ಯಾ ಮುನಯೋ ಮಹಾತ್ಮ-
ನಾರಾಯಣೇ ಧಾರಯತಾಪ್ರಮೇಯಂ ॥ ೧೧೧ ॥

ಹೊಂದುವರು. ಆ ಕಾರಣದಿಂದ ಶಿಷ್ಟರಾದವರು ಪ್ರೀತಿಯಿಂದ ಸೇವಿಸುವ ಈ ಸಾಂಖ್ಯಯೋಗವು ಅತ್ಯಂತ ಶ್ರೇಷ್ಠವಾದುದಾಗಿರುವುದು.

೧೧೦-೧೧೧. ಸಾಂಖ್ಯಯೋಗವನ್ನನುಸರಿಸುವವರಿಗೆ ನೀಚಪ್ರಾಣಿಗಳ ಜನ್ಮವಾಗಲಿ, ಪಾಪಿಗಳ ಮನೆಯ ವಾಸವಾಗಲಿ (ನರಕ) ಅಧೋಗತಿಯಾಗಲಿ, ಬರುವುದಿಲ್ಲ. ಬ್ರಾಹ್ಮಣರಾಗಿ ಮುನಿಗಳಾಗಿ ಯಾರು ಈ ಜ್ಞಾನಯೋಗದಲ್ಲಿ ಆಸಕ್ತರಾಗುವುದಿಲ್ಲವೋ ಅವರು ಎಷ್ಟು ಮುಖ್ಯರಾದವರಾದರೂ ಸದ್ಗತಿಯನ್ನು ಹೊಂದುವುದಿಲ್ಲ. ಈ ಸಾಂಖ್ಯಶಾಸ್ತ್ರವು ದೊಡ್ಡ ಸಮುದ್ರದಂತೆ ವಿಸ್ತಾರವಾದುದೂ, ಶ್ರೇಷ್ಠವಾದುದೂ, ಪುರಾತನವಾದುದೂ, ಮಹಾಪ್ರಕಾಶವಾದುದೂ ಆಗಿರುವುದು. ಎಲೈ ಮುನಿಗಳೇ, ಅಳತೆಗೆ ಸಿಕ್ಕದ ಸಂಪೂರ್ಣವಾದ ಸಾಂಖ್ಯ ಶಾಸ್ತ್ರವನ್ನು ಮಹಾಮಹಿಮನಾದ ನಾರಾಯಣನಲ್ಲಿ ತಿಳಿಯಬೇಕು.

ಏತನ್ಮಯೋಕ್ತಂ ಪರಮಂ ಹಿ ತತ್ತ್ವಂ
ನಾರಾಯಣಾದ್ವಿಶ್ವಮಿದಂ ಪುರಾಣಂ ।
ಸ ಸರ್ಗಕಾಲೇ ಚ ಕರೋತಿ ಸರ್ಗಂ
ಸಂಹಾರಕಾಲೇ ಚ ಹರೇತ ಭೂಯಃ ॥ ೧೧೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವ್ಯಾಸಋಷಿಸಂವಾದೇ ಸಾಂಖ್ಯವಿಧಿನಿರೂಪಣಂ ನಾಮ ಚತ್ವಾರಿಂಶದಧಿಕ-ದ್ವಿಶತತಮೋऽಧ್ಯಾಯಃ

---

೧೧೨. ಎಲೈ ಮುನಿಗಳೇ, ಈ ಶ್ರೇಷ್ಠವಾದ ಸಾಂಖ್ಯತತ್ತ್ವವನ್ನು ನಾನು ಹೇಳಿರುವೆನು. ಈ ಪುರಾತನವಾದ ಪ್ರಪಂಚವನ್ನು ನಾರಾಯಣನು ಸೃಷ್ಟಿಮಾಡುವ ಕಾಲದಲ್ಲಿ ಸೃಷ್ಟಿಮಾಡುವನು. ಮತ್ತೆ ಸಂಹಾರಕಾಲದಲ್ಲಿ ಎಲ್ಲವನ್ನೂ ಉಪಸಂಹರಿಸುವನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಸಾಂಖ್ಯವಿಧಿ ನಿರೂಪಣೆಯೆಂಬ ಇನ್ನೂರನಲವತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ಮುನಯ ಊಚುಃ ॥

ಕಿಂ ತದಕ್ಷರಮಿತ್ಯುಕ್ತಂ ಯಸ್ಮಾನ್ನಾವರ್ತತೇ ಪುನಃ ।
ಕಿಂಸ್ವಿತ್ತತ್ಕ್ಷರಮಿತ್ಯುಕ್ತಂ ಯಸ್ಮಾದಾವರ್ತತೇ ಪುನಃ ॥ ೧ ॥

ಅಕ್ಷರಾಕ್ಷರಯೋರ್ವ್ಯಕ್ತಿಂ ಪೃಚ್ಛಾಮಸ್ತ್ವಾಂ ಮಹಾಮುನೇ ।
ಉಪಲಬ್ಧುಂ ಮುನಿಶ್ರೇಷ್ಠ ತತ್ತ್ವೇನ ಮುನಿಪುಂಗವ ॥ ೨ ॥

ತ್ವಂ ಹಿ ಜ್ಞಾನವಿದಾಂ ಶ್ರೇಷ್ಠಃ ಪ್ರೋಚ್ಯಸೇ ವೇದಪಾರಗೈಃ ।
ಋಷಿಭಿಶ್ಚ ಮಹಾಭಾಗೈರ್ಯತಿಭಿಶ್ಚ ಮಹಾತ್ಮಭಿಃ ॥ ೩ ॥

ಇನ್ನೂರನಲವತ್ತೊಂದನೆಯ ಅಧ್ಯಾಯವು

೧-೩. ಮುನಿಗಳು ಪ್ರಶ್ನೆಮಾಡುವರು—ಪರಗತಿಯನ್ನು ಹೊಂದಿದವರು ಯಾವ ಸ್ಥಾನದಿಂದ ಹಿಂದಿರುಗಿ ಬರುವದಿಲ್ಲವೋ ಆ ಅಕ್ಷರವೆಂಬುದಾವುದು ? ಯಾವ ಸ್ಥಾನದಿಂದ ಮತ್ತೆ ಪುನರ್ಜನ್ಮಕ್ಕೆ ಬರುವರೋ ಆ ಕ್ಷರವೆಂಬುದಾವುದು ? ಎಲೈ ಮಹಾಮುನಿಯೇ ಕ್ಷರಾಕ್ಷರಗಳ ಸ್ವರೂಪವನ್ನು ನಾವು ಕೇಳಬೇಕೆಂದಿರುವೆವು. ಅದರ ನಿಜವಾದ ಸ್ವರೂಪವನ್ನು ನಾವು ತಿಳಿಯಬೇಕಾಗಿರುವುದು. ವೇದವನ್ನು ಸಂಪೂರ್ಣವಾಗಿ ಬಲ್ಲವರು, ನಿನ್ನನ್ನು ಜ್ಞಾನಿಗಳಲ್ಲಿ ಶ್ರೇಷ್ಠನೆಂದು ಹೇಳುವರು. ಮಹಾಮಹಿಮರಾದ ಋಷಿಗಳೂ,

ತದೇತತ್ಪ್ರೋತುಮಿಚ್ಛಾಮಸ್ತ್ವತ್ತಃ ಸರ್ವಂ ಮಹಾಮತೇ।
ಸ ತೃಪ್ತಿಮಧಿಗಚ್ಛಾಮಃ ಶೃಣ್ವಂತೋಽಮೃತಮುತ್ತಮಂ ॥ ೪ ॥

॥ ವ್ಯಾಸ ಉವಾಚ ॥

ಅತ್ರ ವೋ ವರ್ಣಯಿಷ್ಯಾಮಿ ಇತಿಹಾಸಂ ಪುರಾತನಂ।
ವಸಿಷ್ಠಸ್ಯ ಚ ಸಂವಾದಂ ಕರಾಲಜನಕಸ್ಯ ಚ ॥ ೫ ॥

ವಸಿಷ್ಠಂ ಶ್ರೇಷ್ಠಮಾಸೀನಮೃಷೀಣಾಂ ಭಾಸ್ಕರದ್ಯುತಿಂ।
ಪಪ್ರಚ್ಛ ಜನಕೋ ರಾಜಾ ಜ್ಞಾನಂ ನೈಃಶ್ರೇಯಸಂ ಪರಂ ॥ ೬ ॥

ಪರಮಾತ್ಮನಿ ಕುಶಲಮಧ್ಯಾತ್ಮಗತಿನಿಶ್ಚಯಂ।
ಮೈತ್ರಾವರುಣಿಮಾಸೀನಮಭಿವಾದ್ಯ ಕೃತಾಂಜಲಿಃ ॥ ೭ ॥

ಸ್ವಚ್ಛಂದಂ ಸುಕೃತಂ ಚೈವ ಮಧುರಂ ಚಾಪ್ಯನುಲ್ಬಣಂ।
ಪಪ್ರಚ್ಛರ್ಷಿವರಂ ರಾಜಾ ಕರಾಲಜನಕಃ ಪುರಾ ॥ ೮ ॥

ಸನ್ಯಾಸಿಗಳೂ ಇದನ್ನು ಒಪ್ಪಿರುವರು. ನಿನ್ನಿಂದ ನಾವು ಇದೆಲ್ಲವನ್ನೂ ತಿಳಿಯಲು ಅಪೇಕ್ಷಿಸುತ್ತೇವೆ. ಅಮೃತದಂತಿರುವ ಶ್ರೇಷ್ಠವಾದ ನಿನ್ನ ಮಾತನ್ನು ಎಷ್ಟು ಕೇಳಿದರೂ ನಮಗೆ ತೃಪ್ತಿಯೇ ಆಗುವುದಿಲ್ಲ. ಆದುದರಿಂದ ಎಲ್ಲವನ್ನೂ ಹೇಳಬೇಕೆಂದು ಪ್ರಾರ್ಥಿಸುವೆವು! ಎಂದರು.

೫-೮. ವ್ಯಾಸನಿಂತೆಂದನು–ಈ ವಿಷಯದಲ್ಲಿ ವಸಿಷ್ಠ ಮತ್ತು ಕರಾಳಜನಕನ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ನಿಮಗೆ ಹೇಳುವೆನು. ಕೇಳಿರಿ. ಋಷಿಗಳಲ್ಲಿ ಸೂರ್ಯನಂತೆ ತೇಜಶ್ಶಾಲಿಯಾದ ವಸಿಷ್ಠಋಷಿಯನ್ನು ಜನಕನೆಂಬ ರಾಜನು ಮೋಕ್ಷಜ್ಞಾನದ ವಿಷಯದಲ್ಲಿ ಪ್ರಶ್ನೆ ಮಾಡಿದನು. ಹಿಂದೆ ಕರಾಲಜಕನು ಪರಮಾತ್ಮನ ವಿಷಯವನ್ನು ತಿಳಿಸುವುದರಲ್ಲಿ ಕುಶಲನಾದ, ದೃಢವಾದ ಆತ್ಮಜ್ಞಾನ ಉಳ್ಳ, ಮಿತ್ರಾವರುಣರ ತೇಜಸ್ಸಿನಿಂದ ಹುಟ್ಟಿದ ವಸಿಷ್ಠ ಋಷಿಗೆ ನಮಸ್ಕಾರವನ್ನು ಮಾಡಿ ಕೈ ಜೋಡಿಸಿಕೊಂಡು ನಿಂತು ಸಂತೋಷದಿಂದ ಮಧುರವಾಗಿ ಮಾತನಾಡುತ್ತ ಕಾರ್ಯಾಂತರದ ಉದ್ವೇಗವಿಲ್ಲದೆ ಶಾಂತನಾಗಿರುವ ಋಷಿಶ್ರೇಷ್ಠನನ್ನು ಈರೀತಿ ಪ್ರಶ್ನೆಮಾಡಿದನು.

॥ ಕರಾಲಜನಕ ಉವಾಚ ॥

ಭಗವನ್ ಶ್ರೋತುಮಿಚ್ಛಾಮಿ ಪರಂ ಬ್ರಹ್ಮ ಸನಾತನಂ ।
ಯಸ್ಮಿನ್ನ ಪುನರಾವೃತ್ತಿಂ ಪ್ರಾಪ್ನುವಂತಿ ಮನೀಷಿಣಃ ॥ ೯ ॥

ಯಚ್ಚ ತತ್ಕ್ಷರಮಿತ್ಯುಕ್ತಂ ಯತ್ರೇದಂ ಕ್ಷರತೇ ಜಗತ್ ।
ಯಚ್ಚಾಕ್ಷರಮಿತಿ ಪ್ರೋಕ್ತಂ ಶಿವಂ ಕ್ಷೇಮಮನಾಮಯಂ ॥ ೧೦ ॥

॥ ವಸಿಷ್ಠ ಉವಾಚ ॥

ಶ್ರೂಯತಾಂ ಪೃಥಿವೀಪಾಲ ಕ್ಷರತೀದಂ ಯಥಾ ಜಗತ್ ।
ಯತ್ರ ಕ್ಷರತಿ ಪೂರ್ವೇಣ ಯಾವತ್ಕಾಲೇನ ಚಾಪ್ಯಥ ॥ ೧೧ ॥

ಯುಗಂ ದ್ವಾದಶಸಾಹಸ್ರ್ಯಂ ಕಲ್ಪಂ ವಿದ್ಧಿ ಚತುರ್ಯುಗಂ ।
ದಶಕಲ್ಪಶತಾವರ್ತಮಹಸ್ತದ್ಬ್ರಾಹ್ಮಮುಚ್ಯತೇ ॥ ೧೨ ॥

ರಾತ್ರಿಶ್ಚೈತಾವತೀ ರಾಜನ್ಯಸ್ಯಾಂತೇ ಪ್ರತಿಬುಧ್ಯತೇ ।
ಸೃಜತ್ಯನಂತಕರ್ಮಾಣಿ ಮಹಾಂತಂ ಭೂತಮಗ್ರಜಂ ॥ ೧೩ ॥

೯–೧೦. ಎಲೈ ಮಹಾಮಹಿಮನಾದ ವಸಿಷ್ಠನೇ, ವಿದ್ವಾಂಸರು ಯಾವ ಸ್ಥಿತಿಯಲ್ಲಿದ್ದರೆ ಪುನರ್ಜನ್ಮವನ್ನು ಹೊಂದುವುದಿಲ್ಲವೋ, ಯಾವುದರಿಂದ ಈ ಜಗತ್ತು ಉತ್ಪತ್ತಿಯಾಗುವುದರಿಂದ ಕ್ಷರವೆಂಬ ಹೆಸರನ್ನು ಪಡೆದಿರುವುದೋ, ರೋಗಾದಿಗಳ ಬಾಧೆಯಿಲ್ಲದೆ ಸುಖವೂ ಮಂಗಳವೂ ಯಾವಾಗಲೂ ಇರುವುದರಿಂದ ಯಾವುದು ಅಕ್ಷರವೆಂಬ ಹೆಸರನ್ನು ಹೊಂದಿರುವುದೋ, ಆ ಅನಾದಿಯಾದ ಪರಬ್ರಹ್ಮನ ವಿಷಯವನ್ನು ಕೇಳಬೇಕೆಂದು ಅಪೇಕ್ಷಿಸುವೆನು! ಅದನ್ನು ಹೇಳಬೇಕು ಎಂದನು

೧೧–೧೩. ಅದಕ್ಕೆ ವಸಿಷ್ಠನು, ಎಲೈ ರಾಜನೇ, ಕೇಳು. ಈ ಪ್ರಪಂಚವು ಎಷ್ಟು ಕಾಲದವರೆಗೆ ಪ್ರಕಟವಾಗಿರುತ್ತೆಂಬುದನ್ನು ಹೇಳುವೆನು. ದೇವಮಾನದ ಹನ್ನೆರಡುಸಾವಿರ ವರ್ಷಗಳಿಗೆ ಒಂದು ಚತುರ್ಯುಗವಾಗುವುದು. ಮನುಷ್ಯರ ಒಂದು ವರ್ಷಕ್ಕೆ ದೇವತೆಗಳ ಒಂದು ದಿನವೆನಿಸುವುದು. ಇದು ಬ್ರಹ್ಮನಿಗೆ ಒಂದು ಹಗಲಾಗುವುದು. ರಾತ್ರಿಯ ಪ್ರಮಾಣವೂ ಒಂದುಸಾವಿರ ಚತುರ್ಯುಗವೇ ಆಗುವುದು. ರಾತ್ರಿಯ ಕೊನೆಯಲ್ಲಿ ಬ್ರಹ್ಮನು ಎಚ್ಚರವಾಗಿ ಅನೇಕ ಕರ್ಮಫಲಗಳನ್ನನುಭವಿಸುವ ಪ್ರಾಣಿಗಳನ್ನು ಸೃಷ್ಟಿಸುವನು.

ಮೂರ್ತಿಮಂತಮಮೂರ್ತಾತ್ಮಾ ವಿಶ್ವಂ ಶಂಭುಃ ಸ್ವಯಂಭುವಃ ।
ಯತ್ರೋತ್ಪತ್ತಿಂ ಪ್ರವಕ್ಷ್ಯಾಮಿ ಮೂಲತೋ ನೃಪಸತ್ತಮ ॥ ೧೪ ॥

ಅಣಿಮಾ ಲಘಿಮಾ ಪ್ರಾಪ್ತಿರೀಶಾನಂ ಜ್ಯೋತಿರವ್ಯಯಂ ।
ಸರ್ವತಃಪಾಣಿಪಾದಾಂತಂ ಸರ್ವತೋಽಕ್ಷಿಶಿರೋಮುಖಂ ॥ ೧೫ ॥

ಸರ್ವತಃಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ।
ಹಿರಣ್ಯಗರ್ಭೋ ಭಗವಾನೇಷ ಬುದ್ಧಿರಿತಿ ಸ್ಮೃತಿಃ ॥ ೧೬ ॥

ಮಹಾನಿತಿ ಚ ಯೋಗೇಷು ವಿರಿಂಚಿರಿತಿ ಚಾಪ್ಯಥ ।
ಸಾಂಖ್ಯೇ ಚ ಪಠ್ಯತೇ ಶಾಸ್ತ್ರೇ ನಾಮಭಿರ್ಬಹುಧಾತ್ಮಕಃ ॥ ೧೭ ॥

ವಿಚಿತ್ರರೂಪೋ ವಿಶ್ವಾತ್ಮಾ ಏಕಾಕ್ಷರ ಇತಿ ಸ್ಮೃತಃ ।
ಧೃತಮೇಕಾತ್ಮಕಂ ಯೇನ ಕೃತ್ಸ್ನಂ ತ್ರೈಲೋಕ್ಯಮಾತ್ಮನಾ ॥ ೧೮ ॥

---

೧೪. ನಿರ್ವಿಕಾರನೂ, ಸ್ವಯಂವ್ಯಕ್ತನಾಗಿ ಮೂರ್ತಿಸ್ವರೂಪನೂ ಆದ ಈಶ್ವರನು ಈ ಪ್ರಪಂಚವನ್ನು ಹೇಗೆ ಸೃಷ್ಟಿಮಾಡುವನೆಂಬುದನ್ನು ಹೇಳುವೆನು! ಕೇಳು.

೧೫-೧೮. ಅಣಿಮಾ ಮಹಿಮಾ ಪ್ರಾಪ್ತಿ ಈಶಿತ್ವ ಮುಂತಾದ ಶಕ್ತಿಯುಳ್ಳ, ನಾಶರಹಿತನೂ ಪ್ರಕಾಶಸ್ವರೂಪನೂ ತನ್ನ ಸಮಸ್ತ ಕಡೆಗಳಲ್ಲಿಯೂ ಕೈಕಾಲುಗಳೂ ಕಣ್ಣು, ತಲೆ, ಮುಖಗಳೂ ಇರುವ, ಎಲ್ಲವನ್ನೂ ಆವರಿಸಿ ಕೊಂಡಿರುವ ಮಹಾಮಹಿಮನಾದ ಆತ್ಮನನ್ನು ಸಾಂಖ್ಯಶಾಸ್ತ್ರದಲ್ಲಿ ಹಿರಣ್ಯಗರ್ಭನೆಂದೂ ಬುದ್ಧಿಯೆಂದೂ ಸ್ಮೃತಿಯೆಂದೂ, ಮಹತ್ತತ್ವವೆಂದೂ, ಬ್ರಹ್ಮನೆಂದೂ, ಅನೇಕ ಹೆಸರುಗಳಿಂದ ಕರೆವರು ಅನೇಕ ರೂಪನೂ ಪ್ರಪಂಚಸ್ವರೂಪನೂ ಆದ ಪರಮಾತ್ಮನು ತಾನು ಯಾವಾಗಲೂ ಒಂದೇ ರೂಪದಿಂದ ಮೂರುಲೋಕವನ್ನೂ ಆವರಿಸಿರುವುದರಿಂದ ಒಂದೇ ಅಕ್ಷರವಾದ ಓಂಕಾರಕ್ಕೆ ಅರ್ಥಸ್ವರೂಪನಾಗಿ ಏಕಾಕ್ಷರನೆಂಬ ಹೆಸರನ್ನು ಹೊಂದಿರುವನು. ಹಾಗೆಯೇ

ತಥೈವ ಬಹುರೂಪತ್ವಾದ್ವಿಶ್ವರೂಪ ಇತಿ ಶ್ರುತಃ ।
ಏಷ ವೈ ವಿಕ್ರಿಯಾಪನ್ನಃ ಸೃಜತ್ಯಾತ್ಮಾನಮಾತ್ಮನಾ ॥ ೧೯ ॥

ಪ್ರಧಾನಂ ತಸ್ಯ ಸಂಯೋಗಾದುತ್ಪನ್ನಂ ಸುಮಹತ್ಪುರಂ ।
ಅಹಂಕಾರಂ ಮಹಾತೇಜಾಃ ಪ್ರಜಾಪತಿನಮಸ್ಕೃತಂ ॥ ೨೦ ॥

ಅವ್ಯಕ್ತಾದ್ವ್ಯಕ್ತಿಮಾಪನ್ನಂ ವಿದ್ಯಾಸರ್ಗಂ ವದಂತಿ ತಂ ।
ಮಹಾಂತಂ ಚಾಪ್ಯಹಂಕಾರಮವಿದ್ಯಾಸರ್ಗ ಏವ ಚ ॥ ೨೧ ॥

ಅಚರಶ್ಚ ಚರಶ್ಚೈವ ಸಮುತ್ಪನ್ನೌ ತಥೈಕತಃ ।
ವಿದ್ಯಾವಿದ್ಯೇತಿ ವಿಖ್ಯಾತೇ ಶ್ರುತಿಶಾಸ್ತ್ರಾನುಚಿಂತಕೈಃ ॥ ೨೨ ॥

ಭೂತಸರ್ಗಮಹಂಕಾರಾತ್ತೃತೀಯಂ ವಿದ್ಧಿ ಪಾರ್ಥಿವ ।
ಅಹಂಕಾರೇಷು ನೃಪತೇ ಚತುರ್ಥಂ ವಿದ್ಧಿ ವೈಕೃತಂ ॥ ೨೩ ॥

ಅನೇಕ ರೂಪವನ್ನು ಪಡೆದಿರುವುದರಿಂದ ವಿಶ್ವರೂಪನೆಂಬ ಹೆಸರನ್ನೂ ಹೊಂದಿರುವನು. ಈ ಪರಮಾತ್ಮನೇ ವಿಕಾರವನ್ನು ಪಡೆದು ತನ್ನ ಶಕ್ತಿಯಿಂದಲೇ ಜೀವನನ್ನು ಸೃಷ್ಟಿಸುವನು.

೨೦–೨೫. ಪರಮಾತ್ಮನ ಇಚ್ಛಾರೂಪವಾದ ಶಕ್ತಿಸಂಯೋಗದಿಂದ ಪ್ರಕೃತಿಯು ಉತ್ಪತ್ತಿಯಾಯಿತು. ಆಮೇಲೆ ಮಹತ್ತತ್ವವೂ ಅಹಂಕಾರ ತತ್ವವೂ ಹುಟ್ಟಿದುವು. ಇವೆರಡು ತತ್ವಗಳೂ ಚತುರ್ಮುಖಬ್ರಹ್ಮನಿಗಿಂತ ಶ್ರೇಷ್ಠವಾದ ತತ್ವಗಳು. ಅವ್ಯಕ್ತವಾದ (ಪರಬ್ರಹ್ಮನಿಂದ) ವ್ಯಕ್ತವಾದ ಪ್ರಕೃತಿ ಸೃಷ್ಟಿಯನ್ನು ವಿದ್ಯಾಸೃಷ್ಟಿಯೆಂದು ಹೇಳುವರು. ಮಹತ್ತತ್ವ ಅಹಂಕಾರತತ್ವಗಳೆರಡೂ ಅವಿದ್ಯಾಸೃಷ್ಟಿಗಳು. ಆಮೇಲೆ, ಅಚರ, ಚರ ಎಂಬೆರಡು ಸೃಷ್ಟಿಗಳು ಒಟ್ಟಿಗೆ ಉಂಟಾಯಿತು. ವೇದಶಾಸ್ತ್ರಗಳನ್ನು ವಿಚಾರಮಾಡುವವರು ವಿದ್ಯಾ, ಅವಿದ್ಯಾ ಎಂಬೆರಡು ಸೃಷ್ಟಿಗಳೆಂದು ಹೇಳುವರು. ಎಲೈ ರಾಜನೇ, ಸೂಕ್ಷ್ಮ ಪಂಚಭೂತಗಳ ಸೃಷ್ಟಿಯು ಅಹಂಕಾರದಿಂದಾಯಿತು. ಇದು ಮೂರನೆಯ ಸೃಷ್ಟಿಯು. ಅಹಂಕಾರತತ್ವದಲ್ಲಿಯೇ ವಿಕಾರವಾದ ಎಂದರೆ

ವಾಯುರ್ಜ್ಯೋತಿರಥಾಕಾಶಮಾಪೋಽಥ ಪೃಥಿವೀ ತಥಾ ।
ಶಬ್ದಸ್ಪರ್ಶೌ ಚ ರೂಪಂ ಚ ರಸೋ ಗಂಧಸ್ತಥೈವ ಚ ॥ ೨೪ ॥

ಏವಂ ಯುಗಪದುತ್ಪನ್ನಂ ದಶವರ್ಗಮಸಂಶಯಂ ।
ಪಂಚಮಂ ವಿದ್ಧಿ ರಾಜೇಂದ್ರ ಭೌತಿಕಂ ಸರ್ಗಮರ್ಥಕೃತ್ ॥ ೨೫ ॥

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ಘ್ರಾಣಮೇವ ಚ ಪಂಚಮಂ ।
ವಾಗ್ಘಸ್ತೌ ಚೈವ ಪಾದೌ ಚ ಪಾಯುರ್ಮೇಢ್ರಂ ತಥೈವ ಚ ॥ ೨೬ ॥

ಬುದ್ಧೀಂದ್ರಿಯಾಣಿ ಚೈತಾನಿ ತಥಾ ಕರ್ಮೇಂದ್ರಿಯಾಣಿ ಚ ।
ಸಂಭೂತಾನೀಹ ಯುಗಪನ್ಮನಸಾ ಸಹ ಪಾರ್ಥಿವ ॥ ೨೭ ॥

ಏಷಾ ತತ್ತ್ವಚತುರ್ವಿಂಶಾ ಸರ್ವಾಕೃತಿಃ ಪ್ರವರ್ತತೇ ।
ಯಾಂ ಜ್ಞಾತ್ವಾ ನಾಭಿಶೋಚಂತಿ ಬ್ರಾಹ್ಮಣಾಸ್ತತ್ತ್ವದರ್ಶಿನಃ ॥ ೨೮ ॥

ಪಂಚೀಕೃತವಾದ ಪಂಚಮಹಾಭೂತಗಳ ಸೃಷ್ಟಿಯಾಯಿತು. ಇದು ನಾಲ್ಕ ನೆಯ ಸೃಷ್ಟಿಯು. ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಎಂಬ ಸ್ಥೂಲ ಭೂತಗಳೂ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರಗಳೂ ಸೇರಿ ಈ ಹತ್ತು ವರ್ಗಗಳೂ ಒಟ್ಟಿಗೆ ಉತ್ಪನ್ನವಾದುವು. ಎಲೈ ರಾಜನೇ, ಇದನ್ನೇ ಐದನೆಯ ಸೃಷ್ಟಿಯೆನ್ನುವರು. ಇದೇ ಭೌತಿಕಸೃಷ್ಟಿಯು. ಇದೇ ವ್ಯವಹಾರವಿಷಯವಾದುದೆಂದು ತಿಳಿಯಬೇಕು.

೨೬-೨೮. ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಎಂಬ ಐದು ಜ್ಞಾನೇಂದ್ರಿಯಗಳೂ, ಮಾತು, ಕೈ, ಕಾಲು, ಗುದ, ಮೇಢ್ರ ಎಂಬ ಐದು ಕರ್ಮೇಂದ್ರಿಯಗಳೂ ಸೇರಿ ಹತ್ತು ಇಂದ್ರಿಯಗಳೂ ಮನಸ್ಸಿನೊಡನೆ ಏಕಕಾಲದಲ್ಲಿ ಉತ್ಪನ್ನವಾದುವು. ಎಲೈ ರಾಜನೇ, ಹೀಗೆ ಪಂಚಭೂತಗಳು, ಪಂಚತನ್ಮಾತ್ರಗಳು, ದಶೇಂದ್ರಿಯಗಳು ಅಂತಃಕರಣ ಚತುಷ್ಟಯಗಳೂ ಸೇರಿ ಇಪ್ಪತ್ತನಾಲ್ಕು ತತ್ವಗಳಿಂದ ಸೃಷ್ಟಿ ಕಾರ್ಯವು ನಡೆದಿರುವುದು. ತತ್ವಜ್ಞರಾದ

ಏವಮೇತತ್ಸಮುತ್ಪನ್ನಂ ತ್ರೈಲೋಕ್ಯಮಿದಮುತ್ತಮಂ ।
ವೇದಿತವ್ಯಂ ನರಶ್ರೇಷ್ಠ ಸದೈವ ನರಕಾರ್ಣವೇ ॥ ೨೯ ॥

ಸಯಕ್ಷಭೂತಗಂಧರ್ವೇ ಸಕಿಂನರಮಹೋರಗೇ ।
ಸಚಾರಣಪಿಶಾಚೇ ವೈ ಸದೇವರ್ಷಿ-ನಿಶಾಚರೇ ॥ ೩೦ ॥

ಸದಂಶಕೀಟಮಶಕೇ ಸಪೂತಿಕೃಮಿಮೂಷಕೇ ।
ಶುನಿ ಶ್ವಪಾಕೇ ಚೈಣೇಯೇ ಸಚಾಂಡಾಲೇ ಸಪುಲ್ಕಸೇ ॥ ೩೧ ॥

ಹಸ್ತ್ಯಶ್ವಖರಶಾರ್ದೂಲೇ ಸವೃಕೇ ಗನಿ ಚೈವ ಹ ।
ಯಾ ಚ ಮೂರ್ತಿಶ್ಚ ಯತ್ಕಿಂಚಿತ್ಸರ್ವತ್ರೈತನ್ನಿದರ್ಶನಂ ॥ ೩೨ ॥

ಜಲೇ ಭುವಿ ತಥಾಕಾಶೇ ನಾನ್ಯತ್ರೇತಿ ವಿನಿಶ್ಚಯಃ ।
ಸ್ಥಾನಂ ದೇಹವತಾಮಾಸೀದಿತ್ಯೇವಮನುಶುಶ್ರುಮ ॥ ೩೩ ॥

ಬ್ರಾಹ್ಮಣರು ಇದನ್ನು ತಿಳಿದು ದುಃಖವನ್ನು ಹೊಂದುವುದಿಲ್ಲ. ಈರೀತಿಯಲ್ಲಿಯೇ ಈ ಮೂರುಲೋಕಗಳೂ ಹುಟ್ಟಿದುವೆಂದು ತಿಳಿಯಬೇಕು.

೩೦–೩೩. ಎಲೈ ರಾಜಶ್ರೇಷ್ಠನೇ ಈ ಸೃಷ್ಟಿಯು ನರಕಸಮುದ್ರವೆಂದು ತಿಳಿ. ಇದರಲ್ಲಿ ಯಕ್ಷರು, ಗಂಧರ್ವರು, ಕಿನ್ನರು, ಉರಗರು, ಚಾರಣರು, ಪಿಶಾಚಗಳು, ದೇವತೆಗಳು, ಋಷಿಗಳು, ರಾಕ್ಷಸರು, ನೊಣಗಳು, ಸೊಳ್ಳೆಗಳು, ದುರ್ಗಂಧವಾದ ಹುಳುಗಳು, ಇಲಿ, ನಾಯಿ ಮುಂತಾದ ಪ್ರಾಣಿಗಳು, ಚಂಡಾಲರು, ಪುಲ್ಕಸರು, ಆನೆ, ಕುದುರೆ, ಕತ್ತೆ, ಹುಲಿ, ನರಿ, ಹಸು, ಮುಂತಾದುವುಗಳು, ಇವೆಲ್ಲವೂ ಈ ಸೃಷ್ಟಿಯಲ್ಲಿ ಸೇರಿ, ನೀರು, ಭೂಮಿ, ಆಕಾಶ, ಇವುಗಳಲ್ಲಿ ವಾಸಮಾಡುವುವು. ಶರೀರವುಳ್ಳ ಸಮಸ್ತ ಪ್ರಾಣಿಗಳಿಗೂ ಈ ಮೂರೇ ಆಶ್ರಯಸ್ಥಾನಗಳು. ಇವೆಲ್ಲವೂ ಪರಬ್ರಹ್ಮನಿಂದ ವ್ಯಕ್ತವಾದ ಪ್ರಪಂಚಸ್ವರೂಪವಾಗಿ ಪ್ರತಿದಿನವೂ ಉತ್ಪತ್ತಿಯಾಗುತ್ತಿರುವುವು. ಈ ಜಗತ್ತು ಪರಮಾತ್ಮನಿಂದ

ಕೃತ್ಸ್ನಮೇತಾವತಸ್ತಾತ ಕ್ಷರತೇ ವ್ಯಕ್ತಸಂಜ್ಞಕಃ ।
ಅಹನ್ಯಹನಿ ಭೂತಾತ್ಮಾ ಯಚ್ಚಾಕ್ಷರ ಇತಿ ಸ್ಮೃತಂ ॥ ೩೪ ॥

ತತಸ್ತತ್ಕ್ಷರಮಿತ್ಯುಕ್ತಂ ಕ್ಷರತೀದಂ ಯಥಾ ಜಗತ್ ।
ಜಗನ್ಮೋಹಾತ್ಮಕಂ ಚಾಹುರವ್ಯಕ್ತಾದ್ವ್ಯಕ್ತಸಂಜ್ಞಕಂ ॥ ೩೫ ॥

ಮಹಾಂಶ್ಚೈವಾಕ್ಷರೋ ನಿತ್ಯಮೇತತ್ಕ್ಷರವಿವರ್ಜನಂ ।
ಕಥಿತಂ ತೇ ಮಹಾರಾಜ ಯಸ್ಮಾನ್ನಾವರ್ತತೇ ಪುನಃ ॥ ೩೬ ॥

ಪಂಚವಿಂಶತಿಕೋಽಮೂರ್ತಃ ಸ ನಿತ್ಯಸ್ತತ್ತ್ವಸಂಜ್ಞಕಃ ।
ಸತ್ತ್ವಸಂಶ್ರಯಣಾತ್ತತ್ತ್ವಂ ಸತ್ತ್ವಮಾಹುರ್ಮನೀಷಿಣಃ ॥ ೩೭ ॥

ಯದಮೂರ್ತಿಃ ಸೃಜದ್ವ್ಯಕ್ತಂ ತನ್ಮೂರ್ತಿಮಧಿತಿಷ್ಠತಿ ।
ಚತುರ್ವಿಂಶತಿಮೋ ವ್ಯಕ್ತೋ ಹ್ಯಮೂರ್ತಿಃ ಪಂಚವಿಂಶಕಃ ॥ ೩೮ ॥

ಸ ಏವ ಹೃದಿ ಸರ್ವಾಸು ಮೂರ್ತಿಷ್ವಾತಿಷ್ಠತಾತ್ಮವಾನ್ ।
ಚೇತಯಂಶ್ಚೇತನೋ ನಿತ್ಯಂ ಸರ್ವಮೂರ್ತಿರಮೂರ್ತಿಮಾನ್ ॥ ೩೯ ॥

ಉತ್ಪನ್ನವಾಗುವುದರಿಂದ ಕ್ಷರವೆನಿಸುವುದು. ಇದು ಅವ್ಯಕ್ತನಾದ ಪರಬ್ರಹ್ಮ ನಿಂದ ವ್ಯಕ್ತವಾದುದರಿಂದ ಅಜ್ಞಾನಸ್ವರೂಪವಾದುದೆಂದು ಹೇಳುವರು.

೩೬–೩೯. ಮಹಾಮಹಿಮನಾದ ಆತ್ಮನು ನಿರ್ವಿಕಾರನಾಗಿಯೂ, ಯಾವಾಗಲೂ ನಾಶವಾಗತಕ್ಕ ಪ್ರಪಂಚಧರ್ಮವಿಲ್ಲದವನಾಗಿಯೂ ಪುನರಾವೃತ್ತಿ ಯಿಲ್ಲದ ಏಕರೂಪನಾಗಿರುವನು. ಈ ತತ್ತ್ವವೇ ನಿರ್ವಿಕಾರವಾದ ಇಪ್ಪತ್ತೈದ ನೆಯ ತತ್ತ್ವವು. ಶಾಶ್ವತವಾದ ಶುದ್ಧತತ್ತ್ವಗುಣದಿಂದ ಸತ್ ಪದಾರ್ಥವೆನಿಸಿ ಕೊಂಡಿರುವ ತತ್ತ್ವವೇ ಇದು. ನಿರ್ವಿಕಾರವಾದ ಈ ತತ್ತ್ವವು ಸಂಕಲ್ಪದಿಂದ ಸಾಕಾರವಾದ ಪ್ರಪಂಚವನ್ನು ಸೃಷ್ಟಿಸಿ ಅವ್ಯಕ್ತಸ್ವರೂಪವಾದ ಇಪ್ಪತ್ತನಾಲ್ಕು ತತ್ತ್ವಗಳಲ್ಲಿಯೂ ತಾನು ವ್ಯಾಪಿಸಿಕೊಂಡು ನಿರಾಕಾರವಾಗಿ ಇಪ್ಪತ್ತೈದನೆಯ ತತ್ತ್ವವಾಗಿರುವುದು. ಆ ತತ್ತ್ವವೇ ಸಮಸ್ತ ಸಾಕಾರವಾದ ಮೂರ್ತಿಗಳಲ್ಲಿ ಆತ್ಮಸ್ವರೂಪವಾಗಿಯೂ ಸರ್ವಶಕ್ತಿಯುತವಾಗಿಯೂ ಎಲ್ಲ ಪ್ರಾಣಿಗಳಿಗೂ ಶಕ್ತಿ ಯನ್ನು ಕೊಡುತ್ತ ತನ್ನ ನಿರಾಕಾರ ಸ್ವರೂಪವನ್ನು ಬಿಡದೆ ಇರುವುದು.

ಸರ್ಗಪ್ರಲಯಧರ್ಮೇಣ ಸ ಸರ್ಗಪ್ರಲಯಾತ್ಮಕಃ ।
ಗೋಚರೇ ವರ್ತತೇ ನಿತ್ಯಂ ನಿರ್ಗುಣೋ ಗುಣಸಂಜ್ಞಿತಃ ॥ ೪೦ ॥

ಏವಮೇಷ ಮಹಾತ್ಮಾ ಚ ಸರ್ಗಪ್ರಲಯಕೋಟಿಶಃ ।
ವಿಕುರ್ವಾಣಃ ಪ್ರಕೃತಿಮಾನ್ನಾಭಿಮನ್ಯೇತ ಬುದ್ಧಿಮಾನ್ ॥ ೪೧ ॥

ತಮಃಸತ್ತ್ವರಜೋಯುಕ್ತಸ್ತಾಸು ತಾಸ್ವಿಹ ಯೋನಿಷು ।
ಲೀಯತೇ ಪ್ರತಿಬುದ್ಧತ್ವಾದಬುದ್ಧಜನಸೇವನಾತ್ ॥ ೪೨ ॥

ಸಹವಾಸನಿವಾಸತ್ವಾದ್ಬಾಲೋಽಹಮಿತಿ ಮನ್ಯತೇ ।
ಯೋಽಹಂ ನ ಸೋಽಹಮಿತ್ಯುಕ್ತೋ ಗುಣಾನೇವಾನುವರ್ತತೇ ॥ ೪೩ ॥

ತಮಸಾ ತಾಮಸಾನ್ಭಾವಾನ್ವಿವಿಧಾನ್ಪ್ರತಿಪದ್ಯತೇ ।
ರಜಸಾ ರಾಜಸಾಂಶ್ಚೈವ ಸಾತ್ತ್ವಿಕಾನ್ಸತ್ತ್ವಸಂಶ್ರಯಾತ್ ॥ ೪೪ ॥

೪೦-೪೧. ಇಪ್ಪತ್ತೈದನೆಯ ತತ್ವವಾದ ಆತ್ಮನೇ ಸೃಷ್ಟಿ, ನಾಶ ಎಂಬ ಧರ್ಮದಿಂದ ಪ್ರಪಂಚದ ಸೃಷ್ಟಿಯನ್ನೂ, ನಾಶವನ್ನೂ ಮಾಡುತ್ತಾ ತಾನು ಗುಣಸಂಬಂಧವಿಲ್ಲದವನಾಗಿದ್ದರೂ ಸತ್ವಾದಿಗುಣಗಳ ಸಂಜ್ಞೆಯಿಂದ ಇಂದ್ರಿಯ ಗೋಚರವಾದ ಸಮಸ್ತ ವಸ್ತುಗಳಲ್ಲಿಯೂ ಇರುವನು. ಹೀಗೆಯೇ ಈ ಮಹಾ ಮಹಿಮನಾದ ಪರಮಾತ್ಮನು ಪ್ರಕೃತಿಸಂಬಂಧದಿಂದ ಅನೇಕ ಸೃಷ್ಟಿಗಳನ್ನು ಮಾಡುತ್ತ ತನ್ನ ಜ್ಞಾನಶಕ್ತಿಯಿಂದ ಯಾವುದರಲ್ಲಿಯೂ ಅಭಿಮಾನವನ್ನಿಟ್ಟು ಕೊಳ್ಳದೆ ಇರುವನು.

೪೨-೪೪. ತಾನು ಜ್ಞಾನಸ್ವರೂಪನಾದುದರಿಂದಲೇ ಸತ್ವರಜಸ್ತಮೋ ಗುಣಗಳಿಂದ ಕೂಡಿ ಅಜ್ಞಾನಿಗಳಾದ ಅನೇಕ ಪ್ರಾಣಿಗಳ ಶರೀರದಲ್ಲಿ ಆ ಜೀವರು ಗಳಿಗೆ ವಿಷಯಾನುಭವಶಕ್ತಿಯನ್ನುಂಟುಮಾಡುತ್ತ ಲೀನನಾಗಿರುವನು. ಅವರ ಶರೀರದಲ್ಲಿಯೇ ವಾಸಮಾಡುವುದರಿಂದ ನಾನು ಎಂಬ ಶಬ್ದಕ್ಕೆ ವಾಚ್ಯನಾದ ಆತ್ಮನು, ಏನೂ ಅರಿಯದ ಬಾಲಕನಂತೆ ನಾನು ಈ ಜೀವನಲ್ಲವೆಂಬ ಅಭಿ ಮಾನತ್ಯಾಗದಿಂದ ಗುಣಗಳನ್ನು ಮಾತ್ರ ಅನುಸರಿಸಿಕೊಂಡಿರುವನು. ಸತ್ವ ರಜಸ್ತಮೋಗುಣಗಳಿಂದ ಆಯಾ ಗುಣಗಳಿಂದ ಕೂಡಿದ ಪ್ರಾಣಿಗಳನ್ನು ಆಶ್ರಯಿಸಿ ಆ ಪ್ರಾಣಿಗಳ ಸ್ವರೂಪವನ್ನೇ ಹೊಂದಿರುವನು.

ಶುಕ್ಲಲೋಹಿತಕೃಷ್ಣಾನಿ ರೂಪಾಣ್ಯೇತಾನಿ ತ್ರೀಣಿ ತು ।
ಸರ್ವಾಣ್ಯೇತಾನಿ ರೂಪಾಣಿ ಜಾನೀಹಿ ಪ್ರಾಕೃತಾನಿ ತು ॥ ೪೫ ॥

ತಾಮಸಾ ನಿರಯಂ ಯಾಂತಿ ರಾಜಸಾ ಮಾನುಷಾನಥ ।
ಸಾತ್ತ್ವಿಕಾ ದೇವಲೋಕಾಯ ಗಚ್ಛಂತಿ ಸುಖಭಾಗಿನಃ ॥ ೪೬ ॥

ನಿಷ್ಕೇವಲೇನ ಪಾಪೇನ ತಿರ್ಯಗ್ಯೋನಿಮವಾಪ್ನುಯಾತ್ ।
ಪುಣ್ಯಪಾಪೇಷು ಮಾನುಷ್ಯಂ ಪುಣ್ಯಮಾತ್ರೇಣ ದೇವತಾಃ ॥ ೪೭ ॥

ಏವಮವ್ಯಕ್ತವಿಷಯಂ ಮೋಕ್ಷಮಾಹುರ್ಮನೀಷಿಣಃ ।
ಪಂಚವಿಂಶತಿಮೋ ಯೋಽಯಂ ಜ್ಞಾನಾದೇವ ಪ್ರವರ್ತತೇ ॥ ೪೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವಸಿಷ್ಠಕರಾಲಜನಕಸಂವಾದೇ ಕ್ಷರಾಕ್ಷರವಿಚಾರನಿರೂಪಣಂ ನಾಮೈಕಚತ್ವಾರಿಂಶದಧಿಕ-ದ್ವಿಶತತಮೋಽಧ್ಯಾಯಃ

೪೫-೪೭. ಸತ್ತ್ವ ರಜಸ್ತಮೋಗುಣಗಳಿಗೆ ಕ್ರಮವಾಗಿ ಬಿಳಪು, ಕೆಂಪು, ಕಪ್ಪು, ಎಂಬ ಮೂರು ಬಣ್ಣಗಳಿರುವುವು. ಈ ರೂಪಗಳೆಲ್ಲ ಪ್ರಕೃತಿಸಂಬಂಧವಾದುವುಗಳು. ತಾಮಸಗುಣವುಳ್ಳ ಪ್ರಾಣಿಗಳು ನರಕಕ್ಕೆ ಹೋಗುವುವು. ರಾಜಸಗುಣವುಳ್ಳವು ಮನುಷ್ಯಲೋಕಕ್ಕೆ ಬರುವುವು. ಸಾತ್ವಿಕಪ್ರಾಣಿಗಳಾದ ಮನುಜರು ಸ್ವರ್ಗಲೋಕಕ್ಕೆ ಹೋಗುವರು. ಪುಣ್ಯಪಾಪಕರ್ಮಗಳೆರಡನ್ನೂ ಮಾಡಿದವರು ಮನುಷ್ಯಜನ್ಮವನ್ನು ಪಡೆವರು. ಪುಣ್ಯಕರ್ಮವನ್ನುಮಾತ್ರ ಮಾಡಿದವರು ದೇವತೆಗಳಾಗುವರು.

೪೮. ಪುಣ್ಯ ಪಾಪಗಳ ಸಂಬಂಧವಿಲ್ಲದ ನಿರ್ವಿಕಾರಸ್ಥಿತಿಯೇ ಮೋಕ್ಷವೆಂದು ವಿದ್ವಾಂಸರು ಹೇಳುವರು. ಇಪ್ಪತ್ತೈದನೆಯ ತತ್ತ್ವವಾದ ಈ ಸ್ಥಿತಿಯು ಜ್ಞಾನದಿಂದಲೇ ಉಂಟಾಗುವುದು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ವಸಿಷ್ಠಕರಾಳಜನಕಸಂವಾದದಲ್ಲಿ ಕ್ಷರಾಕ್ಷರ ವಿಚಾರ ನಿರೂಪಣೆಯೆಂಬ ಇನ್ನೂರನಲವತ್ತೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ದ್ವಿಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ವಸಿಷ್ಠ ಉವಾಚ ॥

ಏವಮಪ್ರತಿಬುದ್ಧತ್ವಾದಬುದ್ಧಮನುವರ್ತತೇ ।
ದೇಹಾದ್ದೇಹಸಹಸ್ರಾಣಿ ತಥಾ ಚ ನ ಸ ಭಿದ್ಯತೇ ॥ ೧ ॥

ತಿರ್ಯಗ್ಯೋನಿಸಹಸ್ರೇಷು ಕದಾಚಿದ್ದೇವತಾಸ್ವಪಿ ।
ಉತ್ಪದ್ಯತಿ ತಪೋಯೋಗಾದ್ಗುಣೈಃ ಸಹ ಗುಣಕ್ಷಯಾತ್ ॥ ೨ ॥

ಮನುಷ್ಯತ್ವಾದ್ದಿವಂ ಯಾತಿ ದೇವೋ ಮಾನುಷ್ಯಮೇತಿ ಚ ।
ಮಾನುಷ್ಯಾನ್ನಿರಯಸ್ಥಾನಮಾಲಯಂ ಪ್ರತಿಪದ್ಯತೇ ॥ ೩ ॥

ಇನ್ನೂರ ನಲವತ್ತೆರಡನೆಯ ಅಧ್ಯಾಯವು

೧-೭. ಆತ್ಮನು ಸಂಕಲ್ಪರೂಪವಾದ ಅಜ್ಞಾನದಿಂದ ಜೀವತ್ವವನ್ನು ಹೊಂದಿ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗುತ್ತ ಅನೇಕ ಸಾವಿರ ದೇಹಗಳನ್ನು ಪಡೆಯುವನು. ಹಾಗೆ ಪಡೆದರೂ ಆತ್ಮಶಕ್ತಿಯು ಮಾತ್ರ ಬೇರೆಯಾಗುವುದಿಲ್ಲ. ಜೀವನು ಸಾವಿರಾರು ಪಶುಪಕ್ಷಿಮೃಗಾದಿಗಳ ಶರೀರ ದಲ್ಲಿಯೂ ಕೆಲವು ಸಂದರ್ಭಗಳಲ್ಲಿ ತಪಸ್ಸನ್ನು ಮಾಡಿ ಅದರ ಫಲದಿಂದ ದೇವತೆ ಗಳ ಗುಂಪಿನಲ್ಲಿಯೂ ಹುಟ್ಟುವನು. ಆ ಪುಣ್ಯಫಲವು ಮುಗಿಯುತ್ತಲು ಮನುಷ್ಯನಾಗಿ ಹುಟ್ಟುವನು. ಮನುಷ್ಯನಾಗಿ ಮಾಡಿದ ಪಾಪಕರ್ಮಗಳ ಫಲ

ಕೋಶಕಾರೋ ಯಥಾತ್ಮಾನಂ ಕೀಟಃ ಸಮುಭಿರುಂಧತಿ ।
ಸೂತ್ರತಂತುಗುಣೈರ್ನಿತ್ಯಂ ತಥಾಯಮಗುಣೋ ಗುಣೈಃ ॥ ೪ ॥

ದ್ವಂದ್ವಮೇತಿ ಚ ನಿರ್ದ್ವಂದ್ವಸ್ತಾಸು ತಾಸ್ವಿಹ ಯೋನಿಷು ।
ಶೀರ್ಷರೋಗೇಽಕ್ಷಿರೋಗೇ ಚ ದಂತಶೂಲೇ ಗಲಗ್ರಹೇ ॥ ೫ ॥

ಜಲೋದರೇಽತಿಸಾರೇ ಚ ಗಂಡಮಾಲಾವಿಚರ್ಚಿಕೇ ।
ಶ್ವಿತ್ರಕುಷ್ಠೇಽಗ್ನಿದಗ್ಧೇ ಚ ಸಿಧ್ಮಾಪಸ್ಮಾರಯೋರಪಿ ॥ ೬ ॥

ಯಾನಿ ಚಾನ್ಯಾನಿ ದ್ವಂದ್ವಾನಿ ಪ್ರಾಕೃತಾನಿ ಶರೀರಿಣಾಂ ।
ಉತ್ಪದ್ಯಂತೇ ವಿಚಿತ್ರಾಣಿ ತಾನ್ಯೇವಾತ್ಮಾಭಿಮನ್ಯತೇ ॥ ೭ ॥

ಅಭಿಮಾನಾತಿಮಾನಾನಾಂ ತಥೈವ ಸುಕೃತಾನ್ಯಪಿ ।
ಏಕವಾಸಾಶ್ಚತುರ್ವಾಸಾಃ ಶಾಯಿೀ ನಿತ್ಯಮಧಸ್ತಥಾ ॥ ೮ ॥

ಮಂಡೂಕಶಾಯಿೀ ಚ ತಥಾ ವೀರಾಸನಗತಸ್ತಥಾ ।
ವೀರಮಾಸನಮಾಕಾಶೇ ತಥಾ ಶಯನಮೇವ ಚ ॥ ೯ ॥

ದಿಂದ ನರಕಕ್ಕೆ ಹೋಗುವನು. ರೇಷ್ಮೆಹುಳುವು ದಾರದಿಂದ ಗೂಡನ್ನು ಕಟ್ಟಿ ಆ ಗೂಡಿನೊಳಗೆ ತಾನು ಸೆರೆಯಾಗಿ ಸೇರಿಕೊಳ್ಳುವಂತೆ ಆತ್ಮನು ನಿರ್ಗುಣನಾದರೂ ಗುಣಗಳ ಕಟ್ಟಿಗೆ ಸಿಕ್ಕಿಕೊಂಡು ಜೀವನಾಗಿ ಸುಖದುಃಖಾದಿ ದ್ವಂದ್ವಗಳ ಬಾಧೆಯಿಲ್ಲದವನಾದರೂ ತಾನು ಪಡೆದ ಶರೀರದಮೇಲಿನ ಅಭಿಮಾನದಿಂದ ಸುಖದುಃಖ ಶೀತೋಷ್ಣಾದಿ ದ್ವಂದ್ವಗಳನ್ನು ಅನುಭವಿಸುವನು. ತಲೆನೋವು, ಕಣ್ಣುನೋವು, ಹಲ್ಲುನೋವು, ಗಂಡಮಾಲೆ, ಜಲೋದರ, ಅತಿಸಾರ, ಕೆಮ್ಮು, ಸಿಡುಬು, ತೊನ್ನು, ಕುಷ್ಠ, ಬೆಂಕಿಯಿಂದ ಸುಟ್ಟ ಗಾಯ, ಶೋಭೆ, ಮೂರ್ಛೆ ಮುಂತಾದ ಶರೀರಕ್ಕೆ ಉಂಟಾಗುವ ರೋಗಬಾಧೆಗಳನ್ನು ಶರೀರಾಭಿಮಾನದಿಂದ ಅನುಭವಿಸುವನು.

೮-೧೪. ಶರೀರಾಭಿಮಾನದಿಂದುಂಟಾದ ಗೌರವದಿಂದಲೇ ಪುಣ್ಯಫಲಗಳನ್ನೂ ಅನುಭವಿಸುವನು. ನಿಯಮಕ್ಕಾಗಿ ಒಂದು ವಸ್ತ್ರವನ್ನೂ ನಾಲ್ಕು ವಸ್ತ್ರಗಳನ್ನೂ ಧರಿಸುವನು. ಪ್ರತಿದಿನವೂ ನೆಲದಮೇಲೆಯೇ ಮಲಗುವನು. ಕಪ್ಪೆಯಂತೆ ಮಲಗಿರುವನು. ವೀರಾಸನದಲ್ಲಿರುವನು. ಆಕಾಶದಲ್ಲಿ ಮಲ

ಇಷ್ಟಕಾಪ್ರಸ್ತರೇ ಚೈವ ಚಕ್ರಕಪ್ರಸ್ತರೇ ತಥಾ ।
ಭಸ್ಮಪ್ರಸ್ತರಶಾಯೀ ಚ ಭೂಮಿಶಯ್ಯಾನುಲೇಪನಃ ॥ ೧೦ ॥

ವೀರಸ್ಥಾನಾಂಬುಪಾಕೇ ಚ ಶಯನಂ ಫಲಕೇಷು ಚ ।
ವಿವಿಧಾಸು ಚ ಶಯ್ಯಾಸು ಫಲಗೃಹ್ಯಾನ್ವಿತಾಸು ಚ ॥ ೧೧ ॥

ಉದ್ಯತೇ ಖಲಲಗ್ನೇ ತು ಕ್ಷೌಮಕೃಷ್ಣಾಜಿನಾನ್ವಿತಃ ।
ಮಣಿವಾಲಪರೀಧಾನೋ ವ್ಯಾಘ್ರಚರ್ಮಪರಿಚ್ಛದಃ ॥ ೧೨ ॥

ಸಿಂಹಚರ್ಮಪರೀಧಾನಃ ಪಟ್ಟವಾಸಾಸ್ತಥೈವ ಚ ।
ಫಲಕಂ ಪರಿಧಾನಶ್ಚ ತಥಾ ಕಟಿಕವಸ್ತ್ರಧೃಕ್ ॥ ೧೩ ॥

ಕಟ್ಯೈಕವಸನಶ್ಚೈವ ಚೀರವಾಸಾಸ್ತಥೈವ ಚ ।
ವಸ್ತ್ರಾಣಿ ಚಾನ್ಯಾನಿ ಬಹೂನ್ಯಭಿಮತ್ಯ ಚ ಬುದ್ಧಿಮಾನ್ ॥ ೧೪ ॥

ಭೋಜನಾನಿ ವಿಚಿತ್ರಾಣಿ ರತ್ನಾನಿ ವಿವಿಧಾನಿ ಚ ।
ಏಕರಾತ್ರಾಂತರಾಶಿತ್ವಮೇಕಕಾಲಿಕಭೋಜನಂ ॥ ೧೫ ॥

ಗಿರುವನು. ಇಟ್ಟಿಗೆಯ ನೆಲ, ಸಣ್ಣ ನೊರಜುಗಲ್ಲು ಇರುವ ನೆಲ, ದುಂಡಗಿರುವ ಕಲ್ಲುಗಳಿರುವ ನೆಲ, ಸ್ಮಶಾನ ಇವುಗಳಲ್ಲಿ ಉದ್ದೇಶಸಿದ್ಧಿಗಾಗಿ ಬಗೆ ಬಗೆಯ ಹಾಸಿಗೆಯಲ್ಲಿ ಮಲಗುವುದು ಮುಂತಾದ ನಿಯಮಗಳನ್ನಾಚರಿಸುವನು. ರೇಷ್ಮೆಯ ವಸ್ತ್ರ, ಜಿಂಕೆಯ ಚರ್ಮ, ಸಿಂಹದ ಚರ್ಮ, ಚಾಪೆ, ನಾರು, ಇವುಗಳನ್ನೇ ವಸ್ತ್ರದಂತೆ ಧರಿಸುವನು. ಇದೇ ರೀತಿಯಾದ ಅನೇಕ ನಿಯಮಗಳನ್ನು ತನ್ನ ಬುದ್ಧಿಯಿಂದ ಯೋಚಿಸಿ ಅತ್ಯಂತ ಅಭಿಮಾನದಿಂದ ಸುಖಬುದ್ಧಿಯಿಂದ ಆಚರಿಸಿ ಫಲವನ್ನನುಭವಿಸುವನು.

೧೫-೧೯. ವಿಚಿತ್ರವಾದ ಭೋಜನ ನಿಯಮಗಳು, ದಿನ ಬಿಟ್ಟು ದಿನದ ಊಟ, ಒಂದು ಹೊತ್ತು, ಆರು ಅಥವಾ ಎಂಟು ದಿನಗಳಿಗೆ ಒಂದು ದಿನ

ಚತುರ್ಥಾಷ್ಟಮಕಾಲಂ ಚ ಷಷ್ಠಕಾಲಿಕಮೇವ ಚ ।
ಷಡ್ರಾತ್ರಭೋಜನಶ್ಚೈವ ತಥಾ ಚಾಷ್ಟಾಹಭೋಜನಃ ॥ ೧೬ ॥

ಮಾಸೋಪವಾಸೀ ಮೂಲಾಶೀ ಫಲಾಹಾರಸ್ತಥೈವ ಚ ।
ವಾಯುಭಕ್ಷಶ್ಚ ಪಿಣ್ಯಾಕದಧಿಗೋಮಯಭೋಜನಃ ॥ ೧೭ ॥

ಗೋಮೂತ್ರಭೋಜನಶ್ಚೈವ ಶಾಕಪುಷ್ಪಾಶನಸ್ತಥಾ ।
ಶೈವಾಲಭೋಜನಶ್ಚೈವ ತಥಾ ಚಾನ್ಯೇನ ವರ್ತಯನ್ ॥ ೧೮ ॥

ವರ್ತಯನ್ ಶೀರ್ಣಪರ್ಣೈಶ್ಚ ಪ್ರಕೀರ್ಣಫಲಭೋಜನಃ ।
ವಿವಿಧಾನಿ ಚ ಕೃಚ್ಛ್ರಾಣಿ ಸೇವತೇ ಸಿದ್ಧಿಕಾಂಕ್ಷಯಾ ॥ ೧೯ ॥

ಚಾಂದ್ರಾಯಣಾನಿ ವಿಧಿವಲ್ಲಿಂಗಾನಿ ವಿವಿಧಾನಿ ಚ ।
ಚಾತುರಾಶ್ರಮ್ಯಯುಕ್ತಾನಿ ಧರ್ಮಾಧರ್ಮಾಶ್ರಯಾಣ್ಯಪಿ ॥ ೨೦ ॥

ಉಪಾಶ್ರಯಾನಪ್ಯಪರಾನ್ಪಾಖಂಡಾನ್ವಿವಿಧಾನಪಿ ।
ವಿವಿಕ್ತಾಶ್ಚ ಶಿಲಾಛಾಯಾಸ್ತಥಾ ಪ್ರಸ್ರವಣಾನಿ ಚ ॥ ೨೧ ॥

ಭೋಜನ, ತಿಂಗಳಿಗೊಂದು ದಿನ, ಒಂದು ನಾಲ್ಕು ಆರು ವರ್ಷಕ್ಕೊಂದು ದಿನ ಮಾತ್ರ ಭೋಜನ, ಬೇರುಗಳು, ಹಣ್ಣುಗಳು, ಗಾಳಿ, ಮರದ ಮೇಣಗಳು, ಮೊಸರು, ಗೋಮಯ, ಗೋಮೂತ್ರ, ದರ್ಭೆಯ ಕೊನೆ, ಪಾಚಿ, ಒಣಗಿದೆಲೆ, ನೆಲದಮೇಲೆ ಬಿದ್ದ ಹಣ್ಣು, ಇವುಗಳನ್ನು ಮಾತ್ರ ತಿನ್ನುತ್ತಾ ಸಿದ್ಧಿ ಮುಂತಾದವುಗಳ ಅಪೇಕ್ಷೆಯಿಂದ ಕಷ್ಟವಾದ ಆಹಾರ ನಿಯಮವನ್ನೂ ಆಚರಿಸುವನು.

೨೦-೨೬. ಜೀವನ ಸಿದ್ಧಿಯನ್ನಪೇಕ್ಷಿಸಿ, ವಿಧಿಗನುಸಾರವಾಗಿ ಚಾಂದ್ರಾಯಣ ವ್ರತಗಳನ್ನು ಮಾಡುವನು. ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳ ಧರ್ಮಗಳನ್ನು ಅದಕ್ಕೆ ತಕ್ಕ ಚಿಹ್ನೆಗಳೊಡನೆ ಆಚರಿಸುವನು. ಬೇರೆಬೇರೆಯಾದ ಪಾಷಂಡಾದಿ ಧರ್ಮಗಳನ್ನಾಚರಿಸುವನು. ಏಕಾಂತವಾಸ

ಪುಲಿನಾನಿ ಪಿವಿಕ್ತಾನಿ ವಿವಿಧಾನಿ ವನಾನಿ ಚ ।
ಕಾನನೇಷು ವಿವಿಕ್ತಾಶ್ಚ ಶೈಲಾನಾಂ ಮಹತೀರ್ಗುಹಾಃ ॥ ೨೨ ॥

ನಿಯಮಾನ್ವಿವಿಧಾಂಶ್ಚಾಪಿ ವಿವಿಧಾನಿ ತಪಾಂಸಿ ಚ ।
ಯಜ್ಞಾಂಶ್ಚ ವಿವಿಧಾಕಾರಾನ್ವಿದ್ಯಾಶ್ಚ ವಿವಿಧಾಸ್ತಥಾ ॥ ೨೩ ॥

ವಣಿಕ್ಪಥಂ ದ್ವಿಜಕ್ಷತ್ರವೈಶ್ಯಶೂದ್ರಾಂಸ್ತಥೈವ ಚ ।
ದಾನಂ ಚ ವಿವಿಧಾಕಾರಂ ದೀನಾಂಧಕೃಪಣಾದಿಷು ॥ ೨೪ ॥

ಅಭಿಮನ್ಯೇತ ಸಂಧಾತುಂ ತಥೈವ ವಿವಿಧಾನ್ಗುಣಾನ್ ।
ಸತ್ತ್ವಂ ರಜಸ್ತಮಶ್ಚೈವ ಧರ್ಮಾರ್ಥೌ ಕಾಮ ಏವ ಚ ॥ ೨೫ ॥

ಪ್ರಕೃತ್ಯಾತ್ಮಾನಮೇವಾತ್ಮಾ ಏವಂ ಪ್ರವಿಭಜತ್ಯುತ ।
ಸ್ವಾಹಾಕಾರವಷಟ್ಕಾರೌ ಸ್ವಧಾಕಾರನಮಸ್ಕ್ರಿಯೇ ॥ ೨೬ ॥

ವನ್ನಪೇಕ್ಷಿಸಿ ಕಲ್ಲು ಬಂಡೆಯ ನೆರಳು ಪರ್ವತದ ಜರಿಯ ವಡ, ದೊಡ್ಡ ಗುಹೆ, ಮರಳಿನ ಗುಡ್ಡೆ, ಕಾಡುಗಳು ಇವುಗಳಲ್ಲಿ ವಾಸಮಾಡುತ್ತ ಬಗೆಬಗೆಯ ನಿಯಮಗಳನ್ನೂ ತಪಸ್ಸುಗಳನ್ನೂ ಯಜ್ಞಗಳನ್ನೂ ವಿದ್ಯಾಭ್ಯಾಸಗಳನ್ನೂ ಮಾಡುವನು.

೨೪-೨೮. ವ್ಯಾಪಾರವನ್ನೂ, ಬ್ರಾಹ್ಮಣಾದಿ ನಾಲ್ಕು ವರ್ಣಗಳು ಮಾಡಬೇಕಾದ ಕಾರ್ಯಗಳನ್ನೂ, ಯಾಚಕರು, ಕುರುಡರು, ಬಡವರು, ಇವರುಗಳ ಮೇಲೆ ಕನಿಕರದಿಂದ ಬಗೆಬಗೆಯ ದಾನಗಳನ್ನೂ ಮಾಡುವನು. ಸ್ವಾಭಾವಿಕವಾದ ಪ್ರಕೃತಿಸಂಬಂಧವಾದ ಸತ್ವ ರಜಸ್ತಮೋಗುಣಗಳನ್ನೂ ಧರ್ಮಾರ್ಥಕಾಮಗಳನ್ನೂ ಆಶ್ರಯಿಸಿ ತನ್ನ ಸ್ವರೂಪವನ್ನು ವಿಭಾಗಮಾಡಿ ಕೊಳ್ಳುವನು. ಸ್ವಾಹಾಕಾರ, ವಷಟ್‌ಕಾರ, ಸ್ವಧಾಕಾರ, ನಮಸ್ಕಾರ, ಇವು ಗಳಿಂದ ಮಾಡಬೇಕಾದ ದೇವ, ಪಿತೃ, ಮನುಷ್ಯರಿಗೆ ಉಪಯುಕ್ತವಾದ ಕರ್ಮ ಗಳನ್ನೂ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ,

ಯಜನಾಧ್ಯಯನೇ ದಾನಂ ತಥೈವಾಹುಃ ಪ್ರತಿಗ್ರಹಂ ।
ಯಾಜನಾಧ್ಯಾಪನೇ ಚೈವ ತಥಾನ್ಯದಪಿ ಕಿಂಚನ ॥ ೨೭ ॥

ಜನ್ಮಮೃತ್ಯುವಿಧಾನೇನ ತಥಾ ವಿಶಸನೇನ ಚ ।
ಶುಭಾಶುಭಭಯಂ ಸರ್ವಮೇತದಾಹುಃ ಸನಾತನಂ ॥ ೨೮ ॥

ಪ್ರಕೃತಿಃ ಕುರುತೇ ದೇವೀ ಭಯಂ ಪ್ರಲಯಮೇವ ಚ ।
ದಿವಸಾಂತೇ ಗುಣಾನೇತಾನತೀತ್ಯೈಕೋऽವತಿಷ್ಠತೇ ॥ ೨೯ ॥

ರಶ್ಮಿಜಾಲಮಿವಾದಿತ್ಯಸ್ತತ್ಕಾಲಂ ಸಂನಿಯಚ್ಛತಿ ।
ಏವಮೇವೈಷ ತತ್ಸರ್ವಂ ಕ್ರೀಡಾರ್ಥಮಭಿಮನ್ಯತೇ ॥ ೩೦ ॥

ಆತ್ಮರೂಪಗುಣಾನೇತಾನ್ವಿವಿಧಾನ್ಹೃದಯಪ್ರಿಯಾನ್ ।
ಏವಮೇತಾಂ ಪ್ರಕುರ್ವಾಣಃ ಸರ್ಗಪ್ರಲಯಧರ್ಮಿಣೀಂ ॥ ೩೧ ॥

ಎಂಬ ಆರು ಕರ್ಮಗಳನ್ನೂ ಮಾಡುವ ಸಂದರ್ಭದಲ್ಲಿ ಪ್ರಾಣಿಗಳಿಗೆ ಹುಟ್ಟು, ಸಾವುಗಳನ್ನುಂಟುಮಾಡುವದರಿಂದಲೂ ಪಶುವಿಶಸನ ಮಾಡುವದರಿಂದಲೂ ಶುಭಾಶುಭಫಲಗಳ ಭಯವು ಬರುವುದೆಂದು ಅನಾದಿಯಾದ ವೇದದ ಮಾತಿರುವದು.

೨೯-೩೦. ಬ್ರಹ್ಮನ ಒಂದು ಹಗಲಿನ ಕೊನೆಯಲ್ಲಿ ಪ್ರಕೃತಿದೇವಿಯೇ, ಸಂಧ್ಯಾಕಾಲದಲ್ಲಿ ಸೂರ್ಯನು ತನ್ನ ಕಿರಣಗಳನ್ನು ತನ್ನಲ್ಲಿಯೇ ಸೇರಿಸಿಕೊಳ್ಳು ವಂತೆ ಪ್ರಪಂಚಕ್ಕೆ ಭಯವನ್ನೂ ಪ್ರಳಯವನ್ನೂ ಉಂಟುಮಾಡುವಳು. ಆಗ ಬ್ರಹ್ಮನು ತ್ರಿಗುಣಗಳನ್ನು ಅತಿಕ್ರಮಿಸಿ ತಾನೊಬ್ಬನೇ ಇರುವನು. ತಾನು ಹೀಗೆ ಮಾಡುವದು ಒಂದು ಆಟವೆಂದು ತಿಳಿದಿರುವನು.

೩೧-೩೨. ಜೀವನು ತನ್ನ ಮನಸ್ಸಿಗೆ ಹಿತವಾದ ಸೃಷ್ಟಿ ನಾಶಗಳೊಡನೆ ಕೂಡಿದ ಬಗೆಬಗೆಯ ರೂಪಗುಣಗಳಿಗೆ ಕಾರಣವಾದ ಕಾರ್ಯಗಳನ್ನು ಮಾಡುತ್ತಾ ಕಾರ್ಯಮಾರ್ಗದಲ್ಲಾಸಕ್ತನಾಗಿ ಸತ್ವಾದಿ ಮೂರು ಗುಣಗಳಿಂದ

ಕ್ರಿಯಾಂ ಕ್ರಿಯಾಪಥೇ ರಕ್ತಸ್ತ್ರಿಗುಣಸ್ತ್ರಿಗುಣಾಧಿಪಃ ।
ಕ್ರಿಯಾಕ್ರಿಯಾಪಥೋಪೇತಸ್ತಥಾ ತದಿತಿ ಮನ್ಯತೇ ॥ ೩೨ ॥

ಪ್ರಕೃತ್ಯಾ ಸರ್ವಮೇವೇದಂ ಜಗದಂಧೀಕೃತಂ ವಿಭೋ ।
ರಜಸಾ ತಮಸಾ ಚೈವ ವ್ಯಾಪ್ತಂ ಸರ್ವಮನೇಕಧಾ ॥ ೩೩ ॥

ಏವಂ ದ್ವಂದ್ವಾನ್ಯತೀತಾನಿ ಮಮ ವರ್ತಂತಿ ನಿತ್ಯಶಃ ।
ಮತ್ತ ಏತಾನಿ ಜಾಯಂತೇ ಪ್ರಲಯೇ ಯಾಂತಿ ಮಾಮಪಿ ॥ ೩೪ ॥

ನಿಸ್ತರ್ತವ್ಯಾನ್ಯಥೈತಾನಿ ಸರ್ವಾಣೀತಿ ನರಾಧಿಪ ।
ಮನ್ಯತೇ ಪಕ್ಷಬುದ್ಧಿತ್ವಾತ್ತಥೈವ ಸುಕೃತಾನ್ಯಪಿ ॥ ೩೫ ॥

ಭೋಕ್ತವ್ಯಾನಿ ಮಯೈತಾನಿ ದೇವಲೋಕಗತೇನ ವೈ ।
ಇಹೈವ ಚೈನಂ ಭೋಕ್ಷ್ಯಾಮಿ ಶುಭಾಶುಭಫಲೋದಯಂ ॥ ೩೬ ॥

ಕೂಡಿದವನಾಗಿ ಆ ಮೂರು ಗುಣಗಳಿಗೂ ತಾನೇ ಅಧಿಪತಿಯಾಗಿ ಕಾರ್ಯಗಳಿಗೆ ಸಂಬಂಧಪಟ್ಟು ಸಮಸ್ತವನ್ನೂ ತನಗಿಂತ ಬೇರೆಯಾಗಿ ಭಾವಿಸುವನು.

೩೩--೩೮. ಎಲೈ ಜನಕನೇ, ಕೇಳು. ಈ ಸಮಸ್ತ ಜಗತ್ತೂ ರಜೋಗುಣ, ತಮೋಗುಣಗಳಿಂದ ಕೂಡಿ, ಪ್ರಕೃತಿಸಂಬಂಧವಾದ ಅಜ್ಞಾನದಿಂದ ಕೂಡಿರುವದು. ಸುಖ ದುಃಖಾದಿ ದ್ವಂದ್ವಗಳನ್ನು ಮೀರಿದ (ಆತ್ಮನ) ನನ್ನ ಶಾಶ್ವತವಾದ ಸ್ಥಿತಿಯೊಂದಿರುವದು. ಎಲೈ ರಾಜನೆ, ನನ್ನಿಂದಲೇ ಅಂದರೆ, ಆತ್ಮನಿಂದಲೇ ಈ ಪ್ರಪಂಚವೆಲ್ಲವೂ ಹುಟ್ಟುವವು. ಪ್ರಳಯಕಾಲದಲ್ಲಿ ನನ್ನಲ್ಲೇ ಲೀನವಾಗುವವು, ಎಂಬ ಒಂದು ಬುದ್ಧಿಯಿಂದ ಈ ಪ್ರಪಂಚ ಸಂಬಂಧವನ್ನು ದಾಟಿಹೋಗಬೇಕೆಂದು ಆತ್ಮನು ತಿಳಿವನು. ಹಾಗೆಯೇ ದೇವಲೋಕಕ್ಕೆ ಹೋಗಿ ಪುಣ್ಯ ಫಲಗಳನ್ನು ಅನುಭವಿಸಬೇಕು. ಈ ಮನುಷ್ಯಲೋಕದಲ್ಲಿ ಶುಭಾಶುಭ ಕರ್ಮಗಳ ಫಲವನ್ನು ಅನುಭವಿಸಬೇಕು. ಒಂದುಬಾರಿ ಪುಣ್ಯ

ಸುಖಮೇವಂ ತು ಕರ್ತವ್ಯಂ ಸಕೃತ್ಕೃತ್ವಾ ಸುಖಂ ಮಮ ।
ಯಾವದೇವ ತು ಮೇ ಸೌಖ್ಯಂ ಜಾತ್ಯಾಂ ಜಾತ್ಯಾಂ ಭವಿಷ್ಯತಿ ॥ ೩೭ ॥

ಭವಿಷ್ಯತಿ ನ ಮೇ ದುಃಖಂ ಕೃತೇನೇಹಾಪ್ಯನಂತಕಂ ।
ಸುಖದುಃಖಂ ಹಿ ಮಾನುಷ್ಯಂ ನಿರಯೇ ಚಾಪಿ ಮಜ್ಜನಂ ॥ ೩೮ ॥

ನಿರಯಾಚ್ಚಾಪಿ ಮಾನುಷ್ಯಂ ಕಾಲೇನೈಷ್ಯಾಮ್ಯಹಂ ಪುನಃ ।
ಮನುಷ್ಯತ್ವಾಚ್ಚ ದೇವತ್ವಂ ದೇವತ್ವಾತ್ಪೌರುಷಂ ಪುನಃ ॥ ೩೯ ॥

ಮನುಷ್ಯತ್ವಾಚ್ಚ ನಿರಯಂ ಪರ್ಯಾಯೇಣೋಪಗಚ್ಛತಿ ।
ಏಷ ಏವಂ ದ್ವಿಜಾತೀನಾಮಾತ್ಮಾ ವೈ ಸ ಗುಣೈರ್ವೃತಃ । ೪೦ ॥

ತೇನ ದೇವಮನುಷ್ಯೇಷು ನಿರಯಂ ಚೋಪಪದ್ಯತೇ ।
ಮಮತ್ವೇನಾವೃತೋ ನಿತ್ಯಂ ತತ್ರೈವ ಪರಿವರ್ತತೇ ॥ ೪೧ ॥

ಕರ್ಮವನ್ನು ಮಾಡಿ ಸುಖವನ್ನನುಭವಿಸಿದಮೇಲೆ ಹೀಗೆಯೇ ನಾನು ಪುಣ್ಯವನ್ನೇ ಮಾಡಬೇಕು. ಇದರಿಂದ ಪ್ರತಿಯೊಂದು ಜನ್ಮದಲ್ಲಿಯೂ ನನಗೆ ಸುಖವುಂಟಾಗುವದು. ಅನೇಕ ಪುಣ್ಯಕಾರ್ಯಗಳನ್ನು ಮಾಡಿದ ನನಗೆ ದುಃಖವೇ ಬರುವದಿಲ್ಲ ಎಂಬದಾಗಿಯೂ ತಿಳಿವನು.

೩೯-೪೧. ಮನುಷ್ಯಜನ್ಮವು ಸುಖದುಃಖಗಳಿಂದ ಕೂಡಿದುದು. ಪಾಪಫಲಗಳಿಂದ ನರಕಕ್ಕೆ ಬೀಳುವೆನು. ಮತ್ತೆ ಕೆಲವು ಕಾಲದಮೇಲೆ ನರಕದಿಂದ ಮನುಷ್ಯಲೋಕಕ್ಕೂ ಬರುವೆನು. ಮನುಷ್ಯಲೋಕದಿಂದ ದೇವಲೋಕಕ್ಕೂ ಹೋಗುವೆನು. ಮತ್ತೆ ದೇವಲೋಕದಿಂದ ಮನುಷ್ಯಲೋಕಕ್ಕೂ ಮನುಷ್ಯಲೋಕದಿಂದ ನರಕಕ್ಕೂ ಬರುವೆನು. ಈರೀತಿಯಲ್ಲಿ ಈ ಆತ್ಮನು ಗುಣಗಳಿಂದ ಕೂಡಿ ನಾನು ಎಂಬ ಅಭಿಮಾನದಿಂದ ದೇವ ಮನುಷ್ಯ ನರಕಲೋಕಕ್ಕೆ ಮತ್ತೆ ಮತ್ತೆ ಹೋಗಿ ಬರುತ್ತಿರುವನು.

ಸರ್ಗಕೋಟಿಸಹಸ್ರಾಣಿ ಮರಣಾಂತಾಸು ಮೂರ್ತಿಷು ।
ಯ ಏವಂ ಕುರುತೇ ಕರ್ಮ ಶುಭಾಶುಭಫಲಾತ್ಮಕಂ ॥ ೪೨ ॥

ಸ ಏವಂ ಫಲಮಾಪ್ನೋತಿ ತ್ರಿಷು ಲೋಕೇಷು ಮೂರ್ತಿಮಾನ್ ।
ಪ್ರಕೃತಿಃ ಕುರುತೇ ಕರ್ಮ ಶುಭಾಶುಭಫಲಾತ್ಮಕಂ ॥ ೪೩ ॥

ಪ್ರಕೃತಿಶ್ಚ ತಥಾಪ್ನೋತಿ ತ್ರಿಷು ಲೋಕೇಷು ಕಾಮಗಾ ।
ತಿರ್ಯಗ್ಯೋನಿಮನುಷ್ಯತ್ವೇ ದೇವಲೋಕೇ ತಥೈವ ಚ ॥ ೪೪ ॥

ತ್ರೀಣಿ ಸ್ಥಾನಾನಿ ಚೈತಾನಿ ಜಾನೀಯಾತ್ಪ್ರಾಕೃತಾನಿ ಹ ।
ಅಲಿಂಗಪ್ರಕೃತಿತ್ವಾಚ್ಚ ಲಿಂಗೈರಪ್ಯನುಮೀಯತೇ ॥ ೪೫ ॥

ತಥೈವ ಪೌರುಷಂ ಲಿಂಗಮನುಮಾನಾದ್ಧಿ ಮನ್ಯತೇ ।
ಸ ಲಿಂಗಾಂತರಮಾಸಾದ್ಯ ಪ್ರಾಕೃತಂ ಲಿಂಗಮವ್ರಣಂ ॥ ೪೬ ॥

೪೨-೪೫. ಜೀವನು ಸಾವಿರಕೋಟಿ ಜನ್ಮಗಳಲ್ಲಿ ಹುಟ್ಟಿ ಸಾಯುವ ವರೆಗೂ ಶುಭಾಶುಭ ಫಲಗಳನ್ನು ಕೊಡುವ ಕರ್ಮಗಳನ್ನು ಮಾಡಿ, ಮೂರು ಲೋಕಗಳಲ್ಲಿಯೂ ಹಿಂದೆ ವಿವರಿಸಿದಂತೆ ಫಲವನ್ನು ಪಡೆವನು. ಜೀವನಲ್ಲಿರುವ ತ್ರಿಗುಣಸ್ವರೂಪವಾದ ಪ್ರಕೃತಿಯೇ ಶುಭಾಶುಭಕರ್ಮಗಳನ್ನು ಮಾಡುವುದು. ಆ ಪ್ರಕೃತಿಯೇ ಮೂರು ಲೋಕಗಳಲ್ಲಿಯೂ ಅದರ ಫಲಗಳನ್ನು ಅನುಭವಿಸುವದು. ತಿರ್ಯಗ್ಯೋನಿ ಮನುಷ್ಯತ್ವ ದೇವತ್ವಗಳೂ ಆ ಮೂರು ಸ್ಥಾನಗಳೂ ಪ್ರಕೃತಿಸಂಬಂಧವಾದುವುಗಳೇ ಎಂದು ಅನುಮಾನಪ್ರಮಾಣದಿಂದ ತಿಳಿಯಬೇಕು.

೪೬-೫೨. ಅನುಮಾನಪ್ರಮಾಣದಿಂದಲೇ ಪುರುಷನು ಪ್ರಕೃತಿಗಿಂತ ಬೇರೆಯಾದವನೆಂದು ತಿಳಿಯಬೇಕು. ಪುರುಷನು ಕರ್ಮೇಂದ್ರಿಯಜ್ಞಾನೇಂದ್ರಿಯಗಳಿಂದ ಕೂಡಿದ ಪ್ರಕೃತಿಸಂಬಂಧವಾದ ಶರೀರವನ್ನು ಆಶ್ರಯಿಸಿ ಕರ್ಮ

ವ್ರಣದ್ವಾರಾಣ್ಯಧಿಷ್ಠಾಯ ಕರ್ಮಾಣ್ಯಾತ್ಮನಿ ಮನ್ಯತೇ ।
ಶ್ರೋತ್ರಾದೀನಿ ತು ಸರ್ವಾಣಿ ಪಂಚ ಕರ್ಮೇಂದ್ರಿಯಾಣ್ಯಥ ॥ ೪೭ ॥

ರಾಗಾದೀನಿ ಪ್ರವರ್ತಂತೇ ಗುಣೇಷ್ವಿಹ ಗುಣೈಃ ಸಹ ।
ಅಹಮೇತಾನಿ ವೈ ಕುರ್ವನ್ಮಮೈತಾನೀಂದ್ರಿಯಾಣಿ ಹ ॥ ೪೮ ॥

ನಿರಿಂದ್ರಿಯೋ ಹಿ ಮನ್ಯೇತ ವ್ರಣವಾನಸ್ಮಿ ನಿರ್ವ್ರಣಃ ।
ಅಲಿಂಗೋ ಲಿಂಗಮಾತ್ಮಾನಮಕಾಲಂ ಕಾಲಮಾತ್ಮನಃ ॥ ೪೯ ॥

ಅಸತ್ತ್ವಂ ಸತ್ತ್ವಮಾತ್ಮಾನಮಮೃತಂ ಮೃತಮಾತ್ಮನಃ ।
ಅಮೃತ್ಯುಂ ಮೃತ್ಯುಮಾತ್ಮಾನಮಚರಂ ಚರಮಾತ್ಮನಃ ॥ ೫೦ ॥

ಅಕ್ಷೇತ್ರಂ ಕ್ಷೇತ್ರಮಾತ್ಮಾನಮಸಂಗಂ ಸಂಗಮಾತ್ಮನಃ ।
ಅತತ್ತ್ವಂ ತತ್ತ್ವಮಾತ್ಮಾನಮಭವಂ ಭವಮಾತ್ಮನಃ ॥ ೫೧ ॥

ಅಕ್ಷರಂ ಕ್ಷರಮಾತ್ಮಾನಮಬುದ್ಧತ್ವಾದ್ಧಿ ಮನ್ಯತೇ ।
ಏವಮಪ್ರತಿಬುದ್ಧತ್ವಾದಬುದ್ಧಜನಸೇವನಾತ್ ॥ ೫೨ ॥

ಗಳನ್ನು ತಾನೇ ಮಾಡತಕ್ಕವನೆಂಬ ಅಭಿಮಾನದಿಂದ ಗುಣಗಳು, ಪ್ರೀತಿ ಮುಂತಾದ ಮನೋಧರ್ಮಗಳು ಇವುಗಳಿಂದ ಕೂಡಿ ಇವುಗಳನ್ನೆಲ್ಲಾ ನಾನೇ ಮಾಡುವೆನು, ಎಂಬ ಭಾವನೆಯಿಂದ ಇಂದ್ರಿಯಗಳು, ದೋಷಗಳು, ಚಿಹ್ನೆಗಳು, ಕಾಲ, ಸತ್ವ, ಸಂಗ, ತತ್ವ, ಮೃತ್ಯು, ಚಲನೆ, ಕ್ಷೇತ್ರ, ಉತ್ಪತ್ತಿ, ನಾಶ ಇವುಗಳಿಲ್ಲದ ತಾನು ಅಜ್ಞಾನದಿಂದ ಈ ಗುಣಗಳುಳ್ಳವನೆಂದು ಅಕ್ಷರವನ್ನು ಕ್ಷರವೆಂದೂ ತಿಳಿದು ಅಜ್ಞಾನಿಗಳ ಸಹವಾಸದಿಂದ ಸಾವಿರಕೋಟಿ ಜನ್ಮಾಂತರಗಳನ್ನು ಪಡೆದು ಹುಟ್ಟು ಸಾವುಗಳನ್ನು ಅನುಭವಿಸುವನು.

ಸರ್ಗಕೋಟಿಸಹಸ್ರಾಣಿ ಪತನಾಂತಾನಿ ಗಚ್ಛತಿ ।
ಜನ್ಮಾಂತರಸಹಸ್ರಾಣಿ ಮರಣಾಂತಾನಿ ಗಚ್ಛತಿ ॥ ೫೩ ॥

ತಿರ್ಯಗ್ಯೋನಿಮನುಷ್ಯತ್ವೇ ದೇವಲೋಕೇ ತಥೈವ ಚ ।
ಚಂದ್ರಮಾ ಇವ ಕೋಶಾನಾಂ ಪುನಸ್ತತ್ರ ಸಹಸ್ರಶಃ ॥ ೫೪ ॥

ನೀಯತೇಽಪ್ರತಿಬುದ್ಧತ್ವಾದೇವಮೇವ ಕುಬುದ್ಧಿಮಾನ್ ।
ಕಲಾ ಪಂಚದಶೀ ಯೋನಿಸ್ತದ್ಧಾಮ ಇತಿ ಪಠ್ಯತೇ ॥ ೫೫ ॥

ನಿತ್ಯಮೇವ ವಿಜಾನೀಹಿ ಸೋಮಂ ವೈ ಷೋಡಶಾಂಶಕೈಃ ।
ಕಲಯಾ ಜಾಯತೇಽಜಸ್ರಂ ಪುನಃ ಪುನರಬುದ್ಧಿಮಾನ್ ॥ ೫೬ ॥

ಧೀಮಾಂಶ್ಚಾಯಂ ನ ಭವತಿ ನೃಪ ಏವಂ ಹಿ ಜಾಯತೇ ।
ಷೋಡಶೀ ತು ಕಲಾ ಸೂಕ್ಷ್ಮಾ ಸ ಸೋಮ ಉಪಧಾರ್ಯತಾಂ ॥ ೫೭ ॥

೫೩-೫೮. ಆತ್ಮನು ಅಭಿಮಾನ ರೂಪವಾದ ಅಜ್ಞಾನದಿಂದ ಮಾಡಿದ ಕರ್ಮಫಲಾಧೀನನಾಗಿ ತಿರ್ಯಗ್ಯೋನಿ ಮನುಷ್ಯತ್ವ, ದೇವತ್ವಗಳಿಗೆ, ಚಂದ್ರನು ಶುಕ್ಲ, ಕೃಷ್ಣಪಕ್ಷಗಳಲ್ಲಿ ಕಲೆಗಳಿಂದ ವೃದ್ಧಿ ಕ್ಷಯಗಳನ್ನು ಹೊಂದುವಂತೆ ಹೋಗಿ ಬರುತ್ತಿರುವನು. ಈರೀತಿಯಲ್ಲಿ ಸಾವಿರಾರು ಜನ್ಮಗಳನ್ನು ಪಡೆವನು. ಚಂದ್ರನಲ್ಲಿರುವ ಹದಿನೈದು ಕಲೆಗಳು ಅವನ ವೃದ್ಧಿ ಕ್ಷಯಗಳಿಗೆ ಕಾರಣವಾದವುಗಳು. ಈ ಕಲೆಗಳೇ ದೇವತೆಗಳಿಗೆ ಉಪಯುಕ್ತವಾದವು. ಹದಿನಾರನೆಯ ಕಲೆಯು ಶಾಶ್ವತವಾದುದು. ಅದೇ ಚಂದ್ರನೆಂದು ತಿಳಿಯಬೇಕು. ಈ ಸೂಕ್ಷ್ಮ ಕಲೆಯು ದೇವತೆಗಳಿಗೆ ಉಪಯುಕ್ತವಾದುದಲ್ಲ. ಆ ಕಲೆಯು ದೇವತೆಗಳನ್ನೂ ಆಜ್ಞೆಯಲ್ಲಿಟ್ಟುಕೊಳ್ಳುವ ಆತ್ಮತೇಜಸ್ಸೆಂದು ತಿಳಿಯಬೇಕು. ಎಲೈ ರಾಜನೇ, ಹೀಗೆಯೇ ಆತ್ಮನು ಅಭಿಮಾನದಿಂದ ಇಂದ್ರಿಯಾದಿಗಳಿಂದ ಕೂಡಿದ ಶರೀರವೇ ನಾನೆಂದು ಅಜ್ಞಾನದಿಂದ ತನ್ನ ಸ್ವರೂಪವನ್ನು ಮರೆತಿರುವನು. ಅಭಿಮಾನ

ನ ತೂಪಯುಜ್ಯತೇ ದೇವ್ಯೈರ್ದೇವಾನಪಿ ಯುನಕ್ತಿ ಸಃ ।
ಮಮತ್ವಂ ಕ್ಷಪಯಿತ್ವಾ ತು ಜಾಯತೇ ನೃಪಸತ್ತಮ ।
ಪ್ರಕೃತೇಸ್ತ್ರಿಗುಣಾಯಾಸ್ತು ಸ ಏವ ತ್ರಿಗುಣೋ ಭವೇತ್ ॥ ೫೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವಸಿಷ್ಠಕರಾಲಜನಕಸಂವಾದೇ
ದ್ವಿಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

ವನ್ನು ಬಿಟ್ಟರೆ, ಪ್ರಕೃತಿಸಂಬಂಧವಾದ ಗುಣಗಳನ್ನು ಕಳೆದುಕೊಂಡು ಸ್ವಸ್ವರೂಪನಾಗುವನು. ಇದೇ ದೇವತ್ವಕ್ಕಿಂತಲೂ ಶ್ರೇಷ್ಠವಾದ, ಯಾವ ದುಃಖವೂ ಇಲ್ಲದ ಪೂರ್ಣಾನಂದಸ್ವರೂಪವಾದ ಮೋಕ್ಷವು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ವಸಿಷ್ಠಕರಾಳ ಜನಕ ಸಂವಾದವೆಂಬ
ಇನ್ನೂರನಲವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ಜನಕ ಉವಾಚ ॥

ಅಕ್ಷರಕ್ಷರಯೋರೇಷ ದ್ವಯೋಃ ಸಂಬಂಧ ಇಷ್ಯತೇ ।
ಸ್ತ್ರೀಪುಂಸಯೋರ್ವಾ ಸಂಬಂಧಃ ಸ ವೈ ಪುರುಷ ಉಚ್ಯತೇ ॥ ೧ ॥

ಋತೇ ತು ಪುರುಷಂ ನೇಹ ಸ್ತ್ರೀ ಗರ್ಭಾನ್ಧಾರಯತ್ಯುತ ।
ಋತೇ ಸ್ತ್ರಿಯಂ ನ ಪುರುಷೋ ರೂಪಂ ನಿರ್ವರ್ತತೇ ತಥಾ ॥ ೨ ॥

ಅನ್ಯೋಽನ್ಯಸ್ಯಾಭಿಸಂಬಂದಾದನ್ಯೋಽನ್ಯಗುಣಸಂಶ್ರಯಾತ್ ।
ರೂಪಂ ನಿರ್ವರ್ತಯೇದೇತದೇವಂ ಸರ್ವಾಸು ಯೋನಿಷು ॥ ೩ ॥

ಇನ್ನೂರ ನಲವತ್ತಮೂರನೆಯ ಅಧ್ಯಾಯವು

೧-೪. ಜನಕನು ಹೇಳಿದನು—ಅಕ್ಷರಸ್ವರೂಪನಾದ ಪರಬ್ರಹ್ಮನಿಗೂ ಕ್ಷರರೂಪನಾದ ಪ್ರಕೃತಿಗೂ ಇರುವ ಸಂಬಂಧವು ಸ್ತ್ರೀಪುರುಷರ ಸಂಬಂಧದಂತೆ ಇರುವುದೆಂದು ತೋರುವುದು. ವ್ಯವಹಾರದಲ್ಲಿ ಪುರುಷನಿಲ್ಲದೆ ಸ್ತ್ರೀ ಗರ್ಭವನ್ನು ಧರಿಸುವಂತಿಲ್ಲ, ಸ್ತ್ರೀಯಿಲ್ಲದೆ ಪುರುಷನು ಪುತ್ರವಂತನಾಗಲಾರನು. ಸಮಸ್ತ ಪ್ರಾಣಿಗಳೂ ಸ್ತ್ರೀಪುರುಷರ ಸಂಬಂಧದಿಂದಲೂ ಪರಸ್ಪರ ಗುಣಗಳ ಆಶ್ರಯ

ರತ್ಯರ್ಥಮತಿಸಂಯೋಗಾದನ್ಯೋನ್ಯಗುಣಸಂಶ್ರಯಾತ್ ।
ಋತೌ ನಿರ್ವರ್ತತೇ ರೂಪಂ ತದ್ವಕ್ಷ್ಯಾಮಿ ನಿದರ್ಶನಂ ॥ ೪ ॥

ಯೇ ಗುಣಾಃ ಪುರುಷಸ್ಯೇಹ ಯೇ ಚ ಮಾತುರ್ಗುಣಾಸ್ತಥಾ ।
ಅಸ್ಥಿ ಸ್ನಾಯು ಚ ಮಜ್ಜಾ ಚ ಜಾನೀಮಃ ಪಿತೃತೋ ದ್ವಿಜ ॥ ೫ ॥

ತ್ವಙ್ಮಾಂಸಶೋಣಿತಂ ಚೇತಿ ಮಾತೃಜಾನ್ಯನುಶುಶ್ರುಮ ।
ಏವಮೇತದ್ದ್ವಿಜಶ್ರೇಷ್ಠ ವೇದಶಾಸ್ತ್ರೇಷು ಪಠ್ಯತೇ ॥ ೬ ॥

ಪ್ರಮಾಣಂ ಯಚ್ಚ ವೇದೋಕ್ತಂ ಶಾಸ್ತ್ರೋಕ್ತಂ ಯಚ್ಚ ಪಠ್ಯತೇ ।
ವೇದಶಾಸ್ತ್ರಪ್ರಮಾಣಂ ಚ ಪ್ರಮಾಣಂ ತತ್ಸನಾತನಂ ॥ ೭ ॥

ಏವಮೇವಾಭಿಸಂಬಂಧೌ ನಿತ್ಯಂ ಪ್ರಕೃತಿಪೂರುಷೌ ।
ಯಚ್ಚಾಪಿ ಭಗವಂಸ್ತಸ್ಮಾನ್ಮೋಕ್ಷಧರ್ಮೋ ನ ವಿದ್ಯತೇ ॥ ೮ ॥

ಅಥವಾನಂತರಕೃತಂ ಕಿಂಚಿದೇವ ನಿದರ್ಶನಂ ।
ತನ್ಮಮಾಚಕ್ಷ್ವ ತತ್ತ್ವೇನ ಪ್ರತ್ಯಕ್ಷೋ ಹ್ಯಸಿ ಸರ್ವದಾ ॥ ೯ ॥

ದಿಂದಲೂ ಒಂದು ಆಕಾರವನ್ನು ಪಡೆವವು ಋತುಕಾಲದಲ್ಲಿ ಸ್ತ್ರೀ ಪುರುಷರ ರತ್ಯರ್ಥವಾದ ಪರಸ್ಪರ ಸಂಯೋಗದಿಂದಲೂ ಪರಸ್ಪರ ಗುಣಾಶ್ರಯದಿಂದಲೂ ರೂಪವು ಉತ್ಪತ್ತಿಯಾಗುವುದೆಂಬುವಕ್ಕೆ ನಿದರ್ಶನವನ್ನು ಹೇಳುವೆನು.

೫-೧೦. ಮನುಷ್ಯನ ಶರೀರದಲ್ಲಿರುವ ಮೂಳೆ, ನರಗಳು, ಮಜ್ಜೆ ಇವು ತಂದೆಯಿಂದ ಬಂದುವೆಂದೂ ಚರ್ಮ, ಮಾಂಸ, ರಕ್ತ ಇವುಗಳು ತಾಯಿಯಿಂದ ಬಂದುವೆಂದೂ ವೇದಶಾಸ್ತ್ರಗಳು ಹೇಳುವುವು. ಇವು ಸನಾತನವಾದ ಪ್ರಮಾಣ ಗ್ರಂಥಗಳೆಂದು ಎಲ್ಲರೂ ನಂಬಿರುವರು. ಪ್ರಕೃತಿಪುರುಷರಿಗೂ ಇದೇ ವಿಧವಾದ ಸಂಬಂಧವಿರಬೇಕೆಂದು ತೋರುವುದು. ಹೀಗಾದಮೇಲೆ ಮೋಕ್ಷವೆಂಬುದು ಇಲ್ಲವೇ ಇಲ್ಲವೆಂದಾಗುವುದು. ಪ್ರತ್ಯಕ್ಷ ಗುರುವಾದ ಎಲೈ ವಸಿಷ್ಠನೇ, ಈ ನಿದರ್ಶನವು ಯುಕ್ತವೇ, ಅಯುಕ್ತವೇ ಎಂಬುದನ್ನು ನನಗೆ ಹೇಳು. ರೋಗ

ಮೋಕ್ಷಕಾಮಾ ವಯಂ ಚಾಪಿ ಕಾಂಕ್ಷಾಮೋ ಯದನಾಮಯಂ ।
ಅಜೇಯಮಜರಂ ನಿತ್ಯಮತೀಂದ್ರಿಯಮನೀಶ್ವರಂ ॥ ೧೦ ॥

॥ ವಸಿಷ್ಠ ಉವಾಚ ॥

ಯದೇತದುಕ್ತಂ ಭವತಾ ವೇದಶಾಸ್ತ್ರನಿದರ್ಶನಂ ।
ಏವಮೇತದ್ಯಥಾ ವಕ್ಷ್ಯೇ ತತ್ತ್ವಂಗ್ರಾಹೀ ಯಥಾ ಭವಾನ್ ॥ ೧೧ ॥

ಧಾರ್ಯತೇ ಹಿ ತ್ವಯಾ ಗ್ರಂಥ ಉಭಯೋರ್ವೇದಶಾಸ್ತ್ರಯೋಃ ।
ನ ಚ ಗ್ರಂಥಸ್ಯ ತತ್ತ್ವಜ್ಞೋ ಯಥಾತತ್ತ್ವಂ ನರೇಶ್ವರ ॥ ೧೨ ॥

ಯೋ ಹಿ ವೇದೇ ಚ ಶಾಸ್ತ್ರೇ ಚ ಗ್ರಂಥಧಾರಣತತ್ಪರಃ ।
ನ ಚ ಗ್ರಂಥಾರ್ಥತತ್ತ್ವಜ್ಞಸ್ತಸ್ಯ ತದ್ಧಾರಣಂ ವೃಥಾ ॥ ೧೩ ॥

ಭಾರಂ ಸ ವಹತೇ ತಸ್ಯ ಗ್ರಂಥಸ್ಯಾರ್ಥಂ ನ ವೇತ್ತಿ ಯಃ ।
ಯಸ್ತು ಗ್ರಂಥಾರ್ಥತತ್ತ್ವಜ್ಞೋ ನಾಸ್ಯ ಗ್ರಂಥಾಗಮೋ ವೃಥಾ ॥ ೧೪ ॥

ಗಳೂ ಮುಪ್ಪೂ ಇಲ್ಲದ, ಇಂದ್ರಿಯ ಗೋಚರವಲ್ಲದ ಸ್ವತಂತ್ರವೂ ಶಾಶ್ವತವೂ ಆದ ಆನಂದಸ್ವರೂಪವಾದ ಮೋಕ್ಷವನ್ನು ನಾನು ತಿಳಿಯಲಪೇಕ್ಷಿಸುವೆನು ಎಂದನು.

೧೧-೧೬. ವಸಿಷ್ಠನು ಹೇಳಿದನು.—ಎಲೈ ರಾಜನೇ, ನೀನು ಹೇಳಿದ ವೇದಶಾಸ್ತ್ರಗಳ ಸಂಬಂಧವಾದ ನಿದರ್ಶನವು ಸರಿಯಾದುದು. ಆದರೆ ಅದರ ತತ್ವವನ್ನು ನಿನಗೆ ತಿಳಿಸಿಕೊಡುವೆನು. ನೀನು ವೇದ ಶಾಸ್ತ್ರಗಳನ್ನು ಓದಿ ಅದನ್ನು ಜ್ಞಾಪಕದಲ್ಲಿಟ್ಟುಕೊಂಡಿರುವೆ ಆದರೆ ಆ ಗ್ರಂಥಗಳ ತತ್ವಾರ್ಥವನ್ನು ನೀನು ತಿಳಿದಿಲ್ಲ. ಗ್ರಂಥಗಳ ತತ್ವಾರ್ಥವನ್ನು ತಿಳಿಯದೆ ವೇದಶಾಸ್ತ್ರಗಳನ್ನು ಜ್ಞಾಪಕವಿಟ್ಟುಕೊಂಡಿರುವುದರಲ್ಲಿ ಮಾತ್ರ ಆಸಕ್ತನಾದವನ ಪ್ರಯತ್ನವು ವ್ಯರ್ಥವಾದುದಾಗುವುದು. ತತ್ವಾರ್ಥವನ್ನು ತಿಳಿದವನ ವೇದಶಾಸ್ತ್ರಗಳ ಕಂಠಪಾಠವು ವ್ಯರ್ಥವಾಗಲಾರದು. ಗ್ರಂಥಾಭಿಪ್ರಾಯವನ್ನು ಪ್ರಶ್ನೆಮಾಡಿದವನೆ ನನ್ನಂತಹವನು ಹೇಳಲು ಶಕ್ತನಾಗುವನು. ಸೂಕ್ಷ್ಮಬುದ್ಧಿಯಿಲ್ಲದವನು

ಗ್ರಂಥಸ್ಯಾರ್ಥಂ ಸ ಪೃಷ್ಟಸ್ತು ಮಾದೃಶೋ ವಕ್ತುಮರ್ಹತಿ ।
ಯಥಾತತ್ತ್ವಾಭಿಗಮನಾದರ್ಥಂ ತಸ್ಯ ಸ ವಿಂದತಿ ॥ ೧೫ ॥

ನ ಯಃ ಸಮುತ್ಸುಕಃ ಕಶ್ಚಿದ್ಗ್ರಂಥಾರ್ಥಂ ಸ್ಥೂಲಬುದ್ಧಿಮಾನ್ ।
ಸ ಕಥಂ ಮಂದವಿಜ್ಞಾನೋ ಗ್ರಂಥಂ ವಕ್ಷ್ಯತಿ ನಿರ್ಣಯಾತ್ ॥ ೧೬ ॥

ಅಜ್ಞಾತ್ವಾ ಗ್ರಂಥತತ್ತ್ವಾನಿ ವಾದಂ ಯಃ ಕುರುತೇ ನರಃ ।
ಲೋಭಾದ್ವಾಪ್ಯಥವಾ ದಂಭಾತ್ಸ ಪಾಪೀ ನರಕಂ ವ್ರಜೇತ್ ॥ ೧೭ ॥

ನಿರ್ಣಯಂ ಚಾಪಿ ಚ್ಛಿದ್ರಾತ್ಮಾ ನ ತದ್ವಕ್ಷ್ಯತಿ ತತ್ತ್ವತಃ ।
ಸೋಽಪೀಹಾಸ್ಯಾರ್ಥತತ್ತ್ವಜ್ಞೋ ಯಸ್ಮಾನ್ನೈವಾತ್ಮವಾನಪಿ ॥ ೧೮ ॥

ತಸ್ಮಾತ್ತ್ವಂ ಶೃಣು ರಾಜೇಂದ್ರ ಯಥೈತದನುದೃಶ್ಯತೇ ।
ಯಥಾ ತತ್ತ್ವೇನ ಸಾಂಖ್ಯೇಷು ಯೋಗೇಷು ಚ ಮಹಾತ್ಮಸು ॥ ೧೯ ॥

ಯದೇವ ಯೋಗಾಃ ಪಶ್ಯಂತಿ ಸಾಂಖ್ಯಂ ತದನುಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಬುದ್ಧಿಮಾನ್ ॥ ೨೦ ॥

ಆತ್ಮಾಸಕ್ತಿಯಿಂದ ತತ್ವಾರ್ಥವನ್ನು ಕೇಳಿದರೂ ಅದರ ಅಭಿಪ್ರಾಯವನ್ನು ನಿರ್ಣಯಿಸಿ ಹೇಳಲು ಶಕ್ತನಾಗಲಾರನು. ಎಂದರೆ ಹೇಳುವುದರಲ್ಲಿ ನನಗೆ ಶಕ್ತಿಯಿರುವುದು. ಕೇಳಿ ತಿಳಿದುಕೊಳ್ಳುವುದರಲ್ಲಿ ನಿನಗೂ ಶಕ್ತಿ ಇರುವುದೆಂದು ಮುಖ್ಯಾಭಿಪ್ರಾಯವು.

೧೭–೨೦. ಗ್ರಂಥಗಳ ತತ್ವಾರ್ಥವನ್ನು ತಿಳಿಯದೆ ಆತ್ಮಾಸೆಯಿಂದಲೋ ದಂಭದಿಂದಲೋ ಯಾವನು ಶಾಸ್ತ್ರವಾದವನ್ನು ಮಾಡುವನೋ ಅವನು ಪಾಪಿಯಾಗಿ ನರಕಕ್ಕೆ ಹೋಗುವನು. ಭಿನ್ನವಾದ ಮನಸ್ಸುಳ್ಳವನು ತತ್ವಾರ್ಥವನ್ನು ನಿರ್ಣಯಿಸಿ ಹೇಳಲಾರನು. ಅವನು ಆತ್ಮತತ್ವಜ್ಞನೂ ಅಲ್ಲ. ಎಲೈ ದೊರೆಯೇ, ಸಾಂಖ್ಯ ಮತ್ತು ಯೋಗಶಾಸ್ತ್ರಗಳನ್ನು ಬಲ್ಲ ಮಹಾತ್ಮರು ತತ್ವಾರ್ಥವನ್ನು ಹೇಗೆ ತಿಳಿದಿರುವರೆಂಬುದನ್ನು ನಿನಗೆ ಹೇಳುವೆನು ಕೇಳು. ಯೋಗಿಗಳು ಯಾವುದನ್ನು ತಿಳಿದಿರುವರೋ, ಸಾಂಖ್ಯರೂ ಅದನ್ನೇ ತಿಳಿದು ಅದರಂತೆ ಅನುಸರಿಸುವರು. ಸಾಂಖ್ಯ ಯೋಗಗಳೆರಡೂ ಒಂದೇ ತತ್ವವನ್ನು ತಿಳಿಸುವುವೆಂಬುದನ್ನು ತಿಳಿದ ಮನುಷ್ಯನು ಸೂಕ್ಷ್ಮಬುದ್ಧಿಯುಳ್ಳವನೆನಿಸುವನು.

ತ್ವಙ್ಮಾಂಸಂ ರುಧಿರಂ ಮೇದಃ ಪಿತ್ತಂ ಮಜ್ಜಾಸ್ಥಿ ಸ್ನಾಯು ಚ ।
ಏತದ್ದೈಂದ್ರಿಯಕಂ ತಾತ ಯದ್ಭವಾನಿತ್ಥಮಾತ್ಥ ಮಾಂ ॥ ೨೦ ॥

ದ್ರವ್ಯಾದ್ದ್ರವ್ಯಸ್ಯ ನಿರ್ವೃತ್ತಿರಿಂದ್ರಿಯಾದಿಂದ್ರಿಯಂ ತಥಾ ।
ದೇಹಾದ್ದೇಹಮವಾಪ್ನೋತಿ ಬೀಜಾದ್ಬೀಜಂ ತಥೈವ ಚ ॥ ೨೨ ॥

ನಿರಿಂದ್ರಿಯಸ್ಯ ಬೀಜಸ್ಯ ನಿರ್ದ್ರವ್ಯಸ್ಯಾಪಿ ದೇಹಿನಃ ।
ಕಥಂ ಗುಣಾ ಭವಿಷ್ಯಂತಿ ನಿರ್ಗುಣತ್ವಾನ್ಮಹಾತ್ಮನಃ ॥ ೨೩ ॥

ಗುಣಾ ಗುಣೇಷು ಜಾಯಂತೇ ತತ್ರೈವ ವಿರಮಂತಿ ಚ ।
ಏವಂ ಗುಣಾಃ ಪ್ರಕೃತಿಜಾ ಜಾಯಂತೇ ನ ಚ ಯಾಂತಿ ಚ ॥ ೨೪ ॥

ತ್ವಙ್ಮಾಂಸಂ ರುಧಿರಂ ಮೇದಃ ಪಿತ್ತಂ ಮಜ್ಜಾಸ್ಥಿ ಸ್ನಾಯು ಚ ।
ಅಷ್ಟೌ ತಾನ್ಯಥ ಶುಕ್ರೇಣ ಜಾನೀಹಿ ಪ್ರಾಕೃತೇನ ವೈ ॥ ೨೫ ॥

೨೦-೨೫. ಅಪ್ಪಾ ರಾಜನೇ, ನೀನು ಹೇಳಿದ ಚರ್ಮ, ಮಾಂಸ, ರಕ್ತ ಮೇದಸ್ಸು, ಪಿತ್ತರಸ, ಮಜ್ಜೆ, ಮೂಳೆ, ನರಗಳು ಇವೆಲ್ಲವೂ ಇಂದ್ರಿಯಸಂಬಂಧವಾದವುಗಳು. ಒಂದು ವಸ್ತುವಿನಿಂದ ಮತ್ತೊಂದು ವಸ್ತುವೂ, ಇಂದ್ರಿಯದಿಂದ ಇಂದ್ರಿಯವೂ, ಶರೀರದಿಂದ ಶರೀರವೂ, ಬೀಜದಿಂದ ಬೀಜವೂ, ಉತ್ಪತ್ತಿಯಾಗುವುದು ವ್ಯವಹಾರ ಪ್ರಸಿದ್ಧಿಯಾಗಿರುವುದು. ಮಹಾತ್ಮನಾದ ಪರಮಾತ್ಮನು ನಿರ್ಗುಣನು ಅವನಿಗೆ ಇಂದ್ರಿಯಗಳಿಲ್ಲ. ಶರೀರವಿಲ್ಲ. ಇಂತಹ ಆತ್ಮನಿಂದ ಗುಣಗಳು ಹೇಗೆ ಉಂಟಾಗುವುವು? ಗುಣಗಳು ಗುಣಗಳಲ್ಲಿಯೇ ಉತ್ಪತ್ತಿಯಾಗುವುವು. ಅವುಗಳಲ್ಲಿಯೇ ಲಯವಾಗುವುವು. ಈರೀತಿಯಲ್ಲಿ ಗುಣಗಳು ಪ್ರಕೃತಿಯಿಂದಲೇ ಹುಟ್ಟುವುವು. ಚರ್ಮ, ಮಾಂಸ, ರಕ್ತ, ಮೇದಸ್ಸು ಪಿತ್ತ, ಮಜ್ಜೆ, ಮೂಳೆ ನರಗಳು ಈ ಎಂಟು ಶರೀರಭಾಗಗಳೂ ಪ್ರಕೃತಿ ಸಂಬಂಧವಾದ ಶುಕ್ರದಿಂದ ಉಂಟಾಗುವುವು.

ಪುಮಾಂಶ್ಚೈವಾಪುಮಾಂಶ್ಚೈವ ಸ್ತ್ರೀಲಿಂಗಂ ಪ್ರಾಕೃತಂ ಸ್ಮೃತಂ ।
ವಾಯುರೇಷ ಪುಮಾಂಶ್ಚೈವ ರಸ ಇತ್ಯಭಿಧೀಯತೇ ॥ ೨೬ ॥

ಅಲಿಂಗಾ ಪ್ರಕೃತಿರ್ಲಿಂಗೈರುಪಲಭ್ಯತಿ ಸಾತ್ಮಜೈಃ ।
ಯಥಾ ಪುಷ್ಪಫಲೈರ್ನಿತ್ಯಂ ಮೂರ್ತಂ ಚಾಮೂರ್ತಯಸ್ತಥಾ ॥ ೨೭ ॥

ಏವಮಪ್ಯನುಮಾನೇನ ಸ ಲಿಂಗಮುಪಲಭ್ಯತೇ ।
ಪಂಚವಿಂಶತಿಕಸ್ತಾತ ಲಿಂಗೇಷು ನಿಯತಾತ್ಮಕಃ ॥ ೨೮ ॥

ಅನಾದಿನಿಧನೋಽನಂತಃ ಸರ್ವದರ್ಶನಕೇವಲಃ ।
ಕೇವಲಂ ತ್ವಭಿಮಾನಿತ್ವಾದ್ಗುಣೇಷು ಗುಣ ಉಚ್ಯತೇ ॥ ೨೯ ॥

ಗುಣಾ ಗುಣವತಃ ಸಂತಿ ನಿರ್ಗುಣಸ್ಯ ಕುತೋ ಗುಣಾಃ ।
ತಸ್ಮಾದೇವಂ ವಿಜಾನಂತಿ ಯೇ ಜನಾ ಗುಣದರ್ಶಿನಃ ॥ ೩೦ ॥

೨೬-೨೮. ಪ್ರಕೃತಿಶಬ್ದವು ಸ್ತ್ರೀಲಿಂಗವಾದರೂ ಪುರುಷಸ್ತ್ರೀಯರಿಬ್ಬರೂ ಪ್ರಕೃತಿಸಂಬಂಧವಾದವರು. ವಾಯುವೇ ಪುರುಷನು. ರಸವೇ ಸ್ತ್ರೀಯು. ಯಾವ ಚಿಹ್ನೆಯೂ ಇಲ್ಲದ ಪ್ರಕೃತಿಯನ್ನು ಅದರಿಂದ ಉತ್ಪತ್ತಿಯಾದ ವಸ್ತುಗಳಿಂದ ಅನುಮಾನ ಪ್ರಮಾಣದಿಂದ, ಕಾಯಿಯಿಂದ ಅದಕ್ಕೆ ಕಾರಣವಾದ ಹೂವನ್ನು ಊಹಿಸುವಂತೆ ಊಹಿಸಬಹುದು. ಹೀಗೆಯೇ ಅನುಮಾನ ಪ್ರಮಾಣದಿಂದ ನಿಯತವಾದ ಚಿಹ್ನೆಗಳಿಂದ ಇಪ್ಪತ್ತೈದನೆಯ ತತ್ವವೂ ಇಂದ್ರಿಯಗೋಚರವಲ್ಲದುದೂ ಆದ ಆತ್ಮತತ್ವವನ್ನು ತಿಳಿಯಬಹುದು.

೨೯-೩೧. ಆದ್ಯಂತಗಳಿಲ್ಲದ ಸಕಲ ವಸ್ತುಸ್ವರೂಪನಾಗಿ ಒಬ್ಬನೇ ಆಗಿರುವ ಆತ್ಮನು ಕೇವಲ ಅಭಿಮಾನದಿಂದ ಸತ್ವಾದಿಗುಣಗಳಲ್ಲಿ ಗುಣಸ್ವರೂಪನಾಗಿರುವನು. ಗುಣಗಳು ಯಾವಾಗಲೂ ಗುಣವುಳ್ಳವನಲ್ಲಿರುವುವು. ನಿರ್ಗುಣ

ಯದಾ ತ್ವೇಷ ಗುಣಾನೇತಾನ್ಪ್ರಾಕೃತಾನಭಿಮನ್ಯತೇ ।
ತದಾ ಸ ಗುಣವಾನೇವ ಗುಣಭೇದಾನ್ಪ್ರಪಶ್ಯತಿ ॥ ೩೦ ॥

ಯತ್ತದ್ಬುದ್ಧೇ ಪರಂ ಪ್ರಾಹುಃ ಸಾಂಖ್ಯಯೋಗಂ ಚ ಸರ್ವಶಃ ।
ಬುಧ್ಯಮಾನಂ ಮಹಾಪ್ರಾಜ್ಞಾಃ ಪ್ರಬುದ್ಧಪರಿವರ್ಜನಾತ್ ॥ ೩೨ ॥

ಅಪ್ರಬುದ್ಧಂ ಯಥಾ ವ್ಯಕ್ತಂ ಸ್ವಗುಣೈಃ ಪ್ರಾಹುರೀಶ್ವರಂ ।
ನಿರ್ಗುಣಂ ಚೇಶ್ವರಂ ನಿತ್ಯಮಧಿಷ್ಠಾತಾರಮೇವ ಚ ॥ ೩೩ ॥

ಪ್ರಕೃತೇಶ್ಚ ಗುಣಾನಾಂ ಚ ಪಂಚವಿಂಶತಿಕಂ ಬುಧಾಃ ।
ಸಾಂಖ್ಯಯೋಗೇ ಚ ಕುಶಲಾ ಬುಧ್ಯಂತೇ ಪರಮೈಷಿಣಃ ॥ ೩೪ ॥

ಯದಾ ಪ್ರಬುದ್ಧಮವ್ಯಕ್ತಮವಸ್ಥಾಪಸಭೀರವಃ ।
ಬುಧ್ಯಮಾನಂ ಚ ಬುಧ್ಯಂತೇಽವಗಚ್ಛಂತಿ ಸಮಂ ತದಾ ॥ ೩೫ ॥

ನಾದವನಿಗೆ ಗುಣಗಳೆಲ್ಲಿ ಬರಬೇಕು? ಗುಣಗಳನ್ನು ನೋಡುವ ಜನರು ಈ ಗುಣಗಳನ್ನು ಪ್ರಕೃತಿಸಂಬಂಧವಾದವುಗಳೆಂದು ಯಾವಾಗ ತಿಳಿಯುವರೋ ಆಗ ಗುಣಭೇದಗಳನ್ನು ಕಾಣುವರು.

೩೨-೩೬. ಮಹಾಪ್ರಾಜ್ಞರಾದವರು ಸಾಂಖ್ಯಯೋಗ (ಜ್ಞಾನಯೋಗ)ವನ್ನು ತಮ್ಮ ಸೂಕ್ಷ್ಮಬುದ್ಧಿಗೆ ಗೋಚರವಾಗತಕ್ಕುದಲ್ಲವೆಂದೂ ಆ ಬುದ್ಧಿತತ್ವಕ್ಕಿಂತ ಮೀರಿದ ತತ್ವವೆಂಬದಾಗಿಯೂ ಹೇಳುವರು. ಈಶ್ವರನು ತನ್ನ ಗುಣಗಳಿಂದ ವ್ಯಕ್ತನು ಎಂದರೆ, ವ್ಯವಹಾರ ವಿಷಯನಾದವನೆಂದೂ ಅಜ್ಞಾನಿಯೆಂದೂ ಹೇಳುವರು. ಪರಮಾತ್ಮನು ನಿರ್ಗುಣನೂ ಶಾಶ್ವತನೂ ಸಕಲ ವಸ್ತುಗಳಿಗೂ ಆಶ್ರಯನೂ ಪ್ರಕೃತಿಯ ಗುಣಗಳಾದ ಇಪ್ಪತ್ತನಾಲ್ಕು ತತ್ವಗಳನ್ನು ಬಿಟ್ಟು ಇಪ್ಪತ್ತೈದನೆಯ ತತ್ವಸ್ವರೂಪನಾದವನು ಎಂಬದಾಗಿ (ಸಾಂಖ್ಯ) ಜ್ಞಾನಯೋಗದಲ್ಲಿ ಕುಶಲರಾದವರು ಹೇಳುವರು. ಅವ್ಯಕ್ತವೆಂಬ ಪ್ರಕೃತಿಯ ತಿಳಿವಳಿಕೆಯು (ಜ್ಞಾನವು) ಯಾವಾಗ (ವ್ಯವಹಾರವು) ಇರುವುದೋ ಆಗ ಜ್ಞಾನಸ್ವರೂಪನಾದ ಆತ್ಮಜ್ಞಾನದ ಅರಿವು ಇರುವುದಿಲ್ಲ. ಎಲ್ಲೈ

ಏತನ್ನಿದರ್ಶನಂ ಸಮ್ಯಜ್ಞ ಸಮ್ಯಗನುದರ್ಶನಂ
ಬುಧ್ಯಮಾನಂ ಪ್ರಬುಧ್ಯಂತೇ ದ್ವಾಭ್ಯಾಂ ಪೃಥಗರಿಂದಮ ॥ ३६ ॥

ಪರಸ್ಪರೇಣೈತದುಕ್ತಂ ಕ್ಷರಾಕ್ಷರನಿದರ್ಶನಂ ।
ಏಕತ್ವಮಕ್ಷರಂ ಪ್ರಾಹುರ್ನಾನಾತ್ವಂ ಕ್ಷರಮುಚ್ಯತೇ ॥ ३७ ॥

ಪಂಚವಿಂಶತಿನಿಷ್ಠೋಽಯಂ ತದಾ ಸಮ್ಯಕ್ಪ್ರಚಕ್ಷತೇ ।
ಏಕತ್ವದರ್ಶನಂ ಚಾಸ್ಯ ನಾನಾತ್ವಂ ಚಾಸ್ಯ ದರ್ಶನಂ ॥ ३८ ॥

ತತ್ವವಿತ್ತತ್ವಯೋರೇವ ಪೃಥಗೇತನ್ನಿದರ್ಶನಂ ।
ಪಂಚವಿಂಶತಿಭಿಸ್ತತ್ತ್ವಂ ತತ್ತ್ವಮಾಹುರ್ಮನೀಷಿಣಃ ॥ ३९ ॥

ರಾಜನೆ, ಎರಡೂ ಎಂದರೆ ಪ್ರಕೃತಿ ಮತ್ತು ಆತ್ಮಸ್ವರೂಪಗಳೆರಡೂ ಜ್ಞಾನ ಸ್ವರೂಪಗಳೇ ಆದರೂ ಒಂದರ ಜ್ಞಾನವಿರುವಾಗ ಮತ್ತೊಂದರ ಜ್ಞಾನವಿರುವುದಿಲ್ಲ. ಕ್ಷರಾಕ್ಷರಗಳ ಸ್ವರೂಪ ಜ್ಞಾನದಲ್ಲಿ ಮುಖ್ಯವಾದ ಒಂದು ಉದಾಹರಣೆ ಇರುವುದು. ಅಕ್ಷರಜ್ಞಾನವು ಒಂದೇ ಜ್ಞಾನವಾಗಿರುವುದು. ಅಂದರೆ ಯಾವ ವಿಕಲ್ಪವೂ ಇಲ್ಲದುದಾಗಿರುವುದು. ಕ್ಷರ (ಪ್ರಕೃತಿ) ಜ್ಞಾನವು ಅನೇಕ ವಿಷಯವಾದ ತಿಳುವಳಿಕೆಯಾಗಿರುವುದು ಎಂದರೆ ವ್ಯವಹಾರಜ್ಞಾನವಾಗಿರುವುದು.

३८-४०. ಸಕಲ ಕಾರಣವಾದ ಇಪ್ಪತ್ತೈದನೆಯ ತತ್ತ್ವಸ್ವರೂಪನಾದ ಆತ್ಮನು ಒಬ್ಬನೇ ಆಗಿದ್ದು ವ್ಯವಹಾರರೂಪನಾದಾಗ ಇಪ್ಪತ್ತನಾಲ್ಕು ತತ್ತ್ವಗಳಿಂದ ಅನೇಕವಾಗಿ ಭಾವಿಸುವನು. ಆತ್ಮನು ತತ್ತ್ವಗಳನ್ನು ತಿಳಿಯತಕ್ಕವನು ಎಂದರೆ ಕ್ಷೇತ್ರಜ್ಞನು. ವ್ಯವಹಾರರೂಪವಾದ ಪ್ರಕೃತಿಯೇ ಇಪ್ಪತ್ತನಾಲ್ಕು ತತ್ತ್ವರೂಪವಾದ ಕ್ಷೇತ್ರವು. ಇಪ್ಪತ್ತೈದನೆಯ ತತ್ತ್ವವಾದ ಪರಮಾತ್ಮನನ್ನೇ ಯಾವ ವಿಕಾರವೂ ಇಲ್ಲದೆ ಏಕರೂಪವಾದ, ಅನಾದಿಯಾದ ತತ್ತ್ವನೆಂದು ಹೇಳುವರು. ಒಟ್ಟಿನಲ್ಲಿ ಸಾಂಖ್ಯಶಾಸ್ತ್ರವನ್ನು ಇಪ್ಪತ್ತೈದು ತತ್ತ್ವಗಳ ಶಾಸ್ತ್ರ

ನಿಸ್ತತ್ತ್ವಂ ಪಂಚವಿಂಶಸ್ಯ ಪರಮಾಹುರ್ಮನೀಷಿಣಃ ।
ವರ್ಜ್ಯಸ್ಯ ವರ್ಜ್ಯಮಾಚಾರಂ ತತ್ತ್ವಂ ತತ್ತ್ವಾತ್ಸನಾತನಂ ॥ ೪೦ ॥

॥ ಕರಾಲಜನಕ ಉವಾಚ ॥

ನಾನಾತ್ವೈಕತ್ವಮಿತ್ಯುಕ್ತಂ ತ್ವಯೈತದ್ದ್ವಿಜಸತ್ತಮ ।
ಪಶ್ಯತಸ್ತದ್ಧಿ ಸಂಧಿಗ್ಧಮೇತಯೋರ್ವೈ ನಿದರ್ಶನಂ ॥ ೪೧ ॥

ತಥಾ ಬುದ್ಧಪ್ರಬುದ್ಧಾಭ್ಯಾಂ ಬುಧ್ಯಮಾನಸ್ಯ ಚಾನಘ ।
ಸ್ಥೂಲಬುದ್ಧ್ಯಾ ನ ಪಶ್ಯಾಮಿ ತತ್ತ್ವಮೇತನ್ನ ಸಂಶಯಃ ॥ ೪೨ ॥

ಅಕ್ಷರಕ್ಷರಯೋರುಕ್ತಂ ತ್ವಯಾ ಯದಪಿ ಕಾರಣಂ ।
ತದಪ್ಯಸ್ಥಿರಬುದ್ಧಿತ್ವಾತ್ಪ್ರನಷ್ಟಮಿವ ಮೇಽನಘ ॥ ೪೩ ॥

ತದೇತಚ್ಛ್ರೋತುಮಿಚ್ಛಾಮಿ ನಾನಾತ್ವೈಕತ್ವದರ್ಶನಂ ।
ದ್ವಂಧ್ವಂ ಚೈವಾನಿರುದ್ಧಂ ಚ ಬುಧ್ಯಮಾನಂ ಚ ತತ್ತ್ವತಃ ॥ ೪೪ ॥

ವಿದ್ಯಾವಿದ್ಯೇ ಚ ಭಗವನ್ನಕ್ಷರಂ ಕ್ಷರಮೇವ ಚ ।
ಸಾಂಖ್ಯಯೋಗಂ ಚ ಕೃತ್ಸ್ನೇನ ಬುದ್ಧಾಬುದ್ಧಿಂ ಪೃಥಕ್ಪೃಥಕ್ ॥ ೪೫ ॥

ವೆಂದು ಹೇಳುವರು. ಪರಮಾತ್ಮನನ್ನು ತತ್ವಗಳ ಗುಂಪಿನಲ್ಲಿ ಸೇರಿಸುವುದಿಲ್ಲ. ಇದೇ ಸಾಂಖ್ಯಮತದ ಸಿದ್ಧಾಂತವು.

೪೧-೪೫. ಕರಾಲಜನಕನು ಮತ್ತೆ ಪ್ರಶ್ನೆ ಮಾಡಿದನು—ಬ್ರಾಹ್ಮಣಶ್ರೇಷ್ಠನಾದ ವಸಿಷ್ಠನೇ, ಅನೇಕತ್ವ ಏಕತ್ವಗಳ ವಿಷಯದಲ್ಲಿ ನೀನು ಹೇಳಿದ ನಿದರ್ಶನವು ಸಂದೇಹಾಸ್ಪದವಾಗಿರುವುದು. ಜ್ಞಾನಿ ವಿಶೇಷಜ್ಞಾನಿ ಎಂಬೆರಡು ವಿಷಯಗಳು ಸ್ಥೂಲಬುದ್ಧಿಯಿಂದ ನನಗೆ ತಿಳಿಯಲಿಲ್ಲ. ಕ್ಷರಾಕ್ಷರಗಳಿಗೆ ಕಾರಣವನ್ನು ಹೇಳಿರುವೆ. ಅದೂ ಸ್ಥಿರಬುದ್ಧಿಯಿಲ್ಲದೆ ನನಗೆ ತಿಳಿಯಲಿಲ್ಲ. ನಿರ್ದುಷ್ಟನಾದ ಎಲೈ ಗುರುವೇ ಅನೇಕತ್ವ ಏಕತ್ವ ತಿಳಿಯಬೇಕಾದ ತತ್ವವಿದ್ಯೆ, ಅವಿದ್ಯೆ. ಅಕ್ಷರ, ಕ್ಷರ, ಬುದ್ಧ, ಅಬುದ್ಧ ಎಂಬ ವಿಷಯಗಳನ್ನೂ ಜ್ಞಾನಯೋಗವನ್ನೂ ಸಂಪೂರ್ಣವಾಗಿ ತಿಳಿಯಬೇಕೆಂದು ಬಯಸುವೆನು.

॥ ವಸಿಷ್ಠ ಉವಾಚ ॥

ಹಂತ ತೇ ಸಂಪ್ರವಕ್ಷ್ಯಾಮಿ ಯದೇತದನುಪೃಚ್ಛಸಿ ।
ಯೋಗಕೃತ್ಯಂ ಮಹಾರಾಜ ಪೃಥಗೇವ ಶೃಣುಷ್ವ ಮೇ ॥ ೪೬ ॥

ಯೋಗಕೃತ್ಯಂ ತು ಯೋಗಾನಾಂ ಧ್ಯಾನಮೇವ ಪರಂ ಬಲಂ ।
ತಚ್ಚಾಪಿ ದ್ವಿವಿಧಂ ಧ್ಯಾನಮಾಹುರ್ವಿದ್ಯಾವಿದೋ ಜನಾಃ ॥ ೪೭ ॥

ಏಕಾಗ್ರತಾ ಚ ಮನಸಃ ಪ್ರಾಣಾಯಾಮಸ್ತಥೈವ ಚ ।
ಪ್ರಾಣಾಯಾಮಸ್ತು ಸಗುಣೋ ನಿರ್ಗುಣೋ ಮಾನಸಸ್ತಥಾ ॥ ೪೮ ॥

ಮೂತ್ರೋತ್ಸರ್ಗೇ ಪುರೀಷೇ ಚ ಭೋಜನೇ ಚ ನರಾಧಿಪ ।
ದ್ವಿಕಾಲಂ ನೋಪಭುಂಜೀತ ಶೇಷಂ ಭುಂಜೀತ ತತ್ಪರಃ ॥ ೪೯ ॥

ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ನಿವರ್ತ್ಯ ಮನಸಾ ಮುನಿಃ ।
ದಶದ್ವಾದಶಭಿರ್ವಾಪಿ ಚತುರ್ವಿಂಶಾತ್ಪರಂ ಯತಃ ॥ ೫೦ ॥

೪೬-೪೮. ಎಲೈ ಮಹಾರಾಜನೇ, ನಿನ್ನ ಪ್ರಶ್ನೆಗೆ ಉತ್ತರವಾಗಿ ಯೋಗದ ವಿಷಯವನ್ನು ಬೇರೆಯಾಗಿ ಹೇಳುವೆನು ಕೇಳು. ಯೋಗ ಕಾರ್ಯದಲ್ಲಿ ಧ್ಯಾನವೇ ಅತ್ಯಂತ ಮುಖ್ಯವಾದುದು. ವಿದ್ವಾಂಸರು ಆ ಧ್ಯಾನವನ್ನು ಎರಡು ವಿಧವೆಂದು ಹೇಳಿರುವರು. ಮೊದಲನೆಯದು ಮನಸ್ಸಿನ ಏಕಾಗ್ರತೆ. ಎರಡನೆಯದು ಪ್ರಾಣಾಯಾಮ. ಪ್ರಾಣಾಯಾಮವು ಸಗುಣಯೋಗವು. ಮನಸ್ಸಿನ ಏಕಾಗ್ರತೆಯು ನಿರ್ಗುಣಯೋಗವು.

೪೯–೫೦. ಎಲೈ ರಾಜನೇ ಯೋಗಿಯು ಮೂತ್ರಪರೀಷೋತ್ಸರ್ಜನೆಯನ್ನು ಮಾಡುವಾಗಲೂ ಭೋಜನವನ್ನು ಮಾಡುವಾಗಲೂ ಕೂಡ ಏಕಾಗ್ರಚಿತ್ತದಿಂದ ಧ್ಯಾನಮಾಡುತ್ತಿರಬೇಕು. ಎರಡು ಹೊತ್ತು ಊಟ ಮಾಡಬಾರದು. ದೇವತಾತಿಥಿಗಳ ಉಪಯೋಗಕ್ಕೆ ಕೊಟ್ಟು ಮಿಕ್ಕುದನ್ನು ಏಕಾಗ್ರಚಿತ್ತದಿಂದ ಭೋಜನಮಾಡಬೇಕು. ಹತ್ತು ಇಂದ್ರಿಯಗಳನ್ನು ವಿಷಯಗಳಿಂದ ಹಿಂದಿರುಗಿಸಿ ಮನಸ್ಸನ್ನು ಒಂದೆಡೆ ನಿಲ್ಲಿಸಿ ಮೌನವಾಗಿ ಪ್ರಕೃತಿಸಂಬಂಧದ ಇಪ್ಪತ್ತುನಾಲ್ಕು

ಸ ಚೋದನಾಭಿರ್ಮತಿಮಾನಾತ್ಮಾನಂ ಚೋದಯೇದಥ ।
ತಿಷ್ಠಂತಮಜರಂ ತಂ ತು ಯತ್ತದುಕ್ತಂ ಮನೀಷಿಭಿಃ ॥ ೫೧ ॥

ವಿಶ್ವಾತ್ಮಾ ಸತತಂ ಜ್ಞೇಯ ಇತ್ಯೇವಮನುಶುಶ್ರುಮ ।
ದ್ರಷ್ಟುಂ ಹ್ಯಹೀನಮನಸೋ ನಾನ್ಯಥೇತಿ ವಿನಿಶ್ಚಯಃ ॥ ೫೨ ॥

ವಿಮುಕ್ತಃ ಸರ್ವಸಂಗೇಭ್ಯೋ ಲಘ್ವಾಹಾರೋ ಜಿತೇಂದ್ರಿಯಃ ।
ಪೂರ್ವರಾತ್ರೇ ಪರಾರ್ಧೇ ಚ ಧಾರಯೀತ ಮನೋ ಹೃದಿ ॥ ೫೩ ॥

ಸ್ಥಿರೀಕೃತ್ಯೇಂದ್ರಿಯಗ್ರಾಮಂ ಮನಸಾ ಮಿಥಿಲೇಶ್ವರ ।
ಮನೋ ಬುದ್ಧ್ಯಾ ಸ್ಥಿರಂ ಕೃತ್ವಾ ಪಾಷಾಣ ಇವ ನಿಶ್ಚಲಃ ॥ ೫೪ ॥

ಸ್ಥಾಣುವಚ್ಚಾಪ್ಯಕಂಪ್ಯಃ ಸ್ಯಾದ್ದಾರುವಚ್ಚಾಪಿ ನಿಶ್ಚಲಃ ।
ಬುದ್ಧ್ಯಾ ವಿಧಿವಿಧಾನಜ್ಞಸ್ತತೋ ಯುಕ್ತಂ ಪ್ರಚಕ್ಷತೇ ॥ ೫೫ ॥

ತತ್ವಗಳನ್ನು ಮೀರಿದ ಇಪ್ಪತ್ತೈದನೆಯ ತತ್ವವಾದ ಆತ್ಮನ ವಿಷಯದಲ್ಲಿ ಉತ್ಸಾಹದಿಂದ ಕೂಡಿದ ಮನಸ್ಸಿಗೇ ಆತ್ಮತತ್ವವು ಗೋಚರಿಸುವುದೇ ಹೊರತು ಬೇರೆ ಮಾರ್ಗದಿಂದ ಗೋಚರಿಸಲಾರದೆಂದು ತಿಳಿದವರು ಹೇಳುವರು. ಇದು ನಿಜವಾದುದು.

೫೩-೫೫. ಯೋಗಿಯು ಸಕಲ ವ್ಯವಹಾರಗಳನ್ನು ಬಿಟ್ಟು ಲಘುವಾದ ಭೋಜನವನ್ನು ಮಾಡುತ್ತಾ ಇಂದ್ರಿಯಗಳನ್ನು ಜಯಿಸಿ, ರಾತ್ರಿಯ ಮೊದಲನೆಯ ಯಾಮದಲ್ಲಿಯೂ ಕಡೆಯ ಯಾಮದಲ್ಲಿಯೂ ಮನಸ್ಸನ್ನು ಹೃದಯಾಕಾಶದಲ್ಲಿ ನಿಲ್ಲಿಸಬೇಕು. ಮಿಥಿಲಾಧಿಪತಿಯಾದ ಜನಕನೇ, ಇಂದ್ರಿಯ ವ್ಯಾಪಾರಗಳನ್ನು ಮನಸ್ಸಿನಿಂದಲೂ ಮನಸ್ಸನ್ನು ಬುದ್ಧಿಯಿಂದಲೂ ನೆಲೆಗೊಳಿಸಿ, ಕಲ್ಲಿನಂತೆಯೂ ಕಂಬದಂತೆಯೂ ಮರದಂತೆಯೂ ಚಲಿಸದೆ ಇರಬೇಕು. ಬುದ್ಧಿಯಿಂದ ಯೋಗಸಿಯಮವನ್ನು ತಿಳಿದವನನ್ನು ಯೋಗಿಯೆಂದು ಕರೆಯುವರು.

ನ ಶೃಣೋತಿ ನ ಚಾಘ್ರಾತಿ ನ ಚ ಪಶ್ಯತಿ ಕಿಂಚನ ।
ನ ಚ ಸ್ಪರ್ಶಂ ವಿಜಾನಾತಿ ನ ಚ ಸಂಕಲ್ಪತೇ ಮನಃ ॥ ೫೬ ॥

ನ ಚಾಪಿ ಮನ್ಯತೇ ಕಿಂಚಿನ್ನ ಚ ಬುಧ್ಯೇತ ಕಾಷ್ಠವತ್ ।
ತದಾ ಪ್ರಕೃತಿಮಾಪನ್ನಂ ಯುಕ್ತಮಾಹುರ್ಮನೀಷಿಣಃ ॥ ೫೭ ॥

ನ ಭಾತಿ ಹಿ ಯಥಾ ದೀಪೋ ದೀಪ್ತಿಸ್ತದ್ವಚ್ಚ ದೃಶ್ಯತೇ ।
ನಿರ್ಲಿಂಗಶ್ಚಾಧಶ್ಚೋರ್ಧ್ವಂ ಚ ತಿರ್ಯಗ್ಗತಿಮವಾಪ್ನುಯಾತ್ ॥ ೫೮ ॥

ತದಾ ತದುಪಪನ್ನಶ್ಚ ಯಸ್ಮಿನ್ದೃಷ್ಟೇ ಚ ಕಥ್ಯತೇ ।
ಹೃದಯಸ್ಥೋಽಂತರಾತ್ಮೇತಿ ಜ್ಞೇಯೋ ಜ್ಞಸ್ತಾತ ಮದ್ವಿಧೈಃ ॥ ೫೯ ॥

ನಿರ್ಧೂಮ ಇವ ಸಪ್ತಾರ್ಚಿರಾದಿತ್ಯ ಇವ ರಶ್ಮಿವಾನ್ ।
ವೈದ್ಯುತೋಽಗ್ನಿರಿವಾಕಾಶೇ ಪಶ್ಯತ್ಯಾತ್ಮಾನಮಾತ್ಮನಿ ॥ ೬೦ ॥

೫೬–೫೭. ಮನಸ್ಸು ಯಾವಾಗ ಕಿವಿ, ಮೂಗು, ಕಣ್ಣು, ಚರ್ಮ ಇವುಗಳ ಕೆಲಸಗಳನ್ನು ತಿಳಿಯದೆ. ಸಂಕಲ್ಪ ವಿಚಾರಗಳನ್ನು ಮಾಡದೆ ಕಟ್ಟಿಗೆಯಂತೆ ಇರುವುದೋ ಆಗ ಮನುಷ್ಯನು ಪ್ರಕೃತಿಸ್ವರೂಪವಾಗಿರುವುದರಿಂದ ಅವನನ್ನು ವಿದ್ವಾಂಸರು ಯೋಗಯುಕ್ತನೆಂದು ಕರೆವರು.

೫೮-೬೦. ಅಪ್ಪಾ ಜನಕನೇ, ಹೊಗೆಯಿಲ್ಲದೆ ಉರಿಯುತ್ತಿರುವ ದೀಪದ ಬೆಳಕು ಮೇಲೂ, ಕೆಳಗೂ, ಅಡ್ಡಲಾಗಿಯೂ ಹರಡಿ ಪ್ರಕಾಶಿಸುವುದಿಲ್ಲವೇ ? ಹಾಗೆಯೇ ನನ್ನಂತಹ ಜ್ಞಾನಿಗೆ ಹೃದಯಾಕಾಶದಲ್ಲಿರುವ ಅಂತರಾತ್ಮನು ಜ್ಞಾನಸ್ವರೂಪವಾಗಿ ಎಲ್ಲೆಡೆಯಲ್ಲಿಯೂ ಪ್ರಕಾಶಿಸುತ್ತಿರುವನು. ಜ್ಞಾನಿಯು ಏಕಾಗ್ರವಾದ ತನ್ನ ಮನಸ್ಸಿನಲ್ಲಿ ಹೊಗೆಯಿಲ್ಲದ ಅಗ್ನಿಯಂತೆಯೂ, ಕಿರಣಗಳಿಂದ ಕೂಡಿದ ಸೂರ್ಯನಂತೆಯೂ, ಆಕಾಶದಲ್ಲಿ ಕಾಣುವ ಮಿಂಚಿನಂತೆಯೂ ಪ್ರಕಾಶಿಸುವ ಆತ್ಮನನ್ನು ನೋಡುವನು.

ಯಂ ಪಶ್ಯಂತಿ ಮಹಾತ್ಮಾನೋ ಧೃತಿಮಂತೋ ಮನೀಷಿಣಃ ।
ಬ್ರಾಹ್ಮಣಾ ಬ್ರಹ್ಮಂಯೋನಿಸ್ಥಾ ಹ್ಯಂಯೋನಿಮಮೃತಾತ್ಮಕಂ ॥ ೬೧ ॥

ತದೇವಾಹುರಣುಭ್ಯೋಽಣು ತನ್ಮಹದ್ಭ್ಯೋ ಮಹತ್ತರಂ ।
ಸರ್ವತ್ರ ಸರ್ವಭೂತೇಷು ಧ್ರುವಂ ತಿಷ್ಠನ್ನ ದೃಶ್ಯತೇ ॥ ೬೨ ॥

ಬುದ್ಧಿದ್ರವ್ಯೇಣ ದೃಶ್ಯೇನ ಮನೋದೀಪೇನ ಲೋಕಕೃತ್ ।
ಮಹತಸ್ತಮಸಸ್ತಾತ ಪಾರೇ ತಿಷ್ಠನ್ನ ತಾಮಸಃ ॥ ೬೩ ॥

ತಮಸೋ ದೂರ ಇತ್ಯುಕ್ತಸ್ತತ್ತ್ವಜ್ಞೈರ್ವೇದಪಾರಗೈಃ ।
ವಿಮಲೋ ವಿಮತಶ್ಚೈವ ನಿರ್ಲಿಂಗೋಽಲಿಂಗಸಂಜ್ಞಕಃ ॥ ೬೪ ॥

ಯೋಗ ಏಷ ಹಿ ಲೋಕಾನಾಂ ಕಿಮನ್ಯದ್ಯೋಗಲಕ್ಷಣಂ ।
ಏವಂ ಪಶ್ಯನ್ಪ್ರಪಶ್ಯೇತ ಆತ್ಮಾನಮಜರಂ ಪರಂ ॥ ೬೫ ॥

೬೧-೬೫. ಬ್ರಹ್ಮನ ವಂಶದಲ್ಲಿ ಹುಟ್ಟಿದ ಬ್ರಾಹ್ಮಣರು ಸೂಕ್ಷ್ಮಬುದ್ಧಿಯಿಂದಲೂ ಧೈರ್ಯದಿಂದಲೂ ತಮ್ಮ ತಪಸ್ಸಿನ ಮಹಿಮೆಯಿಂದಲೂ ಉತ್ಪತ್ತಿ ಮರಣ ಧರ್ಮವಿಲ್ಲದ ಯಾವ ಆತ್ಮನನ್ನು ನೋಡುವರೋ ಆ ಆತ್ಮತತ್ವವೇ ಸೂಕ್ಷ್ಮ ವಸ್ತುಗಳಿಗಿಂತಲೂ ಸೂಕ್ಷ್ಮವಾಗಿ, ದೊಡ್ಡದಕ್ಕಿಂತಲೂ ದೊಡ್ಡದಾಗಿ ಎಲ್ಲಿಡೆಯಲ್ಲಿಯೂ, ಎಲ್ಲಾ ಪ್ರಾಣಿಗಳಲ್ಲಿಯೂ ಶಾಶ್ವತವಾಗಿದ್ದುಕೊಂಡು ಈ ಕಣ್ಣಿಗೆ ಕಾಣದೆ ಇರುತ್ತದೆ. ಸಮಸ್ತ ಲೋಕಕ್ಕೂ ಕಾರಣನಾದ ಆತ್ಮನು ಆದಿತ್ಯವರ್ಣಂ ತಮಸಃ ಪರಸ್ತಾತ್ ಎಂದು ವೇದದಲ್ಲಿ ಹೇಳಿದಂತೆ ಅಜ್ಞಾನದಿಂದ ಹೊರಗೆ ತೇಜೋರೂಪನಾಗಿ ಪ್ರಕಾಶವಾದ ಮನಸ್ಸಿನಲ್ಲುಂಟಾದ ವಿಚಾರರೂಪವಾದ ಬುದ್ಧಿಗೆ ಗೋಚರವಾಗುವನು. ಸಂಪೂರ್ಣವಾಗಿ ವೇದಾರ್ಥವನ್ನು ಬಲ್ಲ ತತ್ವಜ್ಞರು ಯಾವ ಚಿಹ್ನೆಯೂ ಇಲ್ಲದ ಶುದ್ಧನಾದ ಆತ್ಮನು ಅಜ್ಞಾನಕ್ಕೆ ದೂರವಾದವನೆಂದು ಹೇಳುವರು. ಇದೇ ಯೋಗಲಕ್ಷಣವು. ಈ ಯೋಗಕ್ಕೆ ಬೇರೆ ಲಕ್ಷಣವಾವುದೂ ಇರುವದಿಲ್ಲ. ಈರೀತಿಯಲ್ಲಿಯೇ ಮನಸ್ಸಿನಲ್ಲಿ ಧ್ಯಾನಮಾಡುತ್ತಾ ನಾಶರಹಿತನೂ ಅತ್ಯಂತ ಶ್ರೇಷ್ಠನೂ ಆದ ಆತ್ಮನನ್ನು ಯೋಗಿಯು ನೋಡುವನು.

ಯೋಗದರ್ಶನಮೇತಾವದುಕ್ತಂ ತೇ ತತ್ತ್ವತೋ ಮಯಾ ।
ಸಾಂಖ್ಯಜ್ಞಾನಂ ಪ್ರವಕ್ಷ್ಯಾಮಿ ಪರಿಸಂಖ್ಯಾನಿದರ್ಶನಂ ॥ ೬೬ ॥

ಅವ್ಯಕ್ತಮಾಹುಃ ಪ್ರಖ್ಯಾನಂ ಪರಾಂ ಪ್ರಕೃತಿಮಾತ್ಮನಃ ।
ತಸ್ಮಾನ್ಮಹತ್ಸಮುತ್ಪನ್ನಂ ದ್ವಿತೀಯಂ ರಾಜಸತ್ತಮ ॥ ೬೭ ॥

ಅಹಂಕಾರಸ್ತು ಮಹತಸ್ತೃತೀಯ ಇತಿ ನಃ ಶ್ರುತಂ ।
ಪಂಚಭೂತಾನ್ಯಹಂಕಾರಾದಾಹುಃ ಸಾಂಖ್ಯಾತ್ಮದರ್ಶಿನಃ ॥ ೬೮ ॥

ಏತಾಃ ಪ್ರಕೃತಯಸ್ತ್ವಷ್ಟೌ ವಿಕಾರಾಶ್ಚಾಪಿ ಷೋಡಶ ।
ಪಂಚ ಚೈವ ವಿಶೇಷಾಶ್ಚ ತಥಾ ಪಂಚೇಂದ್ರಿಯಾಣಿ ಚ ॥ ೬೯ ॥

ಏತಾವದೇವ ತತ್ತ್ವಾನಾಂ ಸಾಂಖ್ಯಮಾಹುರ್ಮನೀಷಿಣಃ ।
ಸಾಂಖ್ಯೇ ಸಾಂಖ್ಯವಿಧಾನಜ್ಞಾ ನಿತ್ಯಂ ಸಾಂಖ್ಯಪಥೇ ಸ್ಥಿತಾಃ ॥ ೭೦ ॥

೬೬-೭೦. ಎಲೈ ರಾಜನೇ, ನಿನಗೆ ಇಲ್ಲಿಯವರೆಗೆ ಯೋಗಶಾಸ್ತ್ರದ ತತ್ವವನ್ನು ಹೇಳಿದೆನು. ಇನ್ನು ಮುಂದೆ ಅನೇಕ ನಿದರ್ಶನಗಳಿಂದ ಕೂಡಿದ ಸಾಂಖ್ಯಶಾಸ್ತ್ರದ ತತ್ವವನ್ನು ಹೇಳುವೆನು. ಅವ್ಯಕ್ತವೆಂಬುದು ಪರಮಾತ್ಮನ ಪ್ರಸಿದ್ಧವಾದ ಪರಾಪ್ರಕೃತಿಯು. ಆ ಅವ್ಯಕ್ತದಿಂದ ಎರಡನೆಯದಾದ ಮಹತ್ತತ್ವವು ಉತ್ಪತ್ತಿಯಾಯಿತು. ಮಹತ್ತತ್ವದಿಂದ ಅಹಂಕಾರತ್ವವು ಮೂರನೆಯದಾಗಿ ಹುಟ್ಟಿತು. ಅಹಂಕಾರದಿಂದ ಸೂಕ್ಷ್ಮಪಂಚಭೂತಗಳು ಹುಟ್ಟಿದುವೆಂದು ಸಾಂಖ್ಯರು ಹೇಳುವರು. ಈ ಎಂಟೂ ಪ್ರಕೃತಿ ಎನಿಸುವುದು. ಪಂಚೀಕೃತ ಪಂಚಭೂತಗಳು ಪಂಚತನ್ಮಾತ್ರಗಳು, ಪಂಚಜ್ಞಾನೇಂದ್ರಿಯಗಳೂ ಮನಸ್ಸೂ ಕೂಡ ಹದಿನಾರು ವಿಕೃತಿಗಳೆನಿಸಿಸುವವು. ಒಟ್ಟು ಇಪ್ಪತ್ತನಾಲ್ಕು ತತ್ವಗಳೆಂದು ಸಾಂಖ್ಯಶಾಸ್ತ್ರವನ್ನು ತಿಳಿದ ವಿದ್ವಾಂಸರು ಹೇಳುವರು. ಇದೇ ಸಾಂಖ್ಯಶಾಸ್ತ್ರವು. ಇದು ಇಪ್ಪತ್ತುನಾಲ್ಕು ತತ್ವಗಳ ಸ್ವರೂಪವನ್ನು ವಿಸ್ತಾರವಾಗಿ ವಿವರಿಸುವುದು.

ಯಸ್ಮಾದ್ಯದಭಿಜಾಯೇತ ತತ್ತತ್ತತ್ರೈವ ಪ್ರಲೀಯತೇ ।
ಲೀಯಂತೇ ಪ್ರತಿಲೋಮಾನಿ ಗೃಹ್ಯಂತೇ ಚಾಂತರಾತ್ಮನಾ ॥ ೨೦ ॥

ಅನುಲೋಮ್ಯೇನ ಜಾಯಂತೇ ಲೀಯಂತೇ ಪ್ರತಿಲೋಮತಃ ।
ಗುಣಾ ಗುಣೇಷು ಸತತಂ ಸಾಗರಸ್ಯೋರ್ಮಯೋ ಯಥಾ ॥ ೨೧ ॥

ಸರ್ಗಪ್ರಲಯ ಏತಾವಾನ್ಪ್ರಕೃತೇರ್ನೃಪಸತ್ತಮ ।
ಏಕತ್ವಂ ಪ್ರಲಯೇ ಚಾಸ್ಯ ಬಹುತ್ವಂ ಚ ತಥಾ ಸೃಜಿ ॥ ೨೩ ॥

ಏವಮೇವ ಚ ರಾಜೇಂದ್ರ ವಿಜ್ಞೇಯಂ ಜ್ಞಾನಕೋವಿದೈಃ ।
ಅಧಿಷ್ಠಾತಾರಮವ್ಯಕ್ತಮಸ್ಯಾಪ್ಯೇತನ್ನಿದರ್ಶನಂ ॥ ೨೪ ॥

ಏಕತ್ವಂ ಚ ಬಹುತ್ವಂ ಚ ಪ್ರಕೃತೇರನುತತ್ತ್ವವಾನ್ ।
ಏಕತ್ವಂ ಪ್ರಲಯೇ ಚಾಸ್ಯ ಬಹುತ್ವಂ ಚ ಪ್ರವರ್ತನಾತ್ ॥ ೨೫ ॥

ಬಹುಧಾತ್ಮಾ ಪ್ರಕುರ್ವೀತ ಪ್ರಕೃತಿಂ ಪ್ರಸವಾತ್ಮಿಕಾಂ ।
ತಚ್ಚ ಕ್ಷೇತ್ರಂ ಮಹಾನಾತ್ಮಾ ಪಂಚವಿಂಶೋಽಧಿತಿಷ್ಠತಿ ॥ ೨೬ ॥

೨೦-೨೫. ಮೂಲಕಾರಣವಾದ ಯಾವುದರಿಂದ ಯಾವುದು ಹುಟ್ಟುವುದೋ ಅದು ಅದರ ಕಾರಣದಲ್ಲಿ ಲೀನವಾಗುವುದು. ಸಮುದ್ರದ ಅಲೆಗಳು ಸಮುದ್ರದ ನೀರಿನಲ್ಲಿಯೇ ಅಡಗಿ ಹೋಗುವಂತೆ ಗುಣಗಳು ಗುಣಗಳಲ್ಲಿಯೇ ಲೀನವಾಗುವುವು. ರಾಜಶ್ರೇಷ್ಠನೇ, ಪ್ರಕೃತಿಯಿಂದಾಗುವ ಸೃಷ್ಟಿ ಪ್ರಳಯಗಳ ಸ್ವರೂಪವೇ ಇದು. ಸೃಷ್ಟಿಯಲ್ಲಿ ಪ್ರಕೃತಿಯು ಅನೇಕವಾಗುವುದು. ಪ್ರಳಯದಲ್ಲಿ ಒಂದೇ ಆಗಿರುವುದು. ರಾಜಶ್ರೇಷ್ಠನೇ, ಪ್ರಕೃತಿಗೆ ಆಶ್ರಯನಾದ ಆತ್ಮನನ್ನು ಸಮಸ್ತಕ್ಕೂ ಆಶ್ರಯನೆಂದು ಜ್ಞಾನಿಗಳಾದ ವಿದ್ವಾಂಸರು ಹೇಳುವರು. ಆತ್ಮನಿಗೆ ಪ್ರಕೃತಿಯನ್ನನುಸರಿಸಿ ಏಕತ್ವವೂ ಬರುವುದು. ಪ್ರಳಯದಲ್ಲಿ ಏಕತ್ವವೂ ಸೃಷ್ಟಿಯಲ್ಲಿ ಬಹುತ್ವವೂ ಬರುವುದು.

೨೬-೩೦. ಆತ್ಮನು ಸೃಷ್ಟಿಮಾಡಬೇಕೆಂಬ ಸಂಕಲ್ಪದಿಂದ ತನ್ನ ಶಕ್ತಿಯಾದ ಪ್ರಕೃತಿಯನ್ನು ಅನೇಕವಾಗಿ ಮಾಡುವನು. ಅದೇ ಕ್ಷೇತ್ರವೆನಿಸು

ಅಧಿಷ್ಠಾತೇತಿ ರಾಜೇಂದ್ರ ಪ್ರೋಚ್ಯತೇ ಯತಿಸತ್ತಮೈಃ ।
ಅಧಿಷ್ಠಾನಾದಧಿಷ್ಠಾತಾ ಕ್ಷೇತ್ರಾಣಾಮಿತಿ ನಃ ಶ್ರುತಂ ॥ ೭೭ ॥

ಕ್ಷೇತ್ರಂ ಜಾನಾತಿ ಚಾವ್ಯಕ್ತಂ ಕ್ಷೇತ್ರಜ್ಞ ಇತಿ ಚೋಚ್ಯತೇ ।
ಅವ್ಯಕ್ತಿಕೇ ಪುರೇ ಶೇತೇ ಪುರುಷಶ್ಚೇತಿ ಕಥ್ಯತೇ ॥ ೭೮ ॥

ಅನ್ಯದೇವ ಚ ಕ್ಷೇತ್ರಂ ಸ್ಯಾದನ್ಯಃ ಕ್ಷೇತ್ರಜ್ಞ ಉಚ್ಯತೇ ।
ಕ್ಷೇತ್ರಮವ್ಯಕ್ತ ಇತ್ಯುಕ್ತಂ ಜ್ಞಾತಾರಂ ಪಂಚವಿಂಶಕಂ ॥ ೭೯ ॥

ಅನ್ಯದೇವ ಚ ಜ್ಞಾನಂ ಸ್ಯಾದನ್ಯಜ್ಜ್ಞೇಯಂ ತದುಚ್ಯತೇ ।
ಜ್ಞಾನಮವ್ಯಕ್ತಮಿತ್ಯುಕ್ತಂ ಜ್ಞೇಯೋ ವೈ ಪಂಚವಿಂಶಕಃ ॥ ೮೦ ॥

ಅವ್ಯಕ್ತಂ ಕ್ಷೇತ್ರಮಿತ್ಯುಕ್ತಂ ತಥಾ ಸತ್ತ್ವಂ ತಥೇಶ್ವರಂ ।
ಅನೀಶ್ವರಮತತ್ತ್ವಂ ಚ ತತ್ತ್ವಂ ತತ್ಪಂಚವಿಂಶಕಂ ॥ ೮೧ ॥

ವುದು. ಮಹಾಮಹಿಮನಾದ ಆತ್ಮನು ಇಪ್ಪತ್ತೈದನೆಯ ತತ್ತ್ವರೂಪನಾಗಿ ಎಲ್ಲಕ್ಕೂ ಆಶ್ರಯನಾಗಿರುವನು. ಹೀಗೆ ಆಶ್ರಯನಾಗಿರುವುದರಿಂದ ಯತಿಗಳು ಆ ಆತ್ಮನನ್ನು ಅಧಿಷ್ಠಾನವೆಂದು ಹೇಳುವರು. ಎಲ್ಲಕ್ಕೂ ಆಶ್ರಯನಾಗಿದ್ದರೂ ಕ್ಷೇತ್ರಗಳಲ್ಲಿ ಆಶ್ರಯವನ್ನು ಪಡೆದಿರುವವನೂ ತಾನೇ ಆಗಿರುವನು. ಪ್ರಕೃತಿ ಸ್ವರೂಪನಾದ ಕ್ಷೇತ್ರವನ್ನು ಆತ್ಮನು ತಿಳಿವುದರಿಂದ ಅವನನ್ನು ಕ್ಷೇತ್ರಜ್ಞನೆನ್ನುವರು. ಅವ್ಯಕ್ತವೆಂಬ ಪ್ರಕೃತಿಯಿಂದುಂಟಾದ ಶರೀರವೆಂಬ ಪುರದಲ್ಲಿ ಶಯನ ಮಾಡಿರುವುದರಿಂದ ಪುರುಷನೆಂಬ ಹೆಸರೂ ಆತ್ಮನಿಗೆ ಬಂದಿರುವುದು. ಕ್ಷೇತ್ರವೇ ಬೇರೆ, ಕ್ಷೇತ್ರಜ್ಞನೇ ಬೇರೆ. ಅವ್ಯಕ್ತವೆಂಬ ಪ್ರಕೃತಿಯೇ ಕ್ಷೇತ್ರವು. ಇದನ್ನು ತಿಳಿಯತಕ್ಕ ಕ್ಷೇತ್ರಜ್ಞನು ಸಮಸ್ತಕ್ಕೂ ಕಾರಣನಾದ ಇಪ್ಪತ್ತೈದನೆಯ ತತ್ತ್ವಸ್ವರೂಪನಾದ ಆತ್ಮನು. ಜ್ಞಾನವು ಬೇರೆ, ಜ್ಞೇಯವೇ ಬೇರೆ. ಜ್ಞಾನವೇ ಅವ್ಯಕ್ತವು (ಪ್ರಕೃತಿ) ಜ್ಞೇಯವು ಇಪ್ಪತ್ತೈದನೆಯ ತತ್ತ್ವವಾದ ಆತ್ಮನು.

೮೧-೮೫. ಅವ್ಯಕ್ತವೆಂಬ ಪ್ರಕೃತಿಯು ಕ್ಷೇತ್ರವೆಂದು ಹೇಳಿತಪ್ಪಿ. ಸತ್ತ್ವಗುಣಪ್ರಧಾನವಾದ ಆ ಪ್ರಕೃತಿಯೇ ಈಶ್ವರನು. ಇಪ್ಪತ್ತೈದನೆಯ ತತ್ತ್ವವು

ಸಾಂಖ್ಯದರ್ಶನಮೇತಾವತ್ಪರಿಸಂಖ್ಯಾ ನ ವಿದ್ಯತೇ ।
ಸಂಖ್ಯಾ ಪ್ರಕುರುತೇ ಚೈವ ಪ್ರಕೃತಿಂ ಚ ಪ್ರವಕ್ಷ್ಯತೇ ॥ ೮೨ ॥

ಚತ್ವಾರಿಂಶಚ್ಚತುರ್ವಿಂಶತ್ಪ್ರತಿಸಂಖ್ಯಾಯ ತತ್ತ್ವತಃ ।
ಸಂಖ್ಯಾ ಸಹಸ್ರಕೃತ್ಯಾ ತು ನಿಸ್ತತ್ತ್ವಃ ಪಂಚವಿಂಶಕಃ ॥ ೮೩ ॥

ಪಂಚವಿಂಶತ್ಪ್ರಬುದ್ಧಾತ್ಮಾ ಬುಧ್ಯಮಾನ ಇತಿ ಶ್ರುತಃ ।
ಯದಾ ಬುಧ್ಯತಿ ಆತ್ಮಾನಂ ತದಾ ಭವತಿ ಕೇವಲಃ ॥ ೮೪ ॥

ಸಮ್ಯಗ್ದರ್ಶನಮೇತಾವದ್ಭಾಷಿತಂ ತವ ತತ್ತ್ವತಃ ।
ಏವಮೇತದ್ವಿಜಾನಂತಃ ಸಾಮ್ಯತಾಂ ಪ್ರತಿಯಾಂತ್ಯುತ ॥ ೮೫ ॥

ಸಮ್ಯಙ್ನಿದರ್ಶನಂ ನಾಮ ಪ್ರತ್ಯಕ್ಷಂ ಪ್ರಕೃತೇಸ್ತಥಾ ।
ಗುಣವತ್ತ್ವಾದ್ಯಥೈತಾನಿ ನಿರ್ಗುಣೇಭ್ಯಸ್ತಥಾ ಭವೇತ್ ॥ ೮೬ ॥

ಈಶ್ವರನೂ ಇಲ್ಲ. ಪ್ರಕೃತಿಸಂಬಂಧವಾದ ತತ್ವಗಳ ಗುಂಪಿನಲ್ಲಿ ಸೇರಿದುದೂ ಇಲ್ಲ. ಸಾಂಖ್ಯದರ್ಶನವೆಂಬುದು ಇಷ್ಟೇಸರಿ ಎಂದು ಲೆಖ್ಖಮಾಡಿ ಹೇಳಲು ಸಾಧ್ಯವಿಲ್ಲ. ಸಾಂಖ್ಯಶಬ್ದವು ಪ್ರಪಂಚರೂಪವಾಗಿರುವ ಪ್ರಕೃತಿಯನ್ನೂ ಹೇಳುವುದು. ನಲವತ್ತು, ಇಪ್ಪತ್ತನಾಲ್ಕು, ಒಂದುಸಾವಿರ ಮುಂತಾದ ಸಂಖ್ಯಾರೂಪವಾದ ತತ್ವಗಳಾಗಿ ಯಾವ ತತ್ವವೂ ಅಲ್ಲದ ಇಪ್ಪತ್ತೈದನೆಯ ಆತ್ಮನು ಜ್ಞಾನರೂಪನಾಗಿಯೇ ಇದ್ದು ಇವುಗಳನ್ನು ಆ ರೂಪ ಎಂದರೆ ಜ್ಞಾನ ಸ್ವರೂಪದಿಂದಲೇ ತಿಳಿಯುತ್ತಿರುವನೆಂದು ವೇದದಲ್ಲಿ ಹೇಳಿರುವುದು. ಆ ಆತ್ಮನು ಸ್ವಸ್ವರೂಪವನ್ನು ಯಾವಾಗ ತಿಳಿವನೋ ಆಗ ತಾನೊಬ್ಬನೇ ಇರುವನು- ಇದು ವರೆಗೆ ನಿನಗೆ ಹೇಳಿದ ಈ ಶ್ರೇಷ್ಠವಾದ ಶಾಸ್ತ್ರವನ್ನು ಚೆನ್ನಾಗಿ ತಿಳಿದವರು ಸರ್ವ ಸಮಾನ ಭಾವವನ್ನು ಹೊಂದಿ ಆತ್ಮಸ್ವರೂಪರಾಗಿ ಆಗುವರು.

೮೬-೮೯. ಸಗುಣೋಪಾಸನೆಯಿಂದ ಪ್ರಕೃತಿಸಂಬಂಧವಾದ ಸಗುಣ ದೇವತಾ ದರ್ಶನಾದಿಗಳು ಹೇಗಾಗುವವೋ ಹಾಗೆಯೇ ನಿರ್ಗುಣೋಪಾಸನೆಯಿಂದ ನಿರ್ಗುಣನಾದ ಪರಬ್ರಹ್ಮಸ್ವರೂಪವು ಪ್ರಾಪ್ತವಾಗುವುದು. ನಿರ್ಗುಣೋಪಾಸಕರಿಗೆ ನಾಶವೂ ಪುನರ್ಜನ್ಮವೂ ಇರುವುದಿಲ್ಲ. ಅವರು ಯಾವಾಗಲೂ

ನ ತ್ವೇವಂ ವರ್ತಮಾನಾನಾಮಾವೃತ್ತಿರ್ವರ್ತತೇ ಪುನಃ ।
ವಿದ್ಯತೇ ಕ್ಷರಭಾವಶ್ಚ ನ ಪರಸ್ಪರಮವ್ಯಯಂ ॥ ೮೭ ॥

ಪಶ್ಯಂತ್ಯಮತಯೋ ಯೇ ನ ಸಮ್ಯಕ್ತ್ವೇಷು ಚ ದರ್ಶನಂ ।
ತೇ ವ್ಯಕ್ತಿಂ ಪ್ರತಿಪದ್ಯಂತೇ ಪುನಃ ಪುನರರಿಂದಮ ॥ ೮೮ ॥

ಸರ್ವಮೇತದ್ವಿಜಾನಂತೋ ನ ಸರ್ವಸ್ಯ ಪ್ರಬೋಧನಾತ್ ।
ವ್ಯಕ್ತಿಭೂತಾ ಭವಿಷ್ಯಂತಿ ವ್ಯಕ್ತಸ್ಯೈವಾನುವರ್ತನಾತ್ ॥ ೮೯ ॥

ಸರ್ವಮವ್ಯಕ್ತಮಿತ್ಯುಕ್ತಮಸರ್ವಃ ಪಂಚವಿಂಶಕಃ ।
ಯ ಏವಮಭಿಜಾನಂತಿ ನ ಭಯಂ ತೇಷು ವಿದ್ಯತೇ ॥ ೯೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವಸಿಷ್ಠಕರಾಲಜನಕಸಂವಾದೇ
ತ್ರಿಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

ಶಾಶ್ವತವಾದ ಪರಬ್ರಹ್ಮಸ್ವರೂಪವೇ ಆಗಿರುವರು. ಶತ್ರುಸಂಹಾರಕನಾದ ರಾಜನೆ, ಬುದ್ಧಿಹೀನರು ಸರಿಯಾದ ಜ್ಞಾನವನ್ನು ಸಂಪಾದಿಸದೆ ಆತ್ಮದರ್ಶನ ವನ್ನು ಮಾಡದಿರುವುದರಿಂದ ಅವರು ಪುನರ್ಜನ್ಮವನ್ನು ಪಡೆವರು. ಈ ಸಾಂಖ್ಯಶಾಸ್ತ್ರವನ್ನೆಲ್ಲ ತಿಳಿದರೂ ನಿಶ್ಚಯಜ್ಞಾನವಿಲ್ಲದವರು ಪ್ರಕೃತಿಯನ್ನು ಅನುಸರಿಸುವುದರಿಂದ ಪುನರ್ಜನ್ಮವನ್ನು ಪಡೆಯುತ್ತಿರುವರು.

೯೦. ಈ ಸಮಸ್ತ ಪ್ರಪಂಚವೂ ಅವ್ಯಕ್ತವೆಂಬ ಪ್ರಕೃತಿಯಿಂದ ಹುಟ್ಟಿ ಆ ಪ್ರಕೃತಿಸ್ವರೂಪವಾದುದಾಗಿರುವುದು. ಇಪ್ಪತ್ತೈದನೆಯ ತತ್ವರೂಪನಾದ ಆತ್ಮನು ಪ್ರಪಂಚದ ರೂಪವಲ್ಲ ಹೀಗೆಂದು ಯಾರು ತಿಳಿಯುವರೋ ಅವರಿಗೆ ಯಾವ ಭಯವೂ ಇರುವುದಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಸಿಷ್ಠಕರಾಳ ಜನಕ ಸಂವಾದವೆಂಬ ಇನ್ನೂರ
ನಲವತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಚತುಶ್ಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ವಸಿಷ್ಠ ಉವಾಚ ॥

ಸಾಂಖ್ಯದರ್ಶನಮೇತಾವದುಕ್ತಂ ತೇ ನೃಪಸತ್ತಮ ।
ವಿದ್ಯಾವಿದ್ಯೇ ತ್ವಿದಾನೀಂ ಮೇ ತ್ವಂ ನಿಬೋಧಾನುಪೂರ್ವಶಃ ॥ ೧ ॥

ಅಭೇದ್ಯಮಾಹುರವ್ಯಕ್ತಂ ಸರ್ಗಪ್ರಲಯಧರ್ಮಿಣಃ ।
ಸರ್ಗಪ್ರಲಯ ಇತ್ಯುಕ್ತಂ ವಿದ್ಯಾವಿದ್ಯೇ ಚ ವಿಂಶಕಃ ॥ ೨ ॥

ಪರಸ್ಪರಸ್ಯ ವಿದ್ಯಾ ವೈ ತನ್ನಿಬೋಧಾನುಪೂರ್ವಶಃ ।
ಯಥೋಕ್ತಮೃಷಿಭಿಸ್ತಾತ ಸಾಂಖ್ಯಸ್ಯಾತಿನಿದರ್ಶನಂ ॥ ೩ ॥

ಇನ್ನೂರನಲವತ್ತನಾಲ್ಕನೆಯ ಅಧ್ಯಾಯವು

೧-೭. ವಸಿಷ್ಠನು ಹೇಳಿದನು.—ಎಲೈ ರಾಜಶ್ರೇಷ್ಠನೇ, ಇಲ್ಲಿಯ ವರೆಗೂ ಸಾಂಖ್ಯಶಾಸ್ತ್ರವನ್ನು ನಿನಗೆ ಹೇಳಿದೆನು. ಇನ್ನು ಕ್ರಮವಾಗಿ ವಿದ್ಯೆ ಅವಿದ್ಯೆ ಇವುಗಳನ್ನು ಹೇಳುವೆನು ಕೇಳು. ಸೃಷ್ಟಿಪ್ರಳಯಧರ್ಮಗಳುಳ್ಳ ಅವ್ಯಕ್ತವೆಂಬ ಪ್ರಕೃತಿಯು ಸ್ಥಿರವಾದುದು. ಸೃಷ್ಟಿಯನ್ನು ವಿದ್ಯೆಯೆಂದೂ ಪ್ರಳಯ ವನ್ನು ಅವಿದ್ಯೆಯೆಂದೂ ಹೇಳುವರು. ಪ್ರಕೃತಿಯಿಂದ ಹುಟ್ಟಿದ ಇಪ್ಪತ್ತು ನಾಲ್ಕು ತತ್ವಗಳಲ್ಲಿ ಒಂದಕ್ಕೆ ಮತ್ತೊಂದು ವಿದ್ಯೆಯೆನಿಸುವುದು. ಸಾಂಖ್ಯ ಶಾಸ್ತ್ರವನ್ನು ಬಲ್ಲ ಋಷಿಗಳು ಈ ನಿದರ್ಶನವನ್ನು ಹೇಳಿರುವರು. ರಾಜ

ಕರ್ಮೇಂದ್ರಿಯಾಣಾಂ ಸರ್ವೇಷಾಂ ವಿದ್ಯಾ ಬುದ್ಧೀಂದ್ರಿಯಂ ಸ್ಮೃತಂ ।
ಬುದ್ಧೀಂದ್ರಿಯಾಣಾಂ ಚ ತಥಾ ವಿಶೇಷಾ ಇತಿ ನಃ ಶ್ರುತಂ ॥ ೪ ॥

ವಿಷಯಾಣಾಂ ಮನಸ್ತೇಷಾಂ ವಿದ್ಯಾಮಾಹುರ್ಮನೀಷಿಣಃ ।
ಮನಸಃ ಪಂಚ ಭೂತಾನಿ ವಿದ್ಯಾ ಇತ್ಯಭಿಚಕ್ಷತೇ ॥ ೫ ॥

ಅಹಂಕಾರಸ್ತು ಭೂತಾನಾಂ ಪಂಚಾನಾಂ ನಾತ್ರ ಸಂಶಯಃ ।
ಅಹಂಕಾರಸ್ತಥಾ ವಿದ್ಯಾ ಬುದ್ಧಿರ್ವಿದ್ಯಾ ನರೇಶ್ವರ ॥ ೬ ॥

ಬುದ್ಧ್ಯಾ ಪ್ರಕೃತಿರವ್ಯಕ್ತಂ ತತ್ತ್ವಾನಾಂ ಪರಮೇಶ್ವರಃ ।
ವಿದ್ಯಾ ಜ್ಞೇಯಾ ನರಶ್ರೇಷ್ಠ ವಿಧಿಶ್ಚ ಪರಮಃ ಸ್ಮೃತಃ ॥ ೭ ॥

ಅವ್ಯಕ್ತಮುಪರಂ ಪ್ರಾಹುರ್ವಿದ್ಯಾ ವೈ ಪಂಚವಿಂಶಕಃ ।
ಸರ್ವಸ್ಯ ಸರ್ವಮಿತ್ಯುಕ್ತಂ ಜ್ಞೇಯಜ್ಞಾನಸ್ಯ ಪಾರಗಃ ॥ ೮ ॥

ಜ್ಞಾನಮವ್ಯಕ್ತಮಿತ್ಯುಕ್ತಂ ಜ್ಞೇಯಂ ವೈ ಪಂಚವಿಂಶಕಂ ।
ತಥೈವ ಜ್ಞಾನಮವ್ಯಕ್ತಂ ವಿಜ್ಞಾತಾ ಪಂಚವಿಂಶಕಃ ॥ ೯ ॥

ಶ್ರೇಷ್ಠನೇ, ಕರ್ಮೇಂದ್ರಿಯಗಳಿಗೆ ಜ್ಞಾನೇಂದ್ರಿಯಗಳು ವಿದ್ಯೆಯು. ಜ್ಞಾನೇಂದ್ರಿಯಗಳಿಗೆ ವಿಷಯಗಳು ವಿದ್ಯೆಯು. ವಿಷಯಗಳಿಗೆ ಮನಸ್ಸು ವಿದ್ಯೆಯು. ಮನಸ್ಸಿಗೆ ಪಂಚಭೂತಗಳು, ಪಂಚಭೂತಗಳಿಗೆ ಅಹಂಕಾರವೂ, ಅಹಂಕಾರಕ್ಕೆ ಬುದ್ಧಿಯೂ, ಬುದ್ಧಿಗೆ ಅವ್ಯಕ್ತವೆಂಬ ಪ್ರಕೃತಿಯೂ ವಿದ್ಯೆಯೆಂದು ತಿಳಿಯಬೇಕು ಇದೊಂದು ಶ್ರೇಷ್ಠವಾದ ನಿಯಮವು.

೮-೧೦. ಪ್ರಕೃತಿಗೆ ಇಪ್ಪತ್ತೈದನೆಯ ತತ್ವವಾದ ಆತ್ಮನು ವಿದ್ಯೆಯು. ತಿಳಿಯಬೇಕಾದ ಜ್ಞಾನಕ್ಕೆ ಕೊನೆಯ ಮೆಟ್ಟಲಾದ ಸರ್ವಸ್ವವಾದ ಆತ್ಮತತ್ವವೇ ಮುಖ್ಯವೆಂದು ಹೇಳಿರುವುದು. ಜ್ಞಾನವೇ ಪ್ರಕೃತಿಯು. ಜ್ಞೇಯವೇ ಆತ್ಮ

ವಿದ್ಯಾವಿದ್ಯೇ ತು ತತ್ತ್ವೇನ ಮಯೋಕ್ತೇ ವೈ ವಿಶೇಷತಃ ।
ಅಕ್ಷರಂ ಚ ಕ್ಷರಂ ಚೈವ ಯದುಕ್ತಂ ತನ್ನಿಬೋಧ ಮೇ ॥ ೧೦ ॥

ಉಭಾವೇತೌ ಕ್ಷರಾವುಕ್ತೌ ಉಭಾವೇತಾವನಕ್ಷರೌ ।
ಕಾರಣಂ ತು ಪ್ರವಕ್ಷ್ಯಾಮಿ ಯಥಾಜ್ಞಾನಂ ತು ಜ್ಞಾನತಃ ॥ ೧೧ ॥

ಅನಾದಿನಿಧನಾವೇತೌ ಉಭಾವೇವೇಶ್ವರೌ ಮತೌ ।
ತತ್ತ್ವಸಂಜ್ಞಾವುಭಾವೇವ ಪ್ರೋಚ್ಯೇತೇ ಜ್ಞಾನಚಿಂತಕೈಃ ॥ ೧೨ ॥

ಸರ್ಗಪ್ರಲಯಧರ್ಮಿತ್ವಾದವ್ಯಕ್ತಂ ಪ್ರಾಹುರವ್ಯಯಂ ।
ತದೇತದ್ಗುಣಸರ್ಗಾಯ ವಿಕುರ್ವಾಣಂ ಪುನಃ ಪುನಃ ॥ ೧೩ ॥

ಗುಣಾನಾಂ ಮಹದಾದೀನಾಮುತ್ಪದ್ಯತಿ ಪರಸ್ಪರಂ ।
ಅಧಿಷ್ಠಾನಂ ಕ್ಷೇತ್ರಮಾಹುರೇತದ್ವೈ ಪಂಚವಿಂಶಕಂ ॥ ೧೪ ॥

ತತ್ವವು. ಹಾಗೆಯೇ ಜ್ಞಾತೃವೂ ಆತ್ಮನೇ. ಎಲೈ ರಾಜನೇ! ವಿದ್ಯಾ ಮತ್ತು ಅವಿದ್ಯಾಸ್ವರೂಪಗಳನ್ನು ಹೇಳಿದೆನು. ಇನ್ನು ಕ್ಷರಾಕ್ಷರಗಳ ವಿಷಯವನ್ನು ಹೇಳುವೆನು ಕೇಳು.

೧೧-೧೪. ಪ್ರಕೃತಿಪುರುಷರಿಬ್ಬರೂ ಕ್ಷರಾಕ್ಷರಗಳೆನಿಸುವರು. ಅದಕ್ಕೆ ಕಾರಣವನ್ನು ಹೇಳುವೆನು. ಪ್ರಕೃತಿಪುರುಷರಿಬ್ಬರು ಅನಾದಿಯೂ ನಾಶರಹಿತರೂ ಆಗಿರುವರು. ಜ್ಞಾನಿಗಳು ಇಬ್ಬರನ್ನೂ ಈಶ್ವರರೆಂದೂ ಹೇಳುವರು. ಅವ್ಯಕ್ತವೆಂಬ ಪ್ರಕೃತಿಯು ಸೃಷ್ಟಿಪ್ರಳಯಧರ್ಮಗಳುಳ್ಳವಾದುದರಿಂದ ನಾಶರಹಿತವಾದುದಾಗಿರುವುದು. ಆ ಪ್ರಕೃತಿಯು ಗುಣಗಳ ಸೃಷ್ಟಿಗೋಸ್ಕರ ಮತ್ತೆಮತ್ತೆ ವಿಕಾರಹೊಂದುತ್ತಾ ಮಹತ್ತತ್ವವೇ ಮೊದಲಾದ ತತ್ವಗಳನ್ನು ಹುಟ್ಟಿಸುತ್ತಿರುವುದು. ಆತ್ಮತತ್ವವು ಇವುಗಳೆಲ್ಲಕ್ಕೂ ಆಶ್ರಯವಾಗಿ ಕ್ಷೇತ್ರವೆನಿಸುವುದು.

ಯದಂತರ್ಗುಣಜಾಲಂ ತು ತದ್ವ್ಯಕ್ತಾತ್ಮನಿ ಸಂಕ್ಷಿಪೇತ್ ।
ತದಹಂ ತದ್ಗುಣೈಸ್ತೈಸ್ತು ಪಂಚವಿಂಶೇ ವಿಲೀಯತೇ ॥ ೧೫ ॥

ಗುಣಾ ಗುಣೇಷು ಲೀಯಂತೇ ತದೇಕಾ ಪ್ರಕೃತಿರ್ಭವೇತ್ ।
ಕ್ಷೇತ್ರಜ್ಞೋಽಪಿ ತದಾ ತಾವತ್ಕ್ಷೇತ್ರಜ್ಞಃ ಸಂಪ್ರಣೀಯತೇ ॥ ೧೬ ॥

ಯದಾಕ್ಷರಂ ಪ್ರಕೃತಿರ್ಯಂ ಗಚ್ಛತೇ ಗುಣಸಂಜ್ಞಿತಾ ।
ನಿರ್ಗುಣತ್ವಂ ಚ ವೈ ದೇಹೇ ಗುಣೇಷು ಪರಿವರ್ತನಾತ್ ॥ ೧೭ ॥

ಏವಮೇವ ಚ ಕ್ಷೇತ್ರಜ್ಞಃ ಕ್ಷೇತ್ರಜ್ಞಾನಪರಿಕ್ಷಯಾತ್ ।
ಪ್ರಕೃತ್ಯಾ ನಿರ್ಗುಣಸ್ತ್ವೇಷ ಇತ್ಯೇವಮನುಶುಶ್ರುಮ ॥ ೧೮ ॥

ಕ್ಷರೋ ಭವತ್ಯೇಷ ಯದಾ ಗುಣವತೀ ಗುಣೇಷ್ವಥ ।
ಪ್ರಕೃತಿಂ ತ್ವಥ ಜಾನಾತಿ ನಿರ್ಗುಣತ್ವಂ ತಥಾತ್ಮನಃ ॥ ೧೯ ॥

೧೫-೧೬. ಸತ್ವಾದಿಗುಣಗಳ ಸಮೂಹದಿಂದ ಕೂಡಿದ ಪ್ರಕೃತಿಯು ಅಹಂಕಾರದೊಡನೆ ಆತ್ಮತತ್ವದಲ್ಲಿ ಸೇರಿದಾಗ ಆ ಪ್ರಕೃತಿಯು ಆತ್ಮತತ್ವರೂಪವಾಗಿ ಕಾಣದೆ ಹೋಗುವದು. ಗುಣಗಳು ಗುಣಗಳಲ್ಲಿಯೇ ಐಕ್ಯವಾಗಿ ಪ್ರಕೃತಿಯೊಂದೇ ಇರುವದು. ಆಗ ಕ್ಷೇತ್ರಜ್ಞನೂ ಕ್ಷೇತ್ರವಾದ ಪ್ರಕೃತಿಯ ಅಭಿಮಾನದಿಂದ ಕ್ಷೇತ್ರಜ್ಞ (ಆತ್ಮ) ನಾಗಿರುವನು.

೧೭-೧೮. ಗುಣಗಳ ಪರಿವರ್ತನೆಯಿಂದ ಶರೀರದಲ್ಲಿ ಗುಣಸಂಜ್ಞೆಯುಳ್ಳ ಪ್ರಕೃತಿಯು ಅಕ್ಷರಸ್ವರೂಪವಾದ ಆತ್ಮನನ್ನು ಸೇರಿದರೆ ನಿರ್ಗುಣಸ್ವರೂಪನಾಗುವನು. ಹೀಗೆಯೇ ಕ್ಷೇತ್ರಜ್ಞನಾದ ಜೀವಾತ್ಮನು ಕ್ಷೇತ್ರಜ್ಞಾನದ ನಾಶದಿಂದ ನಿರ್ಗುಣವಾದ ಸ್ವಸ್ವರೂಪವನ್ನು ಪಡೆವನು. ಸ್ವಾಭಾವಿಕವಾಗಿ ಆತ್ಮನು ನಿರ್ಗುಣಸ್ವರೂಪನೆಂದು ಶಾಸ್ತ್ರಗಳು ಹೇಳುವವು.

೧೯-೨೨. ಪುರುಷನು ತ್ರಿಗುಣಗಳಿಂದಕೂಡಿದ ಪ್ರಕೃತಿಯನ್ನು ತಿಳಿದಾಗ ತಾನೂ ಗುಣಗಳಿಂದಕೂಡಿ ಕ್ಷರಸ್ವರೂಪನಾಗುವನು. ಹಾಗೆಯೇ ತನ್ನ

ತಥಾ ವಿಶುದ್ಧೋ ಭವತಿ ಪ್ರಕೃತೇಃ ಪರಿವರ್ಜನಾತ್ ।
ಅನ್ಯೋಽಹಮನ್ಯೇಯಮಿತಿ ಯದಾ ಬುಧ್ಯತಿ ಬುದ್ಧಿಮಾನ್ ॥ ೨೦ ॥

ತದೈಷೋಽನ್ಯಥತಾಮೇತಿ ನ ಚ ಮಿಶ್ರತ್ವಮಾವ್ರಜೇತ್ ।
ಪ್ರಕೃತ್ಯಾ ಚೈಷ ರಾಜೇಂದ್ರ ಮಿಶ್ರೋಽನ್ಯೋಽನ್ಯಸ್ಯ ದೃಶ್ಯತೇ ॥ ೨೧ ॥

ಯದಾ ತು ಗುಣಜಾಲಂ ತತ್ಪ್ರಾಕೃತಂ ವಿಜುಗುಪ್ಸತೇ ।
ಪಶ್ಯತೇ ಚ ಪರಂ ಪಶ್ಯಂಸ್ತದಾ ಪಶ್ಯನ್ನ ಸಂಸೃಜೇತ್ ॥ ೨೨ ॥

ಕಿಂ ಮಯಾ ಕೃತಮೇತಾವದ್ಯೋಽಹಂ ಕಾಲನಿಮಜ್ಜನಃ ।
ಯಥಾ ಮತ್ಸ್ಯೋ ಹ್ಯಭಿಜ್ಞಾನಾದನುವರ್ತಿತವಾನ್ ಜಲಂ ॥ ೨೩ ॥

ಅಹಮೇವ ಹಿ ಸಂಮೋಹಾದನ್ಯಮನ್ಯಂ ಜನಾಜ್ಜನಂ ।
ಮತ್ಸ್ಯೋ ಯಥೋದಕಜ್ಞಾನಾದನುವರ್ತಿತವಾನಿಹ ॥ ೨೪ ॥

ಮತ್ಸ್ಯೋಽನ್ಯತ್ವಮಥಾಜ್ಞಾನಾದುದಕಾನ್ನಾಭಿಮನ್ಯತೇ ।
ಆತ್ಮಾನಂ ತದವಜ್ಞಾನಾದನ್ಯಂ ಚೈವ ನ ವೇದ್ಮ್ಯಹಂ ॥ ೨೫ ॥

ನಿರ್ಗುಣ ಸ್ವರೂಪವನ್ನು ತಿಳಿದಾಗ ಪ್ರಕೃತಿ ಶಕ್ತಿಯನ್ನು ಬಿಟ್ಟುದರಿಂದ ಶುದ್ಧ ಸ್ವರೂಪನಾಗುವನು. ತಿಳಿವಳಿಕೆಯಿಂದಕೂಡಿದ ಪುರುಷನು ನಾನು ಬೇರೆ ಈ ಪ್ರಕೃತಿಯೇ ಬೇರೆ ಎಂಬ ಜ್ಞಾನದಿಂದ ಕೂಡಿದಾಗ ತಾನು ನಾಶವಿಲ್ಲದ (ಶಾಶ್ವತವಾದ) ಸ್ವರೂಪವನ್ನು ಪಡೆದು ಪ್ರಕೃತಿಯ ಸಂಬಂಧವನ್ನು ಪಡೆಯು ವುದಿಲ್ಲ. ಎಲೈ ರಾಜಶ್ರೇಷ್ಠನೇ, ಈ ಪುರುಷನು ಪ್ರಕೃತಿಸಂಬಂಧವಾದ ಗುಣ ಗಳಲ್ಲಿ ಯಾವಾಗ ಅಸಹ್ಯಪಡುವನೋ ಆಗ ಜ್ಞಾನಸ್ವರೂಪವಾದ ಶ್ರೇಷ್ಠವಾದ ತನ್ನ ಸ್ವರೂಪವನ್ನು ತಿಳಿದು ಮತ್ತೆ ಸಂಸಾರಸಂಬಂಧವಾದ ಜನನಮರಣ ಪ್ರವಾಹಕ್ಕೆ ಬೀಳುವುದಿಲ್ಲ.

೨೩–೩೦. ಆಗ ಜ್ಞಾನಿಯಾದ ಪುರುಷನು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸುವನು. ನಾನು ಕಾಲದಕಟ್ಟಿಗೆ ಸಿಕ್ಕಿ ಇಲ್ಲಿಯವರೆಗೂ ಏನು ಕೆಲಸ ವನ್ನು ಮಾಡಿದೆನು? ಮೀನು ನೀರನ್ನು ಅನುಸರಿಸಿ ಹೋಗುವಂತೆ ನಾನು

ಮಮಾಸ್ತು ಧಿಕ್ಕುಬುದ್ಧಸ್ಯ ಯೋಽಹಂ ಮಗ್ನ ಇಮಂ ಪುನಃ ।
ಅನುವರ್ತಿತವಾನ್ಮೋಹಾದನ್ಯಮನ್ಯಂ ಜನಾಜ್ಞನಂ ॥ ೨೬ ॥

ಅಯಮನುಭವೇದ್ಬಂಧುರನೇನ ಸಹ ಮೇ ಕ್ಷಯಂ ।
ಸಾಮ್ಯಮೇಕತ್ವತಾಂ ಯಾತೋ ಯಾದೃಶಸ್ತಾದೃಶಸ್ತ್ವಹಂ ॥ ೨೭ ॥

ತುಲ್ಯತಾಮಿಹ ಪಶ್ಯಾಮಿ ಸದೃಶೋಽಹಮನೇನ ವೈ ।
ಅಯಂ ಹಿ ವಿಮಲೋ ವ್ಯಕ್ತಮಹಮಾದೃಶಕಸ್ತದಾ ॥ ೨೮ ॥

ಯೋಽಹಮಜ್ಞಾನಸಂಮೋಹಾದಜ್ಞಯಾ ಸಂಪ್ರವೃತ್ತವಾನ್ ।
ಸಂಸರ್ಗಾದತಿಸಂಸರ್ಗಾತ್ಸ್ಥಿತಃ ಕಾಲಮಿಮಂ ತ್ವಹಂ ॥ ೨೯ ॥

ಸೋಽಹಮೇವಂ ವಶೀಭೂತಃ ಕಾಲಮೇತಂ ನ ಬುದ್ಧವಾನ್ ।
ಉತ್ತಮಾಧಮಮಧ್ಯಾನಾಂ ತಾಮಹಂ ಕಥಮಾವಸೇ ॥ ೩೦ ॥

ಅಜ್ಞಾನದಿಂದ ಪ್ರಕೃತಿಯನ್ನನುಸರಿಸಿ ಅನೇಕ ಜನ್ಮಗಳನ್ನು ಪಡೆದೆನು. ಮೀನು ಅಭಿಮಾನದಿಂದ ನೀರಿಗಿಂತಲೂ ತಾನು ಬೇರೆಯಲ್ಲವೆಂದು ತಿಳಿದಿರುವಂತೆ ನಾನು ಅಭಿಮಾನದಿಂದ ಪ್ರಕೃತಿಯನ್ನನುಸರಿಸಿ ದೇಹವೇ ನಾನೆಂದು ತಿಳಿದು ಆತ್ಮನು ಬೇರೆಯಾದವನೆಂದು ತಿಳಿಯದೆ ಹೋದೆನು. ನನ್ನ ದುರ್ಬುದ್ಧಿಯನ್ನು ನಿಂದಿಸಬೇಕು. ನಾನು ಮತ್ತೆ ಈ ಸಂಸಾರದಲ್ಲಿ ಮುಳುಗಿ ಅಜ್ಞಾನದಿಂದ ಅನೇಕ ಜನ್ಮಗಳನ್ನನುಭವಿಸುತ್ತಾ ಇವನು ನನ್ನ ಬಂಧುವು, ಇವನು ನನಗೆ ಸಮಾನನು, ಎಲ್ಲ ಭಾಗದಲ್ಲಿಯೂ ನಮ್ಮಿಬ್ಬರಿಗೆ ಸಾಮ್ಯವಿರುವುದು. ಇವನು ಪರಿಶುದ್ಧನು, ನಾನೂ ಇವನ ಹಾಗೆಯೇ ಇರುವೆನು ಎಂದು ಅಭಿಮಾನರೂಪವಾದ ಅಜ್ಞಾನದಿಂದ ಇತರರ ಸ್ನೇಹ ಮುಂತಾದ ಸಂಬಂಧಗಳಿಂದ ಇಷ್ಟು ಕಾಲವನ್ನು ಕಳೆದೆನು. ನಾನು ಪ್ರಕೃತಿಗೆ ಅಧೀನನಾಗಿ ಕಳೆದುಹೋದ ಉತ್ತಮ ಮಧ್ಯಮಾಧಮರೂಪವಾದ ಇಷ್ಟು ಕಾಲವನ್ನು ತಿಳಿಯಲಾರದೆ ಹೋದೆನು.

ಸಮಾನಮಾಯಯಾ ಚೇಹ ಸಹವಾಸಮಹಂ ಕಥಂ ।
ಗಚ್ಛಾಮ್ಯಬುದ್ಧಭಾವತ್ವಾದಿಹೇದಾನೀಂ ಸ್ಥಿರೋ ಭವ ॥ ೩೧ ॥

ಸಹವಾಸಂ ನ ಯಾಸ್ಯಾಮಿ ಕಾಲಮೇತಂ ವಿವಂಚನಾತ್ ।
ವಂಚಿತೋ ಹ್ಯನಯಾ ಯದಿ ನಿರ್ವಿಕಾರೋ ವಿಕಾರಯಾ ॥ ೩೨ ॥

ನ ತತ್ತದಪರಾದ್ಧಂ ಸ್ಯಾದಪರಾಧೋ ಹ್ಯಯಂ ಮಮ ।
ಯೋಽಹಮತ್ರಾಭವಂ ಸಕ್ತಃ ಪರಾಙ್ಮುಖಮುಪಸ್ಥಿತಃ ॥ ೩೩ ॥

ತತೋಽಸ್ಮಿನ್ಬಹುರೂಪೋಽಥ ಸ್ಥಿತೋ ಮೂರ್ತಿರಮೂರ್ತಿಮಾನ್ ।
ಅಮೂರ್ತಿಶ್ಚಾಪ್ಯಮೂರ್ತಾತ್ಮಾ ಮಮತ್ವೇನ ಪ್ರಧರ್ಷಿತಃ ॥ ೩೪ ॥

ಪ್ರಕೃತ್ಯಾ ಚ ತಯಾ ತೇನ ತಾಸು ತಾಸ್ವಿಹ ಯೋನಿಷು ।
ನಿರ್ಮಮಸ್ಯ ಮಮತ್ವೇನ ವಿಕೃತಂ ತಾಸು ತಾಸು ಚ ॥ ೩೫ ॥

ಯೋನಿಷು ವರ್ತಮಾನೇನ ನಷ್ಟಸಂಜ್ಞೇನ ಚೇತಸಾ ।
ಸಮತಾ ನ ಮಯಾ ಕಾಚಿದಹಂಕಾರೇ ಕೃತಾ ಮಯಾ ॥ ೩೬ ॥

೩೧–೪೦. ಇನ್ನು ಮೇಲೆ ನಾನು ಅಜ್ಞಾನದಿಂದ ಮಾಯೆಗೆ ಅಧೀನನಾಗಿ ಅದರೊಡನೆ ವ್ಯವಹಾರವನ್ನು ಹೇಗೆ ನಡೆಸಲಿ? ನಾನು ಈಗ ಸ್ಥಿರನಾಗಿರುವೆನು. ವಿಕಾರಸ್ವಭಾವವಿಲ್ಲದ ನಾನು ವಿಕಾರಸ್ವರೂಪವಾದ ಮಾಯೆಯ ಸಹವಾಸವನ್ನು ಮಾಡುವದಿಲ್ಲ. ಹಿಂದೆ ಆ ಮಾಯೆಯು ನನ್ನನ್ನು ಮೋಸಗೊಳಿಸಿತು. ಇನ್ನು ಅದರ ಮೋಸಕ್ಕೆ ಒಳಗಾಗುವದಿಲ್ಲ. ಇದು ಮಾಯೆಯ ತಪ್ಪಲ್ಲ. ನನ್ನ ತಪ್ಪಾಗಿರುವದು. ಅಜ್ಞಾನದಕಡೆ ತಿರುಗಿ ನೋಡಿದ ನಾನು ಅದರ ಅಧೀನನಾದೆನಲ್ಲ. ಇದರಿಂದ ನಿರಾಕಾರನಾದ ನಾನು ಅನೇಕ ರೂಪವಾದೆನು. ನಿರಾಕಾರಸ್ವರೂಪನಾದ ನಾನು ನನ್ನದು ಎಂಬ ಅಭಿಮಾನಕ್ಕೆ ಒಳಗಾದೆನು. ಪ್ರಕೃತಿಯು ಅಭಿಮಾನವಿಲ್ಲದ ನನ್ನನ್ನು ಅನೇಕ ಜನ್ಮಗಳಲ್ಲಿ ಅಧಿವಾಸವೆಂಬ ವಿಕಾರಕ್ಕೆ ಒಳಗುಮಾಡಿತು. ಅನೇಕ ಜನ್ಮಗಳನ್ನನುಭವಿ

ಆತ್ಮಾನಂ ಬಹುಧಾ ಕೃತ್ವಾ ಸೋಽಯಂ ಭೂಯೋ ಯುನಕ್ತಿ ಮಾಂ ।
ಇದಾನೀಮವಬುದ್ಧೋಽಸ್ಮಿ ನಿರ್ಮಮೋ ನಿರಹಂಕೃತಃ ॥ ೩೭ ॥

ಮಮತ್ವಂ ಮನಸಾ ನಿತ್ಯಮಹಂಕಾರಕೃತಾತ್ಮಕಂ ।
ಅಪಲಗ್ನಾಮಿಮಾಂ ಹಿತ್ವಾ ಸಂಶ್ರಯಿಷ್ಯೇ ನಿರಾಮಯಂ ॥ ೩೮ ॥

ಅನೇನ ಸಾಮ್ಯಂ ಯಾಸ್ಯಾಮಿ ನಾನಯಾಹಮಚೇತಸಾ ।
ಕ್ಷೇಮಂ ಮಮ ಸಹಾನೇನ ನೈವೈಕಮನಯಾ ಸಹ ॥ ೩೯ ॥

ಏವಂ ಪರಮಸಂಬೋಧಾತ್ಪಂಚವಿಂಶೋಽನುಬುದ್ಧವಾನ್ ।
ಅಕ್ಷರತ್ವಂ ನಿಗಚ್ಛತಿ ತ್ಯಕ್ತ್ವಾ ಕ್ಷರಮನಾಮಯಂ ॥ ೪೦ ॥

ಅವ್ಯಕ್ತಂ ವ್ಯಕ್ತಧರ್ಮಾಣಂ ಸಗುಣಂ ನಿರ್ಗುಣಂ ತಥಾ ।
ನಿರ್ಗುಣಂ ಪ್ರಥಮಂ ದೃಷ್ಟ್ವಾ ತಾವದ್ಭವತಿ ಮೈಥಿಲ ॥ ೪೧ ॥

ಸುತ್ತಿರುವ ತಿಳಿವಳಿಕೆಯಿಲ್ಲದ ನನ್ನ ಬುದ್ಧಿಯು ಅಹಂಕಾರದಿಂದ ಸಮಾನ ಭಾವವನ್ನು ಹೊಂದಲಿಲ್ಲ. ಈ ಅಹಂಕಾರವು ನನ್ನನ್ನು ಅನೇಕ ಬಗೆಯಾಗಿ ಮಾಡಿ ಪುನಃ ಪುನಃ ಜನ್ಮವನ್ನನುಭವಿಸುವಂತೆ ಮಾಡಿತು. ಈಗ ಮಮಕಾರ ಅಹಂಕಾರಗಳಿಲ್ಲದವನಾಗಿ ಜ್ಞಾನಿಯಾಗಿರುವೆನು. ಅಹಂಕಾರದಿಂದ ಬಂದ ನನ್ನದು ಎಂಬ ಅಭಿಮಾನವನ್ನು ಮನಸ್ಸಿನಿಂದ ಪ್ರತಿದಿನವೂ ಬಿಡುತ್ತಾ ಆರೋಗ್ಯವನ್ನು ಪಡೆವೆನು. ನಾನು ಇನ್ನು ಅಚೇತನವಾದ ಪ್ರಕೃತಿಯ ಸಾಮ್ಯವನ್ನು ಪಡೆವುದಿಲ್ಲ. ಚೇತನವೂ ಜ್ಞಾನಸ್ವರೂಪವೂ ಆದ ಆತ್ಮನ ಸಾಮ್ಯವನ್ನು ಪಡೆವೆನು. ಪ್ರಕೃತಿಯಿಂದ ಇರುವದು ನನಗೆ ಕ್ಷೇಮವಲ್ಲ. ಆತ್ಮ ನೊಡನಿರುವುದೇ ಕ್ಷೇಮವು. ಈರೀತಿಯಲ್ಲಿ ತನಗೆ ತಾನೇ ಹೇಳಿಕೊಂಡು ಇಪ್ಪತ್ತೈದನೆಯ ತತ್ವವಾದ ಆತ್ಮನು ನಾಶಸ್ವಭಾವವಾದ ಪ್ರಕೃತಿಯನ್ನು ಬಿಟ್ಟು ಜ್ಞಾನವನ್ನು ಪಡೆದು ಶಾಶ್ವತವಾದ ಆತ್ಮಸ್ಥಿತಿಯನ್ನು ಪಡೆವನು.

೪೧-೪೩. ಎಲೈ ಮಿಥಿಲಾಧಿಪತಿಯೇ, ಜೀವನು ಪುರುಷ ಪ್ರಕೃತಿಗಳ ಅವ್ಯಕ್ತ ವ್ಯಕ್ತ, ನಿರ್ಗುಣ ಸಗುಣ ಎಂಬ ಧರ್ಮಗಳನ್ನು ವಿಚಾರಮಾಡಿ ತನ್ನ

ಅಕ್ಷರಕ್ಷರಯೋರೇತದುಕ್ತಂ ತವ ನಿದರ್ಶನಂ ।
ಮಯೇಹ ಜ್ಞಾನಸಂಪನ್ನಂ ಯಥಾ ಶ್ರುತಿನಿದರ್ಶನಾತ್ ॥ ೪೨ ॥

ನಿಃಸಂದಿಗ್ಧಂ ಚ ಸೂಕ್ಷ್ಮಂ ಚ ವಿಶುದ್ಧಂ ವಿಮಲಂ ತಥಾ ।
ಪ್ರವಕ್ಷ್ಯಾಮಿ ತು ತೇ ಭೂಯಸ್ತನ್ನಿಬೋಧ ಯಥಾಶ್ರುತಂ ॥ ೪೩ ॥

ಸಾಂಖ್ಯಯೋಗೋ ಮಯಾ ಪ್ರೋಕ್ತಃ ಶಾಸ್ತ್ರದ್ವಯನಿದರ್ಶನಾತ್ ।
ಯದೇವ ಸಾಂಖ್ಯಶಾಸ್ತ್ರೋಕ್ತಂ ಯೋಗದರ್ಶನಮೇವ ತತ್ ॥ ೪೪ ॥

ಪ್ರಬೋಧನಪರಂ ಜ್ಞಾನಂ ಸಾಂಖ್ಯಾನಾಮವನೀಪತೇ ।
ವಿಸ್ಪಷ್ಟಂ ಪ್ರೋಚ್ಯತೇ ತತ್ರ ಶಿಷ್ಯಾಣಾಂ ಹಿತಕಾಮ್ಯಯಾ ॥ ೪೫ ॥

ಬೃಹಚ್ಚೈವಮಿದಂ ಶಾಸ್ತ್ರಮಿತ್ಯಾಹುರ್ವಿದುಷೋ ಜನಾಃ ।
ಅಸ್ಮಿಂಶ್ಚ ಶಾಸ್ತ್ರೇ ಯೋಗಾನಾಂ ಪುನರ್ಭವಪುರಃಸರಂ ॥ ೪೬ ॥

ಜ್ಞಾನಶಕ್ತಿಯಿಂದ ನಿರ್ಗುಣಸ್ವರೂಪವನ್ನು ತಿಳಿದು ತಾನೂ ಅದೇ ಸ್ವರೂಪ ನಾಗುವನು. ಕ್ಷರಾಕ್ಷರಗಳ ಸ್ವರೂಪಕ್ಕಾಗಿ ನಾನು ವೇದನಿದರ್ಶನಗಳಿಂದ ಜ್ಞಾನಸ್ವರೂಪವಾದ ಅನೇಕ ಉದಾಹರಣೆಗಳನ್ನು ಹೇಳಿರುವೆನು ಮತ್ತು ನಿನಗೆ ಸಂದೇಹ ಬರದಂತೆ ಸೂಕ್ಷ್ಮವೂ ಪರಿಶುದ್ಧವೂ ಆದ ಶ್ರುತಿಯಲ್ಲಿ ಹೇಳಿದ ಆತ್ಮಜ್ಞಾನದ ವಿಷಯವನ್ನು ಹೇಳುವೆನು ಕೇಳು.

೪೪-೪೮. ಸಾಂಖ್ಯ ಮತ್ತು ಯೋಗಶಾಸ್ತ್ರಗಳ ನಿದರ್ಶನದಿಂದ ಸಾಂಖ್ಯ ಯೋಗವನ್ನು ನಿನಗೆ ಹೇಳಿರುವೆನು. ಎಲೈ ರಾಜನೇ, ಸಾಂಖ್ಯರಿಗೆ ಜ್ಞಾನವೇ ಸ್ವಸ್ವರೂಪವನ್ನು ತಿಳಿಸತಕ್ಕುದು. ಶಿಷ್ಯರ ಹಿತಕ್ಕಾಗಿ ಅದನ್ನು ಸ್ಪಷ್ಟವಾಗಿ ಹೇಳುವೆನು. ವಿದ್ವಾಂಸರು ಈ ಸಾಂಖ್ಯಶಾಸ್ತ್ರವನ್ನೇ ದೊಡ್ಡದೆಂದು ಹೇಳು ವರು. ಈ ಶಾಸ್ತ್ರದಲ್ಲಿ ಇಪ್ಪತ್ತೈದನೆಯ ತತ್ವಕ್ಕಿಂತಲೂ ಶ್ರೇಷ್ಠನಾದ ಬೇರೆ ತತ್ವವಿರುವುದೆಂದು ಪುನರ್ಜನ್ಮ ವರ್ಣನೆಯೊಡನೆ ಯೋಗಶಾಸ್ತ್ರಜ್ಞರು ಹೇಳು

ಪಂಚವಿಂಶಾತ್ಪರಂ ತತ್ತ್ವಂ ಪಶ್ಯತೇ ಚ ನರಾಧಿಪ ।
ಸಾಂಖ್ಯಾನಾಂ ತು ಪರಂ ತತ್ತ್ವಂ ಯಥಾವದನುವರ್ಣಿತಂ ॥ ೪೭ ॥

ಬುದ್ಧಮಪ್ರತಿಬುದ್ಧಂ ಚ ಬುಧ್ಯಮಾನಂ ಚ ತತ್ತ್ವತಃ ।
ಬುಧ್ಯಮಾನಂ ಚ ಬುದ್ಧತ್ವಂ ಪ್ರಾಹುರ್ಯೋಗನಿದರ್ಶನಂ ॥ ೪೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವಸಿಷ್ಠಕರಾಲಜನಕಸಂವಾದೇ ಚತುಶ್ಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

ವರು. ಸಾಂಖ್ಯಶಾಸ್ತ್ರದಲ್ಲಿ ಹೇಳಿರುವ ಶ್ರೇಷ್ಠತತ್ತ್ವಗಳನ್ನು ಕ್ರಮವಾಗಿ ವಿವರಿಸಿದ್ದಾಯಿತು. ಆ ಯೋಗಶಾಸ್ತ್ರದಲ್ಲಿ ಬುದ್ಧ (ಜ್ಞಾನಿ) ಅಪ್ರತಿಬುದ್ಧ (ಅಜ್ಞಾನಿ) ಬುಧ್ಯಮಾನ (ತಿಳಿಯಬೇಕಾದವನು, ತಿಳಿಯುತ್ತಿರುವವನು) ಎಂಬ ಜೀವರ ಭೇದಗಳನ್ನು ಹೇಳಿರುವರು. ಇದರ ಜೊತೆಗೆ ತಿಳಿವಳಿಕೆ ಎಂಬ ಜ್ಞಾನ ವಿಷಯವನ್ನೂ ಹೇಳಿರುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಸಿಷ್ಠಕರಾಳಜನಕರ ಸಂವಾದವೆಂಬ ಇನ್ನೂರನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ವಸಿಷ್ಠ ಉವಾಚ ॥

ಅಪ್ರಬುದ್ಧಮಥಾವ್ಯಕ್ತಮಿಮಂ ಗುಣನಿಧಿಂ ಸದಾ ।
ಗುಣಾನಾಂ ಧಾರ್ಯತಾಂ ತತ್ತ್ವಂ ಸೃಜತ್ಯಾಕ್ಷಿಪತೇ ತಥಾ ॥ ೧ ॥

ಅಜೋಹಿ ಕ್ರೀಡಯಾ ಭೂಪ ವಿಕ್ರಿಯಾಂ ಪ್ರಾಪ್ತ ಇತ್ಯುತ ।
ಆತ್ಮಾನಂ ಬಹುಧಾ ಕೃತ್ವಾ ನಾನೇವ ಪ್ರತಿಚಕ್ಷತೇ ॥ ೨ ॥

ಏತದೇವಂ ವಿಕುರ್ವಾಣೋ ಬುಧ್ಯಮಾನೋ ನ ಬುಧ್ಯತೇ ।
ಗುಣಾನಾಚರತೇ ಹ್ಯೇಷ ಸೃಜತ್ಯಾಕ್ಷಿಪತೇ ತಥಾ ॥ ೩ ॥

ಇನೂರನಲವತ್ತೈದನೆಯ ಅಧ್ಯಾಯವು

೧-೫. ಅವ್ಯಕ್ತವೆಂಬ ಪ್ರಕೃತಿಯೇ ಸತ್ವಾದಿಗುಣಗಳಿಗೆ ಆಶ್ರಯನಾದ ಅಪ್ರಬುದ್ಧನಾದ ಜೀವನನ್ನು ಸೃಷ್ಟಿಸುವುದು. ಎಲೈ ರಾಜನೇ, ಉತ್ಪತ್ತಿಧರ್ಮವಿಲ್ಲದ ಆತ್ಮನೇ ಲೀಲೆಯಿಂದ ವಿಕಾರವನ್ನು ಹೊಂದಿದಂತೆ ತನ್ನನ್ನೇ ಅನೇಕ ಬಗೆಯಾಗಿ ಮಾಡಿಕೊಂಡು ಪ್ರಪಂಚರೂಪವಾಗಿ ಭಾವಿಸುವನು. ಈರೀತಿಯಲ್ಲಿ ಅನೇಕ ವಿಕಾರರೂಪನಾಗುತ್ತ ಬುಧ್ಯಮಾನ ಜೀವನೆನಿಸಿಕೊಂಡವನು ಸ್ವಸ್ವರೂಪವನ್ನು ತಿಳಿಯದೆ ಹೋಗುವನು. ಈ ಜೀವನು ಗುಣಗಳನ್ನನುಸರಿಸಿ

ಅವ್ಯಕ್ತಬೋಧನಾಚ್ಚೈವ ಬುಧ್ಯಮಾನಂ ವದಂತ್ಯಪಿ ।
ನ ತ್ವೇವಂ ಬುಧ್ಯತೇಽವ್ಯಕ್ತಂ ಸಗುಣಂ ತಾತ ನಿರ್ಗುಣಂ ॥ ೪ ॥

ಕದಾಚಿತ್ತ್ವೇವ ಖಲ್ವೇತತ್ತದಾಹುಃ ಪ್ರತಿಬುದ್ಧಕಂ ।
ಬುಧ್ಯತೇ ಯದಿ ಚಾವ್ಯಕ್ತಮೇತದ್ವೈ ಪಂಚವಿಂಶಕಂ ॥ ೫ ॥

ಬುಧ್ಯಮಾನೋ ಭವತ್ಯೇಷ ಮಮಾತ್ಮಕ ಇತಿ ಶ್ರುತಃ ।
ಅನ್ಯೋನ್ಯಪ್ರತಿಬುದ್ಧೇನ ವದಂತ್ಯವ್ಯಕ್ತಮಚ್ಯುತಂ ॥ ೬ ॥

ಅವ್ಯಕ್ತಬೋದನಾಚ್ಚೈವ ಬುಧ್ಯಮಾನಂ ವದಂತ್ಯುತ ।
ಪಂಚವಿಂಶಂ ಮಹಾತ್ಮಾನಂ ನ ಚಾಸಾವಪಿ ಬುಧ್ಯತೇ ॥ ೭ ॥

ಷಡ್ವಿಂಶಂ ವಿಮಲಂ ಬುದ್ಧಮಪ್ರಮೇಯಂ ಸನಾತನಂ ।
ಸತತಂ ಪಂಚವಿಂಶಂ ತು ಚತುರ್ವಿಂಶಂ ವಿಬುಧ್ಯತೇ ॥ ೮ ॥

ಕೆಲಸಮಾಡುವನು. ಅವುಗಳಲ್ಲಿ ದೋಷಗಳನ್ನು ಎಣಿಸುವನು. ಅವ್ಯಕ್ತವೆಂಬ ಪ್ರಕೃತಿಯನ್ನು ತಿಳಿವುದರಿಂದ (ಆತ್ಮ) ಜೀವನನ್ನು ಬುಧ್ಯಮಾನ ಜೀವನೆಂದು ಕರೆಯುವರು. ಸಗುಣವಾದ ಪ್ರಕೃತಿಯು ನಿರ್ಗುಣನಾದ ಆತ್ಮನನ್ನು ತಿಳಿಯಲಾರದು. ಒಂದಾನೊಂದು ಕಾಲದಲ್ಲಿ ಪ್ರಕೃತಿಯು ಆತ್ಮನನ್ನು ತಿಳಿದರೆ ಆ ಪ್ರಕೃತಿಸ್ವರೂಪವೇ ಜ್ಞಾನದಿಂದ ಕೂಡಿ ಇಪ್ಪತ್ತೈದನೆಯ ತತ್ವವಾದ ಆತ್ಮಸ್ವರೂಪವಾಗುವುದು.

೬-೧೦. ಇಪ್ಪತ್ತೈದನೆಯ ಆತ್ಮತತ್ವವನ್ನೇ ಆ ಬುಧ್ಯಮಾನ ಜೀವನೆಂದು ಹೇಳುವರು. ಆ ಜೀವನಿಗೆ ನನ್ನ ಆತ್ಮವೆಂಬ ಅಭಿಮಾನವಿರುವುದು. ಪ್ರಕೃತಿಯು ಆತ್ಮನನ್ನೂ, ಆತ್ಮನು ಪ್ರಕೃತಿಯನ್ನೂ ತಿಳಿಯುವುದರಿಂದಲೇ ಒಂದನ್ನು ಪ್ರಕೃತಿಯೆಂದೂ ಮತ್ತೊಂದನ್ನು ನಾಶರಹಿತವಾದ ಆತ್ಮತತ್ವವೆಂದೂ ಹೇಳುವರು. ಪ್ರಕೃತಿಸ್ವರೂಪವನ್ನು ತಿಳಿವುದರಿಂದಲೇ ಇಪ್ಪತ್ತೈದನೆಯ ತತ್ವವಾದ ಆತ್ಮನನ್ನು ಬುದ್ಧಿಮಾನನೆಂದು ಹೇಳುವರು. ಈ ಆತ್ಮನು ನಿರ್ಮಲನೂ ಜ್ಞಾನಸ್ವರೂಪನೂ ಅನಾದಿಯಾದವನೂ ಆದ ಇಪ್ಪ

ದೃಶ್ಯಾದೃಶ್ಯೇ ಹ್ಯನುಗತತತ್ಸ್ವಭಾವೇ ಮಹಾದ್ಯುತೇ
ಅವ್ಯಕ್ತಂ ಚೈವ ತದ್ಬ್ರಹ್ಮ ಬುಧ್ಯತೇ ತಾತ ಕೇವಲಂ || ೯ ||

ಪಂಚವಿಂಶಂ ಚತುರ್ವಿಂಶಮಾತ್ಮಾನಮನುಪಶ್ಯತಿ |
ಬುಧ್ಯಮಾನೋ ಯದಾತ್ಮಾನಮನ್ಯೋಽಹಮಿತಿ ಮನ್ಯತೇ ೧೦ ||

ತದಾ ಪ್ರಕೃತಿಮಾನೇಷ ಭವತ್ಯವ್ಯಕ್ತಲೋಚನಃ |
ಬುಧ್ಯತೇ ಚ ಪರಾಂ ಬುದ್ಧಿಂ ವಿಶುದ್ಧಾಮಮಲಾಂ ಯಥಾ || ೧೧ ||

ಷಡ್ವಿಂಶಂ ರಾಜಶಾರ್ದೂಲ ತದಾ ಬುದ್ಧಃ ಕೃತೋ ವ್ರಜೇತ್ |
ತತಸ್ತ್ಯಜತಿ ಸೋಽವ್ಯಕ್ತಂ ಸರ್ಗಪ್ರಲಯಧರ್ಮಿಣಂ || ೧೨ ||

ನಿರ್ಗುಣಾಂ ಪ್ರಕೃತಿಂ ವೇದ ಗುಣಯುಕ್ತಾಮಚೇತನಾಂ |
ತತಃ ಕೇವಲಧರ್ಮಾಸೌ ಭವತ್ಯವ್ಯಕ್ತದರ್ಶನಾತ್ || ೧೩ ||

ಕೇವಲೇನ ಸಮಾಗಮ್ಯ ವಿಮುಕ್ತಾತ್ಮಾನಮಾಪ್ನುಯಾತ್ |
ಏತತ್ತು ತತ್ತ್ವಮಿತ್ಯಾಹುರ್ನಿಸ್ತತ್ತ್ವಮಜರಾಮರಂ || ೧೪ ||

ತ್ತಾರನೆಯ ಪರಿಶುದ್ಧಾತ್ಮನನ್ನು ತಿಳಿಯಲಾರನು. ಪ್ರಬುದ್ಧನೂ ಏಕ ಸ್ವರೂಪನೂ ಆದ ಪರಮಾತ್ಮನು ಯಾವಾಗಲೂ ಇಪ್ಪತ್ತೈದು ಮತ್ತು ಇಪ್ಪತ್ತ ನಾಲ್ಕನೆಯ ತತ್ವಗಳನ್ನು ತಿಳಿಯುವನು. ಬುದ್ಧಿಮಾನನಾದ ಜೀವನು ನಾನು ಬೇರೆ, ಆತ್ಮನೇ ಬೇರೆ ಎಂದು ತಿಳಿದಿರುವನು.

೧೧-೧೩. ಎಲೈ ರಾಜಶ್ರೇಷ್ಠನೇ, ಬುದ್ಧಿಮಾನನಾದ ಜೀವನು ಯಾವಾಗ ಪರಿಶುದ್ಧವೂ, ದೋಷರಹಿತವೂ ಆದ ಇಪ್ಪತ್ತಾರನೆಯ ಆತ್ಮನನ್ನು ತಿಳಿವನೋ ಆಗ ಅವನು ಪ್ರಬುದ್ಧನೆನಿಸುವನು. ಆಮೇಲೆ ಅವನು ಜನನ ಮರಣ ಧರ್ಮವುಳ್ಳ ಪ್ರಕೃತಿಸ್ವರೂಪವನ್ನು ಬಿಡುವನು. ಗುಣಸಹಿತವಾದ ಅಚೇತನವಾದ ಪ್ರಕೃತಿಯನ್ನೂ ನಿರ್ಗುಣವಾದ ಆತ್ಮತತ್ತ್ವವೆಂದು ತಿಳಿಯುವನು.

೧೪-೧೬. ಆ ಪ್ರಬುದ್ಧಜೀವನು ಜ್ಞಾನಸ್ವರೂಪನಾದ ಅತ್ಮನಲ್ಲಿ ಐಕ್ಯವಾಗಿ ತನ್ನನ್ನು ಮುಕ್ತನೆಂದು ಭಾವಿಸುವನು. ಇದುವರೆಗೂ ಹೇಳಿದವು

ತತ್ತ್ವಸಂಶ್ರವಣಾದೇವ ತತ್ತ್ವಜ್ಞೋ ಜಾಯತೇ ನೃಪ ।
ಪಂಚವಿಂಶತಿತತ್ತ್ವಾನಿ ಪ್ರವದಂತಿ ಮನೀಷಿಣಃ ॥ ೧೫ ॥

ನ ಚೈವ ತತ್ತ್ವವಾಂಸ್ತಾತ ಸಂಸಾರೇಷು ನಿಮಜ್ಜತಿ ।
ಏಷಾಮುಪೈತಿ ತತ್ತ್ವಂ ಹಿ ಕ್ಷಿಪ್ರಂ ಬುಧ್ಯಸ್ವ ಲಕ್ಷಣಂ ॥ ೧೬ ॥

ಷಡ್ವಿಂಶೋಽಯಮಿತಿ ಪ್ರಾಜ್ಞೋ ಗೃಹ್ಯಮಾಣೋಽಜರಾಮರಃ ।
ಕೇವಲೇನ ಬಲೇನೈವ ಸಮತಾಂ ಯಾತ್ಯಸಂಶಯಂ ॥ ೧೭ ॥

ಷಡ್ವಿಂಶೇನ ಪ್ರಬುದ್ಧೇನ ಬುಧ್ಯಮಾನೋಽಪ್ಯಬುದ್ಧಿಮಾನ್ ।
ಏತನ್ನಾನಾತ್ವಮಿತ್ಯುಕ್ತಂ ಸಾಂಖ್ಯಶ್ರುತಿನಿದರ್ಶನಾತ್ ॥ ೧೮ ॥

ಚೇತನೇನ ಸಮೇತಸ್ಯ ಪಂಚವಿಂಶತಿಕಸ್ಯ ಹ ।
ಏಕತ್ವಂ ವೈ ಭವೇತ್ತಸ್ಯ ಯದಾ ಬುದ್ಧ್ಯಾನುಬುಧ್ಯತೇ ॥ ೧೯ ॥

ಬುಧ್ಯಮಾನೇನ ಬುದ್ಧೇನ ಸಮತಾಂ ಯಾತಿ ಮೈಥಿಲ ।
ಸಂಗಧರ್ಮಾ ಭವತ್ಯೇಷ ನಿಃಸಂಗಾತ್ಮಾ ನರಾಧಿಪ ॥ ೨೦ ॥

ಗಳನ್ನೇ ತತ್ತ್ವವೆಂದು ಹೇಳುವರು. ಮುಪ್ಪು ಮರಣಗಳಿಲ್ಲದ ಆತ್ಮಸ್ವರೂಪವು ಯಾವ ತತ್ತ್ವವೂ ಅಲ್ಲ. ಎಲೈ ರಾಜನೇ, ಜೀವನು ತತ್ತ್ವಗಳನ್ನಾಶ್ರಯಿಸುವುದರಿಂದ ತತ್ತ್ವಜ್ಞನೆನಿಸುವನು. ವಿದ್ವಾಂಸರು ಇಪ್ಪತ್ತೈದು ತತ್ತ್ವಗಳೆಂದು ಹೇಳುವರು. ತತ್ತ್ವಜ್ಞನಾದ ಜೀವನು ಜನನ ಮರಣ ರೂಪವಾದ ಸಂಸಾರದುಃಖದಲ್ಲಿ ಮುಳುಗುವುದಿಲ್ಲ. ಯಾರಿಗೆ ತತ್ತ್ವಜ್ಞಾನವಿರುವುದೆಂಬುದನ್ನು ಕೆಲವು ಲಕ್ಷಣಗಳಿಂದ ಬೇಗನೆ ನೀನು ತಿಳಿ. ಅಥವಾ ತತ್ತ್ವಜ್ಞನದ ಲಕ್ಷಣವನ್ನು ತಿಳಿ.

೧೭-೨೧. ಪ್ರಾಜ್ಞನಾದವನು ಮುಪ್ಪು ಮರಣಗಳಿಲ್ಲದ ಇಪ್ಪತ್ತಾರನೆಯ ಆತ್ಮನೇ ತಾನೆಂದು ತಿಳಿದಾಗ ಆ ಜ್ಞಾನಬಲದಿಂದಲೇ ಆತ್ಮಸಮಾನಭಾವವನ್ನು ಪಡೆವನು. ಇಪ್ಪತ್ತಾರನೆಯ ಜ್ಞಾನಿಯು ತಿಳಿಯುತ್ತಿರುವ ಪ್ರಕೃತಿಯಾದಿತತ್ತ್ವಗಳು ಅಜ್ಞಾನಸಂಬಂಧವಾದವುಗಳೆಂದೂ ಅನೇಕವಾದವುಗಳೆಂದೂ ಸಾಂಖ್ಯಶಾಸ್ತ್ರದಲ್ಲಿ ಹೇಳಿರುವುದು. ಚೇತನಶಕ್ತಿಯಿಂದ ಕೂಡಿದ ಇಪ್ಪತ್ತೈದ

ನಿಃಸಂಗಾತ್ಮಾನಮಾಸಾದ್ಯ ಷಡ್ವಿಂಶಂ ಕರ್ಮಜಂ ವಿದುಃ ।
ವಿಭುಸ್ತ್ಯಜತಿ ಚಾವ್ಯಕ್ತಂ ಯದಾ ತ್ವೇತದ್ವಿಬುಧ್ಯತೇ ॥ ೨೧ ॥

ಚತುರ್ವಿಂಶಮಗಾಧಂ ಚ ಷಡ್ವಿಂಶಸ್ಯ ಪ್ರಬೋಧನಾತ್ ।
ಏಷ ಹ್ಯಪ್ರತಿಬುದ್ಧಶ್ಚ ಬುಧ್ಯಮಾನಸ್ತು ತೇಽನಘ ॥ ೨೨ ॥

ಉಕ್ತೋ ಬುದ್ಧಶ್ಚ ತತ್ತ್ವೇನ ಯಥಾಶ್ರುತಿನಿದರ್ಶನಾತ್ ।
ಮಶಕೋದುಂಬರೇ ಯದ್ವದನ್ಯತ್ವಂ ತದ್ವದೇತಯೋಃ ॥ ೨೩ ॥

ಮತ್ಸ್ಯೋದಕೇ ಯಥಾ ತದ್ವದನ್ಯತ್ವಮುಪಲಭ್ಯತೇ ।
ಏವಮೇವ ಚ ಗಂತವ್ಯಂ ನಾನಾತ್ವೈಕತ್ವಮೇತಯೋಃ ॥ ೨೪ ॥

ಏತಾವನ್ಮೋಕ್ಷ ಇತ್ಯುಕ್ತೋ ಜ್ಞಾನವಿಜ್ಞಾನಸಂಜ್ಞಿತಃ ।
ಪಂಚವಿಂಶತಿಕಸ್ಯಾಶು ಯೋಽಯಂ ದೇಹೇ ಪ್ರವರ್ತತೇ ॥ ೨೫ ॥

ನೆಯ ತತ್ವವೇ ಆತ್ಮತತ್ವವೆಂದು ತಿಳಿದ ಜೀವನಿಗೆ ಏಕತತ್ವಜ್ಞಾನವುಂಟಾಗುವುದು. ಈ ಜ್ಞಾನದಿಂದ ಸಮಸ್ತ ಬುದ್ಧಿಯುಂಟಾಗುವುದು. ಎಲೈ ರಾಜನೇ, ಜೀವನು ಇಪ್ಪತ್ತಾರನೆಯ ನಿಸ್ಸಂಗವಾದ ಆತ್ಮಸ್ವರೂಪವನ್ನು ಪಡೆದು ಮುಕ್ತನಾಗಿ ಪ್ರಕೃತಿಯನ್ನು ಬಿಟ್ಟು ಬಿಡುವನು. ಆಗ ಜ್ಞಾನಿಯಾಗುವನು.

೨೨-೨೬. ಇಪ್ಪತ್ತನಾಲ್ಕನೆಯ ತತ್ವವಾದ ಮಹತ್ತತ್ವವು ಬಹು ದೊಡ್ಡದಾದುದು. ಇದೇ ಆ ಪ್ರಕೃತಿಬದ್ಧವೆನಿಸುವ ಅಜ್ಞಾನ ಸ್ವರೂಪವು. ಬುಧ್ಯಮಾನ ಪ್ರಬುದ್ಧ ಎಂಬ ತತ್ವಗಳ ವಿಷಯವನ್ನು ವೇದವಾಕ್ಯ ನಿದರ್ಶನಗಳಿಂದ ನಿನಗೆ ಹಿಂದೆಯೇ ಹೇಳಿರುವೆನು. ಬುಧ್ಯಮಾನ ಪ್ರಬುದ್ಧ ತತ್ವಗಳನ್ನು ಅತ್ತಿಯ ಹಣ್ಣಿಗೂ ಅದರೊಳಗಿರುವ ಹುಳುಗಳಿಗೂ ಇರುವ ಭಿನ್ನಭಾವದಂತೆ ತಿಳಿಯಬೇಕು. ಹೀಗೆಯೇ ಇವೆರಡಕ್ಕೂ ಅನೇಕತ್ವ ಏಕತ್ವಗಳನ್ನು ತಿಳಿಯಬೇಕು. ಜ್ಞಾನ ಅಜ್ಞಾನ ಎಂಬ ಹೆಸರುಳ್ಳ ಈ ತಿಳಿವಳಿಕೆಯನ್ನೇ ಮೋಕ್ಷವೆಂದು ಹೇಳುವರು. ಇಪ್ಪತ್ತೈದನೆಯ ತತ್ವವಾದ ಜೀವನ ಶರೀರದಲ್ಲಿ ಈ

ಏಷ ಮೋಕ್ಷಯಿತವ್ಯೇತಿ ಪ್ರಾಹುರವ್ಯಕ್ತಗೋಚರಾತ್ ।
ಸೋಽಯಮೇವಂ ವಿಮುಚ್ಯೇತ ನಾನ್ಯಥೇತಿ ವಿನಿಶ್ಚಯಃ ॥ ೨೬ ॥

ಪರಶ್ಚ ಪರಧರ್ಮಾ ಚ ಭವತ್ಯೇವ ಸಮೇತ್ಯ ವೈ ।
ವಿಶುದ್ಧಧರ್ಮಾ ಶುದ್ಧೇನ ನಾಶುದ್ಧೇನ ಚ ಬುದ್ಧಿಮಾನ್ ॥ ೨೭ ॥

ವಿಮುಕ್ತಧರ್ಮಾ ಬುದ್ಧೇನ ಸಮೇತ್ಯ ಪುರುಷರ್ಷಭ ।
ವಿಯೋಗಧರ್ಮಿಣಾ ಚೈವ ವಿಮುಕ್ತಾತ್ಮಾ ಭವತ್ಯಥ ॥ ೨೮ ॥

ವಿಮೋಕ್ಷಿಣಾ ವಿಮೋಕ್ಷಶ್ಚ ಸಮೇತ್ಯೇಹ ತಥಾ ಭವೇತ್ ।
ಶುಚಿಕರ್ಮಾ ಶುಚಿಶ್ಚೈವ ಭವತ್ಯಮಿತಬುದ್ಧಿಮಾನ್ ॥ ೨೯ ॥

ವಿಮಲಾತ್ಮಾ ಚ ಭವತಿ ಸಮೇತ್ಯ ವಿಮಲಾತ್ಮನಾ ।
ಕೇವಲಾತ್ಮಾ ತಥಾ ಚೈವ ಕೇವಲೇನ ಸಮೇತ್ಯ ವೈ
ಸ್ವತಂತ್ರಶ್ಚ ಸ್ವತಂತ್ರೇಣ ಸ್ವತಂತ್ರತ್ವಮವಾಪ್ಯತೇ ॥ ೩೦ ॥

ಜ್ಞಾನ ಉಂಟಾದರೆ, ಪ್ರಕೃತಿಯ ಕಟ್ಟಿನಿಂದ ಬಿಡುಗಡೆಯನ್ನು ಹೊಂದುವನೆಂದು ಹೇಳುವರು. ಮೋಕ್ಷವೆಂಬುದು ಹೀಗೆಯೇ ಉಂಟಾಗುವುದು. ಬೇರೆ ಮಾರ್ಗದಿಂದ ಉಂಟಾಗುವುದಿಲ್ಲವೆಂದು ಈ ಶಾಸ್ತ್ರಸಿದ್ಧಾಂತವು.

೨೭-೩೦. ಬುದ್ಧಿವಂತನಾದ ಜೀವನು ಪರಿಶುದ್ಧವಾದ ಧರ್ಮಾಚರಣೆಯಿಂದ ಶ್ರೇಷ್ಠವಾದ ಧರ್ಮವುಳ್ಳವನೂ ಪರಮಾತ್ಮಸ್ವರೂಪನೂ ಆಗುವನು. ಅಶುದ್ಧಧರ್ಮಾಚರಣೆಯಿಂದ ಆತ್ಮಸ್ವರೂಪನಾಗಲಾರನು. ಪುರುಷಶ್ರೇಷ್ಠನಾದ ಎಲೈ ರಾಜನೇ, ಜೀವನು ಜ್ಞಾನಿಯೊಡನೆ ಕೂಡಿದರೆ ಮೋಕ್ಷಧರ್ಮವನ್ನು ಆಚರಿಸುವನು. ವೈರಾಗ್ಯವುಳ್ಳವನೊಡನೆ ಕೂಡಿದರೂ ಮೋಕ್ಷವನ್ನು ಹೊಂದುವನು. ಮೋಕ್ಷವನ್ನು ಹೊಂದಿದವನ ಸಹವಾಸದಿಂದ ಮೋಕ್ಷವನ್ನು ಪಡೆವನು. ಪರಿಶುದ್ಧವಾದ ಕರ್ಮವನ್ನು ಮಾಡಿ ಶುದ್ಧನಾಗುವನು. ಕೇವಲಾತ್ಮಜ್ಞಾನಿಯೊಡನೆ ಸೇರಿ ಏಕಾತ್ಮಜ್ಞಾನಿಯೂ ಸ್ವತಂತ್ರನಾದವನೊಡನೆ ಸೇರಿ ಸ್ವಾತಂತ್ರ್ಯವುಳ್ಳವನೂ ಆಗುವನು.

ಏತಾವದೇತತ್ಕಥಿತಂ ಮಯಾ ತೇ
ತಥ್ಯಂ ಮಹಾರಾಜ ಯಥಾರ್ಥತತ್ತ್ವಂ ।
ಅಮತ್ಸರಸ್ತ್ವಂ ಪ್ರತಿಗೃಹ್ಯ ಬುದ್ಧ್ಯಾ
ಸನಾತನಂ ಬ್ರಹ್ಮ ವಿಶುದ್ಧಮಾದ್ಯಂ ॥ ೩೧ ॥

ತದ್ವೇದನಿಷ್ಠಸ್ಯ ಜನಸ್ಯ ರಾಜ-
ನ್ಪ್ರದೇಯಮೇತತ್ಪರಮಂ ತ್ವಯಾ ಭವೇತ್
ವಿಧಿತ್ಸಮಾನಾಯ ನಿಬೋಧಕಾರಕಂ
ಪ್ರಬೋಧಹೇತೋಃ ಪ್ರಣತಸ್ಯ ಶಾಸನಂ ॥ ೩೨ ॥

ನ ದೇಯಮೇತಚ್ಚ ಯಥಾನೃತಾತ್ಮನೇ
ಶಠಾಯ ಕ್ಲೀಬಾಯ ನ ಜಿಹ್ಮಬುದ್ಧಯೇ ।
ನ ಪಂಡಿತಜ್ಞಾನಪರೋಪತಾಪಿನೇ
ದೇಯಂ ತಥಾ ಶಿಷ್ಯವಿಬೋಧನಾಯ ॥ ೩೩ ॥

೩೧-೩೨. ಎಲೈ ಮಹಾರಾಜನೇ, ನಿಜವಾದ ತತ್ವಸ್ವರೂಪವನ್ನು ಇದುವರಿಗೂ ಹೇಳಿದೆನು. ಮಾತ್ಸರ್ಯವಿಲ್ಲದೆ ನಾನು ಹೇಳಿದುದನ್ನು ಗ್ರಹಿಸಿ ಪರಿಶುದ್ಧನೂ ಅನಾದಿಯೂ ಆದ ಪರಬ್ರಹ್ಮನನ್ನು ಬುದ್ಧಿಯಿಂದ ತಿಳಿದು ಜ್ಞಾನವನ್ನು ಸಂಪಾದಿಸಿ ಅದರಂತೆ ಆಚರಿಸುವ, ನಮಸ್ಕಾರ ಮಾಡಿದ ಶಿಷ್ಯನಿಗೆ ಜ್ಞಾನವನ್ನುಂಟುಮಾಡುವುದಕ್ಕೋಸ್ಕರವಾಗಿ ಇದನ್ನು ಹೇಳಬೇಕು.

೩೩-೩೫. ಸುಳ್ಳು ಹೇಳುವವನೂ ದುರ್ಮಾರ್ಗಿಯೂ ಮೂರ್ಖನೂ ನಪುಂಸಕನೂ ಮೋಸಗಾರನೂ ಪಂಡಿತನೆಂದು ಅಹಂಕಾರಪಡುವವನೂ ಇತರರಿಗೆ ತೊಂದರೆಯನ್ನುಂಟುಮಾಡುವವನೂ ಆದ ಶಿಷ್ಯನಿಗೆ ಇದನ್ನು ಹೇಳಬಾರದು. ಗುಣವಂತನೂ ಆಸಕ್ತಿಯುಳ್ಳವನೂ ಪರರ ಅಪವಾದವಿಲ್ಲದವನೂ ಶುದ್ಧವಾದ

ಶ್ರದ್ಧಾನ್ವಿತಾಯಾಥ ಗುಣಾನ್ವಿತಾಯ
ಪರಾಪವಾದಾದ್ವಿರತಾಯ ನಿತ್ಯಂ ।
ವಿಶುದ್ಧಯೋಗಾಯ ಬುಧಾಯ ಚೈವ
ಕೃಪಾವತೇಽಥ ಕ್ಷಮಿಣೇ ಹಿತಾಯ ॥ ೩೪ ॥

ವಿವಿಕ್ತಶೀಲಾಯ ವಿಧಿಪ್ರಿಯಾಯ
ವಿವಾದಹೀನಾಯ ಬಹುಶ್ರುತಾಯ ।
ವಿನೀತವೇಷಾಯ ಸಹೈತುಕಾತ್ಮನೇ
ಸದೈವ ಗುಹ್ಯಂ ತ್ವಿದಮೇವ ದೇಯಂ ॥ ೩೫ ॥

ಏತೈರ್ಗುಣೈರ್ಹೀನತಮೇ ನ ದೇಯ-
ಮೇತತ್ಪರಂ ಬ್ರಹ್ಮ ವಿಶುದ್ಧಮಾಹುಃ ।
ನ ಶ್ರೇಯಸೇ ಯೋಕ್ಷ್ಯತಿ ತಾದೃಶೇ ಕೃತಂ
ಧರ್ಮಪ್ರವಕ್ತಾರಮಪಾತ್ರದಾನಾತ್ ॥ ೩೬ ॥

ಪೃಥ್ವೀಮಿಮಾಂ ವಾ ಯದಿ ರತ್ನಪೂರ್ಣಾಂ
ದದ್ಯಾದದೇಯಂ ತ್ವಿದಮವ್ರತಾಯ ।
ಜಿತೇಂದ್ರಿಯಾಯ ಪ್ರಯತಾಯ ದೇಯಂ
ದೇಯಂ ಪರಂ ತತ್ತ್ವವಿದೇ ನರೇಂದ್ರ ॥ ೩೭ ॥

ಯೋಗಾಭ್ಯಾಸವುಳ್ಳವನೂ ವಿದ್ವಾಂಸನೂ ದಯಾಶಾಲಿಯೂ ಕ್ಷಮಾವಂತನೂ ಒಳ್ಳೆಯ ನಡತೆಯುಳ್ಳವನೂ ವೇದವಿಧಿಯಲ್ಲಿ ಪ್ರೀತಿಯುಳ್ಳವನೂ ನಮ್ರತೆಯುಳ್ಳವನೂ ಎಲ್ಲ ವಿಷಯಕ್ಕೂ ಕಾರಣವನ್ನು ಕೇಳುವವನೂ ಆದ ಶಿಷ್ಯನಿಗೆ ಯಾವಾಗಲೂ ಗೋಪ್ಯವಾದ ಈ ತತ್ವವನ್ನು ಹೇಳಬೇಕು.

೩೬–೩೭. ಈ ಮೇಲೆ ಹೇಳಿದ ಗುಣಗಳಿಲ್ಲದವನಿಗೆ ಈ ಪರಿಶುದ್ಧವಾದ ಬ್ರಹ್ಮಸ್ವರೂಪವನ್ನು ಹೇಳಬಾರದು. ಹಾಗೆ ಹೇಳಿದರೆ ಅಯೋಗ್ಯನಿಗೆ ಧರ್ಮವನ್ನು ಹೇಳಿದ ಮನುಷ್ಯನಿಗೆ ಶ್ರೇಯಸ್ಸಾಗುವುದಿಲ್ಲ. ಎಲೈ ರಾಜನೆ, ರತ್ನಗಳಿಂದ ತುಂಬಿದ ಈ ಭೂಮಿಯನ್ನೆಲ್ಲಾ ಕೊಟ್ಟರೂ ಈ ಜ್ಞಾನವನ್ನು ಅಯೋಗ್ಯನಿಗೆ ಹೇಳಬಾರದು. ಇಂದ್ರಿಯವನ್ನು ಜಯಿಸಿದವನಿಗೂ ಪ್ರಯತ್ನ ಮಾಡತಕ್ಕವನಿಗೂ ತತ್ವಜ್ಞಾನಿಗೂ ಅವಶ್ಯಕವಾಗಿ ಹೇಳಬೇಕು.

ಕರಾಲ ಮಾ ತೇ ಭಯಮಸ್ತಿ ಕಿಂಚಿ-
ದೇತಚ್ಛ್ರುತಂ ಬ್ರಹ್ಮ ಪರಂ ತ್ವಯಾದ್ಯ ।
ಯಥಾವದುಕ್ತಂ ಪರಮಂ ಪವಿತ್ರಂ
ವಿಶೋಕಮತ್ಯಂತಮನಾದಿಮಧ್ಯಂ ॥ ೩೮ ॥

ಅಗಾಧಮೇತದಜರಾಮರಂ ಚ
ನಿರಾಮಯಂ ವೀತಭಯಂ ಶಿವಂ ಚ ।
ಸಮೀಕ್ಷ್ಯ ಮೋಹಂ ಪರವಾದಸಂಜ್ಞ-
ಮೇತಸ್ಯ ತತ್ತ್ವಾರ್ಥಮಿಮಂ ವಿದಿತ್ವಾ ॥ ೩೯ ॥

ಅವಾಪ್ತಮೇತದ್ಧಿ ಪುರಾ ಸನಾತನಾ-
ದ್ಧಿರಣ್ಯಗರ್ಭಾದ್ಧಿ ತತೋ ನರಾಧಿಪ ।
ಪ್ರಸಾದ್ಯ ಯತ್ನೇನ ತಮುಗ್ರತೇಜಸಂ
ಸನಾತನಂ ಬ್ರಹ್ಮ ಯಥಾ ತ್ವಯೈತತ್ ॥ ೪೦ ॥

೩೮-೪೦. ಎಲೈ ಕರಾಲನೇ, ನೀನು ಈ ಪರಬ್ರಹ್ಮತತ್ತ್ವವನ್ನು ಈ ದಿವಸ ಕೇಳಿದುದರಿಂದ ನಿನಗೆ ಯಾವ ಭಯವೂ ಇರುವುದಿಲ್ಲ. ದುಃಖಸಂಬಂಧ ವಿಲ್ಲದ ಆದಿಮಧ್ಯಾಂತ್ಯವಿಲ್ಲದ ಪವಿತ್ರವಾದ ಶೂನ್ಯವಾದ ಪರತತ್ತ್ವವನ್ನು ಯಥಾ ಸ್ಥಿತವಾಗಿ (ಇದ್ದುದು ಇದ್ದಂತೆ) ಹೇಳಿರುವೆನು. ಈ ತತ್ತ್ವವು ಬಹು ದೊಡ್ಡದು. ಮುಪ್ಪು ಮರಣವಿಲ್ಲದುದು. ರೋಗಬಾಧೆಯೂ, ಭಯವೂ ಇಲ್ಲದುದು. ಮಂಗಳಕರವಾದುದು. ತತ್ತ್ವೇತರವಾದವೆಂಬುದು ಅಜ್ಞಾನವೆಂದು ತಿಳಿದು ಈ ತತ್ತ್ವಾರ್ಥವನ್ನು ಮನಸ್ಸಿನಲ್ಲಿ ನಿರ್ಧರಿಸು. ಎಲೈ ರಾಜನೇ, ಈ ತತ್ತ್ವವನ್ನು ಅನಾದಿಯಾದ ಹಿರಣ್ಯಗರ್ಭನು ಮೊದಲು ಪಡೆದನು. ಮಹಾ ತೇಜೋವಂತ ನಾದ ಆ ಹಿರಣ್ಯಗರ್ಭನ ಅನುಗ್ರಹದಿಂದ ಶಿಷ್ಯಪರಂಪರೆಯಿಂದ ಬಹಳ ಪ್ರಯತ್ನಪೂರ್ವಕವಾಗಿ ನಾನು ಪಡೆದು ನಿನಗೆ ಹೇಳಿರುವೆನು.

ಪೃಷ್ಟಸ್ತ್ವಯಾ ಚಾಸ್ಮಿ ಯಥಾ ನರೇಂದ್ರ
ತಥಾ ಮಯೇದಂ ತ್ವಯಿ ನೋಕ್ತಮನ್ಯತ್ ।
ಯಥಾವಾಪ್ತಂ ಬ್ರಹ್ಮಣೋ ಮೇ ನರೇಂದ್ರ
ಮಹಾಜ್ಞಾನಂ ಮೋಕ್ಷವಿದಾಂ ಪರಾಯಣಂ ॥ ೪೧ ॥

॥ ವ್ಯಾಸ ಉವಾಚ ॥

ಏತದುಕ್ತಂ ಪರಂ ಬ್ರಹ್ಮ ಯಸ್ಮಾನ್ನಾವರ್ತತೇ ಪುನಃ ।
ಪಂಚವಿಂಶಂ ಮುನಿಶ್ರೇಷ್ಠಾ ವಸಿಷ್ಠೇನ ಯಥಾ ಪುರಾ ॥ ೪೨ ॥

ಪುನರಾವೃತ್ತಿಮಾಪ್ನೋತಿ ಪರಮಂ ಜ್ಞಾನಮವ್ಯಯಂ ।
ನಾತಿ ಬುಧ್ಯತಿ ತತ್ತ್ವೇನ ಬುಧ್ಯಮಾನೋಽಜರಾಮರಂ ॥ ೪೩ ॥

ಏತನ್ನಿಃಶ್ರೇಯಸಕರಂ ಜ್ಞಾನಂ ಭೋಃ ಪರಮಂ ಮಯಾ ।
ಕಥಿತಂ ತತ್ತ್ವತೋ ವಿಪ್ರಾಃ ಶ್ರುತ್ವಾ ದೇವರ್ಷಿತೋ ದ್ವಿಜಾಃ ॥ ೪೪ ॥

ಹಿರಣ್ಯಗರ್ಭಾದೃಷಿಣಾ ವಸಿಷ್ಠೇನ ಸಮಾಹೃತಂ ।
ವಸಿಷ್ಠಾದೃಷಿಶಾರ್ದೂಲೋ ನಾರದೋಽವಾಪ್ತವಾನಿದಂ ॥ ೪೫ ॥

---

೪೧. ಎಲೈ ರಾಜನೇ, ನೀನು ಕೇಳಿದ ಪ್ರಶ್ನೆಗೆ ತಕ್ಕ ಉತ್ತರವನ್ನು ಹೇಳಿರುವೆನು. ಪ್ರಶ್ನೆಗೆ ವಿರುದ್ಧವಾದ ಬೇರೆಯ ಉತ್ತರವನ್ನು ಹೇಳಿಲ್ಲ. ಬ್ರಹ್ಮನು ನನಗೆ ಹೇಳಿದಂತೆ ಮೋಕ್ಷಜ್ಞಾನವುಳ್ಳವರಿಗೆ ಶ್ರೇಷ್ಠವಾದ ವಿಶ್ರಾಂತಿ ಸ್ಥಾನರೂಪವಾದ ಜ್ಞಾನವನ್ನು ನಿನಗೆ ಹೇಳಿರುವೆನು ಎಂದನು.

೪೨-೪೮. ವ್ಯಾಸನಿಂತೆಂದನು:--ಎಲೈ ಋಷಿಶ್ರೇಷ್ಠರೇ, ಇಪ್ಪತ್ತೈದನೆಯ ತತ್ವವೂ ಪುನರ್ಜನ್ಮವಿಲ್ಲದುದೂ ಆದ ಪರಬ್ರಹ್ಮಸ್ವರೂಪವನ್ನು ಹಿಂದೆ ವಸಿಷ್ಠ ಮಹಾಮುನಿಯು ಹೇಳಿದಂತೆಯೇ ಹೇಳಿರುವೆನು. ನಾಶರಹಿತವಾದ ಈ ಶ್ರೇಷ್ಠವಾದ ಜ್ಞಾನವನ್ನು ತಿಳಿಯುವವನು ಪುನರ್ಜನ್ಮವನ್ನು ಹೊಂದುವನು. ತಿಳಿದವನು ಮುಪ್ಪು ಸಾವು ಇಲ್ಲದ ಮೋಕ್ಷವನ್ನು ಪಡೆವನು. ಎಲೈ ಬ್ರಾಹ್ಮಣರೇ, ಮೋಕ್ಷವನ್ನುಂಟುಮಾಡುವ ಈ ಶ್ರೇಷ್ಠವಾದ ಜ್ಞಾನವನ್ನು ದೇವರ್ಷಿಯಾದ ನಾರದನು ನನಗೆ ಹೇಳಿದನು. ಬ್ರಹ್ಮನು ವಸಿಷ್ಠನಿಗೂ, ವಸಿಷ್ಠನು ನಾರದ

ನಾರದಾದ್ವಿದಿತಂ ಮಹ್ಯಮೇತದುಕ್ತಂ ಸನಾತನಂ ।
ಮಾ ಶುಚಧ್ವಂ ಮುನಿಶ್ರೇಷ್ಠಾಃ ಶ್ರುತ್ವೈತತ್ಪರಮಂ ಪದಂ ॥ ೪೬ ॥

ಯೇನ ಕ್ಷರಾಕ್ಷರೇ ಭಿನ್ನೇ ನ ಭಯಂ ತಸ್ಯ ವಿದ್ಯತೇ ।
ವಿದ್ಯತೇ ತು ಭಯಂ ಯಸ್ಯ ಯೋ ನೈನಂ ವೇತ್ತಿ ತತ್ತ್ವತಃ ॥ ೪೭ ॥

ಅವಿಜ್ಞಾನಾಚ್ಚ ಮೂಢಾತ್ಮಾ ಪುನಃ ಪುನರುಪದ್ರವಾನ್ ।
ಪ್ರೇತ್ಯ ಜಾತಿಸಹಸ್ರಾಣಿ ಮರಣಾಂತಾನ್ಯುಪಾಶ್ನುತೇ ॥ ೪೮ ॥

ದೇವಲೋಕಂ ತಥಾ ತಿರ್ಯಗ್ಜನ್ಮಾನುಷ್ಯಮಪಿ ಚಾಶ್ನುತೇ ।
ಯದಿ ವಾ ಮುಚ್ಯತೇ ವಾಪಿ ತಸ್ಮಾದಜ್ಞಾನಸಾಗರಾತ್ ॥ ೪೯ ॥

ಅಜ್ಞಾನಸಾಗರೇ ಘೋರೇ ಹ್ಯವ್ಯಕ್ತಾಗಾಧ ಉಚ್ಯತೇ ।
ಅಹನ್ಯಹನಿ ಮಜ್ಜಂತಿ ಯತ್ರ ಭೂತಾನಿ ಭೋ ದ್ವಿಜಾಃ ॥ ೫೦ ॥

ನಿಗೂ ಈ ಜ್ಞಾನವನ್ನು ಉಪದೇಶಿಸಿದನು. ನಾರದನಿಂದ ನಾನು ಪಡೆದ ಅನಾದಿಯಾದ ಈ ಜ್ಞಾನವನ್ನು ನಿಮಗೆ ಹೇಳಿರುವೆನು. ಇದನ್ನು ನೀವು ಕೇಳಿದುದರಿಂದ ದುಃಖಪಡಬೇಕಾದುದಿಲ್ಲ. ಕ್ಷರಾಕ್ಷರಸ್ವರೂಪರಾದ ಪ್ರಕೃತಿ ಪುರುಷರನ್ನು ಯಥಾಸ್ಥಿತವಾಗಿ ಯಾರು ತಿಳಿಯುವುದಿಲ್ಲವೋ ಅವರಿಗೆ ಭಯವಿರುವುದು. ಯಾರು ತಿಳಿದಿರುವರೋ ಅವರಿಗೆ ಭಯವಿರುವುದಿಲ್ಲ. ಮೂಢರು ಇದನ್ನು ತಿಳಿಯದುದರಿಂದ ಮತ್ತೆಮತ್ತೆ ದುಃಖವನ್ನನುಭವಿಸಿ ಅನೇಕ ಜನ್ಮಗಳನ್ನು ಪಡೆದು ಮರಣಾಂತವಾಗಿ ಬಾಧೆಯನ್ನನುಭವಿಸುವರು.

೪೯-೫೧. ಅಜ್ಞಾನಿಯಾದ ಜೀವನು ತನ್ನ ಕರ್ಮಫಲಾನುಸಾರವಾಗಿ ದೇವಲೋಕ, ಮನುಷ್ಯಲೋಕ, ಪ್ರಾಣಿಗಳ ಲೋಕಗಳನ್ನು ಮತ್ತೆಮತ್ತೆ ಪಡೆಯುವನು. ಅಕಸ್ಮತ್ತಾಗಿ ಅಜ್ಞಾನಸಮುದ್ರದಿಂದ ಬಿಡುಗಡೆಯನ್ನು ಹೊಂದಿ ಮೋಕ್ಷವನ್ನು ಪಡೆವನು. ಎಲೈ ಬ್ರಾಹ್ಮಣರೇ, ಅಜ್ಞಾನವೆಂಬ ದೊಡ್ಡ

ತಸ್ಮಾದಗಾಧಾದವ್ಯಕ್ತಾದುಪಕ್ಷೀಣಾತ್ಸನಾತನಾತ್ ।
ತಸ್ಮಾದ್ಯೂಯಂ ವಿರಜಸ್ಕಾ ವಿತಮಸ್ಕಾಶ್ಚ ಭೋ ದ್ವಿಜಾಃ ॥ ೫೦ ॥

ಏವಂ ಮಯಾ ಮುನಿಶ್ರೇಷ್ಠಾಃ ಸಾರಾತ್ಸಾರತರಂ ಪರಂ ।
ಕಥಿತಂ ಪರಮಂ ಮೋಕ್ಷಂ ಯಂ ಜ್ಞಾತ್ವಾ ನ ನಿವರ್ತತೇ ॥ ೫೧ ॥

ನ ನಾಸ್ತಿಕಾಯ ದಾತವ್ಯಂ ನಾಭಕ್ತಾಯ ಕದಾಚನ ।
ನ ದುಷ್ಟಮತಯೇ ವಿಪ್ರಾ ನ ಶ್ರದ್ಧಾವಿಮುಖಾಯ ಚ ॥ ೫೨ ॥

**ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ವಸಿಷ್ಠಕರಾಲಜನಕಸಂವಾದ-
ಸಮಾಪ್ತಿನಿರೂಪಣಂ ನಾಮ ಪಂಚಚತ್ವಾರಿಂಶ-
ದಧಿಕದ್ವಿಶತತಮೋಽಧ್ಯಾಯಃ**

ಸಮುದ್ರದಲ್ಲಿ ಪ್ರಕೃತಿಯೆಂಬ ದೊಡ್ಡ ಹಳ್ಳವಿರುವುದು. ಅದರಲ್ಲಿ ಜೀವಗಳೆಲ್ಲ ಪ್ರತಿದಿನವೂ ಮುಳುಗುತ್ತಿರುವುವು. ನೀವು ರಜಸ್ತಮೋಗುಣಗಳನ್ನು ಬಿಟ್ಟು ಆ ಹಳ್ಳದಲ್ಲಿ ಮುಳುಗುವ ಕಷ್ಟವನ್ನು ತಪ್ಪಿಸಿಕೊಳ್ಳಿರಿ.

೫೧-೫೨. ನಾನು ನಿಮಗೆ ಸಾರತರವಾದ ಮೋಕ್ಷಸ್ವರೂಪವನ್ನು ಹೇಳಿರುವೆನು. ಇದನ್ನು ತಿಳಿದವರಿಗೆ ಪುನರ್ಜನ್ಮವಿರುವುದಿಲ್ಲ. ಇದನ್ನು ವೇದಶಾಸ್ತ್ರಗಳಲ್ಲಿ ನಂಬಿಕೆಯಿಲ್ಲದವನಿಗೂ ಭಕ್ತನಲ್ಲದವನಿಗೂ ಆಸಕ್ತಿಯಿಲ್ಲ ದವನಿಗೂ ಹೇಳಬಾರದು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಸಿಷ್ಠಕರಾಳಜನಕಸಂವಾದ ಸಮಾಪ್ತಿ
ನಿರೂಪಣವೆಂಬ ಇನ್ನೂರನಲವತ್ತೈದನೆಯ ಅಧ್ಯಾಯವು
ಮುಗಿದುದು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಷಟ್ಚತ್ವಾರಿಂಶದಧಿಕದ್ವಿಶತತಮೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಏವಂ ಪುರಾ ಮುನೀನ್ವ್ಯಾಸಃ ಪುರಾಣಂ ಶ್ಲಕ್ಷ್ಣಯಾ ಗಿರಾ ।
ದಶಾಷ್ಟದೋಷರಹಿತೈರ್ವಾಕ್ಯೈಃ ಸಾರತರೈರ್ದ್ವಿಜಾಃ ॥ ೧ ॥

ಪೂರ್ಣಮಸ್ತಮಲೈಃ ಶುದ್ಧೈರ್ನಾನಾಶಾಸ್ತ್ರಸಮುಚ್ಚಯೈಃ ।
ಜಾತಿಶುದ್ಧಸಮಾಯುಕ್ತಂ ಸಾಧುಶಬ್ದೋಪಶೋಭಿತಂ ॥ ೨ ॥

ಪೂರ್ವಪಕ್ಷೋಕ್ತಿಸಿದ್ಧಾಂತಪರಿನಿಷ್ಠಾಸಮನ್ವಿತಂ ।
ಶ್ರಾವಯಿತ್ವಾ ಯಥಾನ್ಯಾಯಂ ವಿರರಾಮ ಮಹಾಮತಿಃ ॥ ೩ ॥

ಇನ್ನೂರನಲವತ್ತಾರನೆಯ ಅಧ್ಯಾಯವು

೧-೩. ಲೋಮಹರ್ಷಣನು ಹೇಳಿದನು :—ಈರೀತಿಯಲ್ಲಿ ವ್ಯಾಸ ಮಹರ್ಷಿಯು ಹದಿನೆಂಟುಬಗೆಯ ವಾಕ್ಯದೋಷಗಳಿಲ್ಲದಂತೆ ಸಾರವಾದ ಮೃದುವಾದ ಮಾತಿನಿಂದಲೂ ದೋಷರಹಿತವೂ ಶುದ್ಧವೂ ಆದ ಶಾಸ್ತ್ರಾರ್ಥಗಳಿಂದಲೂ ಜಾತಿಶುದ್ಧವೂ ಸಾಧು ಶಬ್ದಗಳೂ ಪೂರ್ವಪಕ್ಷಸಿದ್ಧಾಂತಗಳೂ ಉಳ್ಳ ಮಾತುಗಳಿಂದಲೂ ಕೂಡಿದ ಪುರಾಣವನ್ನು ಮುನಿಗಳಿಗೆ ಹೇಳಿ ಸುಮ್ಮನಾದನು.

ತೇऽಪಿ ಶ್ರುತ್ವಾ ಮುನಿಶ್ರೇಷ್ಠಾಃ ಪುರಾಣಂ ವೇದಸಂಮಿತಂ ।
ಆದ್ಯಂ ಬ್ರಾಹ್ಮಾಭಿಧಾನಂ ಚ ಸರ್ವವಾಂಛಾಫಲಪ್ರದಂ ॥ ೪ ॥

ಹೃಷ್ಟಾ ಬಭೂವುಃ ಸುಪ್ರೀತಾ ವಿಸ್ಮಿತಾಶ್ಚ ಪುನಃ ಪುನಃ ।
ಪ್ರಶಶಂಸುಸ್ತದಾ ವ್ಯಾಸಂ ಕೃಷ್ಣದ್ವೈಪಾಯನಂ ಮುನಿಂ ॥ ೫ ॥

॥ ಮುನಯ ಊಚುಃ ॥

ಅಹೋ ತ್ವಯಾ ಮುನಿಶ್ರೇಷ್ಠ ಪುರಾಣಂ ಶ್ರುತಿಸಂಮಿತಂ ।
ಸರ್ವಾಭಿಪ್ರೇತಫಲದಂ ಸರ್ವಪಾಪಹರಂ ಪರಂ ॥ ೬ ॥

ಪ್ರೋಕ್ತಂ ಶ್ರುತಂ ತಥಾಸ್ಮಾಭಿರ್ವಿಚಿತ್ರಪದಮಕ್ಷರಂ ।
ನ ತೇऽಸ್ತ್ಯವಿದಿತಂ ಕಿಂಚಿತ್ತ್ರಿಷು ಲೋಕೇಷು ವೈ ಪ್ರಭೋ ॥ ೭ ॥

ಸರ್ವಜ್ಞಸ್ತ್ವಂ ಮಹಾಭಾಗ ದೇವೇಷ್ವಿವ ಬೃಹಸ್ಪತಿಃ ।
ನಮಸ್ಯಾಮೋ ಮಹಾಪ್ರಾಜ್ಞಂ ಬ್ರಹ್ಮಿಷ್ಠಂ ತ್ವಾಂ ಮಹಾಮುನಿಂ ॥ ೮ ॥

ಆ ಮುನಿಗಳು ವೇದಕ್ಕೆ ಸಮಾನವಾದ, ಸಕಲ ಇಷ್ಟಾರ್ಥಗಳನ್ನು ಕೊಡುವ, ಮೊದಲನೆಯದಾದ ಬ್ರಾಹ್ಮಪುರಾಣವನ್ನು ಕೇಳಿ ಸಂತೋಷದಿಂದ ಮತ್ತೆ ಮತ್ತೆ ಆಶ್ಚರ್ಯಪಡುತ್ತ ಕೃಷ್ಣದ್ವೈಪಾಯನ ವ್ಯಾಸಮುನಿಯನ್ನು ಹೊಗಳಿದರು.

೬–೧೦. ಋಷಿಗಳು ಹೇಳಿದರು :—ಎಲೈ ಋಷಿಶ್ರೇಷ್ಠನೇ, ನೀನು ವೇದಕ್ಕೆ ಸಮನಾದ ಸಮಸ್ತ ಇಷ್ಟಾರ್ಥಗಳನ್ನೂ ಕೊಡುವ, ಸಮಸ್ತ ಪಾಪಗಳನ್ನೂ ನಾಶಮಾಡುವ ಪುರಾಣವನ್ನು ಹೇಳಿದೆ. ವಿಚಿತ್ರವಾದ ಪದಗಳಿಂದಲೂ ಅಕ್ಷರಗಳಿಂದಲೂ ಕೂಡಿದ ನಿನ್ನ ವಾಕ್ಯಗಳನ್ನು ನಾವು ಕೇಳಿದೆವು. ಮಹಾಮಹಿಮನಾದ ನಿನಗೆ ಮೂರು ಲೋಕಗಳಲ್ಲಿಯೂ ತಿಳಿಯದುದು ಯಾವುದೂ ಇರುವುದಿಲ್ಲ. ದೇವತೆಗಳಲ್ಲಿ ಬೃಹಸ್ಪತಿಯಂತೆ ನೀನು ಸರ್ವಜ್ಞನಾಗಿರುವೆ. ಬ್ರಹ್ಮಜ್ಞಾನಿಯೂ ಮಹಾಬುದ್ಧಿವಂತನೂ ಮಹಾತಪಸ್ವಿಯೂ ಆದ ನಿನಗೆ ನಮಸ್ಕಾರವನ್ನು ಮಾಡುವೆವು. ನೀನು ಭಾರತದಲ್ಲಿ ವೇದಾರ್ಥವನ್ನು ವಿಸ್ತಾರವಾಗಿ ಹೇಳಿರುವೆ. ನಿನ್ನ ಸಮಸ್ತ ಗುಣಗಳನ್ನೂ ಹೇಳಲು ಯಾರಿಗೂ ಶಕ್ತಿ

ಯೇನ ತ್ವಯಾ ತು ವೇದಾರ್ಥಾ ಭಾರತೇ ಪ್ರಕಟೀಕೃತಾಃ ।
ಕಃ ಶಕ್ನೋತಿ ಗುಣಾನ್ವಕ್ತುಂ ತವ ಸರ್ವಾನ್ಮಹಾಮುನೇ ॥ ೯ ॥

ಅಧೀತ್ಯ ಚತುರೋ ವೇದಾನ್ಸಾಂಗಾನ್ವ್ಯಾಕರಣಾನಿ ಚ ।
ಕೃತವಾನ್ಭಾರತಂ ಶಾಸ್ತ್ರಂ ತಸ್ಮೈ ಜ್ಞಾನಾತ್ಮನೇ ನಮಃ ॥ ೧೦ ॥

ನಮೋಽಸ್ತು ತೇ ವ್ಯಾಸ ವಿಶಾಲಬುದ್ಧೇ
ಫುಲ್ಲಾರವಿಂದಾಯತಪತ್ರನೇತ್ರ ।
ಯೇನ ತ್ವಯಾ ಭಾರತತೈಲಪೂರ್ಣಃ
ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ॥ ೧೧ ॥

ಅಜ್ಞಾನತಿಮಿರಾನ್ಧಾನಾಂ ಭ್ರಾಮಿತಾನಾಂ ಕುದೃಷ್ಟಿಭಿಃ ।
ಜ್ಞಾನಾಂಜನಶಲಾಕೇನ ತ್ವಯಾ ಚೋನ್ಮೀಲಿತಾ ದೃಶಃ ॥ ೧೨ ॥

ಏವಮುಕ್ತ್ವಾ ಸಮಭ್ಯರ್ಚ್ಯ ವ್ಯಾಸಂ ತೇ ಚೈವ ಪೂಜಿತಾಃ ।
ಜಗ್ಮುರ್ಯಥಾಗತಂ ಸರ್ವೇ ಕೃತಕೃತ್ಯಾಃ ಸ್ವಮಾಶ್ರಮಂ ॥ ೧೩ ॥

ಯಿಲ್ಲ. ಸಮಸ್ತ ಅಂಗಸಹಿತವಾದ ನಾಲ್ಕು ವೇದಗಳನ್ನೂ ವ್ಯಾಕರಣ ಶಾಸ್ತ್ರಗಳನ್ನೂ ಓದಿ ಭಾರತವೆಂಬ ಶಾಸ್ತ್ರವನ್ನು ಮಾಡಿರುವೆ. ಇಂತಹ ಜ್ಞಾನಸ್ವರೂಪನಾದ ನಿನಗೆ ನಮಸ್ಕಾರ ಮಾಡುತ್ತೇವೆ.

೧೧. ವಿಸ್ತಾರವಾದ ಬುದ್ಧಿಯುಳ್ಳ, ಅರಳಿದ ಕಮಲದ ದಳದಂತೆ ವಿಸ್ತಾರವಾದ ಕಣ್ಣುಗಳುಳ್ಳ ಎಲೈ ವ್ಯಾಸನೇ, ನೀನು ಭಾರತವೆಂಬ ಎಣ್ಣೆಯಿಂದ ತುಂಬಿದ ಜ್ಞಾನಸ್ವರೂಪವಾದ ದೀಪವನ್ನು ಹತ್ತಿಸಿರುವೆ. ನಿನಗೆ ನಮಸ್ಕಾರ ಮಾಡುವೆವು.

೧೨-೧೩. ಅಜ್ಞಾನವೆಂಬ ಕತ್ತಲೆಯಿಂದ ಕಣ್ಣುಕಾಣದೆ ಕುತ್ಸಿತವಾದ ನೋಟದಿಂದ ಭ್ರಾಂತರಾಗಿರುವ ಜನರ ಕಣ್ಣುಗಳನ್ನು ನೀನು ಜ್ಞಾನವೆಂಬ ಅಂಜನದ ಕಡ್ಡಿಯಿಂದ ತಿದ್ದಿರುವೆ ಎಂದು ಹೇಳಿ ವ್ಯಾಸನನ್ನು ಪೂಜಿಸಿ, ಕೃತಾರ್ಥರಾದ ಆ ಪೂಜ್ಯರಾದ ಋಷಿಗಳೆಲ್ಲರೂ ತಮ್ಮ ತಮ್ಮ ಆಶ್ರಮಗಳಿಗೆ ಪ್ರಯಾಣಮಾಡಿದರು.

ತಥಾ ಮಯಾ ಮುನಿಶ್ರೇಷ್ಠಾಃ ಕಥಿತಂ ಹಿ ಸನಾತನಂ ।
ಪುರಾಣಂ ಸುಮಹಾಪುಣ್ಯಂ ಸರ್ವಪಾಪಪ್ರಣಾಶನಂ ॥ ೧೪ ॥

ಯಥಾ ಭವದ್ಭಿಃ ಪೃಷ್ಟೋಽಹಂ ಸಂಪ್ರಶ್ನಂ ದ್ವಿಜಸತ್ತಮಾಃ ।
ವ್ಯಾಸಪ್ರಸಾದಾತ್ತತ್ಸರ್ವಂ ಮಯಾ ಸಂಪರಿಕೀರ್ತಿತಂ ॥ ೧೫ ॥

ಇದಂ ಗೃಹಸ್ಥೈಃ ಶ್ರೋತವ್ಯಂ ಯತಿಭಿರ್ಬ್ರಹ್ಮಚಾರಿಭಿಃ ।
ಧನಸೌಖ್ಯಪ್ರದಂ ನೃಣಾಂ ಪವಿತ್ರಂ ಪಾಪನಾಶನಂ ॥ ೧೬ ॥

ತಥಾ ಬ್ರಹ್ಮಪರೈರ್ವಿಪ್ರೈರ್ಬ್ರಾಹ್ಮಣಾದ್ಯೈಃ ಸುಸಂಯತೈಃ ।
ಶ್ರೋತವ್ಯಂ ಸುಪ್ರಯತ್ನೇನ ಸಮ್ಯಕ್ಶ್ರೇಯೋಽಭಿಕಾಂಕ್ಷಿಭಿಃ ॥ ೧೭ ॥

ಪ್ರಾಪ್ನೋತಿ ಬ್ರಾಹ್ಮಣೋ ವಿದ್ಯಾಂ ಕ್ಷತ್ರಿಯೋ ವಿಜಯಂ ರಣೇ ।
ವೈಶ್ಯಸ್ತು ಧನಮಕ್ಷಯ್ಯಂ ಶೂದ್ರಃ ಸುಖಮವಾಪ್ನುಯಾತ್ ॥ ೧೮ ॥

೧೪-೧೫. ಎಲೈ ಮುನಿಶ್ರೇಷ್ಠರೇ, ಸಮಸ್ತ ಪಾಪವನ್ನೂ ನಾಶಮಾಡುವ ವಿಶೇಷವಾದ ಪುಣ್ಯವನ್ನು ಕೊಡುವ, ಅನಾದಿಯಾದ ಈ ಬ್ರಾಹ್ಮಪುರಾಣವನ್ನು ನಿಮಗೆ ಹೇಳಿರುವೆನು. ನೀವು ಕೇಳಿದ ಪ್ರಶ್ನೆಗಳಿಗೆಲ್ಲ ವ್ಯಾಸರ ಅನುಗ್ರಹದಿಂದ ಉತ್ತರವನ್ನು ಹೇಳಿದೆನು.

೧೬-೧೭. ಈ ಪುರಾಣವನ್ನು ಬ್ರಹ್ಮಚಾರಿಗಳೂ ಗೃಹಸ್ಥರೂ ಯತಿಗಳೂ ಕೇಳಬೇಕು. ಇದು ಮನುಷ್ಯರಿಗೆ ಧರ್ಮಬುದ್ಧಿಯನ್ನೂ ಸೌಖ್ಯವನ್ನೂ ಕೊಡುವುದು. ಪರಿಶುದ್ಧವೂ ಪಾಪನಾಶಕವೂ ಆಗಿರುವದು ಒಳ್ಳೆಯ ಶ್ರೇಯಸ್ಸನ್ನಪೇಕ್ಷಿಸುವ, ಪರಬ್ರಹ್ಮದಲ್ಲಾಸಕ್ತರಾದ ಬ್ರಹ್ಮ, ಕ್ಷತ್ರಿಯ, ವೈಶ್ಯರು ಇಂದ್ರಿಯಗಳನ್ನು ಜಯಿಸಿ ಪ್ರಯತ್ನಪೂರ್ವಕವಾಗಿ ಈ ಪುರಾಣವನ್ನು ಕೇಳಬೇಕು.

೧೮-೨೦. ಈ ಪುರಾಣವನ್ನು ಕೇಳಿದ ಬ್ರಾಹ್ಮಣನು ವಿದ್ಯೆಯನ್ನೂ, ಕ್ಷತ್ರಿಯನು ಯುದ್ಧದಲ್ಲಿ ಜಯವನ್ನೂ, ವೈಶ್ಯನು ನಾಶವಾಗದ ಧನವನ್ನೂ, ಶೂದ್ರನು ಸುಖವನ್ನೂ ಪಡೆವರು. ಮನುಷ್ಯನು ಶುಚಿಯಾಗಿ ಯಾವ ಯಾವ ಇಷ್ಟಾರ್ಥಗಳನ್ನಪೇಕ್ಷಿಸಿ ಈ ಪುರಾಣಗಳನ್ನು ಕೇಳುವನೋ ಆ ಇಷ್ಟಾರ್ಥ

ಯಂ ಯಂ ಕಾಮಮಭಿಧ್ಯಾಯನ್ ಶೃಣೋತಿ ಪುರುಷಃ ಶುಚಿಃ ।
ತಂ ತಂ ಕಾಮಮವಾಪ್ನೋತಿ ನರೋ ನಾಸ್ತ್ಯತ್ರ ಸಂಶಯಃ ॥ ೧೯ ॥

ಪುರಾಣಂ ವೈಷ್ಣವಂ ಶ್ವೇತತ್ಸರ್ವಕಿಲ್ಬಿಷನಾಶನಂ ।
ವಿಶಿಷ್ಟಂ ಸರ್ವಶಾಸ್ತ್ರೇಭ್ಯಃ ಪುರುಷಾರ್ಥೋಪಪಾದಕಂ ॥ ೨೦ ॥

ಏತದ್ವೋ ಯನ್ಮಯಾಖ್ಯಾತಂ ಪುರಾಣಂ ವೇದಸಂಮಿತಂ ।
ಶ್ರುತೇಽಸ್ಮಿನ್ಸರ್ವದೋಷೋತ್ಥಃ ಪಾಪರಾಶಿಃ ಪ್ರಣಶ್ಯತಿ ॥ ೨೧ ॥

ಪ್ರಯಾಗೇ ಪುಷ್ಕರೇ ಚೈವ ಕುರುಕ್ಷೇತ್ರೇ ತಥಾರ್ಬುದೇ ।
ಉಪೋಷ್ಯ ಯದವಾಪ್ನೋತಿ ತದಸ್ಯ ಶ್ರವಣಾನ್ನರಃ ॥ ೨೨ ॥

ಯದಗ್ನಿಹೋತ್ರೇ ಸುಹುತೇ ವರ್ಷೇ ನಾಪ್ನೋತಿ ವೈ ಫಲಂ ।
ಮಹಾಪುಣ್ಯಮಯಂ ವಿಪ್ರಾಸ್ತದಸ್ಯ ಶ್ರವಣಾತ್ಸಕೃತ್ ॥ ೨೩ ॥

ಗಳನ್ನು ಪಡೆವನು. ಈ ವಿಷಯದಲ್ಲಿ ಸಂದೇಹವಿಲ್ಲ. ಈ ಪುರಾಣವು ವಿಷ್ಣು ಸಂಬಂಧವಾದುದು. ಎಲ್ಲಾ ಪಾಪಗಳನ್ನೂ ನಾಶಮಾಡುವುದು. ಸಮಸ್ತ ಶಾಸ್ತ್ರಗಳಿಗಿಂತಲೂ ದೊಡ್ಡದು. ಪುರುಷಾರ್ಥಗಳನ್ನು ಚೆನ್ನಾಗಿ ವಿವರಿಸಿ ತಿಳಿಸಿ ಕೊಡುವುದು.

೨೧–೨೫. ನಾನು ನಿಮಗೆ ಹೇಳಿದ ಈ ಪುರಾಣವು ವೇದಕ್ಕೆ ಸಮಾನವಾದುದು. ಇದನ್ನು ಕೇಳಿದರೆ ಸಮಸ್ತ ದೋಷಗಳಿಂದಲೂ ಉತ್ಪತ್ತಿಯಾದ ಪಾಪರಾಶಿಯು ನಾಶವಾಗುವುದು. ಪ್ರಯಾಗ, ಪುಷ್ಕರ, ಕುರುಕ್ಷೇತ್ರ, ಅರ್ಬುಧ ಕ್ಷೇತ್ರ, ಇವುಗಳಲ್ಲಿ ಉಪವಾಸ ಮಾಡಿದರೆ ಯಾವ ಪುಣ್ಯ ಬರುವುದೋ ಆ ಪುಣ್ಯವು ಈ ಪುರಾಣವನ್ನು ಕೇಳುವುದರಿಂದ ಉಂಟಾಗುವುದು. ಒಂದಾವರ್ತಿ ಈ ಪುರಾಣವನ್ನು ಕೇಳುವದರಿಂದ ಉಂಟಾಗುವ ಪುಣ್ಯವು ಒಂದು ವರ್ಷದವರೆಗೆ ಅಗ್ನಿಹೋತ್ರವನ್ನು ಮಾಡುವುದರಿಂದಲೂ ಉಂಟಾಗುವುದಿಲ್ಲ. ಮನುಷ್ಯನು ಜ್ಯೇಷ್ಠ ಶುಕ್ಲ ದ್ವಾದಶಿಯ ದಿನ ಯಮುನಾನದಿಯ ನೀರಿನಲ್ಲಿ ಸ್ನಾನ

ಯಜ್ಜ್ಯೇಷ್ಠಶುಕ್ಲದ್ವಾದಶ್ಯಾಂ ಸ್ನಾತ್ವಾ ವೈ ಯಮುನಾಜಲೇ ।
ಮಥುರಾಯಾಂ ಹರಿಂ ದೃಷ್ಟ್ವಾ ಪ್ರಾಪ್ನೋತಿ ಪುರುಷಃ ಫಲಂ ॥ ೨೪ ॥

ತದಾಪ್ನೋತಿ ಫಲಂ ಸಮ್ಯಕ್ಸಮಾಧಾನೇನ ಕೀರ್ತನಾತ್
ಪುರಾಣೇಽಸ್ಯ ಹಿತೋ ವಿಪ್ರಾಃ ಕೇಶವಾರ್ಪಿತಮಾನಸಃ ॥ ೨೫ ॥

ಯತ್ಫಲಂ ಶ್ರಿಯಮಾಲೋಕ್ಯ ಪುರುಷೋಽಥ ಲಭೇನ್ನರಃ ।
ತತ್ಫಲಂ ಸಮವಾಪ್ನೋತಿ ಯಃ ಪಠೇಚ್ಛೃಣುಯಾದಪಿ ॥ ೨೬ ॥

ಇದಂ ಯಃ ಶ್ರದ್ಧಯಾ ನಿತ್ಯಂ ಪುರಾಣಂ ವೇದಸಂಮಿತಂ ।
ಯಃ ಪಠೇಚ್ಛೃಣುಯಾನ್ಮರ್ತ್ಯಃ ಸ ಯಾತಿ ಭುವನಂ ಹರೇಃ ॥ ೨೭ ॥

ಶ್ರಾವಯೇದ್ಬ್ರಾಹ್ಮಣೋ ಯಸ್ತು ಸದಾ ಪರ್ವಸು ಸಂಯುತಃ ।
ಏಕಾದಶ್ಯಾಂ ದ್ವಾದಶ್ಯಾಂ ಚ ವಿಷ್ಣುಲೋಕಂ ಸ ಗಚ್ಛತಿ ॥ ೨೮ ॥

ಇದಂ ಯಶಸ್ಯಮಾಯುಷ್ಯಂ ಸುಖದಂ ಕೀರ್ತಿವರ್ಧನಂ ।
ಬಲಪುಷ್ಟಿಪ್ರದಂ ನೃಣಾಂ ಧನ್ಯಂ ದುಃಸ್ವಪ್ನನಾಶನಂ ॥ ೨೯ ॥

ವನ್ನು ಮಾಡಿ ಮಥುರೆಯಲ್ಲಿರುವ ವಿಷ್ಣುವನ್ನು ನೋಡಿದರೆ ಯಾವ ಫಲವನ್ನು ಪಡೆಯುವನೋ ಆ ಫಲವನ್ನು ವಿಷ್ಣುವಿನಲ್ಲಿ ಮನಸ್ಸನ್ನಿಟ್ಟು ಈ ಪುರಾಣವನ್ನು ಸಾವಧಾನದಿಂದ ಪಾರಾಯಣವನ್ನು ಮಾಡಿದವನು ಪಡೆಯುವನು.

೨೬-೩೧. ವೇದಕ್ಕೆ ಸಮಾನವಾದ ಈ ಪುರಾಣವನ್ನು ಅತ್ಯಂತ ಆಸಕ್ತಿಯಿಂದ ಯಾವ ಮನುಷ್ಯನು ಪಾರಾಯಣವನ್ನು ಮಾಡುವನೋ ಅಥವಾ ಕೇಳುವನೋ ಅವನು ವಿಷ್ಣುಲೋಕಕ್ಕೆ ಹೋಗುವನು. ಬ್ರಾಹ್ಮಣನು ಅಮಾವಾಸ್ಯೆ, ಪೂರ್ಣಿಮೆ, ಏಕಾದಶಿ, ದ್ವಾದಶಿ, ಈ ದಿನಗಳಲ್ಲಿ ಈ ಪುರಾಣವನ್ನು ಇತರರಿಗೆ ಹೇಳಿದರೆ ಅವನೂ ವಿಷ್ಣುಲೋಕಕ್ಕೆ ಹೋಗುವನು. ಈ ಪುರಾಣವು ಮನುಜರಿಗೆ ಕೀರ್ತಿ, ಆಯುಸ್ಸು, ಸುಖ, ಬಲ, ಪುಷ್ಟಿ, ಇವುಗಳನ್ನುಂಟುಮಾಡುವುದು.

ತ್ರಿಸಂಧ್ಯಂ ಯಃ ಪಠೇದ್ವಿದ್ವಾನ್ ಶ್ರದ್ಧಯಾ ಸುಸಮಾಹಿತಃ ।
ಇದಂ ವರಿಷ್ಠಮಾಖ್ಯಾನಂ ಸ ಸರ್ವಸಿಾಪ್ಸಿತ್ತಂ ಲಭೇತ್ ॥ ೩೦ ॥

ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ।
ಭಯಾದ್ವಿಮುಚ್ಯತೇ ಭೀತ ಆಪದಾಪನ್ನ ಆಪದಃ ॥ ೩೧ ॥

ಜಾತಿಸ್ಮರತ್ವಂ ವಿದ್ಯಾಂ ಚ ಪುತ್ರಾನ್ಮೇಧಾಂ ಪಶೂನ್ಧೃತಿಂ ।
ಧರ್ಮಂ ಚಾರ್ಥಂ ಚ ಕಾಮಂ ಚ ಮೋಕ್ಷಂ ತು ಲಭತೇ ನರಃ ॥ ೩೨ ॥

ಯಾನ್ಯಾನ್ಕಾಮಾನಭಿಪ್ರೇತ್ಯ ಪಠೇತ್ಪ್ರಯತಮಾನಸಃ ।
ತಾಂಸ್ತಾನ್ಸರ್ವಾನವಾಪ್ನೋತಿ ಪುರುಷೋ ನಾತ್ರ ಸಂಶಯಃ ॥ ೩೩ ॥

ದುಸ್ಸಂಗಗಳನ್ನು ನಾಶಮಾಡುವುದು. ವಿದ್ವಾಂಸನು ಆಸಕ್ತಿಯಿಂದ ಮೂರು ಸಂಧ್ಯೆಯಲ್ಲಿಯೂ ಪಾರಾಯಣವನ್ನು ಮಾಡಿದರೆ ಸಮಸ್ತ ಇಷ್ಟಾರ್ಥಗಳನ್ನೂ ಪಡೆದು ಭಯ, ಆಪತ್ತು, ರೋಗ, ಬಂಧನ, ಇವುಗಳ ಬಿಡುಗಡೆಯನ್ನು ಹೊಂದುವನು.

೩೨-೩೪. ಪ್ರಯತ್ನಪೂರ್ವಕವಾದ ಮನಸ್ಸಿನಿಂದ ಈ ಪುರಾಣವನ್ನು ಪಾರಾಯಣ ಮಾಡಿದವನು ಹಿಂದಿನ ಜನ್ಮದ ಸ್ಮರಣೆಯನ್ನೂ ವಿದ್ಯೆಯನ್ನೂ ಪುತ್ರರನ್ನೂ ಬುದ್ಧಿಶಕ್ತಿಯನ್ನೂ ಪಶುಗಳನ್ನೂ, ಧೈರ್ಯವನ್ನೂ ಧರ್ಮಾರ್ಥ ಕಾಮಮೋಕ್ಷವೆಂಬ ನಾಲ್ಕು ಪುರುಷಾರ್ಥಗಳನ್ನೂ ಹೊಂದುವನು. ಮತ್ತೂ ಯಾವ ಯಾವ ಇಷ್ಟಾರ್ಥಗಳನ್ನುದ್ದೇಶಿಸಿ ಪಾರಾಯಣವನ್ನು ಮಾಡುವನೋ ಆ ಎಲ್ಲಾ ಇಷ್ಟಾರ್ಥಗಳನ್ನೂ ಪಡೆವುದರಲ್ಲಿ ಸಂದೇಹವಿಲ್ಲ. ಸ್ವರ್ಗಮೋಕ್ಷ ಗಳನ್ನು ಕೊಡುವ ಈ ಪುರಾಣವನ್ನು ಯಾವನು ಯಾವಾಗಲೂ ಕೇಳುತ್ತಿರು ವನೋ ಅವನು ಶುದ್ಧನಾಗಿ ಭಕ್ತಿಯಿಂದಲೂ, ಏಕಾಗ್ರಚಿತ್ತದಿಂದಲೂ ಲೋಕ

ಯಶ್ಚೇದಂ ಸತತಂ ಶೃಣೋತಿ ಮನುಜಃ ಸ್ವರ್ಗಾಪವರ್ಗಪ್ರದಂ
ವಿಷ್ಣುಂ ಲೋಕಗುರುಂ ಪ್ರಣಮ್ಯ ವರದಂ ಭಕ್ತ್ಯೈಕಚಿತ್ತಃ ಶುಚಿಃ ।
ಭುಕ್ತ್ವಾ ಚಾತ್ರ ಸುಖಂ ವಿಮುಕ್ತಕಲುಷಃ ಸ್ವರ್ಗೇ ಚ ದಿವ್ಯಂ ಸುಖಂ
ಪಶ್ಚಾದ್ಯಾತಿ ಹರೇಃ ಪದಂ ಸುವಿಮಲಂ ಮುಕ್ತೋ ಗುಣೈಃ ಪ್ರಾಕೃತೈಃ ॥

ತಸ್ಮಾದ್ವಿಪ್ರವರೈಃ ಸ್ವಧರ್ಮನಿರತೈರ್ಮುಕ್ತ್ಯೇಕಮಾರ್ಗೇಪ್ಸುಭಿ-
ಸ್ತದ್ವತ್ಕ್ಷತ್ರಿಯಪುಂಗವೈಸ್ತು ನಿಯತೈಃ ಶ್ರೇಯೋರ್ಥಿಭಿಃ ಸರ್ವದಾ ।
ವೈಶ್ಯೈಶ್ಚಾನುದಿನಂ ವಿಶುದ್ಧಕುಲಜೈಃ ಶೂದ್ರೈಸ್ತಥಾ ಧಾರ್ಮಿಕೈಃ
ಶ್ರೋತವ್ಯಂ ತ್ವಿದಮುತ್ತಮಂ ಬಹುಫಲಂ ಧರ್ಮಾರ್ಥಮೋಕ್ಷಪ್ರದಂ ॥ ೩೫ ॥

ಧರ್ಮೇ ಮತಿರ್ಭವತು ವಃ ಪುರುಷೋತ್ತಮಾನಾಂ
ಸ ಹ್ಯೇಕ ಏವ ಪರಲೋಕಗತಸ್ಯ ಬಂಧುಃ ।
ಅರ್ಥಾಃ ಸ್ತ್ರಿಯಶ್ಚ ನಿಪುಣೈರಪಿ ಸೇವ್ಯಮಾನಾ
ನೈವ ಪ್ರಭಾವಮುಪಯಾಂತಿ ನ ಚ ಸ್ಥಿರತ್ವಂ ॥ ೩೬ ॥

ಕ್ಕೆಲ್ಲ ಗುರುವಾದ ವಿಷ್ಣುವಿಗೆ ನಮಸ್ಕಾರವನ್ನು ಮಾಡಿ ಈ ಲೋಕದಲ್ಲಿ ಸುಖವನ್ನನುಭವಿಸಿ ಆಮೇಲೆ ಪ್ರಕೃತಿ ಸಂಬಂಧವಾದ ಗುಣಗಳಿಂದ ರಹಿತನಾಗಿ ನಿರ್ಮಲನಾದ ವೈಕುಂಠಕ್ಕೆ ಹೋಗುವನು.

೩೫. ಆದುದರಿಂದ ಸ್ವಧರ್ಮದಲ್ಲಿ ಆಸಕ್ತರೂ ಮುಕ್ತಿಮಾರ್ಗವನ್ನೇ ಅಪೇಕ್ಷಿಸುವವರೂ ಆದ ಬ್ರಾಹ್ಮಣಶ್ರೇಷ್ಠರೂ ಕೀರ್ತಿಯನ್ನಪೇಕ್ಷಿಸುವ ಸ್ವಧರ್ಮಾಸಕ್ತರಾದ ಕ್ಷತ್ರಿಯರೂ ಒಳ್ಳೆಯ ಕುಲದಲ್ಲಿ ಹುಟ್ಟಿದ ವೈಶ್ಯನೂ ಧರ್ಮಾತ್ಮರಾದ ಶೂದ್ರರೂ ಧರ್ಮ, ಅರ್ಥ, ಮೋಕ್ಷ ಮುಂತಾದ ಅನೇಕ ಫಲಗಳನ್ನು ಕೊಡತಕ್ಕ ಈ ಶ್ರೇಷ್ಠವಾದ ಪುರಾಣವನ್ನು ಕೇಳಬೇಕು.

೩೬. ಪುರುಷಶ್ರೇಷ್ಠರಾದ ನಮಗೆ ಧರ್ಮಬುದ್ಧಿಯೇ ಉಂಟಾಗಲಿ. ಆ ಧರ್ಮವೊಂದೇ ಪರಲೋಕಕ್ಕೆ ಹೋದ ಜೀವನಿಗೆ ಬಂಧುವಾದುದು. ಹಣ

ಧರ್ಮೇಣ ರಾಜ್ಯಂ ಲಭತೇ ಮನುಷ್ಯಃ
ಸ್ವರ್ಗಂ ಚ ಧರ್ಮೇಣ ನರಃ ಪ್ರಯಾತಿ ।
ಆಯುಶ್ಚ ಕೀರ್ತಿಂ ಚ ತಪಶ್ಚ ಧರ್ಮಂ
ಧರ್ಮೇಣ ಮೋಕ್ಷಂ ಲಭತೇ ಮನುಷ್ಯಃ ॥ ೩೭ ॥

ಧರ್ಮೋಽತ್ರ ಮಾತಾಪಿತರೌ ನರಸ್ಯ
ಧರ್ಮಃ ಸಖಾ ಚಾತ್ರ ಪರೇ ಚ ಲೋಕೇ ।
ತ್ರಾತಾ ಚ ಧರ್ಮಸ್ತ್ವಿಹ ಮೋಕ್ಷದಶ್ಚ
ಧರ್ಮಾದೃತೇ ನಾಸ್ತಿ ತು ಕಿಂಚಿದೇವ ॥ ೩೮ ॥

ಇದಂ ರಹಸ್ಯಂ ಶ್ರೇಷ್ಠಂ ಚ ಪುರಾಣಂ ವೇದಸಂಮಿತಂ ।
ನ ದೇಯಂ ದುಷ್ಟಮತಯೇ ನಾಸ್ತಿಕಾಯ ವಿಶೇಷತಃ ॥ ೩೯ ॥

ವನ್ನೂ, ಸ್ತ್ರೀಯನ್ನೂ ಅನುಭವಿಸದವರು ಎಷ್ಟೇ ಬುದ್ಧಿವಂತರಾದರೂ ಸ್ಥಿರತೆಯನ್ನೂ, ಮಹಿಮೆಯನ್ನೂ ಪಡೆಯುವುದಿಲ್ಲ.

೩೭-೩೮. ಮನುಷ್ಯನು ಧರ್ಮದಿಂದಲೇ ರಾಜ್ಯವನ್ನು ಸಂಪಾದಿಸುವನು. ಆ ಧರ್ಮದಿಂದಲೇ ಸ್ವರ್ಗಕ್ಕೆ ಹೋಗುವನು. ಆಯುಸ್ಸು, ಯಶಸ್ಸು, ತಪಸ್ಸು, ಮೋಕ್ಷ, ಇವುಗಳೂ ಧರ್ಮದಿಂದಲೇ ಬರುವವು. ಧರ್ಮವೇ ತಾಯಿ ತಂದೆಗಳು. ಧರ್ಮವೇ ಪರಲೋಕದ ಸ್ನೇಹಿತನು. ಧರ್ಮವೇ ಈ ಲೋಕದಲ್ಲಿ ಮನುಷ್ಯನನ್ನು ಕಾಪಾಡಿ ಮೋಕ್ಷವನ್ನು ಕೊಡುವದು. ಆದುದರಿಂದ ಧರ್ಮವನ್ನು ಬಿಟ್ಟು ಶ್ರೇಷ್ಠವಾದ ಮತ್ತೊಂದು ವಸ್ತುವು ಇಲ್ಲವೇ ಇಲ್ಲ.

೩೯. ಈ ಪುರಾಣವು ಗೋಪ್ಯವಾದುದೂ ಶ್ರೇಷ್ಠವಾದುದೂ ವೇದಕ್ಕೆ ಸಮಾನವಾದುದೂ ಆಗಿರುವುದು. ಕೆಟ್ಟ ಮನಸ್ಸುಳ್ಳವರಿಗೂ ವೇದಶಾಸ್ತ್ರ ಸಕ್ತರಲ್ಲದವರಿಗೂ ಇದನ್ನು ಹೇಳಬಾರದು.

ಇದಂ ಮಯೋಕ್ತಂ ಪ್ರವರಂ ಪುರಾಣಂ
ಪಾಪಾಪಹಂ ಧರ್ಮವಿವರ್ಧನಂ ಚ ।
ಶ್ರುತಂ ಭವದ್ಭಿಃ ಪರಮಂ ರಹಸ್ಯ-
ಮಾಜ್ಞಾಪಯಧ್ವಂ ಮುನಯೋ ವ್ರಜಾಮಿ ॥ ೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ರೋಮಹರ್ಷಣಸಂವಾದೇ ಪುರಾಣಪ್ರಶಂಸನಂ ನಾಮ ಪಂಚಚತ್ವಾರಿಂಶದಧಿಕ-ದ್ವಿಶತತಮೋಽಧ್ಯಾಯಃ

ಬ್ರಹ್ಮಮಹಾಪುರಾಣಂ ಸಮಾಪ್ತಂ

---

೪೦. ಎಲೈ ಮುನಿಗಳೇ, ನಾನು ಹೇಳಿದ ಶ್ರೇಷ್ಠವಾದ ಈ ಪುರಾಣವು ಪಾಪಗಳನ್ನು ನಾಶಮಾಡಿ ಧರ್ಮಗಳನ್ನು ಹೆಚ್ಚಿಸುವುದು. ಗೋಪ್ಯವೂ ಶ್ರೇಷ್ಠವೂ ಆದ ಇದನ್ನು ನೀವು ಕೇಳಿದಿರಿ. ಇನ್ನು ನಾನು ಪ್ರಯಾಣ ಮಾಡುವೆನು. ನನಗೆ ಅಪ್ಪಣೆಯನ್ನು ಕೊಡಿ ಎಂದು ಸೂತಮುನಿಯು ಹೇಳಿ ಹೊರಡನಲುವಾದನು.

ಇಲ್ಲಿಗೆ ಶ್ರೀ ಮಹಾಪುರಾಣವಾದ ಬ್ರಹ್ಮಪುರಾಣದಲ್ಲಿ ಪುರಾಣಪ್ರಶಂಸೆಯೆಂಬ ಇನ್ನೂರನಲವತ್ತೈದನೆಯ ಅಧ್ಯಾಯವು ಮುಗಿದುದು.

ಓಂ ತತ್ಸತ್

ಇಲ್ಲಿಗೆ ಬ್ರಹ್ಮಮಹಾಪುರಾಣವು ಮುಗಿದುದು

॥ ಮಂಗಳಂ ॥

Printed by Y. R. Ranga Rao, Proprietor,
Sri Chamundeswari Electric Press, Mysore.